REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

7—11—1957

ಸಂಚಿಕೆ ೯
NO. 9

ಭಾರತದ ಪ್ರಗತಿಗೆ ವಿದೇಶೀಸಹಾಯ—

ಖಾಸಗಿ ಬಂಡವಾಳ ಬೆಳೆಯಲಿ.

ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ವಯವಾಗಲಿರುವ ಔದ್ಯೋಗಿಕಾಭಿವೃದ್ಧಿಯಲ್ಲಿ ವಿದೇಶೀಯರ ನೆರವನ್ನು ನಾವೆದುರು ನೋಡುತಿದ್ದೇವೆ. ವಿದೇಶೀಯರು ಭಾರತದಲ್ಲಿ ಹಣ ತೊಡಗಿಸುವ ಬಗ್ಗೆ ಭಾರತ ಸರಕಾರದವರು ಇತ್ತೀಚೆಗೆ ಕಲವಾರು ಸೌಲಭ್ಯಗಳನ್ನು ಒದಗಿಸಿರುವರು. ಭಾರತದಲ್ಲಿ ಕಾರ್ಯಾಚರಣೆಗೆ ತೊಡಗಿದ ವಿದೇಶೀ ಸಂಸ್ಥೆಗಳಿಗೆ ಹೊಸದಾಗಿ ಆದಾಯ ತೆರಿಗೆಯ ರಿಯಾಯತಿ, ಮತ್ತು ವಿದೇಶೀ ಸಂಸ್ಥೆಗಳು ತಾವು ಸಂಪಾದಿಸಿದ ಲಾಭಾಂಶವನ್ನು ಹಾಗೂ ಹಾಕಿದ ಬಂಡವಳವನ್ನು ಭಾರತದಿಂದ ಹೊರಗೆ ರವಾನಿಸುವ ಬಗ್ಗೆ ಈ ಮೊದಲೇ ಇತ್ತಿರುವ ಆಶ್ವಾಸನೆಗಳನ್ನು ಮತ್ತು ಮತ್ತೂ ಕೊಡಲಾಗುತ್ತಿರುವುದು ಸಹಜ. ಹೀಗೆ ಒದಗಿಸಿದ ಸೌಕರ್ಯಗಳಲ್ಲಿ ಸೇರುತ್ತದೆ

ಮುಂದೆ ಹಣ ವಾವತಿ ಮಾಡುವ ಆಧಾರದ ಮೇಲೆ, ಭಾರತೀಯ ಸಂಸ್ಥೆಗಳಿಗೆ ಬಂಡವಾಳದ ಸರಕುಗಳನ್ನು ಪಡೆಯಲು ಒಪ್ಪಿರುವ ವಿದೇಶೀ ಸಂಸ್ಥೆಗಳಿಗೆ ಭರವಸೆಯನ್ನೀಯಲು ಸಾಧ್ಯವಾಗುವಂತೆ ಕೈಗಾರಿಕಾ ಹಣಕಾಸಿನ ಮಂಡಳಿಕ್ಕೆ ಅಧಿಕಾರವೀಯುವ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಸೂದೆಯೊಂದನ್ನು ತರಲಾಗಿದೆ. ವಿದೇಶೀಯರು ಈ ಯೋಜನೆಯಲ್ಲಿ ಆಸಕ್ತಿ ವಹಿಸುವಂತೆ ಮಾಡುವುದಕ್ಕಾಗಿ ಸರಕಾರದವರು ಐದು ವರ್ಷಗಳಿಗಿಂತಲೂ ಹೆಚ್ಚು ಅವಧಿಯ ವರೆಗೆ ವಿದೇಶೀ ಸಾಲ ಸೌಲಭ್ಯಗಳ ಮೇಲೆ ಪಾವತಿ ಮಾಡುವ ಬಡ್ಡಿಗೆ ಆದಾಯ ತೆರಿಗೆ ವಿಧಿಸುವುದನ್ನು ವಿನಾಯತಿಗೊಳಿಸಲು ಸರಕಾರದವರು ಉದ್ದೇಶಿಸಿರುವರು. ಇತ್ತೀಚೆಗೆ ಹೊಸತಾಗಿ ಹೇರಲಾಗಿರುವ ಸಂಪತ್ತು ತೆರಿಗೆಯನ್ನು ವಿದೇಶೀ ಒಂಡವಾಳಗಾರರ ಮೇಲೆ ವಿಧಿಸುವಾಗ, ಅವರಿಗೆ ನೂರಕ್ಕೆ ಒಂದರಷ್ಟು ವಿನಾಯತಿ (ರಿಬೇಟ್) ಕೊಡಲಾಗುವುದು.

ವಿದೇಶೀ ಸಂಸ್ಥೆಗಳು ತಾವು ಆರ್ಜಿಸಿದ ಲಾಭವನ್ನು ಮತ್ತು ಬಂಡವಾಳವನ್ನು ತಮ್ಮ ದೇಶಗಳಿಗೆ ರವಾನಿಸುವ ಬಗ್ಗೆ ಭಾರತದ ಹಣಕಾಸಿನ ಮಂತ್ರಿಗಳು ಹಿಂದೆ ನೀಡಿದ್ದ ಆಶ್ವಾಸನೆಯನ್ನು ಪುನಃ ಪುನಃ ಪ್ರಕಟಪಡಿಸಿರುವರು. ನಾವು ಈ ಆಶ್ವಾಸನೆಯನ್ನು ಪರಿಪಾಲಿಸುವೆವೆಂದು ಅವರು ಪದೇ ಪದೇ ಹೇಳುತ್ತಿರುವರು. ಯೋಜನೆಯಲ್ಲಿ ನಿಶ್ಚಿತ ವಾಡಿರುವ ಆಗ್ರ ಪ್ರಾಧಾನ್ಯಗಳಿಗನುಗುಣವಾಗಿ ವಿದೇಶೀ ಬಂಡವಾಳವನ್ನು ಪಡೆಯುವ ಬಗ್ಗೆ ಸರ್ವ ಪ್ರಯತ್ನ ವನ್ನೂ ಮಾಡಲು ಕೃತನಿಶ್ಚಯರಾಗಿದ್ದೇವೆಂದವರು ಹೇಳಿರುವರು. ಅಮೆರಿಕದ ಸಂಯುಕ್ತ ರಾಷ್ಟ್ರಗಳಿಗೆ ಸೇರಿದ ಸಂಸ್ಥೆಗಳು ಭಾರತೀಯ ವ್ಯವಹಾರದಲ್ಲಿ ಹೊಸದಾಗಿ ತೊಡಗಿಸಿದ ಹಣದ ಮೇಲೆ ಬರುವವರ ಮಾನವನ್ನು ಡಾಲರ್‌ಗಳಾಗಿ ಪರಿವರ್ತಿಸಿಕೊಳ್ಳುವ ಬಗ್ಗೆ ಸೌಲಭ್ಯ ನೀಡಲು ಇತ್ತೀಚೆಗೆ ಭಾರತ ಸರಕಾರದ ವರೂ ಭರವಸೆಯನ್ನಿತ್ತಿರುವರು.

ರ್ಗಳಲ್ಲಿ ರೂಪಿತವಾದ ಕೈಗಾರಿಕಾ ಕಾರ್ಯನೀತಿ ಸಂಬಂಧವಾದ ನಿರ್ಣಯವನ್ನು ಗಮನಾರ್ಹವಾಗಿ ಜೇತರಿಸಿಕೊಂಡಿದೆ ಖಾಸಗಿ ಕಾರ್ಯಕ್ಷೇತ್ರದ ಅಭಿವ್ಯಾಯಗಳಿಗೂ ಈ ನಿರ್ಣಯನಲ್ಲಿ ಅವಕಾಶವೀಯಲಾಗಿದೆ. ಜೊತೆಗೆ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಖಾಸಗಿ ಕಾರ್ಯಕ್ಷೇತ್ರವು ಕಾರ್ಯೋನ್ಮುಖವಾಗುವ ಬಗೆ ಉತ್ತೇಜನವೀಯಲಾಗುತ್ತಿದೆ. ಉದಾಹರಣೆಗಾಗಿ, ಸರಕಾರವು ಖನಿಜ ವಸ್ತುಗಳು ಮತ್ತು ತೈಲಗಳ ಆಳವೃದ್ಧಿಯ ವಿಶೇಷ ಹೊಣೆಗಾರಿಕೆಯನ್ನು ಪಡೆದಿದ್ದರೂ ಭಾರತದಲ್ಲಿ ವಿದೇಶೀ ಬಂಡವಾಳದ ನೆರವಿನೊಂದಿಗೆ ಮೂರು ತೈಲ ಶೋಧನಾಗಾರಗಳನ್ನೂ ನಾಲ್ಕು ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸಲಾಗುತ್ತಿದೆ.

ಅಮೆರಿಕದ ಸಂಶೋಧನಾರ್ಥ ಶಾಸ್ತ್ರಜ್ಞರಾದ ಶ್ರೀ ಹ್ಯಾರಿ ಜೆ. ರಾಬಿನ್‌ಸನರು ಇತ್ತೀಚೆಗೆ ಭಾರತದ ಕೈಗಾರಿಕಾ ಕಾರ್ಯ ನೀತಿಯ ನಿರ್ಣಯವನ್ನು ವಿಶೇಷವಾಗಿ ಅಧ್ಯಯನಮಾಡಿರುವರು ವಿದೇಶೀ ಬಂಡವಾಳಗಾರನ ದೃಷ್ಟಿಯಲ್ಲಿ ಈ ನಿರ್ಣಯವು ಎಳಲರ ನಿರ್ಣಯಕ್ಕೆ ವಿಭಿನ್ನವಾಗಿದ್ದು. ಸರಕಾರವು ಖಾಸಗಿ ಉದ್ಯಮವನ್ನು ವಶಪಡಿಸಿಕೊಳ್ಳುವ ವಿಚಾರವನ್ನೇ ಪ್ರಸ್ತಾಪಿಸಿಲ್ಲ ಎಂದು ಅವರು ಹೇಳಿದರು. ಭಾರತದಲ್ಲಿ ಅಧಿಕಾರಮಂಡಿತರು ಭಾರತೀಯ ಸಂಪತ್ಸಾಧನೆಗಳಿಗೆ ಪೂರಕವಾಗಿರುವಂತೆ ವಿದೇಶೀ ಬಂಡವಾಳ ಮತ್ತು ತಾಂತ್ರಿಕ ಪರಿಜ್ಞಾನಗಳನ್ನು ಪಡೆಯುವ ಆಗತ್ಯತೆಯನ್ನು ಮನಗಂಡಿರುವರು. ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರೂರವರ ಪ್ರಕಾರ ಭಾರತ ಸರಕಾರದವರು ಭಾರತದಲ್ಲಿರುವ ಬ್ರಿಟಿಷ್ ಅಥವಾ ಇನ್ನಾವುದೇ ಭಾರತೇತರ ಆಸಕ್ತಿಗಳಿಗೆ ಯಾವ ರೀತಿಯಲ್ಲಾಗಲೀ ಅನ್ಯಾಯವನ್ನುಂಟು ಮಾಡುವುದು ಭಾರತ ಸರಕಾರದವರ ಅಪೇಕ್ಷೆಯಲ್ಲ. ಭಾರತದ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ರಚನಾತ್ಮಕ ಹಾಗೂ ಸಹಕಾರ ಸಹಿತವಾದ ರೀತಿಯಲ್ಲಿ ಬ್ರಿಟಿಷ್ ಅಥವಾ ಭಾರತೇತರ ಆಸಕ್ತಿಗಳು ನೆರವು ನೀಡುವುದನ್ನು ಭಾರತ ಸರಕಾರದವರು ಸಂತೋಷದಿಂದ ಸ್ವಾಗತಿಸುವರು.

ಪೂರ್ವದಲ್ಲಿ ಭಾರತದ ಪ್ರಭಾವವು ನೆಲಸುವಂತೆ ಮಾಡುವ ರೀತಿಯಲ್ಲಿ ಭಾರತೀಯ ಪ್ರಜಾಪ್ರಭುತ್ವವನ್ನು ಅಭಿವೃದ್ಧಿಗೊಳಿಸುವ ಪಾಶ್ಚಾತ್ಯ ರಾಷ್ಟ್ರಗಳ ಆಸ್ಥೆಯು ಬ್ರಿಟನ್ನಿನ ಹಾಗೂ ಅಮೆರಿಕಾಗಳ ಪ್ರಮುಖ ಪತ್ರಿಕೆಗಳಲ್ಲಿ ಇತ್ತೀಚೆಗೆ ಬಂದಿರುವ ವರದಿಗಳಲ್ಲಿ ಪ್ರತಿಬಿಂಬಿತವಾಗಿದೆ. ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯು, ಭಾರತದ ಪಂಚವಾರ್ಷಿಕ ಯೋಜನೆಯನ್ನು ಪ್ರಸ್ತಾಪಿಸುತ್ತಾ ಅಣುಶಕ್ತ್ಯಸ್ತ್ರಗಳ ತಯಾರಿಕೆಯ ಬಗ್ಗೆ ಸಂಪೂರ್ಣ ಹಣವನ್ನು ವೆಚ್ಚಮಾಡುವ ಪಾಶ್ಚಾತ್ಯ ರಾಷ್ಟ್ರಗಳು ಭಾರತಕ್ಕೆ ೩೦ ಕೋಟಿ ಪೌಂಡುಗ ಹಣವನ್ನು ಸಾಲರೂಪದಲ್ಲಿ ನೀಡುವುದು, ಸ್ವಂತಂತ್ರ ವಿಶ್ವವನ್ನು ರಕ್ಷಿಸುವ ಮಾರ್ಗದಲ್ಲಿ ಹೆಚ್ಚು ವಿವೇಕವಲ್ಲವೆ? ಎಂದು ಸೂಚಿಸಿದೆ ಈಸ್ಟರ್ನ್ ವರ್ಲ್ಡ್ ಎಂಬ ಲಂಡನ್ನಿನ ಮಾಸ ಪತ್ರಿಕೆಯೂ ಇದೇ ಅಭಿಪ್ರಾಯವನ್ನು ಸೂಚಿಸಿ, ಬ್ರಿಟನ್ ತನ್ನ ರಕ್ಷಣೆಗಾಗಿ ವರ್ಷಕ್ಕೆ ವೆಚ್ಚಮಾಡುವ ಹಣದಲ್ಲಿ ನೂರಕ್ಕೆ ಕೇವಲ ಒಂದರಷ್ಟು ಅಂದರೆ ಸುಮಾರು ೧೫ ರಿಂದ ೨೦ ಕೋಟಿ ಪೌಂಡುಗಳಷ್ಟು ಹಣವನ್ನು ಭಾರತ ದಂತಹ ಪ್ರಗತಿಪರ ರಾಷ್ಟ್ರಕ್ಕೆ ವಿದೇಶೀ ಧನ ವಿನಿಮಯದ ಅಗತ್ಯತೆಯಾಗಿದೆ. ಈ ಬಗ್ಗೆ ಬ್ರಿಟನ್ ಬಾರತಕ್ಕೆ ನೆರವಾಗಬೇಕೆಂದು ಈ ಮಾಸಪತ್ರಿಕೆಯು ತನ್ನ ಅಮೋಘವಾಣಿಯಿಂದ ಸಲಹೆ ನೀಡಿದೆ.

ಅಮೆರಿಕನ ಸಂಯುಕ್ತ ರಾಷ್ಟ್ರಗಳ ಸಹಾಯ ಸಂಬಂಧ ಶಾಖೆಯ ಅಂತಾರಾಷ್ಟ್ರೀಯ ವಾಣಿಜ್ಯಾಬಿವೃದ್ಧಿಯ ಮಂಡಳದ ಪ್ರಧಾನಾದಿಕಾರಿಗಳಾದ ಶ್ರೀ ಎಫ್. ಪ್ರೆಸ್ಟನ್ ಥೋರ್ಬೆರ್ನ್‌ರವರು ಭಾರತದಲ್ಲಿ ಆರು ವಾರಗಳ ಕಾಲ ಪ್ರವಾಸವನ್ನು ಕೈಗೊಂಡುದರ ಫಲಸ್ವರೂಪನಾಗಿ ಭಾರತದಲ್ಲಿ ಅಮೆರಿಕದ ಬಂಡವಳಗಾರರಿಗೆ ಆಸಕ್ತಿಯನ್ನುಂಟುಮಾಡುವೇ ಇರುವಂತಹ ಕ್ಷೇತ್ರವಿಲ್ಲದಿಲ್ಲ ಎಂದು ಉದ್ಘರಿಸಿರುವರು ಹಾರ್ವರ್ಡ್‌ನಲ್ಲಿ ಈ ವರ್ಷದ ಫಟಿಕೋತ್ಸವದ ಸಮಯದಲ್ಲಿ ಲೇಡಿ ಬಾರ್ಬರಾವಾರ್ಡ್‌ರವರು ಮಾತಾಡುತ್ತ ದಕ್ಷಿಣ ವಿಶ್ವಾತ್ಯರ್ಥ, ಅದರಲ್ಲೂ ಮುಖ್ಯವಾಗಿ ಭಾರತಕ್ಕಾಗಿ ಮಾರ್ಷಲ್ ಯೋಜನೆಯೊಂದನ್ನು ವಿಶ್ವರಂಭಿಸಬೇಕೆಂದು ಸೂಚನೆಯಿತ್ತಿರುವರು.

ಭಾರತವು ತನ್ನ ಆರ್ಥಿಕ ವ್ಯವಸ್ಥೆಯನ್ನು ಪ್ರಜಾಸತಾತ್ಮಕ ಮಾರ್ಗಗಳಲ್ಲಿ ಅಭಿವೃದ್ಧಿಪಡಿಸುವ ಪ್ರಯತ್ನದಲ್ಲಿ ವಿಫಲಗೊಂಡಲ್ಲೇ ಆದರೆ, ಪ್ರಜಾಸತ್ತಾತ್ಮಕ ವಿಶ್ವಕ್ಕೇನೇ ಆದೊಂದು ತುಂಬಿಲಾರದ ನಷ್ಟವೆಂದು ಹಲವಾರು ವಿಮರ್ಶಕರು ಭಾವಿಸಿರುವರು. ಅಬ್ಸರ್ವರ್ ಎಂಬ ಪತ್ರಿಕೆಯು ವಿಲಿಯಂ

(ಉಳಿದ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ನಿಜ ಬಣ್ಣ ಬಯಲಾದಾಗ

ಶ್ರೀ ಕೆ. ತಿಮ್ಮಪ್ಪ ಗಟ್ಟಿ

ದುಡಿತದ ಪಂಜರದಿಂದ ಹೊರ ಬಿದ್ದಿದ್ದೆ. ಬ್ಯಾಂಕಿನ ಮೆಟ್ಟಿಲಿಂದ ಮಾರ್ಗಕ್ಕೆ ಕಾಲಿಟ್ಟಿದ್ದೆ. ತಲೆಯೆತ್ತಿ ಮುಂದೆ ನೋಡಿದಾಗ.....ಅಪ್ರತಿಮನು ಸುಂದರಿ, ಹದಿನಾರರ ಹರೆಯದ ಯುವತಿ ಇದಿರ್ಪುತ್ತಿದ್ದಳು, ಅವಳೊಬ್ಬಳೇ. ಏನು ಸುಂದರಿ, ಯುವತಿ? ನಾಡಿನಲ್ಲಿ ಇನ್ನೆಷ್ಟೋ ಇಲ್ಲವ? ಆದರೆ ಕಾದಂಬರಿಗಳಲ್ಲಿ, ಮಾರ್ಗ ಮಧ್ಯದಲ್ಲಿ, ಪುಧಮ ನೋಟದಲ್ಲಿ ಹುಟ್ಟುವ ಪ್ರೇಮದಂತೆಯೋ ಏನೊ. ಯಾರು ಬಲ್ಲರು? ಸ್ವಾಭಾವಿಕವಾಗಿ ಕಾಡಿಗೆ ಹಚ್ಚಿದಂತಿದ್ದ ಕಣ್ಣಿನ ಮಿಂಚುನೋಟದ, ಎಸಳು ನಗೆಯ, ಮಾದಕ ದೇಹದ, ತುಂಬು ಹೆರೆಯುವ ಆಯುವತಿಯ ಮಧುರ ರೂಪನ್ನು, ಆ ನಡೆವ ಭಂಗಿಯನ್ನು, ಆ ಜಡೆಯ ಆಟವನ್ನು, ತಲೆಯ ಓಲಾಟವನ್ನು ಮುಂಗುರುಳ ಹಾರಾಟವನ್ನು.. ... ಅಯ್ಯೋ,..... ಆ ಸುಂದರ ಮುಗ್ಧ ಮುಖವನ್ನು ನೋಡಿ ತತ್ತರಿಸಿ ಹೋದೆ. ಏನೋ ಒಂದು ಹೊಸ ಅನುಭವದಿಂದ, ಒಮ್ಮೆ ಸರ್ರೆಂದು ನುಂಜುಕವಿದು, ಕಣ್ಣು ಹಾರಿತು. ಇನ್ನೊಮ್ಮೆ ನೋಡಿದರೆ ಆ ಮೊಗದ ಕಣ್ಣು ಮಿಂಚು ಎಲ್ಲ ಕಣ್ಣು ಕುಕ್ಕುವುದೋ ಎಂಬಂತಾಯಿತು. ಎದೆಯ ರಕ್ತ ಸರ್ರೆಂದು ತಲೆಗೇರಿತು. ಕಾಲಿನಲ್ಲಿ ಆಯಾಸ ಉತ್ಪನ್ನವಾಯಿತು. ಕೈಯು ಫ್ಲಿ ಹಿಡಿದಿದ್ದ ಪ್ರಜಾಮತ ಕಂಪನದಿಂದ ಜಾರಲಾರಂಭಿಸಿತು. ಛಕ್ಕನೆ ಹಿಡಿದು ಕೊಂಡಾಗ ಅಲ್ಲಿಂದಲೂ ಜಾರಿ ನೆಲವನ್ನು ಚುಂಬಿಸಿಯೇ ಬಿಟ್ಟಿತು. ಆಷ್ಟರಲ್ಲಿ ಹತ್ತಿರದಲ್ಲೇ ಹಾಡುಹೋಗುತ್ತಿದ್ದ ಆ ವಿದ್ಯುಲ್ಲತೆಯು ನನ್ನೀ ಮಿನುಚಿಡಿಯುವ ಆಟವನ್ನು ನೋಡಿ ನಸುನಕ್ಕಿರಬಹುದು. ಅಂತೂ ಎದ್ದು ನಿಂತಾಗ ಅವಳು ಮುಂದೆ ಹೋಗುತ್ತಿದ್ದುದು ಮಾತ್ರ ಕಾಣುತಿತ್ತು. ಇಂತಹ ವಿಚಿತ್ರ ನಡಿಗೆಯನ್ನೇ ನಾನು ನೋಡಿರಲಿಲ್ಲ. ಆಹಾ! ಹೃದಯದಲ್ಲೇನೋ ಮಧುರ ಭಾವನೆಗಳು, ಏನೋ ಕಂಪನ, ಯಾವುದೋ ತೃಪ್ತಿಸ್ಪ ಸುಖ ವೇದನೆಯಿಂದಾಗಿ ಎದೆ ಬಡಿತ ಪರಮಾವಧಿಗೆ ಮುಟ್ಟಿತ್ತು.

"ಏನು ಸುರೇಶ್, ಇಲ್ಲೇ ನಿಂತು ಬಿಟ್ಟೆ?" ಗೆಳೆಯ ಸುಧಾಕರನ ಕರೆ ನನ್ನನ್ನು ಬ್ಯಾಂಕಿನೆಡುರು ತಂದು ನಿಲ್ಲಿಸಿತು. ಆದರೆ ನಿಂದೆ ನಿಂತ ಸುಧಾಕರನ ಕಣ್ಣು ಮುಂದೆ ಹೋದ ಮೂರ್ತಿಯನ್ನೇ ನೋಡುತ್ತಿರಬೇಕೆ ಇನ್ನೂ? ಅವನೂ ಅರಿತಿರಬೇಕು. ನನ್ನ ಸ್ಥಿತಿ! ಇಬ್ಬರೂ ಬಾಯ್ಮುಚ್ಚಿ ಮುಂದೆ ನಡೆದು ಕಾಫಿ ಹೋಟೆಲಿನೊಳ ಹೊಕ್ಕೆವು. ಇನ್ನು ಕಂಪಿಸುತ್ತಿದ್ದ ದೇಹ, ಬಡಿಯುತ್ತಿದ್ದ ಎದೆ ಸ್ಥಿಮಿತಕ್ಕೆ ಬಂದಿರಲಿಲ್ಲ. ಕುಡಿದ ಕಾಫಿ ಸಿಹಿಯೋ, ಬಿಸಿಯೋ ಯಾವುದೂ ತಿಳಿಯುಲಿಲ್ಲ. ಸುಧಾಕರ ಗ್ಲಾಸಿಟ್ಟುವ ಮೊದಲೇ, ಒಂದೇ ಗುಟುಕಿಗೆ ಹೀರಿ, ಗೆಳೆಯನನ್ನೂ ಮರೆತು, ನಿರ್ಲಿಪ್ತನಾಗಿ ಹೊರಬಿದ್ದೆ. ಎದುರಿನ ನೀರಿಲ್ಲದ ಬಾವಿಯು ಮೇಲೆ, ನಗರಕ್ಕೆ ನೀರಿಲ್ಲದೆ ಸಾಯುತ್ತಿದ್ದರೂ, ಬಾವಿಯನ್ನು ಅಲಂಕರಿಸಿದ "ನನಗೆ ಓಟುಕೊಡಿರಿ" ಎಂಬ ಕಾಗದ ದಿನವೂ ಕಣ್ಣಿಗೆ ಕಂಡು ನಗು ಬರುತ್ತಿದ್ದುದು ಇಂದು ಬರಲಿಲ್ಲ. ಓಟಿನ ಕೂಗೂ ನನ್ನ ಕಿವಿ ಮುಟ್ಟಲಿಲ್ಲ. ನನ್ನ ತನು, ಮನ, ಹೃದಯಗಳಲ್ಲಿ ಆ ... ಆ...ಮಧುರ ಸುಂದರ ರೂಪೊಂದೇ ಸುಳಿಯುತಿತ್ತು.

ನಾನು ಬ್ಯಾಂಕಿನ ಕ್ಲಾರ್ಕ್ ಎಂದು ನೀವು ತರ್ಕಿಸಿರಬಹುದು. ನನ್ನ ಗೆಳೆಯ ಸುಧಾಕರ ಅವನೂ ಕ್ಲಾರ್ಕ್. ನಾವಿಬ್ಬರೂ ಮಿತ್ರರು. ಹೊಸದಾಗಿ ಬ್ಯಾಂಕಿನ ಕಟ್ಟೆ ಹತ್ತಿದ ನವ ತರುಣರು, ಈಗ ನಾವಿಬ್ಬರೂ ಆಪ್ತ ಮಿತ್ರರೇ ಸರಿ. ಇಬ್ಬರೂ ಅವಿವಾಹಿತರು 'ಅವಿವಾಹಿತರು' ಎಂದೊಡನೆ 'ಕನ್ಯಾರ್ಥಿಗಳು' ಎಂದು ಭಾವಿಸಿ ಕನ್ನೆಯರನ್ನು ತರಬೇಡಿ...ಆದರೆ....

ಪ್ರೇಮದ ಕತೆ ನಿಮಗೆ ಗೊತ್ತಿರಬಹುದು. ಆದು ವಿಶ್ವವ್ಯಾಪಿ. ಇಷ್ಟರ ವರೆಗೆ ನನ್ನನ್ನು ಆಕ್ರಮಿಸಿರಲಿಲ್ಲ. ಈಗ ನನ್ನನ್ನೂ ಹಿಂಡಲಾರಂಭಿಸಿತು ನಿಂತಿಲ್ಲಿ, ಕುಳಿತಲ್ಲಿ ಆ ಪ್ರೇಮವು ನನ್ನನ್ನು ಕಾಡಲಾರಂಭಿಸಿತು. ಹೆಜ್ಜಾಗಿ ಯಾರೊಡನೆಯೂ ಮಾತನಾಡುವ ವ್ಯವಧಾನವೇ ಉಳಿಯುತ್ತಿರಲಿಲ್ಲ. ಗೆಳೆಯ ಸುಧಾಕರನೊಡನೆಯೂ ಮಾತನಾಡುತ್ತಿರಲಿಲ್ಲ.

ಆದರೆ ಸುಧಾಕರನ ಕತೆಯೇನೋ ನನಗರ್ಥವಾಗಲಿಲ್ಲ. ಅವನಿಗೂ ನನ್ನ ಸ್ಥಿತಿ ಬಂದಿರಬಹುದೆ? ಶುದ್ಧ ಮೂರ್ಖ! ಇವನೇಕೆ ನನಗೆ ಗೆಳೆಯನಾದ? ಆದರೂ ಇಲ್ಲೇಕೆ ಬಂದ? ನನ್ನ ಹೃದಯದಲ್ಲಿ ಆ ಸೂಯೆ ಉದ್ಭವಿಸಿತು.

ಪೆಲ್ಲನ್ನೆನೆ ನಡೆದ ಪ್ರಥಮ್ಯಕ್ಷ ಶೋಧನೆಯಿಂದ ಆ ಯುವತಿ ಕಾಲೇಜಿನಲ್ಲಿ ಪ್ರಾರಂಭಿಕ ವರ್ಷದಲ್ಲಿ ಓದುತ್ತಿರುವಳೆಂದೂ, ಅವಳ ಹೆಸರು ಶಶಿಯೆಂದೂ, ಅವರದು ಆಷಾರ ಶ್ರೀಮಂತ ಕುಟುಂಬವೆಂದೂ ತಿಳಿಯಿತು. ಅಲ್ಲದೆ ಅವಳ ತಂದೆ ನಿವೃತ್ತ ಎಂ. ಪಿ.ಯೆಂದೂ, ಅವರ ಕುಟುಂಬ ಬ್ರಾಹ್ಮಣ ಕುಟುಂಬವೆಂದೂ ತಿಳಿಸಿತು.

ಇಷ್ಟು ದೊಡ್ಡ ಊರಿನಲ್ಲಿ ಈ ಶಶಿಯ ಕತೆಯೊಂದನ್ನು ಅರಿಯುವ ಕುತೂಹಲ ಏಕಾಯಿತೋ ದೇವರೇ ಬಲ್ಲ. ಆದರೆ ನನ್ನ ಮನಸ್ಸು ತೊಳಲಾಡುತಿತ್ತು. ಆದರೆ ಮತ್ತೂ ಯೋಚನೆ: ನಾನೇಕೆ ಶಶಿಯ ಕುರಿತು ಯೋಚಿಸಬೇಕು? ಫಲವೇನು? ನಾನೋ ಬ್ರಾಹ್ಮಣೇತರ, ಬಡವ ಅವಳಾದರೋ....ಆದರೆ ಸುಧಾಕರನೂ ಶಶಿಯ ಕುರಿತೇ ಏನೋ ಆಲೋಚಿಸುತ್ತಿದ್ದಂತೆ ಕಂಡಿತು. ಆದರೆ ಅವನೂ ನನ್ನಂತೆಯೇ. ಅವನಿಗೂ ಶಶಿ ಧಕ್ಕಲಾರಳು ಎಂದು ನನ್ನ ತೃಪ್ತಿ. ಆದರೂ ಯಾವ ಆಕೆ ಇಲ್ಲದಿದ್ದರೂ ಶಶಿಯಿಂದ ನಾನು ಆಕರ್ಷಿಸಲ್ಪಡುತಿದ್ದೆ. ಸುಧಾಕರ ಮತ್ತು ನನ್ನ ಮಧ್ಯದಲ್ಲಿ ಈಗ ಮಾತೇ ಇರಲಿಲ್ಲ. ಒಂದು ದಿನವೂ ಕಾಲೇಜಿಗೆ ಹೋಗುತ್ತಿರುವ ಶಶಿಯನ್ನು ನೋಡಿ ತೃಪ್ತಿ ಹೊಂದದಿದ್ದರೆ ಇಬ್ಬರಿಗೂ ನಿದ್ದೆ ಬರುವಂತಿಲ್ಲ. ಇದಕ್ಕಾಗಿ ನಾವಿಬ್ಬರೂ ಪರಸ್ಪರ ಶಪಿಸುತ್ತಿದ್ದೆವು. ಆದರೆ ಬೆಕ್ಕು ಹಾಲು ಕುಡಿದಂತೆ ಆಗಿತ್ತು ಇದ!

ಒಂದೆರಡು ಬಾರಿ ಮುಂದೆ ಎದುರೆದುರಾಗಿ ಶಶಿಯನ್ನು ನಾನು ಕಂಡಿನು ಅವಳ ಪರಿಚಯದ ಮುಗುಳ್ನಗು ನನ್ನನ್ನೆಚ್ಚರಿಗೊಳಿಸಿತು. ಆದರೆ ನನ್ನ ಮುಗುಳ್ನಗುವ ಶಕ್ತಿಯನ್ನೂ ಆ ಮಿಂಚಿನ ಮುಖವೆ ಕೊಂಡಿತು — ಗುರುತಿಲ್ಲದಿದ್ದರೂ ನಮ್ಮೊಳಗೆ ಪರಿಚಯವಿತ್ತು. ಮುಖ ನೋಡಿದಾಗ ನನ್ನಲ್ಲಿ ಹುಟ್ಟುವ ನಡುವಿಕೆಯಿಂದ ಕಂಪನದಿಂದ ಅವಳ ಮುಖದ ಚಿಕ್ಕತಿಯೇ ಕುಣಿಯಲಾರಂಭಿಸುತಿತ್ತು. ಆದರೆ ನನ್ನ ಜೀವನದಲ್ಲಿ ಮರೆಯಲಾರದಂತಹುದು ಆ ಮುಖ, ಆ ನಡಿಗೆ!

ಹೀಗೆಯೇ ಸಾಗುತ್ತಿದ್ದುವು ದಿನಗಳು ಆ ವರ್ಷ ನಮ್ಮ ಬೇಂಕಿನ ರಜತ ಮಹೋತ್ಸವ. ಶಶಿಯ ತಂದೆ ಯಶವಂತರಾಯರು ಅಧ್ಯಕ್ಷರು ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿದ್ದುವು. ಬ್ಯಾಂಕಿನ ಅಭಿವೃದ್ಧಿಯ ಕುರಿತು ಮೇಣೇಜರರ ಸಲಹೆ, ಸೂಚನೆಯ ಮೇರೆಗೆ ನನ್ನ ಭಾಷಣವಿತ್ತು ಆ ದಿನ ಯಶವಂತರಾಯರಿಗೆ ಬಹಳ ಸಂತೋಷವಾಗಿತ್ತು. ಸಂಜೆ ಎಲ್ಲರೂ ಹೋದ ಬಳಿಕ ವಾತಾವರಣಕ್ಕೆ ಹೋಗುತ್ತಿರುವಾಗ ಯಶವಂತರಾಯರು ನನ್ನನ್ನು ಕರೆದರು ಮಾತನಾಡುತ್ತಾ ಪರಸ್ಪರ ಪರಿಚಯವಾಯಿತು. "ನಿಮ್ಮ ಭಾಷಣ ಬಹಳ ಸೊಗಸಾಗಿತ್ತು" ಎಂದವರು ಆರಂಭಿಸಿದರು. ನನ್ನ ಮೇಲೆ ಅವರಿಗೆ ಒಲೈಕೆ ಅಭಿವ್ಯಾಯ, ಪ್ರೀತಿ ಇದ್ದಂತಿತ್ತು.

ಮತ್ತೆರಡು ದಿನಗಳ ಬಳಿಕ ಇನ್ನೊಮ್ಮೆ ಅವರ ಭೇಟಿಯಾಯಿತು. ಅವರು ನನಸ್ಸು ತಮ್ಮ ಮನೆಗೆ 'ಟೀ ಪಾರ್ಟಿ'ಗೆ ಆಮಂತ್ರಿಸಿದರು ಮೊದ ಮೊದಲು ನಾನೊಪ್ಪಲಿಲ್ಲ. ನನಗೆ ಧರ್ಗಕ್ಕೆ ಮೂರೇ ಗೇಣು ಉಳಿದಂತಿತ್ತು. ಆದರೆ ಏನೋ ಮುಂದೆ ಹೋಗಲು ಧೈರ್ಯ ಬರಲಿಲ್ಲ. ಇವರೇ ನೋ ಪ್ರೀತಿಯಿಂದ ಕರೆಯುತ್ತಿರುವರು. ಆದರೆ ನನ್ನ ಬಾವನೆಯಿಂದಲೂ, ತಪ್ಪು ನಡೆಯಿಂದಲೂ ಪ್ರಮಾದವಾಗಬಹುದು. ದಿನಗಳಂತೆಯೇ ಕಳೆಯುಲೆಂದು ಮೃದುವಾಗಿ ಅವರ ಕರೆಯನ್ನು ನಿರಾಕರಿಸಿದೆ.

ಆದರೆ ಪ್ರತಿ ದಿನವೂ ಶಶಿಯನ್ನು ನೋಡುವ ನನ್ನ ಉತ್ಕಂಠತೆ ತಪ್ಪಿರಲಿಲ್ಲ ಒಮ್ಮೆ ನಾನೆಣಿಸಿದೆ: ನಾನೇ ಸುಂದರನಾಗಿಯೇ ಕಂಡಿರಬೇಕು ಅವರಿಗೆ ಸಾಹಿತ್ಯದಲ್ಲಿಯೂ, ಭಾಷಣದಲ್ಲಿಯೂ ಸರಶ್ರಮವಿದೆ. ಹಾಗೇನಾದರೂ.....

ಆನಂತರ ಯಶವಂತರಾಯರು ಹಣ ಚ್ಚಾಗಿ ಕಾಣಿಸಿಗಲಿಲ್ಲ. ಒಮ್ಮೊಮ್ಮೆ ಸಿಕ್ಕಿದರೂ ಪರಸ್ಪರ ಒಂದೆರಡು ಮಾತನ್ನಾಡಿ ದೂರಾಗುತ್ತಿದ್ದೆವು

ಒಂದು ದಿನ ಸುಧಾಕರನೊಂದಿಗೆ ಯಶವಂತರಾಯರು ಮಾತನಾಡುತ್ತಿರುವುದನ್ನು ಕಂಡೆನು. ಅವರು ನಾಕೆಂಗೆ ಬಂದಿದ್ದರು. ಅರಾಮವಾಗಿ ಕುಳಿತು ಇಬ್ಬರು ಮಾತನಾಡುತ್ತಿದ್ದರು. ಬಹಳ ದೀರ್ಘವಾಗಿತ್ತು. ಅವರ ಸಂಭಾಷಣೆ; ನನಗೆ ಕುತೂಹಲ ಮಾತ್ರವಲ್ಲ ಮಾತ್ಸರ್ಯವೂ ಹುಟ್ಟಿಕೊಂಡಿತು.

ಸುರುದಿನ ಸುಧಾಕರನು ಯಶವಂತರಾಯರೊಡನೆ ಅವರ ಮನೆಗೆ ಹೋಗುತ್ತಿರುವುದನ್ನು ಕಂಡೆನು. ಜನರ ಮೇಲೆ ಬಹಳ ಪ್ರೀತಿ ಇವರಿಗೆ ಎಂದು ನಾನೆಣಿಸಿದೆ. ದಿನಗಳೆದಂತೆ ಬ್ಯಾಂಕಿನಲ್ಲಿಯೂ ಈ ಸುದ್ದಿ ಹರಡಿತು. ಆಲ್ಲಲ್ಲಿ ಹಾಸ್ಯದ ಕಿಡಿಮಾತಿನ ಚಟಾಕಿಗಳು ಹಾರುತ್ತಿದ್ದುವು. ಶಶಿಯ ಗುಣದ ಬಗೆಗೆ ಯಾರ್ಯಾರು ಏನೋ ಆಂದರು. ನನಗೆ ಮನಸ್ಸಿನಲ್ಲೆ ತಳಮಳ; ಕ್ರೋಧ. ತೊಳೆದಿಟ್ಟ ಜಂಬ್ರ ಕಾಂತ ಬಿಳಿಯಂತಿದ್ದ ಶಶಿಯ ಬಗೆ ನನಗೆ ಪ್ರೇಮಲ ಪವಿತ್ರ ಭಾವನೆಯಿತ್ತು.

ದಿನಗಳೆದಂತೆಯೇ ಆಭಿವ್ಯಾಯಗಳ ಒತ್ತಡದಿಂದ ಅವನ ಬಗೆಗೆ ನನ್ನ ದೃಷ್ಟಿಯೂ ಶಂಕಾಪೂರಿತವಾಯಿತು. 'ದೃಷ್ಟಿ ವಿದು' ಎಂತಲ್ಲದಿದ್ದರೂ ಕರೀಕ್ಷೆಯ ಗುಟುಕು ಆದರಲ್ಲಿತ್ತು. ಸುಧಾಕರನ

(ಐದನೇ ಪುಟ ನೋಡಿರಿ)

ರುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ರ, ಗೂಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾದೆ. ಹೊಸ ಶಕ್ತಿಯನ್ನೂ ಜೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ ವಿ. ಕೆಣ್ಯೆ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾವೋದರ & ಕೊ,
ಮದ್ರಾಸ್—3.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

Crown RUBBER STAMP CO.

BALMATTA ROAD, MANGALORE.

ಭಾರತೀಯ ಕೌಶಲದ ಬೆಳವಣಿಗೆಯ ಮಾರ್ಗ–

ಕುಶಲ ಕಲೆಗಳಿಗೆ ಪ್ರೋತ್ಸಾಹ

ಭಾರತದಾದ್ಯಂತ ನವೆಂಬರ ಪ್ರಥಮ ವಾರದಲ್ಲಿ ಕುಶಲ ವಸ್ತುಗಳ ಸಪ್ತಾಹವನ್ನು ವೈಭವಪೂರ್ಣವಾಗಿ ಆಚರಿಸಲಾಯಿತು. ಅಖಿಲಭಾರತ ಕುಶಲ ವಸ್ತುಗಳ ಮಂಡಳವು ವ್ಯವಸ್ಥೆಗೊಳಿಸಿ ನಡೆಸುತ್ತಿರುವ ಸ್ವತ್ರದೇಶಿಕ ನಮೂನೆಗಳನ್ನು ಆವಿಷ್ಕರಿಸಿ ಸಾಮೂಹಿಸುವುದು ಹಾಗೂ ಪರಂಪರಾಗತ ನಮೂನೆಗಳನ್ನ ಪುನರುಜ್ಜೀವಿಸುವುದು ಅಗತ್ಯವಾಗಿದೆ. ಈ ದಿಸೆಯಲ್ಲಿ ಕೆಲವೊಂದು ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ.

ಭಾರತದಲ್ಲಿ ಕುಶಲ ವಸ್ತುಗಳ ನಿರ್ಮಾಣವು ಲಕ್ಷಾಂತರ ಜನರ ಮುಖ್ಯ ಜೀವನ ವೃತ್ತಿಯಾಗಿರುವುದು. ೧೯೪೭ರಲ್ಲಿ ಭಾರತವು ಸ್ವಾತಂತ್ರ್ಯಗಳಿಸಿದಾಗ, ನವ ಭಾರತವು ಎದುರಿಸಬೇಕಾದ ಬಿರುಸಿನ ಸಮಸ್ಯೆಗಳಲ್ಲಿ ಕುಶಲವಸ್ತುಗಳ ವಿಲೀನೀಕರಣ ಸಮಸ್ಯೆಯೂ ಒಂದಾಗಿತ್ತು. ಕುಶಲ ವಸ್ತುಗಳಿಗೆ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ನ್ಯಾಯಬದ್ಧ ವೆನಿಸಿದ ಸ್ಥಾನವನ್ನು ದೊರಕಿಸಿ, ವೃತ್ತಿಪರಿಣತಿಯನ್ನು ಉಳಿಸಿಕೊಳ್ಳುತ್ತಿರುವ ಪ್ರವೃತ್ತಿ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಅವುಗಳನ್ನು ವ್ಯವಸ್ಥೆಗೊಳಿಸಬೇಕಾಯಿತು.

ಕುಶಲ ವಸ್ತುಗಳ ನಿರ್ಮಾಣವನ್ನು ಅಭಿವೃದ್ಧಿಗೊಳಿಸುವುದಕ್ಕೆ ಮುಖ್ಯವಾದ ಉಪಕರಣಗಳೂ, ತಾಂತ್ರಿಕ ವಿಧಾನಗಳೂ ಆಗತ್ಯವೆನಿಸಿದುವು. ನವೀನ ಮಾದರಿಯ ತರಬೇತಿ ಸೌಕರ್ಯಗಳೂ ಕಚ್ಚಾ ಸಾಮಗ್ರಿಗಳೂ ಅಗತ್ಯವಾದುವು. ಈ ಕುಶಲ ವಸ್ತುಗಳ ಬೆಲೆಯು ಜನರಿಗೆ ಕೊಂಡುಕೊಳ್ಳುವ ಮಟ್ಟದಲ್ಲಿರುವಂತೆ ನೋಡಿಕೊಳ್ಳುವುದು ಸಹ ಆವಶ್ಯಕತೆವೆನಿಸಿತು. ಹಣ ಕಾಸಿನ ಸಹಾಯ ಹಾಗೂ ಸಿದ್ಧವಾದ ಒಡವೆಗಳಿಗೆ ಮಾರು ಕಟ್ಟೆಗಳ ವ್ಯವಸ್ಥೆಯನ್ನೂ ಮಾಡಬೇಕಾಯಿತು. ಜನರ ಅಭಿರುಚಿಗೆ ತಕ್ಕ ಹೊಸ ಹೊಸ ನಮೂನೆಗಳನ್ನೂ ಕಂಡು ಹಿಡಿಯಬೇಕಾಯಿತು. ಇಂತಹ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಭಾರತ ಸರಕಾರದವರು ಅಖಿಲ ಭಾರತ ಕುಶಲ ವಸ್ತುಗಳ ಮಂಡಳವನ್ನು ೧೯೫೨ರ ನವೆಂಬರ ತಿಂಗಳಲ್ಲಿ ನೇಮಿಸಿದರು.

ಅಖಿಲ ಭಾರತ ಕುಶಲ ವಸ್ತುಗಳ ಮಂಡಳಿಯು ಕಳೆದ ಐದು ವರ್ಷಗಳಲ್ಲಿ ನೀಡಿದ ಉತ್ತೇಜನದ ಫಲರೂಪವಾಗಿ ಕುಶಲ ವಸ್ತುಗಳ ಬೇಡಿಕೆಯು ಭಾರತದ ದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿಯೂ ಹೆಚ್ಚುತ್ತಿದೆ. ಈ ಬೇಡಿಕೆಯನ್ನು ಪೂರೈಸಲು ಭಾರತದ ನಾನಾ ಭಾಗಗಳಲ್ಲಿ ೫೦ ರಾಷ್ಟ್ರೀಯ ಕೇಂದ್ರಗಳನ್ನು ತೆರೆಯಲಾಗಿದೆ. ಕುಶಲ ಕಾರ್ಯಕರ್ತರನ್ನು ಅಧಿಕ ಪ್ರಮಾಣದಲ್ಲಿ ನೇಮಿಸಿಕೊಳ್ಳಲಾಗಿದೆ. ಒಂದು ನಿರ್ದಿಷ್ಟ ಮಟ್ಟದ ಉತ್ತಮ ಗುಣಾಂಶವುಳ್ಳ ವಸ್ತುಗಳನ್ನು ಮಾರುಕಟ್ಟೆಯಲ್ಲಿಡುವುದಕ್ಕೆ ವಿಶೇಷ ಗಮನವೀಯಲಾಗಿದೆ.

ಹೊಸ ನಮೂನೆಗಳನ್ನು ನಿರಂತರವಾಗಿ ಒದಗಿಸುವುದು ಒಂದು ಮುಖ್ಯ ಸಮಸ್ಯೆಯಾಗಿರುವುದು. ಭಾರತದ ಪ್ರಾಚೀನ ಕುಶಲ ವಸ್ತುಗಳಲ್ಲಿ ಅತ್ಯಂತ ಪ್ರಧಾನ್ಯವಾದುವು ಆಕರ್ಷಕ ಮಟ್ಟಿದ ಕಲಾಪ್ರೌಢಿಮೆ ಮತ್ತು ಕೌಶಲಗಳು. ಈ ಕುಶಲ ಪಾತ್ರೆಗಳು ಪಾಕ ಪಾತ್ರೆಗಳಾಗಿರಲಿ, ಆಭರಣಗಳಾಗಿರಲಿ, ಸೌಂದರ್ಯ ಹಾಗೂ ಸೌಲಭ್ಯಗಳೆರಡರ ಬೆಸುಗೆಯಾಗಿತ್ತು. ಕುಶಲ ಕರ್ಮಿಯ ಕೌಶಲವೇನೋ ಹಾಗೆಯೇ ಉಳಿದಿದೆ. ಆದರೆ, ಪರಂಪರೆಯಿಂದ ಬಂದಿರುವ ಇಂತಹ ವಸ್ತುಗಳ ಮಾದರಿಗಳು ಅನೇಕ ಕಾರಣಗಳಿಂದ ಅಧೋಗತಿಗಿಳಿದಿವೆ. ಉತ್ತಮ ವರ್ಗದ ಕಲಾತ್ಮಕ ವಸ್ತುಗಳನ್ನು ಮಾರುಕಟ್ಟೆಗೆ ತರುವುದಕ್ಕಾಗಿ ಪ್ರಾದೇಶಿಕ ನಮೂನೆ ಕೇಂದ್ರಗಳನ್ನು ಪ್ರಾರಂಭ ಮಾಡುವುದು ಅತ್ಯಂತಾವಶ್ಯಕವೆಂದು ತಿಳಿದು ಬಂತು

ಪ್ರಾದೇಶಿಕ ಮಾದರಿ ಕೇಂದ್ರಗಳ ಉದ್ದೇಶವು ಪ್ರಾಚೀನಕಾಲದ ಕಲಾತ್ಮಕ ವಸ್ತುಗಳಿಗೆ ಉತ್ತೇಜನವೀಯುವುದಲ್ಲದೆ, ಆಧುನಿಕಾಭಿರುಚಿಗೆ ಅನುರೂಪವಾದ ನೂತನ ನವೀನತೆಗಳನ್ನು ಕಲ್ಪಿಸಿಕೊಡುವುದು ಸಹ ಆಗಿದೆ. ಈ ಕೇಂದ್ರಗಳಿಗೆ ಕಲಾವಿದರೇ ನಿರ್ದೇಶಕರಾಗಿದ್ದಾರೆ. ಈ ನಿರ್ದೇಶಕರು ನಡೆಸಿಕೊಡುತ್ತಿರುವ ಕಲೆಗಳನ್ನು ಪುನಃ ಜೀವತನಗೊಳಿಸಲು ಯತ್ನಿಸಬೇಕಲ್ಲದೆ, ಇಂದಿನ ಅಗತ್ಯತೆಗನುಸಾರವಾಗಿ ಹೊಸ ಹೊಸ ವಿಧಾನಗಳನ್ನೂ ಪ್ರಚಾರದಲ್ಲಿ ತರಲು ಪ್ರಯತ್ನಿಸಬೇಕು. ಈ ಕೇಂದ್ರಗಳಲ್ಲಿ ಹೊಸ ತಂತ್ರ ವಿಧಾನಗಳು ಮತ್ತು ಹೊಸ ಕಚ್ಚಾ ಪದಾರ್ಥಗಳ ವಿಚಾರವಾಗಿ ಪ್ರಯೋಗಗಳನ್ನು ನಡೆಸಿ, ಇಂತಹ ಪ್ರಯೋಗಗಳ ಫಲಿತಾಂಶಗಳನ್ನು ಇಂದಿನ ಕುಶಲ ಕರ್ಮಿಗಳಿಗೆ ನೀಡುವುದು ಆಗತ್ಯವಾಗಿರುವುದು.

ಅಖಿಲ ಭಾರತ ಕುಶಲ ವಸ್ತುಗಳ ಮಂಡಳಿಯವರು ನಾಲ್ಕು ಪ್ರಾದೇಶಿಕ ನಮೂನೆ ಕೇಂದ್ರಗಳನ್ನು ಬೆಂಗಳೂರು, ಕಲ್ಕತ್ತ, ದೆಹಲಿ ಮತ್ತು ಬಾಂಬೈಗಳಲ್ಲಿ ತೆರೆದಿರುವರು. ಉತ್ತರ ಪ್ರದೇಶ ಸರಕಾರವು ಲಖ್ನೌನಲ್ಲಿ ಇನ್ನೊಂದು ಕೇಂದ್ರವನ್ನು ಪ್ರಾರಂಭಿಸುವುದು. ದೆಹಲಿ ಕೇಂದ್ರವು 'ರಫಿಯಾ' ಮುಂತಾದ ಕೆಲಸಗಳಿಗೆ ಪ್ರೋತ್ಸಾಹವಿತ್ತಿದೆ. ದೆಹಲಿ ಮತ್ತು ಬೊಂಬಾಯಿಗಳಲ್ಲಿ ನಡೆದ ವಸ್ತು ಪ್ರದರ್ಶನಗಳಲ್ಲಿಡಲಾಗಿದ್ದ ದಿವಾನ್, ದಿಂಬುಗಳು, ಬುಟ್ಟಿಗಳು, ಹಣ ಹಾಕುವ ಚೀಲಗಳು ಇವೇ ಮೊದಲಾದ ವಸ್ತುಗಳು ನೋಡಿಸಿನಾಗರವಾಗಿವೆ. ಈ ರಮಣೀಯ ವಸ್ತುಗಳನ್ನು ಫರೀದಾಬಾದಿನಲ್ಲಿ ನೆಲೆಸಿರುವ ಸ್ಥಾನಪಲ್ಲಟಿತ ಮಹಿಳೆಯರು ಸಿದ್ಧಗೊಳಿಸಿರುವರು.

ದೆಹಲಿಯ ಪ್ರಾಚೀನ ಕಲೆಯಾದ ಲೋಹದ ಕೆಲಸವು ಬಹುಕಾಲದಿಂದ ಲೂ ನಿರ್ಲಕ್ಷಿಸಲ್ಪಟ್ಟಿತ್ತು. ದೆಹಲಿಯಲ್ಲಿರುವ ಕುಶಲವಸ್ತು ಕೇಂದ್ರವು ಈ ಕಲೆಯ ಪುನರ್ನಿರ್ಮಾಣದ ಕೆಲಸವನ್ನು ಕೈಗೊಂಡಿದೆ. ತಾಮ್ರದ ಹೂಜಿಗಳು, ಹರಿವಾಣಗಳು, ಹೂತೊಟ್ಟಿಗಳು, ದೀಪಸ್ತಂಭಗಳು, ಲೋಟಗಳು ಮೊದಲಾದ ನಿತ್ಯೋಪಯೋಗಿ ವಸ್ತುಗಳನ್ನು ಈ ಕೇಂದ್ರವು ಈಗಾಗಲೇ ತಯಾರಿಸಿದೆ. ಇಷ್ಟು ಮಾತ್ರವಲ್ಲದೆ, ಮೇಜು, ಕುರ್ಚಿ, ಬಟ್ಟೆಗಳು—ಮುಂತಾದ ಮರದ ವಸ್ತುಗಳನ್ನು ತಯಾರಿಸುವ ಕಾರ್ಯವನ್ನು ಈ ಕೇಂದ್ರವು ಕೈಗೊಂಡಿದೆ. ಉತ್ತರ ಪ್ರದೇಶದ ನೈಜಾಮಾಬಾದ್‌ನ ಕರಿ ಮಣ್ಣಿನ ವಸ್ತುಗಳು ಬಹಳ ಪ್ರಸಿದ್ಧವಾದುವು. ದೆಹಲಿಯ ಕೇಂದ್ರದಲ್ಲಿ ಈ ಕರಿ ಮಣ್ಣಿನಿಂದ ಅತ್ಯಂತ ಉಪಯುಕ್ತವಾದ ವಸ್ತುಗಳನ್ನು ತಯಾರಿಸಿದ್ದಾರೆ.ಕಲ್ಲಿನ ಕೆತ್ತನೆಯ ಕೆಲಸ ಹಾಗೂ ಆಭರಣಗಳ ತಯಾರಿಕೆ ಇವುಗಳು ಈ ಕೇಂದ್ರದ ಕಾರ್ಯ ಚಟುವಟಿಕೆಗಳಲ್ಲಿ ನೇರವೆ.

ಬೊಂಬಾಯಿಯಲ್ಲಿರುವ ಪ್ರಾದೇಶಿಕ ಮಾದರಿ ಕೇಂದ್ರವು ಲೋಹದ ಕೆಲಸ, ಬಾಟಿಕ್ ಮತ್ತು ಮುದ್ರಣಕಾರ್ಯ, ಮರದ ಕೆತ್ತನೆಯ ಕೆಲಸ, ಗಟ್ಟಿ ಮಣ್ಣಿನ ಕೆಲಸ ಇವುಗಳಲ್ಲಿ ಪ್ರಾವೀಣ್ಯವನ್ನು ಪಡೆದಿದೆ. ಕಲ್ಕತ್ತದಲ್ಲಿರುವ ಕೇಂದ್ರವು ಜಲ್ಲಿಯವರೆಗೆ ವಸ್ತ್ರಗಳು, ಸಾಮಾನ್ಯ ಮಣ್ಣಿನ ಪಾತ್ರೆಗಳು ಮತ್ತು ಜೇಡಿ ಮಣ್ಣಿನ ಪಾತ್ರೆಗಳು, ಲೋಹದ ಕೆಲಸ, ಕಲಾತ್ಮಕ್ಕನೇಯಿಗೆ ಕೆಲಸ ಮುಂತಾದವನ್ನು ಕೈಗೊಂಡಿದೆ. ಇದೇ ರೀತಿಯಲ್ಲಿ ಬೆಂಗಳೂರಿನಲ್ಲಿರುವ ಕೇಂದ್ರವು ಕಂಚಿನ ಎರಕದ ಕೆಲಸ, ಮರದ ಕೆತ್ತನೆಯ ಕೆಲಸ, ಮರದ ಅಲಂಕಾರದ ಕೆಲಸ, ಗಾಜು ಮತ್ತು ಅರಗಿನ ಕೆಲಸ, ಮಣ್ಣಿನ ಪಾತ್ರೆಗಳು ಮತ್ತು ದಂತದ ಕೆಲಸ— ಇವುಗಳಲ್ಲಿ ನಿಪುಣತೆಯನ್ನು ಕಂಪಾದಿಸಿದೆ

ಅಖಿಲ ಭಾರತ ಕುಶಲ ವಸ್ತುಗಳ ಮಂಡಳವು ನಡೆಸುತ್ತಿರುವ ಮಾದರಿ ಕೇಂದ್ರಗಳಿಗಾಗಿ ಕಳೆದ ವರ್ಷ ಸುಮಾರು ಎರಡುಲಕ್ಷ ರೂಪ್ಯಾಗಳ ಹಣವನ್ನು ನೆಚ್ಚಿ ಮಾಡಲಾಯಿತು. ಪ್ರಸ್ತುತ ಹಣಕಾಸಿನ ವರ್ಷದಲ್ಲಿ ಭಾರತ ಸರಕಾರದವರು ಈ ಕೇಂದ್ರಗಳನ್ನು ಮುಂದುವರಿಸಿಕೊಂಡು ಬರುವುದಕ್ಕಾಗಿ, ಈ ಕೇಂದ್ರಗಳನ್ನು ಪುನರ್ವ್ಯವಸ್ಥೆಗೊಳಿಸಿ ವಿಸ್ತರಿಸುವುದಕ್ಕಾಗಿ, ರಾಜ್ಯಗಳು ಮತ್ತಿತರ ಸಂಸ್ಥೆಗಳು ನಡೆಸುತ್ತಿರುವ ಮಾದರಿ ಕೇಂದ್ರಗಳಿಗೆ ನೆರವೀಯುವುದಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳ ಹಣವನ್ನು ಮಂಜೂರು ಮಾಡಿರುವರು. ಲಖ್ನೌದಲ್ಲಿರುವ ಕೇಂದ್ರಕ್ಕಾಗಿ ಕೇಂದ್ರ ಸರಕಾರದವರು ಉತ್ತರ ಪ್ರದೇಶ ಸರಕಾರಕ್ಕೆ ಎರಡು ಲಕ್ಷ ರೂಪಾಯಿಗಳ ಹಣವನ್ನು ಮಂಜೂರು ಮಾಡಿರುವರು.

ಭಾರತೀಯ ಕುಶಲ ಕರ್ಮಿಗಳ ಮುಂದಿರುವ ದೊಡ್ಡ ಸವಾಲೆಯೆಂದರೆ ಅವರು ತಮ್ಮ ಮುಂದೆ ಇಡಲಾಗುವ ಮಾಜಿಯ ಪ್ರತಿರೂಪವನ್ನು ಸಿದ್ಧಗೊಳಿಸಬಲ್ಲರು. ಆದರೆ ನಕಾಶೆಯ ಅಥವಾ ಕಾಗದದ ಮೇಲೆ ಚಿತ್ರಿಸಲಾದ ವಿನ್ಯಾಸದ ಸಹಾಯದಿಂದ ಅದೇ ಫಲಿತಾಂಶವನ್ನು ಪಡೆಯಲು ಅಶಕ್ತರಾಗಿರುವರು. ಈ ತೊಂದರೆಯನ್ನು ನಿವಾರಿಸುವುದಕ್ಕಾಗಿ ಪ್ರದರ್ಶನಾ ಕೇಂದ್ರಗಳು ಆಗಿಂದಾಗ್ಗೆ ಕುಶಲ ಕರ್ಮಿಗಳಿರುವ ಗ್ರಾಮಗಳಿಗೆ ಅಥವಾ ಕುಶಲ ಕರ್ಮಿಗಳ ವಸಾಹತುಗಳಿಗೆ ಭೇಟಿಯಿತ್ತು ಹೊಸ ತಂತ್ರ ವಿಧಾನಗಳ ಬಗ್ಗೆ ವಿಚಾರ ವಿನಿಮಯವನ್ನು ಮಾಡಿಸುವುದು ಅಗತ್ಯವಾಗಿದೆ.

ಪ್ರಾದೇಶಿಕ ಕೇಂದ್ರಗಳು ದೇಶವಿದೇಶಗಳ ಬೇರೆ ಬೇರೆ ಉತ್ಪಾದನಾ ಕೇಂದ್ರಗಳೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿವೆ ಕುಶಲ ವಸ್ತುಗಳನ್ನು ತ್ವರಿತವಾಗಿ ಹಾಗೂ ಸುಲಭವಾಗಿ ಮಾರುವ ವ್ಯವಸ್ಥೆಯನ್ನು ಮಾಡುವುದು ಈ ಕುಶಲ ವಸ್ತುಗಳ ಮಂಡಲಿಯ ಮಾರುಕಟ್ಟೆ ವಿಭಾಗದ ಪ್ರಮುಖ ಕರ್ತವ್ಯವಾಗಿದೆ.

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ತೀವಣಾತಿ ವಿಧಾನ

ದಿನಕ್ಕೆ
4 ಆಣೆ
25 ನ. ಪೈ
7 ವರುಷಗಳಲ್ಲಿ
ರೂ. 700

ಪಿಗ್ಮಿ

- ಚಿಕ್ಕ ಗಾತ್ರದ ಆಪ್ತಿಕವೆ ಹಿಗ್ಗಿಯಕೊಂಡಾಗಿ ಬಹುದೊಡ್ಡ ಕಾಡಾನೆಯನ್ನು ಸಂಪರಿಸಬಲ್ಲರು.
- ದಿನಕ್ಕೆ 25 ನ. ಪೈಸೇಗಳಂತಹ ಪುಡಿ ಕಾಸಗಳಿಸ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಧಿಯು ಜವಿಸ್ಯದ ಸಂಕಷ್ಟಗಳನ್ನು ಪಾರು ಮಾಡಬಲ್ಲದು.

ಸಿಂಡಿಕೇಟಿನ 96 ಪಾಪೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್ ಉಡುಪಿ

The Canara Industrial & Banking
Syndicate Ltd. Udipi

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಮಧ್ಯಪೂರ್ವದ ಅಸ್ಥಿರ ರಾಜಕೀಯ—

ಸಿರಿಯಾದಲ್ಲಿ ಪಾಶ್ಚಾತ್ಯರ ಮೇಲಾಟ

ಶ್ರೀ. ಎಸ್. ಗೋಪೀಚಂದರಾವ್

ಸಿರಿಯಾ ಎನ್ನುವುದು ಬಳಕೆ ಪ್ರಾಚೀನ ದೇಶವಾಗಿದೆ. ಈ ದೇಶದ ರಾಜಧಾನಿಯಾದ ದಮಸ್ಕಸ್ಸಿನಲ್ಲಿ ಬೇರೆ ಕೆಲವು ರಾಜ್ಯಗಳ ಸೈನಿಕರು ಬಿಡ್ಡು ಠಿಯಿಳಿಸುತ್ತಿರುವುದನ್ನು ನಾವು ಕೇಳಿದ್ದೇವೆ. ಇಂದು ಪ್ರಪಂಚದ ಎಲ್ಲರಾಷ್ಟ್ರಗಳ ಕಣ್ಣು ಸಿರಿಯಾದತ್ತ ಈಕ್ಷಿಸುತ್ತಿದೆ. ಹಾಗಿರುವಾಗ, ಒಂದಲ್ಲ ಒಂದು ದಿನ ಈ ಪ್ರದೇಶವು ಜಗತ್ತಿನ ವೀರಯೋಧರ ರಣಕಣವಾಗಿ ಪ್ರಖರಿಸುವುದೂ ಸಾಧ್ಯವಾಗಬಹುದು. ಆದರೆ, ಸಿರಿಯಾದ ಇತಿಹಾಸವನ್ನು ಅವಲೋಕಿಸಿದರೆ, ಹೀಗೊಂದು ಕುರುಕ್ಷೇತ್ರ ವಾದರೆ, ಅದರಿಂದ ಆಶ್ಚರ್ಯಗೊಳ್ಳಬೇಕಾಗಿಲ್ಲ.

ಪ್ರಾಚೀನ ಸಿರಿಯಾದ ಇತಿಹಾಸದತ್ತ ದೃಷ್ಟಿ ಬೀರಿದರೆ, ಎಷ್ಟು ಬಾರಿ ಈ ರಾಷ್ಟ್ರವು ಯುದ್ಧಾಭಿಲಾಷಿಗಳ ಕುದುರೆಗಳ ಪಾದ ಧೂಳಿಯೀಡಾಗುವುದು ಅನಿವಾರ್ಯವಾಗಿದೆ ಎನ್ನುವುದು ತಿಳಿಯುತ್ತದೆ. ಬೆಬಿಲೋನಿಯಾದ ಅಧಿಕಾರವಿರುವಾಗ, ಸಿರಿಯಾದಲ್ಲಿ ಅಸೀರಿಯಾದ ಜನರು ತಮ್ಮ ಶಕ್ತಿ ಪರೀಕ್ಷೆಯನ್ನು ನಡೆಸಿದರು, ಪಾರಶಾತ್ಯ, ಪರ್ಶಿಯಾ, ಯುನಾನ್, ಮಿಸ್ರ್, ರೋಮ್ ದೇಶಗಳವರನ್ನು ಒಳಬರಲು ಬಿಡದಿದ್ದರೆ ಪರಿಣಾಮವಾಗಿ ಅದೆಷ್ಟೋ ಬಾರಿ ಹೊಡೆದಾಟಗಳು ನಡೆದಿವೆ. ಈ ಜಗಳಗಳು ಇಂದಿನವರೆಗೂ ಓತ ಪ್ರೋತವಾಗಿ ನಡೆದುಕೊಂಡು ಬರುತ್ತಿರುವುವು. ಇಂದು ಸಿರಿಯಾದ ತಟವರ್ತಿ ಭಾಗ ಮಾತ್ರ ಸನ್ಯದ್ಧವಾಗಿಯೂ ಫಲವತ್ತಾಗಿಯೂ ಇದೆ. ಅಲ್ಲದೆ ವ್ಯಾಪಾರದ ಕೇಂದ್ರವೂ ಆಗಿದೆ. ಅದರ ಉಳಿದ ಭಾಗವು ಮರುಭೂಮಿಯಾಗಿದ್ದು ಬದ್ದೂ ಪೊದಲಾದ ಭಯಂಕರ ಅರಬ ಜನಾಂಗಗಳ ವಾಸಸ್ಥಾನವಾಗಿಯೇ ಉಳಿದಿದೆ.

ಇಪ್ಪೊಂದು ಹೀನಾಮಸ್ಥೆಯಲ್ಲಿರುವ ದಕ್ಕೆ, ಮತ್ತದು ಬೇರೆ ಬೇರೆ ಸಾಮ್ರಾಜ್ಯಗಳೊಂದಿಗೆ ಏಳೀನಗೊಳ್ಳುತ್ತಿರುವುದಕ್ಕೆ ಅಲ್ಲಿನ ಸ್ಥಿತಿಯೇ ಕಾರಣವೆನ್ನಬೇಕು. ಭೂಮಧ್ಯಸಾಗರದ ಪೂರ್ವ ಕೆನಾರೆಯಲ್ಲಿರುವುದರಿಂದ, ತಮ್ಮ ಕೆಳಗಿನ ದೇಶಗಳಿಗೆ ಇದು ರಕ್ಷಕ ರಾಷ್ಟ್ರವಾಗಿಯೂ ಪರಿಣಮಿಸುತ್ತದೆ. ಕೆಲವೊಮ್ಮೆ ಅವುಗಳ ವಿನಾಶಕಾರಿಯಾಗಿಯೂ ಕಂಡುಬರುತ್ತದೆ. ಆದುದರಿಂದ, ಇದು ಪ್ರಪಂಚದ ಅನೇಕ ಭೀಷಣ ಯುದ್ಧಗಳಿಗಾಗಿ ವಿಚಿತ್ರವಾದ ವರ್ಣವೇದಿಕೆಯಾಗಿದೆ. ಕೇವಲ ಪ್ರಾಚೀನಕಾಲದಲ್ಲಿ ಘಟಿಸಿದ ಸಮರಗಳಲ್ಲಿಯೇ ಅಲ್ಲ, ಆಧುನಿಕ ಯುದ್ಧಗಳಲ್ಲಿ ಸಹ ಇಂಗ್ಲಿಷ್ ಮತ್ತು ಫ್ರೆಂಚ್ ಸರಕಾರಗಳು ಸಿರಿಯಾದ ಸಂಪೂರ್ಣ ಉಪಯೋಗವನ್ನು ಸ್ವೇಚ್ಛೆಯಿಂದಲೇ ಮಾಡಿಕೊಂಡಿದ್ದವು. ೧೯೧೯ರಲ್ಲಿ ಫ್ರೆಂಚ್ ಮತ್ತು ಆಂಗ್ಲೇಯರು ಒಂದು ಒಡಂಬಡಿಕೆಯನ್ನು ಮಾಡಿಕೊಂಡರು. ಇದರನ್ವಯ, ಸಿರಿಯಾದಲ್ಲಿ ಫ್ರಾನ್ಸಿಗೂ, ಪೆಲೆಸ್ತೀನದಲ್ಲಿ ಇಂಗ್ಲೆಂಡಿಗೂ ತನ್ನಪ್ರಭಾವವನ್ನು ಬೀರುವುದು ಸಾಧ್ಯವೆನಿಸಿತು. ಪ್ರಥಮ ಜಾಗತಿಕ ಯುದ್ಧಕ್ಕೆ ಮೊದಲು, ತುರ್ಕಿಯ ಸರಕಾರದಿಂದ ಈ ಅಧಿಕಾರವು ದೊರೆತಿತ್ತು. ಯುದ್ಧಾನಂತರ ಸ್ಥಾಪನೆಗೊಂಡ ಜನಾಂಗ ಸಂಘವು ಈ ವಿಚಾರದಲ್ಲಿ ತನ್ನ ಒಪ್ಪಿಗೆಯ ಮುದ್ರೆಯನ್ನು ಒತ್ತಿತು. ಹೀಗೆ ಅದು ಕೇವಲ ಸಿರಿಯಾದ ರಕ್ಷಣಾಧಿಕಾರವನ್ನು ಮಾತ್ರ ಕೊಟ್ಟಂತಾಗಲಿಲ್ಲ; ಸಿರಿಯಾವು ಫ್ರಾನ್ಸಿನ ಕೃಪಾಕಟಾಕ್ಷ ಬಲದಿಂದಲೇ ಬದುಕ ಬೇಕಾದ ಪ್ರಸಂಗವನ್ನು ತಂದಿರಿಸಿತು.

ಸಿರಿಯಾವು ಸ್ವಾತಂತ್ರ್ಯಕ್ಕಾಗಿ ತಲೆ ಸರಿಯೆತ್ತಿದಿದ್ದರೂ, ಅದನ್ನು ಅದನ್ಯ ರೀತಿಯಲ್ಲಿ ಹಿಂಸಿಸಲು ಪ್ರಾರಂಭವಾಯಿತು. ಫ್ರಾನ್ಸಿನ ವಿರುದ್ಧವಾಗಿ ಬೇರೆ ಬೇರೆ ಸಿಕಾರ್ಗಳು ದಂಗೆಯೆದ್ದುವು; ಆದರೆ, ಅವೆಲ್ಲವನ್ನೂ ಕಠೋರವಾಗಿ ಹಿಂಸಿಸಿ ತಡೆಗಟ್ಟಲಾಯಿತು. ಕೊನೆಯಲ್ಲಿ, ಇವೆಲ್ಲವುಗಳ ಫಲಸ್ವರೂಪವಾಗಿ ೧೯೩೦ರಲ್ಲಿ ಸಿರಿಯಾವು ಗಣತಂತ್ರವೆಂದು ಸಾರಲ್ಪಟ್ಟಿತು. ಆದರೆ, ಈ ರೂಪನೇದನೆಯು ಇನ್ನೂ ಶಾಂತಿತಾಳಲಿಲ್ಲ. ಫ್ರೆಂಚ್ ಪ್ರೆಕಮಿಶನರು ಅದರ ಮೇಲೆ ಸೀರು ಹೊಯ್ದನು. ಆ ಸಮಯದಲ್ಲಿ, ಸಿರಿಯಾಕ್ಕೆ ಒಂದು ಘಿಟನೆಯನ್ನು ಸಿದ್ಧಪಡಿಸಲಾಯಿತು. ಅದರಲ್ಲಿ ಸಿರಿಯಾದ ರಾಷ್ಟ್ರಪತಿಯೊಬ್ಬ ಮುಸಲ್ಮಾನನಾಗಬೇಕೆಂದೂ, ನಾಲ್ಕು ವರ್ಷಗಳಿಗೊಮ್ಮೆ ಸಂಸತ್ತಿನ ಚುನಾವಣೆ ನಡೆಯಬೇಕೆಂದೂ ಸೂಚಿಸಲ್ಪಟ್ಟಿತ್ತು. ಆದರೆ ಈ ವೇಳೆಯಲ್ಲಿ ಸಿರಿಯಾದಲ್ಲಿರುವ ಸ್ವಲ್ಪಭಾಗವನ್ನು ತುರ್ಕಿಯಲ್ಲಿ ಸೇರಿಸುವ ಮಾತು ಬಂದ, ಅದನ್ನು ದೇಶಭಕ್ತ ಸಿರಿಯಾನರು ವಿರೋಧಿಸಿದರು. ಆಗ, ಫ್ರೆಂಚ್ ಹೈಕಮಿಶನರು ಸಿರಿಯಾದ ಘಟನೆಯನ್ನು ಸ್ವಾಗತಗೊಳಿಸಿ, ಎಲ್ಲ ಅಧಿಕಾರವನ್ನೂ ತ್ರವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಕೆಲಸಮಯಗಳಲ್ಲಿಯೇ ದ್ವಿತೀಯ ಲೋಕಯುದ್ಧವು ಆರಂಭಿಸಿತು. ಆಗ, ಆಂಗ್ಲೇಯ ಮತ್ತು ಫ್ರೆಂಚರ ಸೈನ್ಯಗಳು ಸಿರಿಯಾದಲ್ಲಿ ಅಧಿಕಾರ ಜಲಾಯಿಸಲು ತೊಡಗಿತು. ಆದರೆ, ಅನತಿ ಸಪ್ತಂಬರ ತಿಂಗಳಲ್ಲಿ, ಫ್ರೆಂಚರ ಸಂರಕ್ಷಣೆ ಸಮಾಪ್ತವಾಗಿ, ಸಿರಿಯಾ ಸ್ವತಂತ್ರವಾಯಿತು; ದೀರ್ಘಕಾಲಾನಂತರ, ದೇಶವು ಸ್ವಾತಂತ್ರ್ಯದ ಉಸಿರನ್ನು ಬಿಟ್ಟಿತು

ಆದರೆ, ದ್ವಿತೀಯ ಮಹಾಯುದ್ಧದ ನಂತರ, ಆ ಮೇಲಿನ ಎರಡು ನವೀನ ಶಕ್ತಿಗಳಲ್ಲಿ–ರಷ್ಯ ಮತ್ತು ಅಮೆರಿಕಾಗಳು –ಅದನ್ನು ವಾಸ್ತವಿಕ ರೂಪದಲ್ಲಿ ಸ್ವಾತಂತ್ರ್ಯಕೂರ್ಣವಾಗಿಡಬೇಕೆ? ಅಥವಾ ಬೇಡವೆ? ಎಂಬ ಒಂದು ಪ್ರಶ್ನೆಯುದ್ಭವಿಸಿ, ಆ ಪ್ರಶ್ನೆಯು ಇಂದಿನವರೆಗೂ ಬಗೆಹರಿಯದೆ ನಿಂತಿದೆ. ಆದುದರಿಂದಲೇ ಪ್ರಪಂಚದ ದೃಷ್ಟಿಯು ಈ ದೇಶದತ್ತ ಇದೆ. ಇಂದಿನತನಕವೂ ಅರಬ ರಾಷ್ಟ್ರಗಳಲ್ಲಿ ಸೇನಾಧಿಕಾರದ ಸರಕಾರವನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಸಿರಿಯಾದ ಸೇನೆಯ ಸಂಪೂರ್ಣಾಧಿಕಾರವು ಇಂದು, ಒಬ್ಬ ಕಮ್ಯೂನಿಸ್ಟ್ ಮೇಜರ್ ಜನರಲ್‌ನ ಕೈಯಲ್ಲಿ ಬಂದುಬಿಟ್ಟಿದೆ. ಅಲ್ಲದೆ, ಇತ್ತೀಚೆಗೆ ರಷ್ಯದ ಶಸ್ತ್ರಾಸ್ತ್ರಗಳಿಂದ ಎದ್ದುನಿಲ್ಲಲು ಆರಂಭ ಮಾಡಿಬಿಟ್ಟಿದೆ. ಸಿರಿಯಾದ ರಾಷ್ಟ್ರಪತಿ ಕುವೈತ ಅಲಿಯವರು ಸ್ವತಂತ್ರ ನೀತಿಯನ್ನು ಅನುಸರಿಸುವವರು; ಮತ್ತು ಬೇರೆ ಯಾರೊಡನೆಯೂ ವಿಲೀನವೊಂದಲು ಬಯಸುವುದಿಲ್ಲ. ಈ ಕಾರಣದಿಂದ, ಅವರ ಭವಿಷ್ಯವನ್ನು ಸಹ ಸಂದಿಗ್ಧ ದೃಷ್ಟಿಯಿಂದ ನೋಡಲಾಗುತ್ತದೆ. ಅಮೆರಿಕವು ಈ ಘಟನೆಯನ್ನು ಬಹಳ ವಿರೋಧಿಸುತ್ತದೆ. ಈಗ ಸಿರಿಯಾ, ತುರ್ಕಿ, ಇರಾಕ್ ಮತ್ತು ಇರಾನ್‌ಗಳಲ್ಲಿ ಅಮೆರಿಕದ ಶಸ್ತ್ರಗಳ ಬಾಣ ಖಣ ಶಬ್ದವು ಸ್ಪಷ್ಟವಾಗಿ ಕೇಳಿಬರುತ್ತದೆ.

ಇಷ್ಟೇ ಅಲ್ಲದೆ, ಅಮೆರಿಕದ ಸೈನ್ಯ ಸಮೂಹವು ಭೂಮಧ್ಯಸಾಗರದಲ್ಲಿ ತನ್ನ ಪ್ರದರ್ಶನವನ್ನು ಮಾಡುತ್ತಾ ಇದೆ. ಈಗ, ಅಮೆರಿಕಾ ಮತ್ತು ಬ್ರಿಟನ್‌ಗಳಿಗೆ ಒಂದೇ ಒಂದು ಚಿಂತೆಯಾಗಿದೆ—ಮಧ್ಯಪೂರ್ವದಲ್ಲಿ ಎಂದಾದರೂ ಅರಬರಾಷ್ಟ್ರಗಳು ಸಂಘಟಿತವಾಗಿ, ಪಶ್ಚಿಮದ ಸಾಮ್ರಾಜ್ಯವಾದಿಗಳ ಒಳಸಂಚು ನಡೆಯದೆ ಹೋದರೆ, ಆಗ, ಅಲ್ಲಿ ದೊರೆಯುವ ಕೋಟಗಟ್ಟಲೆ ಟನ್ ಎಣ್ಣೆಗೆ ಸೊನ್ನೆಯಾಗಬಹುದು. ಏಕೆಂದರೆ, ಬ್ರಿಟನ್ ಮತ್ತು ಅಮೆರಿಕಾಗಳಿಗೆ ಹೋಗುವ ಕೋಟ್ಯಂತರ ಟನ್ ಎಣ್ಣೆಯು ನಳಿಗೆಗಳು ಸಿರಿಯಾದಲ್ಲಿರುತ್ತದೆ. ರಷ್ಯದ ನಾಲ್ಕೈದೆಗಳಲ್ಲಿಯೂ ತಾವು ಹೆಚ್ಚುತ್ತಿರುವ ಬೆಂಕಿಗೆ ಈವೇ ಬೀಳುವಂತಾದರೆ ತಮ್ಮ ಇಚ್ಛೆಯು ಈಡೇರುವುದಿಲ್ಲವೆಂಬುದೇ ಅವರ ತಲೆ ತಿನ್ನುವ ವ್ಯಸನವಾಗಿದೆ. ಸಿರಿಯಾವು ನ್ಪತಂತ್ರವಾಗಿ ತಲೆಯೆತ್ತಿ ನಿಲ್ಲುವುದೇ ಅಥವಾ ಪಾಶ್ಚಾತ್ಯರಿಗೆ ತಲೆ ತಗ್ಗಿಸಿ ನಡೆಯುತ್ತದೋ ಎಂದು ನೋಡಬೇಕಾಗಿದೆ. ಸಿರಿಯಾವು ಧ್ರುವ ನಕ್ಷತ್ರದಂತೆ ಮಧ್ಯ ಪೂರ್ವದ ಗಗನ ಮಂಡಲದಲ್ಲಿ ತನ್ನ ಸ್ವತಂತ್ರ ನೀತಿಯೊಂದಿಗೆ ದೃಢವಾಗಿ ನಿಶ್ಚಲಟೆಕೊಮ್ಮ ಭಾರತದಂತಹ ಸ್ವಾತಂತ್ರ್ಯ ಪ್ರೇಮಿ ರಾಷ್ಟ್ರಗಳ ಬಯಕೆಯಾಗಿದೆ. ಹೀಗಿರಲೆ, ಸಣ್ಣ ಸಣ್ಣ ನಕ್ಷತ್ರಗಳಂತೆ ಯಾವುವಾದರೂ ದೊಡ್ಡ ಗ್ರಹಗಳನ್ನೇ ಸುತ್ತುವರಿಯುತ್ತಾ ಇದ್ದರೆ ತನ್ನ ಅಸ್ತಿತ್ವವನ್ನೇ ನಷ್ಟವಾಡಿಕೊಳ್ಳುವುದು ಖಂಡಿತ. ಹೀಗೆ ಜಗತ್ತಿನ ಎಲ್ಲ ರಾಷ್ಟ್ರಗಳ ಗಮನವನ್ನೂ ಸೆಳೆದಿರುವ ಈ ಸಿರಿಯಾದ ಅಂತ್ಯ ಹೇಗಾಗುವುದೆಂದು ಮಾತ್ರ ಕಾದು ನೋಡಬೇಕಾಗಿದೆ.

(ನವಭಾರತ ಡಾಜೆಸ್ಟ್).

(೧೫ನೇ ಪುಟದಿಂದ)

ಕ್ಲಾರ್ಕ್‌ರವರ ಮಾತಿನಲ್ಲಿ ಪೂರ್ವಾಹಗೂ ಅಟ್ಲಾಂಟಿಕಗಳ ನಡುವೆ ಇರುವ ಮುಖ್ಯ ಸೇತುವೆಯು ಶಿಥಿಲಗೊಳ್ಳುವುದನ್ನು ಅಥವಾ ಹಾಳಾಗಿ ಹೋಗುವುದನ್ನು ವೀಕ್ಷಿಸುವುದೇ ವಿಮರ್ಶಕರಿಗೆ ಉತ್ಸಾಹ ಶೂನ್ಯವಾದ ಅನಕಾಶವಾಗಿರುವುದು.

ಇತ್ತೀಚೆಗೆ ಪ್ರಧಾನಮಂತ್ರಿ ಜವಾಹರಲಾಲ ನೆಹರೂರವರು ಜಪಾನಿನ ಸಂದರ್ಶನವನ್ನು ಮಾಡಿದುದರ ಪರಿಣಾಮವಾಗಿ ಜಪಾನು ಸಕ ಭಾರತದ ಅಭಿವೃದ್ಧಿಗೆ ತನ್ನ ಕೈಲಾದ ಸಹಾಯವನ್ನು ನೀಡುವ ಯೋಜನೆಮಾಡಿದೆ. ಅರ್ಥ ಮಂತ್ರಿ ಶ್ರೀ ಟಿ. ಟಿ. ಕೆ. ಯವರು ವಾಶ್ಚತ್ಯ ರಾಷ್ಟ್ರಗಳಲ್ಲಿ ಭಾರತದಲ್ಲಿ ಬಂಡವಾಳವನ್ನು ತೊಡಗಿಸಲೆಂದಿರುವ ಭಾವನೆಯನ್ನು ಕೆರಳಿಸಿರುವರು. ಪಶ್ಚಿಮ ಜರ್ಮನಿಯೂ ಸಹಾಯಮಾಡುವ ನಿರೀಕ್ಷೆಯಿದೆ. ಕೇವಲ ಸರಕಾರಗಳು ಮಾತ್ರ ಭಾರತದ ಅಭಿವೃದ್ಧಿಯಲ್ಲಿ ನೆರವಾದರೆ ಸಾಲದು; ಪರರಾಷ್ಟ್ರಗಳ ಖಾಸಗೀ ಬಂಡವಾಳವೂ ಇಲ್ಲಿ ಬೇಳುವಂತಾಗಬೆಕು. ಇದಕ್ಕೆ ತಕ್ಕ ವಾತಾವರಣವನ್ನು ನಿರ್ಮಿಸುವಲ್ಲಿ ಭಾರತ ಇನ್ನೂ ಅಗತ್ಯವಾದ ಕೆಲಸಗಳನ್ನು ಕೈಗೊಳ್ಳಬೇಕು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರಾವಧಿ ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬ್ಯಾಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಸ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಅಭಿವೃದ್ಧಿಪಥದಲ್ಲಿ ಭಾರತ—

ಮತ್ಸ್ಯಪರಿಪಾಲನೆಯ ಉದ್ದಿಮೆ

ಪ್ರತಿವರ್ಷವೂ ಗಣನೀಯ ಪ್ರಮಾಣದಲ್ಲಿ ವರ್ಧಿಸುತ್ತಿರುವ ಸಂಖ್ಯೆಯ ಭಾರತದ ಜನರಿಗೆಲ್ಲ ಸಾಕಷ್ಟು ಅನ್ನ ಹೊದಗಿಸುವುದು ಇಂದಿನ ಭಾರತದೆದುರಿರುವ ಒಂದು ದೊಡ್ಡ ಸಮಸ್ಯೆಯೆನಿಸಿದೆ. ಈ ದೃಷ್ಟಿಯಿಂದ ನಾವು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಹೆಚ್ಚು ಆಹಾರ ಬೆಳೆಯಲು ಪ್ರಯತ್ನಿಸುತ್ತೇವೆ. ಆದರೆ, ಈ ಸಂದರ್ಭದಲ್ಲಿ ವ್ಯವಸಾಯ ಯೋಗ್ಯವಾದ ಭೂಮಿ ಹಾಗೂ ಭೂಮಿಯಲ್ಲಿ ಬೆಳೆವ ಉತ್ಪನ್ನಗಳಿಗೊಂದು ಪರಿಮಾವಧಿ ವಿತಿಯಿದೆ ಎಂಬುದನ್ನು ಗಮನಿಸಬೇಕು. ಹಾಗಿರುವಾಗ ಬೇರೆ ಬೇರೆ ಉದ್ಯೋಗ ದಂಧೆಗಳು ನಮ್ಮ ಅನ್ನ ಬ್ರಹ್ಮನ ಪ್ರಶ್ನೆಯನ್ನು ನೀಗಿಸಬೇಕಾಗಿ ಪರಿಣಮಿಸುತ್ತದೆ ಇಂತಹ ವ್ಯವಸಾಯೇತರೋದ್ಯೋಗಗಳಲ್ಲಿ ಮತ್ಸ್ಯಪಾಲನೆಯು ಒಂದು ಅಗ್ರಗಣ್ಯ ಸ್ಥಾನವನ್ನು ಪಡೆದಿದೆ

ವಿಪುಲವನ್ನು ಉಪಯೋಗಿಸುವುದರಿಂದ, ಶರೀರ ಪೋಷಣೆಗೆ ಅತ್ಯಗತ್ಯವಾದ ವಸ್ತುಗಳು ದೊರೆಯುವುದು ನಮ್ಮ ದೇಶಕ್ಕೆ ಇಂದು ೪೦ ಲಕ್ಷ ಟನ್‌ಗಳಷ್ಟು ಬೇಡಿಕೆಯಿದ್ದರೂ ನಾವು ಕೇವಲ ೧೫ ಲಕ್ಷ ಟನ್‌ಗಳಷ್ಟನ್ನು ಮಾತ್ರ ಪಡೆಯುತ್ತೇವೆ. ಈ ವಿಪುಲನ ವ್ಯವಸಾಯವು ಬೆಳೆಯಲು ಭಾರತದಲ್ಲಿ ಸಾಕಷ್ಟು ಅನುಕೂಲತೆಗಳಿವೆ. ಕೆರೆ ಸರೋವರಗಳು, ಕಣ್ಣು ಹೊಡ್ಡ ನದಿಗಳು ಮತ್ತು ಹೂರು ಸಾವಿರ ಮೈಲುದ್ದದ ಕರಾವಳೀ ತೀರ ಇವು ಮತ್ಸ್ಯ ಸಂವರ್ಧನೆಗೆ ಪರಿಪೋಷಕವಾಗಿವೆ. ಭಾರತದ ಸಮುದ್ರ ತೀರದಿಂದ ೧೫ ಮೈಲುದ್ದದ ವರೆಗೆ ವಿಪುಲ ಹಿಡಿಯುವ ಅಧಿಕಾರವು ನನಗಿದೆ ಆದರೆ, ನಾವು ಮಾತ್ರ ಇದರ ಸದುಪಯೋಗ ಮಾಡಿಕೊಳ್ಳುವುದಿಲ್ಲ ನಮ್ಮ ನೆರೆ ರಾಷ್ಟ್ರಗಳಾದ ಸಿಂಹಳದಲ್ಲಿ ೧೬, ಬರ್ಮಾದಲ್ಲಿ ೭೦ ಜಾಪಾನ್‌ನಲ್ಲಿ ೯೦ ರಾತಲು ಗಳಷ್ಟು ವಿಪುಲನ್ನು ಅಲ್ಲಿಯ ವ್ಯಕ್ತಿಯೊಬ್ಬನು ಸಯೋಗಿಸಿದರೆ, ನಾವು ಕೇವಲ ೪ ರಾತಲುಗಳನ್ನು ಬಳಸುತ್ತೇವೆ. ಇದನ್ನು ನೋಡುವಾಗ ನಾವೀ ವ್ಯಾಪಾರದಲ್ಲಿ ಬಹಳ ಹಿಂದುಳಿದಿದ್ದೇವೆನ್ನದೆ ಗತ್ಯಂತರವಿಲ್ಲ

ಮಾರ್ಗದಲ್ಲಿ ಅನೇಕ ಕಠಿಣತೆಗಳಿದ್ದುದೇ ಈ ವ್ಯವಸಾಯವು ಬೆಳೆಯದಿರಲು ಕಾರಣವಾಗಿದೆ ಅಂಬಿಗರಿಗೆ ತಮ್ಮ ಮಜ್ಜೆಗಳಿಗೆ ಬೇಕಾದ ಸಲಕರಣೆಗಳು ಕೆಲವೊಂದು ವ್ಯಾಪಾರಿಗಳ ವಶದಲ್ಲಿದ್ದುದರಿಂದ ಸುಲಭವಾಗಿ ದೊರೆಯಲಾರವು ಈ ಉದ್ದಿಮೆಯ ಲಾಭವನ್ನು ಈ ತೆರದ ವ್ಯಾಪಾರಿಗಳೇ ಪಡೆಯುತ್ತಾರೆ ದೋಣಿಗಳು ಸಹ ಬಹಳ ಚಿಕ್ಕವಾಗಿದ್ದು, ಯಂತ್ರರಹಿತವಾದುದರಿಂದ ಸಮುದ್ರದಲ್ಲಿ ಬಹಳ ದೂರಕ್ಕಾಗಲೀ ಅತಿವೇಗದಲ್ಲಾಗಲೀ ಸಂಚರಿಸಲು ಅಸಮರ್ಥವಾಗಿರುವುದು ವಿಪುಲಗಳನ್ನು ಹಿಡಿದನಂತರ, ಲನನ್ನು ವ್ಯಾಪಾರಕೇಂದ್ರಗಳಿಗೆ ಒಯ್ಯಲು ಸರಿಯಾದ ಮಾರ್ಗಗಳ ಸೌಕರ್ಯ ಸಹ ಇರುವುದಿಲ್ಲ

ಪ್ರಧಾನ ಸಂಚವರ್ಷಿಕ ಯೋಜನೆಯಲ್ಲಿ ಈ ವ್ಯವಸಾಯ ವಿಕಾಸದ ದೆಸೆಯಲ್ಲಿ ಕೆಲವೊಂದು ಸುಧಾರಣೆಗಳು ನಡೆದಿದ್ದು, ವ್ಯವಸಾಯಿದಲ್ಲಿದ್ದ ಅಡೆತಡೆಗಳನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಲಾಗಿದೆ. ಮೊದಲನಯ ಯೋಜನಾರಂಭದಲ್ಲಿ ಭಾರತದಲ್ಲಿ ಪ್ರತಿವರ್ಷ ೧೦ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ವಿಪುಲನ್ನು ಹಿಡಿಯುತಿದ್ದರು. ೧೯೫೫—೫೬ರಲ್ಲಿ ಇದು ಹತ್ತು ಸೇಕಡಾದಷ್ಟು ಅಭಿವೃದ್ಧಿಹೊಂದಿದೆ, ಎಂದರೆ, ೧೧ ಲಕ್ಷ ಮೆಟ್ರಿಕ್ ಟನ್ನುಗಳಿಗೆ ಉತ್ಪಾದನೆಯು ಏರಿದೆ.

ಸಾಕಷ್ಟು ಅನುಕೂಲತೆಗಳು ಒದಗಿ ಬಂದರೆ ದ್ವಿತೀಯ ಯೋಜನಾಂತ್ಯದಲ್ಲಿ ಮತ್ಸ್ಯವ್ಯವಸಾಯದಲ್ಲಿ ಸೇಕಡಾ ೬೫ರಷ್ಟು ಹೆಚ್ಚುವರಿಯನ್ನು ಸಾಧಿಸುವುದು ಸಾಧ್ಯವಾಗಬಹುದು. ೧೫ ಕೋಟಿ ರೂಪಾಯಿಗಳನ್ನು ಈ ಉದ್ಯೋಗಕ್ಕಾಗಿ ಪ್ರತ್ಯೇಕಿಸಿಡಲಾಗಿದೆ ಇದರಲ್ಲಿ ೪ ಕೋಟಿ ರೂಪಾಯಿಗಳು ಖಾಸ್ಯ ವೈಕೃಷಿ ವಂತ್ರಾಲಯದ್ವಾರಾ ವಿಧಿವಿಕಾಸ ಕಾರ್ಯಕ್ರಮಗಳಲ್ಲಿ ಮತ್ತು ಳಿದ ೮ ಕೋಟಿ ರಾಜ್ಯಸರಕಾರಗಳ ದ್ವಾರಾ ತಮ್ಮ ಯೋಜನೆಗಳಲ್ಲಿ ವೆಚ್ಚಮಾಡಲ್ಪಡುತ್ತವೆ ಈ ಪೂಬಲಿಗನಲ್ಲಿ ಪ್ರಾಯೋಗಿಕ ಸುಧಾರಣೆಗಳಲ್ಲಿ ಖರ್ಚಾಗುವ ಹಣವೂ ಕೂಡಿಕೊಂಡಿದೆ

ನದಿ, ಕರೆ ಹಾಗೂ ಇನ್ನಿತರ ಜಲಾಶ್ರಯಗಳಲ್ಲಿನ ಸಿಹಿನೀರಿನಲ್ಲಿ ಮತ್ಸ್ಯ ವ್ಯವಸಾಯದ ವಿಕಾಸವು ಪ್ರಥಮ ಪಂಚವರ್ಷಿಕಯೋಜನಾ ಪೂರ್ವದಲ್ಲಿಯೇ ಸಣ್ಣ ಪ್ರಮಾಣದಲ್ಲಾಗತ್ತು ಯೋಜನಾವೇಳೆಯಲ್ಲಿ ಈ ದಿಸೆಯಲ್ಲಿ ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಬೊಂಬಯಿ ರಾಜ್ಯದಲ್ಲಿ ೧೧೫೬೫ ಎಕ್ರೆ ಜಲಕ್ಷೇತ್ರ ಮತ್ತು ವಿಂಧ್ಯಕ್ಷೇತ್ರದಲ್ಲಿ ೫೬೫೦ ಎಕ್ರೆ ಜಲಕ್ಷೇತ್ರವನ್ನು ಕಂಡು ಹಿಡಿಯಲಾಯಿತು ಪಶ್ಚಿಮ ಬಂಗಾಲದಲ್ಲಿ ೯೫೫೦ ಎಕ್ರೆ ಜಲದಲ್ಲಿ ಮತ್ಸ್ಯ ಪಾಲನೆಗಾಗಿ ಅಲ್ಪಕಾಲೀನ ಖರ್ಚನ್ನು ಕೊಡಲಾಗಿದೆ ಮದ್ರಾಸ್, ಉತ್ತರ ಪ್ರದೇಶ, ಆಂಧ್ರ, ಬೊಂಬಯಿ, ಪಶ್ಚಿಮ ಬಂಗಾಳ ಮೊದಲಾದ ರಾಜ್ಯಗಳಲ್ಲಿ ಸಿಹಿನೀರಿನ ಜಲಾಶಯಗಳಲ್ಲಿ ಸಣ್ಣ ಸಣ್ಣ ವಿಪುಲಗಳನ್ನು ಪಾಲಿಸಲು ಪ್ರಾರಂಭವಾಗಿದೆ. ಈ ಒಟ್ಟಿನ ೯ ಸಾವಿರ ಎಕ್ರೆ ಜಲಾಶಯಗಳಲ್ಲಿ ಮತ್ಸ್ಯ ಪಾಲನೆಯು ನಡೆಯುತ್ತಾ ಇದೆ ಬೇರೆ ಬೇರೆ ರಾಜ್ಯಗಳಲ್ಲಿ ಈ ರೀತಿಯ ಜಲಾಶಯಗಳಲ್ಲಿ ಮತ್ಸ್ಯ ವ್ಯವಸಾಯದ ವಿಕಾಸ ಮತ್ತು ಸಂಶೋಧನೆಗಾಗಿ ೫ ಕೋಟಿ ರೂಪಾಯಿಗಳ ಆತಿರಿಕ್ತ ಮೌಲ್ಯವನ್ನು ಗುರುತಿಸಲಾಗಿದೆ

ಆದರೆ, ಸಿಹಿ ನೀರಿನಲ್ಲಿ ವಿಕಾಸ ಮಾಡುವ ಮತ್ಸ್ಯಪಾಲನೆಗಿಂತ ಉಪ್ಪು ನೀರಿನ ವಿಪುಲನ ವ್ಯವಸಾಯವು ಲಾಭದಾಯಕವಾಗಿರುತ್ತದು ನಾವು ಈ ರೀತಿ ಸಮುದ್ರವಿಪುಲನ ವ್ಯವಸಾಯಾಭಿವೃದ್ಧಿಯನ್ನು ಬಯಸುವುದಾದರೆ, ಮತ್ಸ್ಯಗಳ ಸಮಸ್ಯೆಯನ್ನು ಅರಿತು, ಅವನ್ನು ಪರಿಹರಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ತೀರ ಅವಶ್ಯವಾದದೆಂದು ಈ ಮಾತನ್ನು ಧ್ಯಾನಿಸಿಯೇ ತಿರು ಕೊಚ್ಚಿಯಲ್ಲಿ ಭಾರತ ನಾವೆಕಾರ್ಯಕ್ರಮದ ಪ್ರಾರಂಭವಾಗಿರುವುದು ಈ ಕಾರ್ಯಕ್ರಮವು ಮತ್ಸ್ಯ ಪಾಲನೆ[ಹಾಗೂ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವಲ್ಲಿ ಉತ್ತಮ ಪಾತ್ರವನ್ನು ವಹಿಸುವುದು

ವಿಪುಲ ಹಿಡಿಯುವ ಕೆಲಸಕ್ಕೆ ಆವಶ್ಯಕವಾದ ಯಂತ್ರ, ಚಿರಪೀ, ಗಾಳ ನಾರು ಮೊದಲಾದುವನ್ನು ಅಂಬಿಗರಿಗೆ ಸಹಕಾರಿ ಸಮಿತಿಗಳ ಮುಖಾಂತರ ಕೊಡಿಸಲಾಗುವುದು ಪ್ರಥಮ ಯೋಜನಾಂತ್ಯದಲ್ಲಿ ಇಂತಹ ೮೦೦ ಸಹಕಾರೀ ಸಮಿತಿಗಳಿದ್ದು ಅವುಗಳ ನುದ್ರಾಸ್ ನೆಗರಪೊಂದರಲ್ಲಿಯೇ ೫೬೬ ಸಮಿತಿಗಳಿದ್ದು, ಅದು ವ್ಯವಸಾಯಾವಶ್ಯಕ ಪದಾರ್ಥಗಳನ್ನು ಅಂಬಿಗರಿಗೆ ಒದಗಿಸುವುದು ಮಾತ್ರವಲ್ಲದೆ, ಅವರ ಭೋಜನ ಬಟ್ಟೆ, ಔಷಧಿ, ಮಕ್ಕಳ ಶಿಕ್ಷಣ ಮೊದಲಾದುವುಗಳ ವ್ಯವಸ್ಥೆಯನ್ನೂ ಅತ್ಯತ್ತಮವಾರೀತಿಯಲ್ಲಿ ಮಾಡುತ್ತಿದೆ

ನವ ಭಾರತೀಯ ಮತ್ಸ್ಯವ್ಯವಸಾಯ ವಿಕಾಸದಲ್ಲಿ ೪ ಮುಖ್ಯಾಂಗಗಳಿವೆ— ೧ ವಿಪುಲ ಹಿಡಿಯುವ ಸಲಕರಣೆಗಳ ಸರಣಿ ೨. ಆಳವಾದ ನೀರಿನಲ್ಲಿ ವಿಪುಲ ಹಿಡಿಯುವ ಕಾರ್ಯದ ವಿಕಾಸ ೩ ವಿಪುಲ ಹಿಡಿಯಲು ಬಂದರುಗಳ ಯೋಗ್ಯ ವ್ಯವಸ್ಥೆ ಮತ್ತು ೪ ವಿಪುಲನ್ನು ವ್ಯಾಪಾರ ಕೇಂದ್ರಗಳವರೆಗೆ ಮುಟ್ಟಿಸಲು ಮತ್ತು ಸುರಕ್ಷಿತವಾಗಿಡಲು ಉಚಿತ ಪ್ರಬಂಧ ಈಗ ವ್ಯವಹಾರದಲ್ಲಿರುವ ಸಣ್ಣ ದೋಣಿಗಳು ಸಮುದ್ರದುದ್ದಕ್ಕೆ ೭ ರಿಂದ ೧೦ ಮೈಲಿಗಳಷ್ಟು ದೂರ ಮಾತ್ರ ಹೋಗಬಲ್ಲುವು ಆಂಧ್ರವುಗಳಲ್ಲಿ ಆಳನೀರಿನ ವಿಪುಲ ಹಿಡಿಯುವುದಾದರೆ ಹೇಗೆ? ಕಳೆದೈದು ವರ್ಷಗಳಲ್ಲಿ ಬೊಂಬಾಯಿಯ ೬೦೦ ದೋಣಿಗಳಿಗೆಲ್ಲ ಯಂತ್ರಗಳನ್ನು ಜೋಡಿಸಿದುದರ ಪರಿಣಾಮವಾಗಿ, ಮೊದಲಿನ ನಾಲ್ಕು ಪಟ್ಟು ವಿಪುಲ ಗಳನ್ನು ಹಿಡಿಯಲಾಯಿತು ಮೊದಲು ನಗರಕ್ಕೆ ಒಟ್ಟು ೧೧ ಸಾವಿರ ಟನ್ ವಿಪುಲು ದೊರೆಯುತ್ತಿದ್ದರೆ, ಆದೀಗ ೪೦ ಸಾವಿರ ಟನ್ನು

(ಜನೆ ಪಟ ನೋಡಿರಿ)

ಕುಂದಾಪುರದ ಮುನ್ಸೀಫ್ ಕೋರ್ಟಿನಲ್ಲಿ

O. S No. 313/1957

ವಾದಿ—ಆನಂದ ಲೃತ ಳ

ಪ್ರತಿವಾದಿರು—ಕೃಷ್ಣಮ್ಮ ಶೆಟ್ತಿ ಕೂಡಾ

ಪ್ರತಿವಾದಿರು 1 ಕೃಷ್ಣಮ್ಮ ಶೆಟ್ತಿ ಮಂಜಯ್ಯಸೆಟ್ರು ಸೊಸೆ ಕುಂದಾಪುರ ತಾಲ್ಲೂ ಹೇರಂಜಾಲುಗ್ರಾಮ 2 ಗೋವಿಂದ ಸೆಟ್ಟಿ 3 ಮಂಜಕ್ಕ ಶೆಟ್ತಿ ಕೃಷ್ಣಮ್ಮ ಶೆಟ್ತಿರ ಮಕ್ಕಳು ಕುಂದಾಪುರ ತಾಲ್ಲೂ ಕಾವ್ತ್ರೋಡು ಗ್ರಾಮ— 4 ದುರ್ಗಿ ಶೆಟ್ತಿ 5 ವಹಾಲಂಗ ಸೆಟ್ಟಿ ಕಾವೇರಿಶೆಟ್ತಿರ ಮಕ್ಕಳು ಕುಂದಾಪುರ ತಾಲ್ಲೂ ಬಿಜೂರುಗ್ರಾಮದ ಗಂಟಿಹೊಳೆ ಇವರಿಗೆ—

ವಾದಿಯು ತಾರೀಕು 1-8-1930ನೇ ಮೂಲಗೇಣೆ ಎನುವುದಿಸ್ಪ್ರಕಾರ ಮಾರ್ಜಬಿ ಸಂಗರದ ಗೇಣಬಗ್ಗೆ ಪ್ರತಿವಾದಿರನ್ನೇ ಶೆಟ್ರಿ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮ ದೇನಾದ್ರೂ ಆಕ್ಷೇಪಣೆ ಇದ್ದಲ್ಲಿ ತಾರೀಕು 25-11-1957ಕ್ಕೆ ಹಾಜರುಆಗಿ ಜ್ಯೂಹೆಂದು ವಕಾಶೆಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಉಜ್ಜಶಿವಾ ಬೆ ಕೆಸಕ್ಷೆನಾಗಿ ತೀರ್ಮಾನಿಸಲಾ ದೀತು ಎಂಬ ಕಂಠ ಕೋರ್ಟು ಮುದ್ರಾಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣ. ಆಜ್ಞೆಪ

K Raghunatha Shenai
Pleader for Plff
Coondapoor 2—11—1957.

ನರ್ವಧರ್ಮ ಸಮ್ಮೇಲನದ ರಜತೋತ್ಸವ ಸಮಾರಂಭ.
ವಿವಿಧ ವಸ್ತುಪ್ರದರ್ಶನ, ಧರ್ಮಸ್ಥಳ.

ಇದೇ ನವಂಬರ ತಾ 19, 20 ಮತ್ತು 21ನೇ ದಿನಗಳಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಜರಗಲಿರುವ ಸರ್ವಧರ್ಮ ಸಮ್ಮೇಲನ, ಸಾಹಿತ್ಯ ಸಮ್ಮೇಲನ ಮತ್ತು ಕಲಾ ಮಹೋತ್ಸವಗಳ ರಜತೋತ್ಸವ ಸಂಬಂದವಾಗಿ, ವಿವಿಧ ವಸ್ತು ಪ್ರದರ್ಶನವೊಂದು ಜರಗುವುದು ಪ್ರದರ್ಶನವು ತಾ 19-11-57ನೇ ಮಂಗಳವಾರ ಆರಂಭವಾಗಿ 25—11—57 ವರೆಗೆ ನಡೆಯುವುದು.

ಮೈಸೂರಿನ ರಾಜ್ಯಪಾಲರಾಗಿರುವ ಮಾನ್ಯ ಶ್ರೀ| ಜಯಚಾಮರಾಜ ಒಡೆಯರ್‌ರವರು ಮತ್ತು ಬಿಹಾರಿನ ಮಾಜಿ ರಾಜ್ಯಪಾಲ ಶ್ರೀ| ಆರ್ ಆರ್. ದಿವಾಕರರು ತಾ 19-11-57ರಲ್ಲೂ, ಮೈಸೂರಿನ ಮುಖ್ಯಮಂತ್ರಿ ಶ್ರೀ| ಎಸ್ ನಿಜಲಿಂಗಪ್ಪನವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಂಡಿತರತ್ನ ಶ್ರೀ| ಬಿ ಶಿವಮೂರ್ತಿ ಶಾಸ್ತ್ರಿಗಳವರು ತಾ 20-11-57ರಲ್ಲೂ, ಕೇರಳದ ರಾಜ್ಯಪಾಲ ಡಾ| ಬಿ ರಾಮಕೃಷ್ಣ ರಾವ್ ಮತ್ತು ಮೈಸೂರಿನ ಪೂಜಾ ಮುಖ್ಯಮಂತ್ರಿ ಶ್ರೀ| ಕೆ ಹನುಮಂತಯ್ಯನವರು ತಾ 21-11-57ರಲ್ಲೂ ದಯಮಾಡಿಸುವರು

ಕನ್ನಡ ನಾಡಿನ ಹಲವು ವಿದ್ವಾಂಸರೆ ಭಾಷಣಗಳೂ ತಾ 21-11-57ನೇ ದಿನ ಶ್ರೀ| ಜಿ ಎನ್ ಬಿ ಭಾಲಸುಬ್ರಹ್ಮಣ್ಯಂ, ಹೊನ್ನಪ್ಪ ಭಾಗವತರ್ ಮೊದಲಾದವರ ಸಂಗೀತ, ಶ್ರೀ| ಚಾಡಯ್ಯನವರ ಪಿಟೀಲು, ಪಾಲ್ಘಾಟ್ ಮಣಿಯವರ ಮೃದಂಗ ಇತ್ಯಾದಿ ಕಲಾ ಕಾರ್ಯಕ್ರಮಗಳಿವೆ

ಪ್ರದರ್ಶನಕ್ಕೆ ಸ್ಟೋಲುಗಳನ್ನು ಇಚ್ಛಿಸುವವರು ತಾ 10 11-57ರೊಳಗೆ ಕೆಳಗಿನ ವಿಳಾಸಕ್ಕೆ ಬರೆಯಬೇಕು. (ಸ್ಟೋಲುಗಳಿಗೆ ಬಾಡಿಗೆ ಇರುವುದಿಲ್ಲ)

(ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ, M L A
ಅವರ ಅಪ್ಪಣೆ ಪ್ರಕಾರ)

ಕುದ್ಪಿ ವಾಸುದೇವ ಶೆಟ್ಟಿ,
ಸಂಪಾದಕ ಪ್ರಭಾತ, ಮಂಗಳೂರು.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ : ೭-೧೧-'೫೭	ಸಂಚಿಕೆ ೯

ಅತ್ಯದ್ಭುತ ಸವಾಡ

ರಶ್ಯದವರು ತಮ್ಮ ಮೊದಲಿನ ಉಪಗ್ರಹವನ್ನು ಆಕಾಶದಲ್ಲಿ ತೇಲಬಿಟ್ಟರುವುದರಿಂದಲೇ ದಿಙ್ಮೂಢರಾದ ಪಾಶ್ಚಾತ್ಯರಿಗೆ ಇದೀಗ, ಮೊದಲಿನದಕ್ಕಿಂತಲೂ ಅತುಲವಾದ ಎರಡನೆ ಉಪಗ್ರಹವನ್ನು ಮೊನ್ನೆ ದಿನಾಂಕ ೪ರಂದು ಹಾರಿಸಿದ ಸಂಗತಿಯು ದಂಗುಬಡಿಸಿದೆ. ಕಳೆದ ತಿಂಗಳಲ್ಲಿ ಚಿಗಿಸಿದ ಗ್ರಹದ ಉದ್ದೇಶಕ್ಕಿಂತ ಈ ಬಾರಿಯದು ಹಚ್ಚಾಗಿದೆ. ಈ ಪ್ರಯೋಗವು ಯಶಸ್ವಿಯಾದರೆ, ಮಾನವನು ಅಂತರಿಕ್ಷದ ಬಹುವಿಧ ತಿಳುವಳಿಕೆಯನ್ನು ಸಂಪಾದಿಸುವುದು ಸಾಧ್ಯ ಮಾತ್ರವಲ್ಲದೆ, ಚಂದ್ರಲೋಕಕ್ಕೆ ಪ್ರಯಾಣ ಬೆಳೆಸಬೇಕೆಂಬ ಮಹತ್ವಾಕಾಂಕ್ಷೆಯೂ ಪೂರೈಸುವ ಬಗ್ಗೆ ವಿಶ್ವಾಸವೂ ಹುಟ್ಟುವುದು—ಈ ಎರಡನೆ ಉಪಗ್ರಹವು ೪೦ ಮಣ ಭಾರವಿದ್ದು ಭೂಮಿಯಿಂದ ೯೫೦ ಮೈಲುಗಳೆತ್ತರದಲ್ಲಿ ಭೂ ಪ್ರದಕ್ಷಿಣೆ ಮಾಡುತ್ತಿದೆ. ಕಾಸೊಂದಕ್ಕೆ ೧೫,೦೦೦ ಮೈಲು ನೇಗದಲ್ಲಿ ಓಡುವ ಈ ಮಾನವ ನಿರ್ಮಿತ ಗ್ರಹವು ೧೦೨ ನಿಮಿಷಗಳಲ್ಲಿ ಒಂದು ಭೂಪ್ರದಕ್ಷಿಣೆಯನ್ನು ಮಾಡುವುದು. ಈ ಬಾರಿಯ ತೇಲಾಟದ ಗ್ರಹವು ಮೊದಲಿನದಕ್ಕಿಂತ ಎತ್ತರದಲ್ಲಿದ್ದು ಭಾರವಾಗಿಯೂ ದೊಡ್ಡದಾಗಿಯೂ ಇರುವುದಲ್ಲದೆ, ಒಂದು ಜೀವಂತ ನಾಯಿಯನ್ನೂ ಹೊತ್ತು ಕೊಂಡಿದೆ. ಈ ನಾಯಿಯು ಜೀವಿಸಲು ತಕ್ಕ ಅನುಕೂಲತೆಗಳನ್ನು ಉಪಗ್ರಹದಲ್ಲಿ ಒದಗಿಸಲಾಗಿರುವುದು ಮಾತ್ರವಲ್ಲದೆ, ಅದನ್ನು ಹಿಂತಿರುಗಿ ಭೂಮಿಗಿಳಿಸುವ ಬಗ್ಗೆ ಏರ್ಪಾಡುಗಳನ್ನೂ ಗೆಯ್ಯಲಾಗಿದೆ. ಅಂತರಿಕ್ಷದಲ್ಲಿನ ಬಹು ಎತ್ತರದ ಪ್ರದೇಶದ ಸಕಲ ಪರಿಸ್ಥಿತಿಯನ್ನೂ ಅರಿತುಕೊಳ್ಳುವ ಸಾಧನೋಪಕರಣಗಳನ್ನಿಡಲಾಗಿದ್ದು ಆಂತರಿಕ್ಷಾಭ್ಯಾಸಕ್ಕೆ ಬಹಳಿಳ ನೆರವಾಗಿದೆ. ನಾಯಿಯೊಂದು ಜೀವಂತ ಪ್ರಾಣಿಯಾಗಿರುವುದರಿಂದ, ಎತ್ತರದಲ್ಲಿನ ಅವಕಾಶವು ಅದರ ಮೇಲೆ ಮಾಡುವ ಪರಿಣಾಮವನ್ನು ಅಭ್ಯಾಸ ಮಾಡುವುದರಿಂದ, ಮಾನವನು ಸಹ ಈ ಉಪಗ್ರಹಗಳ ಮೂಲಕ ಅಂತರಿಕ್ಷಕ್ಕೆ ನೆಗೆಯುವುದು ಸಾಧ್ಯವಿದೆಯೇ ಎಂಬ ಕುರಿತು, ಮುಂದಿನ ಅಂಕಪಟ್ಟಿ ಇಂದಭ್ಯರ್ಥದಲ್ಲಿ ಪ್ರಬಂಧಗಳೊಳಿಸಬೇಕಾದ ವ್ಯವಸ್ಥೆಗಳ ಬಗ್ಗೆ ಅಭ್ಯಾಸಮಾಡುವುದು ಸಹ ಸಾಧ್ಯವಾಗಬಹುದು. ಆಕಾಶದಲ್ಲಿ ಸಾಮಾನ್ಯವಾಗಿ ೫-೧೦ ಮೈಲೆತ್ತರದ ಪ್ರತ್ಯಕ್ಷಾನುಭವವನ್ನೂ ಸುಮಾರು ೫೫ ಮೈಲೆತ್ತರದ ಪರೋಕ್ಷಾಭ್ಯಾಸವನ್ನೂ ಮಾಡಿದ ಮಾನವನು ಇದೀಗ ಒಂದು ಸಾವಿರ ಮೈಲೆತ್ತರದ ವರೆಗಿನ ಪರಿಸ್ಥಿತಿಯನ್ನು ತಿಳಿದಂತಾಗುವುದು. ಒಂದು ವೇಳೆ ಈಗ ಹಾರಿಸಿದ ನಾಯಿಯು ಸುರಕ್ಷಿತನಾಗಿ ಭೂಮಿಗಿಳಿದರೆ, ಆ ನೇಲೆ ಮಾನವರು ಸಹ ಇಂತಹ ಕೃತಕ ಗ್ರಹಗಳಲ್ಲಿ ಸಂಚಾರಬಹುದೆಂದು ಹೇಳಬಹುದು. ಇಂತಹ ಒಂದು ಅವೋಘ ಸಂಶೋಧನೆಯನ್ನು ಕೇವಲ ಒಂದು ತಿಂಗಳ ಕಾಲದಲ್ಲಿ, ಎಂದರೆ, ಹಿಂದಿನ ಉಪಗ್ರಹವನ್ನು ಚಿಗಿಸಿದನಂತರದ ಅಲ್ಪದಿನಗಳಲ್ಲಿಯೇ, ಮಾಡಿದ ರಶ್ಯನ್ ವಿಜ್ಞಾನಿಗಳ ಸಾಹಸವು ನಿಜವಾಗಿಯೂ ಪ್ರಶಂಸನೀಯವೇ ಸರಿ. ಅಂತಾರಾಷ್ಟ್ರೀಯ ಭೌಗೋಳಿಕ ವರ್ಷದಲ್ಲಿ ಮುತುವರ್ಜಿಯಿಂದ ಆಧುನಿಕ ಜಗತ್ತಿನ ವಿಜ್ಞಾನ ಪ್ರಪಂಚದಲ್ಲಿ ಅಪ್ರತಿಮನೆನಿಸಿದ ಕಾರ್ಯವನ್ನು ಕೈಗೊಂಡು ಜಯಶೀಲರಾದ ಈ ವಿಜ್ಞಾನಿಗಳ ಕೀರ್ತಿಯು ಚಿರಸ್ಥಾಯಿಯಾಗಿರುವುದು. ಎಂತಲೇ ಮುಂದುವರಿದ ದೇಶದವರೆಂದು ಹೇಳಿಕೊಳ್ಳುವ ಅಮೆರಿಕೆಯ ವಿಜ್ಞಾನಿಗಳು ಸಹ ಬೆಕ್ಕಸಬೆರಗಾಗಿ, ನಂಬಲಸಾಧ್ಯವಾದಸಂಗತಿಯೆಂದೀಷ್ಟಲೆಯನ್ನು ವರ್ಣಿಸಿಬಾರ್ದೆ. ಇನ್ನು ಮುಂದಿನ ಪ್ರಯತ್ನವೆನಿಸಿದ ಭೂಮಿಯಿಂದ ೩೪೦ ಸಾವಿರ ಮೈಲೆತ್ತರದಲ್ಲಿ ಭೂ ಸ್ಪರ್ಧಕ್ಷಿಣೆ ಬರುತ್ತಿರುವ ಚಂದ್ರಲೋಕಕ್ಕೆ ಪ್ರಯಾಣ ಬೆಳೆಸ ವಲ್ಲಿನಾವೇ ಮುಂದಾಗಬೇಕೆಂದು ಹೇಳಿಕೊಳ್ಳುತಿದ್ದಾರೆ. ವಿಜ್ಞಾನವು ದಿನೇ ದಿನೇ ಪ್ರಗತಿಯನ್ನು ಹೊಂದುವುದು ಅಗತ್ಯವೇ ಆದರೂ ಇನ್ನೆಲ್ಲ ನೂತನ ಸಂಶೋಧನೆಗಳ ಪರಿಣಾಮವೆಲ್ಲಿ ಬಂದು ನಿಲ್ಲುವುದೆಂದು ಭವಿಷ್ಯ ನುಡಿಯುವುದು ಸಾಧ್ಯವಿಲ್ಲ. ಜಾಗತಿಕ ಶಾಂತಿಗಾಗಿಯೇ ವಿಜ್ಞಾನವು ನೆರವಾಗ ಬೇಕಾದುದು ಇಂದಿನ ಜಗತ್ತು ಬದುಕುವುದಕ್ಕೆ ಕಾರಣವಾಗುವುದಲ್ಲದೆ, ಪರಸ್ಪರ ಸ್ಪೇಷಾಸೂಯೆಗಳನ್ನು ಹೆಚ್ಚಿಸುವುದರಿಂದಲ್ಲ. ಒಂದು ಕಾಲದಲ್ಲಿ ಮಾನವನು ಸ್ವರ್ಗ ಮರ್ತ್ಯ ವಾತಾಳಗಳೆಂಬ ಲೋಕತ್ರಯಗಳನ್ನೂ ತನ್ನ ಕೀರ್ತಿ ಪ್ರಸಾರಕ್ಕೆ ಎಡೆಗಳನ್ನಾಗಿ ಮಾಡಿಕೊಂಡಿದ್ದನೆಂಬ ಮಾತು ಸತ್ಯವಾದರೆ, ಅಂತಹ ಕಾಲವು ಇಂದಿನ ಜಾಗತಿಕ ಜನರಿಗೂ ಸಮೀಪಗತವಾಯಿತು ಎನ್ನಬೇಕು. ಆದರೆ, ಕೇವಲ ವೈಜ್ಞಾನಿಕ ಪ್ರಗತಿಯನ್ನು ಮಾತ್ರ ಕೈಗೊಂಡರೆ, ಲೋಕಹಿತಕ್ಕೆ ಅಪೇಕ್ಷಿತ ನೆರವಾಗಬಲ್ಲುದೋ ಹೇಳುವುದು ಕಷ್ಟ. ಅಂತೂ ಈ ತರದ ಮಹಾ ಸಂಶೋಧನೆಗಳು ಮತ್ತಷ್ಟುಗಳ ಪರಿಣಾಮಗಳು ಲೋಕದ ಜನರ ಮರಣಕ್ಕೆ ಹೇತುವಾಗದೆ, ಬೇರೆ ಬೇರೆ ರಾಷ್ಟ್ರಗಳ ನಡುವೆ ಸಂಬಂಧ ಸಾಮಂಜಸ್ಯವನ್ನು ಹೆಚ್ಚಿಸಲು ನೆರವಾಗಬೇಕು. ಒದಗಿದ ಸಂಶೋಧನೆಯ ಲಾಭದ ಫಲವನ್ನು ಒಂದೇ ದೇಶವು ಪಡೆದುಕೊಂಡರೆ ಸಾಲದು, ತನ್ನ ಸಹಕಾರ್ಯಗಳೊಂದಿಗೆ ಹಂಚಿ ಅಭಿಭೋಗಿಸಬೇಕು. ಅಶಂಭಾವ್ಯವೆಂದು ತಿಳಿಯಲಾಗಿದ್ದ ಸಂಗತಿಗಳನ್ನು ಸಂಭಾವ್ಯವೆಂದು ತೋರಿಸಿಕೊಟ್ಟ ರಶ್ಯವು ಈ ಒಂದು ಕರ್ತವ್ಯವೂ ತನ್ನ ಹೆಗಲಿಗಿದೆ ಎಂಬುದನ್ನು ಮರೆಯದೆ, ತಾನು ಸಂಗ್ರಹಿಸಿದ ವಿಚಾರಗಳನ್ನು ಬಹಿರಂಗಪಡಿಸುವ ಇಚ್ಛೆಯನ್ನು ಪ್ರಕಟಿಸಲಿ. ಆದರ ಪ್ರಯೋಜನವನ್ನು ಉಳಿದ ರಾಷ್ಟ್ರಗಳೂ ಪಡೆದು, ಒಮ್ಮನಸ್ಸಿನಿಂದ ಮುಂದಿನ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಲಿ. ಆಗ, ಈ ದಿಸೆಯ ಕಾರ್ಯವು ಇನ್ನೂ ತೀವ್ರವಾಗುವುದೆಂದಾತಿಶಯಿಸಬಹುದು.

ಮಹತ್ವದ ಸುದ್ದಿಗಳು

ವಸತಿ ಸೌಕರ್ಯ ಪರಿಶೀಲನೆ

ಭಾರತದ ವಿವಿಧ ರಾಜ್ಯಗಳ ವಸತಿ ಶಾಖೆಯ ಮಂತ್ರಿಗಳ ಸಮ್ಮೇಳನವನ್ನು ಮೈಸೂರು ನಗರದ ಜಿಲುವಾಂಬಾ ಭವನದಲ್ಲಿ ಕಳೆದ ಆಕ್ಟೋಬರ ೩೧ನೆಯ ದಿನಾಂಕ ಮೈಸೂರಿನ ರಾಜ್ಯಪಾಲರು ಉದ್ಘಾಟಿಸಿದರು. ಭಾರತ ಸರಕಾರದ ಕಾಮಗಾರಿ, ವಸತಿ ಮತ್ತು ಪೂರೈಕೆ ಮಂತ್ರಿ ಶಾಖೆಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ವಸತಿ ಶಾಖೆಯ ಮಂತ್ರಿಗಳ ಈ ಮೊದಲ ಸಮ್ಮೇಳನವು ಸಿಂಲಾದಲ್ಲಿ ೫೫ರ ಜೂನ್ ತಿಂಗಳಲ್ಲಿ ಜರಗಿತ್ತು. ವಸತಿಕಾರ್ಯಕ್ರಮದ ಪ್ರಗತಿಯನ್ನು ಪರ್ಯಾಲೋಚಿಸುವುದಕ್ಕಾಗಿಯೂ ದ್ವಿತೀಯ ಯೋಜನೆಯಲ್ಲಿ ವಿಧಿಸಲಾಗಿರುವ ಗುರಿಯನ್ನು ಸಾಧಿಸಲು ಅನುಸರಿಸಬೇಕಾದ ವಿವಿಧ ಕ್ರಮಗಳ ಕುರಿತು ಪರಿಶೀಲಿಸುವುದಕ್ಕಾಗಿಯೂ ಮೈಸೂರಿನಲ್ಲಿ ಈ ಸಮ್ಮೇಳನವನ್ನು ವ್ಯವಸ್ಥೆಗೊಳಿಸಲಾಗಿದೆ. ಪ್ರಥಮ ಯೋಜನೆಯಲ್ಲಿ ವಸತಿ ರಾಜೆಗೆ ಒಟ್ಟು ೩೮೨ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿದ್ದರೆ, ಎರಡನೆ ಯೋಜನೆಯಲ್ಲಿ ೧೫೦ ಕೋಟಿ ರೂ. ಗಳನ್ನು ಪ್ರತ್ಯೇಕಿಸಲಾಗಿದೆ. ಇದರಲ್ಲಿ ಸಹಾಯಧನ ಪಡೆದ ಕೈಗಾರಿಕಾ ವಸತಿ ನಿರ್ಮಾಣಕ್ಕೆ ೪೫ ಕೋಟಿ, ಲಪ್ಪವರ ಮಾನವರ್ಗದವರ ವಸತಿಗೆ ೪೦ ಕೋಟಿ, ಗ್ರಾಮಾಂತರ ಪ್ರದೇಶಗಳಲ್ಲಿ ವಸತಿಗೆ ೧೦ ಕೋಟಿ, ಕೊಳಕು ಪ್ರದೇಶಗಳ ನಿರ್ಮೂಲೀಕರಣಕ್ಕೆ ೩೦ ಕೋಟಿ, ತೋಟ ಕೆಲಸಗಾರರಿಗೆ ವಸತಿಸೌಕರ್ಯಕ್ಕೆ ಎರಡು ಕೋಟಿ ರೂಪಾಯಿಗಳನ್ನು ಹಂಚಿಡಲಾಗಿದೆ.

ಸಹಾಯಧನ ಪಡೆದ ಕೈಗಾರಿಕಾ ವಸತಿಯೋಜನೆ, ಅಲ್ಪವರ ಮಾನವರ್ಗದ ವಸತಿ ಯೋಜನೆ ಕೊಳಕು ಪ್ರದೇಶದ ನಿರ್ಮೂಲನಯೋಜನೆ ಹಾಗೂ ತೋಟ ಕೆಲಸಗಾರರ ವಸತಿ ಯೋಜನೆಯ ಬಗೆಗೆ ನಡೆದಿರುವ ಪ್ರಗತಿಯನ್ನು ಮೈಸೂರಿನಲ್ಲಿ ನಡೆದ ಸಮ್ಮೇಳನವು ಪರಿಶೀಲಿಸಿತು. ಈ ಯೋಜನೆಯ ಪ್ರಕಾರ ಕಾರ್ಯಕ್ರಮಗಳನ್ನು ಕ್ರಿಯಾತ್ಮಕಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ವಿಮರ್ಶಿಸಿತು. ಗ್ರಾಮಾಂತರ ಪ್ರದೇಶಗಳಲ್ಲಿ ವಸತಿಯೋಜನೆ ಮತ್ತು ರಾಜ್ಯ ಹಾಗೂ ಕೇಂದ್ರಗಳ ವಸತಿ ಶಾಖೆಯಧಿಕಾರಿಗಳು ನಿಯತ ಕಾಲಾವಧಿಯ ಸಭೆಗಳನ್ನು ನಡೆಸುವುದು—ಈ ವಿಷಯಗಳನ್ನು ಈ ಸಮ್ಮೇಳನದಲ್ಲಿ ಪರಿಶೀಲಿಸಲಾಯಿತು.

ಈ ಸಮ್ಮೇಳನಾನಂತರ, ತಾ ೪ರಂದು ರಾಷ್ಟ್ರೀಯ ಕಟ್ಟಡ ನಿರ್ಮಾಣ ಪರಿಷತ್ತಿನ ಸಭೆಯು ನಡೆಯಿತು. ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ಸಭೆಯನ್ನು ಉದ್ಘಾಟಿಸಿದರು. ಬೆಂಗಳೂರಿನ ವಸತಿ ಮಂಡಲಿಯ ಅಧ್ಯಕ್ಷರಾದ ಶ್ರೀ ಎಂ. ಡಬ್ಲ್ಯು ದೇಸಾರ್ಯರವರನ್ನು ಮೈಸೂರು ರಾಜ್ಯಸರಕಾರದ ಮಧ್ಯವರ್ತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಈ ಪರಿಷತ್ತಿಗೆ ಬರುವ ಪ್ರತಿನಿಧಿಗಳು ಮತ್ತು ಸಲಹೆಗಾರರಿಗೆ ಆಗತ್ಯವಾದ ಎಲ್ಲಾ ಸೌಕರ್ಯಗಳನ್ನೂ ಅವರು ಒದಗಿಸಿರುವರು. ಪ್ರತಿನಿಧಿಗಳು ಕೃಷ್ಣರಾಜ ಸಾಗರ, ಮೈತ್ರಿ ಮತ್ತರ ಮನೆರಂಜನ ಸ್ಥಳಗಳಿಗೆ ಭೇಟಿಕೊಡುವುದಕ್ಕೂ ಆಗತ್ಯವಾದ ವ್ಯವಸ್ಥೆಯನ್ನು ಮಾಡಲಾಗಿದೆ.

ಸಾಧುಗಳ ಕರ್ತವ್ಯಶೀಲತೆ

ಅಹಮ್ಮದಾಬಾದಿನ ನ್ಯಾಯಶಾಸ್ತ್ರ ಕಾಲೇಜಿನ ಪ್ರಾಂಗಣದಲ್ಲಿ ಕಟ್ಟಲಾದ 'ವಿದ್ಯಾನಂದನಗರ' ದಲ್ಲಿ ಭಾರತದ ರಾಷ್ಟ್ರಾಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದರು ಭಾರತ ಸಾಧು ಸಮಾಜ ಪರಿಷತ್ತನ್ನು ತಾ ೩ರಂದು ಉದ್ಘಾಟಿಸಿದರು. ಇದರಲ್ಲಿ ಸುಮಾರು ಒಂದು ಸಾವಿರ ಸಾಧುಸಂತರು, ಮಹಾಮಂಡಲೇಶ್ವರರು ಬೇರೆ ಬೇರೆ ಸಂಪ್ರದಾಯಗಳ ಪ್ರತಿನಿಧಿಗಳಾಗಿ ಬಂದಿದ್ದರು, ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ, ಇಹಲೋಕದಲ್ಲಿ ಮಾನವಕಲ್ಯಾಣ ಕೈಗೊಳ್ಳಬೇಕು. ಪರಲೋಕದಲ್ಲೇನೂ ದೊರೆಯುವುದಿಲ್ಲ. ತಾಮರಸ ಜಲದಂತೆ ಸಂಸಾರದಲ್ಲಿರಬೇಕೆಂಬುದು ಆರ್ಷೇಯಾಭಿಪ್ರಾಯ. ಇಂತಹ ವಿಚಾರವು ಈಗ ಸಕಾಲಿಕವಾದ್ದು, ಜನತೆಗೆ ಸಾಧುಸಂತರು ಮಾರ್ಗದರ್ಶನ ಮಾಡಬೇಕು. ಜಗತ್ತು ಭೌತಿಕ ಪ್ರಗತಿಯನ್ನು ಮಾತ್ರ ಸಾಧಿಸಿದೆ. ಕೇವಲ ಭೌತಿಕಪ್ರಗತಿ ಮಾತ್ರ ಜೀವನದ ಸರ್ವಸ್ವವಲ್ಲ ಅದರೆ, ಈ ಸತ್ಯಸಂಗತಿಯನ್ನು ತಿಳಿಯಲು ಆಧ್ಯಾತ್ಮಿಕ ನೆರವು ಬೇಕು. ಸಾಧುಸಂತರ ನಾಡಾದ ಭಾರತದಲ್ಲಿ ಇದನ್ನು ಸಾಧುಗಳೇ ಜನತೆಗೆ ತಿಳಿಯುಪಡಿಸಬೇಕಾಗಿದೆ.

ಇಂದು ಸಾಧುಗಳಿಂದ ದೇಶಕ್ಕೆ ಪ್ರಯೋಜನವಿಲ್ಲವಾದ್ದರಿಂದ ಒಂದು ಕಾಯದೆಯನ್ನು ಮಾಡಿ ಈ ವರ್ಗವನ್ನೇ ತೆಗೆಯುವ ಹಂಚಿಕೆ ನಡೆಯುತ್ತಿದೆ ಸಮಾಜದಲ್ಲಿ ಒಂದಂಗವು ಅನುಪಯುಕ್ತವಾದರೆ, ಅದು ಜನಬೆಂಬಲವ

In the Court of the Subordinate Judge of S. K.

A. S. No. 112/57. II Adl.

Kalu Shetty & others—Appellants

Vs

Kamala Shedthi & others—Respondents.

To

Respondents:-

17. Kitti Shedthi

18. Kudka Shetty
Children of Venku Shedthi.

22. Thoma 23. Dasu
Minors by guardian adlitem 18th Respondent.

26 Sundara Shetty, son of 17th Respt.

All are residing in Bhuthabettu of Shiva village of Udipi Taluk.

Take notice that the Appellants have instituted the above appeal against the Decree and Judgement in O. S No. 383/54 on the file of the District Munsif of Udipi, and the same is posted to 16-11-1957 for your appearance. If you fail to appear on that date the same will be heard and disposed of in your absence.

By order of the Court

(*Sd.*) S. Venkat Rao,

Vakil for Appellants.

Mangalore, 1—11—1957.

ನ್ನು ಪಡೆಯಲಾರದು. ಸಾಧುಗಳು ಈಗ ತಮ್ಮ ಉಪಯುಕ್ತತೆಯನ್ನು ಜನತೆಗೆ ತೋರಿಸಿಕೊಡಬೇಕು. ಆದಕ್ಕಾಗಿ ಜನತೆಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕು. ಮಠ ದೇವಾಲಯಗಳ ಆಸ್ತಿಯು ಸಾಧುಗಳ ಸಮಾತೋಪಯೋಗಿತ್ವವ್ಯವಸ್ಥೆಗಳಿಗೆ ಒಪ್ಪಿಸಿರುವ ಧಾರ್ಮಿಕ ನಿಧಿಯಾಗಿದೆ. ಧಾರ್ಮಿಕೋದ್ದೇಶಗಳಿಗಾಗಿಯೇ ಈ ಧನವು ಉಪಯೋಗಿಸಲ್ಪಡಬೇಕು. ಮತ್ತು ಅದು ದುರುಪಯೋಗವಾದರೆ, ಜನರೊಟ್ಟಿಗೇಳುವುದು. ಆದುದರಿಂದ, ಸಾಧುಸಂತರು ಆಧ್ಯಾತ್ಮಿಕ ತತ್ವಗಳನ್ನು ಧರ್ಮವತ್ತಾಗಿ ಸಮಪೇಕ್ಷಿಸಿ ದೇಶದ ಪ್ರಗತಿಕಾರ್ಯದಲ್ಲಿ ತೊಡಗಿಕೊಳ್ಳುವುದವಶ್ಯ" ಎಂದು ತಿಳಿಸಿದರು.

ಸ್ತ್ರೀಯರ ಕರ್ತವ್ಯವೇನು?

ಅಖಿಲ ಕರ್ನಾಟಕ ಮಹಿಳಾ ಪರಿಷತ್ತನ್ನು ಧಾರವಾಡದಲ್ಲಿ ಸೊಂಡೂರಿನ ಮಹಾರಾಣಿ ಶ್ರೀಮತಿ ಸುಶೀಲಾದೇವಿ ಘೋರ್ಪಡೆಯವರು ದಿನಾಂಕ ೨೦ರಂದು ಉದ್ಘಾಟಿಸಿದರು. ಅವರು ತಮ್ಮ ಅಮೋಘ ಹಿಂಗೂ ಅಮೂಲ್ಯ ಭಾಷಣದಲ್ಲಿ ಪಾಶ್ಚಾತ್ಯರ ಅಂಧಾನುಕರಣೆಯನ್ನು ಮಾಡದೆ, ಭಾರತೀಯ ಸಂಸ್ಕೃತಿಯನ್ನನುಸರಿಸಿ, ತಾಯ್ತನದ ಮಹತ್ವವನ್ನು ಉಳಿಸಬೇಕೆಂದು ನಾರಿಯರಿಗೆ ವಿವರಿಸಿದರು.

"ಭಾರತೀಯ ಸಂಸ್ಕೃತಿಯ ಬಗ್ಗೆ ನಮ್ಮಲ್ಲಿ ಅಭಿಮಾನ ಹೆಚ್ಚಬೇಕು; ಒಂದು ಕಾಲದಲ್ಲಿ ಭಾರತ ಉಚ್ಚ ಮಟ್ಟದಲ್ಲಿತ್ತು. ಈ ಪಾಶ್ಚಾತ್ಯರು ಭೌತಿಕ ವಿಚಾರಗಳಲ್ಲಿ ಮುಂದುವರಿದರೂ, ವೈಜ್ಞಾನಿಕ ಕಾಸ್ತ್ರಗಳನ್ನು ಮಾರಣಕ್ಕಾಗಿ ಉಪಯೋಗಿಸುತ್ತಾರೆ. ಅವರ ಸಂಸ್ಕೃತಿಗೆ ಬುನಾದಿಯಿಲ್ಲ. ನಮ್ಮದೋ ಆಧ್ಯಾತ್ಮಿಕ ಸಿದ್ಧಾಂತವನ್ನನಲಂಬಿಸಿದ ಮೂಲತತ್ವಗಳ ಮೇಲೆ ನಿಂತಿದೆ. ಈ ಸಿದ್ಧಾಂತಗಳು ತ್ರಿಕಾಲಾಬಾಧಿತವಿದ್ದು ಯಾವ ಕಾಲಕ್ಕೂ ನಾಶವಾಗಲಾರವು.

ಸ್ತ್ರೀಯು ವಿದ್ಯಾಭ್ಯಾಸವನ್ನು ಪಡೆಯಬೇಕು. ಲೌಕಿಕ ಸ್ವಾತಂತ್ರ್ಯವನ್ನೂ ಸಂಪಾದಿಸಬಹುದು. ಆದರೆ, ಅದನ್ನು ಪಡೆದ ಮಾತ್ರಕ್ಕೆ ಶಾಂತಿ ಸಮಾಧಾನಗಳು ದೊರೆಯಲಾರವು. ತಮ್ಮ ತಾಯ್ತನದ ಕರ್ತವ್ಯವು ನೈಸರ್ಗಿಕ ಕರ್ತವ್ಯವಾಗಿದ್ದು ಅದರಿಂದಲೇ ಇವರಿಗೆ ಶಾಂತಿ ದೊರೆಯಬಲ್ಲುದು. ಮುಂದಿನ ಪೀಳಿಗೆ ತಾಯಿ ಗುರುಸ್ಥಾನದಲ್ಲಿದ್ದಾಳೆ. ಮಾತೃಪದದ ಕರ್ತವ್ಯದ ಹಿಂದೆ ತ್ಯಾಗವಿಹೆ. ತ್ಯಾಗವಿರಹಿತ ಕರ್ತವ್ಯವು ಕರ್ತವ್ಯನಾಗದೆ ಅದು ಸ್ವಾರ್ಥವನ್ನಿಸುತ್ತದೆ.

ದೇಶದ ಮುಂದಿನ ಪ್ರಜೆಗಳು ಸತ್ಪತೀಲ ಹಾಗೂ ತ್ಯಾಗಿಗಳಾಗಬೇಕು. ಆದಕ್ಕೆ ಬಾಲ್ಯದಿಂದಲೇ ಈ ತತ್ವದ ಶಿಕ್ಷಣವನ್ನು ತಾಯಿ ಮಾತ್ರ ಕೊಡಬಲ್ಲಳು. ನಮ್ಮ ಪುರಾಣಕಾಲದ ಮೈತ್ರೇಯಿ, ಗಾರ್ಗಿ, ಇತಿಹಾಸಕಾಲದ ದ್ರೌಪದಿ ಇತ್ಯಾದಿಗಿಂತ ಶಿವಾಜಿಯ ತಾಯಿ ಜೀಜಾ ಬಾಯಿ, ಕಿತ್ತೂರಿ ಚೆನ್ನಮ್ಮ, ಝಾನ್ಸಿ ಲಕ್ಷ್ಮಿ ಬಾಯಿ, ಮೊದಲಾದವರ ಆದರ್ಶ ನಮ್ಮ ಮುಂದಿದೆ. ಅವರ ತ್ಯಾಗ, ಸತ್ಯ, ನಾಯಬುದ್ಧಿ. ನೀತಿ ಪಾಲನೆಗಳಿಂದ ಸ್ಫೂರ್ತಿಯುಕ್ತರಾಗಿ, ನಾವು ಆದರ್ಶ ನಾರಿಯರಾಗಿ ತಾಯ್ತನದ ಹಿರಿಮೆಯನ್ನು ಪ್ರದರ್ಶಿಸಬೇಕು. ನಮ್ಮ ಭಾರತೀಯ ಸಂಸ್ಕೃತಿಯು ಅಕಲನ, ಅಭ್ಯಾಗ ಆದರಲ್ಲಿ ವಿಶ್ವಾಸ, ಶ್ರದ್ಧೆಯನ್ನು ಹೆಚ್ಚಿಸಬಲ್ಲವು. ಈ ಮಾರ್ಗದಲ್ಲೇ ನಮ್ಮ, ರಾಷ್ಟ್ರದ ಹಿತವಿದೆ. ಕುಟುಂಬದ ಸೇವೆ ಮಾಡುವುದೇ ನಮ್ಮ ಪವಿತ್ರ ಕರ್ತವ್ಯ. ಇದು ಯಾವ ದೃಷ್ಟಿಯಿಂದಲೂ ಹೀನವಾದ ಕೆಲಸವಲ್ಲ. ಪಾಶ್ಚಾತ್ಯರ ಅಂಧಾನುಕರಣೆಯೇ ನಮಗೆ ನಿಜವಾಗಿಯೂ ಲಾಂಛನಾಸ್ಪದವಾಗಿದೆ ಎಂದವರು ಸ್ತ್ರೀಯರ ನಿಜವಾದ ಕರ್ತವ್ಯ ಯಾವುದೆಂದುಪದೇಶಿಸಿದರು.

ಉಡುಪಿ

ಜಿಲ್ಲಾಸಮಿತಿ ವರದಿ ಕುರಿತು.—ದ. ಕ. ಜಿಲ್ಲಾ ಭೂಮಾಲಿಕ ಕೃಷಿಕ ಮತ್ತು ಭೂಹೀನ ಸಂಘಗಳು ತಮ್ಮ ವಿರೋಧವನ್ನು ಸೂಚಿಸಿ ಮೈಸೂರು ಎಸೆಂಬ್ಲಿ, ಕೌನ್ಸಿಲು ಮೆಂಬರರಿಗೆ ಮತ್ತು ಪ್ರಾದೇಶಿಕ ಕಾಂಗ್ರೆಸ್ ಕಮಿಟಿಗೆ ಕಳುಹಿಸಿದ ಮನವಿಯ ಪ್ರತಿ ನಮ್ಮಿಬೆಗೆ ಬಂದಿರುವುದು. ಈ ಬಾರಿ ಸ್ಥಳಾಭಾವದಿಂದಾಗಿ ಮುಂದಿನ ಸಂಚಿಕೆಯಲ್ಲಿ ಸಾರಾಂಶವನ್ನು ಕೊಡಲಾಗುವುದು. (ಸಂ.ನ)

ನಗರ ಸಭೆಯು—ತಾ. 28ರಂದು ರಗಂಟೆಗೆ ಪ್ರಾರಂಭವಾಗಿ ೬½ ಗಂಟೆ ತನಕ ಡಾ. ಪಿ. ಜೆ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ನಂತರ ಉಪಾಧ್ಯಕ್ಷ ಶ್ರೀ ಸಿ. ವಿ. ಆಚಾರ್ಯರು ಸಭೆಗೆ ಬಂದು ಅಧ್ಯಕ್ಷತೆ ವಹಿಸಿದರು. ಉಡುಪಿ ಕೋಆಪರೇಟಿವ್ ಬಿಲ್ಡಿಂಗ್ ಸೊಸ್ಯಾಟಿಗೆ ಅಭಿಪ್ರಾಯ ಕಟ್ಟಡ ಕಟ್ಟಿಸಲು ಬಡಗಬೆಟ್ಟು ಸಹಕಾರ ಸಾಂಘದ ಅಭಿಪ್ರಾಯ ಲಗ್ತಿಯಿರುವ ಸ್ಥಳವನ್ನು ಕೇಳುವ ವಿಚಾರದಲ್ಲಿ ತುಂಬಾ ಚರ್ಚೆ ನಡೆದು ಕೊನೆಗೆ ಕೆಲವೊಂದು ಜಾಗವನ್ನು ನಗರ ಸಭೆಗಾಗಿ ಇಟ್ಟುಕೊಂಡು ಬಾಕಿ ಉಳಿದುದರಲ್ಲಿ ಹತ್ತು ಸೆಂಟ್ಸು ಕೊಡಬಹುದೆಂದಾಯಿತು. ಸಂತೆಕಟ್ಟೆಯಲ್ಲಿ ಕುಡಿಯುವ ನೀರಿನ ನಳ್ಳಿಯನ್ನು ನಗರ ಸಭೆಗೆ ಶ್ರೀಮತಿ ಎ. ವಿ ಕಲ್ಯಾಣಮ್ಮ ನವರು ಧಾರ್ಮಿಕವಾಗಿ ದಾನಮಾಡಿದ್ದಲ್ಲದೆ ಆ ಬಗ್ಗೆ ನಿಮ್ಮಿತ್ತ ಸಂಬಂಧ ಪಡಕೊಳ್ಳುವ ವೆಚ್ಚವನ್ನು ಅವರೇ ಕೊಡಲು ತಯಾರಿರುವುದರಿಂದ, ಅವನ್ನು ಪಡಕೊಳ್ಳಲು ಕಮಿಶನರರಿಗೆ ಅಧಿಕಾರವೀಯಲಾಯಿತು.

ದೀಪಾವಳಿ ಸಮಾರಂಭ ಆಚರಣೆ

ಕಡಿಯಾಳಿ ಹಾ. ಎ ಶಾಲೆಯಲ್ಲಿ ದೀಪಾವಳಿಯ ಆಚರಣಾ ಸಮಾರಂಭವು ಕಳೆದ ತಾ. 24—10—57ರಂದು ನಗರ ಸಭಾಧ್ಯಕ್ಷರಾದ ಶ್ರೀ. ಕೆ. ಕೆ. ಪೈ, ವಿಕಾಂ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ಯಸ್. ಸದಾಶಿವರಾಯರು ಅಧ್ಯಕ್ಷರ ಪರಿಚಯಮಾಡುತ್ತಾ ಆವರು ಶಾಲೆಗೆ ಸಲ್ಲಿಸಿದ ಅಪಾರ ಸೇವೆಯನ್ನು ಪ್ರಶಂಸಿಸಿದರು. ಕುಮಾರಿ ಕೆ. ವಸಂತಿಯು ಕನ್ನಡ ಹಾಡನ್ನು ಸುಶ್ರಾವ್ಯವಾಗಿ ಹಾಡಿದಳು. ಮನರಂಜನೆಯ ಕಾರ್ಯಕ್ರಮದಲ್ಲಿ ಗೋಪಾಲಕೃಷ್ಣ ಶೆಟ್ಟಿ ಮತ್ತು ಪಾರ್ಟಿಯವರೂ, ಇನ್ನಿತರರು ಭಾಗವಹಿಸಿದರು. ಆ ಬಳಿಕ ಶಾಲಾ ಪಾರ್ಲಿಮೆಂಟ್ ಅಧಿವೇಶನವು ಜರಗಿತು. ಆ ನಂತರ ಆ ದಿನದ ಮಹತ್ವಕೆಯ ಕುರಿತು ವಿದ್ಯಾರ್ಥಿಗಳಲ್ಲಿ ಹಲವರು ಭಾಷಣ ವಿತ್ತರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಂದಿನ ಕಾರ್ಯಕ್ರಮಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ದೀಪಾವಳಿಯು ಒಂದು ರಾಷ್ಟ್ರೀಯ ಹಬ್ಬ. ಇಂತಹ ದೀಪಾವಳಿಯಿಂದ ನಾವು ಸ್ಫೂರ್ತಿ, ಶಕ್ತಿ, ಜೈತನ್ಯ ಪಡೆದು ರಾಷ್ಟ್ರಶಕ್ತಿಯಲ್ಲಿಕ್ಯರಾಗಬೇಕು. ವಿದ್ಯಾರ್ಥಿಗಳಲ್ಲಿ ಇತರರ ಕಷ್ಟವನ್ನು ಕಂಡು ನಗುವ ಗುಣ ಇರಬಾರದು. ಸಂತೋಷಪಡುವ ಹಂಚಿ ಸಮಯವನ್ನು ಆ ವಿಶಾಲ ದೃಷ್ಟಿಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು. ಕಾರ್ಯಕ್ರಮದ ಅಂತ್ಯದಲ್ಲಿ ಶಾಲಾ ಆಧ್ಯಾಪಕರಿಂದ "ಸಾಧನ್ಸ ಕಾಳಗ" ಎಂಬ ಯಕ್ಷಗಾನ ಕಾಲಕ್ಷೇಪವು ಜರಗಿತು

ನೋಟೀಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ

ಕುಂದಾಪುರ ತಾಲೂಕು ಕೋಟೇಶ್ವರ ಪೇಟೆಯಲ್ಲಿ ಎಚ್. ರಾಮಕೃಷ್ಣಯ್ಯ ಮತ್ತು ಕಂಪನಿ ಎಂಬ ನಡೆಸಿಕೊಂಡು ಬರುತ್ತಿದ್ದ ಜವುಳಿ ಅಂಗಡಿ ನಮ್ಮ ಕುಟುಂಬದಲ್ಲಿ ತಾರೀಕು 27—5—57ರಲ್ಲಿ ರಚಿಸಿದ್ದ ನಿಕಿ ಆದ ಪಾಲು ಪಟ್ಟು ಮೇರೆಗೆ ಎಚ್. ನಾಗರಾಜ ರಾಯನ ಪಾಲಿಗೆ ಬಿದ್ದಿದ್ದರಿಂದ ಅದರ ಎಲ್ಲಾ ಲಾಭ ನಷ್ಟಕ್ಕೆ ಅವನೇ ಜವಾಬ್ದಾರಿಯಾಗಿರುತ್ತಾನೆ. ನಮಗೂ ಸದ್ರಿ ಅಂಗಡಿ ವ್ಯವಸಾಯಕ್ಕೂ ಏನೂ ಸಂಬಂಧ ಇರುವುದಿಲ್ಲ.

H. Shrinivas Rao.
H. Ganapath Rao.
H. Puttaya.

ತಾರೀಕು 28—10—1957
ಕೋಟೇಶ್ವರ.

ಕ್ಷಯರೋಗವನ್ನು ತಡೆಯಲು ಮೂರು ವಿಷಯಗಳು ಅತ್ಯಾವಶ್ಯಕವಿವೆ:

1. **ಕ್ಷಯರೋಗ ; ಸೋಂಕಣೆ ಸಂಶಯ ಉಂಟಾದಲ್ಲಿ ಸಮರ್ಥ ವೈದ್ಯಕೀಯ ಪರೀಕ್ಷೆ ನಡೆಸುವುದು.**
2. **ವೈದ್ಯಕೀಯ ಪರೀಕ್ಷೆಗೊಳಪಟ್ಟವುಗಳಿಗೆ ಯೋಗ್ಯ ಚಿಕಿತ್ಸೆ ನಡೆಸುವುದು.**
3. **ಗುಂಪು ಹಾಗೂ ಕೂಟದಲ್ಲಿ ಕಲೆತಿರುವವರ ಪೈಕಿ ಕ್ಷಯರೋಗ ಚಿನ್ಹೆಯಿದ್ದವರನ್ನು ಅದಷ್ಟು ಜಾಗ್ರತೆಯಿಂದ ಪತ್ತೆಹಚ್ಚುವುದು.**

ಮೇಲಿನ ವಿಷಯಗಳನ್ನು ಟಿ ಬಿ. ಕ್ಲಿನಿಕ್ಸ್‌ಗಳು ಕೈಕೊಳ್ಳುವುವು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕ್ಷಯಕಿರಣ ವ್ಯವಸ್ಥೆಗಳುಳ್ಳ ಕ್ಲಿನಿಕ್ಸ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆರೆಯುವ ಬಗ್ಗೆ ಪ್ರಾಧಾನ್ಯತೆ ಕೊಡಲಾಗಿದೆ. ಸರಕಾರದ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಹಣ ಬೇಕಾಗಿದೆ.

ಟಿ ಬಿ ಮೊಹರುಗಳ ಮಾರಾಟದಿಂದ ಹುಟ್ಟಿಬರುವ ಹಣವು ಸರಕಾರದ ಯೋಜನೆಗೆ ಸಹಾಯಮಾಡುವುದು. ಜನರು ಟಿ. ಬಿ. ಮೊಹರುಗಳನ್ನು ಕೊಂಡುಕೊಂಡು ಸ್ಟೇಟ್ ಟಿ. ಬಿ. ಸಂಘಗಳ ಕಾರ್ಯವಿಸ್ತರಣೆ ಬಗ್ಗೆ ನೆರವಾಗಬೇಕು.

ಮೊಹರುಗಳು ದೊರೆಯುವ ಸ್ಥಳಗಳು:

ಗೌರವ ಕಾರ್ಯದರ್ಶಿ, ಟಿ. ಬಿ. ಮೊಹರು ಮಾರಾಟ ಕಮಿಟಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ, ಮಂಗಳೂರು.

ಜಿಲ್ಲಾ ಮೆಡಿಕಲ್ ಆಫೀಸರ್,
ಮಡಿಕೇರಿ, ಕೊಡಗು.

ಗೌರವ ಕಾರ್ಯದರ್ಶಿ, ಕ್ಷಯರೋಗ ಸಂಘ, ಮೈಸೂರು, ಲೇಡಿ ವಿಲ್ಲಿಂಗ್‌ಟನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ರಾಜ್ಯದ ಇತರ ಏಜನ್ಸಿಗಳು.

ಹಿಂದೂಸ್ಥಾನದಲ್ಲಿ ಎಂಟನೆ ಟಿ. ಬಿ. ಮೊಹರು ಮಾರಾಟ ಚಳವಳಿ

ಸ್ಥಳ ದಾನಮಾಡಿದವರು:

ನೇಶನಲ್ ಕಾರ್ಬನ್ ಕಂಪೆನಿ (ಇಂಡಿಯಾ) ಲಿಮಿಟೆಡ್,
ಕಲ್ಕತ್ತ.

ಮತ್ಸ್ಯಪರಿಪಾಲನೆಯ ಉದ್ದಿನು

(ಜನೇ ಪುಟದಿಂದ)

ಗಳಿಗೇರಿದೆ. ಬೇರೆ ಸಮುದ್ರವರ್ತೀ ರಾಜ್ಯಗಳಲ್ಲಿ ಸಹ ಈಗ ಸಣ್ಣ ದೋಣಿಗಳಿಗೆ ವಿಶೇಷಜ್ಞರ ನೆರವಿನಿಂದ ತಕ್ಕ ಮಾದರಿಯನ್ನು ತಯಾರಿಸಲಾಗುತ್ತಿದೆ.

ಕೇವಲ ಹೆಚ್ಚು ಮೀನು ಹಿಡಿದರಷ್ಟೆ ಈ ವ್ಯವಸಾಯದ ಸಮಸ್ಯೆಗಳು ಸರಿ ಹಾರವಾದುವೆಂದು ತಿಳಿದರೆ, ಅದು ಶುದ್ಧ ತಪ್ಪು. ಮೀನು ಶ್ವರಿತಗತಿಯಲ್ಲಿ ಕೊಳೆತುಹೋಗುವ ವಸ್ತು. ಇವನ್ನು ಒಂದು ಸ್ಥಳದಿಂದಿನ್ನೊಂದಕ್ಕೆ ಒಯ್ಯುವಾಗಲೇ ಬಹುಸಮಯ ವ್ಯಯವಾಗುತ್ತದೆ. ಈ ವಿಷಯವನ್ನು ಗಮನಿಸಿ ಬೇರೆ ಬೇರೆ ರಾಜ್ಯ ಸರಕಾರಗಳು ಮೀನಿನ ಸಾಗಾಟಕ್ಕೆ ತಕ್ಕ ವ್ಯವಸ್ಥೆಗಳನ್ನು ಸುಧಾರಿಸುವತ್ತ ಧ್ಯಾನ ವಿತ್ತಿವೆ. ಬೊಂಬಾಯಿಯಲ್ಲಿ ಇದಕ್ಕಾಗಿ ೪೦ ಲಾರಿಗಳೂ ೬೦ ಜುಗ ಹಡಗುಗಳೂ ಮೀಸಲಾಗಿವೆ. ಮೀನುಗಳನ್ನು ಸುರಕ್ಷಿತವಾಗಿಡಲು ಭಾರತ ಸರಕಾರವು ಬೊಂಬಯಿಯ ಒಂದು ಮಂಜುಗಡ್ಡೆ ತಯಾರಿಸುವ ಕಾರ್ಖಾನೆಯನ್ನೂ ತೆರೆದಿದೆ. ಮದ್ರಾಸ್ ಸರಕಾರವೂ ಇಂತಹ ಎರಡು ಕಾರಖಾನೆಗಳನ್ನು ಕೊಯಿಕೋಡ್ ಮತ್ತು ಪಂಂಗಳೂರುಗಳಲ್ಲಿ ತೆರೆಯುವುದೆಂದಿತ್ತು. ಆದರೆ, ರಾಜ್ಯಪುನರ್ವಿಂಗಡಣೆಯಿಂದಾಗಿ ಆ ಕಾರ್ಯಕ್ರಮವು ತತ್ಕಾಲಕ್ಕೆ ಸ್ಥಗಿತಗೊಳಿಸಲ್ಪಟ್ಟಿದೆ ಭಾರತಸರ್ಕಾರ್ರೆ ಕಾರ್ಯಕ್ರಮಾಂತರ್ಗತ ಕೇರಳದಲ್ಲಿ ಇಂತಹ ಕಾರಖಾನೆಗಳು ಸ್ಥಾಪಿತವಾಗಲಿವೆ ಭಾರತ ಅನೇರಿಕಾ ತಾಂತ್ರಿಕ ಸಹಕಾರ ಕಾರ್ಯಕ್ರಮಗಳಲ್ಲಿ ಅಂತರ್ಗತವಾದ ಮಂಜುಗೆಡ್ಡೆಯ ಮತ್ತು ಬೆಚ್ಚಗಿಡುವ ಸಲುವಾಗಿರುವ ಸಣ್ಣ ಸಣ್ಣ ಯಂತ್ರಗಳು ದೊರೆತಿವೆ. ಪುತ್ರವನ್ನು ಮೀನು ಹಿಡಿಯುವ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಇಡಲಾಗುತ್ತಾ ಇದೆ. ಇವು. ಗಳಲ್ಲಿ ಕೆಲವುಗಳ ಸಂಚಾಲನೆಯನ್ನು ಸಹಕಾರೀ ಸದ್ಧತಿಯಿಂದಲೇ ಮಾಡಲಾಗುವುದು.

ಮತ್ಸ್ಯ ವ್ಯವಸಾಯದ ಸಫಲತೆಯು ಬಹಳ ಸ್ವಲ್ಪ ಅನುಸಂಧಾನ ಅಥವಾ ಶೋಧನೆಯಲ್ಲಿ ನಿರ್ಭರವಾಗಿದೆ. ಈ ಮಾತಿನತ್ತ ದ್ವಿತೀಯ ಯೋಜನೆಯು ತೀವ್ರ ಗಮನ ಕುರಿದಿದೆ. ಕೇಂದ್ರೀಯ ಸಮುದ್ರೀಯ ಮತ್ಸ್ಯಸಂಬಂಧಿ ಅನ ಸಂಧಾನ ಕೇಂದ್ರಗಳ ಬೊಂಬಾಯಿ, ಕಲ್ಲಿಕೋಟೆ ಕೊಚ್ಚಿ ಮದ್ರಾಸಿನ ಉಪಕೇಂದ್ರಗಳು ಈ ವಿಷಯ ಸಂಬಂಧಿತ ಸಮಸ್ಯೆಗಳನ್ನು ದೂರ ಮಾಡುವ ಕಾರ್ಯವನ್ನು ಪರಿಶೀಲಿಸುತ್ತಿವೆ. ಈ ರೀತಿಯಲ್ಲಿ ಸಿಹಿ ನೀರಿನ ಜಲಾಶಯಗಳಲ್ಲಿ ಸಾಕಲಾಗುವ ಮೀನುಗಳ ಸಂಬಂಧದಲ್ಲಿ ಆಪ್ತಹಾಬಾದ್, ಚಟಿಕ್ ಮತ್ತು ಕಲಕತ್ತೆಗಳಲ್ಲಿ ಅನುಸಂಧಾನದ ಕೆಲಸವು ಸಾಗುತ್ತಾ ಇದೆ. ಈ ಕೇಂದ್ರಗಳಲ್ಲಿ ಮೀನು ವಿಭಾಗದ ಕರ್ಮಚಾರಿಗಳು ಹಾಗೂ ಸಾಮುದಾಯಿಕ ಯೋಜನಾಕ್ಷೇತ್ರಗಳಲ್ಲಿನ ಕಾರ್ಯಕರ್ತರಿಗೆ ತರಬೇತಿಯಿಯುವ ವ್ಯವಸ್ಥೆಯು ಮಾಡಲ್ಪಟ್ಟಿದೆ. ಅಸ್ಸಾಮು, ಬಿಹಾರ್, ಮದ್ರಾಸ ಮತ್ತು ಒಡಿಸಾಗಳಲ್ಲಿ ಆಪ್ತಕಾಲೀನ ತರಬೇತಿ ಕೇಂದ್ರಗಳನ್ನು ವ್ಯಾಪಕಗಿಸಲಾಗಿದೆ. ಕೊಚ್ಚಿಯಲ್ಲಿಯೂ ೬೦ ಜನರು ನಾವಿಕರ್ಟ್ಟುಸ ಕಾರ್ಯದಲ್ಲಿ ತರಬೇತಿಯಿಯುವ ಒಂದು ಕೇಂದ್ರವನ್ನು ಸಂಸ್ಥಾಪಿಸಲಾಗಿದೆ. ಈ ತರಬೇತಿಯು ಕರಾವಳಿಸಹಿತವಾದ ರಾಜ್ಯಸರಕಾರಗಳ ದ್ವಾರಾನಾಮ ನಿರ್ದೇಶಿತರಾದ ವ್ಯಕ್ತಿಗಳಿಗೆ ಮಾತ್ರ ಕೊಡಲಾಗುತ್ತಿದೆ. ಪ್ರತ್ಯೇಕ ರಾಜ್ಯವು ಕೇವಲ ಎರಡು ಜನರ ನಾಮವನ್ನು ನಿರ್ದೇಶಿಸಬಹುದು. ದಕ್ಷಿಣ ಮತ್ತು ಆಗ್ನೇಯ ಆಸ್ಯಾದಲ್ಲಿಯೇ ಇಂತಹ ಕೇಂದ್ರಗಳಲ್ಲಿ ಕೊಚ್ಚಿಯ ಕೇಂದ್ರವೇ ಮೊತ್ತಮೊದಲನೆಯದಾಗಿದೆ. ಪ್ರಥಮ ಯೋಜನಾವತ್ಯದಲ್ಲಿ ಒಟ್ಟು ೧೧೭ ಉತ್ಸಾಹಿಗಳು ಇಲ್ಲಿ ತರಬೇತಿಯನ್ನು ಪಡೆದು ಮುಗಿಸಿರುವರು. ಇದೇ ರೀತಿಯಲ್ಲಿ ಭಾರತದಲ್ಲಿ ಮತ್ಸ್ಯ ವ್ಯವಸಾಯವು ಅಭಿವೃದ್ಧಿಗೇಳ್ಬುಕ್ಕೆ ಬಂದಲ್ಲಿ, ಇನ್ನು ಕತ್ತು ವರ್ಷಗಳ ಅವಧಿಯಲ್ಲಿ ವತ್ಸ್ಯ ಖಾಲಸಿಯು ಆತ್ಮತ್ವಮೆಗೊಂಡು, ಉತ್ಪಾದನೆಯಲ್ಲಿ ಸೇಕಡಾ ಏನತ್ತರಷ್ಟು ಹೆಚ್ಚಳವನ್ನು ಸಾಧಿಸುವುದು ಕಷ್ಟದ ಸಂಗತಿಯೇನಲ್ಲ. ಆದರೆ, ಈ ಕಡೆಗೆ ಕೇವಲ ಸರಕಾರದ ದೃಷ್ಟಿಯಲ್ಲದೆ, ಮತ್ಸ್ಯ ವ್ಯವಸಾಯಿಗಳು ಸಹ ತೀವ್ರಾಸಕ್ತಿಯನ್ನು ಹರಿಸಬೇಕಾದುದು ಅಗತ್ಯವಾಗಿದೆ.

ಉಡುಪಿ

ಕರ್ಮಚಾರಿಯಲ್ಲಿ ಟೇಕ್ಸ್ ಆಫೀಸರರ ಪ್ರಕಟಣೆ—ಉಡುಪಿಯ ಪ್ರಿನ್ಸಿಪಾಲ್ ಅಸಿಸ್ಟಾಂಟ್ ಕಮಿಶರಿಯಲ್ ಟೇಕ್ಸ್ ಆಫೀಸರ್ ಶ್ರೀ ಎಮ್ ಅಬ್ದುಲ್ ರಹಿಮಾನ್ ಸಾಹೇಬರು ಪ್ರಕಟಣೆಯೊಂದನ್ನು ಹೊರಡಿಸಿ ತಾಲೂಕಿನ ವ್ಯಾಪಾರಿಗಳು ಹಾಗೂ ಮೈಸೂರು ಸೇಲ್ಸ್ ಟೇಕ್ಸ್ ಕಾನೂನಿಗೆ ಸಂಬಂಧಿಸಿದ ಇತರರು ರಿಜಿಸ್ಟ್ರೇಶನ್ ಮಾಡಿಕೊಳ್ಳುವ ಮತ್ತು ಟರ್ನ ಒವರ್ ರಿಟರ್ನುಗಳನ್ನು ಸೇಲ್ಸ್‌ಟೇಕ್ಸ್ ಕಾಯಿದೆಯ ೭ ಮತ್ತು ೧೩ನೆ ಸೆಕ್ಷನುಗಳಂತೆ ನಿಶ್ಚಿತ ಕಾಲದಲ್ಲಿ ಹಾಜರುಪಡಿಸುವ ಅವಶ್ಯಕತೆಯನ್ನು ವ್ಯಕ್ತಪಡಿಸಿರುವರು. ಸಂಬಂಧಪಟ್ಟವರೆಲ್ಲರೂ ಕಮಿಶರಿಯಲ್ ಟೇಕ್ಸ್ ಆಫೀಸಿಗೆ ಹೋಗಿ ಫಾರ್ಮುಗಳನ್ನೂ ಹೆಚ್ಚಿನ ಮಾಹಿತಿಯನ್ನೂ ಪಡೆಕೊಳ್ಳಬಹುದು.

ಗೇರುಬೀಜ ಬೆಳೆ—ದ. ಕ. ಜಿಲ್ಲೆಯಲ್ಲಿ ಗೇರುಬೀಜ ಬೆಳೆಯನ್ನು ವೃದ್ಧಿಸಲು ತುಂಬಾ ಸೌಕರ್ಯಗಳಿರುವುದರಿಂದ, ಆ ಬೆಳೆಗಾಗಿ ಸರಕಾರಿ ಜಾಗಗಳು ಕೆಲವೊಂದು ಶರ್ತಗಳಿಗೊಳಪಟ್ಟು ಕೊಡಲಾಗುವುದು. ಸಾನಿಧ್ಯ ಅನುಭವವನ್ನು ತಾಲೂಕಿನ ತಹಶಿಲ್ದಾರ್ ಅಥವಾ ಸಬ್ ಕಲೆಕ್ಟರರ ಕಚೇರಿಯಿಂದ ಪಡೆಕೊಳ್ಳಬಹುದಾಗಿದೆ.

ವಿಶ್ವಸಂಸ್ಥೆ ದಿನಾಚರಣೆ—ಕಳೆದ ತಾ. 24ರಂದು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ವಿಶ್ವಸಂಸ್ಥೆ ದಿನಾಚರಣೆಯು ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಬಿ. ಎಸ್. ಆಚಾರ್, ಎ. ಜೆ. ಅಲ್ಮೆಯರು ಕಾಲೋಚಿತ ಮಾತುಗಳನ್ನಾಡಿದರು.

ಭಾವಚಿತ್ರ ಅನಾವರಣ—ದಿ ಕೆನರಾ ಬೇಂಕಿಂಗ್ ಕೋಪರೇಶನ್ ಗೋಲ್ಡನ್ ಜುಬಿಲಿ ಎತಿಮೆಂಟರಿ ಶಾಲೆಯಲ್ಲಿ ಕಳೆದ ತಾ 21ರಂದು ಡಾ। ಎಸ್. ಆರ್ ಪೈಗಳ ಜೀವ ಚಿತ್ರವನ್ನು ಮಂಗಳೂರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅನಾವರಣಗೊಳಿಸಿದರು. ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಸಭಾಧ್ಯಕ್ಷತೆವಹಿಸಿದ್ದರು. ಹೆಡ್ ಆಫೀಸ್ ಶ್ರೀ ಕೆ. ಕೇಶವಕಾಮತರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಎಚ್ ಸುಂದರರಾಮ್, ಕೆ. ಕೆ. ಕುಡ್ವ, ಯು ಶ್ರೀನಿವಾಸ್ ಪೊದಲರವರು ಕಾರ್ಯೋಚಿತ ಮಾತುಗಳನ್ನಾಡಿದರು. ಪಂದನಾಪಡೆಯಾಗಿ ಸಮಾರಂಭ ಮುಕ್ತಾಯವಾಯಿತು. ಬ್ಯಾಂಕ್ ಇನ್ಸೂರೆನ್ಸ್ ಕೋಪರೇಶನಿನ ಉಡುಪಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರು ಶಾಲಾ ಕಟ್ಟಡಕ್ಕೆ ವಿಶ್ಯದ್ದೀಪಗಳನ್ನು ಹಾಕಿಸಲು ರೂಪಾಯಿ ೬೦೦ನ್ನು ಕೊಡಲೊಪ್ಪಿರುವರು.

ಕರಾವಳಿಯ ಸಂಕಷ್ಟಗಳು—ದ. ಕ. ಜಿಲ್ಲೆಯ ಕರಾವಳಿಯಲ್ಲಿ ನೇತ್ರಾವತಿ, ಕಲ್ಯಾಣಪುರ, ಮಾಬುಕಳ, ಗಂಗೊಳ್ಳಿ ಮತ್ತು ಉಪ್ಪುಂದ ಹೊಳೆಗಳಿಗೆ ಸಂಕವಾಗಬೇಕಾಗಿದೆ. ಈ ವಿಷಯಕ್ಕೆ ಕಲ್ಯಾಣಪುರ, ಮಾಬುಕಳ, ಉಪ್ಪುಂದ ಹೊಳೆಗಳ ಸಂಕಗಳಿಗೆ ಕೇಂದ್ರದಿಂದ ಒಪ್ಪಿಗೆ ದೊರೆತಿದ್ದು ಜೀಗನೆ ಕೆಲಸಗಳಿಗೆರುವುದು ತಪ್ಪಲಿಬಂಧ ಹ್ಯಾಪೇ ಇಲಾಖೆಯ ಕಚೇರಿಯೊಂದು ಉಡುಪಿಯಲ್ಲಿ ತೆರೆಯಲಾಗಿದೆ.

ನಿಧನ—ಉಡುಪಿಯ ಪ್ರಸಿದ್ಧ ಬಟ್ಟೆವ್ಯಾಪಾರಿಗಳಾದ ಶ್ರೀ ನಾನಾಲಾಲ್ ಗೋವಿಂದಜಿ ಸಾಂಡ್ಯಾರವರು ಕಳೆದ ತಾ. 21ರಂದು ತಮ್ಮ 72ನೆ ವಯಸ್ಸಿನಲ್ಲಿ ನಿಧನಹೊಂದಿದರು. ದಿವಂಗತರು ಜನಪ್ರಿಯರಿದ್ದರು.

ಜಾನುವಾರು ಪ್ರದರ್ಶನ—ಗೋ ಸಂವರ್ಧನ ಸಪ್ತಾಹದ ನಿಮಿತ್ತ ಕಳೆದ ತಾ ೨೫ರಂದು ಸಂಜೆ ರಥಬೀದಿಯಲ್ಲಿ ಜಾನುವಾರುಪ್ರದರ್ಶನ ಜರುಗಿತು. ನಂತರ ಸಾರ್ವಜನಿಕ ಸಭೆಯು ಪರ್ಯಾಯ ಅಧಮ್ಮಾರು ಮಾನ್ಯ ಶ್ರೀ ವಿಬುಧೇಶ ತೀರ್ಥಪಾದಂಗಳವರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾ ವೆಟರ್ನರಿಸರ್ಜನ್ ಡಾ. ಪಿ. ಎಸ್. ಎ. ಭಟ್ಟರು ಸ್ವಾಗತಭಾಷಣಮಾಡಿದರು. ಉಡುಪಿಯಲ್ಲಿ ಗೋ ಆಸ್ಪತ್ರೆ ಮತ್ತು ಕೃತಕ ಗರ್ಭಧಾರಣ ಕೇಂದ್ರ ತೆರೆಯುವಿಕೆಯ ಸಿದ್ಧತೆಗಳೆಲ್ಲಾ ಆಗಿದ್ದು ಅವು ಪಾರಂಭವಾಗುವುದನ್ನು ಜನರು ಅವುಗಳ ಉಪಯೋಗ ಪಡೆಯಬೇಕೆಂದರು. ನಗರಸಭಾಪತಿ ಶ್ರೀ ಕೆ ಕೆ. ಪೈಗಳು ಉತ್ತಮ ಜಾನುವಾರುಗಳಿಗೆ ಬಹುಮಾನವಿತರಣೆ ಮಾಡಿದರು. ಅಧ್ಯಕ್ಷ ಸ್ವಾಪಿಗಳವರು ಗೋಪೂಜೆಯ ರೀತಿನೀತಿಗಳನ್ನು ವಿವರಿಸಿ ಉಪಸಂಹಾರ ಮಾಡಿದರು. ಎಗ್ರಿಕಲ್ಚರಲ್ ಡೆವೋನ್‌ಸ್ಟ್ರೇಟರ್ ಶ್ರೀ ವೆಂಕಟ್ರಾಯ ಪೈಗಳು ಧನ್ಯವಾದಗಳನ್ನರ್ಪಿಸಿದರು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. No. 63/1957.

ಪೂವಪ್ಪ, ಪಪ್ಪಾಲು ಹೆಂಗ್ಸು ಮಗಳು ಪತ್ಮಾಂಜಣ್ಣ ಗೌಡರ ಹೆಂತ್ರಿ. ಪುತ್ತೂರು ತಾಲೂಕು ಕೊಡಿಯಾಲ ಗ್ರಾಮದಲ್ಲಿ } ಅರ್ಜಿದಾರಳು

ಮತ್ತು

1 ಚಿನ್ನಪ್ಪ, 2 ದಾಸಪ್ಪ ಗಂಗಮ್ಮನ ಮಕ್ಕಳು. ಪುತ್ತೂರು ತಾಲೂಕು ಪಜಿರಡ್ಕದ ಗ್ರಾಮದ ಜೆಮ್ಮೂರು ಎಂಬಲ್ಲಿ, ಬಗ್ಗೆ ಕೋರ್ಟು ಗಾರ್ಡಿಯನ್ ಶ್ರೀ. K ಗೋವಿಂದ ಭಟ್, ಎಡ್ವೋಕೇಟ್ ಮಂಗಳೂರು— } ಎದ್ರಿದಾರರು

ಸದ್ರಿ ಎದ್ರಿದಾರಿಗೆ ಮತ್ತು ಇತರಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ...

ಅರ್ಜಿದಾರಳ ತಾಯಿ ಮತ್ತು ಎದ್ರಿದಾರ ಅಜ್ಜಿ ಪ್ರಕೃತ ಮೃತಪಟ್ಟಿರುವ ಪಪ್ಪಾಲು ಹೆಂಗ್ಸು ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟು O. P. 132/1945ನೇ ಅರ್ಜಿಯಲ್ಲಿ ಸೆಕ್ಯೂರಿಟಿಯಾಗಿ ಡಿಪೊಸಿಟ್ ಮಾಡಿದ ರೂ. 600.0.0 ಮತ್ತು ಅದ್ರ ಮೇಲಣ ಬಡ್ಡಿ ಕೂಡಾ ಅಂದಾಜು ರೂಪ್ಯಾ 850—0—0ನ್ನು ಅರ್ಜಿದಾರಳೇ ಕೋರ್ಟಿನಿಂದ ಪಡಕೊಳ್ಳಲು ಅರ್ಹಳೆಂತಲೂ, ಅದನ್ನು ಪಡಕೊಳ್ಳಲು ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತಲೂ ಮೇಲಿನ ಅರ್ಜಿನೂಡಿರುತ್ತಾಳೆ. ಆ ರೀತಿ ಆಕೆಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದರೂ ಏನಾದರೂ ಆಕ್ಷೇಪಣೆಯಿದ್ದರೆ ಸದ್ರಿ ಅರ್ಜಿಯು ತನ್ನ ವ್ಯಾದೆಯಾದ ತಾ. 13—11—1957ನೇ ಬೆಳಿಗ್ಗೆ 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಉದಾಹರಿಸಿಕೊಳ್ಳತಕ್ಕದ್ದೆಂತ ಸದ್ರಿ ಕೋರ್ಟು ಹುಕುಂಪ್ರಕಾರ ಈ ಮೂಲಕ ತಿಳಿಸಿರುತ್ತಾಗಿರುತ್ತದೆ.

(Sd) K. T. Bhat.
Advocate for Petitioner.

ಪುತ್ತೂರು, ತಾ. 29—10—1957.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 68/57.

1 ಅಬ್ದುಲ್ ಕುಂಞ
2 B. ಬ್ಯಾರಿ
3 ಅಬ್ದುಲ್ ರಹಿಮಾನ್
4 ಅಬ್ದುಲ್ ರಜಾಕ್
A. ಮಹಮ್ಮದ್ ಕುಂಞಿಯ ಮಕ್ಕಳು.
5 ಆಸಾಬಿ ಮಹಮ್ಮದ್ ಕುಂಞಿಯವರ ನಿಜವೆ— ಎಲ್ಲರೂ ಪುತ್ತೂರು ಕೈಬಾವಜೀ. —ಅರ್ಜಿದಾರರು

ಸದ್ರಿ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ;

ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯನ್ನು ತಾ. 30—11—57ಕ್ಕೆ ನೋಟಿಸಿನ ಬಗ್ಗೆ ಇಟ್ಟಿದೆ. ಆಕ್ಷೇಪಣೆಯುಳ್ಳವರು ಸದ್ರಿ ವ್ಯಾದೆ ದಿವಸ ಬಂದು ಉದಾಪರಿಸುಕ್ಕದ್ದು.

(By order of the court)

(Sd) M. Radhakrishna Rao
Advocate for Petitioner

ಪುತ್ತೂರು, ತಾ 31—10—57.

ಪ್ರಕಟಣೆ

"ಅಖಿಲ ಭಾರತ ಗುಡಿಕೈಗಾರಿಕಾ ಪ್ರತೀಯ ಸಪ್ತಾಹ"ವ ಅಂಗವಾಗಿ ಕೈಗಾರಿಕಾ ವಸ್ತು ಪ್ರದರ್ಶನವನ್ನು ಉಡುಪಿಯ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ಆವರಣದಲ್ಲಿ ತಾರೀಕು 8.11.1957ನೇ ಶುಕ್ರವಾರ ಜರಗಿಸಲಾಗುವುದು. ಪ್ರದರ್ಶನದಲ್ಲಿ ಭಾಗವಹಿಸುವವರು ಅಂದು ಪೂರ್ವಾಹ್ನ ಘಂಟೆ 10ರಿಂದ ಅಪರಾಹ್ನ ಘಂಟೆ 5ರ ಒಳಗೆ ತಮ್ಮ ವಸ್ತುಗಳನ್ನು ಪ್ರದರ್ಶಿಸಬೇಕಾಗಿ ವಿನಂತಿ ಸಾಯಂಕಾಲ ಘಂಟೆ 6—30ಕ್ಕೆ ಸರಿಯಾಗಿ ಜರಗಿಲಿರುವ ಸಾರ್ವಜನಿಕ ಸಮ್ಮೇಳನದಲ್ಲಿ ಉತ್ತಮವಾದ ಕೈಗಾರಿಕಾ ವಸ್ತುಗಳಿಗೆ ಬಹುಮಾನಗಳನ್ನು ಕೊಡಲಾಗುವುದು. ಸಾರ್ವಜನಿಕರು ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರದರ್ಶನವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ

ಕೆ. ಮಹಮ್ಮದ್ ಬ್ಯಾರಿ,
ತಹಶೀಲ್ದಾರ್ ಮತ್ತು ಕನ್ವೀನರ್ ಗುಡಿಕೈಗಾರಿಕಾ ಸಪ್ತಾಹ ಉಪಸಮಿತಿ, ಉಡುಪಿ.

ಉಡುಪಿ ತಾ. 28—10—57.

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿರುವ; ಮೊದಲಿನ ಹೊಸ ಮಿತೀಕರಿಸಲ್ಪಟ್ಟಿದೆ)

ಹೆಡ್ ಆಫೀಸು: **ಮಂಗಳೂರು, ದ. ಭಾರತ.**

ಕೆಳಗಿನ ದರಗಳ ಬಡ್ಡಿಯಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು:

1೦ರಿಂದ 6 ತಿಂಗಳುಗಳ ವ್ಯಾದೆಗೆ ... 4½%

6ರಿಂದ 18 ತಿಂಗಳುಗಳ ವ್ಯಾದೆಗೆ ... 4¾%

2 ತಿಂಗಳುಗಳ ವ್ಯಾದೆಗೆ ... 4½%

ದೊಡ್ಡ ಪ್ರಮಾಣದ ರೇವಣಾತಿಗಳಿಗೆ ಸ್ಪೆಶಲ್ ದರದ ಬಡ್ಡಿ ಕೊಡಲಾಗುವುದು.
ಹೆಚ್ಚಿನ ಮಾಹಿತಿಗೆ ಸಮೀಪದ ಯಾವುದಾದರೊಂದು ನಮ್ಮ ಶಾಖೆಯೊಡನೆ ವಿಚಾರಿಸಿರಿ.

THE KARNATAKA BANK LIMITED

ಕ್ಷಯರೋಗ ನಿರೋಧಕ್ಕೆ ನಿಮ್ಮ ಸಹಾಯವೇನು?

ಕ್ಷಯರೋಧ ಮುದ್ರೆಗಳನ್ನು ಕೊಳ್ಳಿರಿ

ಭಾರತದ ಕ್ಷಯರೋಗ ನಿರೋಧ ಸಂಸ್ಥೆಯು ಪೊಹರು ಮಾರಾಟದ ಜಳುವಳಿಯನ್ನು ಕಳದ ಏಳು ವರ್ಷಗಳಿಂದಲೂ ಕೈಗೊಳ್ಳುತ್ತ ಬರುತ್ತಿದೆ. ಈ ವರ್ಷಗಳಲ್ಲೆಲ್ಲ ಗಾಂಧಿ ಜಯಂತಿಯ ಸಂದರ್ಭದಲ್ಲಿ ಈ ಜಳುವಳಿಯನ್ನು ಬೆಂಬಲಿಸಿರಿ ಎಂದು ನಿಮ್ಮೊಡನೆ ಕೇಳುತ್ತಿದ್ದೆ. ಅದಕ್ಕೆ ಸರಿಯಾಗಿ, ನಮ್ಮ ದೇಶವು ಉದಾರ ರೀತಿಯಿಂದ ನನ್ನ ಕೇಳಿಕೆಗೆ ನನ್ನ ನಿರೀಕ್ಷೆಯನ್ನು ಪಡೆಯುವಂತೆ ಸಹಕರಿಸುತ್ತಿದೆ ಎಂದು ಹೇಳಲು ಸಂತೋಷ ಪಡುತ್ತೇನೆ. ಈ ಜಳುವಳಿಯು ಪ್ರತಿವರ್ಷವೂ ಬಾಪೂರವರ ಜನ್ಮದಿನದಂದು ವ್ಯಾರಂಭವಾಗಿ ನನ್ನ ಪ್ರಜಾರಾಜ್ಯ ದಿನದಂದು ಕೊನೆಗೊಳ್ಳುವುದು. ಇದೀಗ ಎಂಟನೆ ಜಳುವಳಿಯು ಈ ಸಂದರ್ಭದಲ್ಲಿ ನಡೆ. ನಾನು ನಿಮ್ಮೊಡನೆ ನಿನ್ನು ಪೂರ್ತ್ವಾವರ್ಕ ಸಹಾಯವನ್ನೀಯಬೇಕೆಂದೂ, ತನ್ಮೂಲಕ ಕೇವಲ ಗೌರವಾರ್ಥವಾಗಿ ಕಾರ್ಕೆ ಮಗ್ನವಾಗಿರುವ ಕ್ಷಯರೋಗ ನಿರೋಧ ಸಂಸ್ಥೆಗಳಿಗೆ ಆರ್ಥಿಕ ಶಕ್ತಿಯೊದಗಬೇಕೆಂದೂ ಆಶುಗಳಲ್ಲಿ ಜನತಾ ಸೇವೆಯನ್ನು ಮಾಡುವುದಕ್ಕೆ ಹಾಗೂ ಬೀಳುರೋಗವಿದಾ ಇದನ್ನು ನಮ್ಮ ದೇಶದಿಂದ ಸಂಪೂರ್ಣವಾಗಿ ಉಚ್ಚಾಟನೆ ಮಾಡುವಂತೆಸಗಲು ನಸ್ಸರ್ಕಿ ಮತ್ತು ಶಕ್ತಿಗಳು ಹೊರೆಯಂತಾಗಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ

ಕ್ಷಯರೋಗವೆನ್ನುವುದು ಮಾನವ ಜಾತಿಯಷ್ಟೇ ಪ್ರಾಚೀನ ತವಾದುದೆಂದು ನಾವೆ ರಿತಿತ್ತೇವೆ. ಕ್ರಿಸ್ತನ ಜನ್ಮಕ್ಕೆ ಅನೇಕ ವರ್ಷಗಳಿಗೆ ಮೊದಲು ಇದನ್ನು 'ನಾಶವೆದ್ದಿ ಸುವ ಜ್ವರ' ಇಲ್ಲವೇ 'ಫ್ಲೆಯ' (ಫ್ಲೆಯ = ನಾಶ, ಕೊನೆ) ಎಂಬ ಹೆಸರಿನಿಂದ ವಿವರಿಸಿದ್ದರು. ಭಾರತದ ಪ್ರಾಚೀನತಮ ಗ್ರಂಥಗಳಾದ ವೇದಗಳಲ್ಲಿ ಸಹ ಕೆಲವು ಬಗೆಯ ನಾಶಕಾರಕ ರೋಗಗಳ ಉಲ್ಲೇಖವಿದೆ. ಇತಿಹಾಸದ ಪ್ರಾರಂಭಿಕ ವರ್ಷಗಳಲ್ಲಿಯೇ ಅದು ಅಂಟು ರೋಗವೆಂದೂ, ಎಲ್ಲಿ ದೇಶಗಳಲ್ಲಿ, ಎಲ್ಲ ಹವಾಮಾನಗಳಲ್ಲಿ, ಎಲ್ಲ ವರ್ಗದ ಜನರಲ್ಲಿಯೂ ಸೋಂಕುವ ರೋಗವೆಂದೂ ತಿಳಿದು ಬರತು. ಇಲಆರಲ್ಲಿ ಶ್ರೀ ರೋಬರ್ಟ್ ಕೋಚ್ ಎಂಬವನ ಅವಿರತ ಸರಿಶೋಧನೆಯ ಪರಿಣಾಮವಾಗಿ, ಅದೊಂದು ಪದಮಾಣುವಿನಿಂದುಂಟಾಗುವುದೆಂದು ಸ್ಥಾಪಿತವಾಯಿತು ಇಂದು ಅವೇ ಪರಮಾಣುವು ವರ್ಷಕ್ಕೆ ಇಪ್ಪತ್ತು ಲಕ್ಷಕ್ಕೂ ಮಿಕ್ಕಿದ ಜನರನ್ನು ಈ ಜಗತ್ತಿನಿಂದ ಅಗಲಿಸಲು ಕಾರಣವಾಗಿದೆ. ನಮ್ಮ ಭಾರತದಲ್ಲಿ ಯೇ ಸುಮಾರು ಐವತ್ತು ಸಾವಿರದಷ್ಟು ಜನರು ಈ ರೋಗದಿಂದಾಗಿ ಮರಣಪಡುತ್ತಾರೆ. ಅದುದರಿಂದ, ಭಾರತದ ಕ್ಷಯರೋಗ ಸಂಸ್ಥೆಯು ತನ್ನ ರಾಜ್ಯ ಸಂಸ್ಥೆಗಳಿಂದಲೂ ಜನರ ನೆರವಿನಿಂದಲೂ ಈ ಮಹಾ ಮಾರಿಯೆದುರು ಸಬರ ಹೂಡಬೇಕಾಗಿದೆ. ಮತ್ತು ಹೊಸ ಹೊಸ ಶೋಧನೆಗಳನ್ನು ಮಾಡಬೇಕಾಗಿದೆ.

ಈ ಕ್ಷಯರೋಗದ ಕುರಿತಾಗಿ ಪ್ರಪಂಚದ ಮುಂದುವರಿದ ದೇಶಗಳಲ್ಲಿ ಧಾರಾಳವಾಗಿರುವ ಅನುಭವ ಮತ್ತು ಜ್ಞಾನ ಸಾಗರಗಳ ಸ್ಪಯೋಜನವನ್ನು ಭಾರತವು ಪಡೆದುಕೊಳ್ಳುವುದು ಸಾಧ್ಯವಿದೆ. ಇಂದು ನಮಗೆ ಕ್ಷಯವು ಜೀವನಪರಿಸ್ಥಿತಿ, ಆಹಾರದ ಕೊರತೆ, ಅನಾರೋಗ್ಯಕರ ಗೃಹಸ್ಥಿತಿ, ಸಾರ್ವಜನಿಕ ಆರೋಗ್ಯದತ್ತ ನಿರ್ಲಕ್ಷ್ಯಗಳಿಂದ ಹರಡುತ್ತಿರುವ ಸಾಮಾಜಿಕ ರೋಗವೆಂದು ತಿಳಿದಿದೆ. ಆದುದರಿಂದ, ಯಾವ ದೇಶದಲ್ಲೇ ಆಗಲಿ, ಕ್ಷಯರೋಗವನ್ನು ತಡೆಗಟ್ಟುವ ಏಕಮಾತ್ರ ಮಾರ್ಗವೆಂದರೆ, ಅಲ್ಲಿನ ಪ್ರಜೆಗಳ ಅರ್ಥಿಕ ಜೀವನವನ್ನೂ ಅವರ ಮನೆ ಮತೆಗಳನ್ನೂ, ಜೀವನ ನೈರ್ಮಲ್ಯಗಳನ್ನೂ ಸುಧಾರಿಸುವುದು. ಸರಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಪ್ರಜೆ ಸಾರ್ವಜನಿಕ ಆರೋಗ್ಯರಕ್ಷಣೆಯಿತ್ತ ವಿಶೇಷ ಗಮನವನ್ನಿತ್ತು ಜನರಲ್ಲಿ ಆ ಬಗ್ಗೆ ಸರಿಯಾದ ಪರಿಜ್ಞಾನವುಂಟಾಗುವಂತೆ ಮಾಡುವುದು ಮತ್ತವರನ್ನು ಯೋಗ್ಯರೀತಿಯಲ್ಲಿ ಆಸಾನರಿಸುವಂತೆ ನೋಡುವುದು ಸಹ ಅಪೇಕ್ಷಣೀಯವಾಗಿದೆ. ಅಲ್ಲದೆ ಕ್ಷಯ ಹಾಗೂ ಉಳಿದೆಲ್ಲ ರೋಗಗಳ ಬಗ್ಗೆ ಸರಿಯಾದ ಚಿಕಿತ್ಸಾಕ್ರಮವನ್ನು ತೆಗೆದುಕೊಳ್ಳಬೇಕು. ಈ ರೋಗವು ಜನರಲ್ಲಿ ಹರಡದಂತೆ ನೋಡಿಕೊಳ್ಳುವುದು ನಾತ್ರವಲ್ಲ, ಮರಿದೃಷ್ಟವಶದಿಂದ ಇದರ ಕೂಳಿಯಾಗಿ ಸಿಕ್ಕಿಬಿದ್ದವರನ್ನು ರಕ್ಷಿಸುವುದು ಸಹ ಆಗತ್ಯವಾಗಿದೆ. ಇಂತಹವರನ್ನು ಸಂಸ್ಥೆಗಳಲ್ಲಿ ಆಪ್ತವಾ ವಿಶೇಷ ಗೃಹಗಳಲ್ಲಿ ವಿಶೇಷ ಗವುನದಿಂದ ಚಿಕಿತ್ಸೆಮಾಡಬೇಕಾಗಿದೆ. ಚಿಕಿತ್ಸೆ ಹೊಂದಲ್ಪಡುವ ರೋಗಿಗಳು ಸಂಪೂರ್ಣ ಆರೋಗ್ಯವನ್ನು ಪಡೆಯುವವರೆಗೆ ವಿಂಬವಾದ ಕೆಲಸವನ್ನೀಯಬೇಕು. ಇಲ್ಲವಾದರೆ, ಅವರು ರೋಗಗ್ರಸ್ಥರಾಗಿಯೇ ಇರುವಂತಾಗುವುದು.

ಆದುದರಿಂದ ಕ್ಷಯ ರೋಗ ನಿವಾರಣೆಯೆನ್ನುವುದು ಬಹು ಮುಖ್ಯಕ್ರಮವನ್ನು ತಡೆಯುವಂತೆ, ರೋಗದ ವಿರ್ನಾ, ಅದರ ನಿಯಂತ್ರಣದ ಕ್ರಮ, ಮತ್ತು ಚಿಕಿತ್ಸಾ ವಿಧಾನ ನೊಪಲಬ್ಧವನ್ನು ಜನರಿಗೆ ಶ್ರುತಪಡಿಸಲು ಯಾಂತ್ರಿಕ ಸಹಾಯಗಳು ಹೆಚ್ಚಬೇಕು ನವ್ಯ ಜನರ ಜೀವನ ಮಟ್ಟವನ್ನೆತ್ತಲು ಜೋಗ್ಯ ಕ್ರಮಗಳನ್ನು ಕೈಗೊಳ್ಳಬೇಕು. ರೋಗಿಗಳ ಚಿಕಿತ್ಸೆಗಳಿಗಾಗಿ ಮಾತ್ರಿ, ಸಮಾಜದಲ್ಲಿಯೂ ರೋಗಿಯ ಕೌಂಟುಂಬಿಕರಲ್ಲೂ ಹರಡದಂತೆ ಮೊದಲು ಚಿಕಿತ್ಸಾಲಯಗಳು ಬೇಕು. ಈ ರೋಗಿಗಳಿಗೆ ಸಹ ಯೋಗ್ಯ ಕೆಲಸವೀಯಲು ಒಂದು ನಿಶ್ಚಿತ ಯೋಜನೆಯು ಬೇಕು. ಇದಕ್ಕಾಗಿ ತುಂಬ ನಡವು ಯೋಗ್ಯ ಸ್ಥಾತಿಸಿದ್ಧಗಳೂ ನಿಷ್ಣರೂ ಆಗತ್ಯವಾಗಬೇಕು. ಈ ಯೋಜನೆಗಳಲ್ಲಿ ಮೂಲಿಶಾಲಾಗದೆ ಕಾರ್ಕ ರೂಪಕ್ಕೆ ಬರುವಂತಾಗಲು ಜನತೆಯು ಸಂಪೂರ್ಣ ಸಹಕಾರ ಬೇಕು.

ನಾವು ಸ್ವತಂತ್ರರಾದ ಹತ್ತು ವರ್ಷಗಳಲ್ಲಿ ಈ ಎಲ್ಲ ವಿಷಯಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ ಆದರೆ, ಅದೇನೂ ಸಾಲದು. ಇಂದು ನವ್ಯಲ್ಲಿ ೨೬ ಸಾವಿರ ಹಾಸಿಗೆಗಳೂ ೨೦೦ ಚಿಕಿತ್ಸಾಲಯಗಳೂ ಸ್ಥಾಪನೆಗೊಂಡಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇದನ್ನು ರಾಷ್ಟ್ರೀಯ ಸಮಸ್ಯೆಯೆಂದು ತಿಳಿದಿವೆ. ಬಿ. ಸಿ. ಜಿ. ದಾಕಿನ ಉಪಯೋಗ ಪರಿಣಾಮಕಾರಿಯಾಗಿದೆ. ಕ್ಷಯ ರೋಗದ ಸಮಸ್ಯೆಯ ಬಗ್ಗೆ ವೈಜ್ಞಾನಿಕ ಸರ್ವೇಯನ್ನು ಮಾಡುವ ಕಾರ್ಯವು ಸಾಮಾನ್ಯ ಸಂಪೂರ್ಣವಾಗಿದೆ. ಹೀಗೆ ನನ್ನ ಕಾರ್ಯದಲ್ಲಿ ನೆರವಾದವರೆಲ್ಲರಿಗೂ ಕೃತಜ್ಞತೆಗಳನ್ನರ್ಪಿಸಬೇಕು.

ಭಾರತದ ರಾಷ್ಟ್ರೀಯ ಯೋಜನೆಯು ಜನರ ಜೀವನ ಮಟ್ಟವನ್ನು ಉನ್ನತೀಕರಿಸಲು ಅವರ ಜೀವನ ಕ್ರಮವನ್ನು ಸುಧಾರಿಸಲು ಹೆಣಗುತ್ತದೆ. ಕ್ಷಯ ರೋಗ ನಿರೋಧಕ್ಕೂ ಈ ಯೋಜನೆಯಲ್ಲಿ ಸ್ಥಾನವಿದೆ. ಇನ್ನೂ ೨೦೦ ರಿಂದ ೪೦೦ರಷ್ಟು ಚಿಕಿತ್ಸಾಲಯಗಳನ್ನೂ ತೆರೆಯುವ ಯೋಜನೆಯಿದೆ. ಹನ್ನೆರಡು ತರಬೇತಿ ಮತ್ತು ಆಭ್ಯಾಸ ಕೇಂದ್ರಗಳು, ೧೦ ಸಾವಿರ ಹೆಚ್ಚಿನ ಹಾಸಿಗೆಗಳು, ಕಾರ್ಯಕ್ಷೇತ್ರಗಳು ಹಾಗೂ ಸಂಶೋಧನಾಲಯಗಳು ಮೊದಲಾದುವುಗಳ ಕಾರ್ಯವನ್ನೂ ಯೋಜನಾಬದ್ಧವಿಯಲ್ಲಿ ಕೈಗೊಳ್ಳಲಾಗುವುದು. ಈ ಎಲ್ಲಾ ಕಾರ್ಯಗಳೂ ಪೂರ್ತಿಗೊಂಡಲ್ಲಿ ಕ್ಷಯ ನಿರೋಧ ಮಾರ್ಗದಲ್ಲಿ ಭಾರತವು ಇನ್ನೂ ಒಂದು ಮೈಲು ಮುಂದುವರಿದಂತಾಗುವುದು.

ಹೆಚ್ಚು ಹೆಚ್ಚಬರುವ ಸಂಸ್ಥೆಗಳನ್ನು ಕಟ್ಟುವುದು ಆಸಾಧ್ಯವಾದುದರಿಂದ, ವಾಸಸ್ಥಾನಗಳಲ್ಲಿಯೇ ಸೇವೆಯನ್ನು ಸಲ್ಲಿಸುವ ಯೋಜನೆಯು ಉತ್ತಮವಾದುದು. ಆದುದರಿಂದ, ಕ್ಷಯ ನಿರೋಧಕ ಸಂಘ ಸಂಸ್ಥೆಗಳ ಆರ್ಥಿಕ ಬಲವು ಹೆಚ್ಚಬೇಕು. ಯೋಗ್ಯರೀತಿಯಿಂದ ಅವಶ್ಯಕ ಸೇವೆಸಲ್ಲಿಸುತ್ತಿರುವ ೨೦ ಸಂಸ್ಥೆಗಳು ಕೇಂದ್ರ ಕ್ಷಯ ನಿರೋಧಕ ಸಂಘದೊದಿಗೆ ಸೇರ್ಪಡೆಯಾಗಿವೆ. ಈ ಸಂಸ್ಥೆಗಳು ಯೋಗ್ಯ ಉತ್ಸಾಹ ನರನಾರಿಯರಿಂದ ಪೂರ್ಣವರ್ಷನೆ ಪಡೆಯುತ್ತಿವೆ ಸರಕಾರವು ಇಂತಹವುಗಳ ಸಹಾಯ ಪಡೆಯಬೇಕು. ಜನತೆ ಅದಕ್ಕೆ ನೆರವೀಯಬೇಕು.

ಕ್ಷಯರೋಗವನ್ನು ತಡೆಗಟ್ಟುವುದಕ್ಕೆ ನೆರವಾಗುವ ಈ ಸಂಘಗಳು ಮುದ್ರೆಗಳನ್ನು ಮಾಡಿ ತನ್ಮೂಲಕ ಹಣ ಸಂಗಾದಿಸಲು ಸರಕಾರವು ಅನುಮತಿಯಿತ್ತಿದೆ. ಕ್ಷಯರೋಗವನ್ನು ತಡೆಗಟ್ಟುವಲ್ಲಿ ಪ್ರತಿಯೊಬ್ಬ ಭಾರತೀಯನೂ ನೆರವಾಗಬೇಕು. ಅದಕ್ಕಾಗಿ ಕ್ಷಯರೋಗವ ಮುದ್ರೆಗಳನ್ನು ಕೊಂಡುಕೊಳ್ಳಬೇಕು. ಅನಿ ಕಾರೀತರ ವಿಳಾಸದಿಂದ ಜನತೆಯ ರಕ್ಷ ಹೀರುವ ಈ ಮಹಾಮಾರಿ ರೋಗವನ್ನು ಹೊಡೆದಟ್ಟುವ ಮಹಾ ಕಾರ್ಯದಲ್ಲಿ ವೀರ ಜನತೆ ತನ್ನಷ್ಟೆ ಪೂರ್ತಾಪರ್ಕವಾದ ಸಹಾಯವನ್ನು ನೀಡಬೇಕು; ಈ ಮುದ್ರೆಯ ಜಳುವಳಿಯಲ್ಲಿ ಉತ್ಸಾಸದಿಂದ ಭಾಗವಹಿಸಿ ಅವನ್ನು ಯಶಸ್ವಿಯಾಗಿಸುವಲ್ಲಿ ಬೆಂಬಲ ಕೊಡಬೇಕು.

[ರಾಜಕುಮಾರಿ ಅಮೃತ್‌ಕೌರರ ರೇಡಿಯೋ ಭಾಷಣದಿಂದ]

ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ- ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ಸಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತಿದೆ!!

P. DEVEE & Co. (N. J.) CALCUTTA—40.

ಸ್ವಾಕಿನ್ಸರು: ಷಾ ಕಂಪೆನಿ, ಮಂಗಳೂರು—1.

ಮಂಗಳೂರು

ಕೇಂದ್ರ ಉಪ ಆಹಾರ ಸಚಿವರು

—ಭಾರತ ಸರಕಾರದ ಉಪ ಆಹಾರ ಮತ್ತು ಕೃಷಿ ಮಂತ್ರಿ ಶ್ರೀ ಎಸ್. ಎ. ಕೃಷ್ಣಪ್ಪನವರು ಕಳದ ತಾ. 26ರಂದು ಸರ್ವಾಹ್ನ ಜೊಂಬಾಯಿಯಿಂದ ವಿಮಾನ ಮೂಲಕ ಮಂಗಳೂರಿಗೆ ಆಗಮಿಸಿದರು. ಬಜ್ಪೆ ವಿಮಾನ ನಲ್ದಾಣದಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರರು ಇದಿರ್ಗೊಂಡು ಸ್ವಾಗತಿಸಿದರು.

ಕಡಲ್ಗೆ ಹತ್ತಿ ವ್ಯವಸಾಯ—

ಸ. ಕ. ಜಿಲ್ಲೆಯಲ್ಲಿ ಕಡಲುಗಡ್ಡೆ ಹತ್ತಿಯ (ಸಿಐಲೆಂಡ್ ಕೊಟನ್) ವ್ಯವಸಾಯವನ್ನು ನಾಡಿದ್ದಲ್ಲಿ ಅದು ಜಿಲ್ಲೆಯ ಕೃಷಿಕ ಬಂಧುಗಳಿಗೆ ವರಪ್ರಸಾದ ರೂಪದ್ದಾಗಿ ಪರಿಣಮಿಸುವುದು ಎಂದು ಶ್ರೀ ಕೃಷ್ಣಪ್ಪನವರು ಜಿಲ್ಲಾ ಕಲೆಕ್ಟರರ ಅಭಿಸಿನಲ್ಲಿ ಜರುಗಿದ ಸಭೆಯಲ್ಲಿ ಹೇಳಿದರು. ವಿವಿಧ ಶಾಖಾಧಿಕಾರಿಗಳು ಶಾಸನ ಸಭಾ ಸದಸ್ಯರು ಮತ್ತು ಕೃಷಿಕ ಬಂಧುಗಳು ಈ ಸಭೆಗೆ ಬಂದಿದ್ದರು.

ಒಂದು ಎಕ್ರೆ ಸ್ಥಳದಲ್ಲಿ ಈ ಹತ್ತಿಯನ್ನು ಬೆಳೆಸಿದ್ದಲ್ಲಿ ಕೃಷಿಕನಿಗೆ ಇದರಿಂದ ಸುಮಾರು ಐದು ನೂರರಿಂದ ಆರು ನೂರು ರೂಪಾಯಿನರಿಗೆ ಉತ್ಪನ್ನವಾಗುವುದು. ಮೂಡುಬಿದ್ರೆಯಲ್ಲಿ ತಾನು ಪರೀಕ್ಷಿಸಿದ ಈ ಹತ್ತಿಯ ಕೃಷಿಯಿಂದ ಈ ಜಿಲ್ಲೆಯಲ್ಲಿ ಈ ಹತ್ತಿಯ ಬೆಳೆಯು ಚೆನ್ನಾಗಿ ನಡೆಯುವುದೆಂದು ತಾನು ಭಾವಿಸುವುದಾಗಿ ಶ್ರೀ ಕೃಷ್ಣಪ್ಪನವರು ಹೇಳಿದರು. ಗೇರುಬೀಜದ ವಿಷಯದಲ್ಲಿ ರಾಷ್ಟ್ರವು ಸ್ವಾವಲಂಬಿಯಾಗಬೇಕಾದ ಆವಶ್ಯಕತೆಯನ್ನು ವಿವರಿಸಿದರು. ಈಗ ಹೆಚ್ಚಿನದನ್ನು ಪೋರ್ಚುಗೀಸ್ ದಕ್ಷಿಣ ಆಫ್ರಿಕದಿಂದ ಆಮದುಮಾಡಲಾಗುವುದು ಎಂದೂ ಅವರು ನುಡಿದರು. ಮೈಸೂರು ಸರಕಾರ ಕ್ಕೆ ಈ ಗೇರುಬೀಜ ಕೃಷಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಹತ್ತು ಲಕ್ಷ ರೂಪಾಯಿ ಸಾಲವಾಗಿಯೂ ತೋಂಬತ್ತು ಸಾವಿರ ರೂಪಾಯಿ ವಿಕರಿಂಗ್ ವೆಚ್ಚವಾಗಿಯೂ ಕೇಂದ್ರ ಸರಕಾರ ಕೊಡಲೊಪ್ಪಿದೆ ಎಂದರು

ಭಾರತದ ಕೇಂದ್ರ ಹತ್ತಿ ಸಮಿತಿ ಬೊಂಬಾಯಿ, ಇದರ ಕಾರ್ಯದರ್ಶಿ ಶ್ರೀ ಬಿ. ಎಲ್. ಸೇಥಿಯವರು ಮಾತನಾಡುತ್ತಾ, ಜಿಲ್ಲೆಯ ಏಮಸಾವಿರ ಎಕ್ರೆ ಸ್ಥಳದಲ್ಲಿ ಈ ಹತ್ತಿಯನ್ನು ಬೆಳೆಸಲಾಗುವುದೆಂದೂ ಇದಕ್ಕಾಗಿ ಸಮಿತಿಯು ಸಾಲರೂಪದಲ್ಲಾಗಲೀ ಸಹಾಯ ರೂಪದಲ್ಲಾಗಲೀ ಆರುಲಕ್ಷ ರೂಪಾಯಿಗಳನ್ನು ಕೊಡಲು ನಿರ್ಧರಿಸಿರುವುದಾಗಿ ಜೀಳಿದರು. ಮೈಸೂರು ಕೃಷಿ ಮಂತ್ರಿ ಶ್ರೀ ಎಚ್. ಎಸ್. ರುದ್ರಪ್ಪನವರು ಮಾತನಾಡುತ್ತಾ, ಗೇರುಬೀಜವನ್ನು ಬೆಳೆಸುವುದಕ್ಕಾಗಿ ಮೂವತ್ತು ವರ್ಷ ಲೀಸಿನ ಮೇಲೆ ಒಂದು ಲಕ್ಷ ಎಕ್ರೆ ಸರಕಾರೀ ಸ್ಥಳವನ್ನು ಕೊಡಲಾಗುವುದು ಎಂದು ಹೇಳಿದರು.

ಜಿಲ್ಲಾ ಬೋರ್ಡ್ ಅಧ್ಯಕ್ಷ—ಶ್ರೀ

ಮಂಜಯ್ಯ ಹೆಗ್ಡೆಯವರು ಈಚೆಗೆ ಬೆಂಗಳೂರಿಗೆ ತೆರಳಿ, ಈ ಜಿಲ್ಲೆಯ ನಾಲ್ಕು ತಾಲೂಕುಗಳ ಬೋರ್ಡ್ ಶಾಲಾಧ್ಯಾಪಕರಿಗೆ ಸಂಬಳ ಬಟವಾಡೆಗೆ ಹಣ ಇಲ್ಲದ ವಿಚಾರವನ್ನು ಮುಖ್ಯಮಂತ್ರಿ ಹಾಗೂ ಇತರ ಮಂತ್ರಿಗಳ ಮತ್ತು ವಿದ್ಯಾಧಿಕಾರಿಗಳ ಗಮನಕ್ಕೆ ತಂದು ಸಹಾಯದ ಭರವಸೆ ಪಡೆದಿರುವರು.

ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯು—

ತಾ. 24ರಂದು ಸ್ಥಳೀಯ ಸರಕಾರಿ ಕಾಲೇಜಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ. ವೈ. ಸಿ. ಪೊಂಬಾರಿಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ವಾರಸಭಾಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತ ಬಯಸಿದರು ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಸಿ; ಎಸ್. ಮುಕುಂದಾಚಾರ್ ಮೊದಲಾದವರ ಭಾಷಣಗಳಾದುವು

ಹೌರಸಭೆಯು—

ಈ 26ರಂದು ಸಂಜೆ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು ರಸ್ತೆಗೆ ತಾರು ಹಾಕುವ 11 ಕೆಲಸಗಳಿಗೆ ರೂಪಾಯಿ 33,000 ಮಂಜೂರುಮಾಡಲಾಯಿತು ಕುಮ್ಟ್ರೀಲ್ ಸೇತುವೆಗಾಗಿ ಮಾಡಿದ ರೂ.ಯಿ 1,20,000 ಅಂದಾಜು ಪಟ್ಟಿಯನ್ನು ಸಭೆಯು ಮಂಜೂರು ಮಾಡಿ ಈ ಸೇತುವೆಯ ವೆಚ್ಚವನ್ನು ಕದಿನ ಮಾಡಬೇಕೆಂಬ ಕೇಳ್ಕೆಯಾಯಿತು.

ಜಿಲ್ಲಾ ಪಸ್ತ್ರಕ ಭಂಡಾರಾಧಿಕಾರಿದವರು ತಮಗೆ 41 ಸೆಂಟ್ಸು ಸ್ಥಳಕೊಡಬೇಕೆಂದು ಸೂಚಿಸಿದ ಸ್ಥಳದ ಕುರಿತು ಚರ್ಚೆ ಬಂದಾಗ ಆ ಕುರಿತು ಪರೀಕ್ಷಿಸಿ ಯೋಗ್ಯ ಸ್ಥಳಗಳನ್ನು ಹುಡುಕಲು ಒಂದು ಸಮಿತಿಯನ್ನು ರಚಿಸಲಾಯಿತು.

ಕಳ್ಳ ಚೆನ್ನೆ ಹತ್ತೆ—

ಮಂಗಳೂರು ಬಂದರದ ಕೇಂದ್ರ ಧಕ್ಕೆಗೆ ಮುಸ್ಸಕ್ಕಿನಿಂದ ಬಂದ 'ಆಸ್ಟರ್' ಎಂಬ ಒಂದು ದೊಡ್ಡ ಮುಂಜಿನ ಕೋಧನೆಯನ್ನು ಮುಂಬಯಿಯಿಂದ ಈ ಕೋಧನೆಗಾಗಿಯೇ ಬಂದ ನಿರೋಧಕಾಧಿಕಾರಿ ಶ್ರೀ ಪೆಂಡಾರ್‌ಕರ್ ಮತ್ತು ಮಂಗಳೂರಿನ ಕೆಳಮ್ಮ ಸುಪರಿಂಟೆಂಡೆಂಟ್ ಶ್ರೀ. ಎ. ನಿ. ಮೆನೋನ್‌ರವರ ಸೇತೃತ್ವದಲ್ಲಿ ನಡೆಸಲಾಯಿತು ಸುಮಾರು 14 ಲಕ್ಷಕ್ಕೂ ಮಿಕ್ಕ ಬೆಲೆಬಾಳುವ ಕಳ್ಳ ನ್ಯಾಪಾರದ ಚೆನ್ನ ಹತ್ತೆಹಚ್ಚಲಾಯಿತು. ಮುಂಜಿನ ಮೂಲಿಕನಾದ ಇಸ್ಮಾಯಿಲ್ ಶಾರ ಮತ್ತು ಎಂಟು ಮಂದಿ ತಿಳಿಂಗಿಗಳನ್ನು ಬಂಧಿಸಲಾಗಿದೆ.

ದರ್ಮಾರ್ಥ ವಿವಿಧ ವಿನೋದಾವಳಿ—

ಕರೆಯ ಹಾಗೂ ಕಲಾನಿಧರ ಮ್ಯೋತ್ಸವದ ನೃತ್ಯಿಯಿಂದ ದಿನನಿಡೀ ಮಂಡುವ ನಸ್ಸಿನ ಜೇಕರವನ್ನು ನೀಗಿಸಲು ಆತುರದಿಂದಿರುವ ಬಡ ಜನತೆಗಾಗಿ ಹಾಗೂ ತಮ್ಮ ಕಲಾಸಂಸ್ಥೆಗಳ ಪ್ರಚಾರಕ್ಕಾಗಿ ಮಂಗಳೂರಿನ ಪ್ರತಿಯೊಂದು ಕಲಾ ಸಂಸ್ಥೆಯೂ ವರ್ಷಕ್ಕೊಂದಾದರೂ ಧರ್ಮಾರ್ಥ ಮನೋರಂಜನಾಕಾರ್ಯಕ್ರಮ ನಿರ್ವಹಿಸಬೇಕೆಂಬುದಾಗಿ ತಾ. 31ರಂದು ಸಂಜೆ ಟೌನ್‌ಹೌಸ್ನಲ್ಲಿ ಕೂಡಿಬಂದ ಸಭೆಯಲ್ಲಿ ಕೊಂಕಣಿ ನಾಟಕ ಸಭೆಯ ವತಿಯಿಂದ ಬಡವರಿಗಾಗಿ ನಿರ್ವಹಿಸಲಾದ ಧರ್ಮಾರ್ಥ ವಿವಿಧ ವಿನೋದಾವಳಿ ಪ್ರದರ್ಶನದ ಆವ್ಯಕಸ್ಥಾನದಿಂದ ಮಂಗಳೂರು ನಗರಭಾಪತಿ ಶ್ರೀ ಕೆ ಸೂರ್ಯನಾರಾಯಣ ಅಡಿಗರು ಹೇಳಿದರು. ಕೊಂಕಣಿ ನಾಟಕ ಸಭೆಯ ಕೆ. ಜಿ. ನೆರಿಯವರು ಸ್ವಾಗತಭಾಷಣಮಾಡಿದರು.

ಓದುವ ಕುದುರೆಗೊಂದು ಲಗಾಮು–

ನೂತನ ಸಾಹಿತ್ಯಶಾಸ್ತ್ರ ಬೇಕು

ಶ್ರೀ. ಕೆ. ದಾಮೋದರ ಐತಾಳ

ಬಹುಮುಖವಾಗಿ ಹಾಯುತ್ತಿರುವ ಕನ್ನಡ ಸಾಹಿತ್ಯ ವಾಹಿನಿಯ ಕನ್ನಡಿಗರ ಜೀವನದ ಪ್ರತಿಬಿಂಬವಾಗಿದೆ. ಪದ್ಯರೂಪದಲ್ಲಿ ಮಾತ್ರಾ ಹೆಚ್ಚಿಗೆ ಬಳಕೆಯಲ್ಲಿತ್ತು ನಮ್ಮ ಸಾಹಿತ್ಯ. ಈಗ ಅನೇಕ ರೀತಿಯ ಕವಲೊಡೆಯ ಹೋಗಿದೆ. ಹಿಂದಿನ ಸಾಹಿತ್ಯವನ್ನು ನಾವು ಅವಲೋಕಿಸುತ್ತಾ ಹೋದರೆ ಆ ಸಾಹಿತ್ಯ ಪದ್ಯ ಕಾವ್ಯದಿಂದಲೇ ತುಂಬಿದುದಾಗಿದೆ. ಗದ್ಯ ಕಾವ್ಯ ಹಿಂದೆಯಿರಲೇಯಿಲ್ಲವೆಂದು ಹೇಳಿದರೂ ಹೇಳಬಹುದು. ಶಿವ ಕೋಟ್ಯಾಚಾರ್ಯನ ವಡ್ಡಾರಾಧನೆ, ನೃಪಕೂರು ಮಹಾರಾಜನ ಕಾಲದಲ್ಲಿದ್ದ ತಿರುಮಲಾರ್ಯನ ಚಿಕದೇವ ರಾಜವಂಶಾವಳಿ ಮೊದಲಾದ ಕೆಲ ಗದ್ಯ ಗ್ರಂಥಗಳನ್ನು ನಾವು ಹೊರತುಪಡಿಸಿದರೆ, ಉಳಿದದ್ದೆಲ್ಲವೂ ಪದ್ಯ ಕಾವ್ಯವೆನ್ನಬೇಕು. ಪದ್ಯದಲ್ಲಿ ಚಂಪೂ ಮಿಶ್ರಿತವಾಗಿರಬಹುದು. ಹಿಂದೆ "ಗದ್ಯಂಪದ್ಯಮಿತಿನಾಂ ನಿಕಷಂ ವದಂತಿ" ಯೆಂಬೊಂದು ಗಾದೆಯು ಮಾತು ಪ್ರಚಾರದಲ್ಲಿತ್ತು. ಗದ್ಯವನ್ನು ಇಂದಿನಂತೆ ಅತಿ ಸುಲಭವಾಗಿ, ಜನ ಮಾತನಾಡುವ ಭಾಷೆಯಲ್ಲಿ ಬರೆಯುವ ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆ ಪ್ರತ್ಯೇಕವಾದ ಅನೇಕ ನಿಯಮಗಳಿದ್ದುವೆನ್ನುವುದು ನಮಗೆ ಮೇಲಿನ ಉಕ್ತಿಯಿಂದ ಸ್ಪಷ್ಟವಾಗುವುದು. ನಮ್ಮ ಕನ್ನಡ ಕವಿವರ್ಯ ಮುದ್ದಣನು ಮಾತ್ರಾ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ'ಯೆಂದು ಹೇಳಿದ ಮಾತನ್ನು ನೋಡುವಾಗ "ಪದ್ಯಂ ಸಮಸ್ತ ಜನತಾ ಹೃದ್ಯಂ" ಎಂಬ ೧೯ನೆ ಶತಮಾನದ ಉಕ್ತಿಗೂ ೧೯ನೆ ಶತಮಾನದ ಈ ಉಕ್ತಿಗೂ ತೀರ ವಿರೋಧವಿನಿಸೆಯೆಂದು ತಿಳಿದುಬರುತ್ತದೆ.

ಕನ್ನಡದ ಆದಿ ಕವಿ ಪಂಪನಿಂದಾರಂಭಿಸಿ ಎಲ್ಲಾ ಕವಿಗಳು ತಮ್ಮ ಕಾವ್ಯವನ್ನು ಪದ್ಯ (ಚಂಪೂ) ಈ ಪದಲ್ಲೇ ಬರೆಯುತ್ತಾ ಹೋದರು. ಮಾತ್ರೆ, ಚಂದಸ್ಸು, ಪ್ರಾಸ ಇತ್ಯಾದಿ ನಿಯಮಗಳಿಂದ ಅವರು ಯಾವ ರೀತಿಯಲ್ಲೂ ಬಾಧಿತರಾಗಿಲ್ಲ. ಆದರೆ ಮಾತ್ರಾ ಕೇವಲ ಗದ್ಯದಲ್ಲೇ ಕಾವ್ಯ ಬರೆಯುವ ಎದೆಗಾರಿಕೆ ನಮ್ಮ ಹೆಚ್ಚಿನ ಕವಿಗಳಲ್ಲಿಯಿರಲಿಲ್ಲವೆನ್ನಬೇಕೋ ಏನೋ ತಿಳಿಯದು! ತಿರುಮಲಾರ್ಯನು ಮಾತ್ರಾ ಗದ್ಯದಲ್ಲೇ ತನ್ನ ಕಾವ್ಯವನ್ನು ಬರೆದನು. ನಂತರದ ಪ್ರಾಚೀನ ಕವಿಗಳಲ್ಲಿ ನವೀಸನಾದ ಮುದ್ದಣನು ಮಾತ್ರಾ ಪದ್ಯವು ಕೇವಲ ರಾಗದಿಂದ ಹೇಳಲಿಕ್ಕಾದೀತು; ಗದ್ಯವು ಹೃದ್ಯವಾಗಿ ದೆಯೆಂಬ ಸ್ಥಿತ್ಯಂತರಾಭಿಪ್ರಾಯಕ್ಕೆ ಬಂದು ರಾಮಾಶ್ವಮೇಧವೆಂಬ ಅಮರಗದ್ಯ ಕಾವ್ಯವನ್ನೇ ಬರೆದನು. ಪದ್ಯ ಕಾವ್ಯದಿಂದ ಆರಂಭವಾದ ಸಾಹಿತ್ಯ ಗದ್ಯ ಕಾವ್ಯಕ್ಕೆ ಪರಿವರ್ತಿತವಾದುದನ್ನೆ ನಾವು ಸಾಹಿತ್ಯದ ಅಥವಾ ಭಾಷೆಯ ವಿಕಾಸವೆನ್ನಬಹುದು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಟಕಗಳ ಸಂಖ್ಯೆ ಬಹಳ ಕಡಿಮೆ. ಇಲ್ಲವೇ ಇಲ್ಲವೆನ್ನಬಹುದು. 'ಮಿತ್ರವಿಂದಾ ಗೋವಿಂದ'ಯೆಂಬ ಅನುವಾದಿತ ನಾಟಕವನ್ನು ಬಿಟ್ಟರೆ ಪ್ರಾಚೀನ ಸಾಹಿತ್ಯ ನಾಟಕಗಳ ಸಂಖ್ಯೆ (ಈಗ ದೊರೆತಿರುವುದರಲ್ಲಿ) ಶೂನ್ಯವೆನ್ನಬಹುದು. ಅಭಿನವ ಕಾಳಿದಾಸ ಬಸಪ್ಪ ಶಾಸ್ತ್ರಿಗಳವರು ಮಾತ್ರಾ ಕೆಲವು ಸಂಸ್ಕೃತ ನಾಟಕಗಳ ಕನ್ನಡ ಅನುವಾದಮಾಡಿದ್ದಾರೆ.

ಒಟ್ಟನಲ್ಲಿ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯವನ್ನು ಮೂರು ವಿಧವಾಗಿ ಸಾಮಾನ್ಯವಾಗಿ ವಿಂಗಡಿಸಿಕೊಳ್ಳಬಹುದು. ೧ ಪದ್ಯ ಸಾಹಿತ್ಯ (ಚಂಪೂ ಇತ್ಯಾದಿಗಳನ್ನೊಳಗೊಂಡದ್ದು.) ೨ ಗದ್ಯ ಸಾಹಿತ್ಯ. ೩ ನಾಟಕಸಾಹಿತ್ಯವೆಂದು. ಮೊದಲನೆಯದನ್ನು ಮೊದಲ ಮೆಟ್ಟಿಲಿಗೇರಿಸಿದರೆ ಉಳಿದೆರಡನ್ನು ಎರಡನೆಯ ಮೆಟ್ಟಿಲಿಗೇರಿಸಬಹುದು.

ಇಂದಿನ ಕನ್ನಡ ಸಾಹಿತ್ಯವನ್ನು ಕೂಡಾ ನಾವು ಸಾಮಾನ್ಯವಾಗಿ ಗದ್ಯ, ಪದ್ಯ ನಾಟಕವೆಂದು ಮೂರು ವಿಧವಾಗಿ ವಿಂಗಡಿಸಬಹುದು.

ಮುದ್ದಣ್ಣನ ಮಾತನ್ನೇ ಆದರ್ಶವಾಗಿಟ್ಟುಕೊಂಡು ನಮ್ಮಲ್ಲೀಗ ಗದ್ಯ ಸಾಹಿತ್ಯ ಅತಿಯಾಗಿ ಬೆಳೆಯುತ್ತಿದೆ. ಪ್ರಾಯಃ ಹಿಂದಿನ ಪದ್ಯಸಾಹಿತ್ಯವನ್ನು ಕೂಡಾ ಮೀರಿಸುವಷ್ಟರಮಟ್ಟಿಗೆಂದು ಹೇಳಬಹುದು. ಹಿಂದೆ ಗದ್ಯವನ್ನು ಬರೆಯುವವನರೇ ಇರಲಿಲ್ಲಿ. ಆದರೆ ಈಗ ಅವರ ಸಂಖ್ಯೆ ಜಾಸ್ತಿಯೆಂದರೆ ಇದಕ್ಕೆ ಮೂಲಕಾರಣ ನಿಯಮನಿಸತಿಲಾದುದೇ ಯೆನ್ನಬಹುದು. ಜನ ಮಾತನಾಡುವ ಭಾಷೆಯಲ್ಲಿ ಗದ್ಯವನ್ನು ಬರೆಯಬಹುದೆಂದರೆ ಆದು ಸುಲಬವೆ? ಹಿಂದೆ ಯಾವ ಕಾವ್ಯವನ್ನೇ ಆಗಲಿ ಬರೆಯುವುದಾದರೆ ಅದಕ್ಕೆ ಕತೆಯನ್ನು ರಾಮಾಯಣಾದಿ ಪ್ರಾಚೀನ ಮಹಾ ಕಾವ್ಯಗಳಿಂದ ಆರಿಸಿಕೊಳ್ಳಬೇಕೆಂಬ ನಿಯಮವಿತ್ತು. ಮತ್ತಕ್ಕೆ ಸಂಬಂಧಿಸಿದ ಕಾವ್ಯಗಳನ್ನು ಬರೆಯುವಾಗ ಮಾತ್ರಾ ಈ ನಿಯಮನನ್ನು ಮೀರಬಹುದಿತ್ತು. ಮಹಾಕಾವ್ಯಗಳಿಂದ ಆರಿಸಿಕೊಂಡ ಭಾಗವನ್ನು ಯಾವ ರೀತಿಯಲ್ಲೂ ಪರಿವರ್ತಿಸಬಹುದಿತ್ತು. ಬದಲಾಯಿಸುವ ಅಧಿಕಾರ ಕವಿಗಳ ಶೈಲಿಯದ್ದಿತ್ತು. ಇದರ ಪರಿಣಾಮವಾಗಿ ಅನೇಕ ಜೈನ ಕವಿಗಳು ಬರೆದ ಕಾವ್ಯಗಳಲ್ಲಿ ಮೂಲ ಕತೆಗೆ ತೀರ ಭಿನ್ನವಾದ ಕತೆಗಳು ಆಡಕವಾಗಿವೆ ಈ ರೀತಿಯ ನಿಯಮವೇನೂ ನಮ್ಮ ಈಗಿನ ಗದ್ಯ ಸಾಹಿತ್ಯಕ್ಕಿಲ್ಲ. ಗದ್ಯವೆಂದಾಕ್ಷಣ ಯಾರೂ ಬರೆಯಬಹುದು. ಚಂದಮಾಮದಂತಹ ಮಕ್ಕಳ ಮಾಸಪತ್ರಿಕೆಯಲ್ಲಿ ಬರುವ ಗದ್ಯ ಸಾಹಿತ್ಯಕ್ಕೂ, ಕಸ್ತೂರಿಯಂತಹ ಡೈಜೆಸ್ಟ್ ಮಾದರಿಯಲ್ಲಿ ಹೊರಡುವ ಮಾಸಪತ್ರಿಕೆಯಲ್ಲಿರುವ ಗದ್ಯ ಸಾಹಿತ್ಯಕ್ಕೂ, ಸಾಮಾನ್ಯ ಜನ ಮಾತನಾಡುವ ಭಾಷೆಗೂ ಯಾವ ರೀತಿಯ ಹೆಚ್ಚಿನ ವ್ಯತ್ಯಾಸವಿರಲಾರದು. ಆಕ್ಷರ ಜೆನ್ನಾಗಿ ಬರೆಯಲು ಬಲ್ಲವನು ಭಾಷಾ ಮರ್ಯಾದೆಯ ಬಗ್ಗೆ ಸ್ವಲ್ಪ ವಿಚಾರವನ್ನು ತಿಳಿದವನು ಗದ್ಯದ ನಿರ್ಮಾತನಾಗಬಹುದು.

ರಾಮಾಯಣಾದಿ ಮಹಾ ಕಾವ್ಯಗಳನ್ನೆ ಆಧಾರವಾಗಿಟ್ಟುಕೊಂಡು ಕತೆಗಳನ್ನು ಬರೆಯಬೇಕೆಂಬ ನಿಯಮ ಕೂಡಾ ಈಗ ಯಾವ ಸಾಹಿತ್ಯಕ್ಕೂ ಲೇಪಿಸುವುದಿಲ್ಲ. ಪದ್ಯ ಸಾಹಿತ್ಯ, ಕೆಲವೆಡೆ ಗದ್ಯ ಸಾಹಿತ್ಯದಲ್ಲೂ ರಾಮಾಯಣಾದಿ ಮಹಾಕಾವ್ಯಗಳ ಕತೆಗಳು ತುಂಬಬಹುದು. ಆದರೆ ಅಷ್ಟೀಗ ನಿಯಮವಾಗಿಲ್ಲ. ಇಂದಿನ ಕತೆಕಾದಂಬರಿಗಳ ವಸ್ತು ನವ್ಯವಾದುದು. ಪ್ರಾಯಃ ಆಂಗ್ಲ ಸಾಹಿತ್ಯದಿಂದ ಸ್ಫೂರ್ತಿಗೊಂಡುದು. ದಿನದಿನ ನಮ್ಮ ಜೀವನದಲ್ಲಿ ಸಂಭವಿಸಿದ ಸಂಘಟನೆಗಳ ಸಂಮಿಲನದ ಅನೇಕ ದೃಶ್ಯಗಳನ್ನು ನಾವು ಕಣ್ಣಾರೆ ಕಾಣುತ್ತೇವೆ. ಆಗ ಆದು ಯಾವ ರೀತಿಯ ಪರಿಣಾಮವನ್ನು ನಮ್ಮಲ್ಲಿ ಉಂಟುಮಾಡುವುದಿಲ್ಲ. ಕಾದಂಬರಿಕಾರ, ಅಥವಾ ಕತೆಗಾರನ ಬರವಣಿಗೆ ಮಾತ್ರ ನಮ್ಮ ಮೇಲೆ ವಿಶೇಷವಾದ ಪರಿಣಾಮವನ್ನು ಬೀರುವುದು. ಇದು ನಮ್ಮ ಇಂದಿನ ನವ್ಯ ಕತೆಕಾದಂಬರಿಗಳ ಸಫಲತೆಯ ಒಂದು ಅಂಶ.

ಇನ್ನು ಹಾಸ್ಯ ಸಾಹಿತ್ಯ. ಪದ್ಯ ಸಾಹಿತ್ಯ ನವ್ಯದಲ್ಲಿ ಪುಂಖಾ ಬೆಳೆದಿದೆ. ಭಾವನೆಯನ್ನೇ ಮೂಲ ಮತ್ತು ಸ್ವಧಾನವಾಗಿಟ್ಟುಕೊಂಡು ಬರೆದ ನವ್ಯ ಕವಿತೆಗಳು ಅನೇಕಯಿವೆ. ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಯನ್ನು ಪದ್ಯರೂಪದಲ್ಲಿ ಇಳಿಸಬೇಕಾದರೆ ಅದಕ್ಕೆ ಛಂದಸ್ಸು, ಪ್ರಾಸ ಇತ್ಯಾದಿ ನಿಯಮಗಳೂ ತೊಡಕನ್ನು ತಂದೊಡ್ಡಬಾರದುಯೆಂಬ ಉದ್ದೇಶದಿಂದ ಇಂದಿನ ಕವಿಗಳು ಆ ಎಲ್ಲಾ ನಿಯಮಗಳನ್ನು ಸಂಪೂರ್ಣ ಮೀರಿದ್ದಾರೆ ಇದರಿಂದ ಪದ್ಯ ರಚನೆ ಗದ್ಯ ರಚನೆಯಷ್ಟೆ ಸುಲಭವಾಗಿದೆಯೆಂದು ಅನೇಕರು ತಿಳಿದಿರಬಹುದು. ಆದರೆ ಅದು ಎಣಿಸಿದಷ್ಟು ಸುಲಭವಾಗಿಲ್ಲ. ಒಂದೆರಡು ಸಾಲುಗಳಿಂದ ಸ್ಪಷ್ಟವಾದ ಕಲ್ಪನೆ ಮೂಡುವಂತೆ ಮಾಡುವುದು ಅಷ್ಟೇನು ಸುಲಭ ಸಾಧ್ಯವಲ್ಲ. ಗದ್ಯದಲ್ಲಾದರೆ ಅನೇಕ ಸಾಲುಗಳಿಂದ ಕಲ್ಪನೆಯನ್ನು ವಾಚಕರ ಕಣ್ಣಿಗೆ ಕಾಣಿಸಬಹುದು. ಆದರೆ ಜನರು ಈ ವಿಷಯವನ್ನು ತಿಳಿದುಕೊಳ್ಳದೆ ಕವಿಯೆಂಬ ನಾಮಾಂಕಿತರಾಗ ಬೇಕೆಂಬುದ್ದೇಶದಿಂದ ತರತರದ ಕವಿತೆಗಳನ್ನು ರಚಿಸುತ್ತಾರೆ. 'ತಿನ್ನಿರಿ ಬಾಳೆ ಹಣ್ಣು'....ಯೆಂದು ಆರಂಭವಾಗುವುದು ಒಂದು ಪದ್ಯ. ಇದನ್ನು ಸಿಕ್ಕಿದ ಸೌಲಭ್ಯದ ದುರುಪಯೋಗವೆನ್ನಬಹುದು....''ಇಂದಿರೇಶನ ತೊರೆಯ ರಸನೆ ಸಂದ ನಿಜ ಬಕುತಿಯಲಿ ಪರಮಾನಂದ ರಸಮಯನಾಗಿ" ಇದು ವ್ಯಾಚ್ಯನ ಕವಿಯ ಒಂದು ಪದ್ಯದ ತುಂಡು. 'ನನ್ನ ಹರಣ ನಿನಗೆ ಕರಣ'...ಇದೊಂದು ನವೀನ ಕವಿಯ ಪದ್ಯದ ತುಂಡು. ಮೊದಲನೆಯ ಪದ್ಯವನ್ನು ಮಥಿಸಿಕೊಳ್ಳಬೇಕಾದರೆ ಕಠಿಣ ಶಬ್ದ ಅರ್ಥವನ್ನು ಸರಿಯಾಗಿ ತಿಳಿದಿರಬೇಕು. ಎರಡನೆಯದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಭಾವನೆಯ ಜೊತ್ತೆಸ ಬೇಕು! 'ಇಡು ಹೆಜ್ಜೆ ನಡೆಮುಂದೆ ಪಡೆ ಪ್ರೇಮ ಬಲದಿಂದೆ ನವ್ಯ ಭಾರತ ಜವಜೆ ಬಾಳಿರಲ್ಲಿ?...' —ಇಲ್ಲಿಯ ಭಾವನೆ ಎಷ್ಟು ಚಂದವಾಗಿಲ್ಲ! ಆಧುನಿಕ ಪದ್ಯ ಸಾಹಿತ್ಯದಲ್ಲಿ ಕವಿಗಳು ಭಾವನೆಯನ್ನು ಬರವಣಿಗೆಯಲ್ಲಿ ರೂಪಾಂತರಿಸುವಾಗ ಕೊಡುವ ಎಲ್ಲಾತೊಡಕುಗಳನ್ನು ತೊಡೆದುಕೊಂಡು ಸಾಧ್ಯವಿದ್ದ ಪ್ರಾಸಇತ್ಯಾದಿ ಚಿಕ್ಕ ಚಿಕ್ಕ ನಿಯಮ್ಯಗಳನ್ನು ಪಾಲಿಸಿಕೊಂಡು ಬಂದಿದ್ದಾರೆ.

"ನಾಟಕ" ಕನ್ನಡದಲ್ಲಿ ಅತೀ ಕಡಿಮೆ ಯಾಗಿತ್ತು ಹಿಂದಿನ ಕಾಲದಲ್ಲಿ. ಈಗ ಆದು ಬಹು ಹೆಚ್ಚಾಗಿದೆ. ಹಿಂದೆ ನಾಟಕ ನವರಸದಿಂದ ತುಂಬಿರಬೇಕೆಂಬ ನಿಯಮವಿತ್ತು. ಹಿಂದಿನ ಕಾನೂನು ಕಟ್ಟಳೆಯನ್ನು ನಾವೀಗ ಮೀರಿದ್ದೇವೆ. ನಮಗದು ಬೇಡವಾಗಿದೆ. ಹಾಸ್ಯರಸಪ್ರಧಾನವಾಗಿದ್ದು, ಶೃಂಗಾರ ರಸ ಆದಕ್ಕೆ ಪೋಷಕವಾಗಿರುವುದೇ ಇಂದಿನ ನಾಟಕಗಳ ಸರ್ವಸಾರವಾಗಿದೆ. ಐತಿಹಾಸಿಕ ನಾಟಕದಲ್ಲಿ ಮಾತ್ರ ವೀರ, ಕರುಣ ರಸ ಕೂಡಿಕೊಂಡಿರುತ್ತದೆ. ನವರಸಭರಿತವಾದ ನಾಟಕವನ್ನು "ಜಡ್ಡು ನಾಟಕ" ಅನ್ನುವಷ್ಟು ನಾವು ಮುಂದುವರಿದ್ದೇವೆ. ಸಾಮಾಜಿಕ ಕಥಾವಸ್ತುವೊಂದನ್ನು ಹಿಡಿದುಕೊಂಡು ಸ್ವೇಚ್ಛೆಯಾಗಿ ನಾಟಕ ಬರೆಯುವುದು ಇಂದಿನ ವಾಡಿಕೆಯಾಗಿದೆ.

ಹಿಂದೊಂದು ಚೌಕಟ್ಟಿನೊಳಗೆ ಸಾಹಿತ್ಯ ಬೆಳೆಯ ಬೇಕಾಗಿತ್ತು. ಈಗ ನಾವು ಆ ಚೌಕಟ್ಟನ್ನು ಹರಿದೊಗೆದಿದ್ದೇವೆ. ಆ ಚೌಕಟ್ಟು ಹಳಗನ್ನಡ ಚೌಕಟ್ಟಿರಬೂ, ನಮಗೀಗ ಅದು ಅನಾವಶ್ಯಕವೆಂದೂ ತಿಳಿದಿದ್ದೇವೆ. ಹೊಸಗನ್ನಡ ಸಾಹಿತ್ಯ ಹೊಸ ಸೃಷ್ಟಿ, ಪ್ರಾಚೀನ ನಿಯಮ ಬಾಹಿರವಾದ ಸೃಷ್ಟಿ ಇದರಿಂದ ಬೆಳೆದಿವೆ ಸಾಂಗವಾಗಿ ನಮ್ಮ ಆಧುನಿಕ ಸಾಹಿತ್ಯ.

ಜನ ಜೀವನದ ಪ್ರತಿಬಿಂಬವೆ ಸಾಹಿತ್ಯವೆಂದು ಹೆ ಳುತ್ತಾ ನಾವು ಮನಬಂದಂತೆ ಸಾಹಿತ್ಯ ಸೃಷ್ಟಿಯನ್ನು ಮಾಡುತ್ತಿದ್ದೇವೆ. ಇದರಿಂದ ಸಾಹಿತ್ಯಕ್ಕೆರುವ ಗೌರವ ಕಡಿಮೆಯಾಗುತ್ತಿದೆ. ಎಲ್ಲೆಗೆ ಹೋದರೂ ಸಾಹಿತಿಗಳ ತಂಡ. ಸಾಹಿತಿಗಳಿಂದ ತುಂಬಿದೆ ನಮ್ಮ ಈ ಕನ್ನಡ ನಾಡು.

ಶಾಸ್ತ್ರದ ಚೌಕಟ್ಟನ್ನು ನಾವು ಕಡಿದೊಗೆದಿದ್ದೇವೆನೋ ಸಹಜ. ಆದರೆ ಆದರ ಸ್ಥಾನದಲ್ಲಿ ಹೊಸ ಚೌಕಟ್ಟನ್ನು ಮಾತ್ರ ನಿರ್ಮಿಸಿಲ್ಲ. ಅದುದರಿಂದ ಹೊಸ ಚೌಕಟ್ಟಿನ ನಿರ್ಮಾಣ ಅತ್ಯಗತ್ಯ. ಆದರೆ ನಿರ್ಮಾಣದಿಂದಲೇ ಸಾಹಿತ್ಯದ ಬೆಲೆ ಹೆಚ್ಚುತ್ತದೆ. ಆದರ ಗೌರವವು ಬಹಳ ವಾಗುತ್ತದೆ.

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಈಗ ಚಾಲ್ತಿಯಲ್ಲಿರುವ ಬ್ಯಾಂಕಿನ ಬಡ್ಡಿ ದರಗಳು ಈ ಕೆಳಗಿನಂತಿವೆ:—

ಸೇವಿಂಗ್ಸ್ ಬ್ಯಾಂಕ್ ಖಾತೆಗಳು — ಸಾ. ಸೇ. 2½

ನಿರಖು ಠೇವಣಾತಿಗಳು

ರೂ. 10,000ದ ಕೆಳಗೆ —(15ರಿಂದ 6 ತಿಂಗಳು) — ಸಾ. ಸೇ. 4½

— Do — (7ರಿಂದ 24 ತಿಂಗಳು) — ಸಾ. ಸೇ. 4½

ರೂ. 10,000 ಮತ್ತು ಮೇಲೆ (15ರಿಂದ 24 ತಿಂಗಳು) — ಸಾ. ಸೇ. 4½

ನಿಜ ಬಣ್ಣ ಬಯಲಾದಾಗ

(೨ನೇ ಪುಟದಿಂದ)

"ದಿವಾಳಿತನ"ಕ್ಕಾಗಿ ತಿರಸ್ಕಾರ ಮೂಡಿತು. ಶಶಿಯ ಬಗೆಗೆ ನನ್ನ ಮೋಹವಿತ್ತು, ಆಕರ್ಷಣೆಯಿತ್ತು ಇನ್ನೂ. ಆದರೆ ಮಗಿಲು ಮುಟ್ಟಿದುದು ಕೆಳಗಿಳಿಯುವಂತಾಗಿತ್ತು. ಅಲ್ಲದೆ ಸುಧಾಕರನ ಗತಿ ನನಗೊಪಗದೆ ಈ ಚಕ್ರದಿಂದ ಪಾರಾದೆ ಶ್ಲಾಘ್ಯ ಎಂದು ತೃಪ್ತಿಯೂ ಇತ್ತು.

ಈ ಮಧ್ಯದಲ್ಲಿ ಯಶವಂತರಾಯರೂ ಸುಧಾಕರನೂ ಬಹಳ ಹತ್ತಿರದವರಾದರು. ಆಗಾಗ ಊಟ, ವಿನೋದಗಳಲ್ಲಿ ಯೂ ಸುಧಾಕರ ಭಾಗಿಯಾಗುತ್ತಿದ್ದ. ಬರಬರುತ್ತ ಅವರಿಬ್ಬರ ಬಗೆಗೂ ನನ್ನಲ್ಲಿ ತಿರಸ್ಕಾರ ಮೂಡಿತು. ಶಶಿಯ ನೆನಪಿನಿಂದ ಮಾತ್ರ ಮರುಗುತ್ತಿದ್ದೆ.

ಹೀಗೆಯೇ ಒಂದೆಂಡು ತಿಂಗಳು ಸಾಗಿದುವು, ಒಂದು ಸಲ ನಾಲ್ಕೈದು ದಿನಗಳ ವರೆಗೆ ಸುಧಾಕರ ಬ್ಯಾಂಕಿಗೆ ಬರಲಿಲ್ಲ. ಯಶವಂತರಾಯರೂ ಕಂಡುಬರಲಿಲ್ಲ. ಕಾಲೇಜಿಗೆ ಹೋಗುವ ಶಶಿಯೂ ಕಾಣಸಿಗಲಿಲ್ಲ ನನಗೆ ಆಶ್ಚರ್ಯವಾಗಲಿಲ್ಲ. ನನಗೆ ಆಶ್ಚರ್ಯವಾಯಿತು. ನಾನು ಚಡಪಡಿಸುತ್ತಲೂ ಇದ್ದೆ. ಯಾರೇ ಇದ್ದರೂ, ಏನೇ ಆಗದ್ದರೂ ಶಶಿಯ ಸುಧುರ ಸುಂದರ ಆಕೃತಿ ಕಣ್ಣೆಮುರಿನಿಂದ ಮರೆಯಾಗುವಂತಿರಲಿಲ್ಲ.

ನಾಲ್ಕೈದು ದಿನಗಳ ನಂತರ ಸುಧಾಕರ ಬಂದ ಆವನಲ್ಲಿ ತುಂಬಾ ಬದಲಾವಣೆಯಾದಂತಿತ್ತು.

ಮರುದಿನ! ಕೇಳಿಬಂದ ವಾರ್ತೆ ನನ್ನ ನ್ನೊಮ್ಮೆ ಪಾತಾಳಕ್ಕೂ ಆಕಾಶಕ್ಕೂ ಎತ್ತಿ ನೆಟ್ಟಗೆ ನಿಲ್ಲಿಸಿತು ನನ್ನ ಮೆದುಳು ಪಂಕವಾಯಿತು. ನಾನು ವಿಸ್ಮಿತನಾದೆ. ಎಲ್ಲರೂ ಹೇಳುತ್ತಿದ್ದರು "ಶಶಿಗೂ ಸುಧಾಕರನಿಗೂ ರಿಜಿಸ್ಟರ್ಡ್ ಮದುವೆಯಾಯಿತಂತೆ" ನಾನು ನಂಬಲಿಲ್ಲ. ಆದರೆ ನಂಬದೆ ನಿರ್ವಾಹವಿರಲಿಲ್ಲ ಶಶಿಯ ಕ್ರೂರ ಜ್ಞೆ ಬಯಕೆಗಳನ್ನು ತೂರಿಬಿಟ್ಟಿ. ಸಾಧಿಸಿಕೊಂಡ ಸುಧಾಕರನಮೇಲ್ಕೆ ತಿರಸ್ಕಾರವನ್ನುಮರೆತೆ.ಅವನಲ್ಲೂ ಮೊದಲಿನಂತೆಯೇ ಮಾತನಾಡಲುರಂಭಿಸಿದೆ. ಇಬ್ಬರೂ ಒಂದು ದಿನವಾದರೂ ಶಶಿಯ ಸುದ್ದಿ ಮಾತ್ರ ಎತ್ತುತ್ತಿರಲಿಲ್ಲ ಸುಧಾಕರ ಯಶವಂತ ರಾಯರಲ್ಲೇ ಇರುತ್ತಿದ್ದ. ಒಂದು ರೀತಿಯಲ್ಲಿ "ಮನೆಯಳಿಯ" ಎನ್ನಬಹುದು.

ನಾವಿಬ್ಬರೂ ಈಗ ಅಪ್ರವಿತ್ರರು ಶಶಿಯ ವಿಷಯವೊಂದನ್ನು ಬಿಟ್ಟು ನಾವಿಬ್ಬರೂ ಮನಬಿಚ್ಚಿ ಮಾತನಾಡುತ್ತಿದ್ದೆವು.

ದಿನಗಳುರುಳಿದವು ಸುಧಾಕರನಲ್ಲೂ ತುಂಬಾ ಬದಲಾವಣೆಯಾಗಿತ್ತು. ಅವನು ತುಂಬಾ ಬಡವನಾಗಿದ್ದ. ಶಶಿ ಕಾಲೇಜಿಗೆ ಹೋಗುತ್ತಲೇ ಇದ್ದಳು. ಯಶವಂತ ರಾಯರೂ ತೃಪ್ತಿಯಿಂದಿದ್ದರು. ಸುಧಾಕರನನ್ನೆಲ್ಲರೂ ಕಣ್ಣೆತ್ತಿ ನೋಡುತ್ತಿದ್ದರೂ, ಅವನ ಕುರಿತೇ ಮಾತನಾಡುತ್ತಿದ್ದರೂ ಆದ, ಈಗ ಕಡಿಮೆಯಾಗಿತ್ತು. ಅದರೂ ಇಲ್ಲದಿರಲಿಲ್ಲ

ಸುಧಾಕರ ಏನೋ ವೇದನೆ ಅನುಭವಿಸುತ್ತಿದ್ದಂತಿತ್ತು. ಅವನ ಮುಖ ಬಿಳುಪಾಗಿ ಕಾಣುತಿತ್ತು. ಬ್ಯಾಂಕಿನಲ್ಲಿ ನಾನೇ ನೋಡುತ್ತಿದ್ದೆ. ಸ್ವಲ್ಪ ಕೆಲಸ ನಡೆದೊಡನೆ ಆತ ಸುಸ್ತಾಗುತ್ತಿದ್ದ. ಹೆಚ್ಚಾಗಿ ಅವನು ಮೌನಿಯಾಗಿದ್ದ. ನೋಡಿ ಹೋದವರಂತೆ, ಕದ್ದವರಂತಿತ್ತು ಅವನ ಅಳುಕಿನ ವರ್ತನಭಾವ. ಒಂದು ದಿನ ಸುಧಾಕರ ಬ್ಯಾಂಕಿಗೆ ಬಂದಿರಲಿಲ್ಲ; ಎಲ್ಲೂ ಕಾಣಸಿಗಲಿಲ್ಲ. ನಾನು ಯೋಚಿಸುತ್ತಾ ಬ್ಯಾಂಕಿಗೆ ಹೋದಾಗ ರಾಮನ್ ಹೇಳುತ್ತಿದ್ದ ಅಕೌಂಟೆಂಟ್ ಅಯ್ಯಂಗಾರ ನೋದಿನೆ.

"ನಿನಗೇನಯ್ಯಾ ಗೊತ್ತು? ಯಶವಂತರಾಯರು ಹುಟ್ಟಿದ್ದು ಹಾದರದಲ್ಲಿ, ಮಾಡಿದ್ದೂ ಹಾದರ. ಹುಟ್ಟಿದುದೆಲ್ಲ ಮಾಡಿದ ಅನಾಚಾರದಿಂದ ನೀಚಕವನುಭವಿಸುವ ಮಕ್ಕಳು. ಮಾಪ, ಈತನಿಂದಾಗಿ ಅವುಗಳ ಜೀವನ ಹಾಳಾಯಿತು. ಆ ದೊಡ್ಡ ಹುಡುಗಿ ಹೇಗೆ ತೀರಿಹೋಯಿತು ಅಂತಿಮತ್ತೆ? ಏನೂ ಅರಿಯದ ಸುಧಾಕರ ಅವಕ್ಕೆ ಬಲಿಯಾದ ಸ್ತ್ರೀಯರಲ್ಲಿ ಅವು ಬೇಗನೆ ತಿಳಿಯಲಾರದು. ಗಂಡನೋ ಬೇಗನೆ ಬಲಿಯಾಗುತ್ತಾನೆ ಸ್ತ್ರೀಯಲ್ಲಿ ಗುಪ್ತವಾಗಿದ್ದು, ಬಹಿರಂಗದಲ್ಲಿ ಜೆಲ್ಲಿಮೀನ ಪರಿಣಿಯಾಗಿ ಕಾಣುತ್ತಾಳೆ. ಗಂಡನೋ ಒಮ್ಮೆಲೇ ಮಣ್ಣುಮುಕ್ಕುತ್ತಾನೆ. ಹೌದಯ್ಯ, ಅಂತಹ ಅಪ್ರತಿಮ ಸುಂದರಿ ಶಶಿಗೆ, ಆ ಶ್ರೀಮಂತ ಕುಟುಂಬಕ್ಕೆ ಬ್ಯಾಹ್ಮಣ ವರ ಸಿಕ್ಕಲಿಲ್ಲವೇನಯ್ಯಾ ಏನೇ ಇದ್ದರೂ ಹರಿಯದ ಹುಡುಗಿಗೆ ಗಂಡು ಹುಡಕಬೇಕುತಾನೆ ತಂದೆ? ಯಶವಂತರಾಯ ಯೋಜಿಸಿ ಬೇರೆ ದಾರಿಯಿಲ್ಲದೆ ಹೀಗೆ ಮಾಡಿದ. ಈತ ಸತ್ತರೆ ಇನ್ನೊಬ್ಬ ತಾನೆ?"

ಎಲ್ಲರೂ ಮಂಕರಾಗಿ ಕುಳಿತಿದ್ದರು ಕೆಲವರ ಮುಖದಲ್ಲಿ ವಿಕಟ ನಗುವೂ, ಕೆಲವರ ಮುಖದಲ್ಲಿ ಕರುಣೆಯ ಭಾವವೂ ಸುಳಿಯುತ್ತಿತ್ತು. ಕ್ಲಾರ್ಕ್ ಶಿವಾನಂದ ಉರ್ಧವಾಗದವನಾಗಿ ಕೇಳಿದ:

'ಏನಾಗಿತ್ತು ಸುಧಾಕರನಿಗೆ? ರಾಮನ್?"

"ನೀನೋ ಶುದ್ಧ ಬಿಪ್ಪೆ ಸುಧಾಕರನನ್ನು ಮದ್ರಾಸಿಗೆ ಆಪತ್ಕೆಗೊಯ್ದಿದ್ದಾರಂತೆ. ಆದೇನೋ ಗನ್‌ರೀಯಾಪೋ ಸಿಪಿಲಿಸ್ ಎನೋ ಅಂತಾರಲ್ಲಾ...."

ನನ್ನ ಸರ್ವಾಂಗ ಕಂಪಿಸಿತು ಅವ್ಯಕ್ತ ಭೀತಿಯಿಂದ ದೇಹವು ನಡುಗಿಹೋಯಿತು. ಚಳಿಗೆ ತಣ್ಣೀರಿನಲ್ಲಿ ಮುಳುಗಿಸಿದಂತಾಯಿತು. ಭಯಂಕರ ಕಲ್ಪನೆಯ ವೇಗನೆಯಿಂದ ಮೈ, ಮನ ತಲ್ಲಣಿಸಿತು. ಸುಧಾಕರನ ನೆನಪಾಗಿ ಮನವೂ ಮರುಗಿತು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಲಲಿತಕಥೆಗಳು:—(ಮಕ್ಕಳ ಕಥಾಸಂಕಲನ) ಲೇಖಕ ಶ್ರೀ ಕೆ. ಜಿ. ಸಟ್ಟಿ ಕಡಂಡಿ. ಪ್ರಕಾಶಕರು ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು-೨ ಬೆಲೆ ೨೫ ನಯೇಪೈಸೆ. ಪುಟ ೭೭

ವ್ಯಾರ್ಥಮಿಕ ಶಾಲೆಗಳ ೩ ಮತ್ತು ೪ನೆ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಮೌನ ಓದಿನ ಉಪಯೋಗಾರ್ಥವಾಗಿ ಈ ಕಥಾಸಂಕಲನವನ್ನು ಬರೆದಿರುವುದೆಂದು ಲೇಖಕರು ಹೇಳಿಕೊಂಡಿದ್ದಾರೆ ಇದರಲ್ಲಿ ಒಟ್ಟು ೧೧ ಸಣ್ಣಸುತ್ತಿಳ ಕಥೆಗಳಿವೆ. ವಿದ್ಯಾರ್ಥಿಗಳಿಗೆ ಬೇರೆ ಬೇರೆ ಶೈತಿಯನ್ನು ಪರಿಜ್ಞಾನುಕಾರೀ ವಿಧಾನದಿಂದ ಮಂದಪ್ಪುಪಾಡುವಲ್ಲಿ ಕಾರಂತಾನಮ್ಮಿತ ಪದ್ಧತಿಯನ್ನು ಅನುಸರಿಸಲಾಗಿದೆ. ಕೆಲವು ಕಥೆಗಳಲ್ಲಿ ಕಥೆಗಿಂತ ಪೀಠಿಕೆಯೇ ಉದ್ದವಾದಂತಿದೆ ಪಾಲಿನ ನ್ಯಾಯತೀರ್ಮಾನದಂತಹ ಒಂದೆರಡು ಕಥೆಗಳನ್ನು ಈ ಪೊಸರೇ ನಿನೆಮದಲ್ಲಿರಬೇಕಾಗಿತ್ತು ಎಂದೆನಿಸುತ್ತದೆ ಕೆಲವು ಕಡ

ನಿಮಗೆ ಸುಖ ಜೀವನವನ್ನು ಬದುಕಬೇಕೆ?

ಮನಶ್ಶಾಸ್ತ್ರವನ್ನು ಕಲಿಯಿರಿ

ಡಾ. ಕೆ. ಪುರುಷೋತ್ತಮ ಮಲ್ಯ.

ಸೈಕೊಲೊಜಿ ಅಥವಾ ಮನೋವಿಜ್ಞಾನವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಉಪಯೋಗಿಯಾಗಿದೆ. ಮೊದಲು ಇವರ ವ್ಯಾವಹಾರಿಕ ಉಪಯೋಗವನ್ನು ತೆಗೆದುಕೊಳ್ಳಿ. ತಾಯಿಗೆ ತನ್ನ ಮಕ್ಕಳ ಲಾಲನೆ ಪಾಲನೆ ಮಾಡುವ ರೀತಿಯನ್ನೂ, ಬಾಲಕರ ವಿಕಾಸದ ವಿಧಾನವನ್ನೂ, ಚಿಕ್ಕ ಮಕ್ಕಳೊಡನೆ ವ್ಯವಹಾರಮಾಡುವ ಕ್ರಮವನ್ನೂ ಇದು ತಿಳಿಸುತ್ತದೆ. ಇದರಿಂದ ಮಗುವಿನ ವಿಕಾಸಕ್ಕೆ ತುಂಬ ಸಹಾಯವಾಗುವುದು. ಪ್ರತಿಯೋರ್ವ ನಿವಾಹಿತ ಪುರುಷನಿಗೆ ತನ್ನ ಪತ್ನಿಯೊಡನೆ ಸುವ್ಯವಸ್ಥಿತ ಸುಖೀ ಜೀವನವನ್ನು ನಡೆಸಲು ಇದರ ಜ್ಞಾನವು ಅತಿ ಅಗತ್ಯ. ಮನೋವಿಜ್ಞಾನದ ಸಹಾಯದಿಂದ ಜೀವನವನ್ನು ಸುಗಮಗೊಳಿಸಬಹುದು. ನಮ್ಮ ಸಂಸ್ಕೃತಿಯ ನಾಲ್ಕು ಆಶ್ರಮ ಧರ್ಮಗಳು ಇದರ ತಳಹದಿಯ ಮೇಲೆಯೇ ಕಟ್ಟಲ್ಪಟ್ಟವೆ. ಬಾಲಕರ ವಿಕಾಸವು ಸ್ವಾಭಾವಿಕ ಪ್ರವೃತ್ತಿಗಳಿಗನುಸಾರವಾಗಿಯೇ ಆಗಬೇಕೆನ್ನುವುದು ಮನೋವಿಜ್ಞಾನದ ಒಂದು ಮೂಲ ಸಿದ್ಧಾಂತ. ಅವರ ಸ್ವಾಭಾವಿಕ ಪ್ರವೃತ್ತಿಗಳ ಜ್ಞಾನವಿಲ್ಲದಿದ್ದರೆ ಅವರ ಬೆಳವಣಿಗೆಗೆ ತೊಂದರೆಯಾಗುವುದು.

ಒಬ್ಬ ಮನೋವಿಜ್ಞಾನಿಯ ಬಳಿಗೆ ಸಲಹೆಕೇಳಲು ಹೆಂಗಸೊಬ್ಬಳು ಬಂದಿದ್ದಳು. ಅವಳ ಮಗುವು ಹಾಲು ಕುಡಿಯುವುದಿಲ್ಲವೆಂಬುದೇ ಅವಳ ಸಮಸ್ಯೆ. ಅವಳ ಮನಸ್ಸಿನಲ್ಲಿ ಯಾವುದೊಂದು ಯಂತ್ರ, ತಂತ್ರದ ಸಹಾಯ ಪಡೆಯಬೇಕೆಂದಿತ್ತು. ಮಕ್ಕಳು ಯಾವಾಗಲೂ ಅನುಕರಣಶೀಲರಾಗಿರುತ್ತಾರೆ. ಮನೋವಿಜ್ಞಾನಿಯು ತಾಯಿಗೆ ಮಗುವಿನ ಎದುರಿಗೆ ಸ್ವತಃ ಹಾಲು ಕುಡಿಯುವ ಸಲಹೆಕೊಟ್ಟನು. ಅಲ್ಲದೆ ಹಾಲಿನ ಪ್ರಶಂಸೆಮಾಡಲು ತಿಳಿಸಿದನು. ಕೆಲವೇ ದಿನಗಳಲ್ಲಿ ಮಗು ಕೂಡಾ ಹಾಲು ಕುಡಿಯತೊಡಗಿತು. ಹೀಗೆ ಮಗುವಿನ ಅನುಕರಣ ಪ್ರವೃತ್ತಿಯಿಂದ ಕಹಿ ಮದ್ದುಗಳನ್ನು ಕುಡಿಯುವಂತೆ, ಸದ್ಗುಣಗಳನ್ನು ಕಲಿಯುವಂತೆ ಮಾಡಬಹುದು. ಇಂತಹ ಅನೇಕ ವಿಷಯಗಳು ಮಾತೆಯರಿಗೆ ತಿಳಿದಿರುವುದಅಗತ್ಯ. ತಂದೆಗೆ ಮನೋವಿಜ್ಞಾನದ ಸಿದ್ಧಾಂತಗಳ ಪರಿಚಯವಿಲ್ಲದಿದ್ದರೆ ಮನೆಯಲ್ಲಿ ಶಾಂತಿ ನೆಲೆಸಲಾರದು. ತಂದೆ ಮಕ್ಕಳೊಳಗೆ ಕಲಹವು ಎಂದೂ ತಪ್ಪದು. ಒಮ್ಮೆ ತಂದೆ-ಮಕ್ಕಳೊಳಗೆ ಜಗಳವಾಯಿತು. ಮಗನು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದನು. ಅವನಿಗೆ ಮಂಡೆ ಕಲಿಯುವ ಮನಸ್ಸೂ, ಅನುಕೂಲತೆಯೂ ಇತ್ತು. ತಂದೆಯು ಅವನನ್ನು ವ್ಯವಹಾರಿಕ ರಂಗಕ್ಕೆಳಿಸಲು ಪ್ರಯತ್ನಿಸುತಿದ್ದನು. ಇದರಿಂದ ಜಗಳ ಉಂಟಾಗಿ ಅನೇಕ ಅಸಂಬದ್ಧ ಮಾತುಗಳು ಹೊರಟವು. ಪರಿಣಾಮವಾಗಿ ಮಗನು ಮನೆ ಬಿಟ್ಟು ಓಡಿಹೋದನು. ಹೀಗೇಕಾಯಿತು? ತಂದೆಗೆ ಯಾವಾಗಲೂ ಚಿಕ್ಕವರ ಅವಶ್ಯಕತೆಗಳನ್ನು ಮೊದಲು ಕೂತಿಗೊಳಿಸಿ ನಂತರ ದೊಡ್ಡವರ ಅವಶ್ಯಕತೆಗಳೆಂಬ ವಿಷಯದ ಜ್ಞಾನವಿರಲಿಲ್ಲ. ಮೊದಲಲ್ಲಿ ಚಿಕ್ಕಮಕ್ಕಳ ಅವಶ್ಯಕತೆಗಳನ್ನು ಪೂರ್ತಿಗೊಳಿಸಿದಲ್ಲಿ ನಂತರ ಅವರು ತಮಗೆ ಕೊಟ್ಟ ಯಾವ ಕಾರ್ಯವನ್ನಾದರೂ ಮಾಡಲು ತಯಾರಾಗುವರು. ಬಾಲಕರ ಪ್ರವೃತ್ತಿಯು ಆಟದ ಕಡೆಗಿರುತ್ತದೆ. ಅವಂ ಈ ಪ್ರವೃತ್ತಿಯನ್ನು ದಮನಗೊಳಿಸಿ ಅವರನ್ನು ಓದಿಸುವ ಪ್ರಯತ್ನ ಮಾಡಿದರೆ ಪರಿಣಾಮವು ಕೆಟ್ಟದಾಗುವುದು.

ಚಿಕ್ಕ ಪುಟ್ಟ ಮನೋ ವೈಜ್ಞಾನಿಕ ವಿಷಯಗಳ ತಿಳುವಳಿಕೆ ಇಲ್ಲದಿರುವುದು ಮನೆಯನ್ನು ಯುದ್ಧರಂಗವಾಗಿ ಮಾಡುವುದು. ಪ್ರತಿಯೋರ್ವ ನಿವಾಹಿತ ಪುರುಷನಿಗೆ ತನ್ನ ಪತ್ನಿಯೊಡನೆ ಸುವ್ಯವಸ್ಥಿತ ಸುಖೀ ಜೀವನವನ್ನು ನಡೆಸಲು ಇದರ ಜ್ಞಾನವು ಅತಿ ಅಗತ್ಯ. ಮನೋವಿಜ್ಞಾನದ ಸಹಾಯದಿಂದ ಜೀವನವನ್ನು ಸುಗಮಗೊಳಿಸಬಹುದು. ನಮ್ಮ ಸಂಸ್ಕೃತಿಯ ನಾಲ್ಕು ಆಶ್ರಮ ಧರ್ಮಗಳು ಇದರ ತಳಹದಿಯ ಮೇಲೆಯೇ ಕಟ್ಟಲ್ಪಟ್ಟವೆ. ಬಾಲಕರ ವಿಕಾಸವು ಸ್ವಾಭಾವಿಕ ಪ್ರವೃತ್ತಿಗಳಿಗನುಸಾರವಾಗಿಯೇ ಆಗಬೇಕೆನ್ನುವುದು ಮನೋವಿಜ್ಞಾನದ ಒಂದು ಮೂಲ ಸಿದ್ಧಾಂತ. ಅವರ ಸ್ವಾಭಾವಿಕ ಪ್ರವೃತ್ತಿಗಳ ಜ್ಞಾನವಿಲ್ಲದಿದ್ದರೆ ಅವರ ಬೆಳವಣಿಗೆಗೆ ತೊಂದರೆಯಾಗುವುದು.

ಒಬ್ಬ ಮನೋವಿಜ್ಞಾನಿಯ ಬಳಿಗೆ ಸಲಹೆಕೇಳಲು ಹೆಂಗಸೊಬ್ಬಳು ಬಂದಿದ್ದಳು. ಅವಳ ಮಗುವು ಹಾಲು ಕುಡಿಯುವುದಿಲ್ಲವೆಂಬುದೇ ಅವಳ ಸಮಸ್ಯೆ. ಅವಳ ಮನಸ್ಸಿನಲ್ಲಿ ಯಾವುದೊಂದು ಯಂತ್ರ, ತಂತ್ರದ ಸಹಾಯ ಪಡೆಯಬೇಕೆಂದಿತ್ತು. ಮಕ್ಕಳು ಯಾವಾಗಲೂ ಅನುಕರಣಶೀಲರಾಗಿರುತ್ತಾರೆ. ಮನೋವಿಜ್ಞಾನಿಯು ತಾಯಿಗೆ ಮಗುವಿನ ಎದುರಿಗೆ ಸ್ವತಃ ಹಾಲು ಕುಡಿಯುವ ಸಲಹೆಕೊಟ್ಟನು. ಅಲ್ಲದೆ ಹಾಲಿನ ಪ್ರಶಂಸೆಮಾಡಲು ತಿಳಿಸಿದನು. ಕೆಲವೇ ದಿನಗಳಲ್ಲಿ ಮಗು ಕೂಡಾ ಹಾಲು ಕುಡಿಯತೊಡಗಿತು. ಹೀಗೆ ಮಗುವಿನ ಅನುಕರಣ ಪ್ರವೃತ್ತಿಯಿಂದ ಕಹಿ ಮದ್ದುಗಳನ್ನು ಕುಡಿಯುವಂತೆ, ಸದ್ಗುಣಗಳನ್ನು ಕಲಿಯುವಂತೆ ಮಾಡಬಹುದು. ಇಂತಹ ಅನೇಕ ವಿಷಯಗಳು ಮಾತೆಯರಿಗೆ ತಿಳಿದಿರುವುದಅಗತ್ಯ. ತಂದೆಗೆ ಮನೋವಿಜ್ಞಾನದ ಸಿದ್ಧಾಂತಗಳ ಪರಿಚಯವಿಲ್ಲದಿದ್ದರೆ ಮನೆಯಲ್ಲಿ ಶಾಂತಿ ನೆಲೆಸಲಾರದು. ತಂದೆ ಮಕ್ಕಳೊಳಗೆ ಕಲಹವು ಎಂದೂ ತಪ್ಪದು. ಒಮ್ಮೆ ತಂದೆ-ಮಕ್ಕಳೊಳಗೆ ಜಗಳವಾಯಿತು. ಮಗನು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದನು. ಅವನಿಗೆ ಮಂಡೆ ಕಲಿಯುವ ಮನಸ್ಸೂ, ಅನುಕೂಲತೆಯೂ ಇತ್ತು. ತಂದೆಯು ಅವನನ್ನು ವ್ಯವಹಾರಿಕ ರಂಗಕ್ಕೆಳಿಸಲು ಪ್ರಯತ್ನಿಸುತಿದ್ದನು. ಇದರಿಂದ ಜಗಳ ಉಂಟಾಗಿ ಅನೇಕ ಅಸಂಬದ್ಧ ಮಾತುಗಳು ಹೊರಟವು. ಪರಿಣಾಮವಾಗಿ ಮಗನು ಮನೆ ಬಿಟ್ಟು ಓಡಿಹೋದನು. ಹೀಗೇಕಾಯಿತು?

ಸ್ವಾಭಾವಿಕ ಪ್ರವೃತ್ತಿಗಳಿಗೆ ವಿಕಾಸಗೊಳ್ಳಲು ಅವಕಾಶ ದೊರಕದಿದ್ದರೆ, ಅದಕ್ಕೆ ತಡೆಯುಂಟಾದರೆ ಮನಸ್ಸಿನ ಮೇಲೆ ಬಹಳ ಕೆಟ್ಟ ಪ್ರಭಾವ ಬೀಳುತ್ತದೆ. ಮನವು ವಿಕೃತವಾಗುವುದರಿಂದ ಶರೀರವೂ ವಿಕೃತವಾಗುವುದು. ಒಮ್ಮೆ ಬೋಂಬು ಬಿದ್ದ ಶಬ್ದ ಕೇಳಿ ಒಬ್ಬ ವ್ಯಕ್ತಿಯು ವಾತರೋಗ ಪೀಡಿತನಾದನು. ಅವನು ತಾನು ಸಾಹಸಿಯೂ, ಧೈರ್ಯಶಾಲಿಯೂ ಎಂದು ತಿಳಿದು ಕೊಂಡಿದ್ದನು. ಬೋಂಬು ಬಿದ್ದ ಶಬ್ದದಿಂದಾಗಿ ಹೆದರಿಕೊಂಡದ್ದಲ್ಲದೆ, ತಾನು ಹೆದರಿದ್ದನ್ನು ಇತರರು ತಿಳಿದುಕೊಂಡಿರಬಹುದೆಂದೂ ಶಂಕಿಸಿದನು. ಈ ಎರಡು ವಿಕೃತ ಭಾವನೆಗಳಿಂದ ಅವನ ಮನಸ್ಸಿನ ಮೇಲೂ, ಶರೀರದ ಮೇಲೂ ದುಷ್ಪರಿಣಾಮ ಉಂಟಾಯಿತು. ಆದರೆ ಮೊದಲಿನಿಂದಲೂ ಹೆದರು ತಿದ್ದವರಿಗೆ ಏನೂ ಆಗಲಿಲ್ಲ. ಕಾರಣ ಮೊದಲೂ ಅವರು ಹೆದರುತಿದ್ದುದರಿಂದ ಆನಂತರದ ಭಯದಿಂದಾಗಿ ಅವರ ಮೇಲೇನೂ ಪರಿಣಾಮವಾಗಲಿಲ್ಲ. ಹೀಗೆ ನಮ್ಮ ಮಾನಸಿಕ ಸ್ಥಿತಿಯು ಸಂಪೂರ್ಣ ಪರಿಣಾಮವು ನಮ್ಮ ಶರೀರದ ಮೇಲೆ ಬೀಳುವುದನ್ನು ಅನೇಕ ಸಂದರ್ಭಗಳಲ್ಲಿ ನಾವು ನೋಡಬಹುದು. ಭೂತ ಭಯದಿಂದ ಕಾಹಿಲೆ ಬೀಳುವುದು, ಸರ್ಪದಂಶವಾಗದಿದ್ದರೂ ಅದರ ಭಯದಿಂದಲೇ ಮರಣ ಹೊಂದುವುದು ಇವೆಲ್ಲಾ ಮನಸ್ಸಿನ ಮೇಲಿನ ಪ್ರಭಾವದ ಕಾರಣಗಳಿಂದಲೇ ರೋಗದ ಮೂಲವು ಮನಸ್ಸಿನಲ್ಲಿದೆ. ಅಂತಹ ರೋಗಗಳಿಗೆ ದೈಹಿಕ ಉಪಚಾರಗಳಿಂದ ನಾಕಷ್ಟು ಲಾಭವಾಗುವುದಿಲ್ಲ. ಇದಕ್ಕೆ ಮನೋವಿಜ್ಞಾನವೇ ತಕ್ಕ ಉಪಶಮನವನ್ನು ಮಾಡಬಲ್ಲದು.

ಪ್ರಸನ್ನ ಚಿತ್ತರಾಗಿರುವ ಸಮಯದಲ್ಲಿ ನಮಗೆ ಮಕ್ಕಳ ಎಂತಹ ಗಲಭೆಯೂ ದೀಸರವನ್ನು ತರಲಾರದು. ಆದ್ದರಿಂದ ಪ್ರತಿಯೋರ್ವ ವ್ಯಕ್ತಿಯೂ ಸಣ್ಣ ಕಾರಣಗಳಿಂದ ಮಾನಸಿಕ ಶಾಂತಿಗೆ ಭಂಗ ತಂದುಕೊಳ್ಳಬಾರದೆಂಬುದನ್ನು ಮನೋವಿಜ್ಞಾನವು ನನಗೆ ತಿಳಿಸುತ್ತದೆ. ಇದು ಬಾಲ್ಯಾವಸ್ಥೆಯಿಂದ ವೃದ್ಧಾಪ್ಯದ ವರೆಗೆ ನಮಗೆ ಸಹಾಯಮಾಡಬಲ್ಲದು. ಮಾನವ ಸ್ವಭಾವದ ಜ್ಞಾನವಿಲ್ಲದ ಕಾರಣ ನಾವು ಅಶಾಂತಿಯಿಂದ ತೊಳಲಾಡುವೆವು.

ಆತ್ಮ ಬಲವಿರುವ ವ್ಯಕ್ತಿಗಳು ರೋಗಗ್ರಸ್ತರಾಗುವುದು ಅಪರೂಪ. ಅನೇಕ ಯೋಗಿಗಳು ಯಾವ ಆಹಾರವನ್ನೂ ಸೇವಿಸದೆ, ಸಂಪೂರ್ಣ ಸ್ವಾಸ್ಥ್ಯದಿಂದ ಕೂಡಿದ್ದು, ತಮ್ಮ ಕಾರ್ಯಗಳನ್ನು ನಿಯಮಿತ ರೀತಿಯಿಂದ ಮಾಡುತ್ತಾರೆ. ಇದು ಅವರ ಆತ್ಮ ಬಲದಿಂದಲೂ, ಮನಸ್ಸಿನ ಏಕಾಗ್ರತೆಯಿಂದಲೂ ಸಾಧ್ಯವಾಗುವುದು. ಮನೋವಿಜ್ಞಾನವು ನಮಗೆ ಆತ್ಮ ಜ್ಞಾನವನ್ನೂ, ಮನದ ಕೇಂದ್ರೀಕರಣದ ವಿಧಿಗಳನ್ನು ಹಾಗೂ ಅದರ ಶಕ್ತಿಯನ್ನೂ ತಿಳಿಸುವುದು.

ಮನೋವಿಜ್ಞಾನದ ಪೂರ್ಣತೆಯು ಅಧ್ಯಾತ್ಮದಲ್ಲಿದೆ. ಇದು ನನಗೆ ಆತ್ಮ ಸುಧಾರಣೆಯನ್ನು ಕಲಿಸುತ್ತದೆ. ಚಿತ್ತದ ಏಕಾಗ್ರತೆಯಿಂದಲೂ, ವಿಚಾರದಿಂದಲೂ ಆತ್ಮಜ್ಞಾನವನ್ನು ಪಡೆಯಬಹುದು.

ಆತ್ಯುಚ್ಚ ಮಟ್ಟದ ಮನದಿಂದ ಭೂತ, ವರ್ತಮಾನ, ಭವಿಷ್ಯತ್ ವಿಷಯಗಳ ಜ್ಞಾನವನ್ನು ಪಡೆಯಬಹುದು. ಹಾಗೆಯೇ ಮನಸ್ಸಿನ ಅದ್ಭುತ ಶಕ್ತಿಯಿಂದಾಗಿ ಯಾವುದೊಂದು ವ್ಯಕ್ತಿಯ ಭೂತ, ಭವಿಷತ್ತುಗಳನ್ನೂ ತಿಳಿಯಬಹುದು. ಕೆಲವು ಮಹಾ ವ್ಯಕ್ತಿಗಳು ಕುರುಕ್ಷೇತ್ರದ ಕಲ್ಲು ಗಳನ್ನು ನೋಡಿಯೇ ಅಲ್ಲಿ ನಡೆದ ಘಟನೆಗಳನ್ನು ವರ್ಣಿಸಿದ್ದಾರೆ.

ವಾಸ್ತವವಾಗಿ ಇಡೀ ಬ್ರಹ್ಮಾಂಡವೇ ಒಂದು ವ್ಯಾಪಕ ಚೇತನವಾಗಿದೆ. ನಾವೆಲ್ಲರೂ ಆದರ ಅಂಗವಾಗಿದ್ದೇವೆ. ಭೇದ ಭಾವನೆಯ ಬೆಳೆದಂತೆಲ್ಲಾ ಅನೇಕ ತೊಂದರೆಗಳು ಬಂದೊದಗುವುವು. ಏಕತೆಯ ಕಡೆಗೆ ಮುನ್ನಡೆದಂತೆ ನಮ್ಮ ವಿಶ್ವಾಸವು ಬೆಳೆದು ಉನ್ನತಿಯ ಪಥಿಕರಾಗುವೆವು. ಎಲ್ಲರ ಆತ್ಮವೂ ಒಂದೇ ಆಗಿದೆ. ಈ ಭಾವನೆಯಿಂದ ದೂರ ಹೋದಂತೆ ನಮಗೆ ಮಿಶ್ರ ಕಷ್ಟಗಳು ಬಂದೊದಗುವುವು. ಏಕತೆಯ ಅನುಭವವು ಬೆಳೆದಂತೆ ಸುಖ ಶಾಂತಿಗಳು ಲಭಿಸುವುವು.

ಮನೋವಿಜ್ಞಾನವೂ ಆತ್ಮಜ್ಞಾನವೂ ಒಂದೇ. ಮನಸ್ಸಿನ ಪೂರ್ಣ ರೂಪವನ್ನು ತಿಳಿಯುವುದೇ ಆತ್ಮಜ್ಞಾನವಾಗಿದೆ. ನಮ್ಮ ಮನಸ್ಸು ನಮ್ಮ ಶರೀರದಲ್ಲಿ ಮಾತ್ರವೇ ಸೀಮಿತವಾಗಿಲ್ಲ. ಅದರ ಕ್ಷೇತ್ರವು ಬಹಳ ವಿಶಾಲವಾಗಿದೆ. ಇದು ವ್ಯಾಪಕವೂ ಪಾರದರ್ಶಿಯೂ ಆಗಿದೆ. ಇದು ದೇಶ ಕಾಲಗಳಲ್ಲಿಯೂ ಸೀಮಿತವಾಗಿಲ್ಲ. ಇದರ ಪೂರ್ಣ ಜ್ಞಾನವೇ ಆತ್ಮಜ್ಞಾನವಾಗಿದೆ. ಇದೇ ಮನದ ಸುಧಾರಣೆಯಿಂದ ನಾನಾ ಪ್ರಕಾರದ ಕಷ್ಟಗಳನ್ನು ದೂರವಾಗಬಹುದು. ನಮ್ಮ ಮಸ್ತಿಷ್ಕದ ತಂತುಗಳನ್ನು ಯಾವ ಔಷಧಿಯೂ ಉತ್ತಮಗೊಳಿಸಲಾರದು. ಅವುಗಳ ಸ್ವಾಸ್ಥ್ಯಕ್ಕೆ ನಮ್ಮ ಮನವನ್ನು ಶುಭ್ರ, ಪವಿತ್ರ ವಿಚಾರಗಳಿಂದ ತುಂಬುವುದಅಗತ್ಯ. ನಮ್ಮ ವಿಚಾರಗಳೇ ನಮ್ಮನ್ನು ಉನ್ನತಿಗೂ, ಅಧೋಗತಿಗೂ ಒಯ್ಯಬಲ್ಲವು. ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿಯೂ ಇದನ್ನೇ ಹೇಳಿದ್ದಾನೆ ನಮ್ಮ ಮನಸ್ಸಿನ ವಿಷಯದ ಪೂರ್ಣಜ್ಞಾನವು ಮನೋವಿಜ್ಞಾನದ ತಿಳುವಿನಿಂದಲೇ ಸಾಧ್ಯ. ಆದ್ದರಿಂದ ಮನೋವಿಜ್ಞಾನವನ್ನು ವ್ಯಾಪಕಗೊಳಿಸುವುದು ವೈಯಕ್ತಿಕ ಹಿತ ದೃಷ್ಟಿಯಿಂದಲೂ ದೇಶದ ಹಿತ ದೃಷ್ಟಿಯಿಂದಲೂ ಅತೀ ಅಗತ್ಯ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ.ಎಸ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಚ್ಚಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭ — ಬೆಲೆ ೧೦

VOL. 37 — 14—11—1957 — NO. 10

ಸರಕಾರದೊಲವಿತ್ತ ಹರಿಯಲಿ—

ಆಯುರ್ವೇದಕ್ಕೆ ಯೋಗ್ಯ ರಕ್ಷಣೆ ಬೇಕು

ಆಯುರ್ವೇದವು. ಆಯುಷ್ಯವನ್ನು ವರ್ಧಿಸುವ ವಿಧಾನವನ್ನು ತಿಳಿಸುವ ಶಾಸ್ತ್ರ. ಮನುಷ್ಯಮಾತ್ರವಲ್ಲದೆ, ಹಯ, ಗಜ, ಗೋವು ಮೊದಲಾದ ಎಲ್ಲ ಜೀವಿಗಳಿಗೂ ರೋಗಗಳಂಟಿಕೊಂಡರೆ ಅವನ್ನು ಆಯುರ್ವೇದದಲ್ಲಿ ಸೂಚಿತವಾದ ಪಥ್ಯ, ಆರೈಕೆ, ಚಿಕಿತ್ಸೆಗಳಿಂದ ದೂರ ಮಾಡುವುದು ಸಾಧ್ಯ. ನಮ್ಮ ದೇಶವು ಇನ್ನಿತರ ಹಲವಾರು ಶಾಸ್ತ್ರವಿಭಾಗಗಳಲ್ಲಿ ಪ್ರಾಚೀನ ಕಾಲದಿಂದಲೂ ಪ್ರಗತಿಯನ್ನು ಪಡೆದಿದ್ದಂತೆ ಮಾನವ ಸಹಜವಾದ ರೋಗನಿರ್ಮೂಲನಕಾರ್ಯಕ್ಕೆ ನೆರವಾಗುವ ಈ ಆಯುರ್ವೇದವು ಸಹ ಬಳಕೆಯಲ್ಲಿತ್ತು. ಮತ್ತು ಯಾವುದೇ ವೈಜ್ಞಾನಿಕ ಪ್ರಯೋಗಗಳು ಹುಟ್ಟಿಕೊಳ್ಳುವುದಕ್ಕೆ ಮೊದಲೇ ಆ ಮಯಾಸಹಾರ ಕಾರ್ಯದಲ್ಲಿ ನೆರವಾಗುವ ಈ ಆಯುರ್ವೇದ. ಮಾನವನು ಎಷ್ಟು ಪ್ರಾಚೀನನೋ ಅಷ್ಟೇ ಹಳೆಯದಾದುದು ರೋಗ ಈ ರೋಗವು ಹುಟ್ಟಿಕೊಂಡೊಡನೆಯೇ ಅದನ್ನು ತಡೆಗಟ್ಟುವ ಉಪಾಯವನ್ನು ಕಂಡುಹಿಡಿಯದಿದ್ದಾರೆ? ಅಂತೂ ನಮ್ಮ ತಿಳಿವಳಿಕೆಗೆ ಬಂದಂತೆ ಬಹಳ ಪೂರ್ವದಲ್ಲಿಯೇ ಎಂದರೆ, ರಾಮಾಯಣ ಭಾರತಗಳ ನಿರ್ಮಾಣಕ್ಕೂ ಮೊದಲೇ ಈ ಆಯುರ್ವೇದವು ಹುಟ್ಟಿಕೊಂಡು ಬಹಳ ಪ್ರಸಿದ್ಧಿಗೆ ಬಂದಿತ್ತು.

ಭಾರತದಲ್ಲಿ ಸಾಮಾನ್ಯವಾಗಿ ಹಿಂದೂ ರಾಜರು ಆಳಿಕೊಂಡಿದ್ದಾಗ, ಅಲ್ಲಲ್ಲಿ ಚಿಕಿತ್ಸಾಲಯಗಳು ಸ್ಥಾಪಿಸಲ್ಪಟ್ಟು ವೈದ್ಯರ ನೆರವಿನಿಂದ ರೋಗಶಮನದ ಕಾರ್ಯವು ಸಾಗುತಿತ್ತು. ಆಗಾಗ, ಪ್ರಖ್ಯಾತ ವೈದ್ಯರು ಕೆಲವೊಂದು ಹೊಸ ಹೊಸ ಸಂತೋಧನೆಗಳನ್ನು ಮಾಡಿ, ಆಯುರ್ವೇದದಲ್ಲಿ ಚಿರಂತನ ದಾಖಲೆಯನ್ನೇ ಮಾಡಿದರು. ಕವಿಗಳು ಸಹ ಇಂತಹ ವೇದವನ್ನು ಬರೆದಿಟ್ಟರು. ಭಾರತದ ಈ ವೈದ್ಯಕ್ರಮವು ಇತರ ದೇಶಗಳಿಗೂ ಹಬ್ಬಿತು ಹಿಂದೂ ದೇಶಕ್ಕೆ ಧಾಳಿಯಿಟ್ಟ ಮೊತ್ತಮೊದಲನೆಯ ಯುರೋಪಿನವನಾದ ಗ್ರೀಸಿನ ಅಲೆಕ್ಸಾಂಡರ ಯಾನೆ ಸಿಕಂದರನು ಬಂದಾಗ, ಇಲ್ಲಿ ಆಯುರ್ವೇದವು ಪೂರ್ಣ ವಿಕಸಿತ ರೂಪದಲ್ಲಿತ್ತೆಂದೂ, ಈ ವಿಜ್ಞಾನದ ಪ್ರಯೋಜನವನ್ನಾತ ಪಡೆದಿರುವನೆಂಬುದೂ ತಿಳಿದುಬರುವುದು. ಆದರೆ, ಭಾರತಕ್ಕೆ ಮುಸಲ್ಮಾನರು ಆಕ್ರಮಣಗೆಯ್ದ ನಂತರ, ಅವರಲ್ಲಿ ಪ್ರಚಾರದಲ್ಲಿದ್ದ ಯೂನಾನಿ ಪದ್ಧತಿಯು ರಂಜಾಶ್ರಯವನ್ನು ಪಡೆದು, ಆಯುರ್ವೇದವು ತನ್ನ ಉನ್ನತ ಸ್ಥಾನದಿಂದ ಕೆಳಕ್ಕಿಳಿಯತೊಡಗಿತು. ಯುನಾನಿ ಕ್ರಮವಾದರೋ ಭಾರತೀಯ ಆಯುರ್ವೇದದಿಂದಲೇ ಪ್ರೇರಿತವಾದುದು ಮತ್ತು ಅದಕ್ಕೆ ತೀರ ಸಮೀಪಗತವಾದುದೆನ್ನಬಹುದು.

ಏರೋಪ್ಯ ದೇಶಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಹೊಸಹೊಸತಾದ ಶೋಧನೆಗಳು ನಡೆದು ವೈಜ್ಞಾನಿಕ ಪದ್ಧತಿಯು ಪ್ರಚಾರಗೊಳ್ಳುತ್ತಿರುವಾಗಲೂ ಭಾರತದಲ್ಲಿ ಪ್ರಾಚೀನತಮ ರೀತಿಯೇ ವ್ಯವಹಾರದಲ್ಲಿದ್ದಿತು. ಆದರೆ, ಬ್ರಿಟಿಷರು ಭಾರತದಲ್ಲಿ ಕಾಲಿಟ್ಟಿದಂದಿನಿಂದ ಅವರು ಭಾರತೀಯರನ್ನು ಮೆಟ್ಟಿ ತುಳಿದಂತೆ ಅವರ ದಿವ್ಯ ಚಿಕಿತ್ಸಾಶಾಸ್ತ್ರವನ್ನೂ ಧೂಳೀಧೂಸರವನ್ನಾಗಿ ಗೆಯ್ದು, ತಮ್ಮಲ್ಲಿ ತಯಾರಾಗುವ ವೈಜ್ಞಾನಿಕ ವಿಧಾನವನ್ನು ಪ್ರಯೋಗಕ್ಕೆ ತಂದು, ಭಾರತದಲ್ಲಿ ಪ್ರಚಾರವೆಸಗಿದರು. ಅಲ್ಲಿನ ಪದ್ಧತಿಯಂತೆ ಇಲ್ಲಿಯೂ ಇಂಗ್ಲಿಷ್ ಮದ್ದಿನ ಉಪಟಳವು ಹೆಚ್ಚಾಯಿತು. ಪಟ್ಟಿಯಾದಿಂಗ ಬಂದುದೆಲ್ಲಾ ಅವ್ಯತಮಯವೆಂದು ತಿಳಿಯುವ ಭಾರತೀಯರು ಅವನ್ನೇ ಮೆಚ್ಚಿಕೊಂಡು ತಮ್ಮ ಮೂಲ ಸಂಸ್ಕೃತಿಯನ್ನೇ ಮರೆತು ಅವಕ್ಕೆ ಜ್ಯೋತ್ಸಾಹಿತ್ತರು. ಎಲೋಪಥಿಯು ಭರವಿಂದ ಪ್ರಚಾರವಾಗಿ, ಹಳ್ಳಿಮೂಲೆಯಲ್ಲಿ ಸಹ ಆಯುರ್ವೇದವು ನಾಶವಾಗುವ ಪರಿಸ್ಥಿತಿಯಿದೀಗ ಬಂದಿದೆ. ನಾವು ಸ್ವತಂತ್ರರಾದ ಮೇಲೆಯಾದರೂ ಅಂಗ್ಲ ಪದ್ಧತಿಗೆ ಮಾರುಹೋಗುವ ನಮ್ಮ ಹವ್ಯಾಸವನ್ನು ತೊರೆಯಲಿಲ್ಲ ಬದಲು ಎಲೋಪಥಿಯನ್ನೇ ಅಭಿವೃದ್ಧಿಗೊಳಿಸುತ್ತೇವೆ ಇಷ್ಟು ವಾಡಿದರೂ, ಭಾರತದ ಜನರು ರುಗ್ಣಶಯ್ಯೆಯಿಂದ ಎದ್ದಿರುವರೆ? ಭಾರತೀಯರಲ್ಲಿ ರೋಗಗಳು ಕಡಿಮೆಯಾಗಿವೆಯೆ?

ಈ ಪ್ರಶ್ನೆಗಳಿಗೆ ವಿದ್ಯಾವಂತರೆನ್ನುವವರ ಉತ್ತರವೊಂದೆ—ಭಾರತೀಯ ಆರೋಗ್ಯದತ್ತ ಗಮನವೀಯುವುದಿಲ್ಲ ಎಂದು. ಆದರೆ, ಇದೆಷ್ಟು ಸತ್ಯವೋ ಹೇಳಕಿಳಿಯದು. ಕೆಲವೇ ಮಂದಿ ಜನ್ನು ಎಮರಿಟ್ಟು ೩೫ ಕೋಟಿ ಭಾರತೀಯರನ್ನು ಹೀನಯಿಸುವ ಒಂದು ಅಪಮಾನಕಾರಕ ಹವ್ಯಾಸವೆಂದು ಮಾತ್ರ ಇದನ್ನು ಕರೆಯಬಹುದು ಸತ್ಯವಾಗಿ ಪರೀಲಿಸಿದರೆ, ಮಾನವರು ತಾವು ವಾಸಿಸುವ ಸ್ಥಳದಲ್ಲಿನ ಹನೆ, ತೆಗೆದುಕೊಳ್ಳುವ ಆಹಾರ, ಮಾಡುವ ಉದ್ಯೋಗ ಮೊದಲಾದವುಗಳಿಗೆ ಹೊಂದಿಕೊಳ್ಳುವ ರಕ್ಷಗುಣವು ಳ್ಳವರಾಗಿದ್ದಾರೆ ಇಂಗ್ಲೆಂಡ್‌ನಂತಹ ಶೀತಪ್ರದೇಶದ ಜನರಿಗ ಗಿ ತಯಾರಿಸಲಾದ ಉಷ್ಣಕರವಾದ ಔಷಧನನ್ನು ಉಷ್ಣ ವಲಯದ ಭಾರತೀಯರಿಗೆ ಕೊಟ್ಟರೆ, ಅದವರ ಶರೀರವನ್ನು ಏನು ಮಾಡೀತು? ಇಂಗ್ಲಿಷ್ ಔಷಧಿ ಉಷ್ಣ; ಹಾಲೆಷ್ಟು ತೆಗೆದುಕೊಂಡರೂ ಸಾಲದೆನ್ನುವ ಬಡವರನ್ನು ನಾವು ನೋಡುತ್ತೇವೆ ಆ ಗಿರುವಾಗ ಈ ಔಷಧಿಯನ್ನು ಬಳಸಿದರೆ ಭಾರತೀಯರು ಬದುಕುವುದೆಂತು?

ಎಂತೆಂತಹ ಸುಪ್ರಸಿದ್ಧ ಆಂಗ್ಲ ವೈದರು ತಮ್ಮಿಂದ ಅಸಾಧ್ಯವೆಂದು ಕೈಬಿಟ್ಟುದರಿಂದ ನಿರಾಶನಾದ ರೋಗಿಯನ್ನು ಗಿಡಮೂಲಿಕೆಗಳ ಬಲದಿಂದ ಹಳ್ಳಿ ವೈದ್ಯರು ಗುಣಮಾಡಿದುದನ್ನು ಪ್ರತ್ಯಕ್ಷ ಕಾಣಾ ತಿದ್ದೇನೆ. ರೋಗವನ್ನು ತಕ್ಷಣ ನಿಲ್ಲಿಸುವುದರಿಂದ ಅಪಾಯವೆಂದು ಈಗ ಸರ್ವ ವಿದಿತವಾಗಿದೆ. ಇಂತಹ ಸಂದರ್ಭದಲ್ಲಿ ರೋಗವು ಮತ್ತೆ ಮರುಕೊಳಿಸುವುದೆಂದು ಕಂಡಿದ್ದೇನೆ ಆಯುರ್ವೇದ ವಿಧಾನದಲ್ಲಿ ನಿಧಾನವಾಗಿ ಕಂತುಕಂತುಗಳಲ್ಲಿ ರೋಗವು ಒಮ್ಮೆ ನಾಶವಾಯಿತೆಂದರೆ, ಅದು ನುಂದೆ ಬೇಗನೇ ಬರಲಾರದೆಂದು ಕೇಳಿತ್ತೇವೆ. ಆಂಗ್ಲ ವೈದ್ಯರ ಔಷಧಿಯಿಂದ ಈ ಗಿಡಮೂಲಿಕೆಗಳ ಮದ್ದು ಬಹಳ ಅಗ್ಗ ದರದಲ್ಲಿ ದೊರೆಯುವುದು ಆಂಗ್ಲವೈದ್ಯರ ಮದ್ದು, ಅದಕ್ಕೆ ಹಾಲು ಇತ್ಯಾದಿಯೆಂದು ವೆಚ್ಚವಾಗುವ ಮೊಬಲಗಿನ ಹತ್ತರಲ್ಲೊಂದು ಪಾಲೂ ಆಯುರ್ವೇದ ವೈದ್ಯಕ್ಕೆ ಬೇಳಲಾರದು. ಬಡ ಜನರಿಂದ ತುಂಬಿರುವ ಈ ನಮ್ಮ ಭಾರತದಲ್ಲಿ ವ್ಯಯಪ್ರದವಾವ ಆಂಗ್ಲ ವೈದ್ಯಕ್ಕಿಂತ ಆಯುರ್ವೇದವೇ ಗ್ರಾಹ್ಯ ವಲ್ಲವೆ?

ಈಗ ಆಯುರ್ವೇದವತ್ತ ಸರಕಾರವು ನಿರ್ಲಕ್ಷ್ಯಭಾವವನ್ನು ಪ್ರದರ್ಶಿಸಿದೆ ಜನತೆಯಲ್ಲೂ ಆದರಲ್ಲೇನಿದೆ ಎಂದು ತಾತ್ಸಾರ ಮೂಡಿಕೊಂಡಿದೆ. ಆದರೆ, ಆಯುರ್ವೇದವು ಎಷ್ಟು ಗುಣಕಾರಿ ಎಂದು ಒಮ್ಮೆ ತಿಳಿದರೆ, ಮುಂದದನ್ನು ಯಾರೂ ತಿರಸ್ಕರಿಸಲಾರರು ಹೂವಿನ ಹೆರನ್ನು ಕೇಳಿ ಆನರಲ್ಲೇನಿದೆ ಎಂದು ನಿಂದಿಸಿದರೆ ಅಂತಹ ವಿಮರ್ಶಕರನ್ನು ಏನೆನ್ನಬೇಕು? ಬಿಡ್ಡನನ್ನು ಮೂಸಿ ನೋಡಿ ಅದರ ಹರಿತತೆಯನ್ನು ನಿಶ್ಚಯಿಸುವ ಬುದ್ಧಿವಂತ ರಾಜನೆನ್ನಬಹುದಲ್ಲವೆ?

ಆಯುರ್ವೇದವು ಪ್ರಾಚೀನ ಕಾಲದಲ್ಲಿ ಅಷ್ಟಾಂಗರೂಪವಲ್ಲಿತ್ತು. ಇಂದು ನಮಗೆ ದೊರೆವ ಆಯುರ್ವೇದ ಚಿಕಿತ್ಸಾಪದ್ಧತಿಗಳಲ್ಲಿ ಚರಕ ಮತ್ತು ಸುಶ್ರುತರ ಗ್ರಂಥಗಳ ಆಧಾರವಿವೆ. ಚರಕ ಚಿಕಿತ್ಸಾಪದ್ಧತಿಯನ್ನನುಸರಿಸುವ ಭಾರದ್ವಾಜ ಸಾಂಪ್ರದಾಯ ಹಾಗೂ ಸುಶ್ರುತನನ್ನನುಸರಿಸುವ ಧನ್ವಂತರೀ ಸಾಂಪ್ರದಾಯಗಳು ಈಗ ನಮ್ಮಲ್ಲಿವೆ ಇವುಗಳಲ್ಲಿ ಧನ್ವಂತರೀಸಾಂಪ್ರದಾಯದಲ್ಲಿ ಶಲ್ಯಚಿಕಿತ್ಸೆ(ಆಪರೇಶನ್)ಸಹ ಮಾಡಬಹುದು. ಇವನ್ನು ಯೋಗ್ಯವಿಧಾನದಲ್ಲಿ ತಿಳಿಮುಕೊಂಡು ಪ್ರಯೋಗಿಸುವ ನಿಪುಣ ಆಯುರ್ವೇದಿಕ ವೈದ್ಯರು ನಮ್ಮಲ್ಲಿ ಷ್ಟಿ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕತೆ—

ಬಡತನದ ಬಾಳು

ಶ್ರೀ. ಎಸ್. ಗೋಪೀಚಂದ ರಾವ್, ವಿದ್ಯಾರ್ಥಿ.

ಶ್ರಾವಣದ ಕೃಷ್ಣಪಕ್ಷದ ಅಮವಾಸ್ಯೆಯ ರಾತ್ರಿ ಹೊತ್ತು. ಆಕಾಶದಲ್ಲಿ ಘೋರ ಘೋರ ಮೋಡಗಳು ಕವಿದಿದ್ದುವು. ನಾಲ್ಕೂ ಸಿಟ್ಟಿನಲ್ಲಿ ಅಂಧಕಾರಾಸುರನ ಸಾಮ್ರಾಜ್ಯವು ಹರಡಿಕೊಂಡಿತ್ತು. ಆಗಾಗ ವಿದ್ಯುಲ್ಲತೆಗಳು ಮಿಂಚುವಾಗ ಅಲ್ಲಿ ಏನಾದರೂ ಇದೆಯೇ ಇಲ್ಲವೇ ಎಂಬುದರ ಅರಿವಾಗುತಿತ್ತು. ಮಾರ್ಗದಿಂದ ಸ್ವಲ್ಪ ದೂರದಲ್ಲಿದ್ದ ಜೋಸುಡಿಯಲ್ಲಿ ಸಣ್ಣ ದೀಪವು ಮಿಣಿಮಿಣಿ ಮಿಣುಕುತಿತ್ತು. ತಾವು ಇರುವ ಮನೆಗಳಲ್ಲಿ ವಾಸವಾಡುತ್ತಿರುವ ಜನರಂತೆ ಅವು ಸಹ ಆಯಾಸಗೊಂತಂತಿದ್ದು ಸ್ವಸ್ಥವಾಗಿರಲು ಬಯಸುತಿದ್ದವೆ. ರಾಮೂ ಚಾಪಾನ ಗುಡಿಸಲೇ ಅದು.

ರಾಮೂ ಯೌವನಭರಿತ ಮನುಷ್ಯನಾಗಿದ್ದನು. ನಿರಂತರವೂ ಎಲ್ಲರೊಡನೆಯೂ ನಕ್ಕು ಮಾತಾಡಿಸುತಿದ್ದನು; ಜಾಗೆಯೇ ಎಲ್ಲರಿಂದಲೂ ನಗೆಗೀಡಾಗಿದ್ದನು. ಆದುದರಿಂದಲೇ ಅವನು ಈ ಎಳೆವಯಸ್ಸಿನಲ್ಲಿಯೇ ಗ್ರಾಮದ ಮಾನನಾಗುವ ಅರ್ಹತೆಯನ್ನು ಪಡೆದಿದ್ದನು. ರಾಮು ವಿಗಿಂತ ವಯಸ್ಸಿನಲ್ಲಿ ಇಮ್ಮಡಿ ದೊಡ್ಡವರಾಗಿದ್ದವರಿಗೆ ಸಹ ರಾಮುವು ಮಾನನಾಗಿದ್ದನೆಂದರೆ, ಆಶ್ಚರ್ಯಪಡಬೇಡಿ. ರಾಮೂನ ಗುಡಿಸಲು ಗ್ರಾಮದ ಪಟ್ಟಣದ ಸ್ಥಳವಾಗಿ ಪರಿಣಮಿಸಿತ್ತು. ಏನಾದರೂ ಉತ್ಸವ, ಹಬ್ಬ, ಸಭೆ, ಕಛೇರಿ—ಯಾವುದೇ ಆಗುವುದಿರಲಿ, ಎಲ್ಲವೂ ರಾಮುವಿನ 'ಅರಮನೆ'ಯಲ್ಲಿಯೇ ಆಗಬೇಕು. ಸದಾಕಾಲ ಆನಂದಮಯವಾಗಿರುತಿದ್ದ ರಾಮೂನ ಮನೆಯು ಇಂದು ಸ್ಮಶಾನ ಸದೃಶವಾಗಿ ಕಾಣಿಸುತಿತ್ತು. ನಿಶಾನಾರಿಯೇ ಅಳುತ್ತಿರುವಂತೆ ಕಂಡು ಬರುತಿತ್ತು.

ಗುಡಿಸಲಿನ ಒಂದು ಮೂಲೆಯಲ್ಲಿ ಒಂದು ಎಳೆಯ ದೀಪವು ಮಂದಮಂದವಾಗಿ ಉರಿಯುತಿತ್ತು. ಒಂದು ಹರಕು ಚಾಪೆಯ ಮೇಲೆ ರಾಮೂವಿನ ಮನೆಯಾಕೆ ರತಿಯಾ ಬಿದ್ದುಕೊಂಡಿದ್ದಳು. ಪಕ್ಕದಲ್ಲೇ ರಾಮುವೂ ಕುಳಿತು ರತಿಯಾಳ ಚಡಪಡಿಕೆಗಳನ್ನೇ ದಿಟ್ಟಿಸಿ ನೋಡುತಿದ್ದನು. ಅವನ ಬಲಗಡೆಯಲ್ಲಿ ಅವನ ಪುತ್ರ ಸಾದು ಸಿಂತುಕೊಂಡು ತಾಜಿಯನ್ನೇ ದೃಷ್ಟಿಸುತಿದ್ದನು. ಎಡ ಪಕ್ಕದಲ್ಲಿ ಅವನ ಮೆಗಳು ಪುಷ್ಪ ಕುಳಿತುಕೊಂಡು ಆಕೆಯ ತಲೆ ತಿಕ್ಕುತಿದ್ದಳು. ಬದಿಯಲ್ಲಿದ್ದ ರಾಮು ರತಿಯಾಳ ಮುಂಬರಿಹೋಗಿರುವ ಮುಖ ಚರ್ಯೆಯನ್ನೇ ಒಂದೇ ಸವನೆ ನೋಡುತ್ತಿದ್ದನು. ಇಂದು ರತಿಯಾಳು ರೋಗಗ್ರಸ್ತಳಾದ ಮೂರನೆಯ ದಿನವಾದರೂ, ಈ ಮೂರು ದಿನಗಳಲ್ಲಿಯೇ ಆಕೆಯ ಶರೀರವು ಒಣಗಿ ಕಡ್ಡಿಯಾಗಿ ಹೋಗಿತ್ತು. ಮುಖವರ್ಣವು ತೀರಾ ವಿವರ್ಣವಾಗಿ ಹೋಗಿತ್ತು. ಜ್ವರವಿಳಿಯುವ ಪರಿಶ್ರಮವನ್ನೇ ಕೈಗೊಂಡಿರಲಿಲ್ಲ.

ಆಕೆ ಹಾಸಿಗೆಯಲ್ಲಿ ಮಲಗಿದ ಸಮಯದಿಂದ ಸ್ವಲ್ಪ ನೀರಿನ ಹೊರತಾಗಿ ಯಾವುದೂ ಆಕೆಯ ಕುತ್ತಿಗೆಯಿಂದ ಕೆಳಗಿಳಿದಿರಲಿಲ್ಲ. ಚಹಾ ಮತ್ತು ಹಣ್ಣುಗಳ ರಸಗಳನ್ನುಳಿದು ಬೇರಾವುದನ್ನೂ ಆಕೆಗೆ ಕೊಡಬಾರದೆಂದು ವೈದ್ಯರ ಆದೇಶವಿತ್ತು. ಆದರೆ, ಚಹಾ ಮತ್ತು ಹಣ್ಣಿನ ರಸಗಳೆಲ್ಲಿಂದ ಬರಬೇಕು? ಮನೆಯಲ್ಲಿ ಹಣ್ಣಿನ ಹೆಸರೇ ಕೇಳರಿಲ್ಲ. ರತಿಯಾ ಅಸ್ವಸ್ಥಳಾದ ಗಳಿಗೆಯಿಂದ ಮನೆಯವರಾರೂ ಕೆಲಸಕ್ಕೆ ಹೋಗಿರಲೆಲ್ಲ. ಎಳೆಮಕ್ಕಳಿಂದ ಹಿಡಿದು ಹಲ್ಲು ಮುದುಕರ ವರೆಗೆ ಎಲ್ಲರೂ ಕಸ್ತಟ್ಟು ಪರಿಸರಲ್ಲಿ ದುಡಿದರೆ ಮಾತ್ರ ಒಂಬಿಸ್ಟು ರೊಟ್ಟಿ ತಿನ್ನಲು ಸಿಗುತಿತ್ತು. ಆದುದರಿಂದ ಸಾಮಾನ್ಯವಾಗಿ ಏನೂ ಮನೆಯಲ್ಲಿ ಉಳಿಯುತ್ತಿರಲಿಲ್ಲ. ಒಮ್ಮೊಮ್ಮೆ ಸ್ವಲ್ಪವೇನಾದರೂ ಉಳಿದರೆ, ರಾಮೂ ಅವನ್ನು ತನ್ನ ಸ್ನೇಹಿತರ ಪಾಲಿಗೆ ಕೊಟ್ಟುಬಿಡುತಿದ್ದನು. ಅವನ ಹಣೆಯಲ್ಲಿ ಒಣರೊಟ್ಟಿಯನ್ನು ತಿಂದು ಒದುಕುವುದೇ ಬರೆದಿತ್ತು. ತಮ್ಮ ಮೈ ಮುರಿಯದ ಸಂಪಾದನೆಯನ್ನು ಆಯಾ ದಿನವೇ ಸಂಪೂರ್ಣವಾಗಿ ಪೆಚ್ಚಮಾಡುವ ಪರಿಸ್ಥಿತಿಯಲ್ಲಿ ಅವರಿದ್ದರು.

ರಾಮೂನ ಪರಿಸ್ಥಿತಿ ನಿಜವಾಗಿಯೂ ಇದೇ ಆಗಿತ್ತು. ಮನೆಯಲ್ಲೊಂದು ಚಿಕ್ಕಾಸೂ ಇರಲಿಲ್ಲ. ರತಿಯಾಳ ವಿಷಮಜ್ವರ ಬೆಳೆಯ ಕಡಗಗಳೆಮ್ಮವು, ಉಳು ಸಪೆ ಕಳೆದ ಹೋಳೆ ಹುಣ್ಣಿಮೆಯಂದು ಅವರ ಕೈ ಬಿಟ್ಟದ್ದುವು. ಉತ್ಸವವನ್ನಂತೂ ಆ ಜೀವಿತಲೇ ಬೇಕಾಗಿತ್ತು. ಶರಾಬಿಲ್ಲದೆ ಉತ್ಸವ ನಡೆಯುವುದಾದರೂ ಹೇಗೆ? ಆದಕ್ಕಾಗಿ ಈ ಕಡಗಗಳು ಉಪಯೋಗಿಸಲ್ಪಟ್ಟುವು.

ರತಿಯಾಳು ರಾಮುವನ್ನು ಬಹು ಪ್ರೀತಿಸುತಿದ್ದಳು. ಆಕೆಯಿಲ್ಲದೆ ಅವನಿಗೆ ಒಂದು ಜೆಜ್ಜೆಯಿಡುವುದೂ ಕಷ್ಟವಾಗಿ ಪರಿಣಮಿಸುತಿತ್ತು. ಆಕೆಯು ಒಂದು ಮುಗುಳ್ನಗೆಗೆಗೆ ತನ್ನ ಜೀವವನ್ನೇ ಕೊಡುತಿದ್ದ. ರತಿಯಾಳ ವಿಪರ್ಣವದನವನ್ನು ಕಂಡು, ರಾಮೂನ ಕಣ್ಣುಗಳಿಂದ ನೀರು ತುಂಬಿ ಹರಿಯಿತು. ಆಗ ರತಿಯಾ ಗದ್ಗದಿತಳಾಗಿ ಹೇಳಿದಳು — "ಏನಿದು ಅಳು? ಒಂದು ನಾಲ್ಕೈದು ದಿನಗಳಲ್ಲಿ ನಾನು ಎದ್ದು ನಿಲ್ಲುವುದಿಲ್ಲವೆ?" ರಾಮೂನ ಹೃದಯವು ದುಃಖಿತಗೊಂಡಿತು. ಅವನ ಕಣ್ಣೆದುರು ಕತ್ತಲೆ ಹರಡಿಕೊಂಡಿತು. ಅವನು ಆಲೋಚಿಸ ತೊಡಗಿದ—"ಏನು ಮಾಡಲಿ? ಎಲ್ಲಿ ಹೋಗಲಿ?" ಎಲ್ಲಿಯೂ ಸಹಾಯ ಸಿಗುವ ಆಶೆಯಿರಲಿಲ್ಲ. ಗ್ರಾಮದಲ್ಲಿ ಯಾರೊಡನೆಯೂ ಹಣ ಪಟ್ಟಣಬೆಂಬುದನ್ನಿಗೆ ಚೆನ್ನಾಗಿ ಗೊತ್ತು. ಕೇವಲ ಮಹಾಜನನಿಂದ ಮಾತ್ರ ಸ್ವಲ್ಪ ಸಹಾಯ ದೊರಕುವಂತಿತ್ತು; ಆದರೆ ಕಳೆದ ಮೂರು ದಿನಗಳಿಂದಲೂ ಭೋಜನ ಸಾಮಗ್ರಿಯು ಅಲ್ಲಿಂದಲೇ ಬರುತ್ತಿತ್ತು. ಅನಿಸಿಂದಲೂ ಇದಕ್ಕೆಂತ ಹೆಚ್ಚಿನದು ದೊರೆಯುವುದು ಸಾಧ್ಯವಿರಲಿಲ್ಲ ಕೊನೆಗೆ ಮಾಡುವುದಾದರೂ ಏನು?

ಈ ಗಲಭೆಯಲ್ಲಿಯೇ ಎರಡು ಗಂಟೆ ಗಳುರುಳಿದುವು. ರತಿಯಾ ಸಂಪೂರ್ಣ ಶಕ್ತಿಹೀನಳಾದಳು. ಆಕೆಯ ಮುಖದಲ್ಲಿ ಶವದ ಲಕ್ಷಣಗಳು ತೋರಬಂದುವು. ಕೈಕಾಲುಗಳು ಥಂಡಿಯಾಗತೊಡಗಿದುವು. ರಾಮುನು ಬಹಳ ಹೆದರಿದನು. ಈ ಅಂಜಿಕೆಯಿಂದಲೇ ಕೂಗಿಕೊಂಡ. ಈ ಕೂಗನ್ನು ಕೇಳಿ ನೆರೆಹೊರೆಯವರು ಒಟ್ಟು ನೇರತೊಡಗಿದರು. ಒಬ್ಬಾಕೆ ಮುದುಕ ರತಿಯಾಳ ನಾಡಿಯನ್ನು ಮುಟ್ಟಿನೋಡಿ ರಾಮೂವಿಗೆಂದಳು—"ಅಯ್ಯೋ, ಏಕೆ ಹೆದರಿ ಸಾಯುತ್ತೀರ? ಈಗ ಸರಿಯಾಗುತ್ತದೆ. ಜ್ವರ ವಿಪರೀತವಾಗಿದೆ ತಾನೆ? ಮೂರ್ಛೆ ಬಂಯಿಬಿಟ್ಟದೆ. ಬೇಗನೆ ಹೋಗಿ ವೈದ್ಯರನ್ನು ಕರೆದುಕೊಂಡು ಬಾ."

ಗ್ರಾಮದ ಸಮೀಪದಲ್ಲಿಯೇ ಒಂದು ಡಿಸ್ಪೆನ್ಸರಿ ಇತ್ತು. ವೈದ್ಯರೂ ಅಲ್ಲೇ ಒಂಮೊಮ್ಮೆ ಕೋಣೆಯಲ್ಲಿರುತಿದ್ದರು. ರತಿಯಾಳ ಚಿಕಿತ್ಸೆಯನ್ನೂ ಇವರೇ ಮಾಡುತಿದ್ದರು. ನಿಜವಾಗಿ ಹೇಳುವುದಾದರೆ, ಆ ಗ್ರಾಮದ ಕೂಲಿಗಾರರ ರಕ್ಷಕರೇ ಇವರಾಗಿದ್ದರು. ಕೆಮ್ಮು, ನೆಗಡಿಗಳು ಬರಲಿ, ಕಜ್ಜಿ ಕುರಿಗಳಾಗಿರಲಿ, ಯಾವುದೇ ಒಂದು ರೋಗ ಬರಲಿ, ಈ ವೈದ್ಯರ ಮದ್ದು ಮಜಬೂರರಿಗೆ ದೊರೆಯುತಿತ್ತು. ಎಂದಾದರೂ ಇವರೊಡನೆ ಹಣವಿರುತ್ತಿರಲಿಲ್ಲ. ಮತ್ತು ಯಾವಾಗಾದರೂ ಚಿಕಿತ್ಸೆಮಾಡಿಸುವ ಕುರಿತು ಯೋಚಿಸುತ್ತಿರಲೇ ಇಲ್ಲ.

ಆಲ್ಲಿ ವೈದ್ಯರು ತಮ್ಮ ಜೀವನದಲ್ಲಿ ಬಹಳ ಆಸಂತುಷ್ಟರಾಗಿದ್ದರು. ಈ ಇಲಾಖೆಯಲ್ಲವರು ಸೇರಿಕೊಂಡಂದಿನಿಂದ ತಮ್ಮ ಸಂಬಳದಲ್ಲಿಯೇ ಅವರು ದಿನಗಳೆಯಬೇಕಾಗಿತ್ತು. ಫೀಸಿನ ಕೆಲಸವಿಲ್ಲ. ಬೇರೆ ಯಾವ ವಿಧದ ಚಾರ್ಜನಾಯವೂ ಇಲ್ಲ. ವಿಶೇಷ ಜೋರುಮಾಡಿದರೆ, ನಾಲ್ಕಾರು ತಿಂಗಳಗೊಮ್ಮೆ ಹತ್ತಿಪ್ಪತ್ತು ರೂಪಾಯಿಗಳು ಕೂಡುತಿದ್ದುವು. ಇದರಿಂದಾಗಿ ಡಾಕ್ಟರರು ಮುಂಜಾನೆಯಿಂದ ಸಂಜೆಯವರೆಗೂ ತನ್ನ ಅದೃಷ್ಟವನ್ನು ಹಳಿಯುತಿದ್ದರು.

ರಾಮುವು ನೆಟ್ಟನೆ ಹೋಗಿ ಡಾಕ್ಟರ ಸಾಹೇಬರ ಬಾಗಲು ಬಡಿದನು. ಯಾವ ಸ್ವರವೂ ಒಳಗಿಂದ ಕೇಳಲಿಲ್ಲ. ಆದರೆ, ರಾಮುವು ಬಾಗಲು ತಟ್ಟುತಿದ್ದಂತೆಯೇ ಡಾಕ್ಟರರ ಶ್ರೀಮತಿಯವರು ಗುಣುಗುಟ್ಟುತ್ತಾ ಹೇಳಿದರು: "ಯಾರದು? ಇಷ್ಟು ರಾತ್ರಿಯಾದರೂ ಮಲಗಗೊಡುವುದಿಲ್ಲ. ನಿದ್ದೆಯನ್ನು ಕೆಡಿಸಿ ಬಿಟ್ಟರು. ಡಾಕ್ಟರರು ಮನೆಯಲ್ಲಿಲ್ಲ."

ರಾಮೂ ಹೇಳಿದನು: "ಮಹಾ ರಾಜಯವರೆ, ನಾನು, ರಾಮೂ ಮಾತಾಡುತಿದ್ದೇನೆ; ಡಾಕ್ಟರರು ಎಲ್ಲಿ ಹೋಗಿದ್ದಾರೆ?"

ಶ್ರೀಮತಿಯವರು ಸಿಡುಕಿನಿಂದಲೇ ಹೇಳಿದರು: "ಮನೆಯಲ್ಲಿಲ್ಲವೆಂದು ಹೇಳಿದೆನೋ ಇಲ್ಲವೊ?"

ರಾಮೂ ಬಹಳ ನಿರಾಶನಾದನು. ಆವನು ಅಸಾವಧಂಜಕ್ಯದಲ್ಲಿ ಮುಳುಗಿದನು. ಈಗ ಏನು ಮಾಡಲಿ, ಎಲ್ಲಿ ಹೋಗಲಿ ಎಂಬುದೇ ತಿಳಿಯಲಿಲ್ಲ. ಅಪ್ಪರಲ್ಲಿ ಅವನ ಕಿವಿದೆರೆಗಳಲ್ಲಿ ತುಸು ಪಿಸುನುಡಿ ಬಿದ್ದಂತಾಯಿತು. ಅವನು ಗೋಡೆಗೆ ಕಿವಿ ಕೊಟ್ಟು ಕೇಳ ತೊಡಗಿದನು. ಒಳಗಿನಿಂದ ಧ್ವನಿ ಕೇಳಿಸುತಿತ್ತು—"ಈ ಜನರು ಮೂಗಿನ ತುದಿಯಲ್ಲಿ ಪ್ರಾಣವನ್ನಿಟ್ಟುಕೊಂಡು ಬದುತ್ತಾರೆ. ರಾತ್ರೆಗೆ ಆರಾಮವಿಲ್ಲ, ಹಗಲಿಗೆ ನೆಮ್ಮದಿಯಿಲ್ಲ. ಯಾವಾಗನೋಡಿದರೂ ಕಷ್ಟವಿದೆ, ಆವನು ಅಸೌಖ್ಯನಾಗಿದ್ದಾನೆ ಎಂದು ಕೊಂಡು ಹೊರಬರುತ್ತಾರೆ. ಕೆಲಸದ ಫೀಸೂ ಇಲ್ಲ, ನುದ್ದಿನ ದುಡ್ಡೂ ಇಲ್ಲ! ಡಾಕ್ಟರರು ಜನರ ನೌಕರರಂತೆ ತಿಳಿಕೊಂಡಿದ್ದಾರೆ. ಯಾವ ಗಳಿಗೆಯಲ್ಲಿ ಇಲ್ಲಿಗೆ ಬಂದಿದ್ದೆನೋ ಒಂದು ವೈಸೆಯನ್ನೂ ಉಳಿಸುವ ಬಾಗಲಿಲ್ಲ."

ರಾಮೂ ಡಾಕ್ಟರರ ಧ್ವನಿಯನ್ನು ಗುರುತಿಸಿದನು. ಕೇಳಿದೊಡನೆಯೇ ಕಣ್ಣು ಕುಕ್ಕೆದಂತಾಯಿತು. ಡಾಕ್ಟರರು ಅಂಥವರೆಂದವನು ತಿಳಿದುಕೊಂಡಿರಲಿಲ್ಲ. ಎಷ್ಟೋ ಬಾರಿ ಡಾಕ್ಟರರ ಕೆಲಸಗಳನ್ನೂ ಮಾಡಿದ್ದನು. ಜನರ ನಡುವೆ ಡಾಕ್ಟರರ ಪಕ್ಷವನ್ನು ಹಿಡಿದೇ ಮಾತಾಡುತಿದ್ದನು. ಆ ದಿನ ಅವನು ಯೂನಿಯನಿನ ಪ್ರಧಾನರೆದುರಿನಲ್ಲಿ ಡಾಕ್ಟರರ ಪಕ್ಷ ಹಿಡಿದು ವಾದಿಸಿದುರುತಿದ್ದರೆ, ಈ ಡಾಕ್ಟರರು ಯಾವಾಗಲೋ ಮನೆಗೆ ಹೋಗಬೇಕಿತ್ತು. ಏಕೆಂದರೆ, ನಕಲಿ ಔಷಧಿಯನ್ನೇ ಡುವುದೆಂದರೆ, ಆದೇನೂ ಸಾಮಾನ್ಯ ಅಪರಾಧವಲ್ಲ.

ರಾಮೂವಿನ ರಕ್ತ ಕುದಿಯುತ್ತಿತ್ತು. ಅವನು ಸಿಟ್ಟಿನಿಂದ ನಡುಗುತಿದ್ದನು. ಅವನು ಬಹಳ ಜೋರಿನಿಂದ ಬಾಗಲು ಗುದ್ದತೊಡಗಿದನು. ಇಂಮೊಮ್ಮು ನಿರ್ಧಾರಕ್ಕೆ ಬರಬೇಕೆಂದಾತ ಕೃತನಿಶ್ಚಯನಾಗಿದ್ದ. ಡಾಕ್ಟರರು ಬಹಳ ಜತುರವ್ಯಾಣಿಯಾಗಿದ್ದರು. ಪರಿಸ್ಥಿತಿಯನ್ನು ಅವರು ತಿಳಿಯಬಿಟ್ಟರು. ಮಜೂರರಲ್ಲಿ ಅವರಿಗೆ ತಿರಸ್ಕಾರವಿದ್ದರೂ, ಅವರನ್ನು ತಿರಸ್ಕರಿಸುವ ಸಾಹಸವು ಅವರಲ್ಲಿರಲಿಲ್ಲ. ಅವರು ಮಜೂರರ ಸೂನಿಯನಿಗೆ ಬಹಳ ಪೆದರುತಿದ್ದರು. ಅವರು ಪರಿಸ್ಥಿತಿಯನ್ನು ಇನ್ನೂ ಕಾವೇರುವಂತೆ ಮಾಡುವುದರಿಂದ ಶ್ರೇಯಸ್ಕರವಾಗದೆಂದು ತಿಳಿದು, ಬೇಗನೆ ಬಟ್ಟೆಬರೆಗಳನ್ನು ತೊಟ್ಟುಕೊಂಡು ಹಿಂದಿನ ಬಾಗಿಲಿಂದ ಜಾರಿ, ರಾಮುವಿನ ಹಿಂದಕ್ಕೆ ಬಂದು,—"ಯಾರದು, ರಾಮೂ. ಯಾಕೆ ಬಂದೆ? ಈ ರಾತ್ರಿಯಲ್ಲಿ ಏನು ವಿಶೇಷ?" ಎಂದು ಏನೂ ತಿಳಿಯದವನಂತೆ ಕೇಳಿದರು.

ರಾಮೂ ಸಿಟ್ಟನ್ನು ನುಂಗಿ ಸಮಾಧಾನಪಟ್ಟುಕೊಳ್ಳುತ್ತ ಹೇಳಿದ: "ಡಾಕ್ಟರರೆ,

(ಐಂಶೇ ಪುಟ ನೋಡಿರಿ)

ದಿ ಕರ್ನಾಟಕ ಜೋಂಕ್ ಲಿಮಿಟೆಡ್
(ಭಾರತದಲ್ಲಿ ಸಂಘೀಕರಿಸಲ್ಪಟ್ಟುದು: ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)
ಹೆಡ್ ಆಫೀಸು: ಮಂಗಳೂರು. ದ. ಭಾರತ.
ಕೆಳಗಿನ ದರಗಳ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು:
10ರಿಂದ 6 ತಿಂಗಳುಗಳ ವ್ಯಾದೆಗೆ ... 4½%
6ರಿಂದ 18 ತಿಂಗಳುಗಳ ವ್ಯಾದೆಗೆ ... 4¾%
24 ತಿಂಗಳುಗಳಿಗೆ ವ್ಯಾದೆಗೆ ... 4¾%
ದೊಡ್ಡ ಪ್ರಮಾಣದ ಠೇವಣಾತಿಗಳಿಗೆ ಸ್ಪೆಶಲ್ ದರದ ಬಡ್ಡಿ ಕೊಡಲಾಗುವುದು.
ಹೆಚ್ಚಿನ ವಿವರಗಳಿಗೆ ಸಮೀಪದ ಯಾವುದಾದರೊಂದು ನಮ್ಮ ಶಾಖೆಯೊಡನೆ ವಿಚಾರಿಸಿರಿ.
THE KARNATAKA BANK LIMITED

ಅಭಿವೃದ್ಧಿಪಥದಲ್ಲಿ ಭಾರತ—

ವಿದ್ಯುಚ್ಛಾಲಿತ ರೈಲುಗಾಡಿಗಳು

ಕಲ್ಕತ್ತೆಯ ಉಪನಗರಗಳಲ್ಲಿ ರೈಲುಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸುವ ವತ್ತು ಜೋರಾ ಮೊಘಲ್ ಸಾಂಗಿಗಳ ನಡುನೆ ವಿದ್ಯುಚ್ಛಕ್ತಿ ರೈಲುಗಳನ್ನು ಓಡಿಸುವ ವಿಷಯ ಹಲವು ವರ್ಷಗಳಿಂದಲೂ ಸರಕಾರದವರ ಪರಿಶೀಲನೆಯಲ್ಲಿದೆ. ಸ್ವಧನು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹೌರಾ–ಬರದ್ವಾನ್ ಮತ್ತು ತಾರಕೇಶ್ವರಿ ವಿಭಾಗದ ರೈಲುಗಾಡಿಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸುವ ಯೋಜನೆಗೆ ಮಂಜೂರಾತಿ ದೊರೆಯಿತು. ಇದು ಉಲ ವೈಲಿಗಳ ರೈಲು ಮಾರ್ಗ. ಅದಕ್ಕೆ ತಗಲುವ ವೆಚ್ಚ ೧೧ ಉಳ ಕೋಟಿ ರೂಗಳು ಹೌರಾ–ಬರದ್ವಾನ್ ಮಾರ್ಗದಲ್ಲಿ ಪ್ರಥಮತಃ ವಿದ್ಯುಚ್ಛಕ್ತಿ ಚಾಲಿತ ರೈಲುಗಾಡಿಯು ಈ ತಿಂಗಳಲ್ಲಿ ಓಡುವ ನಿರೀಕ್ಷೆಯಿದೆ.

ಭಾರತದಲ್ಲಿ ವಿದ್ಯುಚ್ಛಕ್ತಿ ಚಾಲಿತ ರೈಲುಗಾಡಿಗಳ ವ್ಯವಸ್ಥೆಯು ನೇರವಾದ ವಿದ್ಯುತ್ಪ್ರವಾಹಪದ್ಧತಿ (ಡಿ. ಸಿ. ಸಿಸ್ಟಂ) ಯಲ್ಲಿ ಮಾಡಲಾಗುತ್ತಿತ್ತು. ಮುಂಬೈ ಮತ್ತು ಮದರಾಸ್‌ಗಳಲ್ಲಿ ೧೫೦೦ ವೋಲ್ಟ್‌ಗಳ ಡಿ. ಸಿ. ವಿಧಾನವನ್ನು ಬಳಸಲಾಗುತ್ತಿದೆ. ಹೌರಾ–ಬರದ್ವಾನ್ ಮತ್ತು ತಾರಕೇಶ್ವರ ವಿಭಾಗದಲ್ಲಿ ೩೦೦೦ ವೋಲ್ಟ್‌ಗಳ ಡಿ. ಸಿ. ವಿಧಾನವನ್ನು ಬಳಸಲಾಗುವುದು. ಇದು ವಿಜ್ಞಾನದ ಮುನ್ನಡೆಯ ಪ್ರತಿಸಲ. ಈ ವಿಧಾನದಲ್ಲಿ ವೆಚ್ಚವು ಉಳಿತಾಯವಾಗುವುದಲ್ಲದೆ, ಉತ್ತಮ ಚಾಲನವ್ಯವಸ್ಥೆ ಇರುವುದು.

ರೈಲುಗಾಡಿಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಓಡಿಸುವ ವಿಷಯದಲ್ಲಿ ನಡೆದ ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ೫೦ ಸೈಕಲ್‌ಗಳ ಪರ್ಯಾಯ ಪ್ರವಾಹ (ಎ. ಸಿ. ೫೦ ಸೈಕಲ್ಸ್ ಸಿಂಗಲ್ ಫೈಸ್) ವಿಧಾನವನ್ನು ಈಗ ವಿದೇಶಗಳಲ್ಲಿ ಉಪಯೋಗಿಸಲಾಗುತ್ತಿದೆ. ಫ್ರಾನ್ಸ್, ಬ್ರಿಟನ್, ಜಪಾನ್, ಬೆಲ್ಜಿಯಂ, ಕಾಂಗೊ, ಟರ್ಕಿ, ಪೋರ್ಚುಗಲ್‌ಗಳಲ್ಲಿ ಈ ವಿಧಾನವನ್ನು ಬಳಸಲಾಗುತ್ತಿದೆ. ರಷ್ಯಾ ಸಹಾ ಈ ವಿಧಾನದಲ್ಲಿ ಬೃಹತ್ ಯೋಜನೆಯನ್ನು ಆರಂಭಿಸಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರೈಲುಗಾಡಿಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸುವ ವ್ಯವಸ್ಥೆಯ ಕಾರ್ಯಕ್ರಮ ಅಧಿಕ ಪ್ರಮಾಣದಲ್ಲಿರುವುದೇ ಇದೆ. ಇದು ಮುಂದೆ ರೈಲುಗಾಡಿಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸುವಲ್ಲಿ, ನೇರವಾದ ಪ್ರವಾಹ (ಡಿ. ಸಿ.) ಪದ್ಧತಿಯನ್ನು ಅನುಸರಿಸಬೇಕು ಅಥವಾ ಪರಿಯಾಯ ಪ್ರವಾಹ ಪದ್ಧತಿಯನ್ನು ಅನುಸರಿಸಬೇಕೆಂಬ ಮೂಲ ವಿಷಯವನ್ನು ಕುರಿತು ನಿರ್ಣಯವನ್ನು ಕೈಗೊಳ್ಳಬೇಕಾಗಿದೆ.

ಕಳೆದ ವರ್ಷ ಭಾರತ ಸರಕಾರದ ಆಹ್ವಾನದ ಮೇರೆಗೆ, ಫ್ರಾನ್ಸಿನ ರೈಲ್ವೆ ಎಂಜಿನಿಯರ ನಿಯೋಗವೊಂದು ಭಾರತಕ್ಕೆ ಆಗಮಿಸಿತ್ತು. ನಿಯೋಗದ ಸದಸ್ಯರು ಭಾರತದಲ್ಲಿ ಎ. ಸಿ. ವಿಧಾನವನ್ನು ಅನುಸರಿಸಬೇಕೆಂದು ಶಿಫಾರಸು ಮಾಡಿರುವರು.

ಭಾರತದ ರೈಲ್ವೆ ಎಂಜಿನಿಯರು ಅವರ ಶಿಫಾರಸುಗಳನ್ನು ತೀವ್ರವಾಗಿ ಪರ್ಯಾಲೋಚಿಸಿದರು. ಆದಾಗ್ಯೂ ಸಹ, ಕೆಲವು ಸಂದೇಹಗಳು ಇನ್ನೂ ಪರಿಹಾರವಾಗದೆ ಉಳಿದವು ಆದಕ್ಕಾಗಿ ಈ ವಿಷಯವನ್ನು ಇನ್ನೂ ಜಿನ್ನಾಗಿ ಪರ್ಯಾಲೋಚಿಸಲು ನಿಯೋಗವೊಂದನ್ನು ಯೂರೋಪಿಗೆ ಕಳುಹಿಸುವ ನಿರ್ಣಯವನ್ನಾಯಿತು ಆದರೆ, ಇದರಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮದಲ್ಲಿ ಇನ್ನು ಹೆಚ್ಚು ವಿಳಂಬವಾಗುವುದೆಂದು ತಿಳಿದು ಈ ನಿಯೋಗವು ಯೂರೋಪಿನ ವಿಶೇಷಜ್ಞರ ಅಭಿಪ್ರಾಯವನ್ನು ಪಡೆದ ನಂತರ, ಯಾವ ವಿಧಾನವನ್ನು ಅನುಸರಿಸಬೇಕೆಂಬ ಬಗೆಗೆ ನಿರ್ಣಯವನ್ನು ಕೈಗೊಳ್ಳಬಹುದೆಂಬ ಅಧಿಕಾರವನ್ನೂ ಈ ನಿಯೋಗಕ್ಕೆ ನೀಡಲಾಯಿತು.

ರೈಲ್ವೆ ಮಂಡಲಿಯ (ಎಂಜಿನಿಯರಿಂಗ್) ಸದಸ್ಯರಾದ ಶ್ರೀ ಕರಸೈಲ್ ಸಿಂಹರವರು ಈ ನಿಯೋಗದ ನಾಯಕರಾಗಿದ್ದಾರೆ. ರೈಲ್ವೆಯ ಹಿರಿಯ ವಿದ್ಯುಚ್ಛಕ್ತಿ ಎಂಜಿನಿಯರುಗಳಾದ ಶ್ರೀ ಎಲ್. ಎಸ್ ಮಾಥುರ್ ಮತ್ತು ಎಸ್. ಸಿ. ಬಿ. ಮಜುಂದಾರ್ ಈ ನಿಯೋಗದ ಇತರ ಸದಸ್ಯರಾಗಿರುತ್ತಾರೆ

ಈ ನಿಯೋಗದ ಸದಸ್ಯರು ಫ್ರಾನ್ಸ್, ಬ್ರಿಟನ್, ಪಶ್ಚಿಮ ಜರ್ಮನಿ, ಜಪಾನ್ ಮತ್ತು ಟರ್ಕಿಗಳಿಗೆ ಭೇಟಿಯಿತ್ತು ಅಲ್ಲಿ ರೈಲ್ವೆ ಅಧಿಕಾರಿಗಳು ಮತ್ತು ವಿಶೇಷಜ್ಞರೊಡನೆ ಸಮಾಲೋಚನೆ ನಡೆಸಿದರು. ಆದರ ಫಲವಾಗಿ ಭಾರತದಲ್ಲಿ ಎ. ಸಿ. ವಿಧಾನವನ್ನು ಅನುಸರಿಸಬೇಕೆಂದು ನಿರ್ಣಯವಾಯಿತು. ಇದಕ್ಕೆ ಬಂಡವಾಳವೂ ಕಡಿಮೆ ಹಿಡಿಯುವುದು; ನಿರ್ವಹಣೆ ವೆಚ್ಚವೂ ಕಡಿಮೆ ಸಾಕಾಗುವುದು ಈ ನಿಯೋಗವು ಭಾರತಕ್ಕೆ ಬರುವ ಮುನ್ನ ಪೂರ್ವ ಮತ್ತು ಆಗ್ನೇಯ ರೈಲ್ವೆಗಳಲ್ಲಿ ವಿದ್ಯುಚ್ಛಕ್ತಿಯ ರೈಲುಗಾಡಿಗಳನ್ನು ಓಡಿಸುವ ಯೋಜನೆಯನ್ನು ಸಿದ್ಧಗೊಳಿಸಲು ತಾಂತ್ರಿಕ ಒಪ್ಪಂದವನ್ನು ಕೈಗೊಳ್ಳುವಂತೆ ಅಧಿಕಾರವನ್ನು ಪಡೆಯಿತು. ಆದರಂತೆ ಫ್ರೆಂಚ್ ರಾಷ್ಟ್ರೀಯ ರೈಲ್ವೆಯವರೊಂದಿಗೆ ತಾಂತ್ರಿಕ ಒಪ್ಪಂದವೊಂದನ್ನು ಈ ನಿಯೋಗವು ಕೈಗೊಂಡಿತು.

ಭಾರತೀಯ ಎಂಜಿನಿಯರು ಮತ್ತು ಸಿಬ್ಬಂದಿಗೆ ತಾಂತ್ರಿಕ ತರಬೇತಿಯನ್ನು ನೀಡುವುದಕ್ಕೂ ಈ ಒಪ್ಪಂದದಲ್ಲಿ ಅವಕಾಶವಿರುವುದು. ಈ ಒಪ್ಪಂದದ ಪ್ರಕಾರ, ಫ್ರೆಂಚ್ ರೈಲ್ವೆಯ ೫ ಮಂದಿ ಎಂಜಿನಿಯರು ಭಾರತಕ್ಕೆ ಕೆಲವು ದಿನಗಳ ಹಿಂದೆ ಬಂದರು.

ಈ ನಿಯೋಗವು ಯುರೋಪಿನ ವಿವಿಧ ರಾಷ್ಟ್ರಗಳಲ್ಲಿರುವ ೮ ಸಂಸ್ಥೆಗಳೊಂದಿಗೆ ೫೦ ಎ. ಸಿ. ವಿದ್ಯುಚ್ಛಕ್ತಿ ಲೊಕೊಮೊಟಿವ್‌ಗಳಿಗೆ ಬೇಡಿಕೆಯನ್ನಿಟ್ಟು ಬಂದಿದೆ ಈ ಸಂಸ್ಥೆಗಳು ಫ್ರಾನ್ಸ್, ಜರ್ಮನಿ, ಬೆಲ್ಜಿಯಂ ಮತ್ತು ಸ್ವಿಡ್ಜರ್ಲೆಂಡ ನೆಲ್ಲಿವೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧,೫೭೨ ವೈಲಿಗಳಷ್ಟು ದೂರ ರೈಲುಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸುವ ಕಾರ್ಯಕ್ರಮವಿರುವುದು. ಈ ಕಾರ್ಯಕ್ರಮದಲ್ಲಿ ಹೆಚ್ಚು ಭಾಗವು ಪೂರ್ವ ರೈಲ್ವೆಯಲ್ಲಿ ನಡೆಯುವುದು. ಆಗ್ನೇಯ ರೈಲ್ವೆಯಲ್ಲೂ ಗಣನಾರ್ಹ ಪ್ರಮಾಣದಲ್ಲಿ ಈ ಕೆಲಸವು ನಡೆಯುವುದು.

ಪೂರ್ವ ರೈಲ್ವೆಯಲ್ಲಿ ಗ್ರ್ಯಾಂಡ್ ಕಾರ್ಡ್ ನೂರ್ಗ ಪೂ, ಹೌರಾ–ಸೊಘಲ್ ಸರಾಯ್ ವಿಭಾಗದಲ್ಲಿ ರೈಲುಗಾಡಿಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸಲು ಉದ್ದೇಶಿಸಲಾಗಿದೆ. ಆಗ್ನೇಯ ರೈಲ್ವೆಯಲ್ಲಿಯೇ ಆಸನ್‌ಸೊಲದಿಂದ ರಾಣಿಕೈಲಾ, ರೂಕ್ಕೆಲಾದಿಂದ ಬಾರಜನುಬಾ; ಕಲ್ಕತ್ತೆಯ ಸುತ್ತ ಉಪನಗರದ ರೈಲುಗಳು, ದಕ್ಷಿಣ ರೈಲ್ವೆಯಲ್ಲಿ ತಾಂಬರಂ—ವಿಲ್ಲುಪುರಂಗಳಲ್ಲಿ ಮುಖ್ಯ ಮಾರ್ಗಗಳಲ್ಲಿ ರೈಲು ವಿದ್ಯುಚ್ಛಕ್ತಿಯಿಂದ ನಡೆಸಲು ಉದ್ದೇಶಿಸಲಾಗಿದೆ.

ಪೂರ್ವ ಮತ್ತು ಆಗ್ನೇಯ ರೈಲ್ವೆಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸುವ ಕಾರ್ಯಕ್ರಮವು ೧೯೬೦ರ್ಷ್ಟಿಗೆ ಪೂರ್ಣಗೊಳ್ಳುವುದು. ಮಧ್ಯ ಮತ್ತು ದಕ್ಷಿಣ ರೈಲ್ವೆಯ ಯೋಜನೆಗಳನ್ನು ಕೈಗೆ ತೆಗೆದುಕೊಳ್ಳಲಾಗಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

H. O ಉಡುಪಿ. ESTD: 1925.

ವಿಸ್ತೃತವಾದ ಬ್ಯಾಂಕಿಂಗ್ ಸೇವೆಗೆ ಅನುಕೂಲವಾಗುವಂತೆ ಬಾದಾಮಿ, ಜಮಖಂಡಿ, ಇಳ್ಕಲ್ ಗುಳೇದಗುಡ್ಡ, ಶೃಂಗೇರಿ, ಗುಂಟಕಲ್ ಈ ಆರು ಊರುಗಳಲ್ಲಿ ಆರು ಹೊಸ ಶಾಖೆಗಳನ್ನು ತೆರೆಯಲಾಗಿದೆ.

ಈಗ "ಸಿಂಡಿಕೇಟ್ ಬ್ಯಾಂಕಿ"ನ ಶಾಖೆಗಳ ಸಂಖ್ಯೆ 102 ಎಂದು ತಿಳಿಸಲು ಸಂತೋಷಪಡುತ್ತೇವೆ.

ಈ 102 ನೂರೆರಡು ಶಾಖೆಗಳೂ ನಿಮ್ಮ ಸೇವೆಗೆ ಸಿದ್ಧವಿವೆ.

The Canara Industrial & Banking Syndicate Ltd., Udipi, S. K.

ಕ್ಷಯರೋಗನಿವಾರಣಾ ಚಳವಳಿ

ರಾಷ್ಟ್ರಪತಿಗಳ ಸಂದೇಶ

ದೇಶದಲ್ಲಿ ಎಂಟನೆ ಕ್ಷಯರೋಗ ನಿವಾರಣಾ ಚಳವಳಿ ಪ್ರಾರಂಭೋತ್ಸವದ ಕಾಲದಲ್ಲಿ ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರು ಭಾರತದ ಕ್ಷಯರೋಗ ನಿವಾರಣಾ ಸಂಘಕ್ಕೂ ಕೆಲಸಗಾರರಿಗೂ ಅಭಿನಂದನೆ ಸಲ್ಲಿಸಿ ಶುಭಾರಯೆಸ್ಸಗಳನ್ನು ಸಂದೇಶರೂಪದಲ್ಲಿ ಕಳುಹಿಸಿರುವರು. ಆದರಲ್ಲಿ ಅವರು ಕ್ಷಯ ರೋಗಪೀಡಿತರಿಗೆ ಚಿಕಿತ್ಸೆ ನೀಡಲು ಮತ್ತು ಕ್ಷಯರೋಗ ನಿರೋಧದಗತಿ ಮುಂಜಾಗ್ರತೆ ವಹಿಸುವ ಪ್ರಚಾರ ಕಾರ್ಯವೆಸಗಲು ಟಿ. ಬಿ. ಮೊಹರುಗಳ ಮಾರಾಟದ ಬೆಳುವಳಿಯನ್ನು ಸ್ಥಾಪಿಸಿರುವುದಾಗಿ ಈ ಮೊಹರುಗಳನ್ನು ಪಡಕೊಂಡು ಕಿಂಚಿತ್ ರೂಪದಲ್ಲಿ ಸಹಾಯಮಾಡುವುದಾದರೂ ಆದರ ಪ್ರಯೋಜನವು ಬಡಜನರಿಗೆ ದೊರೆಯುವುದು ಮಾತ್ರವಲ್ಲದೆ ಈ ಭಯಾನಕ ರೋಗವನ್ನು ತಡೆಗಟ್ಟಲು ಜನತೆಯಲ್ಲಿ ಸಜಾಗ್ರತೆಯುಂಟಾಗುವುದು ಈ ದೃಷ್ಟಿಯಿಂದ ಸಾರ್ವಜನಿಕರು ಟಿ. ಬಿ ಮೊಹರುಗಳನ್ನು ಕೊಂಡುಕೊಂಡು ಟ್ಯೂಬರ್ ಕ್ಯುಲೋಸಿಸ್ ಎಸೋಸಿಯೇಶನಿಗೆ ಸಹಕಾರ ಬೆಂಬಲಕೊಡಬೇಕು ಎಂದು ಆಶಿಸಿ ಜಯವನ್ನು ಕೋರಿರುವರು.

ವಿದೇಶಿ ಧನ ವಿನಿಮಯವನ್ನು ಉಳಿಸುವ ಸಲುವಾಗಿ ರೈಲ್ವೆ ಮಂಡಲಿಯವರು, ಕಲ್ಕತ್ತೆಯ ಸುತ್ತ ಮುತ್ತಿನ ಉಪನಗರಗಳಲ್ಲಿ ಓಡುವ ರೈಲುಗಳು ವಿದ್ಯುಚ್ಛಕ್ತಿ ಲೊಕೋಮೋಟಿವ್ ಮತ್ತು ಕೋಚ್‌ಗಳನ್ನು ಉವಯೋಗಿಸಬೇಕೆಂದು ನಿರ್ಣಯಿಸಲಾಗಿದೆ. ಇದರಿಂದ ಬಂಡವಾಳ ಸ್ವರೂಪದ ವೆಚ್ಚದ ಬಾಬಿನಲ್ಲಿ ೭ ಕೋಟಿ ರೂಗಳಷ್ಟು ವಿದೇಶೀ ಧನ ವಿನಿಮಯವು ಉಳಿತಾಯವಾಗುವುದು.

ಭಾರತದಲ್ಲಿ ರೈಲುಗಾಡಿಗಳನ್ನು ಓಡಿಸಲು ೫೦ ಸೈಕಲ್‌ಗಳ ಎ. ಸಿ. ವಿಧಾನವನ್ನು ಅಂಗೀಕರಿಸಿರುವುದರಿಂದ ಅಂಚೆ ಮತ್ತು ತಂತಿ ಇಲಾಖೆಯವರು ಈಗ ಹಾಕಿರುವ ತಂತಿ ಮಾರ್ಗವನ್ನು ತೆಗೆದು ಭೂಮ್ಯಂತರ್ಗತ ಕೇಬಲ್‌ನ್ನು ಹಾಕಬೇಕಾಗುವುದು. ಇದರಿಂದ ದೂರದ ತಂತಿ ಸಂಪರ್ಕ ವ್ಯವಸ್ಥೆಯೂ ಉತ್ತಮಗೊಳ್ಳುವುದು.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ದಕ್ಷಿಣ ಕನ್ನಡದ ಶೈಕ್ಷಣಿಕ ಸಮ್ಮೇಳನ–

ಶಿಕ್ಷಕರಲ್ಲಿ ಜಾಗೃತಿ ಮೂಡಿದೆ

ನವಕರ್ನಾಟಕ ರಾಜ್ಯವು ರೂಪು ಗೊಂಡ ನಂತರ .ವ್ಯಥಮವಾಗಿ ದಕ್ಷಿಣ ಕನ್ನಡ ಜಿಲ್ಲಾ ಶೈಕ್ಷಣಿಕ ಸಮ್ಮೇಲನವು ಕಳೆದ ನವೆಂಬರ್ ೧೦ರಂದು ಕಾರ್ಕಳದ ಲ್ಲಿ ಜರಗಿತು. ಕರ್ನಾಟಕ ರಾಜ್ಯ ನಿರ್ಮಾಣದ ಫಲವಾಗಿ, ಬಹುಮಟ್ಟಿಗೆ ಅನ್ಯಾಯಕ್ಕೆ ಗುರಿಯಾದ ದಕ್ಷಿಣ ಕನ್ನಡದ ಅಧ್ಯಾಪಕರು ಪ್ರಥಮವಾಗಿ ಕಾರ್ಕಳದಲ್ಲಿ ಪರಸ್ಪರತ್ತನ್ನು ಜರಗಿಸಿದ್ದಾರೆ. ಹಿಂದಿನ ವಿದ್ಯಾ ಸಮ್ಮೇಳನಗಳಲ್ಲಿಲ್ಲದ ಉತ್ಸಾಹ, ಚಟುವಟಿಕೆ, ಕಾರ್ಯತತ್ಪರತೆಗಳು ಈ ಬಾರಿಯ ಅಧಿವೇಶನದಲ್ಲಿ ಕಂಡುಬಂದು ದೊಂದು ವೈಶಿಷ್ಟ್ಯ! ಎಂದು, ಒಂಗೂಡಿ ದೆ ಸಾವಿರಕ್ಕೂ ಮಿಕ್ಕಿದ ಅಧ್ಯಾಪಕ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದುದು ಸ್ಪಷ್ಟವಾಗಿ ಎತ್ತಿ ತೋರಿಸುವುದು. ಕಾರ್ಕಳದ ಸಮ್ಮೇಳನವು ಯಶಸ್ವಿಯಾಗಿತ್ತು; ವೈಶಿಷ್ಟ್ಯಪೂರ್ಣವಾಗಿತ್ತು; ಫಲಕಾರಿಯಾಗಿತ್ತು.

ಕಾರ್ಕಳದ ಜೈ ಹಿಂದ್ ಟಾಕೀಸಿನಲ್ಲಿ ಜರಗಿದ ಈ ಸಮ್ಮೇಳನವು ವ್ಯವಸ್ಥಾಬದ್ಧವಾಗಿತ್ತು. ಅಂದು ಸೂರ್ಯಾಸ್ತ ವಿಷಯ ನಿರ್ಣಾಯಕ ಸಮಿತಿಯು ಸಭೆ ಜರಗಿತು. ದ. ಕ. ಜಿಲ್ಲಾ ಅಧ್ಯಾಪಕರ ಗಿಲ್ಡಿನ ಅಧ್ಯಕ್ಷ ಶ್ರೀ. ಎಸ್. ಮುಕುಂದರಾಯರು ಸ್ವಾಗತ ಭಾಷಣ ಮಾಡಿದರು. ಆ ಬಳಿಕ ಗಿಲ್ಡಿನ ಕಾರ್ಯದರ್ಶಿಗಳಾದ ಶ್ರೀ ವೆಂಕಟ್ಕೃಷ್ಣರಾಯರು ಸಮ್ಮೇಳನದ ಠರಾವ್ಗಳನ್ನು ಓದಿ ಹೇಳಿದರು. ಸೂಕ್ತ ತಿದ್ದುಪಡಿಗಳು ಸೂಚಿಸಲ್ಪಟ್ಟು, ಬಂಕ್ಕೂ ಮಿಕ್ಕಿದ ಠರಾವುಗಳು ಮಂಜೂರಾದುವು. ಮಂಜೂರಾದ ಠರಾವುಗಳನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ವಿಂಗಡಿಸಬಹುದು. ಉಪಾಧ್ಯಾಯರ ಸಂಬಳ ಬಡ್ತಿಗೆ ಸಂಬಂಧಿಸಿದುವು. ಶಿಕ್ಷಣ ಕ್ರಮ ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದುವು. ಅಧ್ಯಾಪಕರ ಕೆಲಸ ಮತ್ತು ಸೇವೆಗಳಿಗೆ ಸಂಬಂಧಿಸಿದುವು. ಈ ಠರಾವುಗಳು ಮಂಜೂರಾದುವು. ಮುಖ್ಯವಾಗಿ, ೧-೧-೫೬ರಂದು ಪ್ರಸಿದ್ಧಿಸಿದ ಹೊಸ ನೇಮಕ ಪಟ್ಟಿಯನ್ನು ಎಲ್ಲ ಆಡಳಿತೆಯ ಶಾಲೆಗಳ ಅಧ್ಯಾಪಕರಿಗೂ ಅನ್ವಯಿಸಬೇಕೆಂಬುದು ಸಮಸ್ತ ಠರಾವುಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದಿತ್ತು.

ಅಪರಾಹ್ನ ಕಾರ್ಕಳದ ಸ್ವಾಗತ ಸಮಿತಿಯವರು ಪ್ರತಿನಿಧಿಗಳಿಗೆ ಭೋಜನದ ವ್ಯವಸ್ಥೆಯನ್ನು ಮಾಡಿದ್ದರು. ಎಸ್. ವಿ. ಟಿ. ಹಾ. ಎ. ಶಾಲೆಯಲ್ಲಿ ಅತಿ ಉತ್ತಮ ರೀತಿಯಲ್ಲಿ ಭೋಜನ ವ್ಯವಸ್ಥೆ ನಡೆದಿತ್ತು. ಅಪರಾಹ್ನ ಮೂರು ಗಂಟೆಗೆ ಬಹಿರಂಗ ಅಧಿವೇಶನವು ಆರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಎನ್. ಎಂ. ಅಡ್ಯಂತಾಯರು ಸ್ವಾಗತ ಭಾಷಣವನ್ನು ಮಾಡುತ್ತಾ ಅತಿಥಿಗಳಿಗೆ, ಪ್ರತಿನಿಧಿಗಳಿಗೆ ಹಾರ್ದಿಕ ಸ್ವಾಗತವನ್ನು ಕೋರಿದರು. ಶ್ರೀ. ವಿದ್ಯಾವಿಭೂಷಣ ಎಂ. ಪಿ. ಎಲ್. ಶಾಸ್ತ್ರಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಮಾನ್ಯ ವಿದ್ಯಾ ಮಂತ್ರಿ ಶ್ರೀ. ವೆಂಕಟಪ್ಪನವರು ಸ್ಥಳಾಭಾವದ ನಿಮಿತ್ತ ಉದ್ಘಾಟನೆ ಮಾಡಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಶಿಕ್ಷಕರ ನವೋತ್ಸಾಹ ಪೂರಿತವಾದ ಈ ಸಮ್ಮೇಳನವನ್ನು ಉದ್ಘಾಟಿಸಲು ಸಂತೋಷವಾಗುತ್ತದೆ. ಉಪಾಧ್ಯಾಯರುಗಳು ಜವಾಬ್ದಾರಿಯುತರು. ಪ್ರಾಚೀನ ಕಾಲದ ಪಾಠಶಾಲೆಗಳಲ್ಲಿ ೧೦ ವಿದ್ಯಾರ್ಥಿಗಳಿದ್ದರೆ ಈಗ ಅವಕ್ಕೆ ಬದಲಾಗಿ ೧೦೦ ವಿದ್ಯಾರ್ಥಿಗಳಿದ್ದಾರೆ. ಅಂತಹುದರಲ್ಲಿ ವಿದ್ಯಾ ಸುಧಾರಣೆಗಳು ಜಾರಿಗೆ ಬರುವುದರಲ್ಲಿ ಕಷ್ಟಗಳಿವೆ. ಅಧ್ಯಾಪಕರಿಗೆ ಎಲ್ಲಿರಿಗೂ ಇರುವ ತೊಂದರೆಗಳು ಇವೆ. ಅವರ ಜೀವನ ಮಟ್ಟ ಏರಿಸುವ ವಿಷಯದಲ್ಲಿ ಬಹು ಮಟ್ಟಿಗೆ ಕಡವಾಗಿದೆ. ಈ ಕಾರ್ಯ ಎಷ್ಟು ಜಾಗ್ರತೆಯಾಗಿ ನಡೆಯಬೇಕಾಗಿತ್ತೋ ಅಷ್ಟು ಜಾಗ್ರತೆಯಾಗಿ ನಡೆದಿಲ್ಲ. ಇದರಿಂದ ಈ ವಿಳಂಬವು ಇತರರಿಗೆಲ್ಲಾ ತಿಳಿಯುವಂತಾಯಿತು. ಉಪಾಧ್ಯಾಯರಿಗೆ ಇತರರಿಗಿರುವ ಸೌಕರ್ಯಗಳು ಬಹಳ ಮಟ್ಟಿಗೆ ಕಡಿಮೆ ಇವೆ. ಇದು ನಮ್ಮ ದೇಶದಲ್ಲಿ ಮಾತ್ರವಲ್ಲ ಕೋಟಿಗಟ್ಟಲೆಯ ದೇಶವಾದ ಅಮೇರಿಕಾದಲ್ಲೂ ಇದೆ.

ವಿದ್ಯಾಖಾತೆಯು ಕೇವಲ ಖರ್ಚು ಮಾಡುವ ಖಾತೆ ಎಂದು ಹೇಳುವುದಾದರೆ ಅದು ಘೋರ ಅನ್ಯಾಯವಾದೀತು. ಸಂಪತ್ತೆಂದರೆ ರೂಪಾಯಿ ನೋಟ್ಗುಗಳಲ್ಲಿ. ವಿದ್ಯಾಖಾತೆಯು, ನಮ್ಮ ವಿದ್ಯಾಮಂದಿರಗಳು ಭಾರತಕ್ಕೆ ವಿಶ್ವೇಶ್ವರಯ್ಯ ನವರಂತಹ ಮೇಧಾವಿಗಳನ್ನು, ಪ್ರತಿಭಾಶಾಲಿಗಳನ್ನು ಧೈರ್ಯಶಾಲಿಗಳನ್ನು ಇತ್ತಿದೆ. ಇದಕ್ಕಿಂತ ಹೆಚ್ಚಿನ ಸಂಪತ್ತು ಯಾವುದು? ಇದನ್ನು ಅಳೆಯುವ ಅಳತೆಗೋಲು ಯಾವುದು? ವಿದ್ಯಾಖಾತೆಯಂತಹ ದೇಶದ ಸಂಪತ್ತನ್ನು ಹೆಚ್ಚಿಸುವ ಶಾಖೆ ಬೇರೊಂದಿಲ್ಲವೆಂದು ನಾನು ಹೇಳಬಲ್ಲೆ. ಈ ಇಲಾಖೆಗೆ ಬೇಕಾದ ಸೌಕರ್ಯ, ಅನುಕೂಲತೆ ಒದಗಿಸಲು ಸರಕಾರ ಹಾಗೂ ಜನತೆ ಮುಂದಾಗಬೇಕು. ಅಂತಹ ಸಂದರ್ಭ ಜನತೆಯೊಡನೆ ವಿಚಾರವಿನಿಮಯ ಸಂಪರ್ಕ ಬೆಳೆಸುವುದು ಅಗತ್ಯ. ಅದಕ್ಕೆ ಇಂತಹ ಸಮ್ಮೇಳನಗಳು ಸಹಕಾರಿಯಾಗುವುವು. ಹಿರಿದು ಹಿಂಜಾಗಿ ಹೋದ ಕನ್ನಡನಾಡು ಒಂಬತ್ತಾಗಿ ವರ್ಷ ಒಂದು ಕಳೆಯಿತು. ಈ ಸಂದರ್ಭ ಬೇರೂರಿದ ವಿವಿಧ ಸಮಸ್ಯೆಗಳನ್ನು ಅದಷ್ಟು ಜಾಗ್ರತೆಯಾಗಿ ಸರಕಾರವು ತೀವ್ರಗಾಮಿಸಲು ತಜ್ಞರ ಸಮಿತಿ ನೇಮಿಸಿದೆ. ಆ ಸಮಿತಿಯ ಸದಸ್ಯರು ತುಂಬಾ ಜವಾಬ್ದಾರಿಯುಳ್ಳವರಾದುದರಿಂದ ಈ ವರೆಗೆ ಸಮಿತಿ ಸೇರಿದುದಾಗಲಿಲ್ಲ. ಅವರ ಅಭಿಪ್ರಾಯವನ್ನು ತಿಳಿದು, ಅದನ್ನು ಅಧ್ಯಾಪಕರ ಗಮನಕ್ಕೆ ತಂದು, ನಿಮ್ಮ ಅಭಿಪ್ರಾಯ ತಿಳಿದು, ಜ್ಯಾರಿಗೆ ತರುತ್ತೇನೆ. ಆದರೂ ಬಹಳ ಜನರಿಗೆ ಒಳ್ಳೆಯದಾಗುವ ರೀತಿ ನಾವು ಕೆಲಸಮಾಡುತ್ತೇವೆ ಎಂದು ಹೇಳಬಲ್ಲೆನೇ ಹೊರತು ಎಲ್ಲರಿಗೂ ಸಮಾಧಾನವಾಗುವ ರೀತಿ ಎಂದು ನಾನು ಹೇಳಲಾರೆ ಎಂದರು. ಉಪಾಧ್ಯಾಯರ ಜವಾಬ್ದಾರಿ, ವಿದ್ಯಾಕ್ರಮಗಳಲ್ಲಿ ಸುಧಾರಣೆಯಾಗುತ್ತಿರುವ ಈ ಕಾಲ ಹೆಚ್ಚಿನದು. ಯೋಜನೆಗಳನ್ನು ಕಾರ್ಯಗತಮಾಡುವ ಮೂಲ ಜನರು ಅಧ್ಯಾಪಕರು. ಅದಕ್ಕಾಗಿ ಶಕ್ತರಾದ ಅಧ್ಯಾಪಕರು ಬೇಕು. ಅದಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಶಕ್ತ ಅಧ್ಯಾಪಕರು ಶಕ್ತಿವಂತರಾಗಿ ಬಾಳಲು ಬೇಕಾದ ಸೌಕರ್ಯಗಳನ್ನು ಒದಗಿಸಬೇಕು. ಈ ಕಾರ್ಯ ಎಲ್ಲರೂ ಸೇರಿ ಮಾಡಬೇಕಾದುದು ಎಂದರು. ಮುಖ್ಯವಾಗಿ ಭಗವಂತನು ನಿಮಗೆಲ್ಲಾ ಸಹಾಯವನ್ನಾಗಲಿ (!) ಎಂದು ಹಾರೈಸಿ ತಮ್ಮ ಭಾಷಣ ಮುಗಿಸಿದರು.

ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಶ್ರೀ. ಎಂ. ಪಿ. ಎಲ್. ಶಾಸ್ತ್ರಿಗಳು ಮಾತನಾಡಿದರು. ಸುಬೋಧಕವಾದ, ಅರ್ಥಗರ್ಭಿತವಾದ, ವಿಚಾರಪೂರ್ಣವಾದ, ಅಪೂರ್ವ ಶೈಲಿಯಿಂದೊಡಗೂಡಿದ, ಸುಶಾಸ್ತ್ರೀಯವಾದ ಭಾಷಣದಲ್ಲಿ ಶಾಸ್ತ್ರಿಗಳು ಭಾರತೀಯ ಶಿಕ್ಷಣದ ಸಿಂಹಾವಲೋಕನ ಮಾಡಿದರು. ಪ್ರಶ್ನೆತಿಯ ಬೆಡಗಿನಿಂದ ಮನೋಜ್ಞಕರವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌಜನ್ಯಶೀಲತೆ, ವಿನಯಶೀಲತೆ ಇದೆ. ಇಲ್ಲಿಯ ವಿದ್ಯಾ ಪ್ರಸಾರವನ್ನು ಕಂಡು ನಾನು ಅಚ್ಚರಿಗೊಂಡೆ. ದೀರ್ಘ ಕಾಲದ ಸಶ್ರಮದುಡಿಮೆಯೇ ಇದಕ್ಕೆ ಕಾರಣ. ಇಂತಹ ಅದ್ಭುತ ನಾಡಾದ, ವಿದ್ಯಾಕರತಾದ, ಚಿನ್ನದ ನಾಡು ನಿಮ್ಮ ಜಿಲ್ಲೆ. ಇಂತಹ ಜಿಲ್ಲೆಗೆ ನಾನೊಬ್ಬ ಯಾತ್ರಿಕನಾಗಿ ಬಂದಿದ್ದೇನೆ. ಪಾಠವಾಯದ ಭಾಗ್ಯವಡೆದು ಬಂದಿದ್ದೇನೆ. ತಮ್ಮಿಂದ ಕಲಿಯಲು ಬಂದಿದ್ದೇನೆ. ಇಲ್ಲೇನೆಲಸಿಬಿಡೋಣ ಎನ್ನುವ ತಲೆಯು ನನ್ನಲ್ಲಿ ಮೊಳೆಯುತ್ತಿದೆ. ಇಲ್ಲಿಯ ಶಿಕ್ಷಕರ ಸಮಸ್ಯೆಗಳು ಹೇರಳವಾಗಿವೆ ಎಂದು ಕೇಳಿ ನಾನು ಗಾಬರಿಪಟ್ಟು ಹಿಂದೆ ಹೋಗಬೇಕಾಗಿದೆ. ಭಾರತೀಯ ವಿದ್ಯಾ ಪರಂಪರೆ ಮಹತ್ತರವಾದುದು. ಗುರುಕುಲಗಳಲ್ಲಿ ಗುರುವನ್ನು ಆರಿಸಿ ವಿದ್ಯಾರ್ಥಿಯು ಕೋಗುತ್ತಿದ್ದರೆ ಈಗ ವಿದ್ಯಾರ್ಥಿಯನ್ನು ಆರಿಸಿ ಅಧ್ಯಾಪಕನು ಹೋಗಬೇಕಾಗಿದೆ. ಈಗಿನ ಶಿಕ್ಷಣದ ಗುರಿ, ಶ್ರಮ, ಪದ್ಧತಿಗಳಲ್ಲಿ ಬದಲಾವಣೆ ಅಗತ್ಯ. ಪ್ರಾಚೀನ ಕಾಲದಲ್ಲಿ ಎರಡು ವಿದ್ಯೆ ತಿಳಿದರೆ ಸಾಕೆಂಬ ಭಾವನೆ ಇತ್ತು. ಕೊನೆಗೆ ನಾಲ್ಕು ವೇದಗಳಷ್ಟನ್ನು ವೇದಾಂಗಗಳಷ್ಟನ್ನು, ಧರ್ಮ ಶಾಸ್ತ್ರ, ಅರ್ಥ ಶಾಸ್ತ್ರ, ನ್ಯಾಯ ಶಾಸ್ತ್ರ ಈ ರೀತಿ ೧೪ ವಿದ್ಯಾಂಗಗಳನ್ನು ಕಲಿಯಬೇಕೆಂದಾಯಿತು.

ವಾಕ್ಚಾತುರ್ಯದ ಸಂಪರ್ಕದ ದೆಸೆಯಿಂದ, ನಿಜಜ್ಞಾನದ ಪ್ರಭಾವದ ದೆಸೆಯಿಂದ ನಮ್ಮ ಶಿಕ್ಷಣ ಕ್ರಮ ಬದಲಾಯಿತು. ಇಂದಿನ ಕಾಲದಲ್ಲಿ ತಾಂತ್ರಿಕ ಶಿಕ್ಷಣದ ಆವಶ್ಯಕತೆ ಹೆಚ್ಚಿದೆ. ಇದಕ್ಕನುಗುಣವಾದ ಪ್ರವೃತ್ತಿ ನಿರ್ಮಿಸುವವರು ಅಧ್ಯಾಪಕರು. ಭಿನ್ನಭಿನ್ನವಾದ ಆವರಣದಿಂದ, ಭಿನ್ನಭಿನ್ನವಾದ ಸಾಂಸ್ಕೃತಿಕ ಹಿನ್ನೆಲೆಯುಳ್ಳ, ಭಿನ್ನಭಿನ್ನವಾದ ಜಾತಿ ನೀತಿ ಆಚಾರ ವಿಚಾರದ ಮಕ್ಕಳನ್ನು ನಕಮುಖವಾದ ಶಿಕ್ಷಣಕ್ಕೆ ಸರಿಪಡಿಸುವುದು ಅಧ್ಯಾಪಕರ ಜವಾಬ್ದಾರಿ. ಇಂತಹ ಜವಾಬ್ದಾರಿ ಹಿಂದಿನ ಅಧ್ಯಾಪಕರಿಗೆ ಇರಲಿಲ್ಲ. ಹಿಂದೆ ಆಯಾಯ ವೃತ್ತಿಗನ್ನು ಗುಣವಾದ ಬೋಧನೆ, ಅದಕ್ಕೆ ಸಂಬಂಧಪಟ್ಟವರಿಗೆ ಕೊಡಲ್ಪಡುತ್ತಿತ್ತು. ಇಂತಹ ಕಷ್ಟತಮ ಕಾರ್ಯದ ಸಿದ್ಧಿಗೆ ಮಡಿಯು ಬೇಕಾದ ಅಧ್ಯಾಪಕರ ಶಕ್ತಿ ಹೇಗಿರಬೇಕು? ಅವರ ಜೀವನಶಕ್ತಿ ಹೇಗಿದೆ? ಇದು ಆಲೋಚಿಸಬೇಕಾದ ವಿಷಯ.

ಶಿಕ್ಷಣವು ಗುರಿ ಕೇವಲ ಜ್ಞಾನ, ಪ್ರತಿಭೆಯ ಉತ್ಪಾದನೆಯಾಗಿರದೆ ವಿವೇಕೋದಯವೂ ಆಗಿರಬೇಕು. ಇಂದಿನ ವಿದ್ಯಾರ್ಥಿಗಳಲ್ಲಿ ವಿವೇಕ ಶೂನ್ಯವಾಗಿದೆ. ವಿವೇಕವು ಜ್ಞಾನದಲ್ಲಲ್ಲ. ಈಗಿನ ಶಿಕ್ಷಣವು ವಿದ್ಯಾರ್ಥಿಗಳನ್ನು ದೇವರಿಂದ ದೂರ ಮಾಡಿ ಮಣ್ಣಿನ ಕದಿಗೆ ತಂದಿದೆ. ಪೂರ್ಣ ವ್ಯಕ್ತಿತ್ವದ ನಿರೂಪಣೆಗೆ ಅದು ನೆರವಾಗುತ್ತಿಲ್ಲ. ಮಕ್ಕಳಲ್ಲಿ ತಾತ್ವಿಕ, ಅಧ್ಯಾತ್ಮಿಕ, ಹಾಗೂ ಧಾರ್ಮಿಕ ಭಾವನೆಗಳು ಬೆಳೆಯುವುದಕ್ಕೂ ಅವಕಾಶ ಕೊಡಬೇಕು. ಅದಕ್ಕಾಗಿ ಅವರಲ್ಲಿ ಹೃದಯಶಕ್ತಿ ತುಂಬಬೇಕು. ಇತರರಲ್ಲಿ ತನ್ನನ್ನು ಕಾಣುವ ಶಕ್ತಿ ಬೆಳೆಯಬೇಕು. ಇಲ್ಲದಿದ್ದರೆ ಅಂತಹ ಶಿಕ್ಷಣ ನಿಷ್ಫಲ.

ಶಿಕ್ಷಕರ ಪರಿಸ್ಥಿತಿಯು ಕುರಿತು ನಾಲ್ಕು ಮಾತು ಹೇಳಬೇಕಾಗಿದೆ. ಅವರಲ್ಲಿಂದು ಅಶಾಂತಿ ಹೆಚ್ಚಿದೆ, ಉಪಾಧ್ಯಾಯರು ಇಂದು ಏನು ಕೇಳುತ್ತಿದ್ದಾರೆ? ಕಲೆಕ್ಟರರಿಗೆ ಕೊಡುವ ಸಂಬಳ ನನಗೆ ಕೊಡಿ ಎಂದು ಕೇಳುವ ಧೈರ್ಯ ಅವರಲ್ಲಿಲ್ಲ. ಡಾಕ್ಟರರಂತೆ, ವಕೀಲರಂತೆ ವ್ಯಾಪಾರಿಗಳಂತೆ ಸಂಪತ್ತು

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

52-1906-1957- ಐವತ್ತೆರಡು ವರುಷಗಳ ಪರಿಪಕ್ವ ಅನುಭವ

...

ಮತ್ತು

ದಕ್ಷಿಣ ಭಾರತದ 5 ಸಂಸ್ಥಾನಗಳಲ್ಲಿ ಪಸರಿಸಿರುವ 49 ಶಾಖೆಗಳ ಮತ್ತು ದೇಶದಾದ್ಯಂತ ವಿಜಯಿ ವಿಶ್ವಾಸಗಳ ಮೂಲಕ ಅತ್ಯಾಧುನಿಕ ಬ್ಯಾಂಕಿಂಗ್ ಸೌಲಭ್ಯಗಳು. ಇದು ನಿಮ್ಮ ಬ್ಯಾಂಕಾಗಲು ಯೋಗ್ಯವಿದೆ!

ಮೂಲ್ಕಿ ಬ್ಯಾಂಕ್ ಲಿಮಿಟೆಡ್,

ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷವ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬ್ಯಾಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಸಂಗ್ರಹ ಮಾಡಲು ಬೇಕಾಗುವ ಸಂಬಳ ಕೊಡಿ ಅನುತ್ತಿದ್ದಾರೆಯೇ? ಅದೂ ಇಲ್ಲ ಕೇವಲ ಜೀವನನಿರ್ವಹಣೆಗೆ ದಾರಿ ಕೊಡಿ ಎನ್ನುತ್ತಿದ್ದಾರೆ. "ಸಮಾನ ಸೇವೆ—ಸಮಾನ ವೇತನ"—ಈ ಸಮಸ್ಯೆ ಒಪ್ಪೆಲು ಹನ್ನೆರಡು ತಿಂಗಳ ಗರ್ಭ ಆಗಬೇಕೇ? ಎಂದು ನೀವು ಪ್ರಶ್ನಿಸುವುದು ಸಹಜ. ಇದನ್ನು ನಾನು ಒಪ್ಪುತ್ತೇನೆ. ಆದರೆ ಹೊಸ ಬಗೆಯಆಡಳಿತಾವಿಧಾನಗಳುಳ್ಳ ಕನ್ನಡ ರಾಜ್ಯದ ಈ ಕ್ರಮಗಳನ್ನು ಕ್ರೋಢೀಕರಿಸಲು ಇಷ್ಟು ಅವಧಿ ಹೆಚ್ಚೇನಿಲ್ಲ.

ಶೈಕ್ಷಣಿಕ ಕ್ಷೇತ್ರದಲ್ಲಿ ವ್ಯಾಪಾರೀ ಸ್ವಾರ್ಥಭಾವ ಪ್ರವೇಶಿಸಬಾರದು. ಆಗಲೇ ವಿದ್ಯೆಯ ಗುರಿಯ ಸರ್ವನಾಶ ಗುರು ಶಿಷ್ಯ ಸಂಬಂಧದಲ್ಲಿ ವ್ಯಾಪಾರ ಇರಬಾರದು. ಈ ವ್ಯಾಪಾರಿ ಮನೋವೃತ್ತಿ ಬೆಳೆಯಗೊಡಲು ಬಿಡಬಾರದು. ಇದರಿಂದ ದೇಶಕ್ಕೆ ಗಂಡಾಂತರ ಕಾದಿದೆ. ಇಂದು ರಾಜಾ ದಿಲೀಪನಂತಹ ಶಿಷ್ಯರು ವಸಿಷ್ಠರಂತಹ ಗುರುಗಳೂ ಬೇಕಾಗಿದ್ದಾರೆ. ಸಮಾನ ಸೇವೆ—ಸಮಾನ ವೇತನದ ತತ್ವವನ್ನು ನಾನು ಒಪ್ಪುತ್ತೇನೆ. ನಿಮ್ಮ ಕೇಳಿಕೆಗಳು ಸಲ್ಲಲಿ ಎಂದು ಜಾರೈಸುತ್ತೇನೆ.

ಉಪಾಧ್ಯಾಯರು ತಮ್ಮ ಕರ್ತವ್ಯ ಚ್ಯುತರಾಗಬಾರದು. ಅಧ್ಯಾಪಕರು ಅಧ್ಯಯನ ಮಾಡದಿದ್ದರೆ ಅವನು ಆ ಸ್ಥಾನಕ್ಕೆ ಅರ್ಹನಲ್ಲ. ಅವರಲ್ಲಿ ಬ್ರಹ್ಮ ವರ್ಚಸ್ಸು ತುಂಬಬೇಕು. ಆದಕ್ಕಾಗಿ ಅಧ್ಯಾಪಕರು ತನ್ನ ಸ್ಥಾನವಮಾನಗಳನ್ನು ಕಾಪಾಡಿಕೊಳ್ಳಬೇಕಾದುದು ಅಗತ್ಯ ಎಂದರು. ಕಾರ್ಯಕ್ರಮದ ಸಮ್ಮೇಳನದ ಜೀವಾಳವೆಂದರೆ ಶ್ರೀ. ಶಾಸ್ತ್ರಿಗಳ ಸುಲಲಿತವಾದ ಭಾಷಣ ಇದೇ ಸಮ್ಮೇಳನಕ್ಕೆ ವಿಶೇಷ ಮೆರುಗನ್ನು ಇತ್ತಿತು.

ಅನಂತರ ಮೈಸೂರು ಡಿವಿಜನ್‌ನ

ಉಷಾ ಹೊಲಿಗೆ ಯಂತ್ರಗಳು



ನಗದಿಗೆ ಅಥವಾ ಸುಲಭ ಕಂತುಗಳ ಪದ್ಧತಿಯಲ್ಲಿ ಮಾರಾಟಕ್ಕೆ ಸಿಗುತ್ತವೆ.

ಎರಡು ವರ್ಷಗಳ ವರೆಗೆ ಉಚಿತ ದುರಸ್ತಿಯ ಗ್ಯಾರಂಟಿ.

ಪ್ರಮುಖ ಪಟ್ಟಣಗಳೆಲ್ಲೆಲ್ಲ ಉಷಾ ಏಜಂಟರಿದ್ದಾರೆ

ಸೋಲ್ ಸೆಲ್ಲಿಂಗ್ ಏಜಂಟರು:

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್, ಮದ್ರಾಸು—1

ಮೈಸೂರಿನಲ್ಲಿ ಮಿನುಗಾರಿಕೆ—

ಅಂಬಿಗರಿಗೆ ವಿಶೇಷ ಸವಲತ್ತುಗಳು

ಮೈಸೂರು ರಾಜ್ಯದಲ್ಲಿ ಮೀನುಗಾರಿಕೆಯಭಿವೃದ್ಧಿಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೭೪ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದರಲ್ಲಿ ೩೫.೭೮ ಲಕ್ಷ ರೂಪಾಯಿಗಳು ಕಡಲ ಮೀನುಗಾರಿಕೆಗಾಗಿಯೂ ೨೦.೭೮ ಲಕ್ಷ ರೂಪಾಯಿಗಳು ಇತರೆಡೆಗಳಲ್ಲಿ ನಡೆಯುವ ಮೀನುಗಾರಿಕೆಗಾಗಿಯೂ ವೆಚ್ಚ ಮಾಡಲ್ಪಡುವುವು ಪ್ರಚಲಿತ ವರ್ಷದಲ್ಲಿಯೇ ೧೪.೦೩ ಲಕ್ಷ ರೂಪಾಯಿಗಳನ್ನು ಈ ಉದ್ದಿಮೆಗಾಗಿ ಒದಗಿಸಲಾಗಿದೆ.

ಅಂಬಿಗರನ್ನು ಅಧಿಕ ಮೀನುಗಳ ಉತ್ಪಾದನೆ ಮಾಡಲು ಪ್ರೋತ್ಸಾಹಿಸುವಂತೆ ಅವರಿಗೆ ಅನೇಕ ವಿಧದ ಸೌಕರ್ಯಗಳನ್ನು ಒದಗಿಸಲಾಗಿದೆ. ಮೀನು

ರಿಪ್ಯೂಟಿ ಡೈರೆಕ್ಟರ್ ಶ್ರೀ. ವಾಸುದೇವಯ್ಯನವರು ಶಿಕ್ಷಣದ ಸಮಸ್ಯೆಗಳ ಕುರಿತು ಮಾತನಾಡಿ ತಾಂತ್ರಿಕ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿದರು ಜೊತೆಗೆ ಪ್ರಾಂತ್ಯ ವಿದ್ಯಾಪರಿಸತ್ತನ್ನು ಜರಗಿಸುವ ಕೋರಾದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಗಿಲ್ಡಿನ ಪರವಾಗಿ ಶ್ರೀ ಮುಕುಂದರಾಯರು ವಂದನಾರ್ಪಣೆ ಗೈದರು. ಅಂತೆಯೇ ಸ್ವಾಗತ ಸಮಿತಿಪರವಾಗಿ ಬಾಸ್ಕರ ರೈಗಳು ಕೃತಜ್ಞತೆ ಕೋರಿದರು. ಸಮ್ಮೇಳನ ಭಾಷಣದಲ್ಲಿ ಶಾಸ್ತ್ರಿಗಳು ಬುಧವಾರ ಜರಗುವ ಗ್ರೋಂಟ್ ಇನ್ ಎಯಿಡ್ ಕೋಟ್ ಸಬ್ ಕಮಿಟಿಯ ಸಭೆಯಲ್ಲಿ ದ ಕ.ದ ಶಿಕ್ಷಕರ ಬಗ್ಗೆ ತಾನು ಹೆಚ್ಚಿನ ಆಸಕ್ತಿ ವಹಿಸುವುದಾಗಿ ಹೇಳಿದರು.

ಸಮ್ಮೇಳನವು ಸರ್ವವಿಧದಿಂದಲೂ ಯಶಸ್ವಿಯಾಗಿತ್ತು ಉತ್ತಮ ವ್ಯವಸ್ಥೆ, ಏರ್ಪಾಡುಗಳು ಸಮ್ಮೇಳನದ ಯಶಸ್ಸಿಗೆ ಕಾರಣವಾಗಿದ್ದುವು. ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಕಾರ್ಕಳದ ಅಧ್ಯಾಪಕ ಬಂಧುಗಳೂ, ಆಪ್ತ ಮಹಿಳೆಯರೂ ವಿಶೇಷ ಮುತುವರ್ಜಿಯಿಂದ ಭಾಗವಹಿಸಿದ್ದರು. ಪ್ರಕೃತದ ಆವಶ್ಯಕ ಬೇಡಿಕೆಗಳನ್ನಷ್ಟೇ ಮುಂದಿರಿಸಿ ಕೆಲವೇ ರಾಯಭಗಳನ್ನು ಮುಂದಿಡುವುದು ಉತ್ತಮವಿತ್ತು. ಈಗಿನಂತೆ ಈ ತರಾವುಗಳನ್ನು ಮುಂದಿದ್ದುದು, ಪ್ರಕೃತದ ಪರಿಸ್ಥಿತಿಯಲ್ಲಿ ಸೂಕ್ತವಲ್ಲವೆಂದು ಕೆಲವರ ಅಭಿಪ್ರಾಯವು. ಈ ದಿಸೆಯಲ್ಲಿ ಕಾರ್ಯಕರ್ತರು ತುಸು ಆಲೋಚಿಸಬೇಕಿತ್ತು. ಕೆಲವು ರಾಯಭಗಳಂತೂ ಕೆಲವೇ ವರ್ಗದವರನ್ನು ಕೃಪ್ತಿಗೊಳಿಸಲು ಮಂಡಿಸಲ್ಪಟ್ಟಂತೆ ತೋರುತ್ತಿದ್ದುವು.

ಅಂತೂ ಮಹಾ ಮೈಸೂರಿನ ನಿರ್ಮಾಣದ ಬಳಿಕ ಸೇರಿದ ಈ ವಿದ್ಯಾ ಪರಿಷತ್ತು, ಸರ್ವವಿಧದಿಂದಲೂ ಆದರ್ಶದ ದಾರಿಯನ್ನೇ ತೋರಿದೆ. ಪರಿಷತ್ತಿನ ಕಾರ್ಯಕರ್ತರು ಧನ್ಯರು. ಈ ಪರಿಷತ್ತಿನ ಬಿಸಿಯಿಂದ ಲಾದರೂ ಅಧ್ಯಾಪಕರು ಎಚ್ಚೆತ್ತರೆ, ಇದರಿಂದ ಸ-ಕಾರದ ಕಣ್ಣು ತೆರೆದರೆ, ಆಗ ಈ ಪರಿಷತ್ತಿನ ಉದ್ದೇಶ ಕೈಗೂಡಿದಂತೆಯೇ.

(ಬರೆದುಬಂದುದು)

ಗಾರರಿಗೆ ಯಂತ್ರಚಜ್ಜಿತವಾದ ದೋಣಿಗಳನ್ನು ಸವಲತ್ತಿನ ಬೆಲೆಯಲ್ಲಿ ಒದಗಿಸಲಾಗುವುದು. ಒಂದು ಯಂತ್ರಸಜ್ಜಿತ ದೋಣಿಯ ಬೆಲೆಯು ರೂ ೧೨ ಸಾವಿರವಿದ್ದು ಅದರಲ್ಲಿ ೪೫೦೦ ರೂಪಾಯಿಗಳನ್ನು ಸಹಾಯದನವೆಂದೂ ಉಳಿದ ೭೫೦೦ ರೂಪಾಯಿಗಳನ್ನು ಸಾಲವೆಂದೂ ಅವರಿಗೆ ಕೊಡಲಾಗುವುದು.

ಪ್ರಚಲಿತ ವರ್ಷದಲ್ಲಿ ಒಂದು ಲಕ್ಷ ರೂಪಾಯಿ ಬೆಲೆಯ ಸಲಕರಣೆಗಳನ್ನು ಮೀನುಗಾರರಿಗೆ ಸವಲತ್ತಿನ ದರದಲ್ಲಿ ಪೂರಯಿಸಲಾಗುವುದು. ನಾಯಲಾನ್ ದಾರ ಮತ್ತು ಹತ್ತಿಯ ನೂಲು—ಇವುಗಳಿಗೆ ಅರ್ಧ ಸಹಾಯ ಧನ; ಗಾಳಗಳು, ಭಾರವೆತ್ತುವ ರಾಟೆಗಳು, ಗುಂಡುಗಳು, ಬೆಂಡುಗಳು ಮೊದಲಾದುವುಗಳಿಗೆ ಕಾಲಂಶ ಸಹಾಯ ಧನವಾಗಿಯೂ ಉಳಿದ ಹಣವನ್ನು ಸಾಲವಾಗಿಯೂ ನೀಡಲಾಗುವುದು.

ಐದು ನರ್ಷಜನ ಭವಿಷ್ಯವಿರುವ ಅಂಬಿಗ ಯುವಕರಿಗೆ ಯಂತ್ರ ಸಜ್ಜಿತ ನಾವೆಗಳನ್ನು ನಡೆಸುವುದರಲ್ಲಿ ತರಬೇತಿಯನ್ನಿಸಲು ದಕ್ಷಿಣ ಕನ್ನಡ ಜಿಲ್ಲೆಯ ಮಲ್ಪೆಯಲ್ಲಿ ತರಬೇತಿ ಕೇಂದ್ರವನ್ನು ತೆರೆಯಲಾಗುವುದು ತರಬೇತಿ ಅವಧಿಯು ಆರು ತಿಂಗಳದ್ದು ಪ್ರತಿಬಾರಿ ೩೦ ಜನೋದ್ದಾರರಿಗೆ ಮಾತ್ರ ಪ್ರವೇಶ ಕೊಡಲಾಗುವುದು. ತರಬೇತಿ ಅವಧಿಯಲ್ಲಿ ಪ್ರತಿಯೊಬ್ಬ ಶಿಬ್ಬಿರಾರ್ಥಿಗೆ ರೂ. ೫೦ರಂತೆ ವಿದ್ಯಾರ್ಥಿ ವೇತನವನ್ನೂ ರೂ. ೧೫ನ್ನು ಊಟದ ಭತ್ತೆಯಾಗಿಯೂ ಕೊಡುವುದಲ್ಲದೆ ಅವರ ಬರ ಹೋಗುವವೆಚ್ಚವನ್ನು ಸಹ ಸರಕಾರವೇ ವಹಿಸುವುದು

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಎರಡು ಮಂಜುಗೆಡ್ಡೆ ಮತ್ತು ಶೀತ ಸಂಗ್ರಹ ಕಾರ್ಖಾನೆಗಳನ್ನು ಪ್ರಾರಂಭಿಸಲಾಗುವುದು. ಈ ವರ್ಷ ಕಾರವಾರದಲ್ಲಿ ಇಂತಹ ಒಂದು ಕಾರ್ಖಾನೆಯನ್ನೂ ಕುಂದಾಪುರದಲ್ಲಿ ಆರ್ಧರ್ಟನ್ ಮಾದರಿಯ ಕಾರ್ಖಾನೆಯನ್ನೂ ಸ್ಥಾಪಿಸುವುದಲ್ಲದೆ, ಹೊಬ್ಬಳಿ ಹಾಗೂ ಮಂಡ್ಯಗಳಲ್ಲಿ ಶೀತಲಾವರಣದ ಉಗ್ರಾಣಗಳನ್ನೂ ತೆರೆಯಲಾಗುವುದು. ಇವುಗಳನ್ನು ಸಹಕಾರಿ ಸಂಘಗಳಿಗೆ ಸಹಾಯವನ್ನೂ ಸಾಲವನ್ನೂ ಒದಗಿಸಿ ಒಪ್ಪಿಸಿಕೊಡುವ ವಿಚಾರವಿದೆ.

ಅಂಬಿಗರಿಗೆ ಒಬ್ಬನಿಗೆ ರೂ ೧೦೦೦ ಕ್ಕೆ ಮಿಕ್ಕಿದೆಷ್ಟು ಸಾಲವನ್ನು ಬಲೆ ದೋಣಿಗಳನ್ನು ಕೊಂಡುಕೊಳ್ಳಲು ಹಳೆಯ ಸಾಲ ತೀರಿಸಲು ಮೀನಿನ ವ್ಯಾಪಾರ ಮಾಡಲು—ಮೊದಲಾದ ಉದ್ದೇಶಗಳ ಬಗ್ಗೆ ಸಹಕಾರಿ ಸಂಘಗಳ ಮುಖಾಂತರ ಒದಗಿಸಲಾಗುವುದು. ಇದಕ್ಕಾಗಿ ಈ ವರುಷ ೧೦ ಲಕ್ಷ ರೂಪಾಯಿಗಳನ್ನು ತೆಗೆದಿಡಲಾಗಿದೆ.

ಒಳನಾಡಿನ ಮಾರುಕಟ್ಟೆಗಳಿಗೆ ಮೀನನ್ನು ತೀಕ್ಷ್ಣವಾಗಿ ಮತ್ತು ಅಗ್ಗವಾಗಿ ಸಾಗಿಸಲು ಅನುಕೂಲವಾಗುವಂತೆ ಕಾರವಾರ- ಹುಬ್ಬಳ್ಳಿ ಮಾರ್ಗದಲ್ಲೊಂದು ಮತ್ತು ಮಂಗಳೂರು -ಮಡಿಕೇರಿ—ಮೈಸೂರು-ಮಂಡ್ಯ ಮಾರ್ಗದಲ್ಲಿ ಇನ್ನೊಂದು ಹೀಗೆ ಎರಡು ಡಿಸೈಲ ವಾಹನಗಳನ್ನು ನಡೆಸುವ ಏರ್ಪಾಡು ಮಾಡಲಾಗುವುದು. ಈ ಎರಡೂ ರೈಸ್ತೆಗಳ ಮೇಲೆ ಒಂದು ರಾತಲು ಮೀನಿನ ಬಾಬ್ತು ಅನುಕ್ರಮವಾಗಿ ೬ ಸಂತ್ತು ೮ ಸಹೇಪೈಸೇಗಳನ್ನು ಸಾಗಾಟದ ಬಸ್ಸೆ ತೆಗೆದುಕೊಳ್ಳಲಾಗುವುದು. ಈ ವಾಹನಗಳನ್ನು ಸಹಕಾರೀ ಸಂಘಗಳಿಗೆ ಬಾಡಿಗೆಯ ಮೂರಾಟ ಪದ್ಧತಿಯಿಂದ ಕೊಡುವ ವಿಚಾರವಿದೆ.

ತಾತ್ಕಾಲಿಕವಾಗಿ ಹೆಚ್ಚಾದ ಮೀನು, ಮೀನಿನಕಸಗಳನ್ನು ಪುಡಿಮಾಡುವ ಯಂತ್ರವನ್ನು ಮಲ್ಪೆಯಲ್ಲಿ ಈ ವರ್ಷ ಸ್ಥಾಪಿಸಲಾಗುವುದು. ಖಾಸಗಿವ್ಯಾಪಾರಿಗಳಿಗೆ ಟನ್ನಿಗೆ ರೂ. ೫೦ರಂತೆ ಮೀನು ಪುಡಿ ಮಾಡಿಕೊಳ್ಳುವ ಸೌಕರ್ಯವನ್ನೂ ಇದ್ದಿ ಒದಗಿಸಲಾಗುವುದು

ಯಂತ್ರಸಜ್ಜಿತ ನಾವೆಗಳಲ್ಲಿ ಹಿಡಿದ ತಂದ ಮೀನುಗಳನ್ನು ಇಳಿಸಿಕೊಳ್ಳಲು ಅನುಕೂಲವಾಗುವಂತೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೬ ಲಕ್ಷ ರೂಪಾಯಿಗಳ ವೆಚ್ಚದಿಂದ ಮೀನುಗಾರಿಕೆಯ ಬಂದರುಗಳನ್ನು ಕಟ್ಟಲಾಗುವುದು. ಈ ವರ್ಷ ಮಂಗಳೂರು, ಮಲ್ಪೆ ಮತ್ತು ಕಾರವಾರ ಬಂದರುಗಳ ಪರಿಶೀಲನೆಯ ಕಾರ್ಯವನ್ನು ಎಫ್. ಎ. ಓ. ತಜ್ಞರ ಸಹಾಯದಿಂದ ಕೈಗೊಳ್ಳಲಾಗುವುದು,

ಸುಧಾರಿಸಿದ ಜಾತಿಯ ಮೀನುಗಾರಿಕೆ—ದೋಣಿಗಳನ್ನು ಎಫ್. ಎ. ಓ ತಜ್ಞರ ಸಲಹೆಯಂತೆ ಕಟ್ಟಲು ಮತ್ತು ಅವನ್ನು ಯಾಂತ್ರೀಕರಿಸಲು ಅನುಕೂಲವಾಗುವಂತೆ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಒಂದೊಂದರಂತೆ ಎರಡು ದೋಣಿ ಕಟ್ಟುವ ಅಂಗಣಗಳನ್ನು ರಚಿಸಲಾಗುವುದು. ಇಲ್ಲಿ ಸ್ಥಾನಿಕ ಜನರಿಗೆ ತರಬೇತಿಯನ್ನು ಕೊಡಲಾಗುವುದು. ಇಂತಹದೊಂದು ಅಂಗಣವನ್ನು ಈ ವರ್ಷ ಮಂಗಳೂರಿನಲ್ಲಿ ತಾತ್ಪರ್ತಿಕವಾಗಿ ಪ್ರಾರಂಭಿಸಲಾಗುವುದು.

ಒಳನಾಡು ಮೀನುಗಾರಿಕೆಯ ಅಭಿವೃದ್ಧಿಗೋಸ್ಕರ ಕೆರೆ ಜಲಾಶಯಾದಿಗಳ ಪರಿಶೀಲನೆಯ ಕಾರ್ಯವನ್ನು ಕೈಗೊಳ್ಳಲಾಗುವುದು. ಯೋಗ್ಯವೆಂದು ಕಂಡು ಬಂದ ಸರೋವರ ಜಲಾಶಯಗಳಲ್ಲಿ ಸಿಹಿ ನೀರಿನ ಮೀನ ಮರಿಗಳನ್ನು ಬಿಟ್ಟು ಬೆಳೆಸಿ ಮೀನುಗಳ ಹುಟ್ಟುವಳಿಯನ್ನು ಹೆಚ್ಚಿಸಲಾಗುವುದು. ಮರಿ ಮೀನುಗಳ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿ ಬೇಕಾದ ಮರಿಗಳನ್ನು ಒದಗಿಸಲಾಗುವುದು ಒಳನಾಡಿನ ಮೀನುಗಾರರಿಗೂ ಸಲಕರಣೆಗಳನ್ನು ಕೊಂಡುಕೊಳ್ಳಲು ಕಡಲ ಮೀನುಗಾರರಿಗೆ ಒದಗಿಸಿದಂತೆ ಸವಲತ್ತುಗಳನ್ನು ಕೊಡಲಾಗುವುದು. ಈ ಎಲ್ಲಾ ವಿಷಯಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಬಯಸುವವರು ಆಯಾ ಬಾಗದ ಮೀನುಗಾರಿಕೆಯ ಅಧಿಕಾರಿಗಳಿಂದ ಪಡೆಯಬಹುದು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚೆಕ್ಕಿದಿರ ಬೇಕೆಲ್ಲಿದೆ, ಕಾಗದದ ಒಂದೇ ಮಗ್ಗುಲಿನಲ್ಲಿ ರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ. ನ.

NAVAYUGA
Popular Kannada Weekly
Founder:—
A. B. SHETTY,
Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೪-೧೧-'೫೭	೧೦

ಅಧ್ಯಾಪಕರ ಅದೃಷ್ಟ

ಸಮಾಜಕ್ಕೆ ಮಹತ್ವದ ಸೇವೆಯನ್ನು ಒದಗಿಸುವ ನೌಕರರಲ್ಲಿ ರಕ್ಷಣಾದಳ (ಪೋಲೀಸು ಪಡೆ) ಮತ್ತು ಅಧ್ಯಾಪಕರು ಮುಖ್ಯವಾಗಿದ್ದಾರೆ. ಇನ್ನೆರಡು ಸಮಾಜ ಬಂಧಗಳು ಇಲ್ಲದಿದ್ದೋದರೆ, ಇಂದಿನ ದಿನಗಳಲ್ಲಿ ಜನರು ಜೀವನವನ್ನು ನಿರ್ವಹಿಸುವುದೇ ಕಷ್ಟಕರವಾಗಿ ಪರಿಣಮಿಸುತ್ತದೆ. ಆದರೆ, ನಮ್ಮ ಸರಕಾರವು ಈ ಎರಡು ಪಂಗಡಗಳವರನ್ನು ಅತೃಪ್ತಿಗೊಳಿಸಿರುವಂತೆ ಪ್ರಾಯಃ ಬೇರಾರನ್ನೂ ಮಾಡಿಲ್ಲ. ಮುಖ್ಯವಾಗಿ, ಸಮಾಜವನ್ನು ರೂಪಿಸುವ ಹೊಣೆಯನ್ನು ಹೊತ್ತ ಅಧ್ಯಾಪಕನು ಅತೃಪ್ತನಾಗಿದ್ದರೆ, ಅವನಿಂದ ರೂಪುಗೊಳ್ಳುವ ಮುಂದಿನ ಜನಾಂಗವು ಯಾವ ಮಟ್ಟದಲ್ಲಿದ್ದೀತು ಎಂಬುದನ್ನು ಮಾತನಲ್ಲಿ ಹೇಳಬೇಕಾಗಿಲ್ಲ. ಹಿಂದೆ ಬ್ರಿಟಿಷರ ಆಡಳಿತೆಯ ಕಾಲದಲ್ಲಿ ದೊಡ್ಡ ದೊಡ್ಡ ಕೆಲಸಗಳಿಗೆಲ್ಲ ಆಂಗ್ಲರನ್ನು ನೇಮಿಸಿ, ಅವರಿಗೆ ಸಂಬಳ ಹೆಚ್ಚುಕೊಡಲಾಯಿತು. ಆಲ್ಲದೆ ಕಾಲೇಜುಗಳಲ್ಲಿ ಸಹ ಅಧ್ಯಾಪಕರ ಸ್ಥಾನಕ್ಕೆ ಅವರು ದೊರೆತರು. ಆದುದರಿಂದಲೆ, ಕಾಲೇಜಿನ ಅಧ್ಯಾಪಕರ ಸಂಬಳಕ್ಕೂ ಪ್ರಾಥಮಿಕ ಶಾಲಾಧ್ಯಾಪಕರ ಸಂಬಳಕ್ಕೂ ಆಜಗಜಾಂತರವಿದೆ. ಇಂದು ನಮ್ಮ ಅಧ್ಯಾಪಕರಿಗೆ ದೊರೆಯುವುದು ಕೇವಲ ಸಹಾನುಭೂತಿ. ಕಡಿಮೆ ಕೆಲಸ, ಕಡಿಮೆ ಸಂಬಳ ಎಂಬುದನ್ನು ಉಚ್ಚರಿಸುವ ಬುದ್ಧಿವಂತರೂ ನಮ್ಮಲ್ಲಿ ನ್ನಾರೆ. ಆದರೆ, ಐದು ಗಂಟೆಯಿಷ್ಟು, ಹೊತ್ತು ಏನೂ ಅರಿಯದ ಮಕ್ಕಳಿಗೆ ವಿಷಯವನ್ನು ಮಂಡಿಟ್ಟು ಸಾಡಬೇಕಾ ದರೆ ಮತ್ತೆ ಆತ ಒಂದೆರಡು ಘಂಟೆ ತಯಾರಿ ಮಾಡಬೇಕು, ಪಾಠಗಳ ಟಿಪ್ಪಣಿಯನ್ನು ಬರೆಯಬೇಕು, ನಿಯಮಿತ ಸಮಯಕ್ಕೆ ಸ್ವಲ್ಪ ಎಂದರೆ. ಕಡಿಮೆ ಪಕ್ಷ ಹತ್ತು ಹದಿನೈದು ವಿದ್ಯಾರ್ಥಿಗಳಾದರೂ, ದೇಗನೆ ಬರಬೇಕು. ಹೀಗಿರುವಾಗ ದಿನಾ ೫ ಗಂಟೆಯ ಕೆಲಸವಾಗುವುದಿಲ್ಲವೆ? ಉಚ್ಚ ಅಧಿಕಾರದಲ್ಲಿ ಕೋಳಿರುವವರು ನಮ್ಮ ಅಧ್ಯಾಪಕರ ಪೇಲೆ ಕರುಣೆಯನ್ನು ಪ್ರದರ್ಶಿಸಿ, ವಿದ್ಯೆಯನ್ನು ಪುದು ವ್ಯಾಪಾರಿ ವಸ್ತುವಾಗಬಾರದು; ವಿದ್ಯಾಕ್ಷೇತ್ರದಲ್ಲಿ ವ್ಯಾಪಾರೀ ಮನೋಧಾವನೆ ಬರಬಾರದು ಎನ್ನುತ್ತಾರೆ. ಆದರೆ, ಅಧ್ಯಾಪಕರೂ ಮಾನವರು ತಾನೇ, ಅವರಿಗೂ ಕೇವಲ ಗೌರವದಿಂದ ಹೊಟ್ಟೆ ತುಂಬುವುದಿಲ್ಲ ವೆಂಬುದನ್ನು ಅರಿತರಿಕೂ ಅವರನ್ನು ಹೂಳುತ್ತಾರೆ. ತಮ್ಮಷ್ಟಕ್ಕೇ ವಿದ್ಯೆಯನ್ನು ಕಲಿತವರು ಇತರರಿಗೆಗಳಲ್ಲಿ ಸಿಚ್ಚಟ್ಟ ಸಂಬಳವನ್ನು ಪಡೆಯುವಾಗ, ಈ ಅಧ್ಯಾಪಕನ ವೃತ್ತಿಯತ್ತ ಉಪಾಧ್ಯಾಯನಿಗೆ ತಿರಸ್ಕಾರ ಮೂಡಿ, ಅದು ಮುಂದಿನ ಜನಾಂಗವಾದ ಮಕ್ಕಳ ಮೇಲೆ ಪರಿಣಾಮ ಮಾಡದಿರುವುದೆ? ನಮ್ಮ ಜಿಲ್ಲೆಯ ಕಾರ್ಕಳದಲ್ಲಿ ಪೊನ್ನೆ ನೊನ್ನೆ ವೈಕ್ಷಣಿಕ ಸಮ್ಮೇಳನವು ನಡೆಯಿತು.ಅಧ್ಯಕ್ಷೆ ಶ್ರೀ ಎಂ.ಎಲ್.ತಾಪ್ರಿಯವರು ನೂತನ ವೇತನವನ್ನು ಸಮರ್ಥಿಸಿದರು ಉಪ್ಪಾಟಕರ್ಥಾದ ವಿದ್ಯಾಮಂತ್ರಿ ಶ್ರೀ ವೆಂಕಟಪ್ಪನವರೂ, ಉಪಾಧ್ಯಾಯರ ಬಗೆಗೆ ತಮ್ಮ ಅನುತಾಪವನ್ನು ಪ್ರದರ್ಶಿಸಿ (ಮೊಸಳೆ?) ಕಣ್ಣೀರು ಸುರಿಸುವಂತೆ ಮಾಡಿದರು. ನೂತನ ವೇತನ ಮಟ್ಟವನ್ನು ದಕ್ಷಿಣ ಕನ್ನಡದ ಶಿಕ್ಷಕರಿಗೂ ಅನ್ವಯಿಸುವ ಕುರಿತಾಗಿ ಅಭಿಪ್ರಾಯ ತಿಳಿಸುವ ಸಮಿತಿಯು ಅನೇಕ ಬಾರಿ ತಿಳಿಸಿದ್ದರೂ ಸಭೆ ಸೇರಿಲ್ಲ; ಸದ್ಯದಲ್ಲಿಯೇ ಸೇರಬಹುದು ಎಂಬಿತ್ಯಾದಿಯಾಗಿ ನೆಪ ಹೇಳಿ ಜಾರಿಕೊಳ್ಳ ನೋಡಿದರು. ಆದರೆ, ಅಧ್ಯಾಪಕರು, ಅವರಲ್ಲಿಯೂ ಬುದ್ಧಿವಂತರೆನಿಸಿಕೊಂಡ ದಕ್ಷಿಣ ಕನ್ನಡದವರು ಇಂತಹ ನಾವಿರಾರು ಜನರನ್ನು ಕಂಡಿದ್ದಾರೆ. ದಿನಂಪ್ರತಿ ನೂರಾರು ವಿಜ್ಞಾಪ್ತಿಗಳ ವ.ನೋಧಾವನವನ್ನು ಅರಿಯುತಿದ್ದಾರೆ. ಇಂದು ಅಧಿಕಾರ ಸ್ಥಾನದಲ್ಲಿರುವವರೆಲ್ಲರೂ ಒಂದಲ್ಲ ಒಂದು ದಿನ ಪ್ರಾಥಮಿಕ ಶಾಲೆಗಳ ಶಿಕ್ಷಕರ ಕೈಯಿಂದಲೇ ಪಳಗಿ ಹೋದವರೆಂಬುದನ್ನೂ, ಅವರ ಮಾತುಗಳನ್ನು ಅವರಿಗಿಂತ ಹೆಚ್ಚಾಗಿ ಶಿಕ್ಷಕರು ಅರ್ಥಮಾಡಿಕೊಳ್ಳಬಲ್ಲರೆಂಬುದನ್ನೂ ಮಾನ್ಯರು ತಿಳಿದಂತೆ ತೋರಲಿಲ್ಲ. ವಿದ್ಯಾ ಉಪಸಚಿವೆಯವರು ತಮ್ಮ ವೈಯಕ್ತಿಕಾಭಿಪ್ರಾಯವನ್ನು ಸೂಚಿಸುತ್ತಾ ಉಪಾಧ್ಯಾಯರಿಗೆ ತಿಂಗಳಿಗೆ ೧೦೦ ರೂಪಾಯಿ ದೊರೆಯುಬೇಕೆಂದು ಉಡುಪಿಯಲ್ಲಿ ಹೇಳಿದರು. ಇಂಥದೇ ಅಭಿಪ್ರಾಯವನ್ನು ಮುಖ್ಯಮಂತ್ರಿ ನಿಜಲಿಂಗಪ್ಪನವರೂ ಹಿಂದೊಮ್ಮೆ ವ್ಯಕ್ತಪಡಿಸಿದ್ದರು. ಆದರೆ, ದಕ್ಷಿಣ ಕನ್ನಡಿಗರಿಗೆ ಸರಕಾರಿ ಅಧ್ಯಾಪಕರ ವೇತನವನ್ನು ಕೊಡಲು—ಈಗಿದ್ದುದಕ್ಕಿಂತ ಕೇವಲ ೧೦-೧೫ ಮಾತ್ರ ಹೆಚ್ಚು-ಬೆಕ್ಕಸಕಿಸುತ್ತಿರುವಾಗ ಇನ್ನು ನಂತರದ ಪಾಯಿಯ ಗಂಟು ಪ್ರಾಯ! ಈ ಯುಗದಲ್ಲಿ ದೊರೆಯುವ ಆಶೆಯಿಲ್ಲ—ಅದುದರಿಂದಲೇ ಆ ಮಾತಿಗೆ ಬೆಲೆಯಿಲ್ಲ. ಅಧ್ಯಾಪಕರು ಸಮಾಜ ಸೇವಕರು, ಕೇವಲ ಸೇವಾಭಾವನೆಯಿಂದ ಕೊಡುವ ವೇತನದಿಂದ ತೃಪ್ತಿಪಟ್ಟುಕೊಂಡು, ತಮ್ಮ ಸಂವಾದಗಳನ್ನು ಉಳಿಸಬೇಕು—ಎಂಬುದೊಂದು ಮಾತು. ಆದರೆ, ಸಮಾಜದ ಪ್ರತಿಯೊಂದು ಶಾಪಿಯವರೂ ಸಮಾಜ ಸೇವಕರೇ ಆಗಿದ್ದಾರೆ, ವಿಮಾ ಇಲಾಖೆ, ಕಛೇರಿ, ಕೋರ್ಟು ಆಂಜೆ ಕಂತಿ, ವ್ಯಾಪಾರಿ ಎಲ್ಲ ಉದ್ಯೋಗದಲ್ಲಿ ತೊಡಗಿರುವವರೂ ಇಲ್ಲ ಎಂದರೆ, ಇಂದಿನ ಸಮಾಜವೇ ಬದುಕಲಾರದು. "ನೀವು ಸೂರ್ಯನಂತೆ ಪ್ರಕಾಶಿಸುತ್ತಿರಬೇಕು; ಸಮುದ್ರದಂತೆ ಗಂಭೀರವಾಗಿರಬೇಕು; ಚಂದ್ರನಂತೆ ಸದಾ ನಗುಮೊಗದಿಂದ ವಿದ್ಯಾರ್ಥಿಗಳನ್ನು ಕಾಣಬೇಕು; ವಸಿಷ್ಠರಂತೆ ಮೇಧಾವಿಗಳಾಗಬೇಕು."—ಇತ್ಯಾದಿ ಉಪದೇಶಗಳು ಅಧ್ಯಾಪಕರಿಗೆ ದೊರೆಯುವಷ್ಟು ಯಾರಿಗೂ ದೊರೆಯುವುದಿಲ್ಲ. ಹಿಂದಿನ ಕಾಲದಲ್ಲಿ ವಿದ್ಯೆಯನ್ನು ಮಾರುತಿದ್ದಿಲ್ಲ. ವಿದ್ಯಾರ್ಥಿಗಳಿಗೆ ಅನ್ನಾಪಕರು ಧರ್ಮಾರ್ಥ ಶಿಕ್ಷಣವನ್ನೀಯುತಿದ್ದರು. ಹೌದು, ಆದರೆ, ಆ ಕಾಲದ ಗುರುಕುಲಗಳಿಗೆ ಸರಕಾರದ ಉಂಬಳಿಯಿತ್ತು; ಅರಮನೆ-ಗುರುಮನೆಗಳಿಗೆ ಅಂತರವೇ ಇರಲಿಲ್ಲ! ಅದು ಇಂದಿನ ದಿನಕ್ಕೆ ಹೊಂದಿಕೊಳ್ಳದ ವಿಷಯ. ಅಂತೂ ಒಂದು ಮಾತಂತೂ ಸತ್ಯ. ನವ್ಯರಾಜ್ಯಸರಕಾರದವರು ದಕ್ಷಿಣ ಕನ್ನಡಿಗರ ಮೇಲೆ ಕೃಪಾಕಟಾಕ್ಷವನ್ನು ಬೀರುವಲ್ಲಿ ತಡಮಾಡುತಿದ್ದಾರೆ. ಜನತೆ, ಹಾಗೂ ಅಧಿಕಾರಿಗಳಿಬ್ಬರಿಗೂ, ಆ ಹೊಸವೇತನ ಮಟ್ಟವನ್ನು ಇಲ್ಲಿಯ ಖಾಸಗಿ ಹಾಗೂ ಸ್ಥಳೀಯ ಸಂಸ್ಥೆಗಳ ಅಧ್ಯಾಪಕರಿಗೂ ಅನ್ವಯಿಸುವ ಇಚ್ಛೆಯು ಬಲವತ್ತರವಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಾದರೆ, ಅದು ಕಾರ್ಯರೂಪದಲ್ಲೇಕೆ ಬರಲಿಲ್ಲ? ಏನೋ 'ಮನಸ್ಸಿದ್ದಲ್ಲಿ ಮಾರ್ಗವಿದೆ' ಎಂಬ ಗಾದೆ ಮಾತು ಸುಳ್ಳಾದಂತೆ ಕೆಂಡು ಬರತ್ತದೆ. ಅದಕ್ಕೇ ಹೇಳುವುದು 'ಅದೃಷ್ಟ" ಎಂದು. ಸರಕಾರವೂ ಸರಕಾರದ ಅಧಿಕಾರಿಗಳೂ ಕೊಡುವ ಇಚ್ಛೆಯಲ್ಲಿರುವಾಗ, ಅದ್ಯಾಪಕರು ಅದನ್ನು ಸ್ವೀಕರಿಸಲಿರುವಾಗ ಅದೃಷ್ಟ ಅದೃಶ್ಯನಾಗಿದ್ದು ಅದನ್ನು ಅಪಹರಿಸುವಂತಿದೆ. "ಹರಕೊಲ್ಲಲ್ ಪರಕಾಯ್ವನೇ?" ದಕ್ಷಿಣ ಕನ್ನಡದ ಶಿಕ್ಷಕರ ಹಣೆಯಲ್ಲಿಯೇ ಅಧಿಕ ವೇತನದ ಯೋಗ್ಯತೆ ಬರೆಯದಿರುವಾಗ, ಸರಕಾರವೇನು ಮಾಡೀತು? ಆದುದರಿಂದ, ಅದ್ಯಾಪಕರು ಇನ್ನು ಸರಮಾತ್ಮನೆ ಮರೆ ಹೋಗುವುದೇ ವಾಸಿ. ಎಂತಾದರೂ ಮಾಡಿ, ಈ ವಿಷಮತೆಯಿಂದ ಪಾರು ಮಾಡುವಲ್ಲಿ ಸರಕಾರದ ಕರ್ತವ್ಯವೂ ಇದೆ ಸುಮ್ಮ ಸುಮ್ಮನೆ ಹೊತ್ತು ತೆಗೆಯದೆ ಮೈ ಸೂಮು ಸರಕಾರವು ನೂತನ ವೇತನ ಮಟ್ಟವನ್ನು ಖಾಸಗಿ ಹಾಗೂ ಸ್ಥಳೀಯ ಶಾಲೆಯವರಿಗೂ ಅನ್ವಯಿಸಬೇಕು ಎಂದು ನಾವು ಪುನಃ ಒತ್ತಾಯಿಸಿ, ಹಾಗಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಮಹತ್ವದ ಸುದ್ದಿಗಳು

ಪ್ರದೇಶ ಕಾಂಗ್ರೆಸ್ ಸಮಿತಿ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಅರಸೀಕೆರೆಯ ತನ್ನ ಅಧಿವೇಶದಲ್ಲಿ ತನ್ನ ಘಟನೆಯನ್ನು ಸ್ವೀಕರಿಸಿಕೊಂಡಿತು. ಹಾಗೆಯೇ ಸಮಿತಿಯ ಹೆಸರನ್ನು 'ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಂದಿಡಬೇಕೆಂದು ಆ. ಭಾ. ಕಾಂ ಸಮಿತಿಗೆ ಆಗ್ರಹದ ಶಿಫಾರಸು ಮಾಡುವ ಅಧಿಕಾರೀಕರ ಗೊತ್ತುವಳಿಯನ್ನೂ ಸಾಹುಕಾರ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಸ್ವೀಕರಿಸಿತು. ಈ ಗೊತ್ತುವಳಿಯನ್ನು ಶ್ರೀ ವಿ. ಟಿ. ಪಾಗಡಿಯವರು ಮಂಡಿಸಿದ್ದು ಶ್ರೀ ಅಂದಾನಪ್ಪ ಕುಂದರಗಿಯವರು ಅನುಮೋದಿಸಿದ್ದರು.

ಕಾರವಾರದಲ್ಲಿ ಬ್ರಿಟಿಷ ತಜ್ಞರು

ಭಾರತದಲ್ಲಿ ದ್ವಿತೀಯ ನೌಕಾಂಗಣವನ್ನು ಸ್ಥಾಪಿಸಲು ಬೇಕಾದ ಸ್ಥಳವನ್ನು ಆರಿಸಲು ಬ್ರಿಟಿಷ ತಜ್ಞರ ಪ್ರಥಮ ತಂಡವು ಈ ಹೊದಲೇ ಹಲವಾರು ಸ್ಥಳಗಳನ್ನು ಸಂದರ್ಶಿಸಿರುವರಷ್ಟೆ; ಇದೀಗ ಎರಡನೆಯ ಬ್ರಿಟಿಷ ತಜ್ಞರ ತಂಡವು ತಾ.೧೧ ರಂದು ಕಾರವಾರ ಬಂದರವನ್ನು ಸಂದರ್ಶಿಸಿರುವುದು. ಈ ಶಿಷ್ಟಮಂಡಳದ ಧುರೀಣರು ಮಾತಾಡುತ್ತ ಕಾರವಾರ ಬಂದರವು ಬ್ರಿಟನ್ನಿನ ಅತ್ಯುತ್ತಮ ಬಂದರಗಳಿಗಿಂತ ಹೀನವಾಗಿಲ್ಲವೆಂದೂ ಅದರ ಸಂದರ್ಶನವು ತಮ್ಮ ಮೇಲೆ ವಿಶೇಷ ಪರಿಣಾಮ ಬೀರಿರುವುದೆಂದೂ ಹೇಳಿದ್ದರು.

ಉಪಗ್ರಹದ ನಾಯಿ ಭೂಮಿಯಲ್ಲಿ!

ರಶ್ಯನರ ಹಾರಿಸಿದ ದ್ವಿತೀಯ ಚಂದ್ರ ಮರಿಯಲ್ಲಿಟ್ಟಿದ್ದ ನಾಯಿ 'ಲೈಕಾ"ವು ರಶ್ಯಾದಲ್ಲಿ ಎಲ್ಲಿಯೋ ಇಳಿದಿದ್ದು, ರಶ್ಯನ್ ಶೋಧಕ ತಂಡದವರು ಅದನ್ನು ಅರಸುವುದರಲ್ಲಿ ಮಗ್ನರಾಗಿದ್ದಾರೆ ಎಂದೂ, ಎರಡೂ ಚಂದ್ರಮರಿ (ಉಪ ಚಂದ್ರ) ಗಳು ಭೂಮಿಯತ್ತ ಧಾವಿಸುತ್ತಿವೆಯೆಂದೂ, ತತ್ಕಾರಣವಾಗಿ, ಅವುಗಳ ವೇಗವು ಹೆಚ್ಚಿರುವುದೆಂದೂ ತಿಳಿದುಬಂದಿದೆ. ಆದರೆ, ಇವೆಷ್ಟು ನಂಬಿಕಾರ್ಹವಾಗಿರುವುದೋ ಸರಿಯಾಗಿ ಹೇಳುವುದು ಅಸಾಧ್ಯವಾಗಿದೆ. ಕೆಲವರು ನಾಯಿ ಲೈಕಾವು ಮರಣಗೊಂಡಿರುವುದೆಂದೂ ಹೇಳುತ್ತಾರೆ.

ಒತ್ತಾಯವು ಬೇಡ

ಭಾರತ ಸರಕಾರವು ಹಿಂದಿ ಭಾಷೆಯನ್ನು ಸರಕಾರೀ ಭಾಷೆಯನ್ನಾಗಿ ಮಾಡಲು ನಿರ್ಧರಿಸಿದ್ದರೂ, ಈ ಸಮಸ್ಯೆಯನ್ನು ಹಿಂದ್ಯೇತರರಿಗೆ ಹಾನಿಕಾರಕವಾಗದ ರೀತಿಯಲ್ಲಿ ಸೌಹಾರ್ದ ಮತ್ತು ಸಹಕಾರದಿಂದ ಬಗೆಹರಿಸಬೇಕೆಂದೂ, ಸರಕಾರೀ ನೌಕರರಿಗೆ ಪ್ರವೇಶಪಡೆಯುವಾಗ ಹಿಂದಿಯನ್ನು ಕಡ್ಡಾಯವಾಗಿಡಬಾರದೆಂದೂ, ಸರಕಾರೀ ನೌಕರಿಯಲ್ಲಿ ಸೇರಿಕೊಂಡ ನಂತರ ಹಿಂದಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವಂತೆ ಮಾಡಬೇಕೆಂದೂ ಭಾರತದ ಪ್ರಧಾನಿ ಶ್ರೀ ಪಂಡಿತ ನೆಹರೂರವರು ಸಂಸತ್ತಿನ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಅಭಿಪ್ರಾಯಪಟ್ಟರು.

ಇಟೆಲಿಯಲ್ಲಿ ಭಾರತದ ಪ್ರತಿನಿಧಿ

ಈಗ ವಿದೇಶ ವ್ಯವಹಾರ ಶಾಖೆಯಲ್ಲಿ ಸಹಕಾರ್ಯದರ್ಶಿಯಾಗಿರುವ ಶ್ರೀ ಖೂಬಚಂದರನ್ನು ಇಟೆಲಿಯಲ್ಲಿ ಭಾರತದ ರಾಯಭಾರಿ ಹಾಗೂ ಅಲ್ಬೇನಿಯದಲ್ಲಿ ಭಾರತದ ಮಂತ್ರಿಗಳೆಂದೂ ನೇಮಿಸಲಾ

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ
O. P. 60/57

ಅರ್ಜಿದಾರರು- 1. ಮಗ್ದಲಿನ್ ಮಾರ್ಟಿಸ್ 2. ಜಾರ್ಜಿ 3. ವಿಲ್ಲಿಯಮ್ 4. ಫ್ರೆಡ್ರಿಕ್ 5. ಗ್ರೇಸಿ ಪಿರಿಯ ನೇ ವರಿಗಿನವರು ಬ್ಯಾನರರು-ರಕ್ಷಕರು 1ನೇ ಅರ್ಜಿದಾರಳು.

1ನೇ ಅರ್ಜಿದಾರಳ ತಂದೆ ಮತ್ತು ಅವಿಕ್ತ ಅರ್ಜಿದಾರರ ತಂದೆ ಜರೋಮು ಡಿಸೋಜರು ವೀಲು ಮಗ್ಗಾರೆ ಮಾಡಿದವರೆ ತಾ. 30-8-57ರಲ್ಲಿ ಮೃತಪಟ್ಟಿರುವ ಕಾರಣ ಸದ್ರಿಯವರ ಬಾಬ್ತು 'ಬೊಂಬಾಯ್ ಮ್ಯುಚುವಲ್ ಲೈಫ್ ಇನ್ಸೂರೆನ್ಸ್ ಕಂಪನಿ'ಯಲ್ಲಿ ಪಡೆದ ನಂಬ್ರ 1353218ನೇ ಪೊಲಿಸಿ ಬಾಬ್ತು ಸಿಕ್ಕತಕ್ಕ ರೂ 1123/-ನ್ನು ಪಸೂಲು ಮಾಡುವರೆ ವಾರೀಸು ಸರ್ಟಿಫಿಕೇಟನ್ನು ಅಪೇಕ್ಷಿಸಿ ಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ. 9-12-57ಕ್ಕೆ ಇತ್ಯರ್ಥವಾಗಿಯುವಂತೆ ಈ ಮೂಲಕ ತಿಳಿಸಲಾಗುತ್ತದೆ.

(By order of court)
K. Viltal Nayak.
Vakil for petr.
Udipi, 12--11—57

ಗುಡಿಯೆಂದು ಒಂದು ಪ್ರಕಟಣೆಯು ತಿಳಿ ಸಿದೆ. ಶ್ರೀ ಸುಬಚಂದರು ಈ ಮೊದಲು ಪಾಕಿಸ್ತಾನ, ಇರಾಕ್, ಜೋರ್ಡಾನ್ ಮೊದಲಾದ ವಿದೇಶಗಳಲ್ಲಿ ಭಾರತದ ಪ್ರತಿನಿಧಿಗಳಾಗಿ ಕೆಲಸ ಮಾಡಿದ್ದಾರೆ. ಇವರು ದಶಂಬರಿ ತಿಂಗಳ ಕೊನೆಯ ವಾರದಲ್ಲಿ ತಮ್ಮ ಹೊಸ ಅಧಿಕಾರವನ್ನು ವಹಿಸಿಕೊಳ್ಳುವರು.

ಅರ್ಥಮಂತ್ರಿ ಸಮ್ಮೇಳನ

ಭಾರತದ ವಿವಿಧ ರಾಜ್ಯಗಳ ಆರ್ಥಿಕ ಮಂತ್ರಿಗಳ ಸಮ್ಮೇಳನವು ನವಂಬರ ೨೯ರಂದು ನವದೆಹಲಿಯಲ್ಲಿ ಪ್ರಾರಂಭ ವಾಗುವುದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ವಿವಿಧ ರಾಜ್ಯಗಳ ಮುಂದಿನ ವರ್ಷದ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರಕಾರದ ಧನಸಹಾಯ, ಕೇಂದ್ರ ಮಾರಾಟದ ಕಾಡುದೆಗೆ ತಿದ್ದುಪಡಿ, ಕೆಲವು ಭೋಗ್ಯ ವಸ್ತುಗಳ ಮೇಲಿನ ಮಾರಾಟಕರ ದರಗಳ ಏಕರೂಪತೆಯ ಸ್ಥಾಪನೆ, ಮತ್ತು ಕೆಲವೊಂದು ಜೀವ ನಾವಶ್ಯಕ ವಸ್ತುಗಳ ಮೇಲಿನ ಮಾರಾ ಟ ಕರವನ್ನು ಕೆತ್ತುಹಾಕಿ, ಇದರ ಸ್ಥಾನ ದಲ್ಲಿ ಹೆಚ್ಚಿನ ಸುಂಕವನ್ನು ಆಕರಿಸುವ ದು—ಈ ಮೊದಲಾದ ವಿಷಯಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸಲಾಗುವುದು.

ರಶಿಯಾದಿಂದ ಭಾರತಕ್ಕೆ ಸಾಲ

ಭಾರತದ ಅಭಿವೃದ್ಧಿಗೆ ರಶ್ಯವು ೫೦ ಕೋಟಿ ರೂಬಲ್ಲುಗಳ ಸಾಲವನ್ನು ಕೊಡ ಲಿದ್ದು ಆ ಬಗ್ಗೆ ಒಪ್ಪಂಬಡಿಕೆಯಾಯಿತು. ಭಾರ ಯಂತ್ರಗಳ ತಯಾರಿಕೆ ಕಾರಖಾ ನೆ, ಕಲ್ಲಿದ್ದಲು ಗಣಿ, ಯಂತ್ರ ಕಾರಖಾ ನೆ ಮುಂತಾದ ಉದ್ದಿಮೆಗಳು ಸ್ಥಾಪಿತ ವಾಗಲಿವೆ. ಇದಕ್ಕೆ ಬೇಕಾಗುವ ಪರದಿ ಯನ್ನೂ ಯಂತ್ರ ಸಾಮಗ್ರಿಯನ್ನೂ ತಾಂತ್ರಿಕ ಸಹಾಯವನ್ನೂ ರಶ್ಯವು ಸೂ ರೈಸುವುದು. ಈ ಸಾಲಕ್ಕೆ ನೇಕಡಾ ೨½ ಬಡ್ಡಿ ಆಕರಿಸಲಿದ್ದು ಸಾಲವನ್ನು ೧೨ ವರ್ಷಿಕ ಕಂತುಗಳಲ್ಲಿ ತಿರುಗಿ ಮುಟ್ಟಿ ಸುವ ಕರಾರು ಮಾಡಿಕೊಳ್ಳಲ್ಪಟ್ಟಿದೆ.

ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್‌ರವರ ಕೋರ್ಟಿನಲ್ಲಿ

O. P. 839/1957.

ಮಧ್ವರಾಯ ಭಟ್ಟ —ಅರ್ಜಿದಾರ

ಮತ್ತು

ಕೇಸು ಸೆಟ್ಟಿ, ಚಂಮ ಸೆಟ್ಟಿ ಮಗ. ಉಡ್ಡಿ ತಾಲ್ಲ್ಯ ಮಣಿಪುರ ಗ್ರಾಮದ ವಿಡಾರು.

—ಎದ್ರಿ

ಇತರರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿ ಸುವುದೇನೆಂದ್ರೆ,

ಅರ್ಜಿದಾರನು ಅರ್ಜಿಯಲ್ಲಿ ಕಾನ್ಸೈದ ಸಬ ಬುಗಳಿಂದಅರ್ಜಿಯಲ್ಲಿವಿನಂತಿಸಿದ ಆಸ್ತಿ ಸ್ವಾಧೀನತೆ ಕೇಳಿ ದಾಕ್ಲು ನೂಡಿಸಿಮೇಲ್ಕಂಡ ಅರ್ಜಿಯು ತಾರೀಕು 23-11-57ಕ್ಕೆ ಉಡ್ಡಿ ಕೋರ್ಟಿನಲ್ಲಿ ಎದ್ರಿಯ ನೋಟೀಸುಬಗ್ಗೆ ದಾಖಲ್ಪಡಿಸುವ ಸ್ವಯಂಎದ್ರಿ ಅರ್ಜಿಯಲ್ಲಿ ವೈಯಕ್ತಿಕವಾಗಿಯೂ ಪಿಲ್ಪರ ಸದ್ರಿ ತಾರೀಕಿಗೆ ಬೆಳ್ಗೆ ೧೦ ಗಂಟೆ ೧೫ಕ್ಕೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪುದರೆ ನಿಮ್ಮನ್ನು ಎಕ್ಸ್‌ಪಾರ್ಟೆಮಾಡಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡಬಹುದು.

(By order of the court)

P. N. Krishnamurthi Rao.

Advocate for Petitioner.

Udipi Dated 12—11—57.

ರಾಜ್ಯಪಾಲರು ಮತ್ತು ಮಂತ್ರಿ ಮಂಡಲ

ಮೈಸೂರಿನ ರಾಜ್ಯಪಾಲ ಮತ್ತು ಮಂತ್ರಿ ಮಂಡಲದ ನಡುವೆ ತೀವ್ರ ಬಿಕ್ಕಟ್ಟು ತಲೆದೋರಿದೆ ಎಂದು ಕೆಲವು ಪತ್ರಿಕೆ ಗಳಲ್ಲಿ ವರದಿಯಾದುದನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅಲ್ಲ ಗಳೆದರು. ಮೈಸೂರಿನ ಮಹಾ ರಾ ಜರು ಒಳ್ಳೆಯ ರಾಜ್ಯಪಾಲರೆಂದೂ, ಅವ ರು ಸರಕಾರದ ದೈನಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದೂ, ತಮ್ಮ ಮತ್ತು ರಾಜ್ಯಪಾಲರ ನಡುವೆ ಮೊದಲು ಕೆಲಪೊಂದು ತಪ್ಪು ತಿಳುವಳಿಕೆಗಳಿದ್ದರೂ ಅವು ಈಗ ದೂರವಾಗಿರುವುದೆಂದೂ ಅವರು ಹೇಳಿದರು. ಆದರೆ, ಅಂತಹ ತೊಡ ಕುಗಳು ರಾಜಕೀಯ ಸ್ವರೂಪದ್ದಾಗಿರ ಲಿಲ್ಲವೆಂದವರು ತಿಳಿಸಿದರು.

ರಶ್ಯನರ ಉದಾರತೆ

ಅಮೆರಿಕನ್ ವಿಜ್ಞಾನಿಗಳ ಬಿನ್ನಹದ ಮೇರೆಗೆ ಸೋವಿಯೆಟ್ ವಿಜ್ಞಾನಿಗಳು ತಮ್ಮ ದ್ವಿತೀಯ ಉಪಗ್ರಹದ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾರೆಂದು ಅಂ ತಾರಾಷ್ಟ್ರೀಯ ಭೂ ಭೌತಿಕ ವರ್ಷದ 'ಚಂದ್ರ ನಿರೀಕ್ಷಣ' ವಿಭಾಗದ ಡೈರೆಕ್ಟರ್ ಡಾ. ಜೆ. ಕಲೆನ್ ಹಿನೆಕ್‌ರವರು ತಿಳಿ ಸಿದ್ದಾರೆ.

ಉಡುಪಿ

ಲಾ ಕಾಲೇಜಿನಲ್ಲಿ ಶ್ರೀಮತಿ ಗ್ರೇಸ್ ಟಕ್ಕರರು—

ಮೈಸೂರು ಸರಕಾರದ ಉಪವಿದ್ಯಾಸಚಿವೆ ಶ್ರೀಮತಿಗ್ರೇಸ್ ಟಕ್ಕರರು ತಾ. ೬ರಂದು ಉಡುಪಿ ಲಾ ಕಾಲೇಜನ್ನು ಸಂದರ್ಶಿಸಿದರು. ಡಾ. ಟಿ. ಎಸ್. ಎ. ಪೈ, ಪ್ರಿನ್ಸಿಪಾಲ್ ಶ್ರೀ ಬಿ. ಎಲ್. ಎನ್. ರೈ ಮೊದಲಾದವರು ಉಸಗಮಂತ್ರಿಗಳನ್ನು ಸ್ವಾಗ ತಿಸಿ ರು. ಡಾ. ಪೈಗಳು ಎಳೆತನದಿಂ ಆದಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ನಡೆಸಲಾದ ಕಾ ರ್ಯಗಳನ್ನು ವಿವರಿಸಿದರು ಎಳೆವಯಸ್ಸಿ ಬೆಂಗಳೂರಿನ ಡಾ ಪೈಗಳ ಕಾರ್ಯವೈಖರಿ ಯನ್ನು ಕೊಂಡಾಡಿ ಶ್ರೀಮತಿಯವರು ಮಾತ ನಾಡಿದರು. ವಿದ್ಯಾರ್ಥಿಗಳನ್ನುದ್ದೇಶಿಸಿ ಕೆಲ ಸೂಚನೆಗಳನ್ನಾಡಿದರು. ಕಾಲೇಜು ಯೂನಿ ಯನ್ ಅಧ್ಯಕ್ಷ ಶ್ರೀ ಕೆ. ಪಿ. ಗೋಪಿನಾಥ ರಾಯರು ವಂದನೆಗೆಯ್ದರು.

ನಗರಸಭೆಯ ಮಾನಪತ್ರ ಸ್ವೀಕಾರ—

ಲಾ ಕಾಲೇಜಿಗೆ ಹೋಗುವ ಮೊದಲು ಶ್ರೀಮತಿ ಟಕ್ಕರರು ಮುನಿಸಿಪಲ್ ಮಹಾ ತ್ಮಾಗಾಂಧಿ ಬುನಾದಿ ಶಾಲೆಗೆ ಇಂದು ನಗರ ಸಭೆಯ ಪರವಾಗಿ ಚೇರ್‌ಮೆನ್ ಶ್ರೀ ಕೆ. ಕೆ. ಪೈಗಳು ಒಪ್ಪಿಸಿದ ಮಾನಪತ್ರ ಸ್ವೀಕರಿಸಿದರು. ನಗರಸಭೆಗೆ ಶಿಕ್ಷಣ ಎತ್ತರಕೆಗಾಗಿ ಧನಸಹಾ ಯ, ಕಿನ್ನಿಮೂಲ್ಕಿ ಶಾಲಾ ಕಟ್ಟಡಕ್ಕೆ ಹಣದ ಸಹಾಯ, ವಿದ್ಯಾಕೇರಿಗೆಯಪ್ಪೇ ಸರಕಾರದ ಗ್ರಾಂಟು ಕೊಡಲು ಬೇಡಿಕೆ ಇತ್ಯಾದಿ ವಿಷ ಯಗಳು ಮಾನಪತ್ರದಲ್ಲಿದ್ದುವು. ವಿದ್ಯಾ ಉಪಸಚಿವೆಯರು ಉತ್ತರಿಸುತ್ತಾ, ಉಡುಪಿ ಪಟ್ಟಣವನ್ನು ಶಾಂತಿಯುಯುಕ್ತವಾಗಿರಿಸಿದ ಬಗ್ಗೆ ನಗರ ಸಭೆಯ ಸದಸ್ಯರು ಆಭಿನಂದನೀ ಯರೆಂದರು. ಹೆಚ್ಚು ಹೆಚ್ಚು ಶಾಲೆಗಳನ್ನು ತೆರೆದು ವಿದ್ಯಾ ವಿಸ್ತರಣಮಾಡುವುದು ಸ್ಥಾನಿಕ ಸಂಸ್ಥೆಗಳ ಜವಾಬ್ದಾರಿಯಿನುವುದೆ. ಈ ಭಾ ಗದಲ್ಲಿ ಉಡುಪಿ ನಗರ ಸಭೆಯು ತೃಪ್ತಿಕರ ಕಾರ್ಯವಿಸಿಗಿದೆ ಎಂದರು. ಕಿನ್ನಿಮೂಲ್ಕಿ ತಾ ಲೂಕಬೋರ್ಡಿಗೆ ಧನಸಹಾಯದ ಬಗ್ಗೆ ಅರ್ಜಿ ಮಾಡಲಾಗಿದ್ದರೆ ಅಥವಾ ಇನ್ನು ಮಾಡಿದರೆ ಅದನ್ನು ಸಹಾನುಭೂತಿಯಿಂದ ಪರಿಶೀಲಿಸು ವೆನೆಂದರು. ಉಡುಪಿಯಲ್ಲಿ ಪಶುವೈದ್ಯ ಕಾ ಲೇಜು ಮತ್ತು ಕೃಷಿ ಕಾಲೇಜುಗಳನ್ನು ಸರ ಕಾರಿ ತೆರೆಯಬೇಕೆನ್ನುವ ಕುರಿತು ಏನೆಂದು ಉತ್ತರಿಸಲು ತಿಳಿಯದಾಗಿವೆ ಎಂದರು. ಉಸಾಧ್ಯಕ್ಷ ಶ್ರೀ ಪಿ. ಪಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಉಪವಿದ್ಯಾ ಸಚಿವೆಯರೊಡನೆ ಶಿಕ್ಷಕ ಪ್ರತಿನಿಧಿಗಳ ವಿಚಾರವಿನಿಮಯ—

ಉಡುಪಿಗೆ ಸಂದರ್ಶನವಿತ್ತಿದ್ದ ಉಪ ವಿದ್ಯಾ ಸಚಿವೆಯರೊಡನೆ ತಾ. ೧೪ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಕ್ರಿಯಾ ಸಮಿತಿಯ ಮತ್ತು ಉಡುಪಿ ತಾಲೂಕು ಪ್ರಾಥಮಿಕ ಶಿಕ್ಷಕರ ಯೂನಿಯನ್‌ನ ಪ್ರತಿನಿಧಿಗಳು ವಿಚಾರವಿನಿಮಯ ಮಾಡಿ ಗ್ರಾಂಟ್ ಇನ್-ಎಯಿಡ್ ಸಮಿತಿಯು ಬೇಗನೆ ತನ್ನ ವರದಿಯನ್ನು ಪ್ರಕಟಿಸುವಂತೆ, ಈ ಸುಧಾವಧಿಯಲ್ಲಿ ಶಿಕ್ಷಕರಿಗೆ ಇಂಟರಿಮ್ ಪರಿಹಾರವನ್ನು ಕೊಡಬೇಕೆಂದೂ ನಿರುದ್ಯೋ ಗೀ ತರಬೇತಾದ ಶಿಕ್ಷಕರಿಗೆ ಸ್ಥಾನದ ಬೇರೆ ಕಡೆಗಳಲ್ಲಿ ಉದ್ಯೋಗವನ್ನು ದೊರಕಿಸಿ ಕೊ ಡುವಂತೆ ಸಹಕರಿಸಬೇಕೆಂದೂ ಕೇಳಿಕೊಂಡರು. ಸ್ಥಳೀಯ ಪ್ರಾಸನಸಘಾಸದಸ್ಯ ಶ್ರೀ ಯು. ಎಸ್. ನಾಯ್ಕರೂ ಹಾಜರಿದ್ದು ಉಪಾಧ್ಯಾ ಯರ ಕೇಳಿಕೆಗಳನ್ನು ಸಮರ್ಥಿಸಿದರು. ಶ್ರೀ ಎಫ್. ಡಾಂತಿಯವರು ಧನ್ಯವಾದಗಳನ್ನರ್ಪಿಸಿದರು.

ಗುಡಿಕೈಗಾರಿಕಾ ಸಪ್ತಾಹ—

ತಾ. ೪ರಂದು ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಗುಡಿಕೈಗಾರಿಕಾ ಸಪ್ತಾಹದ ಅಂಗವಾಗಿ ಗುಡಿಕೈಗಾರಿಕೆಗಳ ವಸ್ತುಪ್ರದ ರ್ಶನ ನಡೆಯಿತು. ಉತ್ತಮ ಪ್ರದರ್ಶನಗಾರ ರಿಗೆ ಬಹುಮಾನ ದಂಪತಿಯ ಸಮೂಹರಂಭವು ನಗರಾಧ್ಯಕ್ಷ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷ ತೆಯಲ್ಲಿ ಜರುಗಿತು. ತಾಲೂಕು ಸಮಿತಿಯ ಅಧ್ಯಕ್ಷ ತಹಶೀಲ್ದಾರ್ ಶ್ರೀ ಮಹಮ್ಮದ್ ಬ್ಯಾರಿಗಳು ಸ್ವಾಗತಮಾತುಗಳನ್ನಾಡಿದರು. ಡಾ. ಪಿ. ಜಿ. ಆಚಾರ್, ಶ್ರೀಗಳಾದ ಎ. ಜೆ. ಆಳ್ವ, ಕೆ. ರಾಮಾಚಾರ್ ಮತ್ತು ಬಿ ಶಂಕರ ಸೆಟ್ಟಿಗು ಕಾಲೋಚಿತಮಾತುಗಳನ್ನಾಡಿದರು. ಕೃಷಿ ಕೆಲಸದ ಬಗ್ಗೆ ಶ್ರೀಮತಿ ಇಂದಿರಾ ಭಟ್ಟರಿಗೆ ಪ್ರಥಮ ಬಹುಮಾನವೂ ಸೈಂಟ್ ಸಿಸಿಲೀಸ್ ಬ್ಯಾಸ್ಕೆಟ್‌ಬಿಗೆ ದ್ವಿತೀಯ ಬಹುಮಾನವೂ ದೊರೆಯಿತು. ಗಂಡಸರಲ್ಲಿ ಶ್ರೀಗಳಾದ ಯರನಂತರಾವ್ ಮತ್ತು ಕೆ. ರಾಮಚಾರಿಯರಿಗೆ ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ಕೊಡಲ್ಪಟ್ಟವು. ಶ್ರೀ ಕೆ. ವೆಂಕಟ್ರಾಯ ಪೈಗಳು ಎಂದಿನಂತೆ ಸ್ವಾಗತಿಸಿದರು.

ಚೈತನ್ಯ ಪಂಥದ ಸ್ವಾಮೀಜಿ ಬಂ

ಗಳೂರಿನ ಸೌದೀಯ ಮಠದ ಶ್ರೀ ಭಕ್ತ ವಿಲಾ ಸತೀರ್ಥ ಸ್ವಾಮಿಗಳವರು ತಮ್ಮ ಶಿಷ್ಯ ರೊಂದಿಗೆ ತಾ. ೧೦ರಲ್ಲಿ ಉಡುಪಿಗೆ ಆಗಮಿಸಿ ದರು. ಬಸ್ ನಿಲ್ದಾಣದಿಂದ ಸಾಸ್ತ್ರಕಾರೇಜು ತನಕ ಅವರನ್ನು ಪರ್ಯಾಯ ಅಧ್ಯಮಾರು ಮುರದ ಬರಿದಾನಳಿಗೆಯಿಂದ ಕರತರಲಾಯಿ ತು ಕಾರೇಜಿನಲ್ಲಿ ಪ್ರಿನ್ಸಿಪಾಲ್ ಕೌಲಗಿ ಪೇ ಷಾಜರ್ಯರು ಸ್ವಾಗತಿಸಿದರು. ಸಂಜೆ ಪರ್ಯಂತಮಠದಿಸಲ್ಲಿ ನಗರಸಭೆಯ ಕಡೆಯಿಂ ದ ಶ್ರೀ ಸ್ವಾಮಿಯವರಿಗೆ ಮಾನಪತ್ರವನ್ನು ನಗರಸಭಾಧ್ಯಕ್ಷ ಶ್ರೀ ಕೆ. ಕೆ. ವೈಗಳು ಅ ರ್ಪಿಸಿದರು. ಸ್ವಾಮಿಗಳವರು ಉತ್ತರದಲ್ಲಿ ಮಾಧ್ವತತ್ವಗಳಿಗೂ ಚೈತನ್ಯ ಮಹಾಪ್ರಭುಗಳ ತತ್ವಗಳಿಗೂ ಹೇಗೆ ಸರಿಹೋಲುತ್ತವೆ ಎಂಬುದನ್ನು ವಿವರಿಸಿ ಜನತೆಯು ಕಲ್ಯಾಣ ಕ್ಕಾಗಿ ಧರ್ಮಾಚರಿತನೆಗಳ ನೆರವಿನ ಆಗತ್ಯವೆಂದು ಒತ್ತಿಹೇಳಿದರು. ಸಮಾರಂಭದಲ್ಲಿ ಶ್ರೀ ಪರ್ಯಾಯ ಅಧಿಪಾರಾಯ, ಶ್ರೀ ಸುತ್ತಿಗೆ ಮತ್ತು ಶ್ರೀ ಫಲಿಮಾರು ಸ್ವಾಮಿಗಳು ಹಾಜರಿದ್ದರು.

ಯಕ್ಷಗಾನ ಕಲಾಸೇವೆ—

ಉಡುಪಿಯ ಯಕ್ಷಗಾನ ಕಲಾಮಂಡಲ (ರಿ) ಇದರ ಪ್ರಧಾನ ಕಾರ್ಯಲಯದಲ್ಲಿ ಲಭ್ಯ ದೀಪೋ ತ್ಸವದ ಸಲುವಾಗಿ ದಿನಾಲೂ ಸಂಜೆ ೬ರಿಂದ ೨ ಗಂಟೆಯ ತನಕ ಯಕ್ಷಗಾನ ಕೂಟ ಮತ್ತು ಭಾಷಣಗಳಾಗುವವು. ತಾ ೧೭ರಂದು ಚಂ ದ್ರಗ್ರಹಣ ನಿಮಿತ್ತ ಸಂಜೆ ೬ರಿಂದ ೧೧ ಗಂಟೆ ತನಕ ಶ್ರೀಕೃಷ್ಣ ಗೀತೋಪದೇಶ ಎಂಬ ಯಕ್ಷಗಾನ ಕೂಟವು ಶ್ರೀಗಳಾವ ನಾರಾಯ ಣ ಸೆಟ್ಟರ ಹಾಡುಗಾರಿಕೆ, ಎನ್ಮೂ. ಗೋವಿ ದನ ರಾವ್, ಹುಬ್ಬು ರಾವ್, ಕೆ. ಜನಾ ರ್ದನಾಚಾರಿಯವರ ಮೃದಂಗವಾದನ, ಕೋ ಟಿ ಸುಬ್ಬರಾವ್, ಸೀತಾನದಿ ನರಸಿಂಹಯ್ಯ ಸೆಟ್ಟಿ, ಜೆ೦ಬೆಟ್ಟು ಗೋಪಾಲ ಸೆಟ್ಟಿ, ಎನ್ಮೂ. ವೆಂಕಟ್ರಾಜ ಭಟ್ಟ, ಕೆ. ರಾಮ ಸೆಟ್ಟಿ, ಗೋಪು ಶೆಟ್ಟಿ, ಮುದ್ದು ಸೆಟ್ಟಿರೇ ಮೊದಲಾದ ಆರ್ಥಧಾರಿಗಳ ಕೂಡುವಿಕೆಯಿಂದ ಜರುಗಿತು. ಶ್ರೀ ಕೆ. ನಾರಾ ಯಣ ಸೆಟ್ಟರು ಲಕ್ಷದೀಪೋತ್ಸವನ ಸಲು ವಾಗಿ ನಾಲ್ಕು ದಿನಸಗಳಂದ ಜರುಗಿಸಿದ ಯ ಕ್ಷಗಾನ ಕಲಾಸೇವೆಯ ಉದ್ದೇಶವನ್ನು ವಿವ ರಿಸಿದರು. ಧನ್ಯವಾದಾರ್ಪಣೆ, ಮಂಗಲ ಗೀತೆ ಗಳಾಗಿ ಸಮಾರಂಭ ಕೊನೆಗೊಂಡಿತು.

ಉಡುಪಿ ನೇಕಾರರ ಜೋರಾಟದ ನಿರ್ಧಾರ—

ಉಡುಪಿ ತಾಲೂಕು ನೇಕಾರರ ಸಂಘದ ಮಹಾ ಸಭೆಯು ತಾ. ೩ರಂದು ಕಿನ್ನಿ ಮೂಲ್ಕಿಯಲ್ಲಿ ಶ್ರೀ ಗಂಗಯ್ಯ ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರುಗಿತು. ರಜಾ ಸಂಬಳ ಸಿಕ್ಕುವ ತನಕ ನೇಕಾರರು ಹೂಡಿರುವ ಹೋ ರಾಟವನ್ನು ಮುನ್ನಡೆಸಲು ತ್ರಿಯಸಮಿತಿಯು ನೂಡಿರುವ ನಿರ್ಣಯವನ್ನು ಶ್ರೀಗಳಾವ ಜೇ ವಿಡ್ ಕಕ್ಕಡ ಮತ್ತು ಸಿಂಪ್ಲನ್ ಸೋನ್ಸರು ವಿವರಿಸಿದರು ನಿರ್ಣಯವು ಮಹಾಸಭೆಯ ಮಾನ್ಯತೆ ಪಡೆಯಿತು ನೇಕಾರರು ರಜಾ ಸಂ ಬಳದ ಹಕ್ಕಿಗಾಗಿ ನಡೆಸುತ್ತಿರುವ ಮುಷ್ಕರ ಹೋರಾಟವನ್ನು ಒಂದು ನ್ಯಾಯವಾದ ತೀ ರ್ಮಾನಕ್ಕೆ ಮಾಲಕರು ಬರುವ ವರೆಗೆ ಸರ್ವ ಶಕ್ತಿಯನ್ನು ಉಗಪಯೋಗಿಸಿ ಮುನ್ನಡೆಸಬೇ ಕೆಂದು ಒಮ್ಮತದ ನಿರ್ಣಯವಾಯಿತು. ಸ್ಥ ಳೀಯ ಎಮ್. ಎಲ್. ಎ ಗಳವರು ಮಾ ಲಕ-ಮಜೂರರ ವಿವಾದವನ್ನು ತೀರ್ಮಾನಿಸ ಲು ಮುಂದಾಗಬೇಕೆಂದು ಅವರನ್ನು ಕೇಳಿ ಕೊಳ್ಳಲಾಯಿತು

ಎಂ. ಜಿ ಯಂ. ಕಾಲೇಜು ಯೂನಿಯನಿನ—

ಅಶ್ರಯದಲ್ಲಿ ತಾ. ೧೧ರಂದು ಶ್ರೀ ನಾ. ಕಸ್ತೂರಿಯವರು 'ಹಾಸ್ಯ'ದ ಕುರಿತು ಭಾಷಣಮಿತ್ತರು. ಮರುದಿನ ಸಾಯಂನ್ಸ್ ಎಸೋಸಿಯೇಶನಸ ಆಶ್ರಯದಲ್ಲಿ 'ಇನುಷ್ಯನ ವಿಕಾಸ'ದ ವಿಷಯವಾಗಿ ಶ್ರೀ ಏ ಶಂಕರಾರಾಮ ರಾಯರು ಉಪನ್ಯಾಸವಿತ್ತರು. ತಾ ೧೩ರಂದು ಭಾಷಾ ಸಂಘದ ಆಶ್ರಯದಲ್ಲಿ ಶ್ರೀ. ಎಸ್. ವೆಂಕಟರಾಜರ ಭಾಷಣ ನಡೆ ಯಿತು.

ಆಧುನಿಕ ನಾಟಕಕಲಾ ಸಂಘದ

ವರು—೧೪ರಂದು ಸಂಜೆ೦ದ್ರ ಕಲಾಮಂದಿ ರದಲ್ಲಿ ಜೀವನಾಸಿ ನಾಟಕವನ್ನು ಶ್ರೀ ಕೆ. ಕೆ ಪೈಗಳ ಅಧ್ಯಕ್ಷತೆಯಲ್ಲಿ ಪಣಿಯೂರಿ ವಾ ದಿನ ಸೌಕರ್ಯಕ್ಕಾಗಿ ಸಹಾಯಾರ್ಥವಾಗಿ ಅಭಿನಯಿಸಿದರು. ಆರಂಭದಲ್ಲಿ ಶ್ರೀ ಜೈಲಾ ರು ವಾರುವೇನರಾಯರು ಸ್ವಾಗತಿಸಿದರು. ಶ್ರೀ ಕೆ. ಸೀನ ನಾಯ್ಕರು ಜನರ ಸಹಕಾರದ ಆವಶ್ಯಕತೆಯ ಕುರಿತು ಮಾತನಾಡಿದರು.

In the Court of the Subordinate Judge of S Kanara.

A. S No. 138/57 I Adl

Akkani Shedthi & another— Appellants

and

Gubbi Shedthi & others— Respondents

To

Respondents: (7) Pijina alias Sheena Shetty son of Pammi Shedthi, Residing in Madabettu of Shiva village of Udipi Tq. (10) Sheshi alias Gulli Shedthi daughter of Akki Shedthi, Residing in Narasimharajapur of Narasimharajapur Taluk.

Please take notice that the Appellants abovenamed instituted the above appeal against the decree and judgement in O. S. No 400/54 on the file of the District Munsif of Udipi, and the same is posted to 20—11—1957 for your appearance. If you fail to appear on that day either in person or through a duly authorised person the above appeal will be decided in your absence.

By order of the Court,

(*Sd*) S. Venkat Rao,

Vakil for Appellants,

Mangalore, 12—11—1957.

ಮಂಗಳೂರು

ಕೇಂದ್ರ ಮಂತ್ರಿ ಮಾನ್ಯ ಎಸ್. ಕೆ. ಡೋ- ಕೇಂದ್ರದ ಸಮಾಜವಿಕಾಸ ಯೋಜನಾ ಸಾಂಖ್ಯಿಕಗಳಾದ ಶ್ರೀ ಎಸ್. ಕೆ. ಡೋ ಆವರು ತಾ. 8ರಂದು ಇಂಗಳೂರಿಗೆ ಆಗಮಿಸಿದರು. ಜಿಲ್ಲಾ ಕಲೆಕ್ಟರರ ಕಛೇರಿಯಲ್ಲಿ ಅ ಹಾರೋತ್ಸಾವನೆ ಕುರಿತು ವಿಚಾರವಿನಿಮಯ ವ ಸಭೆ ಜರುಗಿತು. ಮೈಸೂರು ಸುಯೋಭವ್ಯ ದ್ಧಿಖಾತೆಯ ಉಪಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ, ಸಮಾಜವಿಕಾಸ ಖಾತೆಯ ಕಮಿಶನರ್ ಶ್ರೀ ವೆಂಕಟಕೃಷ್ಣ ರಾವ್, ಜಿಲ್ಲಾಧಿಕಾರಿಗಳು, ಅಧಿಕಾರೇತರ ಪ್ರಮುಖರು, ಶ್ರೀಗಳಾದ ಎಸ್. ನರಸ್ಪಯ್ಯ, ಕೆ. ಕೆ. ಸೆಟ್ಟಿ, ಕೆ. ಆರ್. ಆಚಾರ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಮಂತ್ರಿಗಳು ಮಾತನಾಡುತ್ತಾ ಇಸ್ಸು ನುಂದೆ ಸಮಾಜಾಭಿವೃದ್ಧಿ ಕಾರ್ಯಗಳಲ್ಲಿ ಆಹಾರೋತ್ಪಾವನೆಗೆನೇ ಹೆಚ್ಚಿನ ಗಮನಕೊಯಬೇಕೆಂದು ತಿಳಿಸಿದರು.

ಶ್ರೀ ಚೈತನ್ಯ ಮಠಾಧೀಶರಾದ ಶ್ರೀ ತ್ರಿದಂಡಿ ಸ್ವಾಮಿ ಭಕ್ತಿನಿಲಸ ಮಹಾರಾಜರು ತಾ. 6ರಂದು ಮಂಗಳೂರಿಗೆ ಆಗಮಿಸಿದರು. ಮಂಗಳೂರಿನ ನಾಗರಿಕರ ಪರವಾಗಿ ಕೆನರಾ ಹೈಸ್ಕೂಲಿನಲ್ಲಿ ನಿವೃತ್ತ ಜಡ್ಜರಾದ ಶ್ರೀ ಎಸ್. ರಾಘಾಕೃಷ್ಣ ಕೆಯವರ ಅಧ್ಯಕ್ಷತೆಯಲ್ಲಿ ಮಹಾರಾಜ ಸ್ವಾಮಿಗಳವರಿಗೆ ಸ್ವಾಗತಕೋಯಲಾಯಿತು.

ಸಂಗೀತ ನಾಟಕ ಎಕೆಡಮಿಯ ಆಶ್ರಯದಲ್ಲಿ—ದಕ್ಷಿಣ ಕನ್ನಡ ಜಿಲ್ಲಾ ಸಂಗೀತ ನಾಟಕ ಎಕೆಡಮಿಯ ಆಶ್ರಯದಲ್ಲಿ ಜರುಗಿದ ಬಯಲಾಟವಿತರಣೆಯನ್ನು ತಾ. 10 ರಂದು ಗಣಪತಿ ಹೈಸ್ಕೂಲಿನ ಶಾರದಾ ಭವನದಲ್ಲಿ ಮೈಸೂರಿನ ವಿದ್ಯಾಸಚಿವ ಶ್ರೀ ವಿ. ವೆಂಕಟಪ್ಪನವರು ನೆರವೇರಿಸುತ್ತಾ, ಕಲೆಗಳಿಗೆ ಪ್ರೋತ್ಸಾಯ ನೀಡುವ ಕಾರ್ಯ ಸರಕಾರದ್ದಿರುವುದಂದ ಸರಕಾರವು ನಾಟಕ ಎಕೆಡೆಮಿಯನ್ನು ಸ್ಥಾಪಿಸಿದೆ ಎಂದು ಹೇಳಿದರು. ಶ್ರೀ ಕೆ. ಕೆ. ಸೆಟ್ಟಿ, ಎಸ್. ಎಲ್. ಸಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಬಿ. ಕೆ. ನಾಟಕ ಎಕೆಡೆಮಿ ಉಪಾಧ್ಯಕ್ಷರಿವ ಡಾ. ಕೆ. ನಾಗಪ್ಪ ಆಳ್ವರು ಸ್ವಾಗತಿಸಿದರು. ಶ್ರೀ ಎಚ್. ಕೆ. ತಿಂಗಳಾಯರು ವರದಿಯನ್ನೋದಿದರು. ಮಾಸ್ಟರ್ ವಿಠಲ್ ಮತ್ತು ಶಿಷ್ಯೆಯರಿಂದ ನೃತ್ಯ ಕಾರ್ಯಕ್ರಮ ಏರ್ಪಾಡಾಯಿತು.

ಯುವಕ ಕಾಂಗ್ರೆಸ್:- ಮಂಗಳೂರು ನಗರ ಕಾಂಗ್ರೆಸಿನ ಸಪ್ತಾಹಿಕ ಸಭೆಯು ತಾ. 8ರಂದು ಶ್ರೀ ಎ. ಜೋಜೆನವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟಿ ಎಮ್. ಎಲ್. ಸಿಯವರು ಕಾಂಗ್ರೆಸಿಗೆ ಸೇರುತ್ತಿರುವ ಯುವಕ ಕಾಂಗ್ರೆಸಿನ ಶಿಸ್ತು ಸಂಘಟನೆ ಮತ್ತು ಲೋಸನೋಶಗಳನ್ನು ವಿವರಿಸಿದರು. ಮಧ್ಯಾಹ್ನೋತ್ತರ ಕಾರ್ಯಾಗಾರಿಯಲ್ಲಿ ಆಧಿಕಾರೆಸ್ಥರ ಆಸಕ್ತಿ, ಜಿಲ್ಲಾ ಸಮಿತಿಯ ವರೆದಿ ವಿಚಾರದಲ್ಲಿ ಭೂಮಂಡಲ ಸಂಘದ ಆಶ್ರಯ ಪ್ರಿ ಮೊದಲಾದ ವಿಷಯಗಳಲ್ಲಿ ಮಾತ ನಾಡಿದರು.

ರೋಟರಿ ಕ್ಲಬ್ಬಿನ ಸಭೆಯು— ತಾ. 7ರಂದು ಶ್ರೀ. ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಪಿ. ಕಸ್ತೂರಿಯವರು ವರದಿಯನ್ನೋದಿದರು. ಕಂಕನಾಡಿ ಭೃತ್ತ ಪರಿಶೋಧನೆ ಕೇಂದ್ರವು ಸುವರಿಂಟೆಂಡೆಂಟಿಂಟಾದ ಶ್ರೀ ಕೆ. ಹನುಮಂತರಾಯರು 'ದ. ಕ. ಜಿಲ್ಲೆಯ ಕೃಷಿ ಚಿಕೆಯಲ್ಲಿ ಸಂಶೋಧನೆ' ಎಂಬ ವಿಷಯವ ನ್ನೆತ್ತಿ ಭಾಷಣ ಮಾಡಿದರು, ಆನಂತರ ನಡೆದ ಚರ್ಚೆಯಲ್ಲಿ ಶ್ರೀಗಳಾದ ಎ. ಉಮಾನಾಥ ರಾವ್ ಎ. ಕೃಷ್ಣ ಪೈಗೆ, ಎಸ್. ಎನ್. ಕೀಣಿ, ಡಾ. ಕೆ. ಬಿ. ಸೆಟ್ಟಿ ಮೊದಲಾದವರು ಭಾಗ ವಹಿಸಿದ್ದರು.

ರಷ್ಯಾ ಕ್ರಾಂತಿಯ ವಾರ್ಷಿಕೋತ್ಸವವು—ಮಂಗಳೂರಿನ ದ. ಕ. ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನೇರಿದ ಸಾರ್ವಜನಿಕ ಸಭೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ ಎಂ. ಕೃಷ್ಣ ಸೆಟ್ಟಿರು ಸಭಾಧ್ಯಕ್ಷತೆ ವಹಿಸಿದರು. ಶ್ರೀಗಳಾದ ಎ. ಶಾಂತಾರಾಮ ಪೈ, ಕೆ. ಮೋನಪ್ಪ ಸೆಟ್ಟಿ, ಬಿ. ಲಿಂಗಪ್ಪ ಸಾರಂಗ್, ಉಮಾನಾಥ ನಾಯಕ ಮೊದಲಾದವರು ನ್ಯೂನಾನಾಡಿದರು. ಭಾರತ ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಗಣಪತಿ ಹೈಸ್ಕೂಲಿನ ಶಾರದಾ ಭವನದಲ್ಲಿ ಆಚರಿಸಲಾದ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಬೋರ್ಡು ಅಧ್ಯಕ್ಷೆ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ವಹಿಸಿದ್ದರು. ಡಾ. ಮಂಗೇಶರಾಯರು ಸಂದ ರ್ಭೋಚಿತ ಭಾಷಣವಿತ್ತರು.

ಕೈಗಾರಿಕಾ ಸಪ್ತಾಹ— ತೃತೀಯ ಆಮಿಭಾರತ ಕುಶಲ ಕೈಗಾರಿಕಾ ಸಪ್ತಾಹದ ಮುಕ್ತಾಯ ಸಮಾರಂಭ ಮತ್ತು ವಸ್ತು ಪ್ರದರ್ಶನದ ಉತ್ತಮ ವಸ್ತುಗಳಿಗೆ ಬಹುಮಾನವಿತರಣೆಯ ಸಮಾರಂಭವು ತಾ 9ರಂದು ಗಣಪತಿ ಹೈಸ್ಕೂಲಿನ ಸಭಾ ಭವನದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ|| ಜೆ. ಡಿ. ಬೇಲಿಯತ್ತರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟ್ ಶ್ರೀ ಎಸ್. ಯು. ಪರಶುರಾಮ ನಾಯ್ಕರು ಸ್ವಾಗತಿಸಿದರು.

ಭಾಷಣ—ತಾ. 7ರಂದು ಸಂಜೆ ಸ್ಥಳೀಯ ಸರಕಾರಿ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ನೇರಿದ ಸಭೆಯಲ್ಲಿ ಶ್ರೀ ನೂಸ್ತಿ ವೆಂಕಟೇಶ ಆಯ್ಯಂಗಾರರು 'ಜಯವೆಂದರೇನು?' ಎಂಬ ವಿಷಯದ ಮೇಲೆ ಉಪಾತ್ತ ಭಾಷಣವಿತ್ತರು. ಆರಂಭದಲ್ಲಿ ಕಾರ್ಯದರ್ಶಿ ಶ್ರೀ ರಘುನಾಥ ಸೆಟ್ಟರು ಸ್ವಾಗತ ನೀಡಿದರು.

ಬೆಳ್ಳಣ್ಣು—ಸ್ಥಳೀಯ ಬೋರ್ಡು ಹೈಸ್ಕೂಲಿನ ನೂತನ ಕಟ್ಟಡದ ಆದಿಗೆಲ್ಲನ್ನಿಡುವ ಕಾರ್ಯವನ್ನು ತಾ 10ರಂದು ಪೂರ್ವಾಹ್ನ ಮೈಸೂರು ವಿದ್ಯಾಸಂಚಿ ಶ್ರೀ ವೆಂಕಟಪ್ಪನವರು ನೆರವೇರಿಸಿದರು. ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸನಸೂರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಬಾಲಕಿಯರಿಂದ ಪ್ರಾರ್ಥನೆಯೊಂದ ಬಳಿಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಕೊರಡ್ಡಳ್ ವೆಂಕಟ್ರಾಯರು ಸ್ವಾಗತ ಭಾಷಣಮಾಡಿ ಸಂಘದ ಕಾರ್ಯಕಲಾಪಗಳನ್ನು ವಿವರಿಸಿ ಶಾಲಾ ಕಟ್ಟಡಕ್ಕೆ ಸರಕಾರದಿಂದ ಪಡೆದ ಪ್ರೋತ್ಸಾಹನವನ್ನು ಆಪೇಕ್ಷಿಸಿದರು. ಶ್ರೀ ಬಿ. ಎಸ್. ಭಾಸ್ಕರ ರೈಗಳು ಸಂಘದಕಡೆಯಿಂದ ಮಂತ್ರಿಗಳಿಗೆ ಮಾನವಿಯನ್ನು ಆರ್ಪಿಸಿದರು ಶಾಲಾ ಕಟ್ಟಡಕ್ಕೆ ಆಂದಾಜುಮೊದಲಾಗಿ ಐದತ್ತು ಸಾವಿರ ರೂಪಾಯಿಗಳ ಬೆಜ್ಜವಲ್ಲಿ ಅರ್ಧಾಂತ ಪಡೆಯನ್ನು ಸರಕಾರಿ ಗ್ರಾಂಟುರೂಪದಲ್ಲಿ ಕೊಡಬೇಕೆಂದು ಮನವಿಯಲ್ಲಿ ನಿವೇದಿಸಲಾಗಿತ್ತು.

ಜಿಲ್ಲಾ ಕಲೆಕ್ಟರ್ ಶ್ರೀ ಹೊಂಬಾಳಯ್ಯನವರು ಸಾತನಾಡಿ ಶಾಲೆಗೆ ಅಭ್ಯುದಯವನ್ನು ಕೋರಿದರು. ಗ್ರಾಮಾಂತರ ಜನಗಳು ಸುಧಾರಿತ ವ್ಯವಸಾಯ ಕ್ರಮದಲ್ಲಿ ಬೇಸಾಯವನ್ನು ಮಾಡಿ ಹೆಚ್ಚು ಆಹಾರ ಉತ್ಪಾದನೆ ಮಾಡಬೇಕೆಂದು ಕೇಳಿಕೊಂಡರು.

ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ, ಈ ಭಾಗದ ಶಿಕ್ಷಣ ಪ್ರಗತಿಯು ಚೆಲೋ ದಾಗಿ ಮುಂದರಿದಿದೆ. ಜಾಸಗಿ ಜನರು, ಜಾತಿ ಸಂಸ್ಥೆಗಳು ಶಾಲಾಕಟ್ಟಡ ಕಟ್ಟಲು, ಸಲಕರಣಿಗಳನ್ನು ಒದಗಿಸಲು ಮುಂದೆ ಬಂದಿರೇ ಕಾರಣ. ಈ ಶಾಲೆಯ ಬಗ್ಗೆ ಅಪೇಕ್ಷಿಸಿದ ಸಹಾಯಧನದ ಕುರಿತು ಶಕ್ಯವಿದ್ದಷ್ಟು ನೀಡಲು ಆಲೋಚಿಸಲಾಗುವುದು ಎಂದರು. ನಂತರ ಸಚಿವರು ಈಗಿನ ಕಾಲಕ್ಕೆ ಸೀಜಾದ ವಿದ್ಯೆ ಎಂತಹುದು ಎಂಬುದನ್ನು ವಿವರಿಸಿ ವಿದ್ಯಾವಂತ ಯುವಕರಲ್ಲಿ ಬೇಸಾಯ ಮಾಡುವ ಧ ದನಕರುಗಳನ್ನು ಮೇಯಿಸುವುದು ಆ ಗೌರವ ಎಂಬ ಭಾವನೆ ಈಗ ಇರಿವುದು ಹೋಗಬೇಕಾಗಿದೆ ಎಂದರು.

ಅಧ್ಯಕ್ಷ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರು ಈ ಶಾಲಾ ಕಟ್ಟಡಕ್ಕೆ 1½ ಎಕ್ರೆ ಸ್ಥಳವನ್ನು ದಾನ ಮಾಡಿದ ಶ್ರೀ ಎಚ್. ನರಸಿಂಹ ಗಡಿಯಾರ ಮತ್ತು ಶಾಲಾ ಆಟದ ಬಯಲಿಗಾಗಿ ನೇಜಿಗೆ ಸ್ಥಳವನ್ನಿತ್ತು ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರ ವಿದ್ಯಾಭಿಮಾನವನ್ನು ಪ್ರಶಂಸಿಸಿದರು. ಗ್ರಾಮಾಂತರಗಳಲ್ಲಿ ಹೈಸ್ಕೂಲುಗಳಿರತಕ್ಕ ಸ್ಥಳಗಳಲ್ಲಿ ಅಯಾಯಾ ಊರಿನಮಹನೀಯರು ಶಾಲೆಗೆ ಜಾಗವನ್ನು ಒದಗಿಸಿಕೊಟ್ಟಲ್ಲಿ ಪಾಲಿಕೆರ ವಿಷಯಗಳನ್ನು ಕಲಿಸಲು ಅನುಕೂಲವಾಗುವುದು. ಮಹಾ ಜನರು ಈ ಕಾರ್ಯದಲ್ಲಿ ಜಿಲ್ಲಾ ಬೋರ್ಡಿನೊಡನೆ ಸಪಕರಿಸಬೇಕೆಂದು ಕೇಳಿಕೊಂಡರು. ಶ್ರೀ ನಾರಾಯಣ ಸೆಟ್ಟರು ಧನ್ಯವಾದಗಳನ್ನಿತ್ತರು. ಸಮಾರಂಭ ಮುಗಿದ ಬಳಿಕ ಮಂತ್ರಿಗಳು ಕಾರ್ಕಳಕ್ಕೆ ಹೋದರು.

ಕಾರ್ಕಳ—ತಾ 4ರಲ್ಲು ಗುಡಿಕೈಗಾರಿಕಾ ಸಪ್ತಾಹದ ವಸ್ತುಪ್ರದರ್ಶನವನ್ನು ಡಾ. ಎಮ್. ಎಸ್. ಸೆಟ್ಟಿರು ಉದ್ಘಾಟಿಸಿದರು. ಶ್ರೀ ಎಸ್. ಆರ್. ಆಚಾರ್ಯರು ಕಾಲೋಚಿತ ಮಾತುಗಳನ್ನಾಡಿದರು. ಸಾರ್ವಜನಿಕ ಸಭೆಯು ಶ್ರೀ ಎನ್. ಎಮ್. ಆಧ್ಯಂತಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೆ. ವಿ. ಎನ್. ಉಪಾಧ್ಯಾಯ ಮತ್ತು ಶ್ರೀಮತಿ ಅಳ್ವಕ್ತಾಯಿಯವರು ಭಾಷಣಮಿತ್ತರು. ತಹಶೀಲ್ದಾರ್ ಶ್ರೀ ಕೆ. ವೆಂಕಪ್ಪನವರು ಧನ್ಯವಾದಗಳನ್ನಿತ್ತರು.

ವಿದ್ಯಾಸಚಿವೆ ಶ್ರೀಮತಿ ಗ್ರೇಸ್ ಟಿಕ್ಕರರು ತಾ. 8ರಂದು ವಿದ್ಯಾಖಾತೆಯ ಡಿಸ್ಟ್ರಿಬ್ಯೂರಿಕ್ಟರ್ ಶ್ರೀ ವಾಸುದೇವಯ್ಯನವರೊಂದಿಗೆ ಕಾರ್ಕಳಕ್ಕೆ ಬಂದು ಸಂಸ್ಕೃತ ಕಾಲೇಜು, ಬೋರ್ಡು ಹೈಸ್ಕೂಲು, ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲು, ಮೊದಲಾದ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಿದರು. ಪ್ರಯಾಣಿಕರ ಬಂಗ್ಲೆಯಲ್ಲಿ ಶ್ರೀಗಳಾದ ಕೆ. ಪಿ. ಮುಕುಂದ ಪ್ರಭು, ಕೆ. ಪಾಂಡುರಂಗ ನಾಯಕ್, ಮೊದಲಾದವರು ವಿದ್ಯಾಸಚಿವೆಯರನ್ನು ಭೇಟಿಯಾದರು. ದ. ಕ. ಜಿಲ್ಲೆಯ ಶಿಕ್ಷಣ ಪ್ರಗತಿಯ ಬಗ್ಗೆ ಸದಭಿಪ್ರಾಯವಿತ್ತಿರುವರು.

ತಾ. 2ರಂದು ಆಸ್ಪತ್ರೆ ದಿನಾಚರಣೆ ಸಮಿತಿ ಅಧ್ಯಕ್ಷ ಶ್ರೀ ಎಸ್. ಎಮ್. ಆಧ್ಯಂತಾಯರು, ಸರಕಾರಿ ಆಸ್ಪತ್ರೆಗೆ ಪೊಳಿಗೋಡೆಯನ್ನು ಕಟ್ಟಿಸುವ ಸಲುವಾಗಿ ನಾಟಕಾದಿಗಳಿಗೆ ಸಹಾಯ ಮಾಡಿದವರಿಗೆ ಧನ್ಯವಾದಗಳನ್ನರ್ಪಿಸಿದರು. ನಾಟಕಾದಿ ಪ್ರದರ್ಶನಗಳಿಂದ ಡಾ. ಎಮ್. ಎಸ್. ಸೆಟ್ಟರ ನೇತೃತ್ವದಲ್ಲಿ ರೂಪಾಯಿ 4000ಕ್ಕೂ ಮಿಕ್ಕಿ ಜಮೆಯಾಗಿತ್ತು.

ನಿಂಜೂರು—ಸ್ಥಳೀಯ ಶ್ರೀ ವಿನೇಕಾನಂದ ಸೇವಾ ಸಂಘದ ವಿಶೇಷ ಕಾರ್ಯಕಾರೀ ಸಭೆಯು ತಾ. 3ರಂದು ಕಾರ್ಕಳ ಸೋಶಿಯಲ್ ಬೆಗೇನ್ಸಾಸರ್ ಶ್ರೀ ಶ್ರೀನಿವಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಮುಂದಿನ ಅಭಿವೃದ್ಧಿ ಕುರಿತು ವಿಚಾರ ವಿನಿಮಯ ನಡೆಸಲಾಯಿತು.

ಪುತ್ತೂರು—ಗುಡಿಕೈಗಾರಿಕಾ ಸಪ್ತಾಹವನ್ನು ತಾ. 3ರಂದು ಶ್ರೀ ವೆಂಕಟ್ರಮಣ ಗೌಡ, ಎಮ್. ಎಲ್. ಎ. ಆವರ ಅಧ್ಯಕ್ಷತೆಯಲ್ಲಿ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರು ಉದ್ಘಾಟಿಸಿದರು. ತಹಶೀಲ್ದಾರ್ ಶ್ರೀ ಕುಂಞಿ ಪನ್ಯಾರ್‌ರವರು ಧನ್ಯವಾದಗಳನ್ನಿತ್ತರು.

ಕುಂದಾಪುರ ರೆವಿನ್ಯು ಡಿವಿಜನಲ್ ಆಫೀಸರವರ ಕೋರ್ಟಿನಲ್ಲಿ

O. P. 817/1957

ಅರ್ಜಿದಾರ N. K. ವೆಂಕಟ್ರಾವ್

ಎದ್ರಿರು. 1. ಬಸ್ಸಿ ಮತ್ತು ಹೆಂಗ್ಸು

2. ಬಿಚ್ಚಿ ಚಿತ್ತಿ ಹೆಂಗ್ಸು

ಕುಂದಾಪುರ ತಾಲ್ಲು ಕೋಟೇಶ್ವರಾದಲ್ಲಿರುವ ಕಾಳೇರಿ ಬಿಂಗ್ಸಿನ ಮೇಗಲು ಬಿಲ್ಡಿಂಗು ತ್ತು ಪೆಂಗ್ಸಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಎದ್ರಿರಿಂದ ಅರ್ಜೀದಾರರಿಗೆ ಬರತಕ್ಕ ಜಾಲಗೇನೆ ಬಾಕಿ ನುತ್ತು ಸ್ಥಳಸ್ಥಾಧೀನಕೆ ಒಗ್ಗಿ ಸಹಾ ಅರ್ಜೀದಾರನು ಪಾಕ್ಸು ಮಾಡಿದ ಮೇಲಿನ ಅರ್ಜಿಯು ತಾರೀಕು 16-11-1957ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪದೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳೆದ್ದಿದ್ದಲ್ಲಿ ಸದ್ರಿ ದಿವ್ಸ ಮೇಲಿನ ಕೋರ್ಟಿಗೆ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪಿಸಿಕೊಳ್ಳತಕ್ಕದ್ದು. ಏಂಬ ಕಂಡ್ಲಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwaraih
Advocate for Petr
Date 6—11—57 Coondapoor

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಡಳ್ ವೆಂಕಟ್ರಾವ್, ಎಲ್. ಐ.ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಶಿವರಾಮ ಕಾರಂತರ ಅತ್ಯಪೂರ್ವ ಗ್ರಂಥ—

ಯಕ್ಷಗಾನ

ಬಯಲಾಟ

ಇದೀಗ ಪ್ರಕಟವಾಗಿದೆ

ಬಣ್ಣಬಣ್ಣದ ಚಿತ್ರಗಳು!

ಬೆಲೆ ರೂ. 6/-

ವಿ. ಪಿ. ಕಳಿಸುವುದಿಲ್ಲ-

ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಚಂದಾದಾರರಲ್ಲಿ ವಿನಂತಿ.

ಆಗೋಸ್ಟ್ ಅಕ್ಕೆಲ್ಲ 'ನವಯುಗ'ದ 36 ನೇ ವರ್ಷವು ಅತ್ಯವಾಗಿ ಸಕ್ಟಂಬರದಿಂದ 37 ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಜತ್ತಿ ಸಮಿತಿಯ ವರದಿಗೆ ವಿರೋಧವೇಕೆ?

ಅವ್ಯವಹಾರಿಕ ಮತ್ತು ಅನಪೇಕ್ಷಿತ

ಮೈಸೂರು ರಾಜ್ಯದಲ್ಲಿ ಭೂ ಸ್ಥಿತಿಗತಿಗಳನ್ನು ಅಭ್ಯಸಿಸಿ, ಅವನ್ನು ಸುಧಾರಿಸಲು ನಿರ್ದಿಷ್ಟ ಲಾಂಛಿದ್ದ ಮೈಸೂರು ಭೂಸುಧಾರಣಾ ಸಮಿತಿಯ (ಜತ್ತಿ ಸಮಿತಿ) ಸರಕಾರಕ್ಕೆ ತನ್ನ ಸುಧೀರ್ಘವಾದ ವರದಿಯನ್ನು ಒಪ್ಪಿಸಿದೆ. ಈ ವರದಿಯನ್ನು ವಿರೋಧಿಸಿ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರು ಮತ್ತು ರೈತರ ಸಂಘ, ಪಾಸ್ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರ ಸಂಘ ಇವೆರಡು ಸಂಸ್ಥೆಗಳು ಸಂಯುಕ್ತವಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ವಿರೋಧಾಭಿಪ್ರಾಯದ ಮನವಿಯನ್ನು ಮೈಸೂರಿನ ಶಾಸನಸಭಾ ಸದಸ್ಯರಿಗೂ ವಿಧಾನಪರಿಷತ್ತಿನ ಸದಸ್ಯರಿಗೂ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಿಗೂ ಕಳುಹಿಸಲಾಗಿದೆ. ಈ ಸವಿವರವಾದ ಮತ್ತು ವಿಸ್ತಾರವಾದ ವರದಿಯಲ್ಲಿ ಜೆಸ್ಟಿಯತ್ತ ಜತ್ತಿ ಸಮಿತಿಯು ಸರಿಯಾಗಿ ವಿಚಾರಮಾಡಿದೆ, ಒಂದು ಕಠೋರ ವರದಿಯನ್ನೀಯಲು ಉದ್ದೇಶದಿಂದಲೇ ಇಂತಹ ತೀವ್ರವಾದ ವರದಿಯನ್ನು ಸರಕಾರಕ್ಕೆ ಒಪ್ಪಿಸಿರುವುದೆಂದು ಈ ವರದಿಯಲ್ಲಿ ಸೂಚಿತವಾದ ಸಲಹೆಗಳನ್ನು ಕಾನೂನು ಮಾಡಿದರೆ, ಅವುಗಳಿಂದ ಭೂಮಾಲಿಕರು ಉತ್ಪತ್ತಿ, ಭೂಮಿ, ಆರ್ಥಿಕ ಸರಿಸ್ಥಿತಿ ಎಲ್ಲವೂ ಹಾಳಾಗಿ ಹೋಗಿ, ದೇಶದ ಸ್ಥಿತಿಯು ತೀರ ಕೆಳಮಟ್ಟಕ್ಕಿಳಿಯುವುದೆಂದು ಸರ್ಕಾರ್ಥನ ನಿರ್ಧಾನದಿಂದ ಹೇಳಲಾಗಿದೆ ಈ ಅನಿಸಿಯನ್ನು ಪ್ರತಿಪಾದಿಸುವುದು ಸ್ವಳ್ಪಾಧಾನದಿಂದ ಸಾಧ್ಯವಿಲ್ಲವಾದುದರಿಂದ, ಆದರ ಮುಖ್ಯಾಂಶಗಳನ್ನು ಇಲ್ಲಿ ಎತ್ತಿ ಬರೆಯುತ್ತೇವೆ

೧ ಈಗ ಇರುವ ಗೇಣಿ ಪದ್ಧತಿಯನ್ನು ನಾಶಮಾಡಿ, ಭೂಮಿಯನ್ನು ಗೇಣಿದಾರರಲ್ಲಿ ಹಂಚಿಬಿಡುವಂತಹ ಸಲಹೆಯು ಅವ್ಯಾವಹಾರಿಕವೂ, ಅನಪೇಕ್ಷಣೀಯವೂ ಆಗಿರುವುದಲ್ಲದೆ ಕೃಷಿ ರೂಪದಲ್ಲಿಳಿಸಲು ಅಸಾಧ್ಯವಾದುದಾಗಿರುವುದು. ಮತ್ತು ಈ ವಿಧಾನವನ್ನು ಅನುಸರಿಸಿದ್ದೇ ಆದರೆ ಆದರಿಂದ ಉತ್ಪತ್ತಿಗೆ ತುಂಬ ಹಾನಿಸಂಭವಿಸುವುದು.

೨ ಪ್ರಥಮ ಮತ್ತು ದ್ವಿತೀಯ ಪೆಂಚಾಯಿತ್ ಯೋಜನೆಗಳು ಎಲ್ಲಾ ಜಮೀನುಗಳಲ್ಲಿ ಭೂ ವಿಕಾಸವೆಂದ ಭೂಸುಧಾರಣೆಯು ಕಟ್ಟುನಿಟ್ಟಾದ ಉದ್ದೇಶ ಸಹಿತವಾಗಿಲ್ಲ. ಸೂಚಿತವಾದ ದರ್ಶನಗಳು ತೀರ ಸಾಮಾನ್ಯತೆರನಿವಿದ್ದು, ದೇಶದುದ್ದಂತ ಒಂದೇ ರೀತಿಯ ಭೂಸುಧಾರಣೆಯಿರಬೇಕಾಗಿಲ್ಲ ಹಾಗಿರುವಾಗ, ಏಮ ವಿಧಿನ್ನ ಪ್ರದೇಶಗಳಿಂದ ಕೇವಲ ಭಾಷಾ ಸಾಮ್ಯತೆಯಿಂದಾಗಿ ಒಂದು ಸೀರೆಯ ಈ ಮೈಸೂರು ರಾಜ್ಯದಲ್ಲಿ ನಾನಾ ಪ್ರದೇಶಗಳಲ್ಲಿ ನಾನಾ ವಿಧದ ಮಣ್ಣಿನ ಫಲವತ್ತತೆ, ಬೆಳೆಯ ಜಾತಿ, ಉತ್ಪತ್ತಿ ಪಡೆ, ಮಳೆ, ನೀರಾವರಿ ಮತ್ತು ಸಾರಿಗೆಸೌಕರ್ಯಗಳಿರುತ್ತ, ಏಕರೂಪತೆಯನ್ನು ಸಾಧಿಸುವುದು ಸರಿಯಲ್ಲ.

೩. ಉತ್ಪತ್ತೋತ್ಪತ್ತಿ ಮತ್ತು ಈಗಿರುವ ಆಹಾರದ ಕೊರತೆಯನ್ನು ನೀಗಿಸುವ ಸಲುವಾಗಿ, ರಾಜ್ಯಸರಕಾರವು ತಾನೇ ಸ್ವತಃ ತನ್ನಂತಕೃತದಲ್ಲಿರುವ ೫೬ಲಕ್ಷ ಎಕ್ರೆಗಳಷ್ಟು ಭೂಮಿಯನ್ನು ಭೂಹೀನರಿಗೆ ಕೊಟ್ಟು ಅವರೆಲ್ಲರಲ್ಲಿ ಆತ್ಮೋತ್ಸಾಹ ಪೂರ್ಣದರ್ಶನದಿಂದಲೂ ಆರ್ಥಿಕ ಸಹಾಯದಿಂದಲೂ ಪುನರ್ವಾಸಿತರನ್ನಾಗಿ ಮಾಡಿ ಪ್ರಗತಿಕಾರ್ಯದಲ್ಲಿ ಒಂದು ಹೆಜ್ಜೆ ಮುಂದಿಡಬೇಕು

೪ ತಮ್ಮಲಿರುವ ಭೂಮಿಯನ್ನು ಸ್ವಂತ ಸಾಗುವಳಿಮಾಡದೆ ಇರುವ ವೆಲಮೊತೆಯರು ತೀರ ಅತ್ಯಲ್ಪ ಎಂದರೆ ಕೇವಲ ಗೇಣಿದಾರರ ಸೇಕಡಾ ೩.೮. ಕೆಲವರಿಗೆ ಇರುವ ಭೂಮಿಯು ಸ್ವಲ್ಪ ಮಾತ್ರವಾಗಿದ್ದು, ಆದರೆ ಮೇಲೆ ಆವಲಂಬಿತವಾಗಿದ್ದು ಕುಟುಂಬ ನಿರ್ವಹಣೆಯನ್ನು ಮಾಡುವುದು ಅಸಾಧ್ಯವೆಂದುದರಿಂದ, ಬೇರೆ ಕೆಲಸದಲ್ಲಿ ತೊಡಗಿ ಬೇಕಾಗುತ್ತದೆ. ಇಂತಹರ ಸಂಖ್ಯೆಯೂ ಬಹಳ ವಿರಳವಾದುದರಿಂದ, ಯಾವ ಗಂಡಾಂತರವೂ ಒದಗುವುದು ಸಾಧ್ಯವಿಲ್ಲ.

೫ ದೇಶದಲ್ಲಿ ಆಹಾರೋತ್ಪಾದನೆಯನ್ನು ಆರ್ಥಿಕವಾಗಿಸುವ ಉದ್ದೇಶದಿಂದ ರಾಷ್ಟ್ರೀಯ ಯೋಜನಾ ಸಮಿತಿಯು ಹರಿಮಹೋದ ಭೂಮಿಯನ್ನು ಒಂದಾಗಿ ಸೂಡಬೇಕೆಂಬ ಇರಾದೆಯಿಂದಿರುವಾಗ, ಈ ಜತ್ತಿ ಸಮಿತಿಯ ವರದಿಯಲ್ಲಿ ಸೂಚಿತವಾದಂತೆ ಗೇಣಿದಾರರಿಗೆ ಗೇಣಿ ಭೂಮಿಯ ಮಾಲಕತನವನ್ನು (ಪರಿಮಾವಧಿ ೧೩೦೦ ರೂಪಾಯಿ ನಿವಾರ್ಷಿಕ ಆದಾಯ ಬರುವಂತೆ) ಕೊಟ್ಟಿತಂದರೆ ಅಲ್ಲಿಲ್ಲಿ ಈಗ ಬಂದಾಗಿರುವ ಭೂಹಿಮಯು ಸಣ್ಣ ಹರಿ ಪಂಚಾಗಿ ಹೋಗುವುದು ಹಾಗಿರುವಾಗ ಆಹಾರದ ಉತ್ಪತ್ತಿ ಹೆಚ್ಚುವುದು ಹೇಗೆ?

೬ ಭೂಮಿಯೊಡೆಯರು ಸ್ವಂತ ಸಾಗುವಳಿಮಾಡುವಂತೆ ಪ್ರೋತ್ಸಾಹಿಸಬೇಕು ಮತ್ತು ಹಾಗೆ ಮಾಡುವಲ್ಲಿ ಯಾವುದೇ ಮಿತಿಯನ್ನು ಹೇರುವುದು ಸಲ್ಲದು

೭ ಈಗ ಇರುವ ವೈಯಕ್ತಿಕ ಹಿಡುವಳಿಯ ಮೇಲೆ ಯಾವುದೇ ಮಿತಿಯನ್ನೂ ಹಾಕಬಾರದೆಯೂ ಇನ್ನು ಮುಂದೆ ಹೊಸದಾಗಿ ಕೊಳ್ಳುವ ಸಂದರ್ಭದಲ್ಲಿ ಮಾತ್ರ ಹಾಗೆ ದೇಶಕಾಲ ಪರಿಸ್ಥಿತಿಗಳಿಗೆ ತಕ್ಕಂತೆ ಮಾಡಬಹುದು.

೮ ಜತ್ತಿ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಳಿಯಸಂತಾನದ ಆಚರಣೆಯ ಕುಟುಂಬ ಪದ್ಧತಿಯನ್ನು ಗಮನಿಸಿಯೇ ಇಲ್ಲ ಇಂತಹ ಒಂದು ಕುಟುಂಬದ ಆದಾಯ ವ್ಯಕ್ತಿಯ ಹಿಡುವಳಿಗೆ ಒಂದು ಆವಧಿಯನ್ನು ನಿಡುವುದು ಒಪ್ಪತಕ್ಕೆ ವಿಷಯವಲ್ಲ

೯. ಬೇರೆ ಆರ್ಥಿಕ ಕ್ಷೇತ್ರಗಳಿಗೆ ಸಹ ಒಂದು ಮಿತಿಯನ್ನು ಹಾಕುವವರೆಗೆ ನ್ಯಾಯಾಯಕ್ಷೇತ್ರಕ್ಕೂ ಕುಟುಂಬದ ಹಿತುಳಿಗೂ ಯಾವುದೇ ಮಿತಿಯನ್ನು ನಿರ್ಧಿಸಬಾರದು

೧೦ ಭೂಹಿಮಯನ್ನು ಭೂಮಾಲಿಕರ ಕೈಯಿಂದ ಕಿತ್ತು ಕೊಂಡದ್ದನ್ನು ಪಂಚಾಯಿತಿ ಅದು ಆನಗತ್ಯ ಮತ್ತು ಅವ್ಯಾವಹಾರಿಕವಾಗಿದೆ ಒಂದುವೇಳೆ ಹಾಗೆ ಮಾಡುವುದೇ ಆದರೆ, ಭೂಮಾಲಿಕರಿಗೆ ಆ ಹೊದಲಿನ ಪತ್ತು ವರ್ಷಗಳಲ್ಲಿ ಆಯಾ ಪ್ರದೇಶಗಳಲ್ಲಿನ್ನಿದ್ದ ಭೂಮಿಯ ನೂರುಕಟ್ಟಿ ದರದ ಕರಾಸರಿಯನ್ನು ಪ್ರತಿಫಲ

ಮುತದಾರರ ಪಟ್ಟಿಗಳಲ್ಲಿ ಮುತದಾರರಾಗಿ ಹೆಸರುಗಳನ್ನು ಸೇರಿಸಿಕೊಳ್ಳುವುದು.

ಭಾರತದ ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆಯ ಸಾರಾಂಶ

೧೯೫೦ನೇ ಇಸವಿಯ ಪ್ರಜಾಪ್ರತಿನಿಧ್ಯದ ಅಧಿನಿಯಮವನ್ನು ಇತ್ತೀಚೆಗೆ ತಿದ್ದುಪಡಿ ಮಾಡಲಾಗಿತ್ತು. ಮತ್ತು ಹೆಲೆಯ ನಿಯಮಗಳನ್ನು ರದ್ದು ಪಡಿಸಿ ತಿದ್ದುಪಡಿಯಾದ ಈ ಅಧಿನಿಯಮದ ಪ್ರಕಾರ ಹೊಸ ನಿಯಮಗಳನ್ನು ಪ್ರಸಿದ್ಧಿಪಡಿಸಲಾಗಿತ್ತು. ಅರ್ಹರಾದ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಗಳಲ್ಲಿ ಸೇರಿಸುವುದಕ್ಕೆ ಸಂಬಂಧಪಟ್ಟ ಆರ್ಜಿಗಳನ್ನು ಒಪ್ಪಿಸುವ ಕಾರ್ಯವಿಧಾನವನ್ನು ವಿವರಿಸಿ ಆಯೋಗವು ಈ ಹಿಂದೆ ಪ್ರಕಟಿಸಿದ ಪತ್ರಿಕಾ ಪ್ರಕಟಣೆಗಳು ಇದರಿಂದಾಗಿ ಸ್ವಲ್ಪಮಟ್ಟಿಗೆ ನಿಷ್ಪ್ರಯೋಜಕವಾಗಿವೆ ತಿದ್ದುಪಡಿಯಾದ ಅಧಿನಿಯಮದ ೨೬ನೇ ಪ್ರಕರಣದಲ್ಲಿ ಒಂದು ಚುನಾವಣಾ ಸ್ಥಾನದ ಮತದಾರರ ಪಟ್ಟಿಯಲ್ಲಿ ಸೇರಿಸ್ಪಡಲು ಅರ್ಹರಾಗಿದ್ದರೂ ತನ್ನ ಹೆಸರು ಸೇರಿಸಲ್ಪಡದಿರುವ ಮನುಷ್ಯನ ಹೆಸರನ್ನು ಯಾವಾಗಲಾದರೂ ಸೇರಿಸಲು ಅವಕಾಶವನ್ನು ಕಲ್ಪಿಸಲಾಗಿದೆ

(೧) ಒಂದು ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವ ಸಲುವಾದ ಪ್ರತಿಯೊಂದು ಅರ್ಜಿಯನ್ನೂ ಸಾಮಾನ್ಯವಾಗಿ ಸಂಬಂಧ ಪಟ್ಟ ಚುನಾವಣಾ ಸ್ಥಾನದ ಇರ್ಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರರಿಗೆ ದಿಸ್ಪ್ರತಿಯಲ್ಲಿ ಕಳುಹಿಸತಕ್ಕದ್ದು ಅರ್ಜಿಯು ಫಾರ್ಮಿನಲ್ಲಿ ಇರಬೇಕೆಂದೂ ಅದರಲ್ಲಿ ಅರ್ಜಿದಾರನ ಹೆಸರು, ವಿಳಾಸ, ವಯಸ್ಸು, ಲಿಂಗ ಮತ್ತು ಅವನು ಮತದಾರನಾಗಿ ನೋಂದಾಯಿಸಲ್ಪಡಬೇಕೆಂದು ಬಯಸುವ ಸ್ಥಳ ಇವುಗಳ ವಿವರಗಳು ಇರಬೇಕೆಂದೂ ನಿಯಮಗಳು ನಿರ್ದೇಶಿಸಿವೆ. ಅರ್ಜಿಯಲ್ಲಿ ಹೆಸರು ಸೇರಿಸಲ್ಪಡಬೇಕೆಂದು ಕೋರಿರುವ ಸ್ಥಳವು ಅರ್ಜಿದಾರನು ಸಾಮಾನ್ಯವಾಗಿ ವಾಸಿಸುವ ಸ್ಥಳವಾಗಿರಬೇಕೆಂದೂ ಅಥವಾ ಅವನು ಆಸ್ತಿಯನ್ನು ಹೊಂದಿರುವ ಸ್ಥಳವಾಗಿ

ಕಟಕ

ಬಡತನದ ಬಾಳು

(ಹಿನ್ನೆ ಮುಂದಿಂದ)

ಏನು ಹೇಳಲಿ? ಮನೆಯಾಕೆಯ ಆರೋಗ್ಯ ಬಹಳ ಕೆಟ್ಟಿದೆ. ಸ್ವಲ್ಪ ಬಂದು ನೋಡಿದರಾಗುತ್ತಿತ್ತು. ಮೂರು ದಿನಗಳಿಂದ ನೀರಿನ ಒಂದು ಬಿಂದುಸಹ ಗಂಟಲಿನೊಳಗೆ ಇಳಿದಿಲ್ಲ. ಎರಡು ಗಂಟೆಗಳಿಂದ ನಿಶ್ಚೇಷ್ಟಿತಳಾಗಿ ಬಿದ್ದಿದ್ದಾಳೆ. ಡಾಕ್ಟರರೆ, ಒಮ್ಮೆ ಬಂದು ಆಕೆಯನ್ನು ಉಳಿಸಿಕೊಡಿರಿ. ನನ್ನ ಜೀವಮಾನವಿಡೀ ನಿಮ್ಮ ಗುಲಾಮಗಿರಿಯನ್ನು ಮಾಡುತ್ತೇನೆ." ಇಷ್ಟನ್ನು ಹೇಳುತ್ತಿರುವಂತೆ ರಾಮುವಿನ ಮಾತು ಕಟ್ಟಬಂತು. ಅವನು ಡಾಕ್ಟರರ ಕಾಲುಗಳನ್ನು ಹಿಂದಕ್ಕೆತೆದುಕೊಳ್ಳುತ್ತಾ ಹೇಳಿದರು: "ಗಾಬರಿಗೀಬರಿಪಡಬೇಡ. ಈಗ ಎಲ್ಲಾ ಸರಿಹೋಗುತ್ತದೆ. ಒಳ್ಳೆದು. ಏನಾದರೂ ಗಾಡಿ ತಂದಿದೀಯೋ"

ರಾಮೂ ನಡುಗುತ್ತಾ ಉತ್ತರಿಸಿದ- "ಇಷ್ಟು ರಾತ್ರಿಯಲ್ಲಿ ಗಾಡಿ ಎಲ್ಲೂದ ಸಿಗಬೇಕು ಡಾಕ್ಟರರೆ. ಈಗ ಹೋಗಿ ತಲಪುತ್ತೇನೆ." ಡಾಕ್ಟರರು ಒಳಗೊಳಗೇನೇ ರೇಗುತ್ತಾ ತನ್ನ ಔಷಧಿ ಪೆಟ್ಟಿಗೆಯನ್ನು ರಾಮುವಿನೊಡನೆ ಕೊಡುತ್ತಾ ನಡೆಯತೊಡಗಿದರು.

ರಾಮುವಿನ ಪದಗಳು ಭೂಮಿಯಲ್ಲಿ ನಿಲ್ಲುತ್ತಿರಲಿಲ್ಲ. ಅವನು ಬಹಳ ವೇಗವಾಗಿ ಹೆಜ್ಜೆ ಹಾಕುತ್ತಿದ್ದನು. ಆಗ ಡಾಕ್ಟರರೆಂದರು— "ಅರೇ, ಚಕೆ ಓಡುತ್ತಿದ್ದೀಯಾ? ಕೇವಲ ಹಕ್ಕು ನಿಮಿಷಗಳೆ ದಾರಿ: ಈಗ ಮನೆತಲಪುತ್ತೇನೆ." ಆದರೆ, ರಾಮುವಿನ ಹೃದಯ ಡಬಡಬ ಗುಡುತಿತ್ತು. ರೆಕ್ಕೆಯಿದ್ದಿದ್ದರೆ, ಕ್ಷಣ್ಣೆವಾಗಿ ಹಾರಿ ತನ್ನ ವ್ಯಾಣಿಪ್ರಿಯೆಯನ್ನು ಕೂಡಲೇಉಪಚರಿಸಬಹುದಿತ್ತು ಎಂದುಕೊಂಡನವನು. ಮನೆಯು ಸಮೀಪಿಸಿದಂತೆ ಆನನ ಮನಸ್ಸೂ ಸ್ಥಿಮಿತಗೊಳ್ಳುತ್ತಾ ಬಂದಿತು.

ಇತ್ತಕಡೆ ರತಿಯಾಳ ಪರಿಸ್ಥಿತಿ ವಿಷಮಗೊಳ್ಳುತ್ತ ಬಂದಿತ್ತು. ಸಾವಿರಾರು ಪ್ರಯತ್ನಗಳನ್ನು ಕೈಕೊಂಡರೂ ಆಕೆಗೆ ಪುಜ್ಜೆಯೇ ಬರಲಿಲ್ಲ. ಆಗ ಮುದುಕಿಯೂ ಹೆದರಿ ಕಂಗಾಲಾದಳು. ಈಗೇನು ಮಾಡುವುದೆಂದಾಕೆ ಯೋಚಿಸತೊಡಗಿದಳು. ಒಂದು ಗಂಟೆಯಷ್ಟು ಹೊತ್ತು ಕಳೆಯುತ್ತಾ ಬಂದರೂ, ರಾಮೂ ಹಿಂದಿರುಗಲಿಲ್ಲ. ಭಗವಂತನು ಏನನ್ನು ಕೋರಿಸುವನೆಂದು ತಿಳಿಯಲಿಲ್ಲ. ಅವಳು ಆ ಶಂಕೆಯಲ್ಲಿಯೇ ಬಿದ್ದಿದ್ದಾಗ, ರತಿಯಾಳು ಪಕ್ಕಕ್ಕೆ ತಿರುಗಿ ಕೂಗಿಸಳು. "ನೀರು"

ಮುದುಕಿಯ ಪ್ರಾಣಕ್ಕೆ ಪ್ರಾಣ ಕೂಡಿತು. ಆಕೆ ನೀರು ತರಲು ಓಡಿದಳು. ಆದರೆ ರತಿಯು ಪುನಃ ಮೂರ್ಛಿತಳಾಗಿದಳು. ಮುದುಕಿಯು ಒಂದು ಬಾರಿ ಪುನಃ ರತಿಯಾಳ ಇಡಿ ಶರೀರದಲ್ಲಿ ತನ್ನ ಕೈ ಹರಡಿಸಿದಳು ಮತ್ತು ನಾಡಿ ನೋಡಿದಳು. ಆಕೆ ಹೆದರಿ ಕೂಗಿಕೊಂಡಳು."

"ಏ, ಯಾರಜ್ಜಿ? ರಾವೂ ಬಂದನೆ? ಆಯ್ಯೋ, ಈಗ, ನಾಡಿಯೂ ಹೋಗಿ ಬಿಟ್ಟಿದೆ!"

ರಾಮೂ ಮತ್ತು ಡಾಕ್ಟರರು ಈಗ ತಾನೆ ಜೋಪುಡಿಯನ್ನು ಮುಟ್ಟುವವರಿದ್ದರು. ಮುದುಕಿಯ ಕೂಗನ್ನು ಕೇಳಿ ರಾಮೂವು ಒಮ್ಮು ಬಾರಿ ಕ್ಷಂಭಿತನಾದ. ಹುಚ್ಚು ನಾಯಿಯಂತೆ ಅವನು ಮನೆಯತ್ತ ನೆಗೆದನು. ಆದರೆ, ಜಲ್ಲೇನಿತ್ತು? ರತಿಯಾಳ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಆಕೆ ಈ ಕಷ್ಟಮಯ ಪ್ರಪಂಚನನ್ನು ಚಿರವಾಗಿ ಅಗಲಿದ್ದಳು. ರಾಮೂ ರತಿಯಾಳ ಶವದ ಮೇಲೆ ತಲೆ ಬಡೆದುಕೊಂಡು ಕೂಗ ತೊಡಗಿದನು. ಆದರೆ, ರತಿಯಾ ಅಲ್ಲಿ ಎಲ್ಲಿದ್ದಳು? ಆಕೆ ದೂರ ಹೋಗಿ ಬಿಟ್ಟಿದ್ದಳು; ಬಹಳ ದೂರ, ಪ್ರಾಪಂಚಿಕರ ಕೈಕರಡದಷ್ಟು ದೂರ ಓಡಿ ಹೋಗಿದ್ದಳು ಇಂದು ಆಕೆಯ ಪ್ರಾಣ ಪಕ್ಷಿಯು ಅವ್ಯಾಹತವಾಗಿ ಆತನನ್ನು ತೊರೆದು ದೂರ ಓಡಿ ಹೋಗಿಕ್ತು ಮತ್ತಾತ ಏನೂ ಮಾಡಲು ಅಸಮರ್ಥನಾಗಿದ್ದ.

ಭಾರತಕ್ಕೆ ಸ್ವಾತಂತ್ರ್ಯವೊದಗಿ ಹತ್ತು ವರ್ಷಗಳು ಕಳೆದು ಹೋಗಿದ್ದುವು.ಆದರೆ, ಬಡವರಿಗೆ ಸಮುಚಿತ ಡಾಕ್ಟರರ ಸಹಾಯವು ಈಗ ಸಹ ಸುಲಭವಾಗಿ ಪರಿಣಮಿಸಿಲ್ಲ. ಬಡತನದ ಜೀವನಾಂಧಕಾರದಲ್ಲಿ ನವತಾರೆಯುದಿಸಿಲ್ಲ.

(ಮೂಲ: ಯೋಜನಾ)

In the Court of the District Munsif of Karkala.

O. S. No. 280/1957.

Between

Govinda Bhatta — Plaintiff.

Chandhu Shedthi & Others — Defendants.

To the Defendants

1. Subbaya Shetty son of Meenu Shedthi.

3. Kamalu Shedthi daughter of Shesh̃ Shedthi residing in Kervashe village at Basraje, Karkal Taluk.

Whereas the Plaintiff has instituted the above suit for recovery of the arrears of Mulgeni rental etc for Rs 982/14 and costs of suit and interest etc and the same stands posted to 16—11—1957., you are hereby informed that you are at liberty to apear before the said Court at 11 A.M. on the said date and plead your defence, if any, failing which the suit will be heard and decided in your absence.

P. Ramachandra Rao.
Pleader for Plaintiff

Karkal dated 4—11—57.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಯಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಪ್ಪೆಟ್ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರು ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಾನೇಣಿ ಚೀಟುಗಳು, ನೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ಥಿತಿಗಳಲ್ಲಿರುವ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

೧. ಲೋಕಮಾನ್ಯ ಟಿಳಕ ಬರೆದವರು: ಬಾಲಜಿಂದ್ರ ಘಾಣೇಕರ. ಪ್ರಕಾಶಕರು: ಸಮಾಜಸುಸ್ತ ಕಾಲಂಬು, ಧಾರವಾಡ ಪುಟ ಕ್ರೌನ್ ೧/೮ರ ೯೦ ಬೆಲೆ. ೦.೭೫.

೨ ಲೋಕಮಾನ್ಯ ಬರೆದವರು: ಬಿ. ಈಶ್ವರ ಭಟ್ಟ, ಬಿ. ಎ. ಎಲ್ ಎಲ್ ಬಿ. ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ ಮಂಗಳೂರು ೨. ಪುಟ ಕ್ರೌನ್ ೧/೮ರ ೬೬ ಬೆಲೆ ರೂ. ೧–೦–೦

ಆಧುನಿಕ ಭಾರತದ ನೇತಾರರಿಗೆಲ್ಲ ಅಗ್ರ ಪಂಕ್ತಿಯಲ್ಲಿ ನಿಲ್ಲುವ ಭಾರತೀಯರೆಂದರೆ, ಲೋಕಮಾನ್ಯರು. ಜೀವನದ ಸರ್ವಕ್ಷೇತ್ರಗಳಲ್ಲಿಯೂ ಸರ್ವವಿಧದ ಸೇವೆಯನ್ನು ಸಲ್ಲಿಸಿ, ಭಾರತವಿಲ್ಲಿ ಮಾತ್ರವಲ್ಲ, ಪರದೇಶಗಳಲ್ಲಿ ಸಹ ಕೀರ್ತಿವಂತರಾದ ಈ ಪೂಜ್ಯ ಧೀರ ಸೇನಾನಿಯನ್ನು ಲೋಕಮಾನ್ಯ ಎಂದು ಭಾರತೀಯರು ಗೌರವಿಸಿದರು. ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು ಎಂಬುದನ್ನು ಘೋಷಿಸಿದ ಧೀರರಿವರು. ಭಾರತೀಯರ ಮನಸ್ಸು ಪರಕೀಯಾಡಳಿತೆಯು ಭಾರದಿಂದ ಕುಗ್ಗಿ ಹೋಗಿದ್ದಾಗ, ನಿದ್ದೆಯುದ್ದಿದ್ದವರನ್ನು ಬಡಿದೆಬ್ಬಿಸಿ, ರಾಷ್ಟ್ರೀಯ ಚೈತನ್ಯವಿಲ್ಲುವಂತೆ ಪ್ರಾರಂಭಿಸಿದವರು ಬಾಲಗಂಗಾಧರ ತಿಲಕರು. ಒಬ್ಬ ದೇಶಭಕ್ತನು ನೂಡಬಹುದಾದ ಕೆಲಸ ತೋರಬಹುದಾದ ಮಾತ್ರ ಭೂಮಿಷ್ಠೆ, ಪಡಬಹುದಾದ ದಂಡನೆ, ಹಾಗೂ ಹೊಂದಬಹುದಾದ ಕೀರ್ತಿ ಎಲ್ಲವನ್ನೂ ತಿಲಕರು ತಮ್ಮ ಪ್ರಾರಂಭಿಕ ಜೀವನದಿಂದ ಅಂತ್ಯದ ವರೆಗೂ ಅನುಭವಿಸಿದರು. ಭಾರತದ ರಾಷ್ಟ್ರೀಯತೆಯೆಂದು ಗೌರವಾನ್ವಿತರಾದ ಬಾಪೂ ಗೋಪಾಲಕೃಷ್ಣ ಗೋಖಲೆಯವರನ್ನು ತಮ್ಮ ಗುರುಗಳೆಂದು ಭಾವಿಸಿದ್ದರೆ, ಗೋಖಲೆಯವರಿಗೆ ತಿಳಕರೇ ಗುರು ಸದೃಶರು. ವಿದ್ಯಾರ್ಥಿಯಾಗಿ, ವಕೀಲನಾಗಿ, ದೇಶಭಕ್ತನಾಗಿ, ಧಾರ್ಮಿಕಯೋಗಿಯಾಗಿ, ಜನಸೇವಕನಾಗಿ, ಪತ್ರಿಕಾಕರ್ತನಾಗಿ, ಕೈದಿಯಾಗಿ ಕೊನೆಗೆ ಲೋಕನಾಯ್ಕನಾಗಿ ಮೆರೆದ ಅಪ್ರತಿಮ ಮೇಧಾವಿ ಶ್ರೀ ತಿಲಕರು. ಇಂತಹ ಮಹಾಪುರುಷನ ಚರಿತ್ರೆಯು ದಿವ್ಯವೂ ಭವ್ಯವೂ ರಮ್ಯವೂ ಆಗಿರುವುದಲ್ಲದೆ, ಲೋಕಾಂಚನಕಾರಿಯೂ ಆಗಿರುತ್ತದೆ. ಹೀಗಿರುವಾಗ, ಅಂತಹ ಜೀವನೇತಿಹಾಸವನ್ನು ಸಣ್ಣ ಹೊತ್ತಗೆಯಲ್ಲಿ ಸಂಗ್ರಹಿಸುವುದೆಂದರೆ, ಅದು ಕಠಿನವಾದುದು ಬಹ್ವರ್ಥವಾಶಯವನ್ನು ಬೃಹದ್ಗ್ರಂಥ ಆಳವೆಂತೆ! ಸಾಪೇಕ್ಷರು ಪುಟ ಬರೆದರೂ ಮುಗಿಸು ತೀರದ ಇತಿಹಾಸವನ್ನು ಸಂಗ್ರಹಿಸಿ ಮೇಲಿನಿಟ್ಟಿರುವ ಬರಹಗಾರರು ಮನಮೋಹಕ, ಕುತೂಹಲಪೂರ್ಣ ಶೈಲಿಯಿಂದ ಕನ್ನಡಿಗರಿಗೆ ಇತ್ತಿರುವುದು ಸಂತೋಷದ ವಿಷಯ. ಕನ್ನಡದಲ್ಲಿ ಇಂತಹ ದೇಶಭಕ್ತರ ಚರಿತ್ರೆಗಳು ಧಾರಾಳವಾಗಿಯಿಟ್ಟುಕೊಂಡು, ನಿಜವಾದ ಇತಿಹಾಸವು ಜನತೆಗೆ ತಿಳಿಯುವುದು ಅಗತ್ಯವಿದೆ. ಪ್ರಕೃತ, ಈ ಎರಡು ಹೊತ್ತಗೆಗಳಲ್ಲಿ ಪ್ರತಿಯೊಂದನ್ನೂ ಎತ್ತಿಕೊಂಡರೆ, ಕೆಳಗಿಡುವ ಮನಬಾರದು. ತಿಲಕರ ಬಗ್ಗೆ ನಾವು ಅನುತಾಪವನ್ನು ಪಡುತ್ತೇವೆ. ಸಾಹಿತ್ಯದೃಷ್ಟಿಯಿಂದಲೂ ಇತಿಹಾಸದೃಷ್ಟಿಯಿಂದಲೂ ಈ ಹೊತ್ತಗೆಗಳು ಸಮರ್ಪಕವಿಧಾನದಲ್ಲಿ ಬರೆಯಲಾಗಿವೆ. ಅಲ್ಲಲ್ಲಿ ಓದುವಾಗ, ಕಂರಗೆಡ್ಡಿದಿವಾಗುತ್ತದೆ. ಪ್ರತಿಯೊಬ್ಬ ಕನ್ನಡಿಗನೂ ಈ ಪುಸ್ತಕಗಳನ್ನು ಸಂಗ್ರಹಿಸುವುದು ಅತ್ಯಗತ್ಯ ಮಾತ್ರವಲ್ಲದೆ, ಪ್ರೌಢಶಾಲೆಗಳಲ್ಲಿ ಉಪಪಠ್ಯಗ್ರಂಥವಾಗಿಯೂ ಇಡಲ್ಪಡಲು ತಕ್ಕ ಅರ್ಹತೆಯನ್ನು ಇವು ಪಡೆದಿವೆ. ಕನ್ನಡಸಾಹಿತ್ಯವಲ್ಲರಿಯಲ್ಲಿ ಹೊಸದಾಗಿ ಅರಳಿದ ಈ ಕೃತಿಕುಸುಮಗಳನ್ನು ನಾವು ಮನಸಾರ್ಪಕವಾಗಿ ಸ್ವಾಗತಿಸುತ್ತೇವೆ.

೩. ವಾಜಿಗ್ರಹಣ ಅಥವಾ ಯೌವನಾಶ್ವ ಕಾಳಗ– (ಯಕ್ಷಗಾನ). ಬರೆದವರು: ಬಡೆಕ್ಕಿಲ ವೆಂಕಟರಮಣ ಭಟ್ಟ. ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ, ಮಂಗಳೂರು–೩. ಪುಟಗಳು: ೨೮. ಬೆಲೆ: ೪೦ ಪೈಸೆ.

ಉತ್ತರ ಭಾರತವಲ್ಲಿನ ಅಶ್ವಮೇಧ ಪರ್ವದ ಕಥೆಯನ್ನು ಸಂಸ್ಕೃತದಲ್ಲಿ ಜೈಮುನಿ ಮುನಿಯು ಹೇಳಿದ್ದರೂ ಕನ್ನಡದ ಸಾಹಿತ್ಯರಾಧಕರಿಗೆ ಅದನ್ನು ಕಾಣಿಕೆಯಾಗಿತ್ತವನು ಲಕ್ಷ್ಮೀಶನು. ಕನ್ನಡ ಸಾಹಿತ್ಯಾಕಾಶದಲ್ಲಿ ಧ್ರುವ ತಾರೆಯಂತೆ ವಿರಾಜಮಾನವಾಗಿ ಪಂಡಿತ ಪಾಮರರಿಗೆ ಹೃದ್ಯವಾದ ಪದ್ಯವಾಗಿದೆ ಕಾರ್ಣಾಟ ಜೈಮುನಿ ಭಾರತ. ಧರ್ಮರಾಯನು ತನ್ನ ನೊಡ್ಡಪ್ಪನ ಮುಕ್ಕಾದ ಕೌರವರನ್ನು ಕೊಂದು ರಾಜ್ಯವಾಳುತಿದ್ದಾಗ, ಬಂಧು ಹತ್ಯಾದೋಷ ಬಂತೆಂದು ಮರುಗಿದನು. ವ್ಯಾಸ ಮುನಿ ಬಂದು ಅಶ್ವಮೇಧ ಯಾಗೋಪದೇಶ ನನ್ಯಾಯಲು, ಕೃಷ್ಣನೊಡನೆ ವಿಜಾರವಿನಿಯಯ ಮಾಡಿ ಭವ್ಯಾವಹಿ ಪುರುಷತಿಯಾದ ಯೌವನಾಶ್ವನೆಲ್ಲಿರುವನೆ ಕಂಡುಬೆಯಸ್ಸು ಭೀನು, ವೈಸೇನ ಸಾಗೂ ನೀಭಾನಾದರು ಧರ್ಮರಾಯನಿಗೆ ತಂದೊಪ್ಪಿಸುವುದಕ್ಕಿದೇ ಯೌವನಾಶ್ವನನ್ನೂ ಆಜ್ಞಾಬದ್ಧನಾಗಿಸಿ ಕರೆತರುವರು. ಜೈಮುನಿಭಾರತದಲ್ಲಿ ಅದರಷಾದ ಈ ಕಥೆಗೆ ಪೆಂಡೆಕಟರಮಣಭಟ್ಟರು ಯಕ್ಷಗಾನರೂಪವನ್ನಿತ್ತಿದ್ದಾರೆ. 'ಯಕ್ಷಗಾನ'ದ ಬಗ್ಗೆ ಅವರಿಗಿರುವ ಪ್ರೇಮಾದರಗಳ ಪ್ರತೀಕವೆಂದೆನಿಸಿದೆ ಇದು. ಮುನಿನುಡಿಯುರುಳು ಕಣ್ಣಿಳು ಸಿಲುಕಿ ದೈನ್ಯಪತ್ರ,(ಪುಟ ೧೦) ಅಳಿಮಲ್ಲಿಗೆಯ ಪೊದರ ತಂಬಿಲು ಬಂಡುಂಡೊದು ಸುಳಿವುದೇ ಜಿಂಕಕಾವನನ, (ಪುಟ ೧೨), ಮುನಿವರಪು ಸಿದನೆ .....(ಪು. ೧೭), ಏಂದು ಕಾಡುವ ಸನುಯದಲಿ . ಪುಟ ೨೧)ನೊದಲಾವ ಹಲ ಪಾರೆಡೆಗಳಲ್ಲಿ ಜೈಮುನಿಭಾರತದ ಕಲ್ಪನೆ, ಭಾವ ಮಾತುಗಳು ಇದ್ದುದಕ್ಕಿನ್ನಂತೆಯೇ ಬಂದಿವೆ. ಅಮಪಡಿಂದಲೇ ಲೇಖಕರು ಯಕ್ಷಗಾನದ ರೂಪವನ್ನಿತ್ತುದೆನ್ನಬಹುದು. ಯಕ್ಷಗಾನವು ರಂಗಕ್ಕೆ ಬಂದರೇನೇ ಜೀವಳುವು. ಕನ್ನಡ ಯಕ್ಷಗಾನ ಪೋಷಕನವರು ಈ ಹೊಸ ಯಕ್ಷಗಾನವನ್ನು ಪ್ರಯೋಗಿಸಲು ಹಿಂಜರಿಯಬಾರದು.

೪ ಸ್ತೋತ್ರಮಂಜರಿ— ಸಂಪಾದಕರು: ಆಸ್ಥಾನವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ. ಪ್ರಕಾಶಕರು: ಎಂ. ಎಸ್. ಸಿದ್ಧಪ್ಪ ಬ್ರದರ್ಸ್, ಮೈಸೂರು. ಪುಟ ೨೮. ಬೆಲೆ: ಎರಡು ಆಣೆಗಳು. (೧೨ ಪ್ರತಿಗಳಿಗೆ ರೂ. ೧–೫–೦)

ಈ ಮೊದಲೊಮ್ಮೆ ಪ್ರಕಟವಾದ ಸ್ತೋತ್ರಮಂಜರಿಯ ಪರಿಷ್ಕೃತ ದ್ವಿತೀಯ ಮುದ್ರಣವಿದು. ಜೀವ ತಾಪ್ರಾರ್ಥನೆಯು ಭಗವತ್ಪಲ್ಲಿಯಷ್ಟೇ ಅಲ್ಲ, ಆಸ್ತಿಕ ವರ್ಗದಲ್ಲೆಲ್ಲಾ ಪಾಡುತ್ತದೆ ಸ್ಥಾನವನ್ನು ಪಡೆದಿದೆ. ಈ ಸ್ತೋತ್ರ ಮಂಜರಿಯಲ್ಲಿ ಸಂಕ್ಷೇತದ ಗಣೇಶ, ಅಂಗ, ಪರುಪತಿ, ಕಾಲಭೈರವ, ಶಿವ, ಸಿದ್ಧಲಿಂಗ, ಅನ್ನಪೂರ್ಣ, ಗಂಗಾ, ಮಹಾಲಕ್ಷ್ಮಿ, ಸರಸ್ವತಿ, ನವಗ್ರಹ, ಮೃತ್ಯುಂಜಯ–ಹೀಗೆ ೧೨ ಅಪ್ಯಕಗಳೂ, ವ್ಯಾಧರ ಧ್ಯೋತಕಲಿಂಗ, ಪಡಕ್ಷರ, ರಾಜರಾಜೇಶ್ವರಿ, ಇಂದ್ರಾಕ್ಷ್ಯಷ್ಟಕಗಳೂ ಸೇರಿ ೧೭ ಸ್ತೋತ್ರಗಳೂ ಸಂಗ್ರಹಿತವಾಗಿರುವುವಲ್ಲದೆ, ಪೂಗೆಯ ಮಾಯಿದೇವ (ಕಾಲ: ಸು. ಕ್ರಿ. ಶ ೧೪೩೦)ನ ಶಿವಾಧಿವಾಪ್ಯಕವೆಂಬ ಕನ್ನಡ ಅಷ್ಟಕವೂ ಸೇರಿಕೊಂಡಿದೆ. ಭಗವದ್ಭಕ್ತರು (ಮುಖ್ಯವಾಗಿ ವೀರಶೈವರು) ನಿತ್ಯಕರ್ತನೆಗೆ ಇದು ಅನುಕೂಲವಾಗಿರುತ್ತವೆ. ಈ ಸಂಗ್ರಹವನ್ನು ಸಂಪಾದಿಸಿದ ಆಸ್ಥಾನ ವಿದ್ವಾನ್ ನಂಜುಂಡಾರಾಧ್ಯರೂ ಪ್ರಕಾಶಕರೂ ಕೃತಜ್ಞತಾರ್ಹರಾಗಿದ್ದಾರೆ.

ದೀಪಾವಳಿ ಸಂಚಿಕೆಗಳು

೧. ಕರ್ಮವೀರ— ಸಂಪಾದಕರು: ಹರಾ. ಪುರೋಹಿತ, ಹುಬ್ಬಳ್ಳಿ. ಪುಟಗಳು ಡೆಮ್ಮಿ ೧/೪ರ ೧೪೪+xvi. ಬೆಲೆ: ರೂ. ೧.

ಎಂದಿನಂತೆಯೇ ಕರ್ಮವೀರದ ಸುಸ್ಪಷ್ಟ ವೈವಿಧ್ಯಕ್ಕೆ ಕವಿ ನಿಮರ್ಶಕ, ಕಥೆಗಾರರ ಕೃತಿಗಳಿಂದೊಡಗೂಡಿ ಸವಾಂಗಸುಂದರವಾಗಿ ಪ್ರಕಟವಾಗಿದೆ. ವಿಜ್ಞಾನ, ಸಂಸ್ಕೃತಿ, ಮನಶ್ಶಾಸ್ತ್ರ, ಶಿಕ್ಷಣ, ವೇದಾಂತ ಸುರಾಣ, ಸಾಹಿತ್ಯ ಮೊದಲಾದ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ ಲೇಖಗಳನ್ನು ನಾವೀ ಸಂಚಿಕೆಯಲ್ಲಿ ಕಾಣಬಹುದು. ಮುಖಪೃಷ್ಠದ ಜಿ. ಕೆ. ಮೂರ್ತಿಯವರ (ರಾಧಾಕೃಷ್ಣ?) ಕಲಾಕೃತಿಯೂ ಡಿ. ಎನ್. ಕೊಪೇರಿಯವರ ವಿಜಾಪುರದ ತಾಜಬಾವಡಿಯ ದೃಶ್ಯ, ಉದಕ ನುಂಡಲದ ನಿಸರ್ಗ ಸೌಂದರ್ಯಗೂ ರಮ್ಯ ನೇಪಥ್ಯವಾಗಿವೆ. ಅಲ್ಲಲ್ಲಿ ಕೆಲವೊಂದು ವ್ಯಂಗ್ಯ ಚಿತ್ರಗಳೂ ಸೇರಿಕೊಂಡು ಸರ್ವವಿಧದಲ್ಲಿಯೂ ಸಂಚಿಕೆಯು ಆತ್ಯಾಕರ್ಷಕವಿದೆ. ಸಂಪಾದಕರ ಪರಿಶ್ರಮ ಸ್ತುತ್ಯ.

೨. ಪ್ರಪಂಚ — ಪ್ರಧಾನ ಸಂಪಾದಕರು: ಪಾಟೀ ಪುಟ್ಟಪ್ಪ, ಹುಬ್ಬಳ್ಳಿ. ಪುಟ ಕ್ರೌನ್ ೧/೪–೧೩೬, ಬೆಲೆ ರೂ. ೧–೦–೦.

ಬೀಚಿ, ನಂಜಿ ಲಿಂಗಣ್ಣ, ಪರಿದರಾಜು ಹುಯಿಗೆರೋಳ ಮೊದಲಾದ ಪ್ರಸಿದ್ಧ ಕೃತಿಕಾರರ ಅಮೂಲ್ಯ ಕೃತಿಯುಕ್ತವಾಗಿದೆ. ನಾನಾ ಕ್ಷೇತ್ರಗಳಿಗೆ ಸಂಬಂಧಿಸಿದ ಸುಮಾರು ೭೫ ಲೇಖನ, ಕವಿತೆ, ಕಥೆಗಳು ಇಲ್ಲಿ ಸಂಗ್ರಹಿತವಾಗಿವೆ. ಬಹುರಾಜ ಕಟ್ಟೆಮನಿಯವರು ನಿಜಲಿಂಗಪ್ಪನವರ ಕುರಿತಾಡಿದ ಮಾತುಗಳು ಸರ್ವಾಂಶವಿದ್ದರೂ ಅತಿಯಾಗಿ ಕಾಣಿಸುತ್ತದೆ. ದೊಡ್ಡನೋಟುಬಂದರು ಕನ್ನಡದ ಉತ್ಪತ್ತಿ ವಿಚಾರವನ್ನು ಚರ್ಚೋಕೀತಿಯಲ್ಲಿ ತಿಳಿಸಿವಾರೆ. ಎಮರು ಪುಟಿದ ಮಾನಕಿಗಿಯರ ಕಥಾಕೃತಿ ಸಾಮಾನ್ಯವಿದೆ. ಅಲ್ಲಲ್ಲಿ ಸೇರಿಸಿದ ಲೇಖಕರ ಚಿತ್ರಗಳಲ್ಲಿ ಹೆಚ್ಚಿನವು ಪಳಕಾಮೆ ಬರಿಂದರೋ, ಅವರಾ ಕಾಗದದ ದೋಷದಿಂದಲೋ ತೀರಾ ಅಸ್ಪಷ್ಟವಾಗಿರುವುದು ಶೋಭನೀಯವಲ್ಲ ಅಂತೂ ಒಟ್ಟಿನಲ್ಲಿ ಸಂಪಾದಕರು ಇನ್ನೂ ಉತ್ತಮರೀತಿಯಲ್ಲಿ ಇಂತಹ ಪ್ರಪತ್ರಸಂಚಿಕೆಯನ್ನು ಹೊರತಿಸುವಂತಾಗಲಿ ಎಂಬು ಹಾರ್ದಿಕ ತ್ಕೇವೆ.

೩ ವೀಣಾ—ಸಂಪಾದಕರು: ಶಂಕರ ನಾರಾಯಣರಾಯ, 'ಪರಿವಾರ್', ವಿದ್ವಾನ್ ಶಿರ್ವ–ಪುಟ ಡೆಮ್ಮಿ ೧/೮–೭೪. ಬೆಲೆ ೫೦ ಪೈಸೆ.

ಸೇವನಸಿಂಧಾಜಮಲ್ಲ, ಕೆ. ಎಲ್. ಎನ್. ಉಪಾಧ್ಯಾಯ, ತಿರುಮಲೇಶ್ವರ ಬಟ್, ವೆಂಕಟರಾಮಾಚಾರ್ಯ, ರಾಮಕೃಷ್ಣ ಭಟ್ ಗೋವಿಂದ ಪೈ, ಅಪ್ಪಿಂಬಳ ಶಂಕರನಾರಾಯಣ ಮೊನಲಾದವರ ಕೃತಿಗಳಿಂದ ಗೂಡಿ ದೀಪಾವಳಿಯ ಮುಖಾರ್ತದಲ್ಲಿ ಹೊರಬಂದಿವೆ. ಮುಖಪುಟದಲ್ಲಿ ಜಗದ್ಗುರು ಶಂಕರಾಚಾರ್ಯರ ಚಿತ್ರವೊಂದಿದೆ. ಸಂಪಾದಕರು ಇನ್ನೂ ಉತ್ತಮ ರೀತಿಯ ಸಂಚಿಕೆಗಳನ್ನು ಹೊರತರಲೆಂದು ಹಾರೈಕೆ.

—ಗೋರಾ

Medical Digest:

Monthly Journal of the Profession. Silver Jubilee Number, June, 1957 Edited and Published by Dr. U. B. Narayana Rao, Bombay.

This Journal a Popular and very useful Journal has a fund of Medical knowledge. Eminent men of good standing in the profession, some of them from advanced countries like U. S. A. & England have given their experiences and advances in their particular speciality within the last two and one half decades The Journal has been accredited by the Foreign Medical Press also. This is an invaluable referee Journal for a busy medical practitioner.

V. L. Pandit

ಆಯುರ್ವೇದದ ಹಿತರಕ್ಷಣೆ ಮಾಡಬೇಕು

ಮಾನವಕ ಪಾಪಿಯೆಗಳಾಗಿ ಸಾಮಾನ್ಯವಾಗಿ ಉಪಯೋಗಿಸಲ್ಪಡುವಾವ ಮೆಡಿಸಿನರಿಯುಕ್ತ ಔಷಧ ವ ಸುಗಂಧ ದ್ರವ್ಯಗಳ ಮೇಲೆ ಏಕರೀತಿಯ ದರ ವ ಕ್ರಯ ನಿಬಂಧನೆಗಳಿಗೊಳಪಟ್ಟ ಸುಂಕವನ್ನು ಹೇರುವ ಕೆಲವಾಗಿ ಕೇಂದ್ರ ಸರಕಾರವು ಕಳೆದ ಎಪ್ರಿಲ್ ತಿಂಗಳ ಅದಿಯಿಂದ ನಂಬ್ರ 16–1955ನೇ ಒಂದು ಆಕ್ಟನ್ನು ಜಾರಿಗೆ ತಂದಿತು. ಸದ್ರಿ ಆಕ್ಟಿನ ಮೇರೆಗೆ ಸುಂಕಕ್ಕೆ ಹೊಣೆಯಾದ ಔಷಧ ವ ಸುಗಂಧ ದ್ರವ್ಯಗಳು ಆಯುರ್ವೇದ ಔಷಧಿಯ ವಿಧಾನದ ಮೇರೆಗೆ ವರ್ಗೀಕರಿಸಲ್ಪಟ್ಟು ನಿಬಂಧಿತ ತಯಾರಿಕೆಗಳೆಂದು ಪರಿಗಣಿಸಲ್ಪಟ್ಟ ಯಾವುದೇ ಕೂಡಿಸಲ್ಪಟ್ಟು ನಯ ಮಾವಳಿಯ ಪರಿಶಿಷ್ಟದಲ್ಲಿ ಸೇರಿಸಲ್ಪಟ್ಟಿದೆ. ಈ ಯಾದಿಯಲ್ಲಿ ಸೇರಿಸಲ್ಪಡದ ಇತರ ತಯಾರಿಕೆಗಳು ನಿರ್ದಿಷ್ಟವಿಲ್ಲದವುಕೆಳೆಂದು ಪರಿಗಣಿಸಲ್ಪಟ್ಟು ಈ ಸುಂಕವು ಅಂಧಪ್ರಮಾಣಕ್ಕೆ ಲಗಾಮಾಗುವುದಿಲ್ಲ. ಈ ಅಕ್ಟು ಜಾರಿಗೆ ಬಂದಾದಿನಂದ ಯಾವದೇ ಪ್ರಾಂತದಲ್ಲಿ ಆ ಮುಂಚೆ ಮಾರಿಯಲ್ಲಿರುವಂಥಾ ಇದೇ ಮಾದರಿಯ ಯಾವದೇ ಕಾನೂನು ರದ್ದಾಗುವುದಲ್ಲದೆ ಈ ಸುಂಕದ ಕೆಸಪ ಬೇರೆ ಯಾವದೇ ಸುಂಕವನ್ನು ಯಾವದೇ ಪ್ರಾಂತೀಯ ಸರಕಾರವು ಜಾರಿಗೆ ತರಲು ಅರ್ಹತೆಯುಳ್ಳದಲ್ಲ.

ಆಯುರ್ವೇದ ಔಷ್ಟೀಯ ರೀತ್ಯಾ ತಯಾರಿಸಲ್ಪಟ್ಟ ಅನೇಕಾವಿಷ್ಟಗಳು ಮಾದಕ ಪಾಪಿಯಗಳಲ್ಲಿ. ಇಂಥ ಸಿಯಗಾರಿಕೆಗಳು ಮೇಲೆ ವಿವರಿಸಿದ ಯಾದಿಯಲ್ಲಿ ಸೇರಿಸಲ್ಪಟ್ಟಿಲ್ಲ ಆದ ಕಾರಣ ಈ ಸುಂಕವು ಅವುಗಳಿಗೆ ಲಗಾಮಾಗುವುದಿಲ್ಲ. ಹೀಗಿರುತ್ತಾ, ಅಬಕಾರಿ ಇಲಾಖಾ ಅಧಿಕಾರಿಗಳು ಆಯುರ್ವೇದ ಔಷಧಗಳ ತಯಾರಕರು, ನರ್ತಕರಿ, ಇ ವೈದ್ಯರ ಮೇಲೆ ನೋಟೀಸುಗಳನ್ನು ಕೂಡಲೇ ಜ್ಯಾರಿಮಾಡಿ ಅಸಾಧಾರಿಷ್ಟಗಳ ಮಾಂಟಿಸುವನ್ನು ಕೂಡಲೇ ನಿಲ್ಲಿಸಬೇಕಾಗಿಯೂ, ತಾ. 1—4—57ರೆಲ್ಲು ಆವರ ವಶವಿದ್ದ ಅಸಾಧಾರಿಷ್ಟಗಳ ಯಾದಿಯನ್ನು ಕೊಡಬೇಕಾಗಿಯೂ ಆಜ್ಞಾಪಿಸಿ ಆ ಮೇಲೆ ಮಧ್ಯಸಾರ ಪ್ರಮಾಣಜೆಪ್ಪೆಂಬುದು ಗೊತ್ತಿರುವ ತಯಾರಿಕೆಗಳ ಮೇಲೆ ಸೆಲನ್ ಒಂಬತ್ತರೂ ೩/–ರಂತೆ ಸುಂಕವನ್ನು ತೆತ್ತಲ್ಲಿಯೂ ಮಧ್ಯಸಾರ ಪ್ರಮಾಣವು ಗೊತ್ತಿಲ್ಲದ ತಯಾರಿಕೆಗಳ ಸೇಂಪಲ್‌ಗಳನ್ನು ಪಡೆಯುವುಗಳ ಪರೀಕ್ಷಣಾ ಪಂತರ ಅವುಗಳಿಗೆ ಸುಂಕವು ಲಗಾಮಾಗುವಲ್ಲಿ ಅಂಥ ಸುಂಕವನ್ನು ತಾನು ತೆರಲು ಬದ್ಧನಾಗುವೆನೆಂದಾಗಿ ಅವರಿಂದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿ ಹಾಗೂಲು ಬಿಡಬಹುದಾಗಿ ಎರಡನೆ ಅಜ್ಞೆಯನ್ನು ಹೊರಡಿಸಿ ಆಯುರ್ವೇದ ಔಷಧ ತಯಾರಿಕರಿಗೆ ಸಮೈದಿರಿಗೆ ತುಂಬಾ ಅನ್ಯಾಯವೂ ಅಸಮಾನವೂ ಆಗಿರುತ್ತದೆ. ಮಾನ್ಯ ಮೈಸೂರು ಸರಕಾರದವರು ಈ ಬಗ್ಗೆ ಸೂಕ್ತ ಕ್ರಮದಿಂದ ಆಯುರ್ವೇದದ ಹಿತರಕ್ಷಣೆ ಮಾಡಬಹುದೆಂದು ಹಾರೈಸಬಹುದೇ?

ಶ್ರೀ ಜನಾರ್ಧನ ನಾಯಕ್, ಕಟೆಪಾಡಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ, ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ನಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಧಿಕಾರಿಗಳು: ಷಾ ಕಂಪೆನಿ, ಮಂಗಳೂರು—1.

ಅರುವತ್ತೊಂಭತ್ತರ ಹೊಸ್ತಿಲಲ್ಲಿ

ವಿಶ್ವವಿಭೂತಿ ನೆಹರೂ

ಏಕೈಕೇ ನಾಪಿ ಹಿಮಶೈಲೇಷು
ಪಾದಾಕ್ರಾಂತಂ ಮಹೀತಲಂ
ಕ್ರಿಯಂತೇ ಭಾಸ್ವರೈರ್ಯೈರ್ವ
ಪರಿಸ್ಫುರಿತ ತೇಜಸಾ॥

ಆಧುನಿಕ ಭಾರತದ ನಿರ್ಮಾತೃ ಜಧವಾ ನವಿನ ಭಾರತೀಯಯುಗದ ಪ್ರವರ್ತಕ ಸುತ್ತು ನಿರಂತರ ಹತ್ತು ವರ್ಷಗಳಿಂದ ಜಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂ ಜೀವನದ ೬೮ ವರ್ಷಗಳನ್ನು ಕಳೆದು ೬೯ನೆ ವರ್ಷದಲ್ಲಿ ಪ್ರವೇಶಿಸುತಿದ್ದಾರೆ. ಇದು ಭಾರತಕ್ಕಾಗಿ ಮಾತ್ರವಲ್ಲ ಸಮಸ್ತ ವಿಶ್ವಕ್ಕೆ ಸಂಪೂರ್ಣ ಮಾನವಸಮಾಜಕ್ಕೆ ಶುಭದಿನವಾಗಿದೆ. ಏಕೆ? "ನೆಹರೂ" ಇಂದು ಒರ್ವ ವ್ಯಕ್ತಿ ಮತ್ತು ಕುಲಸೂಚಕವಾಗಿರುವುದಿಲ್ಲ. ಇದು ಸ್ಥಿರತೆ ಸ್ಥಾಯಿತ್ವಮಯ ಪರಿವರ್ತನ, ನತನ ಜನಕ್ರಾಂತಿ, ಮಾನಸಿಕ ಅಧವಾ ವಿಚಾರಕ್ರಾಂತಿ ಮತ್ತು ವಿಶ್ವಶಾಂತಿಯ ಪ್ರತೀಕವಾಗಿ ಪರಿಣಮಿಸಿದೆ. ಯಾರಾದರೂ ಬೇರೆರಾಷ್ಟ್ರನೇತಾರರು ಇಷ್ಟುವರ್ಷ ಜಗತ್ತಿನ ವೃಷ್ಟಿಯಲ್ಲಿ ಬಹಳ ಎತ್ತರದಲ್ಲಿರುವೆನು? ಭಾರತದ ಈ ಪ್ರಕಾಶಮಯ ಸೂರ್ಯನು ಎಷ್ಟು ಎತ್ತರಕ್ಕೆ ಏರಲಿದೆಯೆಂಬ ಕಲ್ಪನೆಯು ಯಾರಿಗೆ ತಾನೇ ಇವೆ? ಹಿರೋಶಿಮಾ ಕಾಂಡದ ಆಹತದಲ್ಲಿ ಗಾಯಗೊಂಡವರ ಮೇಲೆ ಪ್ರೇಮದ ಮುಲಾಮನ್ನು ಹಚ್ಚಿದ, ಅಣುಬಾಂಬಿನಿಂದ ಧ್ವಂಸ ವಿಪ್ತದ ಪ್ರಧಮ ನಗರಕ್ಕೆ ಶೃದ್ಧಾಂಜಲಿ ಅರ್ಪಿಸಿದ ಈ ಶಾಂತಿವೀರನ ಕೀರ್ತಿಯು ಬೇರೆ ರಾಜಕೀಯಜ್ಞ ಮತ್ತು ಮುತ್ಸದ್ದಿಯರನ್ನು ಹಿಂಕಳ್ಳಿ ಶುಕ್ಲಪಕ್ಷದ ಚಂದ್ರನಿಗೆ ಸದೃಶವಾಗಿ ದೇಶದ ಸೀಮೆಯಮ್ಮ ದಾಟಿ ನಿರಂತರ ಬೆಳೆಯುತ್ತಾ ಹೋಗುತ್ತದೆಂಬುದು ಯಾರ ಕಲ್ಪನೆಯಲ್ಲಿದೆ?

ದ್ವಿತೀಯ ಮಹಾಯುದ್ಧಾನಂತರದ ವಿಶ್ವದ ರಾಜಕೀಯತಿಕ ರಂಗದಲ್ಲಿ ಅನೇಕ ನೇತಾರರು ಒಂದರು, ಕೆಂತು ಶ್ರೀ ನೆಹರೂರಿಗೆ ಸಮಾನರಾದ ಸ್ಥಾಯಿತ್ವವನ್ನು ಯಾರು ತಾನೇ ಪಡೆದರು? ಅನೇಕರ ಆಟ ಮುಗಿದು ಹೋಯಿತು; ಅನೇಕ ವಿಚಾರಗಳು ದಿವಾಳಿಹೋದವು; ಅನೇಕರು ವಿಶ್ವದ ಸಮಸ್ಯೆಗಳೆದುರು ದೂರ ಓಡಿಹೋದರು. ಆದರೆ ಶ್ರೀ ನೆಹರೂ ಇಂದೂ ಹಾರಾಡುತಿದ್ದಾರೆ ಮತ್ತು ಆ ಪಾಯಗಳಿಂದ ಅಡುವುದರಲ್ಲಿ ಮಾನುಷ್ಯವನ್ನು ಗೌರವಿಸುತ್ತಾರೆ. ಅವರಲ್ಲಿ ಯುವಸಮಾನವಾದ ಉತ್ಸಾಹವಿದೆ, ತರುಣ ಸಮಾನವಾದ ತೇಜಸ್ವಿದೆ, ಸಾಹಸವಿದೆ; ಬಾಲಕರಿಗೆ ಸಮಾನವಾದ ಚಂಚಲತೆಯಿದೆ ಮತ್ತು ಕವಿ ಪ್ರತಿಭಾ ಸಮಾನವಾದ ನಿತ್ಯನೂತನತ್ವವಿದೆ. ಇದು ನಮಗೆ ಹೆಮ್ಮೆಯ ವಿಷಯವಲ್ಲವೆ?

ಲಾಹೋರು ಕಾಂಗ್ರೆಸ್ಸಿನಲ್ಲಿ ಮುದಿತನೆಯು ಯುವಕ ಪುತ್ರನನ್ನು ಕಾಂಗ್ರೆಸ್ಸಿನ ಅಧ್ಯಕ್ಷತ್ವಸನಕ್ಕೆ ಸೂಚಿಸುತ್ತ ಹೇಳಿದ್ದರು: "ನೆಹರೂ ವಂಶದ ಹುಡುಗರಲ್ಲಿ ಎಲ್ಲಿ ವರೆಗೆ ಒಂದು ಬಿಂದು ರಕ್ತವಿರುವುದೋ ಅಲ್ಲಿ ವರೆಗೆ ಸ್ವಾತಂತ್ರ್ಯವು ಹೋರಾಟವು ನತೆಯವಿರುವುದಿಲ್ಲ." ಶ್ರೀ ನೆಹರೂ ಇಂದಿಗೂ ಆ ಮಾತನ್ನು ಅಕ್ಷರಶಃ ವಾಲನ ಮಾಡುತ್ತಿದ್ದಾರೆ. ಮತ್ತೀಗಿನ ವೀರಾಸನವನ್ನು ನುತ್ತಸ್ಪು ಅಧಿಕ ಸುಂದರ, ಕಲ್ಪನಾ ಮನೋರಮ, ನಯನಾಧೆರಾಮವಾಗಿಸುವಲ್ಲಿ ಪ್ರಯತ್ನಶೀಲರಾಗಿದ್ದಾರೆ. ತಾನು ಅತ್ಯತ್ಸಕ್ತನೆಂದವರು ಕೇಳಿದ್ದಾರೆ. ಅವರ ಇಚ್ಛೆಯು ಪೂರ್ತಿಯಾಗಿದೆ. ಅವರು ಅದರ್ಶ ಜೀವನವನ್ನು ಬಾಳಿದ್ದಾರೆ. ಅದರವರ ಕಾರ್ಯ ಪೂರ್ಣಗೊಂಡಿಲ್ಲ. ಭಾರತವು ರಾಜನೈತಿಕ ದೃಷ್ಟಿಯಿಂದ ಸ್ವಾಧೀನವಾಗಿದೆ: ಆರ್ಧಿಕ ಮತ್ತು ಮಾನಸಿಕ ದೃಷ್ಟಿಯಿಂಬಾಗಿಲ್ಲ. ಅವರು ಭಾರತದ ಬಡತನ, ಅಶಿಕ್ಷಣ, ಜಡತೆ, ಮೂಢತೆ, ಅಂಧವಿಶ್ವಾಸ ಮತ್ತು ದರ್ಮಾಂಧತೆಯೊಡನೆ ಹೋರಾಡುತ್ತಿದ್ದಾರೆ. ಮತ್ತು ರೋಗ, ಶೋಕ, ಭಯ ಯುಕ್ತವಾಗಿರುವುದನ್ನು ಸಹಿಸದೆ ನೊತನ ಹಾಗೂ ಅಭಿನವ ಭಾರತದ ನಿರ್ಮಾಣವಾಡುವಲ್ಲಿ ತತ್ಪರರಾಗಿದ್ದಾರೆ. ಸ್ವಪ್ನ ದರ್ಶನೆಕರು, ಭಾರತದ ಸಾಹಸಿ ಹಾಗೂ ವೀರಯುವಕರ ಜ್ಞಾನ ಮತ್ತು ವಿಜ್ಞಾನದ ಬಲದಿಂದ ಜಗತ್ತಿನ ನಾಲ್ಕೂ ಮೂಲೆಗಳಿಗೆ ತನ್ನ ಪ್ರಭಾವವನ್ನು ಭಾರತವೆಂದು ಹರಡಿತೋ ಆ ಕಾಲದ ಭಾರತವನ್ನು ಕಾಣಲಿಚ್ಛಿಸುತ್ತಾರೆ. ಅಗಾಧ ಮಹಾಸಾಗರದ ಉತ್ತುಂಗ ತರಂಗಗಳು, ದುರ್ಲಭ್ಯಘಟ್ಟಗಳು, ಗಿರಿರಾಜಹಿಮಾಲಯದ ಉಚ್ಚ ಶಿಖರಗಳು ಭಾರತೀಯ ಯುವಕರ ದೃಢಸಂಕಲ್ಪದೆದುರು ನತವಾಗಿ ಅವರಿಗೆ ಮಾರ್ಗವನ್ನು ಬಿಟ್ಟುಕೊಟ್ಟ ಸಮಯದ ಭಾರತವನ್ನು ಕಾಣಬಯಸುತ್ತಾರೆ. ಅವರು ಸಂಕಟಗಳಲ್ಲಿ ನೆಗೆಯಾಡುವ, ಅಪಾಯವನ್ನು ಆಸ್ವಾದಿಸುವ ಜ್ಞಾನ ವಿಜ್ಞಾನ ಪರಿಶೋಧನೆ ಮತ್ತು ನವೀನ ಶತ್ರುದಮನಸಂಧಾನದಲ್ಲಿ ಸುಲ್ಲಾಸ ಹಾಗೂ ಪ್ರಸನ್ನತೆಯಿಂದ ಜೀವನೋತ್ಸರ್ಗವನ್ನುಂಟುಮಾಡುವ ನವೀನ ಭಾರತದ ನಿರ್ಮಾಣ ಕಾರ್ಯವನ್ನು ಮಾಡುತಿದ್ದಾರೆ ಮತ್ತು ಈ ಮಹಾ ನಿರ್ಮಾಣ ಕಾರ್ಯದಲ್ಲಿ ಸಹಯೋಗ ನೀಡಲು ಅವರು ಯುವಕರಿಗೆ ಕರೆಯಿಯುತಿದ್ದಾರೆ. ೧೯೫೦ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಬೆಂಕಿಯಲ್ಲಿ ಧುಮುಕಲು ಆಹ್ವಾನಿಸಿದ ಸ್ವರ ಮತ್ತೀಗಿನ ಸ್ವರಗಳಲ್ಲಿ ಯಾವ ಅಂತರವಿದೆ? ನೆಹರೂ ಅವರಿವರ್ತನಶೀಲರಾಗಿರುವರೆ? ಮರಿಚಂದ್ರನು ಅವರ ಮಾನಸಸಾಗರವನ್ನು ಉಕ್ಕೇರಿಸುವಂತೆಸಗಲಿಲ್ಲವೆ?

ಇಲ್ಲ, ಅವರ ಮನಸ್ಸು ಸಣ್ಣಸಣ್ಣ ಘಟನೆ ಮತ್ತು ಪರಿವರ್ತನೆಗಳಿಂದ ಪ್ರಭಾವಿತವಾಗುತ್ತದೆ. ಅವರು ಜನ್ಮಜಾತ ಅಧೀರರಾಗಿದ್ದಾರೆ. ಅವರು ವಿದ್ಯುದ್ವೀಗದಿಂದ ನಡೆಯಲೂ ವ್ಯಾಕುಲಪಡುತ್ತಾರೆ. ಭಾರತದ ವೈಜ್ಞಾನಿಕ ಕಾಂಗ್ರೆಸ್ಸನ್ನು ಉದ್ಘಾಟನೆ ಮಾಡುತ್ತ, ಕೇಂಬ್ರಿಜ್ ವಿಶ್ವವಿದ್ಯಾಲಯದ ಈ ಪದವೀಧರರೆಂದಿದ್ದರು—ಭಾರತವು ಈ ಯಾಂತ್ರಿಕ ಹಾಗೂ ವೈಜ್ಞಾನಿಕಯುಗದಲ್ಲಿ ಸಹ ಗೊಬ್ಬರಯುಗದಲ್ಲಿದೆ. ದೇಶವು ಸ್ತಬ್ಧವಾಗಿದೆ. ತೀವ್ರ ವೇಗದಿಂದ ಓಡುವಭಿಲಾಷೆಯು ಎಷ್ಟು ಜನರಲ್ಲಿದೆ? ಎಂದು.

ಅವರ ಕರ್ತೃತ್ವ ಶಕ್ತಿ ಈಗಲೂ ಇಪ್ಪತ್ತು ವರ್ಷದ ಯುವಕರಂತಿದೆ. ಜಾಪಾನಿನ ತಮ್ಮ ಸಂಚಾರದಿಂದ ಹಿಂದಿರುಗುವಾಗ ಅವರೊಬ್ಬ ಪತ್ರಿಕಾಪ್ರತಿನಿಧಿಗೆ ನುಡಿದಿದ್ದರು— "ವಿದೇಶೀ ಸಹಾಯ ಸಿಗಲಿ ಆಧವಾ ಬಿಡಲಿ, ಭಾರತವು ಮುಂದೆ ನಡೆಯುವುದು. ಯಾವ ಶಕ್ತಿಯೂ ಅದನ್ನು ತಡೆಯಲಾರದು. ಅದರ ವಿದೇಶೀಯ ನೀತಿಯಲ್ಲಿ ಯಾವ ಬದಲಾವಣೆಯೂ ಆಗಲಾರದು. ಇದು ಕೇವಲ ಹತ್ತು ವರ್ಷಗಳ ಹಿಂದಿನದಲ್ಲ, ಸಾಮ್ರಾಟ್ ಆಶೋಕನ ಸಮಯದಿಂದಲೂ ನಡೆದು ಬಂದ ದಾರಿ." ಭಾರತೀಯ ಯುವಕರ ಮುಂದಾಳುಗಳೂ, ಅವರ ಪ್ರತೀಕವೂ ಪ್ರತಿಬಿಂಬವೂ ಶ್ರೀ ನೆಹರೂ ಆಗಿದ್ದಾರೆ.

ನೆಹರೂರವರ ಜೀವನವು ಸಶ್ತವರ್ಣಯುಕ್ತವಾಗಿದೆ, ದಾರ್ಶನಿಕವಾಗಿದೆ, ವಿಚಾರಕವಾಗಿದೆ, ಮನಸ್ವಿಯಾಗಿದೆ, ಕರ್ಮಟವಾಗಿದೆ, ಕರ್ಮಯೋಗಿಯಾಗಿದೆ, ಶೀರ್ಷಾಸನಿಯೆಂತಿದೆ. ಆದರೆ ನೆಹರೂರವರೊಬ್ಬ ವ್ಯಾವಹಾರಿಕ ರಾಜನೀತಿಜ್ಞರೂ ಆಗಿದ್ದಾರೆ. ಪೂರ್ಣ ಸ್ವಾತಂತ್ರ್ಯದ ಪತಾಕೆಯನ್ನು ೧೯೩೦ ಜನವರಿ ೧೯ರಂದು ಹಾರಿಸಿದವರು ಭಾರತದ ಪ್ರಧಾನಿಮಂತ್ರಿಯಾದ ನಂತರ ಬ್ರಿಟಿಷ ಕಾಮನ್‌ವೆಲ್ತ್‌ನ ಪ್ರಧಾನಿ ಪರಿಷತ್ತಿನಲ್ಲಿ ಸಮ್ಮಿಳಿತರಾದಾಗ ಹಿಂದಿನ ಕಲ್ಪನೆಯನ್ನಾದರೂ ಮಾಡಬಹುದೆ? ಆದರೆ ಇಂದು ಭಾರತವು ಸಹರಾಷ್ಟ್ರಕುಲದ ಸದಸ್ಯವಾಗಿದೆ. ಯದ್ಯಪಿ ಆದರ ಹೆಸರಿನಲ್ಲದ್ದ "ಬ್ರಿಟಿಷ್" ಶಬ್ದ ಲೋಪವಾಗಿದೆ. ಈಗ ಭಾರತವು ಕಾಮನ್‌ವೆಲ್ತಿನ ಸದಸ್ಯನಾಗಿಲ್ಲದಿದ್ದರೆ, ಪಾಕಿಸ್ತಾನಕ್ಕೆ ಬ್ರಿಟನ್ನು ಸೈನ್ಯ ನೆರವೀಯದಿರುತಿದ್ದಿತೇ ಎಂಬುದು ಒಂದು ಪ್ರಶ್ನೆ. ಅಂತಹ ಸಹಾಯವನ್ನು ತಡೆಯುವ ಅಧಿಕಾರ ಭಾರತ ಕ್ಕೆರುತಿತ್ತೇ? ಎಂಬುದಿನ್ನೊಂದು ಸವಾಲು.

ಅರಬರು ಯಾವ ಮಜಾವ್ಯಕ್ತಿಯನ್ನು ಉಲ್ಲಸಿತ ಹೃದಯದಿಂದ ಅಭಿನಂದಿಸುತ್ತಾರೋ, ಯಾರನ್ನು ವಿಶ್ವಶಾಂತಿಯ ಅಧ್ವರ್ಯುವೆಂದು ತಿಳಿದು ಅರ್ಘ್ಯವನ್ನು ಸಿರ್ಪಿಸುತ್ತಿರುವರೋ ಅಂತಹ ವ್ಯಕ್ತಿ, ಒಬ್ಬ ಭಾರತೀಯನಿದ್ದಾನೆ. ಮತ್ತು ನಮ್ಮ ಸಮಕಾಲೀನನಾಗಿದ್ದಾನೆ. ಈ ಗೌರವದಿಂದ ನಮ್ಮ ಕೀರ್ತಿ ಉನ್ನತವಾಗಿದೆ. ಈ ನವೋನ್ನತ ಮತ್ತು ಕವಿ ಈ ವಿಶ್ವ ಸುರುಷನ ೬೯ನೆಯ ಜನ್ಮದಿನದಲ್ಲಿ ವಿಶದ ವಿಶ್ವದ ಚಿಂತನಧಾರೆಯ, ಪ್ರತೀಕವಾಗಿದ್ದು ಭಕ್ತಿ ಮತ್ತು ವಿನಯಪೂರ್ವಕ ಶ್ರದ್ಧಾವನತವಾಗಿದೆ. ನರ ಜವಾಹರ ನೆಹರೂ ಶತಾಯುವಾಗಲೆಂಬುದೇ ಮಾನವತಾ ವಾದಿಗಳ ಸ್ವಾತಂತ್ರ್ಯಪ್ರೇಮಿಗಳ ಶಾಂತಿಪ್ರಿಯರ ಪರಮಾತ್ಮ ಪ್ರಾರ್ಥನೆ.

[೧ ನೇ ಪುಟ ದಿಂದ]

ದ್ದಾರೆ? ಇವರೇಕೆ ಸರಿಯಾಗಿ ತಲೆಯೆತ್ತಲಿಲ್ಲ ಎಂದರೆ, ಜನತಾಸಹಕಾರ, ಸರಕಾರದ ಗಮನದಿಂದ ದೂರವಾಗಿ ಆಂಗ್ಲ ವೈದ್ಯರ ಹಾವಳಿಯಿಂದ ಎನ್ನಬೆ ಬೇರೆಗೆ ತಿ ಏನುಂಟು?

ಹಿಂದಿನ ಸಾಮ್ಯವಿಧಾನದ ಮಿತವ್ಯಯದ ಮೇಲಾಗಿ ಭಾರತೀಯವೆನಿಸಿದ ಈ ಆಯುರ್ವೇದವನ್ನು ಸ್ವತಂತ್ರ ಭಾರತವು ಉಳಿಸಿಕೊಳ್ಳಬೇಕು. ವೈಜ್ಞಾನಿಕ ಚಿಕಿತ್ಸಾಪದ್ಧತಿಯಲ್ಲಿ ಸಂಶೋಧನೆಗೊಳಿಸುವ ಅಂತಹ ಪದ್ಧತಿಯನ್ನು ಪ್ರಚಾರಮಾಡುವ ಸರಕಾರ, ಈ ಕರ್ತವ್ಯವನ್ನು ಧಕ್ಷತೆಯಿಂದ ನಿರ್ವಹಿಸಬೇಕು ಔಷಧಿಗಳಿಗಾಗಿ ಹೊರಹಾಕುವ ಕೋಟ್ಯಂತರ ಹಣವನ್ನುಳಿಸಬೇಕು. ಪಾಶ್ಚಾತ್ಯ ಪದ್ಧತಿಯನ್ನು ಮಿತಗೊಳಿಸಿ, ಪ್ರತಿಗ್ರಾಮದಲ್ಲೂ ಆಯುರ್ವೇದಾಶ್ರಮವನ್ನು ತೆರೆದು ಗ್ರಾಮಸ್ಥರಿಗೆ ಸುಲಭ ದರದಲ್ಲಿ ಉಪಯುಕ್ತ ಸ್ವದೇಶಿ ಮದ್ದುಗಳು ದೊರೆಯಂತೆ ಮಾಡಬೇಕು. ಅಲ್ಲಲ್ಲಿ ಆಯುರ್ವೇದ ಕಾಲೇಜುಗಳನ್ನು ತೆರೆದು ಅದರಲ್ಲಿ ಹೆಚ್ಚಿನ ಶಿಕ್ಷಣವನ್ನು ಕೊಟ್ಟು ಸಂಶೋಧನೆಗಳು ನಡೆಯುವಂತೆ ಮಾಡಬೇಕು. ಇದೀಗ ಅಲ್ಲಲ್ಲಿ ಕೆಲಮಂದಿ ಆಯುರ್ವೇದ ತಜ್ಞರಿರುತ್ತಾರೆ. ನಾವು ಉದಾಸೀನ ಮಾಡಿ ಇನ್ನೂ ತಡಗೈದರೆ, ಇಂತಹ ತಜ್ಞರ ನಂತರ ನಮ್ಮ ಆಯುರ್ವೇದವು ನಾಮಮಾತ್ರ ಶೇಷವಾಗಿ ಉಳಿದೀತು. ಆದುದರಿಂದ, ಜನತಾಸರಕಾರವು ಈ ವಿಷಯದತ್ತ ಗಮನ ಕೊಡಬೇಕು; ಜನತೆಯು ಸಹ ಸರಕಾರದ ಗಮನವನ್ನಿತ್ತ ಎಳೆಯಬೇಕು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 233/1957

ವಾದಿ. ರಾಮಕೃಷ್ಣ ಜೋಸ, ಪ್ರತಿವಾದಿರು. 1. ಚಿಕ್ಕ 2. ಜನ್ನೆ 3. ಮಲ್ಲ 4. ತಿಮ್ಮ

ಕುಂದಾಪುರ ತಾಲ್ಲು ಗೋಳಿಹೊಳೆ ಗ್ರಾಮದಲ್ಲಿರುವ ಮೈಕೇರಿ ಸುಬ್ಬನ ಮಗ ಜನ್ನ 1 ಚಿಕ್ಕನ ಮಕ್ಕಳು ಮಲ್ಲ 1 ತಿಮ್ಮ 1 ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳೆದ ಜಯ, ಮೆನ್ನಥಸಂವತ್ಸರಗಳ ಗೇಣಿ ನ ಬಡ್ಡಿ ಸಹಾ ಬರಪಾತಿಕೊಳ್ಳುವರೆಗೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 20—11—57ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿಗೆ ಇಟ್ಟಿರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಹಗಲು 11ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪಿಸಿರಿ ಹೊಳ್ಳ ತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ.

N. S. Parameshwaraih
Advocate for plff
Date 5—11—57 Coondapoor,

Edited, Printed & Published by K. H. Shetty, at the Navayuga press, Udipi S. India.

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ VOL. 37

21—11—1957

ಸಂಚಿಕೆ ೧೧ NO. 11

ಜಾಗತಿಕ ಕ್ಷೋಭನಿವಾರಣೆಗೆ

ಶಾಕಾಹಾರವು ಮಹತ್ವದ ಸಾಧನ

ಹೈಡ್ರೋಜನ್ ಬಾಂಬಿನಿಂದ ಪಾರಾಗಲು ಆದನ್ನು ನಿರ್ಮಿಸಿದ ವಿಜ್ಞಾನೋವೃತ್ತಿಯನ್ನು ಕೊರೆಯುವುದೊಂದೇ ಮಾರ್ಗವಾಗಿದೆ. ವಿವಿಧ ರೂಪಗಳಲ್ಲಿ ಕಾಣುವ ಎಲ್ಲ ಜೀವಿಗಳ ಬಗ್ಗೆ ಗೌರವದ ಭಾವನೆಯನ್ನು ಬೆಳೆಸಿಕೊಳ್ಳುವುದೇ ಇದಕ್ಕೆ ತಾರಕವಾಗಿರುವುದು. ಎಲ್ಲ ಜೀವಿಗಳನ್ನು ಗೌರವ ಭಾವನೆಯಿಂದ ಕಾಣುವ ಸ್ರವೃತ್ತಿಯು ಶಾಕಾಹಾರಿ ಆಹಾರದ ವೈಶಿಷ್ಟ್ಯವಾಗಿದೆ. ಜಗತ್ತಿನಲ್ಲಿ ಹಿಂಸೆಯು ನಾಮಾವಶೇಷವಾಗಬೇಕಾದರೆ, ಇದು ಅಗತ್ಯ.ಆಹಿಂಸೆ ಅಥವಾ ಬಾಳು ಮತ್ತು ಬಾಳಗೊಡು ಎಂಬ ಘೋರಣೆಯು ಮಾನವನ ಅನೇಕ ಸಮಸ್ಯೆಗಳನ್ನು ಮತ್ತು ಅತಂಕಗಳನ್ನು ಪರಿಹರಿಸುವುದರಲ್ಲಿ ಸಂದೇಹವಿಲ್ಲ

ಪರರ ಸಲುವಾಗಿ ತನ್ನ ಹಿತ, ಸುಖ, ಸುಹತ್ವಾಕಾಂಕ್ಷೆಗಳನ್ನು ತ್ಯಜಿಸುವುದೇ ಅಹಿಂಸೆಯ ವ್ಯಕ್ತಿಸ್ವರೂಪವಾಗಿದೆ. ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ತನ್ನ ಸುಖವನ್ನು ಸಾಧಿಸಿಕೊಳ್ಳಲು ಇತರರ ಪ್ರಯೋಜನವನ್ನು ಪಡೆಯುತ್ತದು ಇದಕ್ಕೆ ವ್ಯತಿರಿಕ್ತವಾದುದಾಗಿರುವುದು.

ತಾನು ಪರಿಪೂರ್ಣಾವಸ್ಥೆಗೆ ಬಂದು ನುಟ್ಟಿದಿರುವ ಪ್ರಾಣಿ, ಉಳಿದ ಪ್ರಾಣಿಗಳು ತನ್ನ ಆಸೆಆಕಾಂಕ್ಷೆಗಳನ್ನು ತೃಪ್ತಿಪಡಿಸಿಕೊಳ್ಳುವ ಬಗ್ಗೆ ಇರುವುವು ಎಂಬ ಭಾವನೆಯೆ ಅನೇಕ ಶತಮಾನಗಳಿಂದ ಮಾನವನಲ್ಲಿ ಬೆಳೆದು ಬಂದಿದೆ. ಈ ತತ್ವವು ರೂಢಿವಾಗಿರುವುದರಿಂದ ಮನುಷ್ಯನು ತನ್ನ ಆಹಾರಕ್ಕಾಗಿ ತನ್ನ ದೇಹವನ್ನು ಅಲಂಕರಿಸಿಕೊಳ್ಳಲು ಇಲ್ಲವೆ ಮನೋರಂಜನೆಗಾಗಿ ಪ್ರಾಣಿಗಳ ವಧೆಯನ್ನು ಮಾಡುತ್ತ ಬಂದಿರುವನು

ಬೇಟೆಯನ್ನಾಡಿ ತನ್ನ ಜೀವನವನ್ನು ಸಾಗಿಸಿಕೊಂಡಿರುತಿದ್ದ ಕಾಲದಲ್ಲಿದ್ದ ಮನುಷ್ಯನು ಕಾಡುಮನುಷ್ಯನೆಂದು ಹೇಳುತ್ತಾರೆ. ಆ ಕಾಡುಸ್ಥಿತಿಯಲ್ಲಿದ್ದ ಮನುಷ್ಯನು ತನಗೆ ಆಹಾರಕ್ಕಾಗಿ ಅವಶ್ಯವಿದ್ದ ಮಾಂಸವನ್ನು ಪಡೆಯಲು ಬೇಟೆಯಾಡಿ ಸಿಕ್ಕಿಸಿಕ್ಕಿದ ಪ್ರಾಣಿಯನ್ನು ಹೊಡೆದು ಹಸಿವು ಹಿಂಗಿಸಿಕೊಳ್ಳುತ್ತಿದ್ದನು ಈಗ ಅತನು ಆ ಪರಿಸ್ಥಿತಿಯಿಂದ ಮುಕ್ತನಾಗಿ ಸುಧಾರಿಸಿರುವನು. ಅವನು ಸುಧಾರಿಸಿರುವಂತೆ ಅವರ ಅಭಿರುಚಿಗಳಲ್ಲಿಯೂ ಅನೇಕ ಮಾರ್ಪಾಟುಗಳಾಗಿವೆ ತನ್ನ ಆಹಾರಕ್ಕಾಗಿ ಅನೇಕ ಪ್ರಾಣಿಗಳನ್ನು ಪುಷ್ಟವಾಗುವಂತೆ ಮೇಯಿಸಿ ಅವನ್ನು ಕೊಲ್ಲುತ್ತಾನೆ. ಔಷಧಗಳಿಗಾಗಿ ಪ್ರಾಣಿಗಳ ವಧೆಯನ್ನು ಮಾಡುತ್ತಾನೆ ಮಾನವನು ಸುಧಾರಿಸಿದಂತೆ ಪ್ರಾಣಿಗಳ ಗೌರವ ತಗ್ಗುತ್ತ ಬರುತ್ತಿದೆ ಬೇರೆ ಪ್ರಾಣಿಗಳಿಗಿಂತ ಬಲಾಢ್ಯನೆಂದು ಮನುಷ್ಯನು ಆ ಪ್ರಾಣಿಗಳೆನ್ನು ತನ್ನ ಆಹಾರ ವೃತ್ತಿ ಕರ ಉದ್ದೇಶಗಳಿಗಾಗಿ ವಧಿಸುವುದಾದರೆ ಸ್ವಾಭಾವಿಕವಾಗಿಯೆ ಬಲಾಢ್ಯವಾದ ಒಂದು ಜನಾಂಗ ಇಲ್ಲವೇ ಗಾಸ್ಟ್ಲಿಕ ದುರ್ಬಲ ಜನಾಂಗ ಅಥವಾ ರಾಷ್ಟ್ರದ ಶೋಷಣೆ ನಡೆಯುವಲ್ಲಿ ಅಥವಾ ಅದನ್ನು ಸಮೂಲ ನಾಶಪಡಿಸುವುದರಲ್ಲಿ ಏನೂ ತಪ್ಪು ಇಲ್ಲ ಎಂಬ ಮನೋಭಾವವು ಬಳದು ಬರುವುದು,

ಭಾರತದಲ್ಲಿ ಶಾಕಾಹಾರಿ ವೃತ್ತಿಯು ಭಾರತೀಯರ ಧಾರ್ಮಿಕ ಅಂಶವಾಗಿ ಬೆಳೆದು ಬಂದಿರುವುದರಿಂದ ಮನುಷ್ಯನ ಆಹಾರವು ಅವನ ವಿಚಾರ ಸರಣಿಯ ಮೇಲೆ ಪ್ರಭಾವ ಬೀರುವುದರಿಂದ ಆ ಧ್ಯಾತ್ಮಿಕ ಪ್ರಗತಿಗೆ ಸಾತ್ವಿಕಾಹಾರವು ಅಗತ್ಯವೆಂಬ ತತ್ವವು ಭಾರತದಲ್ಲಿ ಮನ್ನಿಸಲ್ಪಟ್ಟಿದೆ ಅಂತೆಯೇ ತಲೆತಲಾಂತರಗಳಂದ ಕೇವಲ ಶಾಕಾಹಾರಿಗಳಾದ ಜನರು ಇಂದು ಭಾರತದಲ್ಲಿರುವರು.

ಜೀವಿಗಳಿಗೆ ಮಾತ್ರವಲ್ಲ, ಪ್ರಕೃತಿಗೆ ಸಹ ಧಕ್ಕೆ ತಗಲದಂತೆ ನೋಡಿಕೊಳ್ಳಬೇಕೆಂಬ ಅಹಿಂಸಾತತ್ವದ ತಳಹದಿಯ ಮೇಲೆ ಭಾರತದಲ್ಲಿ ದಾರ್ಮಿಕ ನಿಯಮಾವಳಿಗಳು ನಿಂತಿವೆ. ನಮ್ಮ ಶಾಸ್ತ್ರಗಳಲ್ಲಿ ಎಲ್ಲ ಜೀವಿಗಳ ಕಲ್ಯಾಣ ಸಾಧಿಸುವ ಉದಾತ್ತ ತತ್ವವನ್ನು ಮಾನವನ ಉತ್ಕೃಷ್ಟದ ತಳಹದಿ ಎಂದು ಹೇಳಲಾಗಿದೆ. ಅಂತೆಯೇ ಮನುಷ್ಯನ ವೈಯಕ್ತಿಕ ಜೀವನ, ಸಾರ್ವಜನಿಕ ಜೀವನ ಹೀಗೆ ಇತರ ಕಡೆಯಲ್ಲಿರುವಂತೆ ಭೇದ ಭಾವಕ್ಕೆ ಭಾರತದಲ್ಲಿ ಅಸ್ಪದವಿರುವುದಿಲ್ಲ.

ಈ ತತ್ವದಂತೆ ಇಡೀ ದೇಶದ ಜನರು ಜೀವನಸಾಗಿಸುತ್ತಿರುವರೆಂದು ಹೇಳುವ ಸಾಹಸವನ್ನು ನಾನು ಮಾಡುತ್ತಿಲ್ಲ ಆದರೂ ಈ ತತ್ವಗಳ ಪ್ರಧಾನವು ಅನೇಕ ಕಷ್ಟ ಪರಂಪರೆಗಳನ್ನು ನಮ್ಮ ದೇಶದ ಜನರು ಧೈರ್ಯದಿಂದ ಎದುರಿಸಲು ಸಮರ್ಥರಾಗುವಂತೆ ನೂಡಿದೆ ಈ ತತ್ವವನ್ನು ನಾವು ವಿಶ್ಲೇಷಣೆ ಮಾಡಿದರೆ ಅಹಿಂಸೆಯು ಇದರ ತಳಹದಿಎಂಬ ಮಾತುಸ್ಪಷ್ಟವಾಗುವುದು ಅಹಿಂಸೆಯು ಸಕ್ರಿಯ ರೂಪವು ಭೂತದಯೆಯೆಯಾಗಿದ್ದರೆ ನಿಸ್ಕ್ರಿಯ ರೂಪವು ಸಹಿಷ್ಣುತೆಯಾಗಿದೆ ಜೀರೆಯವರಿಗೆ ಕಲ್ಯಾಣ ಮಾಡುವುದ ತವ್ಯ ಕರ್ತವ್ಯವೆಂದು ನಾವು ಒಪ್ಪುವಂತೆಯೇ ಎರಡನೆಯವರಿಗೆ ತವರ ವಿಚಾರದಂತೆ ಜೀವನ ಸಾಗಿಸಲು ಅವರಿಗೂ ವಿಚಾರ ವಿಚಾರ ಸ್ವಾತಂತ್ರ್ಯವಿರಬೇಕೆಂದು ಒಪ್ಪುವೆವು ಸಹಿಷ್ಣುತೆಯು ನಮ್ಮ ಧರ್ಮದ ವೈಶಿಷ್ಟ್ಯವಾಗಿರುವುದು.

ಸಹಿಷ್ಣುತೆಯು ಜನರ ಜೀವನದಲ್ಲಿ ಪ್ರಭಾವಿಯಾಗಿದ್ದುದರಿಂದಲೇ ಬೌದ್ಧ, ಜೈನ ಧರ್ಮಗಳು ಬೆಳೆದು ಬಂದುವು. ಆನಂತರ ಪಾರ್ಸಿ ಧರ್ಮ, ಇಸ್ಲಾಂ ಧರ್ಮ, ಕ್ರೈಸ್ತ ಧರ್ಮಗಳು ಭಾರತದಲ್ಲಿ ಕಾಲೂರಿ ನಿಲ್ಲಿಸಲಿವುದು ಸಾಧ್ಯವಾಯಿತು. ಸಹಿಷ್ಣುತೆಯ ಪ್ರಭಾವದಿಂದ ಭಿನ್ನಭಿನ್ನ ಧರ್ಮೀಯರು ಒಂದೆಡೆಯಲ್ಲಿ ಬಾಳಿಬದುಕುವುದು ಸಾಧ್ಯವಾಯಿಕಲ್ಲದೆ, ಭಾರತೀಯ ಸಂಸ್ಕೃತಿಯು ಬೇರೆ ಧರ್ಮದ ಅಂಶಗಳನ್ನು ಅರಗಿಸಿಕೊಂಡು ಬೆಳೆದು ಒಂದಿದೆ

ಆಹಾರದ ವಿಷಯದಲ್ಲಿ ಭಾರತೀಯರ ವಿಚಾರಗಳು ವೈಶಿಷ್ಟ್ಯಪೂರ್ಣವಾಗಿವೆ. ಶಾಕಾಹಾರಿಗಳೆಲ್ಲದವರು ಸಹ ವಿಶಿಷ್ಟ ಪ್ರದೇಶಗಳ ಮಾಂಸವನ್ನೇ ತಿನ್ನಬೇಕು, ವರ್ಷದಲ್ಲಿ ಕೆಲವೊಂದು ದಿನಗಳಲ್ಲಿ ಮಾತ್ರ ಮಾಂಸಾಹಾರ ಮಾಡಬಹುದು-ಎಂಬ ವಿಚಾರಗಳು ಜನತೆಯಲ್ಲಿವೆ. ಇದರಿಂದ ಮಾಂಸಾಹಾರಿಗಳು ಕೂಡಾ ಮಿತ ಮಾಂಸಾಹಾರಿಗಳಾಗಿರುವರೆಂಬುದು ಗಮನೀಯವಾದ ಸಂಗತಿ

ಭಾರತದ ಜನಸಂಖ್ಯೆಯು ದೊಡ್ಡದು ಇದು ವರ್ಷಕ್ಕೆ ೫೦ ಲಕ್ಷದಷ್ಟು ಬೆಳೆಯುತ್ತಲಿದೆ ಸಾಗುವಳಿಯ ಬೀಮಿಯು ಮರ್ಯಾದಿತವಿದ್ದು ಆದೆಂದಿಗೂ ಹೆಚ್ಚುವ ಸಂಭವವಿರುವುದಿಲ್ಲ ಹೀಗಿರುವಾಗ ಜನರಿಗೆ ಬೇಕಾದ ಆಹಾರವನ್ನು ಒದಗಿಸುವಲ್ಲಿ ಶಾಕಾಹಾರವೇ ಸಾಧುವೆಂಬ ಮಾತು ಸ್ಪಷ್ಟವಾಗಿರುವುದು ಮಾಂಸಾಹಾರವನ್ನು ಒದಗಿಸುವುದಾದರೆ ಒಬ್ಬನಿಗೆ ಎರಡೂವರೆ ಎಕರೆ ಬೂಮಿಯು ಬೇಕಾಗುವುದೆಂದೂ ಸಸ್ಯಾಹಾರವನ್ನು ಒದಗಿಸಲು ಕೇವಲ ಒಂದೂನರೆ ಎಕರೆ ಭೂಮಿಯು ಸಾಕೆಂದೂ ಅಮೇರಿಕೆಯ ಒಬ್ಬ ತಜ್ಞನು ವರದಿಮಾಡಿದ್ದಾನೆ ಇದನ್ನು ನೋಡಿದರೆ ಭಾರತಕ್ಕೆ ಶಾಕಾಹಾರವೇ ಯೋಗ್ಯವೆಂದು ಧಾರಾಳವಾಗಿ ಹೇಳಬಹುದು.

ಶಾಕಾಹಾರಿ ಕಾಂಗ್ರೆಸ್ಸು ಈ ನೆಮ್ಮ ಭಾರತದಲ್ಲಿ ಸೇರಿರುವುದರಿಂದ ಪಾಶ್ಚಾತ್ಯ ರಾಷ್ಟ್ರಗಳನ್ನು ಅಂಧಶ್ರದ್ಧೆಯಿಂದ ಅನುಸರಿಸುವಂತಹ ಭಾರತೀಯರಿಗೂ ತಾವು ಸಾಗಿರುವುದೆತ್ತ ಎಂದು ವಿಚಾರಮಾಡಲು ಅನುಕೂಲ ವಾತಾವರಣವುಂಟಾಗುವುದೆಂದು ಶಾರೈಸುತ್ತೇನೆ

(ಜಾಗತಿಕ ಶಾಕಾಹಾರಿ ಕಾಂಗ್ರೆಸ್ಸಿನಲ್ಲಿ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಮಾಡಿದ ಭಾಷಣದ ಸಾರ.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರದ ಸಣ್ಣ ಕಥೆ-

ಅನಾಹುತದ ಸುಳಿಯಿಂದ-

ಶ್ರೀ. ಎಸ್. ಗೋಪೀಚಂದರಾವ್, ವಿದ್ವಾನ್.

ಆದೊಂದು ಕಾಲರಾತ್ರಿಯಾಗಿತ್ತು. ಅವನ ಸುತ್ತಲೂ ನೀರು ಆವರಿಸಿತ್ತು. ಅವನೊಂದು ಚೂಲೆಯಲ್ಲಿ ಕುಳಿತು ಕುಸಿಗುಬೀಳುತ್ತಿರುವ ಮನೆಗಳ ಸದ್ದನ್ನು ಆಲಿಸುತ್ತಲಿದ್ದನು. ಹೃದಯ ಇತರ ಜನರಂತೆ ತಾನು ಮನೆಯನ್ನು ತೆರವುಮಾಡದಿದ್ದುದಕ್ಕಾಗಿ ಅವನೆಷ್ಟು ಪಶ್ಚಾತ್ತಾಪ ಪಟ್ಟನು! ಇವನಿಲ್ಲಿ ನೀರಿನಲ್ಲಿ ಮುಳುಗೇಳುತಿದ್ದಾಗ, ಅವರು ನದಿಯಾಚೆ ಸುಕ್ಷೇಮವಾಗಿದ್ದರು.

ಅವನು ತನ್ನ ಮನೆಯನ್ನುಳಿಸಿಕೊಳ್ಳುವುದಕ್ಕಾಗಿ ಹಿಂದುಳಿದಿದ್ದನು. ಆ ನೊತನ ಗೃಹವನ್ನು ಅವನು ಆ ವರ್ಷವಷ್ಟೇ ಕಟ್ಟಿಸಿದ್ದನು. ಇನ್ನೊಂದು ಮನೆಯನ್ನು ಕಟ್ಟಿಸುವಷ್ಟು ಶ್ರೀಮಂತನಾಗಿದ್ದಿರಲಿಲ್ಲವಾತ. ತಾನು ಶ್ವತಃ ನೈಮುರಿದು, ದುಡಿದು ದರಿಂದುಂಟಾದ ಎಲುಬುಗಳ ಬೇನೆಯು ಇನ್ನೂ ಸಂಪೂರ್ಣವಾಗಿ ಮರೆಯಾಗಿರಲಿಲ್ಲ. ಆದರೆ, ಅವನು ತನ್ನ ಮನೆಯನ್ನು ರಕ್ಷಿಸಲು ಸಮರ್ಥನಾಗಿರಲಿಲ್ಲ. ಈಗ ಕೇವಲ ಮನೆಮಾತ್ರವಲ್ಲ, ಅವನ ಜೀವ ಪಣಾಗೂ ಅವನ ಪ್ರೀತಿಯ ನವನ ವ್ಯಾಣ ಎರಡೂ ಅಪಾಯದ ಘಟ್ಟದಲ್ಲಿದ್ದುವು.

ಆ ಒಡ ದನವು ಮೊಣಗಂಟಿನ ನೀರಿನಲ್ಲಿ ನಿಂತುಕೊಂಡಿತ್ತು. ಎಂತಹ ತಾಳ್ಮೆ ಏನು ಧೈರ್ಯ. ಇಂತಹ ಗಂಡಾಂತರ ಮಯ ಪರಿಸ್ಥಿತಿಗೆ ಆ ದನವನ್ನು ತಂದಿರಿಸಿದ ತನ್ನ ಮಾಜಾಪರಾಧಕ್ಕೆ ಆತನು ನೊಂದನು. ಅದು ತನ್ನ ಧೈರ್ಯಮೆಂದೆಲ್ಲೇ ಆಲ್ಲಿ ಧೈರ್ಯದಿಂದ ನಿಂತಿರಲಾರದು! ಈ ಆಪಾಯದಿಂದ ಪಾರಾಹೋಗಲು ಅದು ವ್ಯಾಯ: ಬಯಸಿರಬಹುದು! ಆದರೆ, ಬಿಗಿದ ಹಗ್ಗದ ತಡೆಯಿರುವಾಗ ಅದೇನು ತಾನೇ ಮಾಡೀತು! ಈ ಸ್ಥಿತಿಯನ್ನು ಕಂಡು ಆತನಿಗೆ ಒಮ್ಮೆಲೇ ಸಿಟ್ಟು ಬಂತು. ಆದವನಿಗೆ ತನ್ನಿಂದಾಗಿ ಒಂದು ದನವು ಕೊಲ್ಲಲ್ಪಡುವುದೆಂಬ ತಿಳಿವನ್ನುಂಟುಮಾಡಿತು. ಅವನು ತನ್ನ ಅಮಾನುಷಕಾರ್ಯಕ್ಕಾಗಿ ಮರುಗತೊಡಗಿದನು. ಅದನ್ನು ರಕ್ಷಿಸುವ ಸಲುವಾಗಿ ಏನಾದರೂ ಮಾಡಬೇಕು; ಆದುದರಿಂದಲೇ ವಂಜಾನೆಯಾಗುವುದನ್ನೇ ಅತಕಾಯುತಿದ್ದನು.

ಮುಂಜಾನೆಯ ಮುಂದಣ್ಯವು ಕಾಣಿಸಿತು. ಅಲ್ಲಲ್ಲಿ ನೀರಿಂದೆದ್ದುತೋರುವ ಕೆಲವು ವಸ್ತುಗಳ ತುದಿಗಳು ಮಾತ್ರ ಕಳಿಯಲ್ಲಿ ಕಂಡುಬರುತಿತ್ತು. ಉಳಿದುದೆಲ್ಲವೂ ನೀರಿನಿಂದಾವೃತವಾಗಿ ಹೋಗಿತ್ತು. ಈ ಅಪಾಯಕಾರಿ ದೃಶ್ಯದಿಂದಾತನು ಬಹಳ ಬೇಸತ್ತನು. ಅವನ ನಾಲಗೆ ಒಣಗಿಹೋಯಿತು. ಎದೆಗುಂಡಿಗೆಯು ತನ್ನ ಬಡಿದಾಟವನ್ನು ನಿಲ್ಲಿಸಿದಂತೆ ಭಾಸವಾಯಿತು. ತಾನೇನು ಪ್ರಯತ್ನ ಗೈದರೂ ಅದು ನೀರಮೇಲಣ ಹೋಮ ಎನ್ನುವ ಭಾವನೆ ಅವನಲ್ಲಿ ನೆಲೆಯೂರಿತು. ಈ ವಿಸ್ತಾರವಾಗಿ ಹರಡಿದ ನೀರಿನಿಂದ ಪಾರಾಗುವ ಉಪಾಯವಾದರೂ ಯಾವುದು? ಒಂದು ವೇಳೆ ಎಂತಾದರೂ ಹೋಯಿತೆಂದು ಭಾವಿಸಿದರೂ ನದಿಗೆ ಹಾಕಿದ ಸೇತುವೆಯ ಗತಿಯೇನಾಗಿದೆಯೋ ಯಾರಿಗೆ ಗೊತ್ತು? ಕಾಯ್ದು ಆದು ಇವ್ಯರಲ್ಲಿಯೇ ನೀರ ರಭಸದಿಂದ ಕೊಚ್ಚಿಹೋಗಿದ್ದರೂ ಇರಬಹುದು.

ದನವು ಸಕ ಹೆಜ್ಜೆಚ್ಚಿರುವ ಉದ್ವೇಗ ದೊಡನೆ ಮರುಭೂಮಿಸದೃಶವಾದ ಆ ವೈಶ್ಯವನ್ನು ನೋಡುತಿತ್ತು. ಆಮ ಆರ್ತನಾನವೊಂದನ್ನು ಮಾಡಿ, ತನ್ನ ಕೊಗನ್ನು ಕೇಳಲು ತಾನೇ ಕಿವಿಗೆಟ್ಟಿಗೆ ಮಾಡಿಕೊಂಡಿತು! ಅದು ಬಯವಿಸ್ವಲವಾಗಿ ಚಡಪಡಿಸತೊಡಗಿತು. ಅವನ್ನು ತನ್ನ ಮುಸುಡಿನಿಂದ ಮೆಲ್ಲಗೆ ಕರೆಯತೊಡಗಿತು. ಅದರ ಕರುಣಾಪೂರ್ಣ ದೃಷ್ಟಿ ಬಾಗೂ ಅಂಗಚಲನೆಯು "ನನಗೆ ಹೊರಕೋಗಲು ಯಾವ ಉಪಾಯವೂ ಇಲ್ಲವೆ ಎಂದು ಕೇಳುವಂತಿತ್ತು.

ಅವನು ದನದತ್ತ ಕ್ರುದ್ಧನಾಗಿ ತಿರುಗಿದನು. ಆದರೆ, ಇವರ ಮಸುಡಿನಲ್ಲಿ ಪ್ರಕಾಶಮಾನವಾದ ಆ ಎರಡು ಕರಿಯ ಕಣ್ಣುಗಳನ್ನು ಕಂಡೊಡನೆಯೇ ಅವನ ಕೋಪವು ಕರಗಿ ನೀರಾಯಿತು. ಪುನಃ ತಾನು ಅನಾಥಿಯೆಂಬ ಮನಸರಿಕೆಯಾಯಿತು, ಪುನಃ ತನ್ನ ಕ್ರೂರಾಚರಣೆಗಾಗಿ ತನ್ನ ಮೇಲೆ ತಾನೇ ಕ್ಷುಬ್ಧಗೊಂಡನು.

"ಇದರಿಂದೆಲ್ಲಾ ಏನು? ಒಂದಲ್ಲದಿದ್ದರೊಮು ವಿಧಾನ" ಅವನು ಗಟ್ಟಿಯಾಗಿ ಕೂಗಿಕೊಂಡ ಆ ಮೇಲೆ ಅವನು ತನ್ನ ಬಟ್ಟೆಗಳನ್ನೆಲ್ಲಾ ಕಳೆಜತೆಗೊಡಿದ. ಅವೆಲ್ಲವನ್ನೂ ಒಂದು ಗಂಟನ್ನಾಗಿ ಕಟ್ಟಿಕೊಂಡು, ತನ್ನ ತಲೆಯಮೇಲೆ ಹೊತ್ತುಕೊಂಡ ದನದ ಕುತ್ತಿಗೆಯ ಸುತ್ತ ಒಂದು ಹಗ್ಗವನ್ನು ಕಟ್ಟಿ, ಹೊರಹೊರಟ.

ವೇಗಯುಕ್ತವಾದ ನದೀಪ್ರವಾಹ ಆವರನ್ನು ಪದೇ ಪದೇ ಅವರ ದಾರಿಯಿಂದ ಜಾರಿದೆ ತಳ್ಳುತಿತ್ತು. ವಾದದಡಿಯು ನೆಲವು ಸಹ ಅಪಾಯಕಾರಿಯಾಗಿ ತಪ್ಪಿಸಿಕೊಳ್ಳುತಿತ್ತು. ಅವರು ನೀರಾಪರಿಯ ಕಾಲುವೆಯಲ್ಲಿ ನಡೆಯುತಿದ್ದಾರೆಯೇ, ಬಾಯಿಲ್ಲೆಯೇ, ಹಳ್ಳದಲ್ಲಿಯೇ ಅಥವಾ ಹೊದರಿನಲ್ಲೇಯೇ ಎಂದು ತಿಳಿದುಕೊಳ್ಳುವ ಯಾವ ಮಾರ್ಗವೂ ಇದ್ದಿರಲಿಲ್ಲ. ಕೆಲವೊಮ್ಮೆ ತಾವು ಮುಳುಗಿಹೋಗದಂತೆ ಒಮ್ಮೆ ಬಂದ ದಾರಿಯಲ್ಲಿಯೇ ಹಿಂದೆ ಸರಿಯಬೇಕಾಗಿ ಬರುತಿತ್ತು. ಈ ಸಾಹಸವು ನಿಷ್ಪ್ರಯೋಜಕವೆಂದು ಕಂಡುಬಂತು ಆದರೂ ಧೈರ್ಯಗೆಡದೆ ಅವರು ಮುಂದುವರಿದರು.

ಮಧ್ಯಾಹ್ನದ ಹೊತ್ತಿನಲ್ಲಿ ತಮ್ಮನ್ನು ಅಪಾಯದಿಂದ ದೂರವಿರಿಬಲ್ಲುದಾದ ಸಂಕಕ್ಕೆರ ನ ದೂರದಲ್ಲಿ ಅರ್ಧದವಷ್ಟನ್ನು ಅವರು ಆಕ್ರಮಿಸಿದರು. ಅವರು ತೀವ್ರಾಯಾಸಕ್ಕೆ ಗುರಿಯಾದುದರಿಂದ ಒಂದೊಂದು ಹೆಜ್ಜೆಯೂ ಭಾರವೆನಿಸಿತ್ತು ಅವನ ಕಂದಿಗಾಲು ನೋಯತೊಡಗಿತು; ಮನಸ್ಸು ಪಂಕಾಯಿತು. ಅವರು ಹೆಜ್ಜೆಯಿಡುತಿದ್ದ ಅವರನ್ನು ಕಾಲುತಪ್ಪಿಸುತಿದ್ದ ಆ ಕೊಳಕು ಕೆಸರು ನೀರು ಅವರಿಗೆ ಬೇಸರವನ್ನು ತಂದಿತ್ತಿತ್ತು. ನೀರಿನಲ್ಲಿ ನಿಲ್ಲುವುದಕ್ಕೆ, ನಡೆಯುವುದಕ್ಕಿಂತ ಹೆಚ್ಚು ಶಕ್ತಿ ಬೇಕಾಗುತಿತ್ತು ಆದುದರಿಂದ, ಆರಾಮ ತೆಗೆದುಕೊಳ್ಳುವುದು ಸಹ ಅಸಾಧ್ಯಕರವಾದ ಮಾತಾಗಿತ್ತು. ಅಲ್ಲದೆ, ಆದಷ್ಟು ಶೀಘ್ರವಾಗಿ ಅವರು ಸಂಕವನ್ನು ಸೇರದಿದ್ದರೆ, ಆದುನಹ ನೆರೆಯನೀರಿನಲ್ಲಿ ತೇಲಿ ಹೋಗುವ ಸಂಭವವಿತ್ತು. ಆದುದರಿಂದ ಅದು ಅದೃಷ್ಟ ಮತ್ತು ಸಮಯಕ್ಕೆ ಸಂಬಂಧಿಸಿದ ವಿಷಯವಾಗಿತ್ತು.

ನೀರು ಸ್ವಲ್ಪ ಕಡಿಮೆಯಿದ್ದೊಂದು ಕಡೆಯಲ್ಲಿ ಅವನು ತನ್ನ ಮುಂಗಾಲುಗಳಿಗೆ ವಿರಾಮವನ್ನೀಯಲು ನಿಂತುಕೊಂಡನು. "ನೀನು ನಿಲ್ಲಲೇಬಾರದು."—ಅವನು ತನ್ನನ್ನೇ ಎಚ್ಚರಿಸಿಕೊಂಡ. ಆದರೆ, ಅವನಿಗೆ ಮುಂದುವರಿಯುವುದು ಸಾಧ್ಯವಾಗಿರಲಿಲ್ಲ. ಸಂಕದ ಅಸ್ತಿತ್ವದಲ್ಲಿ ಆತನಿಟ್ಟ ಒಂದು ವಿಶ್ವಾಸವು ಕೇವಲ ಜೂಜಾಟದಂತಿತ್ತು; ಇಷ್ಟಿದ್ದರೂ ಅವನಿಗೆ ನಡೆಯಲಾಗಲಿಲ್ಲ. ಒಂದು ವಿಚಿತ್ರವೆನಿಸಿದ ಭಾವನಾಲೋಕದಲ್ಲಾತ ವಿಹರಿಸುತಿದ್ದ. ಅವನು ಬೆಚ್ಚಗೆಯಲ್ಲಿದ್ದಂತೆಯೂ, ಮೃದು ಹಾಸಿಗೆಯಿಂದವಷು ಜಾರಿಬೀಳುವಂತೆಯೂ ಕನಸು ಕಂಡಂತಾಯಿತು. ಅವನು ಆಳಆಳಕ್ಕೆ ಕುಸಿಯುತ್ತಿರುವಂತೆ ಭಾಸವಾಯಿತು.

ಅವನ ಮುಖಮಟ್ಟದ ನರೆಗೆ ನೀರೇರುವಾಗ ಅವನು ಎಚ್ಚರಗೊಂಡು ಕೂಗಿಬಿಟ್ಟ. ಮತ್ತೂ ಕೊಳಕಾದ ನೀರನ್ನಾತ ತನ್ನ ಬಾಯೊಳಗಿಟ್ಟುಕೊಂಡಿದ್ದ. ಆದೇ ಅವನಿಗೇನು ಸಂಭವಿಸಿತೆಂಬುದನ್ನು ತಿಳಿಸಿತಿತ್ತು. ಅವನು ಹೆದರಿ ಕಂಗಾಲಾದ. ಇನ್ನು ಅಲ್ಲುಳಿದರೆ, ಅಪಾಯವು ಮತ್ತೂ ಹೆಚ್ಚುವುದೆಂದು ತಿಳಿದು ಅವನು ಮುಂದುವರಿಯತೊಡಗಿದ.

ದೂರದಲ್ಲಿ ಸಂಕವನ್ನು ಕಾಣುತಿದ್ದಂತೆಯೇ ಅವನ ಹೃದಯ ಸಂತೋಷದಿಂದ ನಲಿದಾಡತೊಡಗಿತು. ಅವನ ಹೆಜ್ಜೆಗಳು ವೇಗವಾಗತೊಡಗಿದುವು. ಅವನು ಹೋಗುತ್ತಿರುವಂತೆ ಪ್ರವಾಹವು ಬಲವತ್ತರವಾಗಿಯೂ ಆಳವಾಗಿಯೂ ಪರಿಣಮಿಸುತಿತ್ತು. ತಾನು ಆ ಸೇತುವೆಯನ್ನು ಮುಟ್ಟುವವರೆಗೆ ತನ್ನ ತಲೆಯು ಮುಳುಗದಿರಲಿ ಎಂದಾತ ದೇವರಲ್ಲಿ ಪ್ರಾರ್ಥಿಸಿದ. ಒಂದು ಸುಳಿಯ ಮಧ್ಯನಲ್ಲಾತ ಸಿಕ್ಕಿಕೊಂಡಾಗ ಸೊಂಟದೆತ್ತರದಲ್ಲಿ ನೀರಿತ್ತು. ಅವನು ತನ್ನನ್ನು ಸುಳಿಯ ಕೈಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಿಂತುಬಿಟ್ಟ. ದನವು ಮುಂದರಿಯುತ್ತಾ ನಡೆದು ಮುಖ್ಯ ಪ್ರವಾಹದಲ್ಲಿ ಸಿಕ್ಕಿಬಿಟ್ಟಿತು. ಅವನಿಂದ ದನದ ಹಗ್ಗವನ್ನು ಹಿಡಿಯುವುದು ಸಾಧ್ಯವನಿಸಲಿಲ್ಲ. ಅವನ ಕೈಯಿಂದ ಅದು ಜಾರಿಹೋಯಿತು.

ದನವು ಪ್ರವಾಹದಿಂದ ರಕ್ಷಿಸಿಕೊಳ್ಳಲು ತೊಳಲಾಡುತ್ತಿರುವುದನ್ನಾತ ಕಂಡ ಈಗ ಆತನಿಗೆ ಒದಗಬಂದಂತ ಪಿಕಲಾಟವನ್ನು ನೆರೆಯು ಆಡಬಹುದೆ? ನೆರೆಯ ನೀರಿನಲ್ಲಿ ಅವನ ದನವು ಮುಳುಗಿ ಸಾಯುವುದನ್ನಾತ ಕಾಣುವಂತಿರಲಿಲ್ಲ. ಒದಗಿ ಬರುವ ಗಂಡಾಂತರಗಳ ಪರಿವೆಯಿಲ್ಲದೆಯೇ ಆತ ನದೀಪ್ರವಾಹಕ್ಕೆ ನೆಗೆದುಬಿಟ್ಟ.

ನೀರು ಆತನನ್ನು ಕೆಳಗೆ ತಳ್ಳಿತು. ಅವನು ತನ್ನ ಪಾಲಿಗೆ ಇನ್ನು ಈ ಲೋಕವೇ ಇಲ್ಲ ಎಂದುಕೊಂಡ. ಅವನ ಶ್ವಾಸಕೋಶಗಳು ಪಕ್ಕೆಲುಬುಗೂಡಿನಿಂದ ಹೊರಗೆ ಸೆಟೆದುಬರುವಂತೆ ಹಿಗ್ಗುತಿದ್ದುವು. ಅಮೇಲೆ ಒಮ್ಮೆಲೇ ಭಾರವು ಕಡಿಮೆಯಾದಂತಾಯಿತು. ಅವನು ನೀರ ಮಟ್ಟಕ್ಕೆ ಬರುವಷ್ಟೆತ್ತರಕ್ಕೆ ದೂಡಲ್ಪಟ್ಟನು. ಅವನಿಂದ ದನವು ಒಂದೈವತ್ತು ಗಜ ದೂರದಲ್ಲಿ ಜೀವಕ್ಕಾಗಿ ಹೋರಾದುತಿತ್ತು. ಅವನದರಿಡೆಗೆ ಈಜತೊಡಗಿದ. ಈ ದಾರಿ ಪ್ರವಾಹವು ಅವನನ್ನು ಅದರ ಸಮೀಪಕ್ಕೆ ಒಯ್ದುಬಿಟ್ಟತು. ತನ್ನ ಮತ್ತದರ ಉಸಿರು ಹಿಡಿಯುವುದಕ್ಕಾಗಿ, ಅವನು ಅದರ ಕುತ್ತಿಗೆಗೆ ಕೈ ಹಾಕಿದ. ಅವರ ಸ್ವಶಕ್ತಿಯಿಂದವರು ನೆರೆಯಿಂದ ಪಾರಾಗಿ ಬರುವಂತಿರಲಿಲ್ಲ. ಪ್ರವಾಹದಿಂದ ಕೊಚ್ಚಿಹೋಗುವುದೊಂದೇ ಅವರ ಪಾಲಿಗೆ ಉಳಿದಿತ್ತು.

ಈಗ, ಸಂಕವ್ತ ಅವನ ತಲೆಯಮೇಲೆ ಬಾಗಿಕೊಂಡಿತ್ತು. ಸ್ವಲ್ಪ ದೂರ ಬಂದಿದ್ದರೆ, ನೆರೆಯಿಂದ ಬದುಕುತಿದ್ದರವರು.

(ಇನ್ನೂ ಸುಟ ನೋಡಿರಿ)

ರುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಕೀತ, ಅಸ್ತ್ರ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಜೀತಸ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡಪ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ. ವಿ. ಕೆಣ್ಜೆ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾವೋದರ & ಕೊ,

ಮದ್ರಾಸ್—3.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

GOOD AT

Crown RUBBER STAMP CO.

BALMATTA ROAD, MANGALORE

ಅಭಿವೃದ್ಧಿವಥದಲ್ಲಿ ಭಾರತ—

ವಿಮಾನ ಸಾರಿಗೆಯ ಪ್ರಗತಿ

ಆ ಸೆಪ್ಟೆಂಬರ್ ಮಾಸದ ಸಂಜೆಯಂದು ಪಶ್ಚಿಮಾಭಿಮುಖವಾಗಿದ್ದ ರವಿಯ ಸ್ನಿಗ್ಧ ಬೆಳಕಿನಲ್ಲಿ ಜೋಸೆಫ್ ಲಿನ್ ಕಟ್ಟಿ ಹಾಕಿದ್ದ ಹಗ್ಗಗಳನ್ನು ಜಗ್ಗುತ್ತಿದ್ದ ಬೃಹದಾಕಾರದ ಆ ಕಾಶ ಬುಟ್ಟಿಯನ್ನು ಜಾಗರೂಕತೆಯಿಂದ ದೃಷ್ಟಿಸಿನೋಡಿ ಆಕಾಶಬುಟ್ಟಿಗೆ ಜೋಡಿಸಲಾಗಿದ್ದ ಪೆಟ್ಟಿಗೆಯಲ್ಲಿ ಕುಳಿತನು. ಆಕಾಶಬುಟ್ಟಿಯನ್ನು ಇನ್ನು ಹಾರಲು ಬಿಡಬಹದೆಂಬ ಸಂಜ್ಞೆಯನ್ನೀಯಲಾಯಿತು ಪ್ರೇಕ್ಷಕರ ಹರ್ಷೋದ್ಗಾರಗಳ ಮಧ್ಯದಲ್ಲಿ ಆಕಾಶ ಬುಟ್ಟಿಯು ಆಕಾಶದತ್ತ ತೇಲ ತೊಡಗಿತು.

ಆದೇ ಸ್ಥಳದಲ್ಲಿ ಜೋಸೆಫ್ ಮತ್ತೊಮ್ಮೆ ನಾಡಿದ ಪ್ರಯತ್ನವು ಅತನನ್ನು ಅಪಘಾತಕ್ಕೀಡುಮಾಡ ತ್ಪಲಿತ್ತು. ಆಕಾಶಬುಟ್ಟಿಯು ಸಮುದ್ರನ ಕಡೆ ಇಳಿಯತೊಡಗಿತು ಸಾವಿನೊಡನೆ ಜೋಸೆಫ್ ಹೋರಾಡಿದ ಅತನು ತನ್ನ ಸಹೋದ್ಯೋಗಿ ಶ್ರೀ ಗೋರೆಯವರೊಂದಿಗೆ ಸಮುದ್ರನಲ್ಲಿ ಯಾನಮಾಡುತ್ತಲಿದ್ದ ದೋಣಿಗೆ ಹಾರಿ ಪ್ರಾಣ ರಕ್ಷಿಸಿಕೊಂಡ ಆ ಸಮಯದಲ್ಲಿಯೇ ಆಕಾಶಬುಟ್ಟಿಯು ಸಿಡಿಯಿತು

ಈ ಘಟನೆ ನಡೆದ ಸ್ಥಳ, ಮುಂಬೈನ ಲಾಲ್ ತೋಟ ಸಂಭರ್ಣ ಭಾರತದಲ್ಲಿ ಪ್ರಥಮ ಆಕಾಶಬುಟ್ಟಿಯು ಆರೋಹಣ

ಈ ಪ್ರಯೋಗಗಳು ವಿಶ್ವದ ಆದ್ಯಂತ ವಿಮಾನ ಸಂಚಾರದ ರಹಸ್ಯಗಳನ್ನು ಅರಿತುಕೊಳ್ಳುವ ಮಾನವನ ಪ್ರಾರಂಭಿಕ ಕಾರ್ಯಗಳನ್ನು ತಿಳಿಸುತ್ತವೆ ಆಲ್ಲದೆ ೧೮೭೭ರ ಸಮಯದಲ್ಲಿಯೇ ಭಾರತದಲ್ಲಿ ವಿಮಾನ ಸಂಚಾರದ ಬಗ್ಗೆ ನಡೆದ ಆಡ್ಡಿ ಆಡಚಣೆ ಪೂರಿತ ಪ್ರಾರಂಭಿಕ ಪ್ರಯತ್ನಗಳನ್ನು ಈ ಪ್ರಯೋಗಗಳು ತಿಳಿಸುತ್ತವೆ

ಆದರೆ ಇಂದು ಪರಿಸ್ಥಿತಿ ಬದಲಾಯಿಸಿದೆ. ಶ್ರೀ ಲಿನ್ ಮತ್ತಿತರ ಮಾರ್ಗದರ್ಶಕ ವಿಮಾನ ಚಾಲಕರ ಊಹೆಯ ಎಲ್ಲೆಯಿಂದ ವಿಮಾನ ಸಂಚಾರವು ಅಭಿವೃದ್ಧಿಗೊಂಡಿದೆ ಭಾರತದಲ್ಲಿ ವಿಮಾನ ಸಂಚಾರವು ನೆಲಪೂರಿದೆ

ಭಾರತೀಯ ವಿಮಾನ ಸಂಸ್ಥೆಗಳಿಗೆ ಸೇರಿದ ವಿಮಾನಗಳು ಕಳೆದ ವರ್ಷ ಐವತ್ತು ಲಕ್ಷ ಮೈಲಿಗಳನ್ನು ದೂರ ಸಂಚರಿಸಿವೆ. ಅಂದರೆ ಭೂಮಿಯಿಂದ ಚಂದ್ರಗ್ರಹಕ್ಕೆ ೬೦ ಸಲ ಹೋಗಿ ಬರಬಹುದಾದಷ್ಟು ದೂರ ಸಂಚರಿಸಿವೆ. ಈ ವಿಮಾನಗಳು ಸುಮಾರು ೬,೪೫,೦೦೦ ಪ್ರಯಾಣಿಕರನ್ನು ಮತ್ತು ೧೮ ೫೦ ಕೋಟಿ ಪೌಂಡುಗಳಷ್ಟು ಸರಕುಗಳು ಮತ್ತು ಅಂಚೆಯನ್ನು ರವಾನಿಸಿವೆ

೧೯೫೧ರಿಂದೀಚೆಗೆ ವಿಶ್ವದಾದ್ಯಂತವೂ ಪ್ರಯೋಗಾರ್ಥ ವಿಮಾನ ಸಂಚಾರವೇ ಮುಖ್ಯವಾಗಿತ್ತು ಆ ವರ್ಷ ಫೆಬ್ರುವರಿ ತಿಂಗಳಲ್ಲಿ ಭಾರತ ಸರಕಾರದ ಅಂಚೆ ಮತ್ತು ತಂತಿ ಇಲಾಖೆಯು ಅಲಹಾಬಾದಿನಲ್ಲಿ ನಡೆದ ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದಾಗ 'ಏರ್ ಮೇಲ್' ಸೇವೆಯನ್ನು ಪ್ರಾರಂಭಿಸಿತು ಇದು ವಿಶ್ವದಲ್ಲಿಯೇ ಪ್ರಪ್ರಥಮ ಬಾರಿಯೆಂದು ನಂಬಲಾಗಿದೆ ಪ್ರಥಮ ಅಧಿಕೃತ ಅಂಚೆ ಪಾಲನ್ನು ಅಲಹಾಬಾದಿನಿಂದ ನೈನಿಗೆ ವಿಮಾನವೊಂದು ಜಮುನಾ ನದಿಯನ್ನು ದಾಟಿ ರವಾನಿಸಿತು ಈ ವಿಮಾನದ ಚಾಲಕ್ಟ್ರೆಂಜ್ ರಾಷ್ಟ್ರೀಯ ಎಂ ಪಿ ಕೇ.

ಪ್ರಥಮ ವಿಶ್ವ ಸಮರದ ಸಮಯದಲ್ಲಿ ಭಾರತದಲ್ಲಿ ವಿಮಾನ ಸಂಚಾರವು ನಿಂತಿತ್ತು. ಮಾರ್ಗದರ್ಶಕ ಪ್ರಯತ್ನಗಳು ನಡೆಯುತ್ತಲಿದ್ದವು ೧೯೩೭ರಲ್ಲಿ ಸರಕಾರದ ಪರವು ನಾಗರಿಕ ವಿಮಾನ ಸಂಚಾರ ಇಲಾಖೆಯೊಂದನ್ನು ಸ್ಥಾಪಿಸಿದರು ಈ ಶತಮಾನದ ಮೂರನೆಯ ದಶಕದ ಪ್ರಾರಂಭದಲ್ಲಿ ಭಾರತದಲ್ಲಿ ವಿಮಾನ ಸಂಚಾರವು ವ್ಯವಸ್ಥಿತ ರೂಪ ಪಡೆಯಲಾರಂಭಿಸಿತು. ಆದರ ಪ್ರಗತಿ ನಿಧಾನವಾಗಿತ್ತು

೧೯೩೮ರಲ್ಲಿ ಮೂರು ವಿದೇಶೀ ವಿಮಾನ ಸಂಚಾರ ಸಂಸ್ಥೆಗಳು ಭಾರತಕ್ಕೆ ಹಾಗೂ ಭಾರತದ ಅಂಚೆ ವಿಮಾನ ಸಂಚಾರವನ್ನು ಕೈಗೊಂಡವು ನಾಲ್ಕು ಭಾರತೀಯ ವಿಮಾನ ಸಂಚಾರ ಸಂಸ್ಥೆಗಳು ಕೂಡ ಕಾರ್ಯಾಚರಣೆಗೆ ತೊಡಗಿದವು

೧೯೩೮ರಲ್ಲಿ ಭಾರತವೆಲ್ಲಿ ೬,೭೦೦ ಮೈಲುಗಳಷ್ಟು ವಿಮಾನ ಮಾರ್ಗಗಳಿದ್ದವೆಂದು ಅಂದಾಜುಮಾಡಲಾಗಿದೆ ಆ ವರ್ಷ ಬ್ರಿಟಿಷಿನಲ್ಲಿ ೨೫,೪೭೭ ಮೈಲಿಗಳಷ್ಟು ಮತ್ತು ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ೭೧೧೯೯ ಮೈಲಿಗಳಷ್ಟು ವಿಮಾನಮಾರ್ಗಗಳಿದ್ದುವು ಭಾರತೀಯ ಸಂಸ್ಥೆಗಳು ತಮ್ಮ ಧೈರ್ಯ, ಸ್ಥೈರ್ಯ, ಕೌಶಲ್ಯಗಳನ್ನು ತೋರಿದವಲ್ಲದೆ, ಮೇಳಾಸಟ್ಟಿಗೆ ಅನುಸಾರವಾಗಿ ಸುರಕ್ಷಿತ ವಿಮಾನ ಸೇವೆಗಳನ್ನು ವ್ಯವಸ್ಥೆಗೊಳಿಸಿದವು

ದ್ವಿತೀಯ ವಿಶ್ವ ಸಮರವು ಭಾರತದಲ್ಲಿ ನಾಗರಿಕ ವಿಮಾನ ಸಂಚಾರಕ್ಕೆ ಹೊಸದಾಗಿ ಉತ್ತೇಜನವಿತ್ತಿತು ಸಮರ ಪ್ರಯತ್ನಗಳಿಗಾಗಿ ಸರಕಾರಿ ಹತೋಟೆಯಲ್ಲಿ ವಿಮಾನ ಸಂಚಾರ ಸೇವೆಗಳು ವಿಸ್ತರಿಸತೊಡಗಿದವು ವಿಮಾನಗಳ ಸಂಚಾರವೂ ಹೆಚ್ಚಾಯಿತು ಸಮರದ ತಾಡನೆಯಿಂದಾಗಿ ಹೊಸ ತಂತ್ರ ವಿಧಾನಗಳು ರೂಪಗೊಂಡವು ಸಮರಾನಂತರದ ಅಭಿವೃದ್ಧಿ ಯೋಜನೆಗಳು ಪ್ರಗತಿಗಳಿಸಿದವು ೧೯೪೮ರ ವೇಳೆಗೆ ಭಾರತದಲ್ಲಿ ಒಂಭತ್ತು ಭಾರತೀಯ ವಿಮಾನ ಸಂಚಾರ ಸಂಸ್ಥೆಗಳಿದ್ದವು

ಹಿಂದಿನ ಎರಡು ದಶಕಗಳಿಗಿಂತಲೂ ಕಳೆದ ದಶಕದಲ್ಲಿಯೇ ಭಾರತದಲ್ಲಿ ನಾಗರಿಕ ವಿಮಾನ ಸಂಚಾರವು ಗಮನಾರ್ಹ ವೆಂದ ರೀತಿಯಲ್ಲಿ ಅಭಿವೃದ್ಧಿಹೊಡೆದಿದೆ.

ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಒಂದು ದಶಕದಲ್ಲಿ ನಾಗರಿಕ ವಿಮಾನ ಸಂಚಾರವು ಗಳಿಸಿದ ಮಹತ್ವಪೂರ್ಣ ಕಾರ್ಯಸಾಧನೆಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ ಅಂತರ್ದೇಶೀಯ ಅಂಚೆಯನ್ನು ವಿಮಾನಗಳಲ್ಲಿ ರವಾನಿಸುವ 'ಆಲ್ ಅಪ್ ಮೇಲ್ ಸ್ಕೀಂ', ರಾತ್ರಿ ಕಾಲದಲ್ಲಿ ವಿಮಾನ ಸಂಚಾರ (ದೆಹಲಿ, ಮುಂಬೈ ಕಲ್ಕತ್ತ ಮತ್ತು ಮದರಾಸು ಗಳಿಂದ ವಿಮಾನಗಳು ಹೊರಟು ನಾಗಪುರವನ್ನು ತಲುಪುವುದು), ವಿಮಾನ ಸಂಚಾರ ಸೇವೆಗಳ ರಾಷ್ಟ್ರೀಕರಣ ಎರಡು ವಿಮಾನಗಳ ಸಂಚಾರ ಕಾರ್ಪೋರೇಷನ್ ಗಳು—ಒಂದು ದೇಶದೊಳಗಿನ ವಿಮಾನ ಸಂಚಾರಕ್ಕಾಗಿ, ಮತ್ತೊಂದು ವಿದೇಶಗಳ ವಿಮಾನ ಸಂಚಾರಕ್ಕಾಗಿ); ಮತ್ತು ಈಗಿರುವ ವಿಮಾನಗಳ ಜೊತೆಗೆ ಹೊಸದಾದ ಹಾಗೂ ಹೆಚ್ಚು ಪ್ರಬಲವಾದ ವಿಮಾನಗಳನ್ನು ಸೇರಿಸುವುದು

ಯಾವ ರೀತಿಯಿಂದಾಗಲಿ ಇವು ಮಹತ್ವಾಕಾಂಕ್ಷೆಗಳಾಗಿವೆ ೧೯೫೨ರಿಂದ ಪ್ರಯಾಣಿಕರ ಸಂಚಾರವು ನೂರಕ್ಕೆ ಸುಮಾರು ೧೧೫ರಷ್ಟು, ಸರಕುಗಳ ರವಾನೆಯು ಪ್ರಮಾಣವು ೧೭೦ರಷ್ಟು, ಅಂಚೆ ಟಪ್ಪಾಲುಗಳ ರವಾನೆಯು ೮೮ರಷ್ಟು, ವಿಮಾನಗಳು ಸಂಚರಿಸಿದ ಮೈಲುಗಳು ನೂರಕ್ಕೆ ೧೫೦ರಷ್ಟು ಹೆಚ್ಚಿವೆ.

ವಿಮಾನ ಸಂಚಾರ ಸೇವೆಗಳ ರಾಷ್ಟ್ರೀಕರಣವು ಸಂಪತ್ತಾರ್ಜನೆಗಳ ಬಳಕೆಯಿಂದೂ ಅಭಿವೃದ್ಧಿಯನ್ನು ವ್ಯವಸ್ಥೆಗೊಳಿಸುವ ಬಗ್ಗೆ ನೆರವಾಗಿವೆ ಅಂತರ್ದೇಶೀಯ ವಿಮಾನ ಸಂಚಾರ ಸೇವೆಗಳನ್ನು ನಡೆಸುತ್ತಿರುವ ಎಂಟು ಸಂಸ್ಥೆಗಳನ್ನು ೧೯೫೩ರಲ್ಲಿ ಒಟ್ಟು ಗೂಡಿಸಿ ಕಾರ್ಪೊರೇಷನ್'ವೊಂದನ್ನು ರೂಪಿಸಲಾಯಿತು ಅದೇ ಭಾರತೀಯ ಏರ್‌ಲೈನ್ಸ್ ಕಾರ್ಪೊರೇಷನ್

ಐ ಎ. ಸಿ ಎಂಬುದಾಗಿ ಕರೆಯಲ್ಪಡುವ ಭಾರತೀಯ ಏರ್ ಲೈನ್ಸ್ ಕಾರ್ಪೋರೇಷನ್ನಿನ ವಿಮಾನಗಳು ಹಗಲೂ ಇರುಳೂ ಕಾರ್ಯಾಚರಣೆಯಲ್ಲಿದ್ದು ಭಾರತದ ೫೭ ನಗರಗಳು ಮತ್ತು ಊರುಗಳಿಗೆ ಸಂಬಂಧ ಕಲ್ಪಿಸುತ್ತವೆ ಕಾರ್ಪೋರೇಷನ್ನಿಗೆ ಸೇರಿದ ವಿಮಾನಗಳು ನೆರೆ ಹೊರೆಯ ರಾಷ್ಟ್ರಗಳಲ್ಲಿ ಕೂಡ ಕಾರ್ಯಾಚರಣೆಯಲ್ಲಿವೆ ನಿತ್ಯವೂ ಕಾರ್ಪೋರೇಷನ್ನಿನ ೧೩೨ ವಿಮಾನಗಳು ಸಂಚರಿಸುತ್ತಿರುತ್ತವೆ ಇತ್ತೀಚೆಗೆ ಲೆಹ್‌ನಲ್ಲಿ ವಿಮಾನ ನಿಲ್ದಾಣವೊಂದನ್ನು ವಿಮಾನಗಳು ಬಂದಿಳಿಯುವ ಬಗ್ಗೆ ತೆರೆಯಲಾಯಿತು ಇದು ವಿಶ್ವದಲ್ಲಿಯೇ ಅತಿ ಎತ್ತರವ ಪ್ರದೇಶದಲ್ಲಿದೆ.

'ಐಎಸಿ ೧೧ ವೈಕೌಂಟ್ ವಿಮಾನಗಳನ್ನು ಪಡೆಯುವ ವ್ಯವಸ್ಥೆ ಮಾಡಿದೆ ಈ ಬಗ್ಗೆ ಮೊದಲನೆಯ ಐದು ವಿಮಾನಗಳು ಈ ವರ್ಷ ಅಕ್ಟೋಬರ್ ವೇಳೆಗೆ ಬಂದಿದೆ. ಒಂದೊಂದು ವೈಕೌಂಟ್ ವಿಮಾನದಲ್ಲಿ ೪೪ ಮಂದಿ ಪ್ರಯಾಣಿಕರು ಕೂಡ ಬಹುದಾಗಿದೆ ಮುಖ್ಯ ವಾಯು ಮಾರ್ಗಗಳು, ರಾತ್ರಿ ಕಾಲದ 'ಏರ್ ಮೇಲ್' ವಿಮಾನ ಸಂಚಾರ ಸೇವೆ, ಮತ್ತು ನೆರೆಹೊರೆಯ ರಾಷ್ಟ್ರಗಳಿಗೆ ಇರುವ ವಿಮಾನ ಸಂಚಾರ ಸೇವೆ ಇವುಗಳಲ್ಲಿ ವೈಕೌಂಟ್ ವಿಮಾನಗಳನ್ನು ಸಂಚಾರಕ್ಕಾಗಿ ಉಪಯೋಗಿಸಲಾಗುವುದು ರಾತ್ರಿ ಕಾಲದ 'ಏರ್ ಮೇಲ್' ವಿಮಾನ ಸಂಚಾರ ಸೇವೆಗಳಲ್ಲಿ 'ಡಕೋಟ' ವಿಮಾನಗಳಿಗೆ ಬದಲಾಗಿ 'ಸ್ಕೈ ಮಾಸ್ಟರ್' ವಿಮಾನಗಳನ್ನು ಉಪಯೋಗಿಸಲಾಗುತ್ತಿದೆ.

೧೯೪೭ರ ಆಗಸ್ಟ್‌ಗೆ ಪೂರ್ವದಲ್ಲಿ ಭಾರತದ ವಿದೇಶೀಯ ವಿಮಾನ ಸಂಚಾರ ಸೇವೆಗಳು ಬರ್ಮಾ ಮತ್ತು ಸಿಲೋನ್‌ಗಳಿಗೆ ಮಾತ್ರ ಮಿತಗೊಂಡಿದ್ದುವು ಏರ್ ಇಂಡಿಯಾ ಇಂಟರ್ ನೇಷನಲ್ ಸಂಸ್ಥೆಯ ಕಾನ್‌ಸ್ಟೆಲೇಷನ್ ವಿಮಾನಗಳಲ್ಲಿ ಮೊದಲನೆಯದಾವ 'ಮೊಗಲ್ ಪ್ರಿನ್ಸೆಸ್' ೧೯೪೮ರ ಜೂನ್ ೪ನೆಯ ದಿನಾಂಕದಂದು ಮುಂಬೈ—ಲಂಡನ್ ವಿಮಾನ ಸಂಚಾರ ಸೇವೆಯ ಪ್ರಾರಂಭದ ಸಮಯದಲ್ಲಿ ಮುಂಬೈನಿಂದ ಲಂಡನ್‌ಗೆ ತೆರಳಿತ್ತು

ಇಂದು ಭಾರತೀಯ ವಿಮಾನಗಳು ವಿಶ್ವದ ಪ್ರಮುಖ ನಗರಗಳೊಂದಿಗೆ ಸಂಬಂಧ ಕಲ್ಪಿಸಿವೆ ನಗರಗಳಾವುವೆಂದರೆ—ಏಡನ್, ಬಾಂಕಾಕ್, ಬೀರತ್, ಕೈರೋ, ಡಮಾಸ್ಕಸ್, ಡಾವಿನ್, ಡಸ್ಸೆಲ್ ಡಾರ್ಫ್, ಜಿನೀವ, ಹಾಂಕಾಂಗ್, ಕಾಬೂಲ್, ಲಂಡನ್, ನೈರೋಬಿ ಪ್ಯಾರಿಸ್, ಪ್ರೇಗ್, ರಂಗೂ

(೧೦ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
H. O ಉಡುಪಿ ESTD 1925.

ವಿಸ್ತೃತವಾದ ಬೇಂಕಿಂಗ್ ಸೇವೆಗೆ ಅನುಕೂಲವಾಗುವಂತೆ ಬಾದಾಮಿ, ಜಮಖಂಡಿ, ಇಲ್ಕಲ್ ಗುಳೇದಗುಡ್ಡ, ಶೃಂಗೇರಿ, ಗುಂಟಕಲ್ ಈ ಆರು ಊರುಗಳಲ್ಲಿ ಆರು ಹೊಸ ಶಾಖೆಗಳನ್ನು ತೆರೆಯಲಾಗಿದೆ.

ಈಗ "ಸಿಂಡಿಕೇಟ್ ಬೇಂಕ್"ನ ಶಾಖೆಗಳ ಸಂಖ್ಯೆ 102 ಎಂದು ತಿಳಿಸಲು ಸಂತೋಷಪಡುತ್ತೇವೆ.

ಈ 102 (ನೂರೆರಡು) ಶಾಖೆಗಳೂ ನಿಮ್ಮ ಸೇವೆಗೆ ಸಿದ್ಧವಿವೆ.

The Canara Industrial & Banking Syndicate Ltd., Udipi, S. K.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಸರ್ವೋಚ್ಚ ನಾಗರಿಕ ನಿರ್ಮಾಣದಲ್ಲಿ

ಮಾತಾಪಿತರ ಮಹತ್ವದ ಪಾತ್ರ

ನಮ್ಮ ದೇಶದ ಪ್ರತಿಯೊಂದು ಕ್ಷೇತ್ರದಲ್ಲಿಯೂ ನವೀನ ಪರಂಪರೆಯು ನಿರ್ಮಾಣವಾಗುವ ಕುರಿತಾದ ಮಾತುಕತೆಗಳು ಈಗ ನಾಲ್ಕೂ ನಿಟ್ಟಿನಲ್ಲಿ ಕೇಳಿ ಬರುತ್ತಿವೆ. ನಮ್ಮ ಪ್ರಾಚೀನ ಗೌರವಕ್ಕೆ ಅನುರೂಪವಾಗುವ ಮತ್ತು ಸಂಪನ್ನವಾಸ್ಪವಾಗಿ ನಮ್ಮ ದೇಶವೂ ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಪಂಕ್ತಿಯಲ್ಲಿ ಗೌರವಪೂರ್ಣವಾಗಿ ಕುಳಿತುಕೊಳ್ಳುವಂತೆ ಮಾಡುವ ರೀತಿಯಲ್ಲಿ ನಮ್ಮ ಸಮಾಜದ ಪುನರ್ನಿರ್ಮಾಣವು ಹಾಕಲ್ಪಡುತ್ತಿದೆ ನಮ್ಮ ರೀತಿಯಲ್ಲಿ ನಮ್ಮ ರಾಷ್ಟ್ರೀಯ ಜೀವನದ ಪ್ರತ್ಯೇಕ ಕ್ಷೇತ್ರದಲ್ಲಿಯೂ ನೂತನ ನಿರ್ಮಾಣದ ಆಂದೋಲನವು ನಡೆಯುತ್ತಾ ಇದೆ ಎಂಬುದರಲ್ಲಿ ಸಂದೇಹವಿಲ್ಲ. ದೊಡ್ಡ ದೊಡ್ಡ ಯೋಜನೆಗಳು ಕ್ರಿಯಾನ್ವಿತವಾದನಂತರ ದೇಶದಲ್ಲಿ ಸಂಪತ್ತು ಸಂತೋಷಗಳು ಹೆಚ್ಚುವುವು ಆಲ್ಲದೆ, ಇಂದು ನಮ್ಮ ಸಮಾಜದಲ್ಲಿ ನೆಲೆಯೂರಿದ ಬೇರೆ ಬೇರೆ ವಿಸಂಗತಿಗಳು ತಮಗೆ ತಾವಾಗಿಯೇ ದೂರವಾಗುವುವು. ಸಂಪನ್ನತೆಯ ಈ ಸಾಧನೆಗಳನ್ನು ನಾವು ಎದುರುಗೆ ಸರಿಯಾಗಿ ಉಪಯೋಗಿಸಿಕೊಳ್ಳುವುದಿಲ್ಲವೋ ಆದುವರೆಗೆ ಈ ತೃಪ್ತಿಯು ಸಂಭವನೀಯವಲ್ಲವೆಂಬುದನ್ನು ಮಾತ್ರ ಮರೆಯಬಾರದು.

ಆದುದರಿಂದ ಇಂದು ನಮ್ಮ ಮುಂದಿರುವ ಸಮಸ್ಯೆ ಇದು. ಭಾರತವು ಇಂದು ನವೀನ ರಚನೆಯತ್ತ ಧಾವಿಸಬಯಸುತ್ತಿದೆ. ಆದರೆ, ಆಗ ಒದಗಿಬರುವ ಹೊಸಹೊಸ ಹೊಣೆಗಾರಿಕೆಗಳನ್ನು ಸಫಲತಾಪೂರ್ವಕವಾಗಿ ಹೊರಲು ಸಿದ್ಧರಿರುವ ನವನಾಗರಿಕರನ್ನು ರೂಪಿಸುವುದೆಂತು? ಕಳವ ನೇಕ ವರ್ಷಗಳಿಂದ ಆಂದೋಲನಗಳನ್ನು ನಡೆಸುದುದರಿಂದ, ನಾವು ಉಚಿತ ಶಿಕ್ಷಣ, ದೀಕ್ಷೆ ಮತ್ತು ವೈಜ್ಞಾನಿಕ ಕಂಗತಿಗಳನ್ನು ತಿಳಿಯದಿರುವ ವರೆಗೆ ಹೊಸ ತಿಳಿವನ್ನು ನಾವು ಸಂಪಾದಿಸಲಾರೆವು ಮತ್ತು ನಮ್ಮ ಈ ಶುಭಸಂಕಲ್ಪವು ಪೂರ್ತಿಗೊಳ್ಳಲಾರದೆಂದು ಅರಿತಿದ್ದೇನೆ. ಇಂದಿನ ನಮ್ಮ ತಾಯ್ತಂದೆ ಮಕ್ಕಳ ಶಿಕ್ಷಣದ ಮಹತ್ವವನ್ನು ಅತ್ಯುತ್ತಮ ವಿಧಾನದಲ್ಲಿ ನಾವು ಅನುಭವ ಮಾಡಿಕೊಂಡಿದ್ದೇವೆ ಆದರೆ, ನಮ್ಮ ವಾಸ್ತವಿಕ ಸಮಸ್ಯೆಯ ಶ್ರೀಗಣೇಶವು ಇಲ್ಲಿಂದಲೇ ಪ್ರಾರಂಭವಾಗಿರುವುದು.

ಇಂದಿನ ತಾಯ್ತಂದೆಗಳು ಸಹಜವಾಗಿ ಶಿಕ್ಷಣಕರೊಡನೆ, "ತಾವು ನಮ್ಮ ಮಕ್ಕಳಿಗೆ ಅಗತ್ಯಬಿದ್ದರೆ, ಬೇಕಾದಷ್ಟು ದಂಡನೆಯನ್ನಿಯಿರಿ; ಅಂತೂ ಅವರಿಗೆ ವಿದ್ಯಾಭ್ಯಾಸ ಬಂದರೆ ಸರಿ" ಎಂದು ಹೇಳುತ್ತಾರೆ. ಅವರ ದೃಷ್ಟಿಯಲ್ಲಿ ವಿದ್ಯೆಯೆಂದರೆ, ಕೇವಲ ಮಕ್ಕಳು ಅಮಿತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಮಾತ್ರ. ಪರೀಕ್ಷೆಗಳಲ್ಲಿ ತೇರ್ಗಡೆಹೊಂದುವುದೇನೂ ಕೆಟ್ಟದಲ್ಲ; ಆದರೆ, ಪರೀಕ್ಷೆಯಲ್ಲಿ ತೇರ್ಗಡೆಹೊಂದಿದೊಡನೆಯೇ ಮಕ್ಕಳ ಸಂಪೂರ್ಣ ವಿಕಾಸವಾಯಿತೆಂದರ್ಥವಲ್ಲ. ಓದು ಬರಹ ಮತ್ತು ಗಣಿತಗಳನ್ನು ಕಲಿಯುವುದೇ ವಾಸ್ತವಿಕ ಶಿಕ್ಷಣವಲ್ಲ. ಇಂದಿನ ವೈಜ್ಞಾನಿಕ ಯುಗದಲ್ಲಿ ಯಾಂತ್ರಿಕ ವಿದ್ಯೆಯನ್ನೂ ಕಲಿತುಕೊಳ್ಳಬೇಕಾಗಿದೆ. ಯಂತ್ರಗಳು ಮಾಡುವ ಕೆಲಸಗಳನ್ನೆಲ್ಲಾ ಬಿಟ್ಟು ಅದಕ್ಕಿಂತಲೂ ನಾವು ಮುಂದುವರಿಯಬೇಕಾಗಿದೆ. ಇಂದು ಯಂತ್ರಗಳೇ ಓದುತ್ತವೆ; ಬರೆಯುತ್ತವೆ ಮತ್ತು ಲೆಕ್ಕ ಮಾಡುತ್ತವೆ. ಆದುದರಿಂದ ನಾತ್ರ ನಮ್ಮ ಮಕ್ಕಳಿಗೆ ಇದಕ್ಕೂ ಹೆಚ್ಚಿನ ವಿದ್ಯೆಯನ್ನು ಕೊಟ್ಟು ಅವರನ್ನು ಪೂರ್ಣ ಮಾನವರನ್ನಾಗಿ ಮಾಡಬೇಕಾಗಿದೆ.

ಹಾಗಾದರೆ, ನಮ್ಮ ಇಂದಿನ ಸಾಮಾನ್ಯ ಶಿಕ್ಷಣಾಲಯ, ವಿದ್ಯಾಲಯ, ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯಗಳು ವಾಸ್ತವಿಕ ರೂಪದಲ್ಲಿ ಶಿಕ್ಷಿತ ನಾಗರಿಕರ ನಿರ್ಮಾಣ ಮಾಡುತ್ತಾ ಇಲ್ಲವೆ? ಈ ಪ್ರಶ್ನೆಯು ವಾಸ್ತವದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಪದೇಪದೇ ಎದ್ದುಬರುತ್ತದೆ. ಆದರೆ, ವಿದೇಶೀ ಶಾಸಕರು ನವರಿಗಾಗಿ ಹಾಕಿದ ಶಿಕ್ಷಣದ ಆಧಾರಶಿಲೆಯು ನವೀನ ಭಾರತದ ರಾಷ್ಟ್ರೀಯ ಜೀವನಕ್ಕೆ ಉಪಯುಕ್ತವಾಗಿಲ್ಲವೆಂಬುದನ್ನು ಹೇಳ ಪುನರ್ಪೂರ್ವಕವಾಗಿ ಹೇಳಬೇಕಾಗಿದೆ. ಈ ದಿಸೆಯಲ್ಲಿ ಅಖಂಡ ಭಾರತದಲ್ಲಿ ಒಂದು ದೊಡ್ಡ ಆಂದೋಲನವು ಪ್ರಾರಂಭವಾಗಿದೆ. ಸರಕಾರೀ ಕ್ಷೇತ್ರದಲ್ಲಿ ವಿಭಿನ್ನಪ್ರಾಯದ ಶಿಕ್ಷಣಾರ್ಥಿಗಳಿಗೆ ಯಾವ ವಿಧದ ಶಿಕ್ಷಣವು ಉಪಯುಕ್ತವಾಗುವುದೆಂಬುದನ್ನು ಅನುಸಂಧಾನ ಮಾಡತ್ತಿರುವರು. ಸರಿ ತು. ದೇಶದ ಹೊಣೆಗಾರ ನಾಗರಿಕರನ್ನು ನಿರ್ಮಿಸುವ ಮಹತ್ವದ ಉತ್ತರದಾಯಿತ್ವವನ್ನು ತಲೆಯಲ್ಲಿ ಹೊತ್ತುಕೊಂಡ ಮಕ್ಕಳ ಮಾತಾಪಿತರು ತಮ್ಮ ಕರ್ತವ್ಯದ ಕ್ಷೇತ್ರ ಪೂರ್ಣಸಜ್ಜೀಕರಣಕ್ಕಾಗಿಲ್ಲವೆಂದು ಹೇಳಬೇಕಾಗಿ ಬಂದಿದೆ.

ಬಾಲಕ ಬಾಲಕಿಯರು ಏದು ವರ್ಷ ಪೂರ್ವದ ಸಮಯವು ಅವರ ವಾಸ್ತವಿಕ ನಿರ್ಮಾಣದ ಸಂಧಿಕಾಲವಾಗಿದೆ ಎಂದು ವೈದ್ಯರು, ಮನೋವಿಜ್ಞಾನಿಗಳು ಮತ್ತು ಶಿಕ್ಷಣ ವಿಚಾರದರು ಏಕಕಂಠದಿಂದ ಹೇಳುತ್ತಾರೆ. ಪೂರ್ವಪ್ರಾರಂಭಿಕ ಶಿಕ್ಷಣದ ಪೂರ್ಣ ಉತ್ತರದಾಯಿತ್ವವು ತಂದೆ ತಾಯಿಗಳ ಶಿರಸ್ಸಿನ ಮೇಲೆಯೇ ಬೀಳುವುದು. ತಾಯಿ ತೊಡೆಯೆ ಮೊದಲ ಶಾಲೆಯಾಗಿದೆ. ಮಗುವಿಗೆ ನಿಶ್ಚಲ ಪ್ರೇಮ ಮತ್ತು ಸಂಪೂರ್ಣ ಸುರಕ್ಷೆಯು ಖಾತ್ರಿವಾಗುವನಕ ಮಗುವಿನ ಸಂಮ್ಯಗ್ವಿಕಾಸವು ಆಗುವುದಿಲ್ಲ. ಮಗುವು ಪ್ರಥಮತಃ ನೋಡಲು ಕೇಳಲು ಅನುಭವಮಾಡಲು ಅಥವಾ ಇನ್ನೇನಾದರೂ ಮಾಡಬಯಸುವುದುದಾದರೆ, ಅದರ ಪ್ರಥಮ ಕ್ಷೇತ್ರವು ಅದರ ಪರಿವಾರವೇ ಎಂಬ ಚಿರಸತ್ಯವನ್ನು ತಾಯ್ತಂದೆಯರು ಗಮನಿಸಬೇಕು. ಭಾವನಾತ್ಮಕ ವಿಕಾಸದ ಈ ಪ್ರಾರಂಭಿಕ ಕ್ಷಣಗಳಲ್ಲಿ ಅದರ ಮನೋಪಟಲದಲ್ಲಿ ಚಿತ್ರಿತವಾಗುವ ಚಿತ್ರವು ತನ್ನ ಜೀವನ ಪರ್ಯಂತವೂ ಮಾಯಲಾರದಷ್ಟು ಆಳವಾಗಿ ಬೇಳುವುದು. ಮಗುವಿನ ಈ ಶಿಕ್ಷಣವು ಅಕ್ಷರಜ್ಞಾನದಿಂದ ಸಂಪೂರ್ಣ ದೂರವಿದ್ದು ಸ್ವಯಂ ತನ್ನ ಜೀವನದಲ್ಲಿ ಗ್ರಹಿಸುವುದಾಗಿದೆ.

ವಿದ್ಯಾಲಯವೂ ಮಗುವಿನ ಶಿಕ್ಷಣಕ್ಕೆ ಉಚಿತ ಸ್ಥಾನವಾಗಿರುವುದು. ಆದರೆ, ಇದಕ್ಕಾಗಿ ಮಾತಾಪಿತರು ಉಚಿತ ಸಂಸ್ಕಾರವನ್ನು ಮಕ್ಕಳ ಮನಸ್ಸಿನಲ್ಲಿ ಒದಗಿಸದೆ ಹೋದರೆ, ಶಿಕ್ಷಣದ ಸಕಲ ಪ್ರಯತ್ನಗಳೂ ನಿಷ್ಫಲವಾಗುವುದು ಖಂಡಿತ. ಮಗುವು ಏನನ್ನು ಓದುತ್ತಾನೆ ಮತ್ತು ಹೇಗೆ ಬದುತ್ತಾನೆ ಎಂಬುದು ಗೃಹವಾತಾವರಣದಿಂದಲೇ ಸ್ಪಷ್ಟವಾಗುವುದು. ಶೈಶವಾವಸ್ಥೆಯಲ್ಲಿ ಮಗುವು ತೀವ್ರವಾಗಿ ಬೆಳೆಯುತ್ತದೆ. ಆದರೆ ಗತಿಯೊಡನೆ ಜೊತೆಕೊಂಡು ಹೆಜ್ಜೆಯಿಡಲೂ ಪ್ರಯಾಸವಾಗುವಷ್ಟು ವೇಗವಾಗಿ ವಯಸಿನ ಶಾರೀರಿಕ ಮತ್ತು ಮಾನಸಿಕ ವಿಕಾಸವು ಬೆಳೆಯುತ್ತಾ ಹೋಗುತ್ತದೆ. ಅದರೆದುರು ಒಂದು ಹೊಸ ಜಗತ್ತು ಬಂದು ನಿಲ್ಲುತ್ತದೆ. ಅದು ಮೇಲೆ ಹತ್ತುತ್ತದೆ; ಅಸಫಲಗೊಂಡಲ್ಲಿ ಪುನಃ ಏರುತ್ತದೆ; ಯಾರಾದರೂ ತಡೆವರೆ, ಅದು ಮತ್ತೂ ಇನ್ನುಡಿಯಾಗಿ ಪ್ರಯತ್ನಿಸುತ್ತದೆ. ಆದರ ಕೋಮಲ ಶಾರೀರಿಕ ಅವಯವಗಳಲ್ಲಿ ಬಿಸಿ, ಚಳಿ, ಬೆಂಕಿ, ಹಸಿವುಗಳು ಬಹಳ ತೀಕ್ಷ್ಣದಲ್ಲಿ ಪ್ರಭಾವಿತವಾಗುತ್ತವೆ. ಮತ್ತು ಕೇವಲ ಶಾರೀರಿಕ ವಿಕಾಸ ಮಾತ್ರವಲ್ಲ, ಆದರೆ ಸಂಪೂರ್ಣ ವ್ಯಕ್ತಿತ್ವದ ವಿಕಾಸವು ಇವುಗಳಲ್ಲಿ ನಿರ್ಭರವಾಗಿರುತ್ತದೆ. ಈ ವಿಕಾಸಕಾರ್ಯದಲ್ಲಿ ಶಿಕ್ಷಕನಿಗಿಂತ ತಂದೆತಾಯಿಯರೇ ಅಧಿಕ ಸಹಾಯಕರಾಗುವರೆಂಬುದು ಸಿದ್ಧವಾಗುವುದು.

ಇಷ್ಟೇ ಇಲ್ಲದೆ, ವ್ಯಾವಹಾರಿಕ ಶಿಕ್ಷಣದ ಅವಧಿಯಲ್ಲಿಯೇ ಅದರ ವಿಚಾರಗಳ ನಿರ್ಮಾಣವಾಗುತ್ತದೆ. ವಿದ್ಯಾವಂತರೊಡನೆ ಹೇಗೆ ವ್ಯವಹರಿಸಬೇಕು, ಮನೆಯಲ್ಲಿ ಚಿಕ್ಕ ದೊಡ್ಡ ಸೋದರ ಸೋದರಿಯರೊಡನೆ, ಮುದುಕರೊಡನೆ ಹೇಗೆ ಮಾತಾಡಬೇಕು, ಈ ಎಲ್ಲಾ ಕಂಟ್ಯಾಕ್ಟರಗಳು ಅದಕ್ಕಾಗಿ ಈ ಪ್ರಾಯದಲ್ಲಿ ಪ್ರಾಪ್ತವಾಗುತ್ತವೆ. ಆದರೆ, ತಮ್ಮ ಮಕ್ಕಳ ಈ ಕ್ರಾಂತಿಕಾರೀ ಜೀವನ ವಿಕಾಸಕ್ಕೆ ಉಚಿತ ಮಹತ್ವವನ್ನೀಯುವ ಮತ್ತು ಅವರಲ್ಲಿ ಸಹಾಯಕರಾಗುವ ಇಚ್ಛೆಯಿರುವ ಮಾತಾಪಿತರು ಸಂಖ್ಯೆಯೆಷ್ಟು?

"ಈಗ ಮಗು ಅಷ್ಟರಿಷ್ಟಾಗಿರಬೇಕಾಗಿತ್ತು" ಎಂಬ ವಿಚಾರದ ತಾಯಿತಂದೆಯವರೇ ಸಾಮಾನ್ಯವಾಗಿರುತ್ತಾರೆ. ಆದರೆ, ಇವರು ತಮ್ಮ ವಿಚಾರದ ಗುಂಗಿನಲ್ಲಿ ತಮ್ಮ ಮನೆಯೇ ಸರ್ವೋಚ್ಚ ವಿದ್ಯಾಲಯವೆ ಆಲ್ಲಿಯೇ ಅದರ ಅಡಿಗಲ್ಲು ಸ್ಥಾಪಿಸಿದರೆ ಮಾತ್ರ ಮುಂದಿನ ವಿದ್ಯಾಲಯಗಳಲ್ಲಿ ನೆಲ ದೊರೆಯಬಹುದೆಂಬ ನಿತ್ಯ ಸತ್ಯವನ್ನು ಮರೆತು ಬಿಡುತ್ತಾರೆ. ಈ ಸ್ಥಿತಿಯು ಭಾರತದಲ್ಲಿ ಎದುರಿಗಿರುವುದೆಂಬುದನ್ನು ಈಗ ಹೇಳಬರುವಂತಿಲ್ಲ.

ಕೇವಲ ರಜಾದಿನಗಳಲ್ಲಿ ಮಾತ್ರ ಮಕ್ಕಳ ಮುಖವನ್ನು ಸರಿಯಾಗಿ ನೋಡುವ ತಾಯ್ತಂದೆಯೇ ಹೆಚ್ಚು. ಉಳಿದ ದಿನಗಳಲ್ಲಿ ಇವರು ತಮ್ಮ ಸಂಸಾರದ ಉದರ ನಿರ್ವಹಣ ಭಾರದಿಂದಲೇ ಬಹಳ ಕಾಗ್ಗಿ ಹೋಗಿರುತ್ತಾರೆ. ಆದರೂ ಅಲ್ಪತ್ವದಿಂದಾಗಿಯೂ ತಮ್ಮ ಕರ್ತವ್ಯದಿಂದ ವಿಮುಖರಾಗಿರುವ ಮಾತಾಪಿತರೂ ಇಲ್ಲವೆಂದಲ್ಲ ಇವರು ತಮ್ಮ ಮಕ್ಕಳನ್ನು 'ನರ್ಸರಿ ಶಾಲೆ'ಗಳಿಗೆ ಕಳುಹಿಸಿಕೊಡುವುದರಿಂದ ಈ ಸಮಸ್ಯೆಯನ್ನು ಕೊನೆಗಾಣಿಸಬಹುದು. ಈ ಶಾಲೆಯಲ್ಲಿ ಸ್ವಯಂ ಅವೈಜ್ಞಾನಿಕ ರೂಪದಲ್ಲಿ ಸ್ವಲ್ಪ ಸಮಯ ಶಿಕ್ಷಕರಾಗಿ ತಾಯ್ತಂದೆಯರೇ ಕಾರ್ಯ ಮಾಡಬೇಕು.

ಇಂದು ಆಗುವುದಾದರೂ ಏನು? ಮಗು ಶಾಲೆಗೆ ಹೋಗುತ್ತದೆ. ಸ್ವಲ್ಪ ಹೊತ್ತಿನ ನಂತರ ಹಿಂದಿರುಗುತ್ತದೆ. ತಂದೆ ತಾಯಂದಿರು ಅದರ ಹೊಟ್ಟೆ ತುಂಬಿಸಿ ಪುನಃ ಶಾಲೆಗೆ ಕಳುಹಿಸುತ್ತಾರೆ. ಇದರ ಪರಿಣಾಮ ಮಗುವಿನ ವ್ಯಕ್ತಿತ್ವ ಸಂಕುಚಿತವಾಗಿ ಮನಸ್ಸಿನಲ್ಲಿದ ಮನಸ್ಸಿನಿಂದಾಗಿ ಅದು ಏನೆನ್ನೂ ಕಲಿಯುವುದಿಲ್ಲ. ಇದರಿಂದಿಗೆ ಸೂತಾಪಿತ ಮತ್ತು ಶಿಕ್ಷಕರ ಕಡೆಗೆ ವೈಮನಸ್ಯಭಾವವು ಅದರ ಮನಸ್ಸಿನಲ್ಲಿ ನೆಲೆಯೂರುತ್ತದೆ.

ಶಿಕ್ಷಣಕ್ಷೇತ್ರದಲ್ಲಿ ರಾಷ್ಟ್ರಸೇವೆಗಾಗಿ ಪೂರ್ಣ ವಿಕಸಿತ ನಾಗರಿಕರನ್ನು ತಯಾರಿಸುವ ಮಾತು ಕೇವಲ ತಾಯ್ತಂದೆಯರ ಕರ್ತವ್ಯದಲ್ಲಿಯೇ ನಿಲ್ಲುವುದಿಲ್ಲ. ಪ್ರಥಮತಃ ಇಂದಿನ ಭಾರತವೆಂದರೇನು, ಮತ್ತದು ಇಡಿ ಜಗತ್ತಿನಿಂದ ಬೇರೆಯಾಗಿ ನಿಲ್ಲಬಹುದೇ ಎಂಬುದನ್ನು ತಿಳಿದು ಕೊಳ್ಳಬೇಕು. ಪರಮಾಣು ಯುಗದಲ್ಲಿ ದೇಶಗಳ ಭೌಗೋಳಿಕ ಸೀಮೆಗಳು ಸಮಾಪ್ತವಾಗಿವೆ. ಇಂದಿನ ಭಾರತೀಯ ನಾಗರಿಕರ ನಿರ್ಮಾಣವನ್ನು ವಸ್ತುತಃ ವಿಶ್ವನಾಗರಿಕರ ರೂಪದಲ್ಲಿ ನಾವು ಮಾಡಬೇಕಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಈ ಕ್ರಾಂತಿಯೋಗಬಲ್ಲದು. ಇಂದು ಯಾವ ವರ್ತನೆಯಿಂದ ವಿಧ್ವಂಸಕಾರೀ ಅಸ್ತ್ರ-ಶಸ್ತ್ರಗಳು ಮಾಡಲ್ಪಡುತ್ತವೆಯೋ ಅನುನಯಗೆ ಪ್ರಪಂಚದಲ್ಲಿ ಬದುಕಲು ನಿರ್ಬಂಧನೆಯನ್ನು ಹಾಕಿಬಿಟ್ಟಿದೆ. ರಾಜಕೀಯ ಕ್ಷೇತ್ರದಲ್ಲಿ ಪಂಚಶೀಲದ ಸಂಶೋಧನೆಯನ್ನು ನಾವು ಮಾಡಿದ್ದೇವೆ. ಆದರೆ ಶಿಕ್ಷಣಕ್ಷೇತ್ರದಲ್ಲಿ ನಮಗಿನ್ನೂ ಪಂಚಶೀಲದ ಸ್ವೀಕರಣ ಮಾಡಬೇಕಾಗಿದೆ.

ಇಂದು ನಮ್ಮಲ್ಲಿ ಹಿಂದೂ, ಕ್ರೈಸ್ತ, ಇಸ್ಲಾಂ ಮತ್ತಿತರ ಧರ್ಮಗಳಿಂದ ಪ್ರ

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದ್ದು; ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿತು)
ಹೆಡ್ ಆಫೀಸು: ಮಂಗಳೂರು, ದ. ಭಾರತ.
ಕೆಳಗಿನ ದರಗಳ ಬಡ್ಡಿಯಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು:
1೦ರಿಂದ 6 ತಿಂಗಳುಗಳ ವ್ಯಾದಿಗೆ .. 4½%
6೦ರಿಂದ 18 ತಿಂಗಳುಗಳ ವ್ಯಾದಿಗೆ .. 4¾%
24 ತಿಂಗಳುಗಳ ವ್ಯಾದಿಗೆ .. 4¾%
ದೊಡ್ಡ ಪ್ರಮಾಣದ ರೇವಣಾತಿಗಳಿಗೆ ಸ್ಪೆಶಲ್ ದರದ ಬಡ್ಡಿ ಕೊಡಲಾಗುವುದು
ಹೆಚ್ಚಿನ ಮಾಹಿತಿಗೆ ಸಮೀಪದ ಯಾವುದಾದರೊಂದು ನಮ್ಮ ಶಾಖೆಯೊಡನೆ ವಿಚಾರಿಸಿರಿ.
THE KARNATAKA BANK LIMITED

ಮಜೂರವರ್ಗದ ಹಿತಚಿಂತನೆ–

ರೈಲ್ವೆನೌಕರರಿಗೆ ಪೆನ್‌ಷನ್ ಸೌಲಭ್ಯ

ಗಂಲಕ್ಷ ಮಂದಿ ರೈಲ್ವೆ ಕೆಲಸಗಾರರಿಗೆ ಪೆನ್‌ಷನ್ ಯೋಜನೆಯನ್ನು ವಿಸ್ತರಿಸಬೇಕೆಂದು ಭಾರತ ಸರಕಾರವು ನಿಶ್ಚಯಿಸಿದೆ. ಪೆನ್‌ಷನ್ ನಿಯಮಗಳನುಸಾರವಾಗಿ ೩೦ ವರ್ಷಗಳವರೆಗೆ ಸೇವೆಸಲ್ಲಿಸಿದ ಅಧವಾ ಉದ್ಯೋಗದಿಂದ ನಿವೃತ್ತರಾದ ಉದ್ಯೋಗಿಗಳಿಗೆ ಮಾಸಿಕ ಪೆನ್‌ಷನ್ ಸಲ್ಲುವ ಉದ್ಯೋಗಿಯು ೧೫ ತಿಂಗಳ ವೇತನದಷ್ಟು ಗ್ರೆಚ್ಯುವಿಟಿ ರೂಪದಲ್ಲಿ ಪೆನ್‌ಷನ್ ನೀಡುವ ಅವಕಾಶವಿರುವುದು.

ಉದ್ಯೋಗದಲ್ಲಿದ್ದಾಗಲೇ ಉದ್ಯೋಗಿಯು ನಿಧನರಾದ ಸಂದರ್ಭದಲ್ಲಿ ಕೆಲವು ಕರ್ತವ್ಯಗಳ ಮೇಲೆ ಉದ್ಯೋಗಿಯ ಕುಟುಂಬಕ್ಕೆ ಇದನ್ನೀಯುವ ಅವಕಾಶವಿರುವುದು. ೫೦ ವರ್ಷ ಸೇವಾನಂತರ ಉದ್ಯೋಗಿಯು ಮೃತಿಹೊಂದಿದರೆ (ಕೆಲವೊಂದು ಸಂದರ್ಭದಲ್ಲಿ ೧೦ ವರ್ಷಾನಂತರ) ಉದ್ಯೋಗಿಗೆ ಸಾಧಾರಣವಾಗಿಕೊಡುವ ಪೆನ್‌ಷನ್ ದರದ ಅರ್ಧದಷ್ಟು ಕುಟುಂಬದವರಿಗೆ ೧೫ ಯಾ ೫ ವರ್ಷ ಪೆನ್‌ಷನ್ ಕೊಡಲಾಗುವುದು ಅದರೆ ಹೀಗೆ ನೀಡುವ ಪೆನ್‌ಷನ್ ತಿಂಗಳಿಗೆ ೧೫೦ ರೂಪಾಯಿಗಳಿಗಿಂತ ಹೆಚ್ಚಾಗಬಾರದು. ಉದ್ಯೋಗಿಯು ೫ ವರ್ಷ ಸೇವೆಸಲ್ಲಿಸಿ ಮರಣಹೊಂದಿದರೆ ಅವನ ಕಾಟುಂಬಿಕರು ಕೇವ್ಯಸಪ್ತ ಒಂದು ವರ್ಷದ ವೇತನವನ್ನು ಗ್ರಾಚುವಿಟಿ ರೂಪದಲ್ಲಿ ಪಡೆಯುವರು.

ಈಗಿರುವ ಪ್ರೊವಿಡೆಂಟ್ ಫಂಡ್ (ಭವಿಷ್ಯ ನಿಧಿ) ಪದ್ಧತಿಯ ಪ್ರಕಾರ ಉದ್ಯೋಗಿಯು ನಿವೃತ್ತರಾದ ಮೇಲೆ ವಿಶ್ರಾಂತಿ ಸೌಖ್ಯವನ್ನೆ ಒಂದೇ ಮೊತ್ತದಲ್ಲಿ ಒಂದೇ ಬಾರಿ ಪಡೆಯುವರು. ಇಂತಹ ಸಂದರ್ಭದಲ್ಲಿ ಕೈಗೆ ಬಂದ ಹಣವು ನಾನಾ ಕಾರಣಗಳಿಂದಾಗಿ ಕರ್ಚಾಗಿ ಹೋಗಿ ಕೌಟುಂಬಿಕರಿಗೆ ದಿಕ್ಕಿಲ್ಲದಂತಾಗುವುದು. ಆದರೆ ಪೆನ್‌ಷನ್ ಯೋಜನೆಯಂತೆ ಪ್ರತಿ ತಿಂಗಳೂ ನಿಯುತ ರೀತಿಯಲ್ಲಿ ಹಣ ಪಾವತಿಯಾಗುವುದಲ್ಲದೆ ಆದರೊಂದಿಗೆ ವಿಶ್ರಾಂತಿ ಗ್ರಾಚುವಿಟಿ ರೂಪದಲ್ಲಿ ಒಂದು ನಿರ್ದಿಷ್ಟ ಮೊತ್ತವೂ ದೊರೆಯುವಂತಾಗುವುದು. ಉದ್ಯೋಗಿಯು ಸೇವೆಯಲ್ಲಿ ನ್ದಂತೆಯೇ ಅಧವಾ ನಿವೃತ್ತರಾದ ತಾರುಣ್ಯದಲ್ಲಿಯೇ ನಿಧನರಾದ ಪಕ್ಷದಲ್ಲಿ ಅವರ ಕುಟುಂಬಕ್ಕೆ ಒಂದು ನಿರ್ದಿಷ್ಟ ಅವಧಿಯ ವರೆಗೆ ಪೆನ್‌ಷನ್ ಪ್ರಾಪ್ತಿಯಾಗುವುದು ಮತ್ತು ಗ್ರಾಚುವಿಟಿಯೂ ದೊರೆಯುವುದು.

ಪ್ರಸ್ತುತವಿರುವ ಪ್ರೊವಿಡೆಂಟ್ ಫಂಡ್ ಪದ್ಧತಿಯು ನೈಯಕ್ತಿಕ ಸಂದರ್ಭಗಳಲ್ಲಿ ಅನುಕೂಲ ಪ್ರದವಾಗಿರುವುದರಿಂದ, ಈಗಾಗಲೇ ಸೇವೆಸಲ್ಲಿಸುತ್ತಿರುವ ಪ್ರತ್ಯುದ್ಯೋಗಿಗೂ ಈಗಿನ ಪ್ರೊವಿಡೆಂಟ್ ಫಂಡ್ ಪದ್ಧತಿಯನ್ನು ಅಧವಾ ಪೆನ್‌ಷನ್ ಯೋಜನೆಯನ್ನ ಅನುಸರಿಸುವ ಇಚ್ಛಾಸ್ವಾತಂತ್ರ್ಯವನ್ನು ನೀಡಲಾಗಿದೆ. ಇನ್ನುಮುಂದೆ ಹೊಸದಾಗಿ ಕೆಲಸಕ್ಕೆ ಸೇರುವವರು ಮಾತ್ರ ಪೆನ್‌ಷನ್ ಯೋಜನೆಗೇನೇ ಒಳಪಡುವರು.

ಈಗಿರುವ ರೈಲ್ವೆ ಉದ್ಯೋಗಿಗಳ ವಿಷಯದಲ್ಲಿ ಅವರ ಕಾಯಂ ಸೇವೆಯಷ್ಟನ್ನೇ ವೇತನಾರ್ಹವೆಂದೂ, ಅವರ ತಾತ್ಕಾಲಿಕ ಸೇವೆಯ ಅವಧಿಯಲ್ಲಿ ಅರ್ಧದಷ್ಟನ್ನು ಪೆನ್‌ಷನ್‌ಗಾಗಿ 'ಅರ್ಹಸೇವೆ'ಯ ಅವಧಿಯೆಂದೂ ಪರಿಗಣಿಸಲಾಗುವುದು. ೧೯೫೦–ಅಗಸ್ಟಲ್ಲಿ ಪ್ರೊವಿಡೆಂಟ್ ಫಂಡಿಗೆ ಸೇರಿಸಿಕೊಳ್ಳಲಾದ ಉದ್ಯೋಗಿಗಳಲ್ಲಿ, ಆದರಲ್ಲಿಯೂ ವಿಶೇಷತಃ ಅನೆಯ ವರ್ಗದ ಉದ್ಯೋಗಿಗಳ ವಿಷಯದಲ್ಲಿ ವಿಶ್ರಾಂತಿ ಸೇವಾ ಸೌಲಭ್ಯಗಳಲ್ಲಿ ಗಮನಾರ್ಹವಾದ ಸುಧಾರಣೆಯನ್ನು ತಂದಂತಾಗುವುದು.

ರೈಲ್ವೆ ಕೆಲಸಗಾರರ ರಾಷ್ಟ್ರೀಯ ಫೆಡರೇಶನ್ನು ಈ ಯೋಜನೆಯನ್ನು ಸ್ವಾಗತಿಸಿ, ತಾನು ಆಗಿಂದಾಗ್ಗೆ ವ್ಯಂಡಿಟ್ಟಿದ್ದ ಬೇಡಿಕೆಗಳಲ್ಲಿ ಒಂದು ಈಡೇರಿತೆಂದು ವ್ಯಕ್ತಭಿಪ್ರಾಯಪಟ್ಟಿದೆ.

೫೦ ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯ ವರೆಗೆ ಸೇವೆ ಸಲ್ಲಿಸುತ್ತಿರುವ ನಾಲ್ಕನೆಯ ವರ್ಗದ ಉದ್ಯೋಗಿಗಳಿಗೆ ೩೦ ವರ್ಷಗಳ ನಂತರದ ಅವಧಿಯಲ್ಲಿ ವರ್ಷಕ್ಕೆ ೫೦೦ ರೂಪಾಯಿಗಳ ಅಧಿಕ ಗ್ರಾಚುವಿಟಿಯನ್ನು ೧೫,೦೦೦ ರೂಪಾಯಿಗಳಿಗೆ ಮೀರದಂತೆ ನೀಡಬೇಕೆಂಬುದಾಗಿ ಪೆನ್‌ಶನ್ ನಿಯಮಗಳಲ್ಲಿ ಮಾರ್ಪಾಡು ಮಾಡಿದೆ. ಈ ಮಾರ್ಪಾಡು ನಾಲ್ಕನೆಯ ದರ್ಜೆಯ ಉದ್ಯೋಗಿಗಳಿಗೆ ನೀಡುವ ವಿಶ್ರಾಂತ ಸೇವಾ ಸೌಲಭ್ಯಗಳಲ್ಲಿ ಗಮನಾರ್ಹವಾದುದಾಗಿದೆ.

ಪೆನ್‌ಶನ್ ಯೋಜನೆಯನ್ನು ಕಾರ್ಯಾಚರಣೆಗೆ ತಂದ ಮೇಲೆಯೂ ರೈಲ್ವೆ ಉದ್ಯೋಗಿಗಳ ಭವಿಷ್ಯ ನಿಧಿಗೆ ಕಡ್ಡಾಯವಾಗಿ ಚಂದಾ ಸಲ್ಲಿಸಬೇಕಾಗುವುದು. ಈ ಕ್ರಮವುದಿಂದ ನಿರ್ಬಂಧನದಿಂದ ದುಳಿಸಿದ ಹಣವು ಉದ್ಯೋಗಿಯು ವಿಶ್ರಾಂತ ಸೌಲಭ್ಯಗಳಿಗೆ ಪೂರಕವಾಗಿರುವುದಲ್ಲದೆ ಉದ್ಯೋಗಿಯು ತೆಗೆದ ಕೊಳ್ಳಬಹುದಾದ ವಿನಾಶ ಪಾಲಿಸಿಗಳ ಕಂತುಗಳನ್ನು ಕಟ್ಟಲಿಕ್ಕೆ ನೆರವಾಗುವುದು.

ಭವಿಷ್ಯನಿಧಿ ವ್ಯವಸ್ಥೆ ಹಾಗೂ ಪೆನ್‌ಷನ್ ವ್ಯವಸ್ಥೆಯ ವೆಚ್ಚದಲ್ಲಿ ಅನೇಕಾಂಶಗಳು ಸೇರಿರುವುದರಿಂದ, ಈ ಪರಿವರ್ತನೆಯಿಂದಾಗಿ ಉಂಟಾಗುವ ಹಣಕಾಸಿನ ತೊಡಕುಗಳನ್ನು ಅಂದಾಜುಮಾಡುವುದು ಸುಲಭವಲ್ಲ. ಬಡ್ತಿಯ ದರ, ವಿಶ್ರಾಂತಿಯನಂತರ ಕೆಲಸಗಾರರು ಜೀವಂತವಾಗಿರುವ ವರ್ಷಗಳು. ಸೇವೆಯಲ್ಲಿದ್ದಾಗ ಸಂಭವಿಸುವ ಅಪಘಟನೆಗಳು, ಮೊದಲಾದ ಅಂಶಗಳೆಲ್ಲಾ ಇದರಲ್ಲಿ ಸೇರಿಕೊಂಡಿರುವುದು ಸರಕಾರದ ಪ್ರಾಮುಖ್ಯ ಕಾರ್ಯಕ್ಷೇತ್ರಗಳಲ್ಲಿ ಒಂದಾದ ರೈಲ್ವೆ ಇಲಾಖೆಯ ನೌಕರರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ದೃಷ್ಟಿಯಿಂದ ಭಾರತ ಸರಕಾರದವರು ಈ ಯೋಜನೆಯನ್ನು ಆಚರಣೆಗೆ ತಂದಿರುವರು.

ಭಾರತೀಯ ರೈಲ್ವೆ ಉದ್ಯೋಗಿಗಳ ರಾಷ್ಟ್ರೀಯ ಫೆಡರೇಶನ್ನು ಕಡ್ಡಾಯವೆದ ವಿವಾಯೋಜನೆಯನ್ನು, ವೇತನದಿಂದ ಹಣ ಹಿಡಿದು ವಿಮೆಗೆ ಕಂತುಕಟ್ಟುವ ವ್ಯವಸ್ಥೆಯನ್ನು ಪೆನ್‌ಷನ್ ಯೋಜನೆಯ ಜೊತೆಗೆ ಸಮಕಾಲದಲ್ಲಿಯೇ ಕಾರ್ಯಗತ ಮಾಡಬೇಕೆಂದು ಸೂಚಿಸಿದ್ದರು

ಹೀಗೆ, ಭಾರತ ಸರಕಾರದ ಈ ಪೆನ್‌ಷನ್ ನೀಡುವ ಧೋರಣೆಯು ೧೯೫೭ರ ಎಪ್ರಿಲ್ ತಿಂಗಳಿಂದ ಆಚರಣೆಗೆ ಬರುವುದು. ರೈಲ್ವೆಯ ಕರ್ಮಚಾರಿಗಳಿಗೆ ಮುಖ್ಯವಾಗಿ ನಾಲ್ಕನೆಯ ವಿಭಾಗದ ಜನರಿಗೆ ಈ ನೂತನ ಯೋಜನೆಯಿಂದಾಗಿ ಅಧಿಕ ಲಾಭವಾಗುವುದು.

ಭಾವಿತವಾದ ಶಿಕ್ಷಣವು ಕೊಡಲ್ಪಡುತ್ತಿದೆ ಇಂತಹ ವಿದ್ಯಾಲಯಗಳಿಂದ ಧರ್ಮಾನುಯಾಯಿ ಮತ್ತು ಮತಾವಲಂಬಿಗಳೇ ತಯಾರಿಸಲ್ಪಡುತ್ತಾರೆ. ಈ ಕಾರಣದಿಂದಲೇ ಈ ದೇಶದಲ್ಲಿ ಸರ್ವೋಚ್ಚ ಶಿಕ್ಷಣವನ್ನು ಪಡೆದ ನಾಗರಿಕರು ಸಹ ವರ್ಗ ವಿದ್ವೇಷ ಮತ್ತು ವರ್ಣವಿದ್ವೇಷಗಳಿಂದ ಪೀಡಿತರಾಗುವ ಮುಂದಾಳುಗಳಾಗಿ ಜನತೆಗೆ ದೊರೆಯುತ್ತಾರೆ ಭಾರತವು ಪರತಂತ್ರವಾಗಿರುವಾಗ ಧಾರ್ಮಿಕ ಸಂಸ್ಥೆಗಳು ಶಿಕ್ಷಣದ ಪ್ರಸಾರವನ್ನು ನಡಿಸಿದುವು. ಆದರೆ, ಈ ಸಂಸ್ಥೆಗಳು ನವೀನ ಭಾರತದ ಆವಶ್ಯಕತೆಗಳಿಗನುರೂಪವಾಗಿ ನಾಗರಿಕರನ್ನು ಸಿದ್ಧಪಡಿಸುವಲ್ಲಿ ಸಫಲಂಗುವರಂ?

—ಯೋಜನಾಧಾರ

ಅಪರಾಧಕ್ಕೆ ತಕ್ಕ ಶಿಕ್ಷೆ

ಅಪರಾಧಿಯೆಂದು ತೀರ್ಪಟ್ಟ ಕೈದಿಯು ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ತಂದು ನಿಲ್ಲಿಸಿದೊಡನೆಯೇ ಹೇಳಿದ: "ಮಾನ್ಯರೆ, ನಾನು ಕುಡಿದಿರಲಿಲ್ಲ; ನಾನು ಕೇವಲ ಕುಡಿಯ ತ್ತಾ ಇದ್ದೆ, ಅಷ್ಟೆ."

"ಹೋ, ಹಾಗಾದರೆ ನಿನ್ನ ಅಪರಾಧ ಬೇರೆ ಯಾಯಿತು. ಈ ಸಂದರ್ಭದಲ್ಲಿ ನಾನು ನಿನ್ನನ್ನು ಒಂದು ತಿಂಗಳಕಾಲ ಸೆರೆಮನೆಗೆ ಅಟ್ಟಬಯಸುವುದಿಲ್ಲ; ಕೇವಲ ಮೂವತ್ತು ದಿನಗಳ ಸುಟ್ಟಗೆ ಮಾತ್ರ"– ನ್ಯಾಯಾಧೀಶರು ಗಂಭೀರರಾಗಿಯೇ ತೀರ್ಪಿತ್ತರು.

ಉಷಾ ಹೊಲಿಗೆ ಯಂತ್ರಗಳು



ನಗದಿಗೆ ಅಧವಾ ಸುಲಭ ಕಂತುಗಳ ಪದ್ಧತಿಯಲ್ಲಿ ಪೂರಾಟಕ್ಕೆ ಸಿಗುತ್ತವೆ.

ಎರಡು ವರ್ಷಗಳ ವರೆಗೆ ಉಚಿತ ದುರಸ್ತಿಯ ಗ್ಯಾರಂಟಿ.

ಪ್ರಮುಖ ಪಟ್ಟಣಗಳಲ್ಲೆಲ್ಲ ಉಷಾ ಏಜಂಟರಿದ್ದಾರೆ.

ಸೋಲ್ ಸೆಲ್ಲಿಂಗ್ ಏಜಂಟರು

ನಿಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್ ಫ್ರೈನೇಟ್ ಲಿಮಿಟೆಡ್,
ಮದ್ರಾಸು–1

ಶ್ರೀ ಶಿವರಾಮ ಕಾರಂತರ
ಅತ್ಯಪೂರ್ವ ಗ್ರಂಥ—

ಯಕ್ಷಗಾನ ಬಯಲಾಟ

ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. 6/-
ವಿ. ಪಿ ಕಳಿಸುವುದಿಲ್ಲ-
ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ರೇವಣಾತಿಗಳ ಮೇಲೆ **ಅತ್ಯಧಿಕ** ಬಡ್ಡಿ ದರಗಳು

ಫಿಕ್ಸ್‌ಡ್ ಡಿಪಾಜಿಟ್‌ಗಳ ಮೇಲೆ ವರ್ಷಕ್ಕೆ **3%** ರಂತೆ

ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ನ ಮೇಲೆ ವರ್ಷಕ್ಕೆ **2½%** ವರೆವಿಗೂ

ಅಲ್ಪಾವಧಿ ಮತ್ತು ನಿರ್ದಿಷ್ಟಕಾಲದ ರೇವಣಾತಿಗಳಿಗೆ
ಅತ್ಯಂತ ಆಕರ್ಷಕ ದರಗಳು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ಬ್ಯಾಂಚಾ ಮ್ಯಾನೇಜರಲ್ಲಿ ವಿಚಾರಿಸಿ.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ ಸೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದಾದುದು.

ಮಕ್ಕಳ ಮಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

NAVAYUGA
Popular Kannada Weekly
Founder:—
A. B. SHETTY,
Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೧-೧೧-೧೯೫೭	೧೧

ಹನುಮಂತನ ಬಾಲ

ದ್ವಿತೀಯ ಮಹಾಯುದ್ಧದಲ್ಲಿ ಉಂಟಾದ ಜನ ಧನ ನೇಶ ಹಾನಿಗಳಿಂದ ನೊಂದು, ಬೆಂದು, ಜಗತ್ತಿನ ರಾಷ್ಟ್ರಗಳು 'ಇನ್ನು ಯುದ್ಧ ಬೇಡ' ಎಂಬ ಅಚಲ ನಿರ್ಧಾರವನ್ನು ಮತ್ತೊಮ್ಮೆ ಮಾಡಿ, ರಾಷ್ಟ್ರರಾಷ್ಟ್ರದೊಳಗಿನ ವೈಮನಸ್ಯವನ್ನು ಶಾಂತಿ ಮತ್ತು ಸಮಾಧಾನಗಳಿಂದಲೇ ಕೀರ್ಮಾನಿಸಿ ಸಾಮಂಜಸ್ಯವನ್ನುಂಟುಮಾಡಬೇಕೆಂದು ಯುಕ್ತ ರಾಷ್ಟ್ರಸಂಘವನ್ನು ಸ್ಥಾಪಿಸಿದವು. ಆ ಸಂಘದ ಭದ್ರತಾಮಂಡಲವು ಎಲ್ಲ ದೇಶಗಳಿಗೂ ತಕ್ಕ ಭದ್ರತೆಯನ್ನಿಡಲು ಯತ್ನಿಸುವುದು. ಯಾವುದೇ ಸದಸ್ಯ ರಾಷ್ಟ್ರದಲ್ಲಿ ಯಾವುದೇ ಸದಸ್ಯ ರಾಷ್ಟ್ರವು ಆಕ್ರಮಣವನ್ನು ಮಾಡಿದರೆ, ಆಗ ಅಂತಹ ಆಕ್ರಮಣವನ್ನು ತಡೆಹಿಡಿದು, ನೆಮ್ಮದಿಯನ್ನು ಕಾಪಾಡುವ ಕರ್ತವ್ಯ ಭದ್ರತಾ ಮಂಡಳದ್ದಾಗಿರುವುದು. ಹತ್ತು ವರ್ಷಗಳ ಹಿಂದೆ, ಭಾರತದೊಂದಿಗೆ ವಿಲೀನವಾಗುವ ಬಯಕೆಯಿಂದಿದ್ದ ಕಾಶ್ಮೀರದ ಮೇಲೆ ಪಾಕಿಸ್ತಾನವು ಆಕ್ರಮಣ ಮಾಡಿದಾಗ, ಶಾಂತ್ಯಪಡೆಯನ್ನು ಬಿಗುವ ಭಾರತವು ಈ ಸ್ವತ್ತನ್ನು ಭದ್ರತಾ ಸಮಿತಿಗೊಯ್ದು ಪಾಕಿಸ್ತಾನವು ಆಕ್ರಮಣ ರಾಷ್ಟ್ರವು, ಅದರ ಆಕ್ರಮಣವನ್ನು ತಡೆಹಿಡಿಯಬೇಕೆಂಬುದಾಗಿ ಪ್ರಾರ್ಥಿಸಿತು. ಆದರೆ, ಆ ಪ್ರಾರ್ಥನೆಯು ಹಿಂದೆ ಇದೀಗ ಹತ್ತು ವರ್ಷಗಳು ಕಳೆಯುತ್ತಾ ಬಂದರೂ ಅಪಸ್ವರ ವೆಬ್ಬಿದೆ. ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಹಿರಿಯಣ್ಣ, ಸಂಪತ್ಸಮೃದ್ಧವಾದ, ಬುದ್ಧಿವಂತವಾದ ಮತ್ತು ಮಾರ್ಗದರ್ಶನ ಮಾಡಬಲ್ಲ ಜನೆಂಕ ಪುತ್ರ ಬ್ರಿಟನ್ ಗೂ, ಈ ಸಮಸ್ಯೆಯನ್ನು ಬೇಗನೇ ಇತ್ಯರ್ಥಗೊಳಿಸಬೇಕೆಂಬ ಪ್ರೋಜನೆಯುಲ್ಲದ್ದಂತೆ ಕಾಣಲಿಲ್ಲ. ಭಾರತದ ಪ್ರಕೃತದ ಪ್ರಧಾನಿಯೇ ಯ ನೀತಿಯಿಂದ ತಮಗೆ ಕೇಪೊಂದು ತೊಡಕುಗಳಿದ್ದಿರುವುದನ್ನು ಮನಗಂಡು, ಅಂತಹ ತೊಡಕುಗಳನ್ನು ಕೊನೆಮುಟ್ಟಿಸಬೇಕಾದರೆ, ಭಾರತದ ವಿದೇಶ ನೀತಿಯು ಬದಲಾಗಬೇಕು. ಆದಕ್ಕಾಗಿ ಭಾರತವನ್ನು ತಮ್ಮಿಂದ ಸಾಧ್ಯವಾದಷ್ಟು ಬಗ್ಗು ಬಡಿಯಬೇಕು ಎಂದಿವೆ. ಆದರೆ, ಸಾರ್ವಜನಿಕ ರಂಗದಲ್ಲಿ ಭಾರತವು ಗಾರವದ ಸ್ಥಾನವನ್ನು ಪಡೆಯುತ್ತಿರುವಾಗ, ತಮ್ಮ ಬೆಂಬಲಿಗ ರಾಷ್ಟ್ರಗಳ ಬಹುಮತದ ಬಲದಿಂದ ಕಾಶ್ಮೀರ ಪ್ರಶ್ನೆಯನ್ನು ಬೇಗನೇ ಮುಗಿಸಗೊಡಬೆ ಅದಷ್ಟು ದಿನ ದಡ ಹುವಂತೆ ಭದ್ರತಾ ಸಮಿತಿಯಲ್ಲಿ ಕಾರ್ಯವೆಸಗುತ್ತಿರುವುದು ಶೋಚನೀಯ. ಹಿಂದೊಮ್ಮೆ ತಾನು ಖಾಕಿ ಸ್ಥಾನವು ಅಕ್ರಮಣ ಮಾಡಿದ ರಾಷ್ಟ್ರವೆಂದೂ, ಅದು ತಾನು ಆಕ್ರಮಿಸಿದ ಕಾಶ್ಮೀರ ಪ್ರದೇಶದಿಂದ ಸೈನ್ಯವನ್ನು ಹಿಂತೆಗೆದುಕೊಂಡ ನಂತರವೇ ಮತಗಣನೆಗವಕಾಶವೆಂದೂ ಹೇಳಿ, ಆ ಗೊತ್ತುವಳಿಯನ್ನು ಮುನ್ನಡೆದ ಕೇವಲ ರಾಯಭಾರಿಗಳ ನ್ನಷ್ಟುವ ಕಾರ್ಯದಲ್ಲಿಯೇ ಹೊರಳಾಡಿಕೊಂಡು, ಈ ಕಾಶ್ಮೀರ ಪ್ರಶ್ನೆಯನ್ನು ಆದಷ್ಟು ಸಮಯ ಮುಂದುವರಿಯಗೊಡುವ ಇರಾದೆ ಅವರಲ್ಲಿದ್ದಂತೆ ಕಾಣುತ್ತದೆ. ಒಮ್ಮೆ ಪ್ರಥಮದಲ್ಲಿ ಶ್ರೀ ಗ್ರಹಾಮರನ್ನು ಮತ್ತೆ ಈ ವರ್ಷದಾದಿಯಲ್ಲಿ ಶ್ರೀ ಗುನ್ನಾರ್ ಯಾರಿಂಗರನ್ನು ಭಾರತ ಮತ್ತು ಪಾಕಿಸ್ತಾನಗಳಿಗೆ ಕಳಿಸಿದ ಭದ್ರತಾ ಸಮಿತಿಯು ಪುನಃ ಗ್ರಹಾಮರನ್ನು ಆಟ್ಟಲು ನಿರ್ಧಾರಕ್ಕೆ ಬರುವಂತಿದೆ. ಪಾಕಿಸ್ತಾನವು ತಿಸಾಕಾಕ್ರಮಿಸಿದ ಅಜಾದ ಕಾಶ್ಮೀರಕ್ಕೆ: ಆ ಹೆಸರಿದ್ದರೂ, ಅಲ್ಲಿನ ಜನರನ್ನು ಸ್ವಾತಂತ್ರ್ಯದಿಂದ ಕಸಿದುಕೊಳ್ಳಲಾಗುತ್ತಿದೆ. ಪ್ರಜಾಪ್ರಭುತ್ವವೆಂಬ ನಾಮಫಲಕವನ್ನಿಟ್ಟು ಕೊಂಡಿದ್ದರೂ, ಅಲ್ಲಿನ ಅಧ್ಯಕ್ಷನನ್ನು ಪಾಕಿಸ್ತಾನ ಸರಕಾರದ ಕಾಶ್ಮೀರ ಸಂಬಂಧಿ ಮಂತ್ರಿಯು ನೇಮಿಸುವ ಸರ್ವಾಧಿಕಾರವನ್ನು ಪಡೆದಿದ್ದಾನೆ. ಪಾಕಿಸ್ತಾನವು ಅಲ್ಲಿಯ ಜನರ ಹಿತರಕ್ಷಣೆಯನ್ನು ಎಳ್ಳನಿತೂ ನೋಡುತ್ತಿಲ್ಲ ಎಂಬ ವದಂತಿಗಳನ್ನು ನೋಡಿದರೆ, ಮನೆಯಾಳಾರದವನ್ನು ರಾಜ್ಯವಾಳಿಯಾನೆ? ಎನ್ನಬೇಕು. ತನ್ನ ಸ್ವದೇಶದಲ್ಲಿ ಒಂದು ಸ್ಥಿರ ಸರಕಾರವನ್ನು ಏರ್ಪಡಿಸಿ ಪ್ರಜಾಪ್ರಭುತ್ವರಾಷ್ಟ್ರವೆಂದು ಘೋಷಿಸಿ ವರ್ಷಗಳು ಉರುಳುತ್ತಾ ಬಂದರೂ ಬಂದು ಸಾರ್ವಜನಿಕ ಜನಾವಣೆಯನ್ನು ನಡೆಸಲಾರದ ಪಾಕಿಸ್ತಾನ ಮತ್ತೊಬ್ಬನು ಆಕ್ರಮಣ ಮಾಡಿತ ? ಕಾಶ್ಮೀರವುಭಾರತದ ಅವಿಭಾಜ್ಯ ಅಂಗವಾಗಿದೆ. ಕಾಶ್ಮೀರಿಗಳು ಭಾರತದೊಡನೆಯೇ ವಿಲೀನವೊಂದಲು ಇಚ್ಚಿಸಿದ್ದಿದ್ದರು. ತಾವು ಪ್ರಜಾಸತ್ತಾತ್ಮಕ ರೀತಿಯಲ್ಲಿ ತಯಾರಿಸಿದ ಘಟನೆಗಳುಲ್ಲಿ ಈ ಇಂಗಿತದ ಶಾಶ್ವತ ಮುದ್ರೆಯನ್ನೊತ್ತಿರುವರು ಹತ್ತು ವರ್ಷಗಳೆಯದೆಸಿದ ಈ ಪ್ರಶ್ನೆಯನ್ನು ಈಗಿನ ಕಾಲ ಮಾನಕ್ಕನುಗುಣವಾಗಿ ನೋಡಿದರೆ, ಅದನ್ನು ಕೇರುವ ಅಧಿಕಾರವು ಪಾಕಿಸ್ತಾನಕ್ಕಿಲ್ಲ. ಕಾಶ್ಮೀರಿಗಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಂಡಿರುವಾಗ, ಆ ಪರಿಧಿಯಲ್ಲಿ ಬೇರೆಯವರ ಹಸ್ತಕ್ಷೇಪಕ್ಕೆ ಅವಕಾಶವೆಲ್ಲಿ? ಕಳೆದಿಷ್ಟು ವರ್ಷಗಳಿಂದ ಭಾರತವು ಸಮಾಧಾನದಿಂದ ತಾಳ್ಮೆಯಿಂದ ಭದ್ರತಾಸಮಿತಿಯು ನ್ಯಾಯದಾನವಾಡುವುದೆಂಬ ಭರವಸೆಯಿಂದ ಬಾಯಲ್ಲಿ ಅಕ್ಕೈಕಾಳು ಹಾಕಿಕೊಂಡು ಕಣ್ಣಲ್ಲಿ ಎಣ್ಣೆ ಹೆಯ್ದುಕೊಂಡು ಕಾದ ನೋಡುತ್ತಿದೆ. ಆದರೆ, ಅದರ ಆಶೆ ಫಲಿಸುವ ಸೂಚನೆಗಳಿಲ್ಲವೆ, ದಿನದೊಡುತ ಸಂಭವನೀಯ ಹೆಚ್ಚತೊಡಗಿದೆ. ಭದ್ರತಾಮಂಡಳದಲ್ಲಿಯೂ ಕೆಲವೊಂದು ಪಂಗಡಗಳು ಹುಟ್ಟಿಕೊಂಡು, ಪಾಕಿಸ್ತಾನವು ತಮ್ಮ ಬಾಲಬಡಿಕ ರಾಷ್ಟ್ರವಾಗಿರುವುದರಿಂದ, ಅದರ ಸಂಪೂರ್ಣ ಲಂಭವನ್ನು ತಾನೇ ಪಡೆದುಕೊಳ್ಳಬೇಕೆಂಬ ಸ್ವಾರ್ಥದಿಂದ, ಭಾರತದ ನ್ಯಾಯವಾದ ಅಧಿಕಾರವನ್ನು ಇಲ್ಲವೆನ್ನಲಾಗದೆ, ಹೊತ್ತನ್ನು ಕೊಂದು ಹುಸಿಯತೊಡಗಿವೆ. ಇಂತಹ ಘಾತುಕ ಮನೋವೃತ್ತಿ ಪಾಕಿಸ್ತಾನಕ್ಕೆ ಇರುವುದು ಸಹಜ ಮತ್ತು ಸಹನೀಯ. ಆದರೆ, ತಿಳುವಳಿಕೆಯುಳ್ಳ ಅಗ್ರಗಣ್ಯ ರಾಷ್ಟ್ರಗಳೇ ಈ ತಪ್ಪನ್ನು ಮಾಡುವಾಗ, ಅದನ್ನು ಆ ವಿವೇಕದ ಪಂಮಾವಧಿಯೆನ್ನದೆ ಗತ್ಯಂತರವಿಲ್ಲ. ಭಾರತದ ಅಪೇಕ್ಷೆಗೆ ವಿರುದ್ಧವಾಗಿ ಭಾರತಕ್ಕೆ ಕಾಶ್ಮೀರ ಪರಿಸ್ಥಿತಿಯನ್ನರ್ಥೈಸಲು ಬಂದ ಗುನ್ನಾರ್ ಯಾರಿಂಗರಂ ವರದಿಯಿಂದ ಯಾವ ನಿರ್ಧಾರಕ್ಕೂ ಬರಲಾಗದ ಭದ್ರತಾ ಮಂಡಲವು ಇನ್ನು ಗ್ರೆಹಾಮರನ್ನು ರಾಯಭಾರಕ್ಕೆ ಕಳಿಸಿ ಆಗುವ ತಮಾಷೆಯೊಂದನ್ನು ನೋಡಲಿದೆ ಭಾರತಕ್ಕೆ ಇದು ಅನಪೇಕ್ಷಿತವಾಗಿದ್ದರೂ, ಬಹುಮತದ ಬಲದಿಂದ ಈ ಗೊತ್ತುವಳಿಯು ಸ್ವೀಕಾರವಾಗುವುದರಲ್ಲಿ ಸಂದೇಹವಿಲ್ಲ. ಮತ್ತು ಭಾರತದ ಅತ್ಯಬಲವಿದಿರು ಗ್ರೆಹಾಮರ ಯಾವ ಬೇಕೆಯೂ ಬೇಯುವಂತಿಲ್ಲ. ಅಂತೂ ಯುಕ್ತ ಗಾನ ಬಯಲಾಟದಲ್ಲಿ ವಿದೂಷಕನ ಪಾತ್ರದಂತೆ ಗ್ರೆಹಾಮರು ಬರುತ್ತಾರೆ, ಹೋಗುತ್ತಾರೆ ಯಾವ ನಿರ್ಧಾರವೂ ಆಗುವುದಿಲ್ಲ. ಆದರೆ ನಮ್ಮ ಹನುಮಂತನ ಬಾಲದಂತೆ ಬೆಳೆಯುತ್ತದಂತೆ. ಇದಂತೂ ಸತ್ಯ ಆದರೂ ಪಾಶ್ಚಾತ್ಯ ರಾಷ್ಟ್ರಗಳು ಇದನ್ನು ತಿಳಿತಿಳಿದೂ ಇದೇಕೆ ಆಟವಾಡುವರಿಂಬುದೇ ಆಶ್ಚರ್ಯಕರವಾದ ಸಂಗತಿಯಾಗಿದೆ. ಇನ್ನಾದರೂ ಇವರು ನ್ಯಾಯ ಪಕ್ಷಪಾತಿಗಳಾಗಿ ವರ್ತಿಸುವಂತೆ ಸರ್ವೇರಣಾಭಿಲಾಷಿಯಾಗಲಿ ಯುಕ್ತ ರಾಷ್ಟ್ರ ಸಂಘಕ್ಕೆ ಅಣ್ಣ ಜನತಾಂಗ ಸಂಘದ ಶೋಚನೀಯ ಅಧಮೈತ್ಯ ಬಂದೊದಗದಿರಲಿ.

ಮಹತ್ವದ ಸುದ್ದಿಗಳು

ಭೂಸುಧಾರಣಾ ವಿಧೇಯಕಕ್ಕೆ ವಿಲಂಬ

ಮೈಸೂರು ರಾಜ್ಯದಲ್ಲಿ ವಿಕರೀತಿಯ ಭೂಸುಧಾರಣೆಯನ್ನು ಕೈಗೊಳ್ಳಲು ಜತ್ತಿ ಸಮಿತಿಯು ವರದಿಯನ್ನು ಪರಿಶೀಲಿಸಿ, ಶಾಸನ ಸಭೆಯ ಮುಂದಿಡಲಿರುವ ವಿಧೇಯಕವು ಸದ್ಯ ಬರುವುದಿಲ್ಲವೆಂದು ನಂಬಲಾಗಿದೆ. ದಶಂಬರ ತಿಂಗಳಲ್ಲಿ ನೇರಬೇಕಾಗಿದ್ದ ಶಾಸನ ಸಭೆಯು ಜನವರಿಯಲ್ಲಿ ನೇರುವ ನಿರೀಕ್ಷೆಯಿದೆ. ಅದರಲ್ಲಿ ಮಾರಾಟಕರ ತಿದ್ದುಪಡಿ ವಿಧೇಯಕ, ನಿಯಮಾವಳಿ ಸಮಿತಿಯ ವರದಿ ಮೊದಲಾದ ಅಧಿಕ ಪ್ರಾಮುಖ್ಯದ ವಿಚಾರಗಳನ್ನು ಚರ್ಚಿಸಲಿದ್ದು ಅದರಲ್ಲಿ ಜತ್ತಿ ಸಮಿತಿಯ ವರದಿಯು ಬರುವ ಸಂಭವವಿಲ್ಲ. ಫೆಬ್ರವರಿಯಲ್ಲಿ ಮುಂಗಡಪತ್ರದ ಚರ್ಚೆಯೇ ಸಾಕಷ್ಟಿರುವುದು ಅಲ್ಲದೆ, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಈ ವರದಿಗೆ ವಿರೋಧವನ್ನು ಸೂಚಿಸಿದಂತೆ ಕಂಡುಬರುತ್ತದೆ. ಒಟ್ಟಿನಲ್ಲಿ ಈ ಬಗ್ಗೆ ಒಂದು ನಿಶ್ಚಿತ ಘೋಷಣೆಯನ್ನು ಅನುಸರಿಸಿ, ಮುಂದೆ ಒಂದು ವಿಧೇಯಕವನ್ನು ತರಲು ಬೇಗನೇ ಸಾಧ್ಯವಾಗಲಾರದೆಂಬುದಂತೂ ನಿಶ್ಚಿತವಾಗಿ ತಿಳಿದುಬಂದಿದೆ.

ವಸತಿ ಶಾಖಾ ಮಂತ್ರಿ ಸಮ್ಮೇಳನ

ನವಂಬರ ತಿಂಗಳ ಪ್ರಥಮ ವಾರದಲ್ಲಿ ವಸತಿ ಶಾಖಾ ಮಂತ್ರಿ ಸಮ್ಮೇಳನವು ಮೈಸೂರಿನಲ್ಲಿ ಮುಕ್ತಾಯಗೊಂಡಿತು. ಭಾರತ ಸರಕಾರದವರು ರೂಪಿಸಿರುವ ಗ್ರಾಮಾಂತರ ವಸತಿ ನಿರ್ಮಾಣ ಸಂಬಂಧವಾದ ಯೋಜನೆಗಳಿಗೆ ಸಮ್ಮೇಳನತ್ರ ಹೆಚ್ಚು ಮಹತ್ವವಿತ್ತು. ಕೆಲವು ತಿದ್ದುಪಡಿಗಳೊಂದಿಗೆ ಬೆಂಬಲವಿತ್ತಿತು. ಖಾಸಗಿ ಕಾರ್ಯಕ್ಷೇತ್ರ ಹಾಗೂ ಬೇಂಕುಗಳು, ಬಂಡವಾಳ ತೊಡಗಿಸುವ ಸಂಸ್ಥೆಗಳು ಮತ್ತು ಹಣಕಾಸಿನ ಸಂಸ್ಥೆಗಳಿಂದ ಪಡೆಯಲಾದ ಹಣವನ್ನು ಹಾಗೂ ಜೀವ ವಿಮಾ ಕಾರ್ಪೋರೇಶನ್ ಮತ್ತು ಉದ್ಯೋಗಿಗಳ ಭವಿಷ್ಯನಿಧಿ ಲೆಕ್ಕ ಮುಂತಾದುವುಗಳಿಂದ ಪಡೆಯಲಾದ ಹಣವನ್ನು ವಸತಿನಿರ್ಮಾಣಕ್ಕಾಗಿ ವಿನಿಯೋಗಿಸುವುದಕ್ಕಾಗಿ ಎಲ್ಲ ರಾಜ್ಯಗಳಲ್ಲಿಯೂ ವಸತಿ ನಿರ್ಮಾಣ ಕಾರ್ಪೋರೇಶನ್‌ಗಳನ್ನು ಸ್ಥಾಪಿಸಬೇಕೆಂದು ಈ ಸಮ್ಮೇಳನವು ಶಿಫಾರಸುಮಾಡಿದೆ. ಇದಕ್ಕೆ ಬೇಕಾದ ಶಾಸನವನ್ನು ಮಾಡುವಂತೆ ಭಾರತ ಸರಕಾರವನ್ನು ವಿನಂತಿಸಿದೆ.

ಆಹಾರದ ಕೊರತೆಗೆ ಪರಿಹಾರ

ಭತ್ತದ ಸೊಸಾಯಿಟಿ, ಮಿಲ್‌ಗಳ ಒಡೆಯರು, ವರ್ತಕರು ಮೊದಲಾದವರಿಂದ ಮೈಸೂರು ಸರಕಾರವು ಭತ್ತದ ಎತ್ತುವಳಿ ಕೆಲಸವನ್ನು ತೀವ್ರವಾಗಿ ಕೈಗೊಳ್ಳದೆ; ರಾಜ್ಯದ ಕೊಂತೆಯ ಪ್ರದೇಶ ಮತ್ತು ಪ್ರಮುಖ ನಗರಗಳಲ್ಲಿ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವ ಸಲುವಾಗಿ ಈ ಕಾರ್ಯವು ಕೈಗೊಳ್ಳಲ್ಪಟ್ಟು, ಈಗಿರುವ ಆಹಾರ ಸಮಸ್ಯೆಯನ್ನು ತಡೆಗಟ್ಟಲು ಪ್ರಯತ್ನಿಸಲಿದೆ ಎಂದೂ ಯಾವ ಸಂದರ್ಭದಲ್ಲೇ ಆಗಲಿ, ಬೆಲೆಯೇರದಂತೆ ನೋಡಿಕೊಳ್ಳುವುದಾಗಿಯೂ ರಾಜ್ಯ ಆಹಾರ ಮತ್ತು ಕಂದಾಯ ಮಂತ್ರಿ ಶ್ರೀ. ಎಂ. ಪಿ. ಪಾಟೀಲರು ಶ್ರುತಪಡಿಸಿದ್ದಾರೆ. ದಕ್ಷಿಣ ವಲಯವನ್ನು ಸ್ಥಾಪಿಸಿದುದರಿಂದ ಯಾವ ಪ್ರಯೋಜನವೂ ಮೈಸೂರಿಗೆ ಲಭಿಸಿಲ್ಲವೆಂದವರು ತಿಳಿಸಿ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಂದ ಕೇರಳಕ್ಕೆ ಹೋಗುವ ಹೇರಳ ಅಕ್ಕಿಯನ್ನು ತಡೆಹಿಡಿಯುವ ಅಧಿಕಾರವನ್ನು ತಮಗಿರಬೇಕೆಂದು ಮೈಸೂರು ಸರಕಾರವು ಕೇಂದ್ರ ಸರಕಾರದೊಡನೆ ಕೇಳಿಕೊಂಡಿದೆಯಾದರೂ ಇದುವರೆಗೆ ಯಾವ ಉತ್ತರವೂ ಬಂದಿಲ್ಲವೆಂದವರು ತಿಳಿಸಿದರು.

ಅನ್ನ ಜೆಲ್ಲಬೇಡಿರಿ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ದೇಶದಲ್ಲಿ ಹೆಚ್ಚು ಕುಗಾಲು ಮಾಡುತ್ತಿರುವ ಆಹಾರದ ಕೊರತೆಯನ್ನು ಪಡೆಹಿಡಿಯಲು ಕೆಲವು ಕಾರ್ಯಕ್ರಮಗಳನ್ನು ಸ್ವೀಕರಿಸಿದೆ. ಈಗ ಇರುವ ಕೊರತೆಯು ನೇಕಡಾ ಹತ್ತರಷ್ಟಿದ್ದು, ಅದನ್ನು ಆಂಶತಃ ಪರದೇಶಗಳಿಂದ ನಿರ್ಯಾತಗೊಳಿಸುವುದೆಂದ ಪಡೆಯಬಹುದಾದರೂ, ಉಳಿದುದನ್ನು ಆಧಿಕ ಉತ್ಪಾದನೆ, ಮತ್ತು ಮದುವೆ ಮುಂಜಿ ಇತ್ಯಾದಿ ಸಮಾರಂಭಗಳಲ್ಲಿ ವೃಥಾ ಹಾಳಾಗುವುದನ್ನು ತಡೆಹಿಡಿಯುವುದು— ಮೊದಲಾದ ಕಾರ್ಯಕ್ರಮಗಳಿಂದಲೇ ಹೋಗಲಾಡಿಸಬೇಕಾಗಿದೆ ಎಂದು ಸಮಿತಿಯು ಜನತೆಗೆ ತಿಳಿಸಿದೆ.

ಕಾರವಾರಕ್ಕೆ ಬೆಂಬಲವಿಲ್ಲ?

ಭಾರತದಲ್ಲಿ ಎರಡನೆಯ ನೌಕಾಂಗಣವನ್ನು ಸ್ಥಾಪಿಸಲು ರಾಜ್ಯಸರಕಾರಗಳು ಶಿಫಾರಸುಮಾಡಿರುವ ಸ್ಥಳಗಳಲ್ಲಿ ಇದುವರೆಗೆ ಕಾರವಾರಕ್ಕೆ ಆಕೆಯಿದ್ದರೂ ಈ ದೀಗ ನಿರ್ಣಯವಾಗಿ ಪ್ರಯತ್ನಮಾಡಿದೆಂತಿದೆ. ಟ್ರಿಂಬೇ ದ್ವೀಪದಲ್ಲಿ ಎಣ್ಣೆ

ಕ್ರಮಬದ್ಧೀಕರಣವ ಕಾರ್ಖಾನೆಯನ್ನು ಸ್ಥಾಪಿಸಲಾಗುವುದು ಮತ್ತು ಅದರಿಂದ ನೌಕಾಕಾರ್ಮಿಕರಿಗೆ ಉಪಕಾರವಾಗುವುದು. ಹಡಗು ನಿರ್ಮಾಣ ಕೇಂದ್ರವಾಗಲು ಕ್ವೆಸ್ಸ ದಲ್ಲೇ ವಿದ್ಯುಚ್ಛಕ್ತಿ, ನೀರು ಮತ್ತು ಚದುರ ಕೆಲಸಗಾರರು ದೊರೆಯುವ ಸೌಕರ್ಯವಿರುವ ನೈಸರ್ಗಿಕ ಅನುಕೂಲತೆಗಳಿದ ಕೂಡಿದ ಸ್ಥಳವಾಗಬೇಕು. ಆಗ, ಕಾರವಾರಕ್ಕೆ ಪ್ರತಿಸ್ಪರ್ಧಿಯಾಗಿ ನಿಲ್ಲಲು ಸಶಕ್ತವಾದ ಸ್ಥಳವೆಂದರೆ, ಕೇವಲ ಟ್ರಾಂಬೇ ಮಾತ್ರ. ಹೀಗಾಗಿ, ಸಾಧ್ಯತೆಗಳ ಕಾರವಂರದ ಭವಿಷ್ಯವು ಫಲಪ್ರದವಾಗುವ ನಿರೀಕ್ಷೆ ಕಡಿಮೆಯೆಂದೇ ಹೇಳಬೇಕಾಗಿ ಬಂದಿದೆ.

ಉದ್ರೇಕದ ಪರಮಾವಧಿ

ಅಮೆರಿಕನರು ರಶ್ಯವು ಆಕಾಶದಲ್ಲಿ ತೇಲಬಿಟ್ಟ ಉಪಗ್ರಹವನ್ನು ಭೂಮಿಗೆ ಉರುಳಿಸಬೇಕು. ಅವರು ಹಾರಿಸಿದರೆ, ನಾವು ಉರುಳಿಸಬಲ್ಲೆವೆಂಬುದನ್ನವರಿಗೆ ತೋರಿಸಿಕೊಡಬೇಕೆಂಬುದಾಗಿ ಸಿನೇಟರ್ ಜಾನ್ ಮಾರ್ಶಲ ಬಟ್ಲರರು ಆಕಾಶವಾಣಿ ಸಂದರ್ಶನವೊಂದರಲ್ಲಿ ಹೇಳಿದರು. ಆದರೆ, ಅದನ್ನು ಹೇಗೆ ಮತ್ತು ಯಾಕೆ ಉರುಳಿಸಬೇಕೆಂಬುದನ್ನು ಮಾತ್ರ ತಿಳಿಸಲು ಅವರು ಅಶಕ್ತರಾದಂತೆ ಕಂಡು ಬರುತ್ತದೆ.

ವೃತ್ತಿ ಶಿಕ್ಷಣ ಕೇಂದ್ರಗಳು

ಮಂಗಳೂರು, ಬೆಳಗಾಂವಿ, ಕಲಬರ್ಗಿ, ಮೈಸೂರು ಮತ್ತು ಬೆಂಗಳೂರು– ಈ ಐದು ನಗರಗಳಲ್ಲಿ ಮಾದರಿ ಬಡಗಿತನ ಮತ್ತು ಕರ್ಮಾರಿಕೆಯ ಶಿಕ್ಷಣ ಕೇಂದ್ರಗಳನ್ನು ತೆಗೆಯುವ ನಿರ್ಧಾರವನ್ನು ಮೈಸೂರು ಸರಕಾರವು ಮಾಡಿರುವುದೆಂದು ತಿಳಿದು ಬಂದಿದೆ. ಇದಕ್ಕಾಗಿ ಈಗಾಗಲೇ ಒಂದು ಲಕ್ಷ ರೂಪಾಯಿಗಳನ್ನು ರಾಜ್ಯ ಸರಕಾರವು ಮಂಜೂರುಮಾಡಿರುವುದೆಂದೂ ಇನ್ನೊಂದು ಲಕ್ಷ ರೂಪಾಯಿಗಳನ್ನು ಸಧ್ಯದೇ ಮಂಜೂರುಮಾಡುವ ನಿರೀಕ್ಷೆಯಿದೆಯೆಂದೂ ತಿಳಿದುಬಂದಿದೆ.

ಅಜಾದ ಕಾಶ್ಮೀರದ ದುರವಸ್ಥೆ

ಪಾಕ ಆಕ್ರಮಿತ ಕಾಶ್ಮೀರದ ಪ್ರದೇಶದ ಹಿಂದಿನ ಉಧ್ಯಕ್ಷ ಆಲಿ ಅಹಮ್ಮದ ಶಹಾರವರು ಅಜಾದ ಕಾಶ್ಮೀರದ್ದೊರೆವ ಸದ್ಯದ ಪ್ರಜಾಪ್ರಭುತ್ವವಿರೋಧಿ ಆಡಳಿತವನ್ನು ಕೊನೆಗಾಣಿಸುವುದಕ್ಕಾಗಿ ಒಂದು ಘಟನಾಸಮಿತಿಯನ್ನು ಕೂಡಲೇ ರಚಿಸಬೇಕೆಂದು ಹೇಳಿದ್ದಾರೆ. ಇಲ್ಲಿರುವಂತಹ ಸರಕಾರ ಜಗತ್ತಿನಲ್ಲಿ ಬೇರಾವ ಸ್ಥಳದಲ್ಲಿಯೂ ಇಲ್ಲವೆಂದು ಪ್ರಜಾಪ್ರಭುತ್ವವೆಂದು ಕರೆಯಲ್ಪಡುತಿದ್ದಾರಿೂ ಪಾಕ್ ಸರಕಾರದ ಕಾಶ್ಮೀರ ವ್ಯವಹಾರ ಶಾಖೆಯ ಮಂತ್ರಿಯಿಂದ ಇದರ ಅಧ್ಯಕ್ಷನನ್ನು ನಾವು ಕರಣಮಾಡಲ್ಪಡುತ್ತಾನೆ ಎಂದವರು ದೂರಿರುವರು. ಹಾಗೆಯೇ ಒಂದು ಪತ್ರಿಕೆಯು ೧೯೫೨ರಿಂದ ಇದುವರೆಗೆ ಈ ಪ್ರದೇಶದಿಂದ ಒಬ್ಬನೇ ಒಬ್ಬನನ್ನು ಪಾಕ್ ಸರಕಾರವು ಕೆಲಸಕ್ಕೆ ನೇಮಿಸಿಲ್ಲ ಎಂದು ಪ್ರಸಿದ್ಧಿಸಿದೆ.

ಅಮೆರಿಕೆಯಿಂದ ಸಹಾಯ

ಅಮೆರಿಕ, ಬ್ರಿಟನ್, ಕೆನಡ, ಫ್ರಾನ್ಸ್ ಮತ್ತು ಸಚ್ಚಿದಾ ಜರ್ಮನಿಗಳನ್ನು ಸಿಂದಶಿಸಿ ಮರಳಿರುತ ಭಾರತದ ಉದ್ಯಮ ನಿಯೋಗದ ನಾಯಕ ಶ್ರೀ ಬಿರ್ಲಾರವರು ಅಮೆರಿಕೆಯು ಭಾರತಕ್ಕೆ ನೆರವೀಯುವುದರಲ್ಲಿ ಸಂದೇಹವಿಲ್ಲವೆಂದೂ, ಸಾಮಾನ್ಯವಾಗಿ ಅತಿ ಕಡಿಮೆಯೆಂದರೆ ಅದು ೫೦೦ ಕೋಟಿ ಡಾಲರ್‌ಗಳಷ್ಟನ್ನು ನೀಡುವ ಭರವಸೆ ನನಗಿದೆಯೆಂದೂ ತಿಳಿಸಿದರು. ಭಾರತದ ಬಗ್ಗೆ ಪಾರ್ಶ್ವಾತ್ಯ ರಾಷ್ಟ್ರಗಳಲ್ಲಿ ಎಂದು ಕೊಂಡಿದ್ದ ತಪ್ಪಭಿಪ್ರಾಯವನ್ನು ತಾವು ಹೋಗಲ ಡಿಸಿರುವುದಾಗಿಯೂ ಭಾರತದಲ್ಲಿ ಹಣ ತೊಡಗಿಸಲು ಅಮೆರಿಕೆಯ ಉದ್ಯಮಿಗಳ- ಉತ್ಸಾಹಿಗರಾಗಿರುವರೆಂದೂ ಅವರು ಹೇಳಿದರು. ಈ ಸಾಲಕ್ಕೆ ಸೇಕಡಾ ೩ ದರ ಬಡ್ಡಿಯನ್ನು ವಿಧಿಸಿ ೧೫ ವರ್ಷಗಳ ಅವಧಿಯಿರುವುದು.

ಉಡುಪಿ

ಮುನಿಸಿಪಲ್ ನೌಕರರ ಮನವಿ–

ಉಡುಪಿ ಮುನಿಸಿಪಲ್ ಕೌನ್ಸಿಲಿನ ನೌಕರರ ಸಂಘದ ವಾರ್ಷಿಕ ಚಟುವಟಿಕೆಯಿಂದ ಕಳೆದ ಸಭೆಯಲ್ಲಿ ಸಂಸ್ಥೆಗಳ ನೌಕರರಿಗೆ ಕೂಡಾ ಕೇಂದ್ರ ಸರಕಾರದ ಸ್ಟೇಟ್ ಸರಕಾರದ, ಲ್ಯಾಭ್ ಇನ್ಯೂರೆನ್ಸ್ ಕೋಆಪರೇಶನಿನ, ತಿಮ್ಮೋಲ್ಡ್ ಬೇಂಕಿಂಗಗಳ, ಟ್ರಾವಲು ಇಲಾಖೆಯ ಕೆಳ ನೌಕರರಿಗೆ ದೊರೆಯುವಷ್ಟು ಕೂಡಾ ಸಂಬಳ ಮತ್ತು ತುಟ್ಟಿ ಭತ್ತೆ ದೊರೆಯುತ್ತಿಲ್ಲವಾದುದರಿಂದ ಈಗಿರುವ ವೇತನ ಮತ್ತು ತುಟ್ಟಿ ಭತ್ತೆ ಪ್ರಮಾಣವನ್ನು ಕೇಂದ್ರ ನೌಕರರ ಸಂಬಟ್ಟಿಕ್ಕೆ ತರಬೇಕೆಂದು ಪೇ ಕಮಿಶನಿಗೆ ಮನವಿಯೊಂದು ಕಳುಹಲಾಗಿದೆ. ಜೀವನ ಸಂಬಟ್ಟವರಿದುದರಿಂದಲೂ ಸ್ಥಳಿಯಾಡಳಿತ ನೌಕರರು ನಿರ್ವಾಹಕರಿರುವುದರಿಂದಲೂ ಕೇಂದ್ರ ಸರಕಾರವು ಈ ನೌಕರರ ಕಡೆಗೆ ಸಾಕ ಕೊಟ್ಟು ಅವರಿಲ್ಲಿರುವ ಅಶಾಂತಿಯನ್ನು ಹೋಗಲಾಡಿಸಬೇಕೆಂದು ಕೂಡಾ ಕೇಳಿಕೊಳ್ಳಲಾಗಿದೆ.

ಕೃಷ್ಣಾಂಜಲಿ:–ತಾ ೧೫ರಲ್ಲು ಶಿವಳ್ಳಿ ಗ್ರಾಮದ ಕುಂಜಿಬೆಟ್ಟಿನಲ್ಲಿರುವ ಕೂಕ್ಕ ಸೆಟ್ಟಿಯವರು ತನ್ನ ಗದ್ದಿಗೆ ಕೆಲಸಕ್ಕಾಗಿ ತೆರೆದಾಣಿಗೆ ವಿದ್ಯುಚ್ಛಕ್ತಿ ಪ್ರಸರಣದಿಂದಾಗಿ ಆಕಾಲ ಮೃತ್ಯುಗೀಡಾದುದರಿ ಬಗ್ಗೆ ಕಾಜಿಬೆಟ್ಟು ಕಮ್ಯೂನಿಸ್ಟ್ ಪಾರ್ಟಿ ಶಾಖೆಯು ತನ್ನ ಹುಬಸ್ಸನ್ನು ವ್ಯಕ್ತಪಡಿಸುತ್ತದೆ. ಶ್ರೀ ಸೆಟ್ಟಿರವರ ಅಕಾಲ ಮರಣವು ತಾ. ೧೪ ರಲ್ಲು ಹೊಸತಾಗಿ ಹಾಕಿದ್ದ ವಿದ್ಯುಚ್ಛಕ್ತಿ ಕಂಬದಿಂದ ಕಂಪನಿಯವರ ಅಜಾಗ ತೆಯಿಂದಾಗಿ ಭೂಮಿಗೆ ವಿದ್ಯುತ್ ಪ್ರಸರಣವಾಗಿ ಆದರಿಂದ ಮೃತರ ಕುಟುಂಬಕ್ಕೆ ಸರಕಾರ ತಕ್ಕ ಪರಿಹಾರವನ್ನು ಕೊಡಬೇಕೆಂದು ಸರಕಾರವನ್ನು ಒತ್ತಾಯ ಪೂರ್ವಕ ಕೇಳಿಕೊಳ್ಳುವ ನಿರ್ಣಯ ವಾಯಿತು

ಕಲಾನೃಂದದ ವಾರ್ಷಿಕೋತ್ಸವ

ವು—ತಾ. ೧೨ರಂದು ಶ್ರೀಕೃಷ್ಣ ಮರದ ವಸಂತ ಮಹಲಿನಲ್ಲಿ ಸರ್ವಜ್ಞಯ ಶ್ರೀ ಆದಮಾರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಕಳದ ಸುರತಿ ಚಿಕ್ಕ ಪೀರಂಕಿತ ಸ್ವಾಮಿಗಳವರು ಉತ್ಸವ ಉದ್ಘಾಟಿಸಿದರು. ಶ್ರೀ ಫಲಿಮಾರು ಸ್ವಾಮಿಗಳವರು ವೃಂದದ ಸಮ್ಮಾಚಿ ವಿಶೇಷಾಂಕವನ್ನು ಉದ್ಘಾಟಿಸಿದರು. ಶ್ರೀ ಪುತ್ತಿಗೆ ಸ್ವಾಮಿಗಳವರು ಕಲಾವೃಂದದ ಸೇವೆಯನ್ನು ಪ್ರಶಂಸಿಸಿದರು. ಶ್ರೀ ಎಮ್. ಪಿ. ಎಲ್. ಶಾಸ್ತ್ರಿ, ಎಮ್. ಎಲ್. ಸಿ. ಹಾಗೂ ಶ್ರೀ ಬಿ. ರಾಮೋಪಾಧ್ಯರಿ ಉಪಸ್ಥಿತರಿಗಾಗಿದ್ದರು. ಅಧ್ಯಕ್ಷರು ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿದರು. ಶ್ರೀ ಸುಬ್ರಾಯ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ನಾಟಕ ಪ್ರದರ್ಶನವಿತ್ತು.

ಗ್ರಾಮೋದ್ಯೋಗ ಡೈರೆಕ್ಟರರ ಸಂದರ್ಶನೆ–

ಮೈಸೂರು ರಾಜ್ಯದ ಗ್ರಾಮೋದ್ಯೋಗ ಡೈರೆಕ್ಟರರಾದ ಶ್ರೀ ಬಿ. ವೀರಪ್ಪನವರು ಅಸಿಸ್ಟಾಂಟ್ ಡೈರೆಕ್ಟರ್ ಶ್ರೀ ನಿಜಲಿಂಗಪ್ಪನವರ ಸಮೇತ ಸಮುದಾಯ ಅಸಿಸ್ಟಾಂಟ್ ಡಿಪ್ರೆಸ್ಸರ್ ಶ್ರೀ ಕೆ. ಕಾಳಪ್ಪ ಸೆಟ್ಟಿರೊಂದಿಗೆ ತಾ. ೧೪ರಂದು ಉಡುಪಿಗೆ ಬಂದು ಹುತಿಸಗ್ಗ ತಯಾರಕರ ಸಂಘ, ಉಡುಪಿ ಮಹಿಳೆಯರ ಗೃಡಿಕೈಗಾರಿಕಾ ಸಂಘವನ್ನು ಸಂದರ್ಶಿಸಿದರು. ಶ್ರೀ ಸೀನಪ್ಪ ಸೆಟ್ಟಿ ಮತ್ತು ಶ್ರೀಮತಿ ಎಲ್. ಎನ್. ಭೆನರಂಥೀ ಸರು ಆಸಕ್ತಿಯಾಗಿ ಸ್ವಾಗತಿಸಿದರು. ಉಡುಪಿ ವೀವರ್ಸ್ ಸಹಕಾರ ಸಂಘಕ್ಕೂ ಭೇಟಿಯಿತ್ತು ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ. ಮತ್ತು ಕಛೇರೀಲ್ಲಾರ್ ಶ್ರೀ ಮಹಮ್ಮದ್ ಬ್ಯಾರಿಯೊದಲಾದವರೊಡನೆ ಗುಡಿಕೈಗಾರಿಕೆ ಅಭಿವೃದ್ಧಿಯ ಕುರಿತು ಚರ್ಚಿಸಿದರು. ಶ್ರೀಕೃಷ್ಣ ದರ್ಶನ ಮಾಡಿದರು. ನಂತರ ಮಣಿಪಾಲಕ್ಕೆ ಹೋಗಿ ಮಣಿಪಾಲ್ ಟೆಕ್ಸ್‌ಟ್ರ್ಯಾಲ್ಸನ್ನು ಕೋಆಪರೇಟಿವ್ ಇಂಡಸ್ಟ್ರೀಯಲ್ ಸೊಸೈಟಿಯಾಗಿ ಸಂಘಟಿಸಿರುವ ಕುರಿತು ಶ್ರೀ ಟಿ. ರಮೇಶ ಪೈಗಳೊಡನೆ ವಿಚಾರವಿನಿಮಯ ನಡೆಸಿದರು. ಡಾ. ಟಿ. ಎಮ್. ಎ. ಪೈಗಳೊಡನೆ ಸಣ್ಣ ಉಳಿತಾಯ ಯೋಜನೆಗಳ ವಿಷಯ ಚರ್ಚಿಸಿದರು. ನಂತರ ಹೆರ್ಗಿಯ ಬಡಗಿ ತರಬೇತಿ ಕೇಂದ್ರ, ಅಜೆಕಾರಿನ ಬೆತ್ತ ದಕೆಲಸಗಾರರ ಸಂಘ, ಕಾರ್ಕಳದ ಹೊಲಿಗೆ ತರಬೇತಿಕೇಂದ್ರ, ಮಾಡಬಿದ್ರೆಯ ಸಮೂಹಮಂದಿರಕ್ಕೂ ಭೇಟಿಯಿತ್ತರು.

ಜಾಗತಿಕ ಮಕ್ಕಳ ದಿನಾಚರಣೆ

ಯು ತಾ. ೧೪ರಂದು ಉಡುಪಿಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಆರೆಪೂರ ವಿದ್ಯಾರ್ಥಿ ಕೊಪೂರ ಲಕ್ಷ್ಮೀನಾರಾಯಣ ಭಟ್ಟರಿಂದ ಧ್ವಜಾರೋಹಣವಾಯಿತು ಅಜ್ಜರಕಾಡು ಮೈದಾನದಲ್ಲಿ. ನಂತರ ಸಿಹಿ ತಿಂಡಿ ಹಂಚಲಾಯಿತು. ಸಂಜೆ ಕವಿಯಾಳ ಕಾಲಾ ವಿದ್ಯಾರ್ಥಿ ಕುನಾರ ಮನೋಹರ ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಪಾರಿತೋಷಕವಿತರಣೆಯಾಯಿತು.

ಉಡುಪಿ ಸ್ಪೆಶಲ್ ಮೆಜಿಸ್ಟ್ರೇಟ್ ಕೋರ್ಟು—

ಹಲವು ವರುಷಗಳಿಂದ ಚಾಲಯಿದ್ದ ಉಡುಪಿಯ ಏನೆರಿ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರ ಕೋರ್ಟು ಮೈಸೂರು ಸರಕಾರದ ಹುಕುಮಿಗನುಸಾರ ವಾಗಿ ತಾ. ೧೫ರಿಂದ ಮುಚ್ಚಲ್ಪಟ್ಟಿದೆ. ಕಾರ್ಕಳದ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರರು ವಿಕಾರ್ಯಗಳ ಜಾಜ್ಯ ಸಹಿಸಿಕೊಳ್ಳುವರು.

ಆ| ಭಾ| ಸಂಸ್ಕೃತಭಾಷಾ ಪ್ರಚಾರ ಸಮಿತಿ (ಸೂರತ)—ಉಡುಪಿ ಕೇಂದ್ರದ ಪರೀಕ್ಷಾ ಪರಿಣಾಮ, ಸಪ್ಟೆಂಬರ್ ೫೭—

ಪ್ರಾರಂಭಿಣೀ ೨ನೆ ವರ್ಗ – ೭೦೧೧ ಮತ್ತು ೬೭ **ಪ್ರವೇಶಿಕಾ**– ೨ನೆ ವರ್ಗ – ೧೧೦೫ ಮತ್ತು ೧೧ 4ನೆ ವರ್ಗ – ೧೧೦೭ ರಿಂದ ೨೯. **ಪರಿಚಯ**– ೧ನೆ ವರ್ಗ – ೩೩೬,೯೯, ಮತ್ತು ೪೨೧ ೨ನೆ ವರ್ಗ – ೪೨೬ ಸೂತ್ರ. **ವಿಶಾರದೆ**– ೧ನೆ ವರ್ಗ – ೧೯೯ ಸೂತ್ರ ೨ನೆ ವರ್ಗ – ೧೬೭,೬೮ ಮತ್ತು ೭೦ ೩ನೆ ವರ್ಗ – ೧೭೧ ನುತ್ತು ೫೨.

ಫೆಬ್ರವರಿ ೫೮ರ ಪರೀಕ್ಷೆಗಳಿಗೆ ಅಂಬಲಪಾಡಿ ಗೀತಾ ಭವನದಲ್ಲಿ ಸ್ಮೃತಿ ಮಂಗಳವಾರ ಮತ್ತು ಬುಧವಾರ ಪರೀಕ್ಷೆಯು ಪೀಕ್ಷೆಗೂ, ಬುಧವಾರ ಮತ್ತು ಭಾನುವಾರ ವಿಶಾರದ ಪರೀಕ್ಷೆಗೂ ಪಾರವು ಡಿಸಂಬರ್ ೧೦ರಿಂದ ಸಾಯಂ. ೫.೪೦ರಿಂದ ೭.೪೦ ವರೆಗೆ ನಡೆಯುವುದು ಅಪೇಕ್ಷಿತರು ಕಾರ್ಯದರ್ಶಿಯನ್ನೊರಣೆ ನೈವಪಂಸಬಹುದು.

ಶ್ರೀ ಟಿ. ಎ. ಪೈಗಳವರು— ಎರಡು ತಿಂಗಳ ಹಿಂದೆ ವಿದೇಶ ಸಂಚಾರಕ್ಕಾಗಿ ಹೊರಟಿದ್ದರು ತಾ. ೧೪ರಂದು ರೋಮಿನಿಂದ ಹೊರಟು ಕೈರೋನಗರಿಗೆ ತಾ. ೧೪ರಂದು ಜೊಂಬಾಯಿಗೆ ಬಂದು ತಾ. ೧೭ರಂದು ಬೆಳಿಗ್ಗೆ ವಿಮಾನ ಮೂಲಕ ಮಂಗಳೂರಿಗೆ ಬಂದು ಉಡುಪಿಗೆ ಆಗಮಿಸಲಿರುವರು.

ಶ್ರೀ ಪೈಗಳು ತನ್ನ ವಿದೇಶ ಪ್ರವಾಸದ ಮೇಲೆ ಜರ್ಮನಿಯ ಕೋಲೋನ್ ಫ್ರಾಂಕ್‌ಫರ್ಟ್, ಬೋನ್, ಸ್ವಿಟ್ಜರ್‌ಗಾರ್ಟ್ ಮುಂತಾದ ನಗರಗಳನ್ನು ಸಂದರ್ಶಿಸಿದ್ದರು. ಬೋನ್‌ನಲ್ಲಿ ಜರ್ಮನ್ ಸರಕಾರವ ಉಚ್ಚಾಧಿಕಾರಿಗಳೊಡನೆ ಆರ್ಥಿಕ ವಿಚಾರಗಳ ಕುರಿತು ವಿಚಾರವಿನಿಮಯ ನಡೆಸಿದ್ದರು. ಮುಂಬೈನಲ್ಲಿ ಸಲವು ಕೈಗಾರಿಕಾ ಸಂಸ್ಥೆಗಳನ್ನು ಸಂದರ್ಶಿಸಿ, ಅಲ್ಲಿನ ಶಿಕ್ಷಣ ಸಂಗೋಪನಾ ಸಂಸ್ಥೆ, ಮಜೂರ ಹಿತಚಿಂತನಾ ಸಂಸ್ಥೆ ಸಮಾಜ ಸೇವಾ ಸಂಸ್ಥೆಗಳನ್ನು ಸಂದರ್ಶಿಸಿದರು. ಬಳಿಕ ಪೇರಿಸ್, ಬ್ರುಸ್ಸೆಲ್ಸ್ ಮತ್ತು ಎಮ್ಸ್ಟರ್‌ಡೇಮ್‌ಗಳಲ್ಲಿ ಅಕ್ಷಿನ ಬ್ಯಾಂಕರ್‌ಗಳೊಡನೆ ಸಂವರ್ಕ ಬೆಳೆಸಿಕೊಂಡರು.

ಲಂಡನ್ನಿನಲ್ಲಿ ಶ್ರೀ ಪೈಗಳು ಮೂರು ವಾರಗಳ ತನಕ ಇದ್ದು ಅಲ್ಲಿಯ ಪ್ರಮುಖ ವೇಂಕಿಂಗ್ ಸಂಸ್ಥೆಯಾದ ಮಿಡ್ಲ್ಯಾಂಡ್ಸ್ ಬ್ಯಾಂಕಿನ ಆಡಳಿತ ಸೌಧ, ಶಿಬಿರತರಬೇತಿ, ಪಣಿವ ವಹಿವಾಟು, ಶಾಖೆಗಳ ಮತ್ತು ಮುಂಗಡಗಳ ನಿಯಂತ್ರಣ ಇತ್ಯಾದಿ ಸೂಹಿತಿ ಪಡೆದರು. ಲೇಬರ್ ಪಕ್ಷದ ಪ್ರಮುಖ ಪಾರ್ಲಿಮೆಂಟ್ ಸದಸ್ಯ ಮಿ| ಪೆಕ್ಕರ್ ಹ್ಯಾರೊಡನೆ ಇಂದ್ಯಾ ಇಂಗ್ಲಂಡಿನ ಪಾರ್ಲಿಮೆಂಟ್ ಸದಸ್ಯನೊಬ್ಬನ ಪಾರ್ಲಿಮೆಂಟರಿ ಜೀವನದ ಅನುಭವ ಪಡೆದರು. ಇಂಗ್ಲಾಂಡಿನಿಂದ ಶ್ರೀ ಪೈಗಳು ನಾರ್ವೆಗೆ ತೆರಳಿ ಒಸ್ಲೋ ಮತ್ತು ಟ್ರೊಂಧೈಮ್‌ನಲ್ಲಿ ಮತ್ಸ್ಯ ವ್ಯವಸಾಯ, ನೈಸರ್ಗಿಕ ಇತ್ಯಾದಿ ಕುರಿತು ಅಭ್ಯಾಸಮಾಡಿ ನಾರ್ವೆ ಸರಕಾರದ ವಿಮಾನಗಾರಿಕೆ ಇಲಾಖಾಧಿಕಾರಿಗಳೊಡನೆ ವಿಚಾರವಿನಿಮಯ ನಡೆಸಿದರು. ಸ್ವೀಡನಿನ ಸ್ಟಾಕ್‌ಹಾಮ್‌ನಲ್ಲಿ ಸಣ್ಣ ಕೈಗಾರಿಕೆ ಸಂಸ್ಥೆಗಳ ಪರಿಚಯಮಾಡಿಕೊಂಡರು. ಡೆನ್ಮಾರ್ಕಿನ ಕೋಪೆನ್ ಹೇಗನ್‌ನಲ್ಲಿಯ ಸಹಕಾರಿ ಸಂಸ್ಥೆಗಳ ರೆಜಿಸ್ಟ್ರಾರ್ ಸಂಸ್ಥೆಗಳ ಕಾರ್ಯಕಲಾಪಗಳನ್ನು ವೀಕ್ಷಿಸಿದರು ಬೈಲಿನ್ ಮತ್ತು ಹ್ಯಾಂಬರ್ಗ್‌ಗಳಲ್ಲಿ ದೊಡ್ಡ ಬಂದರುಗಳನ್ನು ಮತ್ತು ಹಡಗು ನಿರ್ಮಾಣ ಕೇಂದ್ರಗಳನ್ನು ಸಹ ಸಂದರ್ಶಿಸಿದರು.

ಕವಿರಾಜ ಪದವಾಖ್ಯೆಯಲ್ಲಿ–ಶ್ರೀ ಧನ್ವಂತರೀ ಮತ್ತು ಶ್ರೀ ಗುರು ಪೂಜಾ ಸಮಾರಂಭವು ಪರ್ಯಾಯ ಪೀಠೇಶ್ವರೀರವಿವ ಶ್ರೀ ಕೃಷ್ಣಾಪುರ ಮಠದ ಶ್ರೀವಾದ್ವಿದ್ಯಾರ್ತೀರ್ಥ ಶ್ರೀ ಪಾದಂಗಳವರ ಸನ್ನಿಧಿಯಲ್ಲಿ ತಾ. ೧೩ನೇ ರಾತ್ರಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಎ ಜೆ ಆಳ್ವರವರಿಂದ ಕ್ವಾಗ ತಭಾಷಣವಾದ ಮೇಲೆ ಪೂಜೆಗಳಾದುವು. ಡಾ. ಟಿ. ಎಮ್. ಎ ಪೈಗಳು ಶ್ರೀ ವಿದ್ಯಾರತ್ನತೀರ್ಥ ಶ್ರೀ ಪಾದಂಗಳವರ ಭಾವಚಿತ್ರವನ್ನು ಅನಾವರಣಮಾಡಿದರು. ಭಾವನೇಂದ್ರ ಪ್ರೌಢಶಾಲೆಯ ಮೆನೇಜಿಂಗ್ ಟ್ರಸ್ಟಿ ಶ್ರೀ ಪಾಂಗಾಳ ಜನಾರ್ದನ ನಾಯ್ಯರು ಕಳೆದ ವರ್ಷ ಪೂಜೆಗಿಟ್ಟ ದಕ್ಷಿಣಾಲಾರಿಪ್ಪದ ಉದ್ಘಾಟನೆ ಗೈದರು. 60 ವರ್ಷದ ಸಫಲ ಜೀವನವನ್ನು ಬಾಳಿದ ಡಾ ಸುಂದರರಾಯ್ ಪೈಗಳನರಿಗೆ ಶ್ರೇಯಃ ಪ್ರಾರ್ಥನೆ, ಕವಿರಾಜ ಎಂ. ಜಿ ಶೆಣೈಯವರಿಂದ ಧನ್ಯವಾದ ಸಮರ್ಪಣೆ, ಪ್ರಸಾದ ವಿತರಣೆಯಾಗಿ ಶ್ರೀಗಳವರನ್ನು ಬೀಳ್ಕೊಡಲಾಯಿತು. ಬಳಿಕ ಮಿತ್ರ ಸುಂದರಿಯವರಿಂದ ಭಜನೆ ಜರಗಿತು.

ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನ ರಜತೋತ್ಸವ—

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಇನೇ ತಾ. ೧೮ರಿಂದ ೨೧ರ ವರೆಗೆ ಸರ್ವಧರ್ಮ ಸಮ್ಮೇಳನದ ರಜತೋತ್ಸವ ಜರಗುವುದು.

ಪ್ರಥಮ ದಿನದ ಉತ್ಸವವನ್ನು ಮೈಸೂರಿನ ರಾಜ್ಯಪಾಲರು ಉದ್ಘಾಟಿಸಿದರು. ಶ್ರೀ ಆರ್. ಆರ್. ದಿವಾಕರರು ಅಧ್ಯಕ್ಷತೆವಹಿಸಿದ್ದರು. ಎರಡನೆ ದಿನದ ಸಾಹಿತ್ಯಸಮ್ಮೇಳನವನ್ನು ಮೈಸೂರಿನ ವಿಶ್ವವಿದ್ಯಾನಿಲಯಗಳಾದ ಶ್ರೀ ಎಸ್ ನಿಜಲಿಂಗಪ್ಪನವರು ಉದ್ಘಾಟಿಸಿದರು. ಸಾಹಿತ್ಯಪರಿಷತ್ತಿನ ಅಧ್ಯಕ್ಷ ಪಂಡಿತರತ್ನ ಬಿ. ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷತೆವಹಿಸಿದ್ದರು. ತಾ ೨೧ರಂದು ಜರಗುವ ಕಲಾಮಹೋತ್ಸವನ್ನು ವಾಣಿಜ್ಯ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಕೇರಳ ರಾಜ್ಯಪಾಲರಾದ ಡಾ| ಬಿ. ರಾಮಕೃಷ್ಣ ರಾವ್‌ರವು ಉದ್ಘಾಟಿಸುವರು. ಕರ್ನಾಟಕದ ಪ್ರಖ್ಯಾತ ವಿದ್ವಾಂಸಕ ಸಾಹಿತಿಗಳು, ಸಂಗೀತಜ್ಞರು ಸೂರು ದಿವಸಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿವ್ವಾರೆ. (ವಿವರಕ್ಕೆ ಬರಹ ಸಂಚಿಕೆ ನೋಡಿರಿ)

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚೆಕ್ಕದಿರ ಬೇಕ್ಕದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ. ನ

ಪ್ರಾಥಮಿಕ ಶಿಕ್ಷಕರ ಜಿಲ್ಲಾ ಫಿಕ್ಷನ್ ಸಮಿತಿ ಸಭೆಯು- ತಾ. 10ರಂದು ಕಾರ್ಕಳದ ಎಸ್. ವಿ. ಟಿ. ಹಾ. ಎ. ಶಾಲೆಯಲ್ಲಿ ಶ್ರೀ ದಾಸಪ್ಪ, ಆರ್ಯದಕ್ಷಿಣ ಕನ್ನಡ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಯೂನಿಯನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರವು ಒಂದು ವರ್ಷದಿಂದ ಈ ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ವೇತನ ಹೆಚ್ಚಳದ ಪ್ರಶ್ನೆಯ ಕಡೆಗೆ ಗಮನ ಕೊಡದಿರುವುದಕ್ಕಾಗಿ ವಿಷಾದ ಸೂಚಿಸಿ ಈ ದೃಷ್ಟಿಯಿಂದ ಮುಷ್ಕರದ ನಿರ್ಣಯವನ್ನು ಪರ್ಯಾಲೋಚಿಸಬೇಕೆಂದರು. ನಂತರ ಜಲನಾರು ಮಂದಿ ಮುಷ್ಕರವನ್ನು ಸಮರ್ಥಿಸಿ ಮಾತನಾಡಿದರು. ಪ್ರಾಥಮಿಕ ಶಿಕ್ಷಕರ ಕೇಳಿಕೆಗಳನ್ನು ಸೂರ್ಯೆಸಿಕೊಳ್ಳಲು ಕೇಳಿಕೆಯಂತೆ ಪ್ರಾರ್ಥನಾದಿನ, ಅನ್ನ ಸತ್ಯಾಗ್ರಹ, ಮುಷ್ಕರ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು ಎಂಬಿತ್ಯಾದಿ ನಿರ್ಣಯಗಳಾದುವು

ಕಾರ್ಕಳ- ಮಿಯ್ಯಾರಿನಲ್ಲಿ ತಾ. 9ರಂದು ಡಾ| ಎಸ್. ಜೆ. ಆರ್. ಸಂಸ್ಥೆತ್ತಾಯರಿಂದ ಉದ್ಘಾಟಿಸಲ್ಪಟ್ಟ ರಂಜಾಳ, ಮಿರ್ಗನುತ್ತು ಮಿಯ್ಯಾರು ಗ್ರಾಮಗಳ ರೈತ ಮುಂದಾಳುಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷ ಶ್ರೀ ಎಸ್. ಲಕ್ಷ್ಮಣ ಸಾಲಿಯಾನ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಬಿ ಎಸ್ ಭಾಸ್ಕರ ರೈಗಳು ಸಮಾರೋಪ ಭಾಷಣ ಮಾಡಿದರು ಅರಬೆನಲ್ಲಿ ಶ್ರೀ ಟಿ. ಅನಂತರಾಮ ಭಟ್ಟರು ಸ್ವಾಗತಿಸಿದರು ಶ್ರೀ ಬಿ ಮೋಜಿರಾಯರು ಶಿಬಿರದ ವರದಿಯನ್ನೊಪ್ಪಿಸಿದರು ಶ್ರೀಗಳಾದ ಆರ್. ಬಿ ಕೆಶ್ಟ್ ಮತ್ತು ಶಿವರಾಮಕೃಷ್ಣ ಶ್ರೀ ಬಿ. ಕೃಷ್ಣಮೂರ್ತಿರಾಯರು ಕಾರ್ಯೋಚಿತ ಮಾತುಗಳನ್ನಾಡಿದರು ಕಾರ್ಕಳದ ಬಿ ಡಿ. ಒ. ಡಾಜಿ ಶ್ರೀ ಬಿ. ರಮಣಾನರು ಧನ್ಯವಾದಗಳನ್ನರ್ಪಿಸಿದರು.



ಹೊಸ್ಲಿ ನದಿಯಲ್ಲಿ ಕೆಸರು ತೆಗೆಯುವುದಕ್ಕಾಗಿ ತಯಾರಿಸಿದ ಒಂದೆ ಯಂತ್ರ ಸಹಿತವಾದ ಮಚ್ಚೆ. ಇದು ೪೫೦೦ ಟನ್ ಭಾರವಾಗಿದ್ದು ೧೦ ಲಕ್ಷ ಪವನು ಗಳಷ್ಟು ಬೆಲೆಬಾಳುವುದು. ಇದನ್ನು ಸ್ಕಾಟ್‌ಲೆಂಡಿನ ವಿಲಿಯಂ ಸಿಂನ್ಸನ್ ಮತ್ತು ಕಂಪೆನಿಯಲ್ಲಿ ಕಟ್ಟಲಾಗಿದ್ದು ಭಾಗೀರಥಿ ಎಂಬ ಹೆಸರಿಟ್ಟಿದ್ದಾಗಿದೆ.

ಮೂಲ್ಕಿ—ತಾ. 9ರಂದು ಮೈಸೂರು ವಿದ್ಯಾಮಂತ್ರಿ ಶ್ರೀ ಬಿ. ವಂಕಟಪ್ಪನವರು ಮೂಲ್ಕಿಗೆ ಆಗಮಿಸಿದಾಗ ಅವರನ್ನು ಶ್ರೀಗಳಾದ ಬಿ. ಆರ್. ಕಕೇರಿ, ಎಮ್ ಎಲ್. ಎ; ಡಾ ರಾಮಪ್ಪ ಕಾಮತ್, ಡಾ. ಎಸ್ ಆರ್. ಎಚ್. ಪೂಂಜ, ವಿಠಲ ಶೆಟ್ಟಿ, ಡಾ| ರಾಮಣ್ಣ ಶೆಟ್ಟಿ ಮೊದಲಾದವರು ಸ್ವಾಗತಿಸಿದರು. ಮಂತ್ರಿಗಳು ಸ್ಥಳೀಯ ಸರಕಾರಿ ಹೈಸ್ಕೂಲನ್ನೂ, ಹಾ. ಎ. ಶಾಲೆಗಳನ್ನೂ ಸಂದರ್ಶಿಸಿದರು.

ಹುಣಸೆ ಮಕ್ಕಿ-ಸ್ಥಳೀಯ ಗ್ರಾಮಸೇವಕ ಶ್ರೀ ಬಿ ಆನಂದ ಶೆಟ್ಟರು ಬುನಾದಿ ಕೃಷಿ ತರಬೇತಿಗಾಗಿ ತೆರಳಲಿರುವ ನಿಮಿತ್ತ, ತಾ. 7ರಂದು ಅವರನ್ನು ಬೀಳ್ಕೊಡುವ ಸಮಾರಂಭವು ಮೊಲಹಳ್ಳಿ ಬ್ರಾಂಚ್ ಪೋಸ್ಟು ಮಾಸ್ತರ್ ಶ್ರೀ ಎಸ್ ಸದಾಶಿವ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಸಬ್ಬಯ ಉಪಾಧ್ಯ ಮತ್ತು ಟಿ. ವಿಠ್ಠಲ ಶೆಟ್ಟರು ಕಾರ್ಯೋಚಿತ ಮಾತುಗಳನ್ನಾಡಿದರು. ಶ್ರೀ ಎಚ್. ಮಹಾಬಲ ಶೆಟ್ಟಿಗಳು ಧನ್ಯವಾದ ವಿತ್ತರು.

ಬ್ರಹ್ಮಾವರ—ಆಲ್ ಇಂಡಿಯಾ ರೇಡಿಯೋ, ಬೆಂಗಳೂರು ನಿಲಯದ ಸಲಹೆಗಾರರಾದ ಶ್ರೀ ನಾ ಕಸ್ತೂರಿಯವರು ಗ್ರಾಮೋದ್ಯೋಗ ಕಲೆ ಕಾರ್ಯಕ್ರಮಗಳು ಧ್ವನಿ ಮುದ್ರಣ ಕಾರ್ಯಕ್ಕಾಗಿ ತಾ. 9ರಂದು ಆಗಮಿಸಿದರು. ಶ್ರೀ ಶಿವರಾಮ ಕಾರಂತರಿಂದ ನಿರ್ದೇಶಿಸಲ್ಪಟ್ಟ ಯಕ್ಷಗಾನ ಗೀತನಾಟಕಗಳ ಧ್ವನಿ ಮುದ್ರಣವಾಯಿತು. ಶ್ರೀ ಬಿ. ನಿ ಮಾಧವ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ನಾ. ಕಸ್ತೂರಿಯವರಿಗೆ ಸತ್ಕಾರವಿತ್ತಲಾಯಿತು. ಶ್ರೀ ಬಿ ವೆಂಕಟಕೃಷ್ಣ ರಾಯರು ಸ್ವಾಗತಿಸಿದರು. ಶ್ರೀ ಕಾರಂತರು ಶ್ರೀ ಕಸ್ತೂರಿಯವರೂ ಯಕ್ಷಗಾನ ಕಲೆಯ ಕುರಿತು ಭಾಷಣವಿತ್ತರು. ಶ್ರೀ ಶ್ರೀನಿವಾಸ ನಾಯ್ಕರು ಧನ್ಯವಾದ ವಿತ್ತರು.

ಮಣಿಪಾಲ—ಸ್ಥಳೀಯ ಹೈಸ್ಕೂಲಿನಲ್ಲಿ ಜಾಗತಿಕ ಮಕ್ಕಳ ದಿನಾಚರಣೆ ನಿಮಿತ್ತ ಎ. ಸಿ. ಸಿ. ಯವರ ಪೆರೇಡು ನಡೆಯಿತು. ಬಳಿಕ ಕುಮಾರ ಶಿವಾನಂದ ಪೈಗಳು ಧ್ವಜಾರೋಹಣಗೈದರು. ಕುಮಾರ ಸತೀಶ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೇರಿವ ಸಭೆಯಲ್ಲಿ ಸರ್ವಾರ್ ಪಟೇಲ್, ಪಂಡಿತ ನೆಹರೂ, ಕಸ್ತೂರ್‌ಬಾರವರ ಭಾವಚಿತ್ರಗಳನ್ನು ಕುಮಾರ ರಾಘವೇಂದ್ರ ಮೂರ್ತಿ ತಂತ್ರಿ, ಸುಧಾಕರ ಹೆಗ್ಡೆ ಮತ್ತು ಕುಮಾರಿ ಸರಿತಾರವರು ಅನಾವರಣಗೊಳಿಸಿದರು. ಕುಮಾರ ಗೋವಿಂದರಾಜ ಹೆಗ್ಡೆ ಮತ್ತು ಕುಮಾರಿ ಸರಿತಾರವರು ಚಿತ್ರ ಕಲಾವಸ್ತು ಮತ್ತು ಕರಕುಶಲ ಕಲಾ ಪ್ರದರ್ಶನಗಳನ್ನು ಉದ್ಘಾಟಿಸಿದರು

ಶಾಲಾ ಮುಖ್ಯೋಪಾಧ್ಯಾಯರೂ, ಡಾ| ಟಿ. ಮೋಹನ ಪೈಯವರೂ ವಿದ್ಯಾರ್ಥಿಗಳಿಗೆ ಹಿತೋಪದೇಶದ ಮಾತುಗಳನ್ನಾಡಿದರು. ಪಾರಿತೋಷಕ ವಿತರಣೆ ಇತ್ಯಾದಿ ತಾರ್ಯಕ್ರಮಗಳಾಗಿ ಸಭೆ ಕೊನೆಗೊಂಡಿತು

ಹಿಲಿಯಾಣ- ಸ್ಥಳೀಯ ಬೋರ್ಡು ಹಾ| ಎ| ಶಾಲೆಯಲ್ಲಿ ತಾ. 14ರಂದು ಮಕ್ಕಳ ಹಬ್ಬವು ಸಂಚಾಯತ ಬೋರ್ಡು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಬೆಳಿಗ್ಗೆ ಪ್ರಭಾತಫೇರಿ ಮತ್ತು ವಿವಿಧ ಪಂದ್ಯಾಟಗಳಾದುವು. ಸಂಜೆ ಸೂತ್ರಯಜ್ಞ, ಸಾರ್ವಜನಿಕ ಸಭೆ, ಭೋಜನಗಳಾದುವು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಆನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಕುರುಕಾಲು- ತಾ. 14.11.57ನೇ ಬೆಳಿಗ್ಗೆ ಕುಂಜಾರು ಗಿರಿಜಾ ಹಾರ್ಡ್ ಎಲಿಮೆಂಟರಿ ಶಾಲೆಯ ಅಧ್ಯಾಪಕರೂ, ನಿದ್ಯಾರ್ಥಿಗಳೂ, ಕುರುಕಾಲು ಮಹಿಳಾಸಮಾಜದ ಪರವೂ ಒಟ್ಟಾಗಿ ನೆಹರೂಜಯಂತಿಯ ಸಂಬಂಧ ನೆಹರೂಜೆಯಿಂದ ಹೊರಟು ಮಹಿಳಾ ಕೇಂದ್ರದ ಧ್ವಜಾರೋಹಣವನ್ನು ಶ್ರೀಮತಿ ಕುಂಬಳೆ ಸಾರದ ನಾಯ್ಕರೂ, ಹಾ. ಎ. ಶಾಲೆಯ ಧ್ವಜಾರೋಹಣವನ್ನು ಶ್ರೀ ಕುರುಕಾಲು ಗಣಪಯ್ಯ ಶೆಟ್ಟರೂ, ನೆರವೇರಿಸಿದ ಬಳಿಕ ಶಾಲೆಯಲ್ಲಿ ಶ್ರೀಯುತ ಶೆಟ್ಟ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಕ್ಕಳ ವಿವಿಧ ವಿನೋದಾವಳಿಗಳಿಂದಲೂ, ಹೆಡ್ಡಾಸ್ತಾರ ವಗೈರೆ ಅಧ್ಯಾಪಕರ್ತವ ಶ್ರೀಮತಿ ಶಾರದಾ ನಾಯ್ಕರಿಂದಲೂ, ನೆಹರು ಜಯಂತಿಯ ಕುರಿತು ಭಾಷಣಗಳಾಗಿ ಸಿಹಿ ತಿಂಡಿ ಹಂಚಿ ಬೆಳಿಗ್ಗಿನ ಸಭೆಯು ಮುಕ್ತಾಯವಾಯ್ತು.

ಅಪರಾಹ್ನ ಶ್ರೀಮತಿ ಶಾರದಾ ನಾಯ್ಕರ ಅಧ್ಯಕ್ಷತೆಯಲ್ಲಿ ಮಹಿಳಾ ಸಮಾಜದ ಬಾಲಕಿಯರು "ಶಕ್ತಿ ಪರಿಶ್ಚಂದ್ರ" ಎಂಬ ನಾಟಕವನ್ನು ಉತ್ತಮೋತ್ತಮವಾಗಿ ಪ್ರದರ್ಶಿಸಿದರು ಈ ಸಭೆಗೆ ಊರ ಮಹಿಳೆಯರು ತುಂಬಾ ಹಾಜರಾಗಿದ್ದರು. ನಾಟಕ ಅಂತ್ಯದಲ್ಲಿ ಮಹಿಳಾ ಸಮಾಜದ ಪ್ರೆಸಿಡೆಂಟ್ ಶ್ರೀಮತಿ ಸುನಂದ ಬಲ್ಲಾಳ್, ಗ್ರಾಮಸೇವಕಿ ಶ್ರೀಮತಿ ಶಿ ಯು. ಲತಾಕಿಣಿ, ನೆಕ್ರಿಟರಿ ಕೆ ರಾಜೀವಿ ಬಿ. ಶೆಟ್ಟಿ ಮತ್ತು ಸಭಾಧ್ಯಕ್ಷೆಯರಿಂದ ಮಹಿಳಾ ಕೇಂದ್ರದ ಕುರಿತು ಭಾಷಣಗಳಾಗಿ ಅಂದಿನ ಕಾರ್ಯಕ್ರಮವು ಕೊನೆಗೊಂಡಿತು.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಆವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತಿವೆ!!

P. DEVEE & Co. (N. J.) CALCUTTA—40.

ಸ್ವಾದಿಷ್ಟರು: ಶಾ ಕಂಪೆನಿ, ಮಂಗಳೂರು—1.

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೬೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಷ್ಟೋ ದೇಶಗಳಿಗೆ ಸ್ಫೂರ್ತಿದಾಯಕವಾಗಿ ಆದರ್ಶವೆಂದು ನಾವು ನಮ್ಮ ನವ್ಯ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಸ್ವಾತಂತ್ರ್ಯ ವಕ್ತು ಜೀವನ ಮಾರ್ಗವಲ್ಲಿರುವ ಹೊಳಿಕುಗಳನ್ನು, ಆದು ಹುಟ್ಟಿಸಬಹುದಾದ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಜನಂತರದ ಪ್ರಜಾಂಚದಲ್ಲಿ ಇದಿರಿಸಬೇಕಾದ ದುಷ್ಟ ಶಕ್ತಿಗಳ ದೆಸೆಯಿಂದ ಪರಿಣತವಾದ ಒಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ಬೌರ್ಬಲ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರನಂತರ ಇದು ಒಂದು ಚಿತ್ರಣ.

ಬರೆದವರು: **ಜಾನ್ ಡ್ಯೂಯಿ**

ಅನುವಾದಕ: **ಕು. ಶಿ. ಹರಿದಾಸ ಭಟ್ಟ**

ಪುಟಗಳು: ೪ + ೧೮೪. ಬೆಲೆ: ಎರಡು ರುಪಾಯಿ.

ಇಂದೇ ಬರೆಯಿರಿ:

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್

ನವಯುಗ ಪ್ರೆಸ್, ಉಡುಪಿ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: **ಡಾಕ್ಟರ್ ಕೊರಡ್ಡಲ್ ವೆಂಕಟ್ರಾವ್**, ಎಲ್. ಐ.ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಪ್ಪಾ ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಕಳ್ಳ ಚಿನ್ನ ಪತ್ತೆ—ಬೆಂಗಳೂರಿನ ಕಸ್ಟಮ್ಸ್ ಕಲೆಕ್ಟರ್ ಮೇಜರ್ ಎ ಆರ್ ಜಗ್ಗಾರ್, ಆವರು ತಾ 14ರಂದು ಮಂಗಳೂರಿನ ಅಳವೆಯಲ್ಲಿ ಬಿಸಾಡಲಾಗಿದೆ ಎಂದು ಹೇಳಲಾದ ಬಂಗಾರವನ್ನು ಶೋಧಿಸುವ ಕೆಲಸವನ್ನು ಆರಂಭಿಸಿ ಶೋಧನೆ ನಡೆಸಿ ನಾಲ್ಕು ಗಂಟೆಗಳಲ್ಲಿ ಕಟ್ಟು ಬಿಸಾಡಲಾಗಿದ್ದ 910 ತೊಲೆ ಬಂಗಾರ ಪತ್ತೆಹಚ್ಚಿದರು

ನೆಹರೂ ಜಯಂತಿ—ಪಂಡಿತ ನೆಹರೂರವರ 69ನೆ ಜನ್ಮ ದಿನಾಚರಣೆ ನಿಮಿತ್ತ ತಾ. 14ರಂದು ಕೇಂದ್ರ ವೈದ್ಯಾನಿಲ್ಲಿ ಸರ್ವ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಶ್ರೀ ಎ ಬಲ್ಲಿಕರ ಅಳ್ವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಶ್ರೀ ಎಜ್. ಕೆ ತಿಂಗಳಾಯರು ಸ್ವಾಗತಿಸಿದರು ಹಲವರು ಭಾಷಣ ಮಾಡಿದರು ನಗರದ ಎಲ್ಲಾ ಶಿಕ್ಷಣಸಂಸ್ಥೆಗಳಲ್ಲಿ ಈ ದಿನದಂದೇ ಮಕ್ಕಳ ದಿನಾಚರಣೆಯೂ ಆಚರಿಸಲ್ಪಟ್ಟಿತು

ದಕ ಜಿಲ್ಲಾ ಅಭಿವೃದ್ಧಿ ಬೋರ್ಡಿನ ಸಭೆಯಲ್ಲಿ—ಮೈಸೂರು ರಾಜ್ಯದ ಗ್ರಾಮ ಉದ್ಯೋಗಗಳ ಡೈರೆಕ್ಟರ್ ಶ್ರೀ ಬಿ ಪುಟ್ಟಸ್ವಾಮಿಯವರು ಭಾಷಣಮಾಡಿ ತ್ತಾ ಗ್ರಾಮೋದ್ಯೋಗಗಳ ಅಭಿವೃದ್ಧಿಗಾಗಿ ಸರಕಾರವು ಮಾಡುತ್ತಿರುವ ಸಹಾಯಗಳನ್ನು ವಿವರಿಸಿದರು ಶ್ರೀ ವಿ ಎಸ್ ಕುಡ್ವರು ಆರಂಭದಲ್ಲಿ ಸ್ವಾಗತಿಸಿದರು

ಶ್ರೀ ಬೀರಪ್ಪನವರು ತಮ್ಮ ಭಾಷಣದಲ್ಲಿ ಚರ್ಮ ಹದಮಾಡುವ ಕೈಗಾರಿಕೆ ಕಬ್ಬಿಣಗಳು, ಸಣ್ಣ ಕೈಗಾರಿಕೆಗಳು, ಪೂರಾ ಸಹಕಾರ್ಯ ಮೊದಲಾದುವುಗಳಿಗೆ ಸರಕಾರ ಮಾಡಿರುವ ಸಹಾಯವು ದೂರೆಯುವುದೆಂದುದನ್ನು ವಿವರಿಸಿದರು ದಕ ಜಿಲ್ಲೆಗೆ ಒಂದು ಮಾದರಿ ಕರ್ಮಾರ ಶಾಲೆಯು ಮಂಜೂರಾಗಿದ್ದು ಆದಷ್ಟು ಬೇಗ ಜಿಲ್ಲೆಯ ಯಾವ ಭಾಗದಲ್ಲಿ ತೆರೆಯಬೇಕೆಂಬ ಬಗ್ಗೆ ಇನ್ನು ನಿಶ್ಚಯಿಸಿಯಾಗಿಲ್ಲವೆಂದರು ಶ್ರೀಯುತ ಎಚ್. ಲಕ್ಷ್ಮೀನಾರಾಯಣ ಪಂತ್, ಎಜ್ ನಾರಾಯಣರಾವ್, ಕೆ ವಿ ಸುಬ್ಬರಾವ್ ಕಾರಂತ ಮೊದಲಾದವರು ಹಲವಾರು ಸೂಚನೆಗಳನ್ನಿತ್ತರು ಶ್ರೀ ಬಿ ದಿ ಸೆಟ್ಟಿರು ಧನ್ಯವಾದಗಳನ್ನಿತ್ತರು

ಸಾಪ್ತಾಹಿಕ ಕಾರ್ಯಕ್ರಮ- ಯುವಕ ಕಾಂಗ್ರೆಸಿನ ಆಶ್ರಯದಲ್ಲಿ ಜಪ್ಪು ಭಾರತ್ ಮೈದಾನದಲ್ಲಿ ತಾ 10ರಂದು ಸಾಪ್ತಾಹಿಕ ಕಾರ್ಯಕ್ರಮವು ಡಾ ಕೆ ನಾಗಪ್ಪ ಆಳ್ವ, ಎಂ ಎಲ್ ಎ ಅವರಿಂದ ರಾಷ್ಟ್ರಧ್ವಜಾರೋಹಣದೊಡನೆ ಪ್ರಾರಂಭವಾಯಿತು ಶ್ರೀಗಳಾದ ಪಿ ಆರ್ ಕಕ್ಕೇಟಿ ಎಮ್ ಎಲ್ ಎ ಕೆ ಎಸ್ ಆರ್ ಹೊಳ್ಳ, ಜಗನ್ನಾಥ ಶೆಟ್ಟಿ, ಬೆಸೆಂಟ್ ಶೆಟ್ಟಿ, ಬಿ ಎಮ್ ಇದಿನಬ್ಬ ಮೊದಲಾದವರು ಭಾಷಣವಿತ್ತರು

ಬ್ಲೇದುಗಳಿ ಕಳ್ಳ ಸಾಗಾಟದ – ಅಪರಾಧಕ್ಕಾಗಿ ತಾ 9ರಂದು ಉಡುಪಿಯಿಂದ ಮಂಗಳೂರಿಗೆ ಬರುತ್ತಿದ್ದ ಸುಪ್ರಾಯ ನಾಯ್ಕ ಎಂಬವರು ಬಂಧಿಸಲ್ಪಟ್ಟಿದ್ದಾರೆಂದೂ ಇವರಲ್ಲಿ 2000 ಸೆನ್ಸ್ ಬ್ಲೇಡ್ಸ್ ಬ್ಲೇಡುಗಳಿದ್ದುವೆಂದೂ ಒಂದು ನೂರು ರೂಪಾಯಿ ಜುಲ್ಮಾನೆ ಕೊಡಲು ಅಸಾಧ್ಯನಾದುದರಿಂದ ತಾನಿಷ್ಟಗಾಗಿ ಅವರನ್ನು ಬಂಧನದಲ್ಲಿಡಲಾಗಿದೆ ಎಂದೂ ತಿಳಿದುಬರುತ್ತದೆ

ಬೆಂಗಳೂರು

ಮಂಗಳೂರು ವೆನ್‌ಲೋಕ್ ಆಸ್ಪತ್ರೆಯ—ಸಿವಿಲ್ ಆಯ್ ಬ್ಲೋಕಿನ ನಿಸ್ತಂತಿಗಾಗಿ ಇಂಜಿನಿಯರರು ಮೆಡಿಕಲ್ ಸರ್ವಿಸಸ್ ಡೈರೆಕ್ಟರರ ಮುಖಾಂತರ ಒಪ್ಪಿಸಿದ ಪ್ಲೀನು ಮತ್ತು ಅದಾಜನ್ನು ಮೈಸೂರು ಸರಕಾರವು ಮಂಜೂರು ಮಾಡಿರುವುದಾಗಿ ತಿಳಿದುಬರುತ್ತದೆ

ಜಾಸಗಿ ಶಾಲಾ ಅಧ್ಯಾಪಕರಿಗೆ ಮಧ್ಯಮ ಕಾಲಾವಧಿ ಪರಿಹಾರ—ಮೈಸೂರು ರಾಜ್ಯದಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳ ಆಧೀನವಿರುವ ಮತ್ತು ಜಾಸಗೀ ಆಡಳಿತ ಸಂಸ್ಥೆಗಳ ಆಧೀನವಿರುವ ಶಾಲೆಗಳ ಅಧ್ಯಾಪಕರುಗಳಿಗೆ ತ್ಪರಿತಗತಿಯಲ್ಲಿ ಮಧ್ಯಮ ಕಾಲಾವಧಿ ಪರಿಹಾರವನ್ನೊದಗಿಸುವ ಪ್ರಶ್ನೆಯನ್ನು ಸರಕಾರವು ಈಗ ಪರ್ಯಾಲೋಚಿಸುತ್ತಿದೆ ಎಂದು ಶಿಕ್ಷಣ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದರು ಹೊಸ ವೇತನಸುಟ್ಟ ಪಡೆಯುವ ಅಧ್ಯಾಪಕರುಗಳಿಗೆ ಮಾತ್ರ ಈ ಮಧ್ಯಮ ಕಾಲಾವಧಿ ಪರಿಹಾರ ಕೊಡಲಾಗುವುದೆಂದರು ಹೊಸ ವೇತನ ಸುಟ್ಟಗಳನ್ನು ಮುಂದಿನ ವರ್ಷ ಜೂನ್ ಜುಲಯಿ ತಿಂಗಳ ಸುಮಾರಿಗೆ ಘೋಷಿಸುವ ನೀರೀಕ್ಷೆಯಿದೆ ಈ ಹೊಸ ವೇತನ ಸುಟ್ಟಿಗೆ ಮುಂದಿನ ವರ್ಷದ ಮುಂದೆ ಪತ್ರದಲ್ಲಿ ಸೇರಿಸಲ್ಪಡುವ ಸಾಧ್ಯತೆಯಿರುವುದಾಗಿ ಸಹ ಕೂಡಿಸಿದ್ದಾರೆ

ರಾಜ್ಯ ಸರಕಾರಕ್ಕೆ ದಕ ಜಿಲ್ಲಾ ಪಂಚಾಜಿ ಮುರ್ತೆದಾರರ ಮನವಿ—ದಕ. ಜಿಲ್ಲೆಯ ಪಂಚಾಜಿ ಮುರ್ತೆದಾರರ ಸಂಘದ ಪ್ರತಿನಿಧಿಗಳಾದ ಶ್ರೀಯುತರು ಟಿ ಲಕ್ಷ್ಮಣ ಕೆ ಸೋಮಯ್ಯ ಸುವರ್ಣ, ಬಿ ಬಚ್ಚಿ ಸೂಜಾರಿಯವರು, ಶ್ರೀ ಎಸ್ ಎಸ್ ಕೊಳ್ಳೆಬೈಲ್, ಆವರ ನೇತೃತ್ವದಲ್ಲಿ ಮೈಸೂರು ರಾಜ್ಯದ ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪ ಮತ್ತು ಕಾರ್ಮಿಕ ಮಂತ್ರಿ ಶ್ರೀ ಬಿ ವೈಕುಂಠ ಬಾಳಿಗರನ್ನು ಭೇಟಿಯಾಗಿ ಮನವಿಯೊಂದನ್ನರ್ಪಿಸಿದರು ಪಾನ ನಿರೋಧ ಕಾನೂನು ಜ್ಯಾರಿಗೊಳಿಸುವುದರಿಂದ ಮೂರ್ತೆದಾರರು ಕಸ್ತಿನಲ್ಲಿ ಜೀವನ ನಡೆಸುವುದರಿಂದ ಅವರ ಮಕ್ಕಳಿಗೆ ಎಸ್ ಎಸ್ ಎಲ್ ಸಿ ವರೆಗೆ ಸರಕಾರ ಧನಸಹಾಯ ಶಿಕ್ಷಣ ಕೊಡಬೇಕು ನೀರಾ ಮಾರಾಟಮಾಡುವ ಅವಧಿಯನ್ನು ಬೆಳಿಗ್ಗೆ 7½ ಗಂಟೆಯಿಂದ ಸಂಜೆ 7½ ಗಂಟೆ ತನಕ ವೃದ್ಧಿಸಬೇಕು ನೀರಾನನ್ನು ಮಾರಾಟಕಲ್ಲಿಂದ ವಿಮುಕ್ತಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳು ಮನವಿಯಲ್ಲಿದ್ದುವು ಮಂತ್ರಿಶ್ರೇಷ್ಠರೂ ಸಹಾನುಭೂತಿಯಿಂದ ಬೇಡಿಕೆಗಳನ್ನು ಪರ್ಯಾಲೋಚಿಸುವುದಾಗಿ ಹೇಳಿದರು.

ರಾಷ್ಟ್ರದಲ್ಲಿ ನವಂಬರ ೧೪ರಂದು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು ಆ ದಿನ ನಮ್ಮ ಪ್ರಧಾನಿ ನೆಹರೂರವರ ಒಸ್ತಿತಿದಿಯೂ ಹೌದು. ಇಂದಿನ ಮಕ್ಕಳೇ ಮುಂದಿನ ಜನಾಂಗವಾದುದರಿಂದ ಈ ನಮ್ಮ ಕಿರಿಯ ಪ್ರಜೆಗಳ ಸಂಪರ್ಕವನ್ನು ಬೆಳೆಸಲು ವಿಶ್ವಸಂಸ್ಥೆಯ ಆದೇಶದಂತೆ ಕಳೆದ ವರ್ಷದಿಂದ ಎಲ್ಲ ದೇಶದಲ್ಲಿಯೂ ಈ ಉತ್ಸವವು ಆಚರಿಸಲ್ಪಡುತ್ತಿದೆ

ಎಡಗಡೆಯ ಚಿತ್ರದಲ್ಲಿ ಪ್ರಧಾನಿ ನೆಹರೂ ಶಾಂತಿಯ ಸ್ಪತೀಕವಾದ ಶ್ವೇತಕಪೋತವನ್ನು ಹಾರಿಬಿಡುತ್ತಿದ್ದಾರೆ

ಒಲಗಡೆಯ ವೇಲಿನ ಚಿತ್ರದಲ್ಲಿ ಒಂದು ಮಗುವನ್ನು ನರು ತನಗೆ ಕೂಮಾಲೆ ಹಾಕಿದುದಕ್ಕೆ ಪ್ರತಿಯಾಗಿ ಮುದ್ದಿಡುತ್ತಾರೆ. ಕೆಳಗಿನ ಚಿತ್ರದಲ್ಲಿ ನವದೆಹಲಿಯ ಮಕ್ಕಳಿಂದ ಆಡಲ್ಪಟ್ಟ ನೃತ್ಯಗೀತೆಯನ್ನು ಕಾಣಬಹುದು

ಜಾನುವಾರು ಮತ್ತು ಕೋಳಿ ಪ್ರದರ್ಶನ ಸಿವಿಲ್ ಪಶು ಸಂಗೋಪನಾ ಸ್ಪತೆಯಲ್ಲಿ ಏರ್ಪಡಿಸಿದ ಜಾನುವಾರು ಮತ್ತು ಕೋಳಿ ಪ್ರದರ್ಶನವನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಉದ್ಘಾಟಿಸುತ್ತಾ ಭಾರತದಲ್ಲಿ ಪಶುಗಳು ಪಶುಪಾಲನೆ ಬಗ್ಗೆ ಏನೂ ಆಸಕ್ತಿ ವಹಿಸುತ್ತಿಲ್ಲ ಹೀಗೆ ನರ್ಲಕ್ಷಿಸಿದರೆ ನಾವು ಬೇನಾ, ಸ್ಟೆಂಡಿನೇವಿಯಾ, ಇಂಗ್ಲಾಂಡುಗಳಂತೆ ಪೌಷ್ಟಿಕ ಪರಿವೂರ್ಣದಲ್ಲಿ ಗೊಳ್ ಉತ್ಪತ್ತಿ ಪಡೆಯುವುದು ಅಸಾಧ್ಯ ಪಶುಸಂಗೋಪನೆಯು ಒಂದು ಲಾಭದಾಯಕ ಕೈಗಾರಿಕೆ ಈ ಕೈಗಾರಿಕೆಯಿಂದ ಜಂದಕ್ಕೆ ಮೂರು ಪಾಲಷ್ಟು ಲಾಭ ಪಡೆಯಬಹುದು ಎಂದು ಮುಂತಾಗಿ ಹೇಳಿದರು

ಆರಂಭದಲ್ಲಿ ಪಶುಸಂಗೋಪನಾ ಇಲಾಖೆಯ ಡೈರೆಕ್ಟರ್ ಡಾ| ಕೆ. ಎಸ್ ಸೆಟ್ಟರು ಸ್ವಾಗತ ಭಾಷಣ ಮಾಡಿದರು ಶ್ರೀ ಎನ್. ಶ್ರೀನಿವಾಸ ರೆಡ್ಡಿಯವರು ಮುಖ್ಯಮಂತ್ರಿಗಳಿಗೆ ವಿಷ್ಣವತ್ತೆಯೊಂದನ್ನು ಒಪ್ಪಿಸಿದರು ನಗರ ಕೋಪರೇಶನ್ ನಾಮಕ ಶ್ರೀ ಎಮ್ ನರಸಿಂಹ ಅಯ್ಯಂಗಾರರು ಧನ್ಯವಾದಗಳನ್ನಿತ್ತರು ಕೇಂದ್ರದ ಆಹಾರ ಮತ್ತು ನೃವಸಾಯ ಖಾತೆಯ ಉಪಸಚಿವ ಶ್ರೀ ಎಮ್ ವಿ ಕೃಷ್ಣಪ್ಪನವರೂ ಮೈಸೂರ್ ಶ್ರೀ ವೀರಾ ಬ್ಯಾನರ್ಜಿಯವರೂ ಸಮಾರಂಭದಲ್ಲಿ ಉಪಸ್ಥಿತರಿದ್ದರು

ನುದ್ಯಾಸು

ದಾಸ ಪ್ರಕಾಶದಲ್ಲಿ ಬೆಳದಿಂಗಳೂಟ ಸಮಾರಂಭ—ವಿದ್ಯಾನಿಧಿ ಹೋಟೆಲ್ ದಾಸ ಪ್ರಕಾಶದ ನಾಟಕಾರಂಭ ಶ್ರೀ ಕೆ ಸೀತಾರಾಮಯ್ಯನವರಿಂದ ನುದ್ಯಾಸನಲ್ಲಿ ಟೂರಿಸ್ಟ್ಸೀಕ್ ಉದ್ಘಾಟನೆ ಕುರಿತು ಆಗಮಿಸಿರುವ ಕೇಂದ್ರ ಸರಕಾರದ ನೌಕೆ ಎತ್ತು ಸಂಚಾರ ಖಾತೆಯ ಮಂತ್ರಿ ಶ್ರೀ ರಿಜಟ ಹಮ್ಮೂರ್‌ರವರು ತಾ 9ರಂದು ಜರುಗಿದ ಬೆಳದಿಂಗಳ ಊಟದ ಮುಖ್ಯ ಆತಿಥಿಗಳಾಗಿದ್ದರು ಈ ಸಮಾರಂಭಕ್ಕೆ ನೆರೆದ ಹಲವಾರು ಅಧ್ಯಕ್ಷ ಸರೂ ಮುಕ್ತಕಂಠದಿಂದ ಆಗಮಿಸಿದ್ದರು ವಾಸ್ ಪ್ರಕಾಶದ ಮೆನೇಜರ್ ಶ್ರೀ ಪಿ ಆನಂದರಾಯರು ಸ್ವಾಗತ ಭಾಷಣವನ್ನು ಮಾಡಿದರು ಮುಖ್ಯ ಆತಿಥಿ ಶ್ರೀ ಸೀತಾರಾಮಯ್ಯನವರು ಹೋಟೆಲು ಉದ್ಯಮದಲ್ಲಿ ಮೇಲ್ಪಂಕ್ತಿಯಾಗಿ ರಚಿಸಿರುವ ಆವರ ಸಂಸ್ಥೆಗಳನ್ನು ಕೊಂಡಾಡಿದರು ನಂತರ ನೃತ್ಯಕಲಾ ಪ್ರದರ್ಶನ, ಮನರಂಜನೆ ಇತ್ಯಾದಿ ಕಾರ್ಯಕ್ರಮಗಳಿಂದ ಕೂಡಿತ್ತು

ಉಡ್ಡಿಡಿ ಮುನ್ಸೀಫ್ ಕೋರ್ಟಿನಲ್ಲಿ

O S No 330/1957

ಶ್ರೀ ಸುಜ್ಞಾನೇಂದ್ರ ತೀರ್ಥಸ್ವಾಮಿ ಯರ್ಫಾ-ವಾದಿಯು

ಮತ್ತ

ಕೃಷ್ಣ ಬ್ಯಾರಿ —ಪ್ರತಿವಾದಿ ಇವರೊಳಗೆ ಮೊದಲಿಂತೆ ವ್ಯಾಜ್ಯವು ಪ್ರತಿವಾದಿಯಿಂದ ವಾದಿಗೆ ಬರತಕ್ಕ ಸೂಲಲಗೇಣಿಗೆ ಸಂಬಂಧಿಸಿಕೆಗೆ ನೂಡಿದ್ದಾಗಿದ್ದು ಸದ್ರಿ ವ್ಯಾಜ್ಯದ ನೋಟ್ಸು ತಾರೀಕು 30—11—37ಕ್ಕೆ ಇಟ್ಟಿರುವ ದ್ರಿಂದ ಪ್ರತಿವಾದಿಯು ತನ್ನ ಆಕ್ಷೇಪಣೆಯ ಹೇಳುವನ್ನು ಆ ದಿನ ಸಬ್ ಕೋರ್ಟು ಮುಂದೆ ಹಾಜರಾಗಿ ಜ್ಯಾಸ್ತಿಗೆ ಮಾಡಿಕೊಳ್ಳತಕ್ಕದ್ದು

P Padmanabha Rao
Vakil for plaintiff
Dated 18—11—37, Udipi

ವಿಮಾನ ಸಾರಿಗೆಯ ಪ್ರಗತಿ

(೩ನೇ ಪುಟದಿಂದ)

ನ್, ರೋಂ, ಸಿಂಗಪುರ, ಸಿಡ್ನಿ, ಟೋಕಿಯೋ ಮತ್ತು ಜೂರಿಚ್ ವಿರ್ ಇಂಡಿಯಾ ಇಂಟರ್ ನೇಷನಲ್ ವಿಮಾನಗಳು ಲಂಡನ್ನಿಗೆ ಪ್ರತಿನಿತ್ಯವೂ ಪ್ರಯಾಣ ಮಾಡುತ್ತವೆ.

ಭಾರತದ ಏರ್ ಇಂಡಿಯಾ ಇಂಟರ್ ನೇಷನಲ್ ಸಂಸ್ಥೆಯು ಅಂತಾರಾಷ್ಟ್ರೀಯ ವಿಮಾನ ಸಂಚಾರ ಕ್ಷೇತ್ರದಲ್ಲಿ ೧೯೬೦ ಆನಿಭಾಗದಲ್ಲಿ ಮೂರು "ಜೋಯಿಂಗ್" ಜೆಟ್ ವಿಮಾನಗಳನ್ನು ಕಾರ್ಯಾಚರಣೆಗೆ ತರಲಿದೆ. ಈ ವಿಮಾನಗಳು ಗಂಟೆಗೆ ೬೦೦ ಮೈಲಿಗಳ ವೇಗದಲ್ಲಿ ಹಾಗೂ ೪೦,೦೦೦ ಅಡಿಗಳ ಎತ್ತರದಲ್ಲಿ ಚಾರುತ್ತವೆ. ಈ-ಜೆಟ್ ವಿಮಾನಗಳಲ್ಲಿ ೧೨೦ ಮಂದಿ ಪ್ರಥಮ ಹಾಗೂ ಪ್ರವಾಸಿ ತರಗತಿಗಳ ಪ್ರಯಾಣಿಕರು ಕೂಡಬಹುದಾಗಿದೆ. ಈ ವಿಮಾನಗಳು ಕಾರ್ಯಾಚರಣೆಗೆ ಒಪ್ಪಾಗ ಮುಂಬೈಯಿಂದ ಲಂಡನ್ನಿಗೆ ವಿಮಾನ ಪ್ರಾರಂಭದ ಕಾಲವನ್ನು ಒಟ್ಟಿಪ್ಪು ಗಂಟೆಗಳಿಗೆ ತಳಿಯುವ ಸಂಭವ ವಿದೆ.

ನಾಗರಿಕ ವಿಮಾನಸಂಚಾರ ಶಾಖೆಯ ಅಧೀನದಲ್ಲಿ ೨೮ ವಿಮಾನ ನಿಲ್ದಾಣಗಳಿವೆ. ಇವುಗಳಲ್ಲಿ ಮೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣಗಳಿವೆ. ಇವುಗಳಾವುವೆಂದರೆ:—ಸಾಂತಾ ಕ್ರೂಜ್ (ಮುಂಬೈ) ಡಂಡಂ (ಕಲ್ಕತ್ತ) ಮತ್ತು ಪಲಂ (ದೆಹಲಿ) ಎಲ್ಲ ಮುಖ್ಯ ವಿಮಾನನಿಲ್ದಾಣಗಳಿಗೆ, ವಿಮಾನ ಸಂಚಾರ ನಿಯಂತ್ರಣಗಳಿಗೆ ಸಂಬಂಧಿಸಿದ ಕರಾರುವಾಕ್ಕಾದ ವಿವಿಧ ಸಲಕರಣೆಗಳನ್ನು ಒದಗಿಸಲಾಗಿದೆ. ವಿಮಾನಗಳು ಯಾವಯೋಗ್ಯವಾಗಿವೆಯೇ ಇಲ್ಲವೆ, ಸುರಕ್ಷಿತವಾಗಿವೆಯೇ ಮುಂತಾದುವನ್ನು ನೋಡಿಕೊಳ್ಳುವುದಕ್ಕಾಗಿ ೨೮ ಮುಖ್ಯ ವಿಮಾನ ನಿಲ್ದಾಣಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

ವಿಮಾನ ಚಾಲಕರು ಒಂದು ವಿಮಾನ ನಿಲ್ದಾಣದಿಂದ ಇನ್ನೊಂದು ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ವಿಮಾನಗಳನ್ನು ಹಾರಿಸಲು ಸಾಧ್ಯವಾಗುವಂತೆ ವಿಮಾನ ನಿಲ್ದಾಣಗಳಲ್ಲಿ ವೈರ್‌ಲೆಸ್ ಟ್ರಾನ್ಸ್‌ಮಿಟಿಂಗ್ ಕೇಂದ್ರಗಳನ್ನು ದಂಡಿಯಲ್ಲಿ ನಿರ್ಮಿಸಲಾಗುತ್ತಿದೆ. ಈ ಕೇಂದ್ರವು ವಾಯುಸಂಚಾರ ಸಂಬಂಧವಾದ ಸಂಪರ್ಕ ಸೇವೆಯ ಆಗತ್ಯಗಳನ್ನು ಪೂರೈಸುವುದು. ೬೫ ಲಕ್ಷ ರೂ.ಗಳ ವೆಚ್ಚದ ಈ ಕೇಂದ್ರವು ನಿತ್ಯವೂ ೪,೦೦೦ ಸಂದೇಶಗಳನ್ನು ಸಿಗ್ನಲ್ ಹಿಸುವ ನಿರೀಕ್ಷೆಯಿದೆ. ೬೫ ಟ್ರಾನ್ಸ್‌ಮಿಟರ್ ಯಂತ್ರಗಳನ್ನು ಈ ಕೇಂದ್ರವು ಲಂಡ ವಿಧದ ತರಂಗ ಪ್ರಮಾಣಗಳಲ್ಲಿ ಹಾಗೂ ೩೭ ಪ್ರತ್ಯೇಕ ರೇಡಿಯೋ ವಿದ್ಯುತ್ ಪ್ರವಾಹ ಮಾರ್ಗಗಳಲ್ಲಿ ಕೆಲಸ ನೂಡುವುದು.

ವಿಮಾನ ಸಾರಿಗೆಯ ರಕ್ಷಣೆ ಹಾಗೂ ಕ್ರಮಬದ್ಧತೆಯ ವಿಚಾರದಲ್ಲಿ ವಿಮಾನ ಚಾಲಕ ವರ್ಗದ ಹಾಗೂ ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ಸಂಚಾರ ಯೋಗ್ಯವನ್ನಾಗಿಡುವ ಜವಾಬ್ದಾರಿ ಪಡೆದಿರುವ ಸಂಸ್ಥೆಯು ದಕ್ಷತೆಯು ಅತಿ ಮುಖ್ಯವಾದ ಆದರವಾಗಿರುವುದು. ಇಂದು ವೈದ್ಯಾನಿಕರು, ಎಂಜಿನಿಯೆದುಗಳು, ವಿಮಾನ ನಿಲ್ದಾಣ ಅಧಿಕಾರಿಗಳು, ನಿಯಂತ್ರಣ ಓಪರೇಟರ್‌ಗಳು, ರೇಡಿಯೋ ಓಪರೇಟರ್‌ಗಳು, ವೈಮಾನಿಕ ಶಿಕ್ಷಕರು ಮತ್ತು ತಂತ್ರಜ್ಞರು ಇವರೆಲ್ಲರಿಗೂ ಅಲಾಹಾಬಾದಿನಲ್ಲಿರುವ ನಾಗರಿಕ ವಿಮಾನ ಸಂಚಾರ ತರಬೇತಿ ಕೇಂದ್ರದಲ್ಲಿ ತರಬೇತಿ ನೀಡಲಾಗುತ್ತಿದೆ. ಕಳೆದ ವರ್ಷ ಅಲಹಾಬಾದಿನ ಕೇಂದ್ರವು ೩೭೬ ಶಿಕ್ಷಣಾರ್ಥಿಗಳಿಗೆ ತರಬೇತಿ ನೀಡಿತು.

ವಿಮಾನಗಳ ಚಾಲನೆಯಲ್ಲಿ ತರಬೇತಿ ನೀಡುವ ಫ್ಲೈಯಿಂಗ್ ಕ್ಲಬ್‌ಗಳ ಪಾತ್ರ ಪ್ರಸ್ತುತ ಸ್ವತಂತ್ರ ಭಾರತದಲ್ಲಿ ಮಹತ್ವಪೂರ್ಣವಾಗಿದೆ. ಅಂತಹ ೧೨ ಕ್ಲಬ್‌ಗಳನ್ನು ಬೆಂಗಳೂರು, ದೆಹಲಿ, ಮುಂಬೈ, ಮದರಾಸು, ಪಾಟ್ನಾ, ಜ್ಯಾರ್‌ಕ್‌ಪುರ, ಭುವನೇಶ್ವರ, ಲಖನೌ, ಜಲಂಧರ್, ನಾಗಪುರ, ಜಯಪುರ ಮತ್ತು ಇಂಫೂರುಗಳಲ್ಲಿ ಸ್ಥಾಪಿಸಲಾಗಿದೆ.

ಆಂಧ್ರದಲ್ಲಿರುವ ಹೈದರಾಬಾದ್ ಸ್ಪೋರ್ಟ್ ಏವಿಯೇಶನ್ ತರಬೇತಿ ಕಾರ್ಯವನ್ನು ಪ್ರಾರಂಭಿಸುವ ದಿನದಿಂದ ಆ ಕ್ಲಬ್‌ಗೆ ಸಹಾಯಧನವನ್ನು ನೀಡಲು ಭಾರತ ಸರಕಾರವನು ನಿರ್ಧರಿಸಿದ್ದಾರೆ. ಸರಕಾರವನು ೧೯೫೫-೫೬ರಲ್ಲಿ ಫ್ಲೈಯಿಂಗ್ ಕ್ಲಬ್‌ಗಳಿಗೆ ೧೩.೭೪ ಲಕ್ಷ ರೂಗಳ ಹಣವನ್ನು ಸಹಾಯಧನದ ರೂಪದಲ್ಲಿ ನೀಡಿರುವರು.

ಅನಾಹುತದ ಸುಳಿಯಿಂದ

(೨ನೇ ಪುಟದಿಂದ)

ಸಂಕಕ್ಕಿಷ್ಟು ಸಮೀಪದಲ್ಲಿರುವುದನ್ನು ಕಂಡವನಿಗೆ ಕಣ್ಣೀರು ತುಂಬಿ ಬಂತು. ಆದರೂ ಆದು ಬಲುದೂರವಿದ್ದಂತಿತ್ತು. ಅಷ್ಟರಲ್ಲಿ ಇನ್ನೊಂದು ಅನಾಹುತವನ್ನು ಅವರು ಎದುರಿಸಬೇಕಾಯಿತು ನೀರಿನಡಿಯಿಂದ ಸಿಡಿದೆದ್ದುಬರುವ ರಾಕ್ಷಸನಂತೆ, ಒಂದೊಡ್ಡ ಮರವು ಬುಡಮೇಲಾಗಿ ಮೇಲೆ ಬಂತು. ಅದು ಒಂದು ಕ್ಷಣ ಅವರ ಸಮೀಪದಲ್ಲಿ ಸ್ತಬ್ಧವಾಗಿ ನಿಂತು, ಮರು ಕ್ಷಣವಲ್ಲಿ ವೇಗವತ್ತಾಗಿ ಚಲಿಸತೊಡಗಿತು.

ವಿಮಾನಚಾಲನೆಯ ಬಗ್ಗೆ ಯುವಕರಲ್ಲಿ ಉತ್ತೇಜನವನ್ನುಂಟುಮಾಡುವುದಕ್ಕಾಗಿ ವಿವಿಧ ಫ್ಲೈಯಿಂಗ್ ಕ್ಲಬ್‌ಗಳಿಗೆ ೫೦ ವ್ಯಾಸಂಗ ನೇರವನಗಳನ್ನು ನೀಡಲಾಗಿದೆ. ಇವುಗಳಲ್ಲಿ ೧೨ ವ್ಯಾಸಂಗವೇತನಗಳು ಮಹಿಳಾ ಶಿಕ್ಷಣಾರ್ಥಿಗಳಿಗೆ ಪ್ರಾಪ್ತಿಯಾಗಿವೆ.

ಭಾರತವು ೧೫ ರಾಷ್ಟ್ರಗಳೊಂದಿಗೆ ವಿಮಾನ ಸಂಚಾರ ಸಂಬಂಧವಾದ ಒಪ್ಪಂದಗಳನ್ನು ಮಾಡಿಕೊಂಡಿದೆ. ಈ ರಾಷ್ಟ್ರಗಳಾವುವೆಂದರೆ:— ಆಫ್ಘಾನಿಸ್ತಾನ, ಆಸ್ಟ್ರೇಲಿಯಾ, ಸಿಲೋನ್, ಈಜಿಪ್ಟ್, ಫ್ರಾನ್ಸ್, ಇರಾಕ್, ಜಪಾನ್, ಹಾಲೆಂಡ್, ಪಾಕಿಸ್ತಾನ, ಫಿಲಿಪೈನ್ಸ್ ದ್ವೀಪಗಳು, ಸ್ವೀಡನ್, ಸ್ವಿಜ್ಜರ್‌ಲೆಂಡ್, ಥೈಲೆಂಡ್, ಗ್ರೇಟ್ ಬ್ರಿಟನ್ ಮತ್ತು ಅಮೇರಿಕಾದ ಸಂಯುಕ್ತ ಸಂಸ್ಥಾನಗಳು. 'ಪೆಡ್ಯೂಲ್ಡ್' ವಿಮಾನ ಸಂಚಾರ ಸೇವೆಗಳ ಬಗ್ಗೆ ಎಂಟು ರಾಷ್ಟ್ರಗಳೊಂದಿಗೆ ತಾತ್ಕಾಲಿಕ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಈ ರಾಷ್ಟ್ರಗಳಾವುವೆಂದರೆ:— ನಾರ್ವೆ, ಡೆನ್ಮಾರ್ಕ್, ಸ್ವೀಡನ್, ಬರ್ಮಾ, ನೇಪಾಳ, ಇಟಲಿ, ಪಶ್ಚಿಮ ಜರ್ಮನಿ ಮತ್ತು ಲೆಬನಾನ್.

ಅಂತಾರಾಷ್ಟ್ರೀಯ ನಾಗರಿಕ ವಿಮಾನಸಂಚಾರ ಸಂಸ್ಥೆಯು ಪ್ರಾರಂಭವಾದಾಗಿನಿಂದಲೂ ಭಾರತವು ಆ ಸಂಸ್ಥೆಯ ಸದಸ್ಯತ್ವವನ್ನು ಪಡೆದಿದೆ.

ಭಾರತವು ನಾಗರಿಕ ವಿಮಾನ ಸಂಚಾರತ್ವ ಪ್ರಗತಿಪಥದಲ್ಲಿ ದೊಡ್ಡ ದೊಡ್ಡ ಹೆಜ್ಜೆಗಳನ್ನಿಡಲು ಶಕ್ತಿಯಿಸುತ್ತಿದೆ. ಆದರೆ ಸ್ವಾತಂತ್ರ್ಯ ಪ್ರಾಪ್ತಿಯಾದಾಗಿನಿಂದಲೂ ಗಳಿಸಿರುವ ಸಾಧನೆಗಳು ಗಮನಾರ್ಹವೂ ಉತ್ತೇಜನಪೂರ್ವಕವೂ ಆಗಿರುವುವು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿನೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಔಷಧಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

"ಇದೀಗ ಕೊನೆ"— ಅವನು ಕಣ್ಣು ಮುಚ್ಚಿಕೊಂಡು ತುಟಿ ಕಚ್ಚಿಕೊಂಡು ಯೋಚಿಸಿದ. ದನವನ್ನು ಮರದಿಂದ ತನ್ನನ್ನು ಕಾಪಾಡಿಕೊಳ್ಳಲು ಕಡಪಡಿಸುತ್ತಿದ್ದಾಗ, ಆತನ ಕಂಕಳ ಕ್ಕೊಂದು ಎಳೆತ ಬಿದ್ದಂತಾಯಿತು. ಅವನೊಂದು ಭಯಂಕರವಾದ ಹೊಡೆತದ ಶಬ್ದವನ್ನು ಕೇಳಿದನು. ಆ ಮೇಲೆ ನೀರು ಅವನ ಬೆನ್ನಿನ ಮೇಲೆ ತಡೆದು ಸುಳಸುಳಿಯಾಗಿ ಅವನ ಸುತ್ತ ನೊರೆಯೆಬ್ಬಿಸಿದಂತಾಯಿತು. ಆಮ ಅವನನ್ನು ಆಡಿಯ ನೆಲದವರೆಗೆ ಒತ್ತಿಹಿಡಿದು ಕೆಸರಿನಲ್ಲಿ ಹೂತುಬಿಟ್ಟಂತಾಯಿತು.

ನೀರಿನ ಭಾರದಿಂದ ವಿನೋಚನೆಗೊಂಡಾಗ, ಒಂದು ಯುಗವೇ ಕಳೆದಂತೆ ಭಾವವಾಯಿತು. ಕೃತಜ್ಞತೆಣ ನೀರು ಕಾಣೆಯಾಯಿತು. ಏನೋ ಬೆಳಕನ್ನು ಕಾಣುತ್ತಿರುವಂತಾಯಿತು ಅವನಿಗೆ ಗಾಳಿಯಲ್ಲಿ ಎದ್ದು ನಿಲ್ಲುವಂತಾಯಿತು. ಅವನ ಶರೀರದಿಂದ ನೀರು ದೂರವಾದುದು ತಿಳಿದಾಗ ಬಹುಭಾರವು ಕಳೆದುಹೋಗಿತ್ತು.

ಸೇತುವೆಯಡಿಯಲ್ಲಿನ ಎರಡು ಮುಖ್ಯ ಸ್ವಾಹೆಗಳ ನಡುವಿದ್ದ ಹೊಗೆಗಂಬಿ ಯಲ್ಲಿ ಆತ ಬಿದ್ದುಕೊಂಡಿದ್ದನು. ಅವನೆದ್ದು ಕಣ್ಣು ಉಜ್ಜಿಕೊಂಡನು. ಹೌದು, ಅವನ ದನ ಹೋಗಿತ್ತು. "ದನ ಎಲ್ಲಿದೆ?"

ನೀರಿನ ಸಮತಳದಲ್ಲಿ ತನ್ನ ದನಕ್ಕಾಗಿ ಅವನು ದೃಷ್ಟಿಹಾಕಿದನು. ತನ್ನ ಪ್ರೀತಿಯ ಗೋವು ನೀರಲ್ಲಿ ಮುಳುಗಿತೆಂದಾ ತನಿಗೆ ಪರಿವೆಯಾದಾಗ, ಅವನಿಗೆ ಮೂರ್ಛೆಬಂದಂತಾಯಿತು. ಅವನು ಆ ಸುತ್ತ ತ್ತಿರುವ, ನೊರೆಕಾರುತ್ತಿರುವ ನೀರಸಾಗರದ ಮಧ್ಯದಲ್ಲಿಯೇ ದಿಙ್ಮೂಢನಾಗಿ ನಿಂತುಬಿಟ್ಟನು. ಪ್ರಾಯಃ ಅವನು ಹಾಗೆಯೇ ನಿಂತುಬಿಡುತಿದ್ದನೋ ಏನೋ, ಒಂದು ಗಟ್ಟಿಯಾದ ದನದ ಕೂಗು ಕೇಳಿಸಿತು!

ಅವನು ಒಂದು ಸುತ್ತು ತಿರುಗಿ ನೋಡಿದನು. ಆದರೆ, ಅಲ್ಲಿ ಯಾವ ದನವೂ ಕಂಡುಬರಲಿಲ್ಲ. ಆಷ್ಟರಲ್ಲಿ ಇನ್ನೊಂದು ಕೂಗು ಮೇಲಿನಿಂದ ಕಿವಿಗೆ ಬಡಿಯಿತು. ದನವು ನೀರಿನಲ್ಲಿ ಮುಳುಗಿತ್ತು. ಸ್ವರ್ಗವನ್ನು ಸೇರಿಬಿಟ್ಟಿತೆ? ಎಂದುಕೊಂಡು ಡಾತ ಮೇಲೆ ಕತ್ತೆತ್ತಿದನು. ಅಲ್ಲಿ ಅವನ ದನವು ಸಂಕದ ಮೇಲೆ ನಿಂತುಕೊಂಡು, ಕೆಳಗಡೆಗೆ ಅವನನ್ನೇ ನೋಡುತಿತ್ತು! ನಾಲ್ಕು ದೃಷ್ಟಿಗಳೂ ಒಂದಾದುವು. ದನವು ಪುನಃ ಗಟ್ಟಿಯಾಗಿ "ಅಂಬೇ" ಎಂದಿತು. ಆವರಿಬ್ಬರೂ ನೆರೆಯಿಂದ ಹೊರಗೆ ಬಂದಿದ್ದರು.

(ಮೂಲ: ಯೋಜನಾ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಾಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಜತ್ತಿ ಸಮಿತಿಯ ವರದಿ—

ಭೂಸುಧಾರಣೆಯ ಹೆಸರಲ್ಲಿ ಆಸ್ತಿ ದರೋಡೆಯೇ?

ಶ್ರೀ. ಜಿ. ಕೆ. ಗೋವಿಂದ ಭಟ್ಟ, ಬೆಂಗಳೂರು.

ಇತಿಹಾಸದಲ್ಲಿ ಆನೇಳ ಪ್ರಮುಖ ಘಟನೆಗಳಾಗಿ ತೋಗಿವೆ. ಜನಜೀವನದ ಮೇಲೆ ಪರಿಣಾಮವನ್ನೆಸಗಿ ಜೀವನ ಪಥವನ್ನೇ ಬದಲಾಯಿಸಿವೆ. ಆದರೂ ಹಳ್ಳಿಯ ಜನತೆಗೆ ಕೇರಳ ನುತ್ತು ಮೈಸೂರು ಸರಕಾರಗಳ ನಿಯೋಜಿತ ಭೂಸುಧಾರಣೆಗಳು ಕೊಟ್ಟಿರುವ ಆಘಾತಕ್ಕೆ ಬೇರೆ ಸಮಾನಾದ ಘಟನೆಗಳು ಇತಿಹಾಸದಲ್ಲಿ ದೊರಕುವುದು ಕಷ್ಟವಾದೀತು.

ಈ ರಾಜ್ಯಗಳ ಬಹು ಸಂಖ್ಯಾತರು ಕೃಷಿಕರೆಂಬುದನ್ನು ಮರೆಯಬಾರದು. ಭೂಸುಧಾರಣೆಯ ನೆಪವಲ್ಲಿ, ಈ ರಾಜ್ಯ ಸರಕಾರಗಳು ಶಾಸನಬದ್ಧ ದರೋಡೆಯನ್ನೆಸಗಲು ಸಿದ್ಧವಾಗಿವೆ. ಬೇಸಾಯದ ವ್ಯಾಸಾಯಾರಿಕ ತಿಳುವಳಿಕೆ ಏನೂ ಇಲ್ಲದ ಕೆಲವೊಂದು ಧ್ಯೇಯವಾದಿಗಳಿಂದ ಕೂಡಿರುವ ಯೋಜನಾ ಸಮಿತಿಯು ಜೆಲ್ಲಿಯಿಂದ ಈ ಶಾಸನಗಳನ್ನು ನಿರ್ದೇಶಿಸತೊಡಗಿವೆ. ಯೋಜನಾ ಸಮಿತಿಯ ಸದಸ್ಯರಿಗೆ ವ್ಯವಸಾಯದ ಬಗ್ಗೆ ಇರುವ ಅಲ್ಪಸ್ವಲ್ಪ ತಿಳುವಳಿಕೆ ಗಂಗಾ—ಯಮುನಾ ನದಿಗಳು ಹರಿಯುವ ಭೂಮಿಗಳಿಗೆ ಅನ್ವಯಿಸಬಹುದು. ಈ ಆದರ್ಶವಾದಿಗಳು ‘‘ಭೂರಹಿತರಿಗೆ ಭೂಮಿ’’, ‘‘ಉಳುವವನೇ ನೆಲದೊಡೆಯ’’ ಎಂಬ ಕೆಲವು ಮುದ್ರಾವಾಕ್ಯಗಳಿಂದ ಪ್ರೇರೇಪಿತರಾಗಿದ್ದು ಅವು ಅವರ ನಿತ್ಯಜಪವಾಗಿ ಹೋಗಿವೆ.

ಯೋಜನಾ ಸಮಿತಿಯು ಈ ಸಂಬಂಧವಾಗಿ ಮಾಡಿರುವ ಶಿಫಾರಸುಗಳು ಅವರ ವ್ಯಾವಹಾರಿಕ ಅನುಭವದ ಅಲ್ಪತನವನ್ನೆತ್ತಿ ತೋರಿಸುತ್ತಿದೆ. ವಿಶೇಷ ಕಾರಣಗಳ ಹೊರತು, ನ್ಯಾಯಗೇಣಿಯು ಒಟ್ಟು ಉತ್ಪತ್ತಿಯ 1/4 ಅಧವಾ 1/5 ಕ್ಕಿಂತ ಹೆಚ್ಚಾಗಬಾರದೆಂಬ ಸೂಚನೆಯು ಇಂತಹ ಸೂಚನೆಗಳಲ್ಲೊಂದು. ಈ ಶಿಫಾರಸನ್ನು ಮೈಸೂರಿನ ಜತ್ತಿ ಶಿವಮೂರ್ತಿಯು, ಕೇರಳದಲ್ಲಿ ಅಲ್ಲಿನ ಸರಕಾರವೂ ಅಕ್ಷರಶಃ ಸ್ವೀಕರಿಸಿದೆ. (ಕೇರಳ ಸರಕಾರ ಗೇಣಿಯನ್ನು ಉತ್ಪತ್ತಿಯ 1/6 ಕ್ಕಿಳಿಸುವ ಆರೋಜನೆಯಲ್ಲೂ ಇದೆ.) ಈ ನ್ಯಾಯಗೇಣಿಯ ಆಧಾರದಲ್ಲಿ ಈಗಿನ ಭೂಮಾಲಿಕರಿಗೆ ಪರಿಹಾರಧನವನ್ನೀಯಲಾಗುವುದು. ಆದರೆ ನ್ಯಾಯಗೇಣಿಯನ್ನು ಈ ರೀತಿ ನಿಶ್ಚಯಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಅವರಾರೂ ಆಲೋಚಿಸಿರುವುದಿಲ್ಲ ಹುತ್ತೂರು ಅಥವಾ ಸಾಗರದಲ್ಲಿಯ ಒಂದು ಮನೆಗೆ, ಬೊಂಬಾಯಿಯಲ್ಲಿ ಅಂತಹದೇ ಮನೆಗಿರುವ ಬಾಡಿಗೆಯನ್ನು ನಿಶ್ಚಯಿಸುವುದು ನ್ಯಾಯವಾದೀತೇ? ಆಥವಾ ಅದು ಥರ್ಮವೇ? ಒಂದೇ ನಗರದ ವಿವಿಧ ಭಾಗಗಳಲ್ಲಿ ಮನೆ ಬಾಡಿಗೆಗಳು ಹೆಚ್ಚು ಕಡಿಮೆ ಇರುತ್ತವೆ. ಮನೆಯಿರುವ ಜಾಗದ ಪ್ರಾಶಸ್ತ್ಯ, ನೀರುಬಾವಣಿಯ ಅನುಕೂಲತೆಗಳು, ಜನಸಾಂದ್ರತೆ, ಆ ಮನೆಗಿರುವ ಬೇಡಿಕೆ ಮೊದಲಾದ ವಿವಿಧ ವಿಷಯುಗಳ ಪರಿಶೀಲನಾನಂತರವೇ ಮನೆಬಾಡಿಗೆಯು ನಿಶ್ಚಯಿಸಲ್ಪಡುತ್ತದೆ. ಗೇಣಿ ಅಥವಾ ಬಾಡಿಗೆ ಎಂಬುದರ ಅರ್ಥವಾದರೂ ಏನು? ಒಬ್ಬನು ತನ್ನ ಆಸ್ತಿಯನ್ನು ಉಕಯೋಗಿಸಲು ಇನ್ನೊಬ್ಬನಿಗಿತ್ತರೆ, ಆ ಉಪಯೋಗಕ್ಕಾಗಿ ಕೊಡುವ ಪರಿಹಾರ ದ್ರವ್ಯವು ಬಾಡಿಗೆ ಅಥವಾ ಗೇಣಿ ಎಂದೆಣಿಸಲ್ಪಡುತ್ತದೆ. ಅಂತೆಯೇ ಹೋಟಲಲ್ಲಿ ಉಳಕೊಂಡವನೂ ಕೋಣೆಯ ಉಪಯೋಗಕ್ಕಾಗಿ ಬಾಡಿಗೆಯನ್ನು ತೆರುತ್ತಾನಷ್ಟೆ ನ್ಯಾಯವಾದ ಹಾಗೂ ಸಕಾರಣವಾದ ಗೇಣಿಯನ್ನು ಮಾತ್ರ ವಸೂಲುಮಾಡಬಹುದೆಂದು ಹೇಳಲು ಶಾಸನಸಭೆಗಿರುವ ಅಧಿಕಾರವನ್ನು ಯಾರೂ ಪ್ರಶ್ನಿಸುತ್ತಿಲ್ಲ. ಆದರೆ ನ್ಯಾಯ ಗೇಣಿಯು ಸಮಂಜಸವೋ ಎಂಬುದು ಶಾಸನಸಭೆಯ ವಿವೇಚನೆಗೊಳಪಟ್ಟ ವಿಚಾರವಲ್ಲ. ಅದು ನ್ಯಾಯಾಂಗಗಳ ಪರಿಶೀಲನೆಗೊಳಗಾಗಬೇಕಾಹುದು. ಅನೇಕ ವಿಷಯಗಳ ತುಲನಾಂತರ ಮಾತ್ರವೇ ಗೇಣಿ ದ್ದ ಸಮಂಜಸತೆಯ ಬಗ್ಗೆ ನಿರ್ಣಯಕ್ಕೆ ಬರಲು ಸಾಧ್ಯ. ಈ ಸಂದರ್ಭದಲ್ಲಿ ಅಮೇರಿಕಾದ ಸುಪ್ರೀಂ ಕೋರ್ಟಿನ ತೀರ್ಪುಗಳಲ್ಲಿ ಹೇಳಿರುವ ವಿಷಯುಗಳನ್ನು ಗಮನಿಸಬೇಕು.

‘‘ಒಬ್ಬನಿಂದ ತನ್ನ ಆಸ್ತಿಯನ್ನು ಉಪಯೋಗಿಸಿದ್ದುಕ್ಕಾಗಿ ಯೋಗ್ಯ ಬಾಡಿಗೆಯನ್ನು ಪಡೆಯಲಿರುವ ಅಧಿಕಾರವು ನ್ಯಾಯಾಂಗಗಳ ಪರಿಶೀಲನೆಗಳಿಗೊಳಗಾಗದೆ ಕಸಿಯಲ್ಪಟ್ಟಿರೆ, ಅಂತಹ ಆಪತ್ತಿರುವುದೋ, ಧನಿಗೆ ಆಸ್ತಿಯ ನ್ಯಾಯ ಸಮ್ಮತ ಉಪಯೋಗಕ್ಕೆ ತಡೆ ಮಾಡಿದಂತೆ ಆರ್ಥಾತ್ ಅಮೇರಿಕಾದ ರಾಜ್ಯಾಂಗ ಘಟನೆಗೆ ವಿರೋಧವಾಗಿ ಆವನ ಆಸ್ತಿಯನ್ನೇ ಕಸಿದುಕೊಂಡಂತೆ ಆಗುತ್ತದೆ. ಈ ರೀತಿ, ವೆಚ್ಚನೂಡಿದ ಬಂಡವಾಳಕ್ಕೆ ತಕ್ಕ ಲಾಭವನ್ನು ಗಳಿಸಲು ಪ್ರಜೆಗಳಲ್ಲಿ ಒಂದು ವರ್ಗಕ್ಕೆ ಅವಕಾಶವಿತ್ತು. ಇನ್ನೊಬ್ಬನಿಂದ ಅಂತಹ ಹಕ್ಕನ್ನು ತೆಗೆಯುವುದು ಎಲ್ಲರಿಗೂ ಸಮಾನ ಸಂರಕ್ಷಣೆ ಕೊಡುವ ಶಾಸನದ ಭರವಸೆಗೆ ವಿರೋಧವಾದುದು.’’

ಮನೆ ಬಾಡಿಗೆ ನಿಯಂತ್ರಣ ಶಾಸನಗಳ ಪ್ರಕಾರ ಭಾರತದ ಎಲ್ಲಾ ನಗರಗಳಲ್ಲಿಯೂ ಮನೆ ಹಾಗೂ ಇತರ ಕಟ್ಟಡಗಳ ಮಾಲೀಕರಿಗೆ ತಾವು ನೂಡಿದ ವೆಚ್ಚಕ್ಕನುಸಾರವಾಗಿ ಬಾಡಿಗೆ ವಸೂಲು ಮಾಡುವ ಅವಕಾಶವಿದೆ. ಮೈಸೂರಿನ ಶಾಸನವು, ಹಾಕಿದ ಬಂಡವಾಳದ ಶೇಕಡಾ 6 ರಷ್ಟನ್ನು ಯೋಗ್ಯ ಬಾಡಿಗೆ ಎಂದು ಗಣಿಸುತ್ತದೆ. ಆದರೆ ಜತ್ತಿ ಸಮಿತಿಯ ಯಾ ಕೇರಳ ಸರಕಾರದ ಸೂಚನೆ ಪ್ರಕಾರ ಜಮೀನುಗಳ ಗೇಣಿ ನಿರ್ಣಯವಾದರೆ, ಜಮೀನಿಗಾಗಿ ನೂಡಿದ ನಿಜವಾದ ಶೇಕಡಾ ಒಂದರಷ್ಟೂ ಗೇಣಿ ದೊರಕದ ಅನೇಕ ಸಂದರ್ಭಗಳುಂಟಾಗಬಹುದು. ಸಾಲಿಕನಿಗೆ ದೊರೆಯಬಹುದಾದ ಪರಿಹಾರ ಧನ ಆಸ್ತಿಗೆ ಅವನಿತ್ತ ಬೆಲೆಯ ಕಾಲಂಶದಷ್ಟಾದರೂ ಆದೀತೆನ್ನಲು ಬರುವುದಿಲ್ಲ. ದ. ಕೆನ್ನಡ ಜಿಲ್ಲೆಯಲ್ಲಿ ಆಸ್ತಿಯನ್ನು ಕೊಳ್ಳುವಾಗ ಆದರೆ ಬೆಲೆಯ ಶೇಕಡಾ ಎಂಟರಷ್ಟು ಛಾಪಾಕಾಗದ ಕೊಡಬೇಕು. ಕೇರಳ ಸರ್ಕಾರವು ಕೊಡಲು ಆಲೋಚಿಸಿರುವ ಪರಿಹಾರಧನ ಆಸ್ತಿಯನ್ನು ಕೊಡುವಾಗ ತೆತ್ತ ಛಾಪಾ ಕಾಗದದಷ್ಟೂ ಆಗಲಾರದು. ಇಂತಹ ಮಸೂದೆಯನ್ನು ನ್ಯಾಯವಾದುದೆಂದು ಹೇಗೆ ಕರೆಯಬೇಕು? ಇದು ಕಾನೂನು ನಿರ್ಮಾಪಕರ ದಬ್ಬಾಳಿಕೆಯ ಮೂಲಕ ಜರುಗುರು ದರೋಡೆಯಲ್ಲದೆ ಬೇರೇನು?

ನನ್ನು ರಾಜ್ಯಾಂಗ ಘಟನೆಯನ್ನು ರಚಿಸಿದ ಆರಂಭದಲ್ಲಿ ಆಸ್ತಿಯ ಹಕ್ಕಿಗೆ ಯೋಗ್ಯ ಸಂರಕ್ಷಣೆಯನ್ನೀಯಲಾಗಿತ್ತಲ್ಲದೆ, ಆಸ್ತಿಯ ಜತೆಯಲ್ಲಿರುವ ಆಸ್ತಿಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಯೋಗ್ಯ ಪರಿಹಾರವೀಯದಿದ್ದರೆ ಅಂತಹ ಶಾಸನಗಳನ್ನು ಘಟನಾ ವಿರುದ್ಧವೆಂದು ಸಾರುವ ಅಧಿಕಾರವನ್ನು ಕೋರ್ಟುಗಳಿಗೀಯಲಾಗಿತ್ತು. ಆನಂತರ ಆರ್ಟಿಕಲ್ 31 ನ್ನು ಶ್ರೀ ನೆಹರೂರವರು ತಿದ್ದುಪಡಿಗೊಳಿಸಿದ ಮೇಲೆ ಆಸ್ತಿಯ ಒಡೆತನ ಬರೇ ಲೈಸನ್ಸಾಗಿ ಉಳಿದಿದೆ.

ದ. ಕನ್ನಡವು ಮದ್ರಾಸಿನ ಅಂಗವಾಗಿ ಪ್ಪಾಗ, ಅಲ್ಲಿಯ ಶಾಸನ ಸಭೆಯು 1956ರಲ್ಲಿ ಯೋಗ್ಯ ಪರಿಶೀಲನಾನಂತರ ಗೇಣಿಯನ್ನು ಉತ್ಪನ್ನದ ಶೇಕಡಾ 40 ಎಂದು ನಿರ್ಧರಿಸಿತ್ತು. ಮದರಾಸ್ ಶಾಸನಸಬೆಯು ಈ ನಿರ್ಣಯಕ್ಕೆ ಬಂದಾಗ ಯೋಜನಾ ಸಮಿತಿಯ ಶಿಫಾರಸುಗಳೂ ಹೊರಬಂದಿದ್ದುವಲ್ಲದೆ, ಯೋಜನಾ ಸಮಿತಿಯ ಸೂಚನೆಗಳನ್ನು ಮದ್ರಾಸು ಸರಕಾರಕ್ಕೆ ಗಮನಕ್ಕೆ ತರಲಾಗಿತ್ತು. ಅಧ್ಯಕ್ಷರ ಸಹಿ ಸಡೆದ ಆ ಶಾಸನವು 1—10—1956 ರಲ್ಲಿ ಜಾರಿಗೆ ಬಂದಿತು. 1—11—1956 ರಲ್ಲಿ ದ. ಕನ್ನಡವು ಮೈಸೂರು ಹಾಗೂ ಕಾಸರಗೋಡು ತಾಲೂಕು ಕೇರಳ ಪ್ರಾಂತಗಳ ಅಂಗಗೊಳಾಯಿತು. ಈ ರಾಜ್ಯ ಸರಕಾರಗಳು 1957 ರಲ್ಲಿ ನ್ಯಾಯ ಗೇಣಿಯನ್ನು ಬೇಕಾದ 20 ಅಥವಾ ಅದಕ್ಕಿಂತಲೂ ಕಡಿಮೆ ಎಂದು ನಿಶ್ಚಯಿಸಲಿರುವುದು. ಹೀಗೆ ನ್ಯಾಯ ಗೇಣಿಯು ವರ್ಷವರ್ಷವೂ ಬದಲಾಯಿಸಿ ಹೊಂದಿಬಹುದಾದರೆ 1958ರಲ್ಲಿ ಗೇಣಿಯು ಉತ್ಪನ್ನದ ಶೇಕಡಾ 5 ಎಂದು ನಿರ್ಣಯಿಸಲ್ಪಡಬಹುದು. ಹೀಗಾದರೆ ನ್ಯಾಯ ಗೇಣಿಯು ಶಾಸನಸಭಾ ಸದಸ್ಯರ ಮನೋಲಹರಿಯಂತೆ ದಿನ ದಿನ ಬದಲಾಯಿಸಿಯಾಗಬಹುದೆಂದು ಒಪ್ಪಿದಂತಾಗುತ್ತದೆ.

ನಾಯವಾದ ಗೇಣಿದರದ ಪರಿಶೀಲನೆ ನ್ಯಾಯಾಂಗಕ್ಕೆ ಸೇರದೇಕಲ್ಲದೆ, ಮುಂಬರುವ ಚುನಾವಣೆಯನ್ನೇ ಗಮನಸಲ್ಲರಿಸಿಕೊಳ್ಳುವ ರಾಜಕಾರಣಿಗಳ ಇಚ್ಚಾ ಶಕ್ತಿಗಲ್ಲು ಇದೇ ಅಭಿಪ್ರಾಯ ಆಮೇರಿಕಾದ ಸುಪ್ರೀಂ ಕೋರ್ಟಿನ ಮಾತುಗಳಿಂದಲೂ ವ್ಯಕ್ತವಾಗುತ್ತವೆ. ನಮ್ಮ ಘಟನೆಯ ಆರ್ಟಿಕಲ್ 14, ದೇಶದ ಪ್ರಜೆಗೆ ಳಿಸ್ಸಿರಿಗೂ ನ್ಯಾಯದ ಮುಂದೆ ಸಮಾನತೆ (Equality before Law) ಹಾಗೂ ಸಮಾನ ಸರಕ್ಷಣೆಯ ಭರವಸೆಯನ್ನಿತ್ತಿದೆ. ಆದರೆ ನಗರದ ಆಸ್ತಿವಂತರು ತಮ್ಮ ಬಂಡವಾಳದ ವೆಚ್ಚಕ್ಕನುಗುಣವಾದ ಲಾಭವನ್ನು ಪಡೆಯಲು ಅವಕಾಶವಿತ್ತ ಸರಕಾರ, ಕೃಷಿಕನಿಗೆ ಅವಕಾರ ಮೊರಕದಂತೆ ಶಾಸನ ತರುವ ಅಲೋಚನೆಯಲ್ಲಿದೆ ಇಂತಹ ಶಾಸನ ಘಟನೆಯ ಆರ್ಟಿಕಲ್ 14ರ ಬರಿಸಿಯನ್ನು ಮಿರಲಾರದೇ? ಇಷ್ಟೇ ಅಭಿಪ್ರಾಯವನ್ನು ಭಾರತದ ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಮೆಹರ್‌ಚಂದ್ ಮಹಾಜನರು ಕೂಡಾ, ತಕ್ಕಜೆಗಿನ ಲೇಖನವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ.

ಯೋಜನಾ ಸಮಿತಿಯು ಹಾಗೂ ಕೇರಳ ಮತ್ತು ಮೈಸೂರು ಸರಕಾರಗಳ ಭೂಸುಧಾರಣೆಗಳಲ್ಲಿ ಭೂಮಾಲೀಕರಿಂದ ಜನಾನನ್ನು ಕಿತ್ತುಕೊಂಡು ಬೂರಹಿತರಿಗೆ ಹಂಚುವ ಯೋಜನೆಯೂ ಸೇರಿದೆ. ಭೂಮಾಲೀಕರಿಗೆ ಪರಿಹಾರ ಧನವಾಗಿ ಸರಕಾರೀ ಬಾಂಡ್‌ಗಳನ್ನು ಕೊಡುವುದಾಗಿಯೂ ಸೂಚಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಭೂಸುಧಾರಣೆ ಜಾರಿಗೆ ಬಂದಾಗ ಇದೇ ರೀತಿ ಅಲ್ಲಿಯ ಸರಕಾರ ಬಾಂಡ್‌ಗಳನ್ನು ಪರಿಹಾರ ಧನವಾಗಿ ಕೊಟ್ಟತ್ತು ಹಾಗೆ ಕೊಡಲಾಗಿದ್ದ ಬಾಂಡ್‌ಗಳು ಇಂದು ಅವುಗಳ ಮುಖಬೆಲೆಯ ಶೇಕಡಾ 32ರ ಮೌಲಕ್ಕೆ ಯಥೇಚ್ಛವಾಗಿ ಮಾರುಕಟ್ಟೆಯಲ್ಲಿ ದೊರಕುತ್ತಿವೆ. ಅಂದರೆ ರೂ. 100 ಬೆಲೆಬಾಳುವ ಸರಕಾರೀ ಬಾಂಡ್‌ನ್ನು ರೂ. 32ಕ್ಕೆ ಜನರಿಂದ ಕೊಳ್ಳಲು ಸಾಧ್ಯವಾಗುತ್ತಿದ್ದರೆ ಸರಕಾರವಿತ್ತಿರುವ ಪರಿಹಾರ ದ್ರವ್ಯಕ್ಕೆ ನಿತ್ಯನ್ಯವತಾರವಿದಲ್ಲಿ ಯಾತ ಬೆರೆಯಿದೆ ಎಂದು ಸ್ಪಷ್ಟವಾಗುತ್ತದೆ.

ಇಂದು ಫಲಶ್ರುತನಾಗಿರುವ ಭೂಮಿ ಮಾಲೀಕನಿಗೆ ಮಳೆ, ಬಿಸಿಲುಗಳಂತೆ ಪ್ರಕೃತಿಯು ಉಡುಗೊರೆಯಾಗಿ ದೊರೆತುದಲ್ಲ. ತಮ್ಮ ಜೀವ ನುತ್ತು ಬಂಡವಾಳಗಳನ್ನು ಅಪಾಯಕ್ಕೊಡ್ಡಿ ನೂಡಿದ ಸಾಹಸಗಳ ಫಲವನ್ನವರಿಂದು ಮುಣ್ಣುತ್ತಿದ್ದಾರೆ. ಆನೆ, ಹುಲಿ, ಕಾಟಿ ಮೊದಲಾದ ಕ್ರೂರ ಪ್ರಾಣಿಗಳಿಂದಲೂ, ಮಲೇರಿಯಾದಂತಹ ಕಾಯಿಲೆಗಳಿಂದಲೂ ಜನಜೀವನ ಆಗಮ್ಯವಾಗಿತ್ತು. ದೇಶದ ಈ ಭಾಗದಲ್ಲಿ ಒಂದು ಊರನ್ನು ಇನ್ನೊಂಗಡೆಗೆ ಕೂಡಿಸುವ ಮಾರ್ಗಗಳಾಗಲೀ ಇತರ ಸಂಪರ್ಕ ವ್ಯವಸ್ಥೆಯಾಗಲೀ ಇದ್ದಿಲ್ಲ ಹಾಗಿದ್ದರೂ ಉದ್ಯಮ ಶೀಲರು ವೆಚ್ಚನೂಡುವ ಬಂಡವಾಳ ಕ್ಕಾಗಲೀ, ಕಷ್ಟಸಹಿಸುವ ಜೀವಕ್ಕಾಗಲೀ ಒಡೆಗಬಹುದಾದ ಆಪಾಯಗಳನ್ನು ಲೆಕ್ಕಿಸದೆ ಕಾಡು ಕಡಿದು, ತಮ್ಮ ರಕ್ತ ಮತ್ತು ಹಣವನ್ನು ಸುರಿಸಿ ಈ ಮಲೆನಾಡಿನಲ್ಲಿ ಕಾಫಿ, ಏಲಕ್ಕಿ, ಅಡಿಕೆ ಬೆಳೆಲಣದ ತೋಟಗಳನ್ನೆಬ್ಬಿಸಿ ರಾಜ್ಯದ ಸಮೃದ್ಧಿಗೆ ಕಾರಣರಾಗಿದ್ದಾರೆ. ಇಂತಹ ಉದ್ಯಮಶೀಲರ ಕಷ್ಟಗಳಿಗೆ ತಕ್ಕ ಪ್ರತಿಫಲ ದೊರಕಬೇಕೆನ್ನುವುದು ಸಾಮಾನ್ಯ ವಿಚಾರ ಒಪ್ಪತಕ್ಕದ್ದೇ. ಇದೇ ಅಭಿಪ್ರಾಯವನ್ನು ಇಂಗ್ಲೆಂಡಿನಲ್ಲಿ ಹೌಸ್ ಆಫ್ ಲಾರ್ಡ್ಸ್ ನಲ್ಲಿ ತೀರ್ಪಿಗೆಯುತ್ತಾ ಲಾರ್ಡ್ ಸೆಲ್‌ಬಾರ್ನ್ ರು ಸೂಚಿಸಿದರು. ಸೇತುವೆಯನ್ನು ಕಟ್ಟಲು ಅರಂಭದ ಎಲ್ಲಾ ಸಂಕಷ್ಟಗಳನ್ನನುಭವಿಸಿ ಇಂದಿಗೂ ನೆರೆ ಹಾವಳಿ ಯಾ ಇತರ ಕಾರಣಗಳಿಂದ ಸೇತುವೆಯ ನಾಶವ ಆಪಾಯವನ್ನೆದುರಿಸುತ್ತಿರುವವರು ಆದೆನ್ನು ನಿರ್ಮಿಸಿದವರು. ಹೀಗಿದ್ದೂ, ಈಗ ಅದನ್ನು ಉಪಯೋಗಿಸುವವರು ಸೇತುವೆಯನ್ನು ರಚಿಸಿದ ಕೆಂಪೆನಿಯ ಲೆಕ್ಕಪತ್ರಗಳನ್ನು ತಮಗೆ ಬೇಕಾದಂತೆ ವಿಮರ್ಶಿಸಿ, ಸೇತುವೆಯನ್ನು ಪಯೋಗಿಸಿದುದಕ್ಕಾಗಿ ಕಂಪೆನಿಗೆ ತಾವು ಕೊಡಬೇಕಾದ ಹಣ ಹೆಚ್ಚಾಯಿತೆಂದು ನ್ಯಾಯಾಸ್ಥಾನದಲ್ಲಿ ದೂರಿಡುವುದು ಸಮಂಜಸವೆಂದು ತೋರುವುದಿಲ್ಲ. ಲಾರ್ಡ್ ನರ್ ಈ ತೀರ್ಪಿನಲ್ಲಿ ಕಷ್ಟಕ್ಕೆ ತಕ್ಕ ಪ್ರತಿಫಲ ದೊರಕಿಸಬೇಕೆನ್ನುವ ಮನೋವೈಶಾಲ್ಯ ಕಾಣುತ್ತಿದೆ. ಅಮೆರಿಕಾ ಮತ್ತು ಇಂಗ್ಲೆಂಡುಗಳಲ್ಲಿ ಎಂತಹ ಅಲ್ಪ ಸಂಖ್ಯಾತರಿಗೂ ತಕ್ಕ ಸರಂಕ್ಷಣೆ ಇರುವುದಲ್ಲದೆ, ಜನಾಭಿ ಆಸ್ತಿಗೆ ಯೋಗ್ಯ ಭದ್ರತೆಯೂ ದೊರಕಿದೆ. ಅಂತಹ ರಾಷ್ಟ್ರಗಳಲ್ಲಿ ಮಾತ್ರವೇ ಪ್ರಜಾಪ್ರಭುತ್ವ ಯಶಸ್ವಿಯಾಗಬಲ್ಲುದು. ಭಾರತದ ರಾಜ್ಯಾಂಗ ಘಟನೆ ಇತ್ತಿರುವ ಮೂಲಭೂತ ಹಕ್ಕುಗಳು ಬರೇ ಭ್ರಮೆಯಾಗಿದ್ದು ನಮ್ಮಲ್ಲಿ ಯೋಜನಾ ಸಮಿತಿಯು ಘಟನೆಗಿಂತಲೂ ಹೆಚ್ಚೇಕೆ, ದೇವರಿಗಿಂತಲೂ ಹಿರಿದೆನಿಸಿದೆ. ಆದರೆ ಆದೇಶಗಳನ್ನು ಕಾರ್ಯಗತವಾಗಿಸಲು ಸರಕಾರವು ಎಂತರ ಮುಸೂಬೆಯನ್ನು ತರಲು ಹಿಂಜರಿಯುತ್ತಿಲ್ಲ. ನಾವು ಪ್ರಜಾಪ್ರಭುತ್ವದ ರಾಷ್ಟ್ರವಾಗಿ ಉಳಿಯಬೇಕಾದರೆ ಆದಕ್ಕೆ ತಕ್ಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಹಾಗಾಗಿ ಮಾನಗಿ ಆಸ್ತಿಯು ಪ್ರಜಾಪ್ರಭುತ್ವದ ಆಡಿಗಲ್ಲೆಂದೂ ಮಾನಗಿ ಸೊತ್ತುಗಳ ಇವುಖಿಕೆಗೆ ಬರುವ ಆತಂಕಗಳು ಪ್ರಜಾಪ್ರಭುತ್ವದ ಸ್ಥಿರತೆಗೂ ತದೆಯಾಗುವುದೆಂಬ ತಿಳುಳಿಕೆ ಜನಸಾಮಾನ್ಯರಲ್ಲಿ ಉಂಟಾಗುವಂತೆ ಯತ್ನಿಸುವುದು ನಮ್ಮ ಕರ್ತವ್ಯ.

(ಮುಲೆನಾದ ವಾರ್ತೆ)

'NAVAYUGA' WEEKLY

is in the list of periodicals and Newspapers approved for use in Secondary Schools as per proceedings Roc· No 466 N/50 date 2- 2-1950 of the Director of public Instruction Madras·

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಭಾರತದ ಶಾಂತಿ ದೂತರು—

ಲೇಖಕರು: ಶ್ರೀ ದೇಶಪಾಂಡೆ ಮನೋಹರ ರಾಯರು, ಎಂ. ಎ. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ. ಪುಟ ಕ್ರೌನ್ ೧೪೮ ಬೆಲೆ: ಉತ್ತಮ ಪ್ರತಿ ರೂ. ೨.೦೦; ಸಾಮಾನ್ಯಪ್ರತಿ ರೂ. ೧.೫೦.

ಭಾರತವು ಆಧ್ಯಾತ್ಮಿಕತೆಯ ತವರೂರು. ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಾಧು ಸಂತರು ಇಡಿ ಜನ್ಮವೆತ್ತಿ ಸಾಮಾನತೆಯನ್ನು ಕಳಿಮಿಕೊಂಡ ಮನುಷ್ಯರಿಗೆ ತಮ್ಮನೇ ಆದ ರೀತಿಯಲ್ಲಿ ಮಾನವತೆಯ ದರ್ಶನವನ್ನು ನೂಡಿಸುತಿದ್ದರು. ಆಂತಹ ಶಾಂತಿದೂತರು ಇಂದು ನಿನ್ನೆಯಿಂದಲ್ಲ, ಯುಗವಾದಿಯಿಂದಲೂ ಹುಟ್ಟಿಬಂದಿರುವರು. ಆವರ ಪರಿಚಯಸೊಂದಿಗೆ ಮಾನವತೆಯ ಮಹತ್ವವನ್ನೂ ಸಾರವಿಯುವುದು ಅವೇಕ್ಷಣೀಯ. "ಭಾರತದ ಶಾಂತಿ ದೂತರು" ಎಂಬೀ ಸುಸ್ತಕದಲ್ಲಿ ಶ್ರೀ ದೇಶಪಾಂಡೆಯವರು ಶ್ರೀಕೃಷ್ಣ, ಶ್ರೀಬುದೇವ, ಬಸವಣ್ಣ, ಸರ್ವಜ್ಞ, ವೈಷ್ಣವ ದಾಸರು, ಪುರಂದರ ದಾಸರು, ಲೋಕಮಾನ್ಯ ತಿಲಕ್, ಮಹಾತ್ಮಾಗಾಂಧಿ, ಡಾ. ರಾಧಾಕೃ, ಈ ವಿಷಯಗಳನ್ನು ಎತ್ತಿಕೊಂಡು ಆಧ್ಯಾತ್ಮಿಕತೆಯ ಕೋಟಿ ಪರಿಚಯಿಸಿದ್ದಾರೆ. ಪ್ರಾರಂಭದ ಪೀಠಿಕಾ ಪ್ರಕರಣದಲ್ಲಿ ಮಹಾತ್ಮರಾವನವರ ದಿವ್ಯಜೀವನದ ಆಧ್ಯಾತ್ಮಾನುಭವಕತೆಯನ್ನು ಮನಗಾಣಿಸಿ, 'ಪರಿವರ್ತನೆಯ ಅವಶ್ಯಕತೆ' ಮತ್ತು 'ಪರತಂತ್ರ ಸ್ವತಂತ್ರತೆ' ಎಂಬೆರಡು ರತ್ನಗಳಲ್ಲಿ ಆಧ್ಯಾತ್ಮಿಕತೆಯ ತತ್ವಗಳನ್ನೂ ಆದರಿಂತಿತ್ಯತೆಯನ್ನೂ ವಿವರಿಸಿದ್ದಾರೆ. ಗ್ರಂಥಾರಂಭದಲ್ಲಿ "ಮಾನವಕುಲವೆ ಮಾಂಗಲ್ಯ", "ಧರ್ಮವೆ ರಕ್ಷಾಕವಚ" "ಮತ್ತು ವಿಜಯದ ವೈಭವ"ವೆಂಬ ಮೂರು ರತ್ನಗಳಲ್ಲಿ ಜಾನವನು ಸುಖ ಶಾಂತ ಜೀವನವನ್ನು ಬಾಳಬೇಕಾದರೆ, ಅನುಸರಿಸಬೇಕಾದ ವಿಧಾನಗಳನ್ನೂ ತಿಳಿಸಿದ್ದಾರೆ. ಯೋಗೇಶ್ವರನ ಕೃಪೆ, ಅರ್ಜುನನ ಯತ್ನ ಇದ್ದಲ್ಲಿ ವಿಜಯವು ಕಟ್ಟಿಟ್ಟದ್ದು ಎಂಬುದು ಭಗವಂತನ ಅಶ್ವಾಸನ-ಅದು ಹುಸಿಯಾಗುವುದಸಾಧ್ಯವೆಂದು ಸಾರ್ವಸಿಕವಾಗಿ ಹೃದಯಸ್ಪರ್ಶಿಯಾಗಿ ನರ್ವಸಿರುವರು. ಮೊದಲ ಮೂರು ಮತ್ತು ಕೊನೆಯ ಮೂರು ಪ್ರಕರಣಗಳು ತಾತ್ವಿಕ, ವಿಸೇಚನಾತ್ಮಕ ಮತ್ತು ಉಪದೇಶ ಸ್ವರೂಪವಾಗಿದ್ದು ನಡುವಿನ ಆರು ಪ್ರಕರಣಗಳಲ್ಲಿ ಆಯಾಯ ವ್ಯಕ್ತಿಗಳ ಜೀವನದ ವೈಶಿಷ್ಟ್ಯವನ್ನೂ ಸುಪತ್ತಿಕೆಯನ್ನೂ ಜನತೆಗೆ ಉಪದೇಶಿಸಿದ ತತ್ವಸಾರವನ್ನೂ ಸಂಗ್ರಹಿಸಿರುತ್ತಾರೆ. ಶ್ರೀ ದೇಶಪಾಂಡೆಯವರು ತಮ್ಮ ನಿರಂತರಾಧ್ಯಸದಿಂದ ತಾವು ಮಾತ್ರ ಪ್ರಯೋಜನ ಪಡೆದುವಲ್ಲದೆ, ಕನ್ನಡಿಗರಿಗೂ ಅಮೂಲ್ಯವಾದ ಉಪಯೋಗಕ್ಕೆ ಬರಬೇಕೆಂದು ಇಂತಹ ಅಮೂಲ್ಯ ಗ್ರಂಥ ಪುಷ್ಪವನ್ನು ಬರೆದಿದ್ದಾರೆ. ಈ ಕುಸುಮವನ್ನು ಕನ್ನಡಿಗರಿಗೆ ಉತ್ತಮ ಸಾಹಿತ್ಯವನ್ನು ಒದಗಿಸುವಲ್ಲಿ ಪರಿಶ್ರಮಿಸುತ್ತಿರುವ ನುರ್ಲಿ ಬಿಂದು ಸಾಧಕರು ತಮ್ಮ ಮಿಂಚಿನಬಳ್ಳಿಯಲ್ಲಿ ಕೋಡಿದ್ದಾರೆ. ಗಂಭೀರವಾದ, ಪಾಂತಿತ್ಯ ಪೂರ್ಣವಾದ, ಅನುಭವವೇದ್ಯವಾದ, ಆತ್ಮವಿಯುಕ್ತವಾದ ಈ ಸಾಹಿತ್ಯಕೃತಿಯನ್ನು ಕನ್ನಡಿಗರು ಎರಡು ಕೈಗಳಿಂದಲೂ ಎತ್ತಿ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ. ಪ. ರಾ. ಬೇಂದ್ರೆಯಂತಹ ತತ್ವವೇತ್ತರು ಮುನ್ನುಡಿಯಿಂದು ನಾಲ್ಕು ಮಾತು ಬರೆದು ಕುಸುಮಕ್ಕೆ ಕಂಪನ್ನು ಸುರಿದಿದ್ದಾರೆ. ಗ್ರಂಥಕರರವು ಇಂತಹ ಬಹು ಪ್ರಯೋಜಕ ಗ್ರಂಥಗಳನ್ನು ಇನ್ನೂ ಬರೆಯುವಂತಾಗಲಿ. ಮಿಂಚಿನ ಬಳ್ಳಿಯ ೨೦೦ ಪರ್ವದ ಪುಸ್ತಕವು ಕುಡಿಯಾಗಿ ಈ ಸುಸ್ತಕವು ಹೇಸಿಳಂಬಿಯ ವಿಜಯ ದಶಮಿಯಂದು ಸ್ಕಟಿಸಿಗೊಂಡಿದೆ. ಮುದ್ರಣವು ಅಂದವಾಗಿದೆ. ಜನತೆಯು ಶಾಂತಿ ಮಾರ್ಗದಲ್ಲಿ ಮುನ್ನಡೆಯುವಂತೆ ಈ ಹೊತ್ತಗೆಯು ತನ್ನ ಪ್ರಭಾವವನ್ನು ಬೀರುವಂತಾಗಲಿ ಎಂದು ಹಾರೈಸುತ್ತೇವೆ.

ನವೀನ ಶಿಕ್ಷಕ—

ಸುಸ ಸಂಪಾದಕರು: ಶ್ರೀಗಳಾದ ಜಿ. ಎಸ್. ಕೇರವಾಡಾರ್ಯ ಮತ್ತು ಎಸ್. ಎಸ್. ಕೃಷ್ಣರಾವ್ ಮಡಿಕೇರಿ ಪುಟಗಳು: ಕ್ರೌನ್ ೧/೪ರ ೨೪ ಬೆಲೆ:

ವಿದ್ಯಾಭಿವೃದ್ಧಿಗೆ ಪರಿಪೋಷಕವಾದ ಸರಕಾರಿ ಮಾಸಪತ್ರಿಕೆಯಾದ 'ನವೀನ ಶಿಕ್ಷಕ'ವು ಎರಡನೆ ಸಂಪುಟದ ಎರಡನೆ ಸಂಚಿಕೆಯನ್ನು ಸ್ವಾಗತಿಸುತ್ತೇವೆ ಈ ಸಂಚಿಕೆಯ ಮೂಲ ಶಿಕ್ಷಣಕ್ಕೆ ಸಂಬಂಧಪಟ್ಟ, ಅನುಭವಿಕ ಶಿಕ್ಷಕರ ಲೇಖನಗಳು ಮೂಲ ಶಿಕ್ಷಣಾಭ್ಯಾಸಿಗೂ ಮನನವಾಗಿ, ಮುಖ್ಯವಾಗಿ ಅಧ್ಯಾಪಕರಿಗೆ ಉಪಯುಕ್ತವಾಗಿವೆ. ಲಲಿತ ಕಲೆಗಳ ಪುನರುದ್ಧಾರ, ಭಾರತೀಯರಲ್ಲಿ ಕ್ರೀಡಾಸಕ್ತಿ, ಜ್ಞಾನ ಶಕ್ತಿ ಜ್ಞಾಪಕ ಶಕ್ತಿ ಮೊದಲಾದ ಕೆಲವೆ ಲೇ ವಿಷಯಗಳು ಸಾಮಾನ್ಯ ಶಿಕ್ಷಕನಿಗೆ ಸಹ ಉಪಯೋಗಕ್ಕೆ ಬೀಳುವುದು. ರಾಜ್ಯದ ಮೂಲಶಿಕ್ಷಣ ಶಾಲೆಗಳ ಶಿಕ್ಷಕರು ಅವಶ್ಯವಾಗಿ ಸಂಗ್ರಹಿಸಬೇಕಾದ ಸಾಸಪತ್ರಿಕೆಯಿದೆಂದು ಈ ಸಂಚಿಕೆಯನ್ನು ನೋಡಿದೊಡನೆಯೇ ಹೇಳಬಹುದು.

ಕವಿ ಕನಕದಾಸರ ಕೀರ್ತನೆಗಳು— ಉದಯರಾಗಗಳು - ಪುರಂದರ ದಾಸರ ಕೀರ್ತನೆಗಳು—

ಈ ಮೂರೂ ಶಾಸ್ತ್ರಕಗಳ ಪ್ರಕಾರಕರು ಉಪಾಧ್ಯಾಯ ಪ್ರಕಟಣಾಲಯ, ಚಿಕ್ಕಪೇಟೆ, ಬೆಂಗಳೂರು ಸಿಟಿ. ಪುಟಗಳು ಕ್ರಮವಾಗಿ, ಕ್ರೌನ್ ೧೮೮ ೨೪, ೨೪ ಮತ್ತು ೧೫೦. ಬೆಲೆ ಕ್ರಮವಾಗಿ, ರೂ. ೦-೪-೦, ೦-೪-೦ ಮತ್ತು ರೂ. ೧.

ಕನ್ನಡ ಸಾಹಿತ್ಯದಲ್ಲಿ ದಾಸಸಾಹಿತ್ಯ ತನ್ನದೇ ಆದ ಸ್ಥಾನವನ್ನು ಗಳಿಸಿ ಸ್ಥಿರವಾಗಿ ಜನಮನದಲ್ಲಿ ನೆಲಸಿದೆ. ದಾಸವರ್ಯರು ಆ ನೊದಲು ಕೇವಲ ಸಂಚಿತರಿಗೆ ಮಾತ್ರ ಮಿಸಟ್ಟಿದ್ದ ಧಾರ್ಮಿಕ ವಿಚಾರಧಾರೆಗಳನ್ನು ಪಾಮರರಿಗೂ ಎಟುಕುವಂತೆ ನೂಡಿದರು. ಗಂಗೆಯ ಪವಿತ್ರೋದಕವನ್ನು ಕನ್ನಡದ ಪ್ರತಿ ಮನೆಗೂ ಗದಿಗೆಗಳಲ್ಲಿ ಬಿಯ್ದು ಮುಟ್ಟಿಸಿದರು. ಚಿಕ್ಕ ಪಾದರೂ ಸ್ವಾರಸ್ಯಪೂರ್ಣವಾಗಿ, ಸುಲಭವಲ್ಲಿ ಅರ್ಥವಾಗುವ ಜನಸಾಮಾನ್ಯರ ಭಾಷೆಯಲ್ಲಿ ಕೀರ್ತನೆಗಳನ್ನು ಹಾಡಿದರು, ತಮಿಳರಲ್ಲಿ ಆಳ್ವಾರದಿದ್ದಂತೆ, ಬಂಗಾಳದಲ್ಲಿ ಚೈತನ್ಯ ಪ್ರಭುಗಳಿದ್ದಂತೆ, ಹಿಂದಿಯಲ್ಲಿ ಕಬೀರ್, ಸೂರ, ತುಲಸೀದಾಸರಿದ್ದಂತೆ ಕನ್ನಡದಲ್ಲಿ ಈ ದಾಸರು ಧಾರ್ಮಿಕ ಜಾಗೃತಿಯನ್ನುಂಟುಮಾಡಿದರು. ಇವರಿಗೆ ಮೊದಲೇ ಬಸವಣ್ಣ ದಿಗಳು ವೀರಶೈವ ಮತದ ತತ್ವಗಳನ್ನು ಪಜನಗಳಲ್ಲಿ ಹಾಡಿದ್ದರು. ಈ ದಾಸರಾದರೋ ಮಧ್ವಮತದ ಸಾಂಪ್ರದಾಯಗಳಿಗೆ ನೆಟ್ಟಿಹೋಗಿ ಭಗವದ್ಭಾನದಲ್ಲಿ ತಲ್ಲೀನರಾದರು. ಅಂತಹ ದಾಸರಲ್ಲಿ ಪ್ರಸಿದ್ಧರಾದ ಕನಕದಾಸ (ಕಾಲ ಸು. ೧೫೫೦) ಮತ್ತು ಪುರಂದರದಾಸ (ಕಾಲ ಸು. ೧೫೫೦)ರ ಕೀರ್ತನೆಗಳಲ್ಲಿ ಕೆಲವನ್ನು ಸಂಗ್ರಹಿಸಿ ಉಪಾಧ್ಯಾಯ ಪ್ರಕಟಣಾಲಯದವರು ಈ ಮೊದಲೇ ಕನ್ನಡಿಗರಿಗೆ ದಾಸಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದ್ದಾರೆ. ಇದೀಗ ಪುನಃ ಅಂತಹ ಕೃತಿಗಳನ್ನು ಸಂಕಲಿಸಿ ಕವಿಗಳ ಚರಿತ್ರೆಗಳೊಂದಿಗೆ ಪುನಃ ಪ್ರಕಾಶಗೊಳಿಸಿದ್ದಾರೆ. ವೈಜ್ಞಾನಿಕ ವಿಶ್ವವು ಆಧ್ಯಾತ್ಮಿಕೆಯನ್ನು ಳಿದರೆ ಬಯಸಲಾರದೆಂಬ ನಿಶ್ಚಿತತೆಯನ್ನು ಜನ ಕಂಡುಕೊಂಡಿರುವಾಗ, ಇಂತಹ ಸುಸ್ತಕಗಳ ಉಪಯೋಗ ಹೇಳಿತೀರದು. ಮೊದಲನೆಯದು ಪುಸ್ತಕಗಳ ಬೆಲೆ ಹೆಚ್ಚೆಂದು ಕಂಡುಬಂದರೂ ಪ್ರಕಟಣೆಗಳು ಸ್ವಾಗತಾರ್ಹವಾಗಿವೆ. ಜನತೆ ಇದರ ಪ್ರಯೋಜನವನ್ನು ಹೊಂದಬೇಕು.

—ಗೋರಾ

ಚಿತ್ರ ಪ್ರಪಂಚ

ವಿಜಯಾರನರ ಮಾಯಾ ಬಜಾರ್
(ಕನ್ನಡ)

ರಾಮಾಯಣ ಮತ್ತು ಮಹಾಭಾರತ ಬೇರೆಯಲ್ಲ; ನನ್ನ ದೇಶ ಬೇರೆಯಲ್ಲ ಭಾರತೀಯರ ಆತ್ಮಮೂಲ್ಯ ಜ್ಞಾನಭಂಡಾರವೆನಿಸಿರುವ ಈ ಸುಹತ್ಕೃತಿಗಳು ವ್ಯಕ್ತಿ ಸಮಾಜ ಮತ್ತು ರಾಷ್ಟ್ರಗಳು ನಿಜವಾದ ಬಾಳನ್ನು ಬಾಳಲು ಘನವಾದ ಮಾರ್ಗದರ್ಶನ ಮಾಡಿಸುವುದಾಗಿವೆ. ರಾಮಾಯಣವು ಆದಿಕಾವ್ಯವೆನಿಸಿರುವಂತೆ ಮಹಾಭಾರತವು ಪಂಚಮ ವೇದವೆಂದು ಖ್ಯಾತವಾಗಿದೆ ಅರ್ಥ, ಕಾಮ ಮತ್ತು ಮೋಕ್ಷ ಸಾಧನೆಗೆ ದಾರಿಯಾದ ಧರ್ಮವನ್ನು ಸೂಚಿಸುವ ಮಹಾ ಗ್ರಂಥಗಳು ಇವೇ. ಜಗತ್ತಿಗೆ ಧಾರ್ಮಿಕ ರಂಗದಲ್ಲಿ ಭಾರತಕ್ಕೆ ಒಂದು ಪ್ರಮುಖ ಸ್ಥಾನವೇರ್ಪಟ್ಟರುವುದಾದರೂ ಈ ಧಾರ್ಮಿಕ ಪರಂಪರೆಯ ಕಾರಣದಿಂದಲೇ.

ಮಹಾಭಾರತದ ಕಥೆಯನ್ನು, ಶ್ರೀ ಕೃಷ್ಣ ಪರಮಾತ್ಮನ ಲೀಲಾವಿನೋದಗಳನ್ನು, ಪಂಡಿತಪಾಮರರ ರಂಜಕವಾಗಿ ನನ್ನು ಅನೇಕ ಉದ್ದಾನು ಕವಿಗಳು ನಿರೂಪಿಸಿದ್ದಾರೆ. ಈ ಮೂಲ ಕಾವ್ಯಗಳನ್ನು ಅನುಸರಿಸಿ ಕನ್ನಡದಲ್ಲಿ ಹರಿದಿರುವ ಕಾವ್ಯ ವಾಹಿನಿಗೆ ಹಾರವೇ ಇಲ್ಲಿ.

ಕರೋರವ್ಯಾಸನ ಭಾರತ ಪಡೆದಿರುವ ಮೆಚ್ಚುಗೆಯೇನು? 'ಕುರುರವ್ಯಾಸನು ಹಾಡಿದನೆಂದರೆ ಕಲಿಯುಗ ವ್ಯಾಪರವಾಗುವುದು; ಭಾರತ ಕಣ್ಣಲಿ ಕಂಡಿಯುವುದು; ಪೈಯಲಿ ಮಿಂಚಿನ ಹೊಳೆ ತರುಕಾಶುವುದು". ಇನ್ನು ನಾವು ಆ ಮಹಾಪ್ರತಿಭೆಯೂದ ಮಹಾಭಾರತಕ್ಕೆ ಕೊಟ್ಟಿರುವ ಪ್ರಾಶಸ್ತ್ಯವೇನು?

"ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕೆ
ಬುದ್ಧಿ ಗುಜ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತಲಂಕಾರ.....?"

ಮಹಾಭಾರತದಲ್ಲಿ ನವರಸ ತುಂಬಿತುಳುಕುತ್ತವೆ. ಭಕ್ತಿ ಮತ್ತು ಜ್ಞಾನಯೋಗದ ಮಾರ್ಗ ಸ್ಪಷ್ಟವಾಗಿದೆ. ಜೀವನದ ಆದರ್ಶ ಸೂಚಿತವಾಗಿದೆ. ರಾಜಕಾರಣ ಮತ್ತು ಸಮಾಜ ವ್ಯವಸ್ಥೆಯ ಬಗ್ಗೆ ಉನ್ನತ ದರ್ಶನವಿದೆ. ಜನಸಾಮಾನ್ಯರಿಂದ ಪ್ರಾರಂಭಿಸಿ ಜನತೆಯ ಸಂರಕ್ಷಣೆ ಮತ್ತು ದೇಶದ ಹಿತ ಜವಾಬ್ದಾರಿಯನ್ನು ಹೊತ್ತ ಹಿರಿಯರೆನಿಸಿದವರಿಗೆ ಎಲ್ಲರೂ ಇದರಿಂದ ಸ್ಫೂರ್ತಿ ಪಡೆಯುತ್ತಾರೆ; ಸಮಯೋಚಿತವಾಗಿ ಇದರಲ್ಲಿನ ಆದರ್ಶವನ್ನು ಊರು ಗೋಲಾಗಿ ಹಿಡಿಯುತ್ತಾರೆ.

ಶ್ರೀಕೃಷ್ಣ ಲೀಲಾಮೃತವನ್ನು ವರ್ಣಿಸುವ ಈ ಮಹಾಕಾವ್ಯವು ಕವಿಯ ಅಪೂರ್ವ ಕಲ್ಪನೆಯನ್ನು ಸೂಚಿಸುತ್ತದೆ. 'ರವಿ ಕಾಣದು ದನ್ನು ಕವಿ ಕಂಡ" ಎಂಬುದು ಸ್ಥಿರವಾಗುವ ತೆರನಾಗಿ ಕಲ್ಪನೆ ಅನುಪಮವಾಗಿ ಮೂಡಿ ಬಡೆದಿದೆ. ಕಾವ್ಯವನ್ನು ಓದಿದರೆ ಬುದ್ಧಿ ಸಂಸ್ಕಾರ ಪಡೆಯುತ್ತದೆ; ಆ ಕಾವ್ಯದ ನಿರೂಪಣಾ ಶಿಲ್ಪದಲ್ಲಿ ಮೂಡಿಪಾಗ ಮನಸ್ಸು ಆನಂದಿಸುತ್ತದೆ. ಯಕ್ಷಗಾನಾದಿ ಅಭಿನಯಗಳಲ್ಲಿ ಕಂಡಾಗ ಮೈ ಮರೆಯಿಸುತ್ತದೆ. ಹೀಗಿರುವಲ್ಲಿ ಇಂದು ಜನತೆಯನ್ನು ನೇರವಾಗಿ ಮುಟ್ಟುವಂತಹ ಕಲಾತ್ಮಕ ಸಾಧನವಾದ ಚಿತ್ರರೂಪಕ್ಕೆ ಕವಿಯ ಕಲ್ಪನಾ ಚಾತುರ್ಯವನ್ನು ತಂದಾಗ! ಆ ಸಾಹಸವಾದರೂ ಸಾಮಾನ್ಯವೇ? ಆದರ ಫಲವಾಗಿ ರೂಪುಗೊಂಡ ಚಿತ್ರವನ್ನು ದರ್ಶಿಸಿದಾಗ ಜನತೆ ಪುಳಕಿತವಾಗುತ್ತದೆ; ಹಸಸಾಗರದಲ್ಲಿ ಓಲಾಡುತ್ತದೆ.

ದಕ್ಷಿಣ ಭಾರತದ ರಸಿಕ ಜನವೈಂದಕ್ಕೆ ಅನೇಕ ಅನರ್ಘ್ಯ ಚಿತ್ರರತ್ನಗಳನ್ನರ್ಪಿಸಿ ವಿಖ್ಯಾತರಾಗಿರುವ ವಿಜಯಾ ಪ್ರೊಡಕ್ಷನ್ಸ್‌ರವರು ಈ ಸಾಹಸವನ್ನು ತಮ್ಮ "ಮಾಯಾ ಬಜಾರ್" ಚಿತ್ರದಲ್ಲಿ ಕೈಗೊಂಡು ಯಶಸ್ವಿಯಾಗಿದ್ದಾರೆ. ಜನತೆಗೆ ಸುಪರಿಚಿತವಾದ ಈ ಮನೋಹರ ಪುರಾಣ ಕಥೆಯನ್ನು ಇನ್ನಷ್ಟು ಸಿಂಗರಗೊಳಿಸಿ ತೆರೆಗೆ ತಂದಿದ್ದಾರೆ.

ಮಹಾಭಾರತದಿಂದ ಆಯ್ದು ರಸಗತ್ತಾದ ಕಥಾಭಾಗವನ್ನುಳ್ಳ "ಮಾಯಾ ಬಜಾರ್" ಚಿತ್ರದಲ್ಲಿ ಅಭಿಮನ್ಯು-ಶಶಿರೇಖೆಯರ ಅನಾದೃಶ್ಯ ಪ್ರೇಮವು; ಕಳುನಿಯ ರಾಜಕೀಯ ಕಾಪಟ್ಯ, ಚತುರತೆ; ಪಾಂಡವರ ಧರ್ಮಗುಣ; ದುಷ್ಟ ಶಕ್ತಿಗಳ ಮುಖ ಸ್ತುತಿಯ ಅಂತರ್ಯವನ್ನು ಅರಿಯದ ಬಲರಾಮ; ಕುಂಪತ್ಕಿಗಳ ಸಾಹಸ ಪ್ರತಾಪ ಗೌರವಗಳನ್ನು ಹಿರಿದಾಗಿ ಎಣಿಸುವ ಸಭಿಜ್ಞೆ; ಘಟೋತ್ಕಚನ ಧೈರ್ಯ ಶೌರ್ಯ—ಇವುಗಳ ಚಿತ್ರಣದಿಂದ ಸರ್ವ ಜನ ರಂಜಕವಾಗಿ ಬೆಳಗುವಂತಹುದು ವಿಜಯರವರ 'ಮಾಯಾ ಬಜಾರ್, (ಕನ್ನಡ) ಚಿತ್ರ. ಇಡೀ ಮಹಾಭಾರತದ ಹಿರಿಮೆಯನ್ನು ಕಣ್ಣುಂದೆ ತಂದುತೋರುವ ಈ ಚಿತ್ರವು ಚಿತ್ರಪ್ರೇಮಿಗಳಿಗೆ ದೊರೆಯಲಿರುವ ಒಂದು ಮಹಾ ಕಲಾಕೃತಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಸಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ನಿರಭಿಕವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ವಿಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಹರಿಭಕ್ತಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುನಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೪—೦

ನವಯುಗ ಪ್ರೆಸ್, ಉಡುಪಿ

Edited, Printed & Published by K H. Shetty, at the Navayuga press, Udipi S. India

REGD. NO. M. 3518

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

28—11—1957

ಸಂಚಿಕೆ ೧೨
NO. 12

ಕನ್ನಡಿಗರ ಪ್ರಗತಿಗೆ ಪ್ರಧಾನ ಸಾಧನ—

ಬಹುಮುಖ ಸಾಹಿತ್ಯ ನಿರ್ಮಾಣ

ಜೀವನವಿಲ್ಲದ ಸಾಹಿತ್ಯ ಸಾಹಿತ್ಯವಲ್ಲ; ಸಾಹಿತ್ಯವಿಲ್ಲದ ಜೀವನ ಜೀವನವಲ್ಲ. ಜನಜೀವನದಲ್ಲಿ ಹಾಸುಹೊಕ್ಕಾಗಿ ಹರಿಯುವ ಅನೇಕ ಹೃದಯಂಗಮ ಸನ್ನಿವೇಶಗಳು ನಮ್ಮ ಜನಪದ ಸಾಹಿತ್ಯದಲ್ಲಿಯೂ ಹೇರಳವಾಗಿ ದೊರೆಯುತ್ತವೆ. ಸಾಹಿತ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು. ೧ ಕಾವ್ಯ (ಗದ್ಯ, ಪದ್ಯ, ನಾಟಕ); ೨. ಧಾರ್ಮಿಕ (ತಾತ್ವಿಕ; ೩. ವೈಜ್ಞಾನಿಕ (ಔದ್ಯೋಗಿಕ), ೪. ಜೀವನ (ವ್ಯಾವಹಾರಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ನೈತಿಕ ಇತ್ಯಾದಿ). ಸಾಹಿತ್ಯವೆಂದರೆ, ಕಾವ್ಯಾನಂದದ ಉಗಮಸ್ಥಾನಗಳಾದ ಗದ್ಯ ಪದ್ಯ ನಾಟಕಗಳ ರೂಪವಲ್ಲಿರುತ್ತದೆ. ಹಿಂದೆ ಸಾಹಿತ್ಯವೆಂದರೆ ಧರ್ಮವಾಹಿನಿಯೆಂದೇ ಪರಿಗಣಿತವಾಗಿತ್ತು. ಅದುದರಿಂದ ಕಾವ್ಯವಸ್ತು ಧರ್ಮವಾಯಿತು. ಪಾಪವಿದು ಪುಣ್ಯವಿದು ವಿಹಿತಾವಿಹಿತವಿದು— ಎಂದು ಹೇಳುವುದೇ ಕಾವ್ಯವೆಂದು ನಿಶ್ಚಿತವಾಯಿತು. ಇದನ್ನನುಸರಿಸಿಯೇ ನಮ್ಮ ಕನ್ನಡ ಸಾಹಿತ್ಯವೂ ಬೆಳೆಯುತ್ತಾ ಬಂದಿದೆ.

ಸ್ವಪಂಚದ ಇಂದಿನ ಅಶಾಂತ ಪರಿಸ್ಥಿತಿಯಲ್ಲಿ ವಿಶ್ವ ಧರ್ಮವೇನೆಂಬುದನ್ನು ಬೋಧಿಸುವ ಬಹುಮುಖ ಸಾಹಿತ್ಯದ ಸೃಷ್ಟಿ ನಾಹಿತಿಗಳಿಗೆ ಸೇರಿದೆ. ಆದರ ಸ್ಫುಸಾರ ಮತ್ತು ಪ್ರಚಾರ ಧರ್ಮಸಂಸ್ಥೆಗಳ ಮತ್ತು ಸರಕಾರಗಳ ಕರ್ತವ್ಯ.

ಸಾಹಿತ್ಯವು ಜನತೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಸಂಸ್ಕೃತಿ ಮತ್ತು ಧರ್ಮಗಳು ಪರಸ್ಪರ ಅವಲಂಬಿಗಳು. ಧರ್ಮಾನುಸಂಧಾನದ ಫಲವೇ ಸಂಸ್ಕೃತಿ; ಸಂಸ್ಕೃತಿಯ ಲಕ್ಷಣವೇ ಧರ್ಮಾನುಷ್ಠಾನ. ವ್ಯಷ್ಟಿ ಜೀವನದ ಧರ್ಮಾನುಷ್ಠಾನವು ಸಮಷ್ಟಿಜೀವನದಲ್ಲಿ ಪ್ರತಿಫಲಿಸಿದಾಗ ಸಂಸ್ಕೃತಿಯು ಇಡಿ ಸಮಾಜದಲ್ಲಿ ತೋರಿಬರುತ್ತದೆ. ಜ್ಞಾನಿಗಳ ವಚನವೊಂದರಲ್ಲಿ ಹೇಳಿರುವಂತೆ "ಜೇಷ್ಠ ಪುತ್ರಾವ ಮಾನೇನ ತ್ರಯಃ ಕುಪ್ಯನ್ತಿ ಸೋದರಾಃ" —ಎಂಬಂತೆ ಧರ್ಮ, ಅರ್ಥ ಕಾಮ ಮೋಕ್ಷಗಳೆಂಬ ನಾಲ್ವರು ಸೋದರರಲ್ಲಿ ಹಿರಿಯನಾದ ಧರ್ಮಕ್ಕೆ ಅವಮಾನವಾದರೆ ಮಿಕ್ಕ ಮೂರುಮಂದಿ ಸೋದರರಿಗೂ ಕೋಪ ಬರುತ್ತದೆ. ಎಂದರೆ, ಧರ್ಮಕ್ಕೆ ಚ್ಯುತಿ ಬಂದರೆ ಮಿಕ್ಕ ಮೂರು ಪುರುಷಾರ್ಥಗಳಿಗೂ ಲೋಪಬಂದು ವ್ಯಕ್ತಿ ಜೀವನ ತನ್ಮೂಲಕ ಸಮಷ್ಟಿ ಸಮಾಜ ಜೀವನ ಅಸ್ತವ್ಯಸ್ತವಾಗುತ್ತದೆ.

ಭರತ ಖಂಡದ ಧರ್ಮ ಜ್ಯೋತಿಯು ದಿವ್ಯ ತೇಜಸ್ಸು ಇಡಿ ವಿಶ್ವವನ್ನೇ ವ್ಯಾಪಿಸಿದೆ. ವಿಚಾರಪರರೆಲ್ಲರ ಮನೋಮಂಡಲವನ್ನು ಭಾರತದತ್ತ ಆಕರ್ಷಿಸಿದೆ ಶಾಂತಿ ಸಂರಕ್ಷಣೆಯ ಮೂಲ ಮಂತ್ರವಾದ ಅಹಿಂಸಾ ತತ್ವದ ಅನುಸರಣೆಯಿಂದ ಭಾರತವು ಇಡಿ ವಿಶ್ವಕ್ಕೆ ಮಾರ್ಗದರ್ಶನ ಮಾಡಿದೆ. ಯಂತ್ರಮಯವಾದ ಈ ವಿಜ್ಞಾನ ಯುಗದಲ್ಲಿ ವಿಶ್ವಶಾಂತಿಗೆ ರಕ್ಷಣೆಯಂತಿರುವ ಪಂಚಶೀಲ ತತ್ವಗಳನ್ನು ಪ್ರಪಂಚಕ್ಕೆ ಕೊಟ್ಟಿರುವುದು ನಮ್ಮ ಭಾರತ

ಪ್ರಾಚೀನ ಗ್ರೀಸ್ ಸಾಮ್ರಾಜ್ಯ ಕಾಲದಿಂದಲೂ ಭಾರತದ ಹಿಂದೂ ಧರ್ಮ, ಪಾಶ್ಚಾತ್ಯ ತತ್ವವಿಚಾರ ರೂಪಣದ ಮೇಲೆ ಮಹತ್ ಪರಿಣಾಮ ಬೀರಿದೆ. ಮಾತ್ರವಲ್ಲದೆ ಪಾಶ್ಚಾತ್ಯ ತತ್ವಶಾಸ್ತ್ರಜ್ಞರಿಂದ ಫೋಪನ್‌ಹೌರ್, ಎಮರ್‌ಸನ್ ಮೊದಲಾದವರ ಮೇಲೆಯೂ ಪರೋಕ್ಷವಾದ ಪರಿಣಾಮ ಬೀರಿದೆಯೆಂಬುದನ್ನು ಪಾಶ್ಚಾತ್ಯ ದಾರ್ಶನಿಕರೇ ಒಪ್ಪಿಕೊಂಡಿದ್ದಾರೆ. ಆಷ್ಟೇಕೆ ಭಗವದ್ಗೀತೆಯನ್ನು ಸದಾ ತನ್ನ ಬಳಿಯಲ್ಲಿಯೇ ಇರಿಸಿಕೊಳ್ಳುತ್ತಿದ್ದನೆಂದು ಜರ್ಮನ್ ದಾರ್ಶನಿಕ ಫೋಪನಾರ್ ಹೇಳಿದ್ದಾನೆ.

ಲೋಕಕಲ್ಯಾಣಕ್ಕಾಗಿ ಗಾಂಧೀಜಿಯವರು ಕಂಡು ಅನುಷ್ಠಾನಕ್ಕೆ ತಂದ 'ಅಹಿಂಸೆ' ಮತ್ತು 'ಸತ್ಯ'ಗಳ ತತ್ವವು ಭಾರತೀಯರು ಸಹಸ್ರಾರು ವರ್ಷಗಳಿಂದಲೂ ಶಾಂತಿಯ ಹಾದಿಯಲ್ಲಿ ಬೆಳೆಸಿಕೊಂಡು ಬಂದಿರುವ ಜೀವನಕ್ರಮದಲ್ಲಿ ಬಲವಾಗಿ ಬೇರೂರಿಕೊಂಡಿದೆ.

ಈ ವಿಶ್ವದಲ್ಲಿರುವ ಪ್ರತಿಯೊಂದು ಜೀವಿಗೂ—ಅದು ಜ್ಞಾನಯುತವಾದದ್ದಾಗಲಿ ಜ್ಞಾನವಿರಹಿತವಾದದ್ದಿರಲಿ— ತನ್ನದೇ ಆದ ಒಂದು ನಿರ್ದಿಷ್ಟ ಧರ್ಮವಿದೆ— ಎಂಬುದೇ ಭಾರತೀಯರಿಲ್ಲರ ನಂಬುಗೆ ಶಾಂತಿಯೇ ಮಾನವ ಜೀವನದ ಪರಮ ಗುರಿ. "ಅಹಿಂಸಾ ಪರಮೋ ಧರ್ಮಃ" ಎಂಬ ತತ್ವದಂತೆ ಅಹಿಂಸೆಯಿಂದ ಸಾಧಿಸಿದ ಶಾಂತಿಯೇ ನಿತ್ಯ ಶಾಶ್ವತವಾದುದು. ಮಾನವೀಯತೆಯನ್ನು ಶಾಂತಿಯ ಮೂಲಕ ವ್ಯಕ್ತಪಡಿಸುವುದೇ ಮಾನವಧರ್ಮ. ಧರ್ಮವು ಮತ ಮತ್ತು ಕರ್ತವ್ಯಗಳೆರಡಕ್ಕೂ ಸೀಮಿತವಾಗಿರುವುದಿಲ್ಲ; ಅವೆರಡರ ಮೂಲಕ ಪ್ರಕಾರಕ್ಕೆ ಬರುತ್ತದೆ.

ಇಂದು ವಿಶ್ವದಲ್ಲಿ ಅನೇಕ ಬದಲಾವಣೆಗಳಾಗಿವೆ. ಹಿಂದೆ ಊಹೆಗೂ ಮೀರಿ ವಿಸ್ತಾರವಾದಂತಿದ್ದ ಭೂಮಂಡಲವು ಇಂದು ವೈಜ್ಞಾನಿಕ ಪ್ರಗತಿಯಿಂದ ಮಂದಿರಿ ಕಿರಿದಾಗಿದೆ ರಹಸ್ಯದ ಉಪಗ್ರಹದ ಹಾರಿಕೆಯಿಂದಲಂತೂ ಪ್ರಪಂಚವು ಮತ್ತೂ ಕಿರಿದಾಗಿದೆ. ಜಗತ್ತಿನ ತಾಪತ್ರಯವೆಲ್ಲ ನಮ್ಮ ಸ್ವಂತ ತಾಪತ್ರಯವೆಂಬಂಗೆ ತೊಡಗಿದೆ ಆರಿಯಬೇಕಾದ ವಿಷಯಗಳ ವೈವಿಧ್ಯ ಹೆಚ್ಚಿದೆ. ಯಾವ ವಿಷಯದಲ್ಲಿಯೂ ಇಳವಾಗಿ ಪ್ರವೇಶಿಸಲು ಸಮಯ, ಶಕ್ತಿ, ಆಸಕ್ತಿಗಳು ಅನೇಕರಿಗೆ ಇಲ್ಲದಂತಾಗಿದೆ ದೂರದ ವಿಚಾರಗಳಿಗೆ ಅನುಕಂಪಿಸುವ ನಮ್ಮ ಮನಸ್ಸು ಬಲು ಹತ್ತಿರದ ನೆರೆಹೊರೆಯ ವಿಚಾರಗಳನ್ನು ಮರೆಯುವಂತಾಗಿದೆ ಇಂತಾಗಿ ಆತ್ಮಪ್ರೀತ್ಯು ಅಶಾಂತಿ ಜನಮನದಲ್ಲಿ ತಾಂಡವವಾಡುತ್ತಿದೆ ಇಂತಹ ಅನಿಶ್ಚಿತತೆಯ ನಡುವಿನಲ್ಲಿ ಧೃಮಾಶೀಲರಾದ ಜನ ಚಿತ್ತಕ್ಕೆ ಧೈರ್ಯ, ಸ್ಥೈರ್ಯ, ಸಂತೃಪ್ತಿಗಳನ್ನು ದೊರಕಿಸಿ ಕೊಡುವುದು ಅತ್ಯುತ್ತಮ ಸಾಹಿತ್ಯ ಶಕ್ತಿಯಿಂದ ಮಾತ್ರ ಸಾಧ್ಯ.

ಜನಪದ ಕುಲ ಸಾಧನೆಯು ಹಾದಿಯಲ್ಲಿ ಬಾಪೂ ತೋರಿಸಿದ ಸರ್ವೋದಯದ ಕೈದೀವಿಗೆ ಹಿಡಿದು ಸುವೀರ ರಾಜ್ಯದ ಗುರಿಯತ್ತ ನಾವು ಸಾಗುತ್ತಿದ್ದೇವೆ. ಈ ಆದರ್ಶ ತತ್ವದ ಆಧಾರದ ಮೇಲೆ ಪ್ರಧಾನಿ ನೆಹರೂ ಪ್ರತಿಪಾದಿಸಿದ ಸಮತಾವಾದೀ ಸಮಾಜರಚನೆಯನ್ನು ನಾವೆಲ್ಲ ಅಂಗೀಕರಿಸಿದ್ದೇವೆ ಸಂತ ವಿನೋಬಾಜಿಯವರು ಮಹಾನವಮಿಯಂದು ಮೈಸೂರಿಗೆ ಭೇಟಿಮಾಡಿದಾಗ ಅಲ್ಲಿ ಭಾರತದ ಸರ್ವಪಕ್ಷ ಸಮ್ಮೇಳನ ನಡೆಯಿತು. ಇಲ್ಲಿ ಅನೇಕ ತೀರ್ಮಾನಗಳನ್ನು ಮಾಡಲಾಯಿತು. ಅಲ್ಲಿ ಹಾಕಿದ ಮೇಲ್ಪಂಕ್ತಿಯಂತೆ ಸರ್ವೋದಯ ತತ್ವವನ್ನು ಸರಕಾರ ಮತ್ತು ಸಮಾಜಗಳು ಕಾರ್ಯರೂಪಕ್ಕೆ ತರಬೇಕಾಗುವುದು ಹೀಗೆ ಈ ಗುರಿಯನ್ನು ನಾವು ಸಾಧಿಸಿದ್ದೇ ಆದರೆ, ಬಾಪೂ ಕಂಡ ರಾಮರಾಜ್ಯದ ಕನಸು ನೆನಸಾಗುತ್ತದೆ. ಅವರು ಆಶಿಸಿದಂತೆ ಎಲ್ಲಿ ಕಡು ಬಡವರಾದವರು ಕೂಡ ಇದು ನನ್ನ ದೇಶ ಇದನ್ನು ರೂಪಿಸುವಲ್ಲಿ ನಮ್ಮ ಮಾತಿಗೂ ಬೆಲೆಯಿದೆ' ಎಂದು ತಿಳಿದುಕೊಳ್ಳುವರೋ, ಎಲ್ಲಿ ಜನರಲ್ಲಿ ಮೇಲುಕೀಳೆಂಬ ವರ್ಗಭೇದವಿರುವುದಿಲ್ಲವೋ ಎಲ್ಲಿ ಎಲ್ಲ ಮತದವರು ಅನ್ಯೋನ್ಯತೆಯಿಂದಿರುವರೋ, ಅಂತಹಭಾವತೆಯನ್ನು ಬೇಗ ಕಾಣುವ ಭಾಗ್ಯ ನಮ್ಮದಾಗಬೇಕು.

ಭಾರತದ ಕೇರ್ಶಕ್ತಿಯಾವ ಕರ್ನಾಟಕವಲ್ಲಿ ಅವಾಂ ಸಂಪತ್ತು ಅತಿಶಯಗೊಂಡಿದೆ. ಬೆಳೆಯುವ ವೈವಿಧ್ಯತೆಯ ಭೂಮಿಯಿದೆ. ನಿರಂತರ ಹರಿಯುವ ನದಿಗಳಿವೆ ಬಹುವಿಧದ ಸಂಪತ್ತಿರುವ ಕಡಲ ತೀರವಿದೆ. ಭಾಗ್ಯದ ಬಾಗಿಲು ಮುಚ್ಚಿದಂತಿರುವ ಮಲೆನಾಡ ಪ್ರದೇಶವಿದೆ. ಹೆಮ್ಮೆಪಡಲರ್ಹವಾದ ಶಿಲ್ಪ ಕಲಾಕ್ಷೇತ್ರಗಳೆ, ಪುಣ್ಯ ಸ್ಥಳಗಳು ಬಹಳವಿವೆ. ಇವೆಲ್ಲವನ್ನೂ ಉಪಯೋಗಿಸಿಕೊಳ್ಳಲು ಮನುಷ್ಯಶಕ್ತಿ ಮಾತ್ರ ಜಾಗೃತವಾಗ ಬೇಕಾಗಿದೆ. ನಮ್ಮಲ್ಲಿ ಮಾನವ ಶಕ್ತಿಗೇನೂ ಕೊರತೆಯಿಲ್ಲ. ಹಿಂದಿನ ವೈಸೂರಿನವರ

(ಇನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಂಣ ಕಥೆ—

ಸೋಲೊಪ್ಪಿದವಳು.

ಬರೆದವರು: ಶ್ರೀ. ಕೆ. ತಿಮ್ಮಪ್ಪ ಗಟ್ಟಿ.

ನನ್ನ ಉಷಾ ಆರಾಮವಾಗಿ ಇಸೀ ಚೇರಿನಲ್ಲಿ ಕುಳಿತು ಓದುತ್ತಿದ್ದಳು.

ನಾನು ಬಂದುದು ತಿಳಿದಿಲ್ಲವೇನೋ ಎಂದು ಸ್ವಲ್ಪ ಕೆಮ್ಮಿದೆ. ಒಮ್ಮೆ ನನ್ನತ್ತ ವಿಚಿತ್ರ ನೋಟವನ್ನು ಬೀರಿ ನನ್ನ ಪ್ರೀತಿಯ ಉಷಾ ಇನ್ನಷ್ಟು ಒರಗಿ ಕುಳಿತು ಓದುವುದರಲ್ಲಿ ಮಗ್ನಳಾದಳು.

ನಮ್ಮ ಹೊಸ ಸಂಸಾರದಲ್ಲಿ ಇಂತಹ ದಿನವೇ ಬಂದಿರಲಿಲ್ಲ. ಮನೆಯಲ್ಲಿರುವುದು ನಾವಿಬ್ಬರೇ; ನಾನು ಮತ್ತು ನನ್ನೆಲ್ಲ ಉಷಾ-ಸಂಜೆ ಮನೆಗೆ ಪ್ರವೇಶಿಸಿಕೊಡನೆ ದಿನವೂ ಪ್ರೀತಿಯಿಂದ, ನಗುಮುಖದಿಂದ ಸ್ವಾಗತಿಸುತ್ತಿದ್ದಳು. ಬಿಸಿ ಬಿಸಿ ಕಾಫಿ ಕಾದಿರುತ್ತಿತ್ತು. ಅಮೃತಸಮಾನವಾದ ಈ ಕಾಫಿಯಲ್ಲದೆ ಬೇರಾವುದೂ ನನಗೆ ರುಚಿಸುತ್ತಿರಲಿಲ್ಲ. ಜವಕ್ಕಾಗಿ ಕಾತರಿಸಿ ಉತ್ಸಾಹದಿಂದ, ಅವಸರದಿಂದ ಮನೆ ಸೇರುತಿದ್ದೆ. ಆದರೆ ಇಂದು?.....

ವಿಷ್ಯಯ ಮೇರೆ ಮೀರಿತು. ನನ್ನ ಕೆನ್ನೆಯುರೇ ಉಷಾ ಕುಳಿತಲ್ಲಿಂದ ಏಳದೆ ರಾಣಿಯಂತೆ ಕುಳಿತಿದ್ದಳು. ನನ್ನ ಗಂಡು ಸ್ವನದ ಕೆನ್ನೆಗೆ ಬರೆಯೆಳೆದಂತಾಯಿತು. ಸಿಟ್ಟಿನಿಂದ ಆವಾಹ ಮಸ್ತಕ ಉರಿಯ ಲಾರಂಭಿಸಿದೆ. ಕಣ್ಣುಗಳೆರಡೂ ಕೆಂಪಗಾದುವು. "ಇರಲಿ ನೋಡೋಣ" ಎಂದುಕೊಂಡು ಕೋಟನ್ನೆತ್ತಿ ಗೂಟಕ್ಕೆ ತಗುಲಿಸಿ ಬಚ್ಚಲುಮನೆಗೆ ಹೋಗಿ ಕಾಲು ತೊಳೆದುಕೊಂಡು ಬಂದೆ. ನಾನೊ ಒಂದು ಇಸೀಜೇರನ್ನೆಳೆದು ಕುಳಿತುಕೊಂಡೆ. ಉಷಾ ನನ್ನ ಕಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ಓದುತ್ತಿದ್ದ ಪುಸ್ತಕವೇನೆಂದು ನೋಡಿದೆ. ಅದೊಂದು ಹಿಂದೀ ಕಾದಂಬರಿ "ಪ್ರೇಮಗೀತ"

"ಉಷಾ" ತಪಪ್ಪ ಕ್ಯೋಂಪೊಡನೆ ಪ್ರೇಮವನ್ನು ಬೆರೆಸಿ ಕೂಗಿದೆ. ಉಷಾ ಕುಳಿತಲ್ಲಿಂದಲೇ ತಲೆಯೆತ್ತಿ "ಏನು" ಎಂಬ ಭಾವದಿಂದ ನನ್ನನ್ನೊಮ್ಮೆ ನೋಡಿದಳು. ಅವಳ ಮುಖದಲ್ಲೇನೋ ನವೀನ ಕೆಚ್ಚಿನ ಭಾವವಿತ್ತು. ನಾನು ನನ್ನ ಸ್ವಾಭಿಮಾನ, ನಾಚಿಕೆ, ಸಂಕೋಚವೆಲ್ಲವನ್ನು ಬದಿಗಿಟ್ಟು ಕೇಳಿದೆ.

"ಕಾಫಿ ಇಲ್ಲವೇನು?

"ಇರಲಿಲ್ಲವೇ?" ಉಷಾ ಗಂಭೀರವಾಗಿ ಕೇಳಿದಳು.

"ಎಲ್ಲಿ?" ಎಂದೆ ನಾನು ವಿಸ್ಮಿತನಾಗಿ.

"ಹೋಟೆಲಿನಲ್ಲಿ" ಉಷೆಯ ಉತ್ತರ!

ಅಬ್ಬಾ! ನನಗೆ ಜೀವರಿಹೋಯಿತು. ಇವಳಿಗೇನಾದರೂ ಪಿತ್ತವಿಕಾರವಾಗಿರಲಾರದಲ್ಲೇ ಎಂದುಕೊಂಡೆ. ಸ್ವಲ್ಪ ತಡೆದು ಅವಳ್ಳ ಹೇಳಿದಳು.

"ಈ ದಿನ ನೀನೇ ಸ್ವಲ್ಪ ಮಾಡಿಬಿಡಿ. ಕಾಫಿ ಮಾಡುವುದೇನೂ ನನ್ನ ಫಂಡಮೆಂಟಲ್ ರೂಲ್ಸಲ್ಲ. ಮಾಡಿ ಸ್ವಲ್ಪ ನನಗೂ ಕೊಡಿ!"

ನಾನು ಎಲ್ಲಿದ್ದೇನೆ ಎಂದು ನನಗರಿವಾಗಲಿಲ್ಲ. ಎಲ್ಲಾದರೂ ತಪ್ಪಿ ಯಾರ್ಯಾರ ಮನೆ ಹೊಕ್ಕೆನೇನೋ ಎಂಬಷ್ಟು ಗಾಬರಿಯಾದೆ. ಅತ್ತತ್ತ ನೋಡಿ ನವರಂಗಳಂದಲೂ ಹೊರತಾದ ಒಂದು ಹೊಸ ಧ್ವನಿಯಲ್ಲಿ ಉಷೆಯ ಮುಖವನ್ನು ನೋಡುತ್ತಾ ಕರೆದೆ:

"ಉಷಾ,"

"ಛೂ! ಬಾಯ್ಮುಚ್ಚಿ! ಏಕ ವಚನದಲ್ಲಿ ಕರೆದಿರಾ ಜಾಗ್ರತೆ. ನಾನೂ ಹಾಗೆಯೇ ಮಾಡಬೇಕಾದೀತು!"

ಇವಳಿಗೆ ದೆವ್ವವೋ ಪಿಶಾಚಿಯೋ ಹಿಡಿದಿದೆಯೆಂದು ಖಂಡಿತವಾಗಿ ನಿರ್ಧರಿಸಿದೆ. ಮುಂದೇನು ಮಾಡಬೇಕೆಂದೇ ತೋರಲಿಲ್ಲ. ಈ ದೆವ್ವ ಬಿಡುವ ವರೆಗೆ ಎಲ್ಲಿಗಾದರೂ ಹೋಗೋಣವೆಂದೆ. ಕೋಟು ಸಿಕ್ಕಿಸಿಕೊಂಡು "ಆನಂದ ಭವನ"ಕ್ಕೆ ಹೊರಟೆ. ಹೊಸ್ತಿಲನ್ನು ದಾಟಿದ್ದೇ ತಡ ಒಳಗಿಂದೊಂದು ಗಂಭೀರ ಸ್ವರ ಕೇಳಿಬಂತು.

"ನನ್ನನ್ನೂ ಕೇಳುವ ಹಕ್ಕಿದೆ. ಎಲ್ಲಿ ಹೋಗುತ್ತಿರುವಿರಿ?" ಹಕ್ಕನ್ನು ಮೆಂದಲೇ ಹೇಳಿಕೊಳ್ಳುತ್ತಾ ಬಂದಿತ್ತು ಉಷೆಯ ಧ್ವನಿ!

ನಾನು ನಿಂತು ಹಿಂತಿರುಗಿ ವಿನೀತನಾಗಿ ಹೇಳಿದೆ: "ದೆವ್ವನೇ ಕಾಫಿ ಕುಡಿಯಲು ಹೋಗುತ್ತಿರುವೆನು"

ಉಷಾ ಟಪ್ಪನೆ ಎದ್ದು ಸೆರಗನ್ನು ರಾಪ್ಪುಪ್ಪದಂತೆ ಹಾರಿಸುತ್ತಾ, ಸರ್ರೆಂದು ಒಳಹೊಕ್ಕು ಅರೆನಿಮಿಷದಲ್ಲಿ ಸುರ್ರೆಂದು ಶೃಂಗಾರಪೂರಿತಳಾಗಿ ಹೊರಬಂದಳು. ಅಯ್ಯೋ, ಇದೆಲ್ಲಿ ಹೋಟ್ಲಿಗೂ ಬೆನ್ನು ಹಿಡಿಯುವುದೇ" ಎಂದು ಬೇಗ ಬೇಗ ಜೆಜ್ಜೆ ಹಾಕಿ ಹತ್ತಿಲಿನಗೇಟನ್ನು ಬಳಿಬಂದೆ. ಹಿಂತಿರುಗಿ ನೋಡಿದಾಗ ಉಷಾ ಬಾಗಿಲಿಗೆ ಬೀಗ ಹಾಕಿ ಇನ್ನೊಂದು ಕಡೆಗೆ ತಿರುಗಿ ಕೊಂಟೆ. ಹೋಗುವುದು ಕಂಡಿತು. ಸಧ್ಯ ನನ್ನೊಂದಿಗೆ ಬರಲಿಲ್ಲವಲ್ಲಾ ಎಂದು ನಿಟ್ಟುಸಿರುಬಿಟ್ಟೆ. ಮರುಕ್ಷಣವೇ ಛೆ! ಹಾಗಾರಗಿತ್ತಿ ನನ್ನ ಕಣ್ಣೆದುರೇ ಎಲ್ಲಿಗೆ ಹೊರಟು, ಹೋದೆ?" ಎಂದು ತಪಿಸಿ ಆನಂದ ಭವನದ ಬಿಸಿ ಕಾಫಿಗಾಗಿ ಮುನ್ನಡೆದೆ.

ನಾನು ತಿಂಜೆ ಆಫೀಸಿನಲ್ಲಿ ಕ್ಲರ್ಕ್ ಇಡೀ ದಿನ ದುಡಿದು ಸಾಕಾಗುತಿತ್ತು. ಉಷೆಯೂ S. S. L. C. ವರೆಗೆ ಓದಿ ಒಂದು ವರ್ಷ ಕಾಲೇಜೂ ಹತ್ತಿದ ವಿದ್ಯಾವಂತೆ. ನಮ್ಮ ಮತ ಒಂದೇ ಆದರೂ ನಮ್ಮದು 'ಲವ್ ಮೇರೇಜ್' ಈ ಮುಂಬಯಿ ನಗರದಲ್ಲಿ ನಮ್ಮ ಹೊಸ ಪ್ರೇಮದ ಸಂಸಾರ ಆರಂಭವಾಗಿ ಏಳಾರು ತಿಂಗಳುಗಳಾಗಿದ್ದುವು. ಇಂದು ಉಷಾ ಕಾಲಕ್ಕೆ ಸರಿಯಾಗಿದ್ದಾಳು. ಉಷಾ ಇದೇ ದಿನ ಸಂಜೆ ಸಂಪೂರ್ಣ ಬದಲಾಗಿದ್ದಳು!

ನಾನು ಕಾಫಿಯನ್ನು ಬೇರಿ ಸ್ವಲ್ಪ ನಿಧಾನವಾಗಿಯೇ ಮನೆ ಸೇರಿದೆ. ಮನೆಗೆ ಮುಟ್ಟಿದಾಗ ಗಂಟೆ ಎಂಟು. ಮನೆಗೆ ಹಾಕಿದ ಬೀಗ ಹಾಕಿದಂತೆಯೇ ಇತ್ತು. ಇದೇನೋ ದುರ್ದಿನ, ಪ್ರಳಯಕಾಲಕ್ಕೆ ತೋರುವ ಉತ್ಪಾತಗಳಂತೆ ಕೋರಿತು ನನಗೆ. ಆಫ್ಸು ಸೌಮ್ಯ, ಸುಶೀಲೆ, ಮುಗ್ಧೆ ಉಷಾ ಹೀಗಾಗಲು ಕಾರಣವೇನು? ನನ್ನ ಮನಸ್ಸು ಮಂಕಾಗಿಯೋಚನೆ, ಸಿಟ್ಟು, ಉಪಾಯ ಯಾವುದೂ ಹೊಳೆಯಲಿಲ್ಲ. ಉಷಾ ಹೋದುದೆಲ್ಲಿ ಎಂದು ನನಗೆ ಮುಳ್ಳಿನಮೇಲೆ ನಿಂತಂತಾಗಿತ್ತು.

ನಾನು ಕಂಪೌಂಡಿನ ಗೋಡೆಯ ಹತ್ತಿರ ಬರುತ್ತಿದ್ದೆನಷ್ಟೇ. ಉಷಾ ಮನೆಗೆ ಬರುತ್ತಿರುವುದು ಕಂಡಿತು. ವಸಕು ಮಸಕು ಕತ್ತಲೆ. ಆದರೂ ಅವಳೊಡನೆ ಮತ್ತಾರೋ ಇದ್ದಂತೆ ಕಂಡಿತು. "ಅಯ್ಯೋ ....." ನಾನು ನಡುಗಿಹೋದೆ. ಅದು.... ಆ...ದು ಹುಲಿಯಾಗಿರಲಿಲ್ಲ. ಕಮಲಾಬಾಯಿ ಮಹಿಳಾ ಸಂಘದ ಪ್ರಚಾರ ಕಾರ್ಯದರ್ಶಿ!

ನನಗೆ ಎಲ್ಲವೂ ಅರ್ಥವಾಯಿತು. ಈ ಮಹಿಳಾ ಸಂಘದ ಉದ್ದೇಶ ಮಹಿಳೆಯರ ಏಳಿಗೆ ಆದರೆ ಇದು ಮಾಡುತ್ತಿರುವುದೇನು? ಗಂಡನಾದ ನಾನು ಹೆಂಡತಿ! ಇಂದಿವರೆಲ್ಲಾ ಹಿಟ್ಲರುಗಳೇ ಸರಿ.

ನನ್ನ ನಡುಕವನ್ನು ಪ್ರಯತ್ನಪಟ್ಟು ನಿಲ್ಲಿಸಿದೆ. ನನ್ನ ರೊಚ್ಚು ಕೆದರಿತು. 'ನೋಡೋಣ' ಎಂದುಕೊಂಡು ಮೆಲ್ಲನೆ ಮನೆಯ ಹಿಂಭಾಗಕ್ಕೆ ಹೋದೆ. ಉಷೆಯ ಕೋಣೆಯಲ್ಲಿ ಮಾತುಕತೆ ಸಾಗುತಿತ್ತು. ಆಸ್ತಿಕನಿಗೆ ನಾಸ್ತಿಕ ಭೋದೆ ಮಾಡುವಂತೆ ಶುದ್ಧ ಪತಿವ್ರತೆ ಉಷೆಗೆ ಕಮಲಾಬಾಯಿ ಮತಿವೃತಕೊಡುತ್ತಿದ್ದಳು!)ರು!

ಉಷಾ 'ಹೂಂ'ಗುಟ್ಟುತ್ತಿದ್ದಳು. ಕಮಲಾಬಾಯಿ ಹೇಳುತ್ತಿದ್ದರು: "ನಾನು ಬೆಳಿಗ್ಗೆಯೇ ಹೇಳಿದ್ದೆನಲ್ಲಾ ಉಷಾದೇವಿ, ನಮ್ಮ ಉದ್ಧಾರವಾಗಬೇಕೋ ಈ ನಿಯಮಗಳನ್ನು ಪಾಲಿಸಬೇಕು. ನೋಡಿ, ಅವರಷ್ಟೇ ಹಕ್ಕು ನಮಗೂ ಇದೆ. ಈ ಗಂಡ(ಂದಿರ.)ಸರು ನಮ್ಮನ್ನು ಏಕ ವಚನದಿಂದ ಕರೆಯಕೂಡದು. ಹಾಗೆ ಕರೆದರೆ ನಾವೂ ಕರೆಯಬೇಕು. ಸಂಸಾರದಲ್ಲಿ, ಮನೆಯಲ್ಲಿ ದಿನದಿನ ಮಾಡಬೇಕಾದ ಕೆಲಸಗಳನ್ನು ಅವರೇ ಮಾಡಿಕೊಳ್ಳಬೇಕು. ಊಟ, ಆಡಿಗೆ, ಬಟ್ಟೆ ಒಗೆಯುವುದು ಎಲ್ಲಾ...."

ಉಷಾ ಶಂಕೆಯಿಂದ ಮಧ್ಯದಲ್ಲೇ ದನಿಯೆತ್ತಿದಳು: "ಆದರೆ ನಮ್ಮಲ್ಲಿ ಹಣ?

"ಓಹೋ, ಇದಕ್ಕೇಕೆ ಹೆದರುತ್ತೀರಿ? ಜಾಗ್ರತೆಯಾಗಿ, ವ್ಯವಸ್ಥಿತವಾಗಿ ಗಂಡಂದಿರ ಕೈಯಿಂದ ಜಾರಿಸಬೇಕು. ಉಷಾದೇವಿ, ನಮ್ಮ ಮಹಿಳಾಸಂಘದಲ್ಲಿ ಆರ್ಥಿಕ ಸ್ಥಿತಿ ಕೊಂಚ ಆಪ್ಪಕ್ಕಷ್ಟೇ."

ಅಬ್ಬಾ! ತನ್ನ ಮನೆಯನ್ನು ತಾನೇ ಸುಡುವಂತೆ ಮಾಡುವ ಪ್ರಚಾರವೇ. ನನಗೆ ಸಿಟ್ಟು ಬರುತ್ತಿತ್ತು. ನಿಗುರೂ ಬರುತ್ತಿತ್ತು. ಒಂದೂಂದು ಮಾತುಗಳು ಶೂಲಗಳಾಗಿ ಬಂದು ನನ್ನೆದೆಗೆ ನಾಟುತಿದ್ದುವು.

ಹಾವಾಡಿಗನೆದುರಿನ ಹಾವಿನಂತೆ ಉಷಾ ಮಾತಿಗೆ ತಲೆದೂಗುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲಿ, ಒಂದು....ಎರಡು..... ಇತ್ಯಾದಿ ಎಣಿಸುವುದು ಕೇಳಿಸುತು. ಉಷಾ ಮಹಿಳಾ ಸಂಘದ ಸದಸ್ಯೆಯಾದಳು; ಮಾತ್ರವಲ್ಲ; ಆಜೀವ ಸೇವಕ ಸದಸ್ಯೆಯಾದಳು!

"ಅಯ್ಯೋ ಹುಚ್ಚಿ! ಮನೆ ಹಾಳುಗೈದೆ!" ಎಂದು ನನ್ನ ಮುಷ್ಟಿ ಬಿಗಿಯಿತು. ಹೃದಯ ಕರಗಿತು.

"ನೋಡಿ, ಗಂಡನನ್ನು ದಾರಿಗೆ ತರುವ ಕ್ರಮ ಗೊತ್ತಾಯಿತು ತಾನೆ? ಇನರ ಸರ್ವಾಧಿಕಾರ ಕೊನೆಗಾಣಿಬೇಕು. ನಿಮ್ಮನ್ನು "ಉಷಾ" ಅಂತ ಕರೆದರೆ ನೀವೂ "ಮನೇಂತೆ" ಅಂತಲೇ ಕರೆಯಿರಿ. ಪ್ರತಿಯೊಂದರಲ್ಲೂ ಹೀಗೆಯೇ ದಾಸ್ಯತನ, ಪರಾವಲಂಬನ ಸಲ್ಲದು. ಏನು, ನಾನಿನ್ನು ಬರುತ್ತೇನೆ. ಅಂದ ಹಾಗೆ ನಾಳೆ ಸಭೆಗೆ ಬಂದು ಬಿಡಿ. ಗುಡ್ ನೈಟ್!"

ಅಬ್ಬಾ! ದೆವ್ವ ಹೊಂಟು ಹೋಯಿತು. ನಾನು ಸ್ವಲ್ಪ ತಡೆದು ಒಳಹೊಕ್ಕು ಕೈಕಾಲು ತೊಳೆದೆ. ಎದೆಯಲ್ಲಿ ಸಿಟ್ಟು ಕುದಿಯುತಿತ್ತು. ಮಾತನಾಡಿಸಿದರೆ ಮತ್ತೂ ಜಟಿಲ! ಊಟಕ್ಕೂ ಸೊನ್ನೆ! ಅಂತೂ ಮುಸುಕು ಹಾಕಿ ಮಲಗಿಬಿಟ್ಟೆ. "ದೇವಾ, ಉಷಾ ಸಂಪೂರ್ಣ ಕಲ್ಲಾಗಿದ್ದಾಳೆ. ಅವಳನ್ನು ಮೊದಲಿನ ಉಷೆಯನ್ನಾಗಿ ಮಾಡು. ಅವಳಿಗೆ ಸದ್ಬುದ್ಧಿ ಕೊಡು. ಅವಳಿಗೆ ಕರುಣೆ ಬರಲಿ. ಅವಳು ಮಹಿಳಾ ಸಮಾಜಕ್ಕೆ ಸೇವೆಯಿದ್ದರೆ ಸೇವಲಿ ಆದರೆ ಈ ದುರ್ಬುದ್ಧಿ ಬೇಡ. ಮಹಿಳೆಯರು ನ್ಯಾಯವಾದ ಹಕ್ಕುಗಳನ್ನು ಅರಿಯುವಂತಾಗಲಿ. ನಾಳೆ ಉಷಾಕಾಲಕ್ಕೆ ನನ್ನ ಉಷೆ ಮೊದಲಿನ ಉಷೆಯಾಗಲಿ" ಎಂದು ಪ್ರಾರ್ಥಿಸಿ ನಿದ್ದೆಹೋದೆ.

ನಾನು ಎದ್ದಾಗ ಉಷೆಯನ್ನೂ ಎದ್ದಿರಲಿಲ್ಲ. ನನ್ನ ಗಂಡಸ್ತನದ ಪತನ ಸಮೀಪಿಸಿತೆಂದುಕೊಂಡು ಬಚ್ಚಲು ಕೋಣೆಯೊಳ ಹೊಕ್ಕೆ. ದೇವರ ದಯೆಯಿಂದ ಉಷೆಯ ಬುದ್ಧಿ ಬದಲಾಗುವ ಮೊದಲೇ ತುಂಬಿಸಿಟ್ಟ ನೀರಿತ್ತು. 'ಬಮಕಿಷ!" ಎಂದು ಸ್ನಾನಕ್ಕೆಳಿದೆ. ಎಲ್ಲಿಯಾದರೂ ಸ್ನಾನದ ಮಧ್ಯದಲ್ಲೋ ಎಚ್ಚರವಾದರೆ ಎಲ್ಲಿ ಸ್ವ-ಜಧಿಕಾರ ಚಲಾಯಿಸಿ ಹಂಡೆಯ ಮೇಲೆ ತನ್ನ ಹಕ್ಕನ್ನು ಸ್ಥಾಪಿಸುವಳೋ ಎಂದು ಬೇಗಬೇಗ ತಣ್ಣೀರನ್ನೇ ಹೊಯ್ದುಕೊಂಡು ಸ್ನಾನ ಮುಗಿಸಿದೆ.

ಏನೂ ಶುಭ ಸೂಚನೆ ಕಂಡು ಬರಲಿಲ್ಲ. ಕಾಫಿಗೆ ಸೆನ್ನೆ. ಉಷೆಗೆ ಇನ್ನೂ ಎಚ್ಚರವಾಗಿರಲಿಲ್ಲಿ. ಎಲ್ಲಾದರೂ ಕುಳಿತು ಹೊತ್ತು ಕಳೆದು ಆಫೀಸಿಗೆ ಮುಟ್ಟಬಹುದೆಂದುಕೊಂಡು ಉಡುಪು ಧರಿಸಿ ಹೊರಟುಬಿಟ್ಟೆ.

"ಇಡೀ ದಿನ ದುಡಿದು ಬಾಳನ್ನು ಸಾಗಿಸಬೇಕು ನಾನು! ಹಣ ಸಂಪಾದಿಸಬೇಕು ನಾನು! ಇವರ ಸೀಲೆ, ಕುಪ್ಪಸ, ಸ್ನೋ ಪೌಡರಿಗಳಿಗೂ ಹೊತ್ತು ಹೊತ್ತಿಗೆ ಹೊಟ್ಟೆಗೆ ಹಾಕಲು ಹಣ ತರಬೇಕು ನಾನು! ಜೆ ಮೇಲೆ ಇವರ ಹಕ್ಕಂತೆ! ಅಂ

೧೧ನೇ ಪುಟ ನೋಡಿರಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
(ಭಾರತದಲ್ಲಿ ಸಂಸ್ಥೀಕರಿಸಲ್ಪಟ್ಟುದು: ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)
ಹೆಡ್ ಆಫೀಸು: ಮಂಗಳೂರು, ದ. ಭಾರತ.
ಕೆಳಗಿನ ದರಗಳ ಬಡ್ಡಿಯಲ್ಲಿ ಶೇವಣಾತಿಗಳನ್ನು ಸ್ವೀಕರಿಸಲಾಗುವುದು:
1ರಿಂದ 6 ತಿಂಗಳುಗಳ ವ್ಯಾದಿಗೆ ... 4½%
6ರಿಂದ 18 ತಿಂಗಳುಗಳ ವ್ಯಾದಿಗೆ ... 4¾%
24 ತಿಂಗಳುಗಳ ವ್ಯಾದಿಗೆ ... 4¾%
ದೊಡ್ಡ ಪ್ರಮಾಣದ ಶೇವಣಾತಿಗಳಿಗೆ ಸ್ಪೆಶಲ್ ದರದ ಬಡ್ಡಿ ಕೊಡಲಾಗುವುದು.
ಹೆಚ್ಚಿನ ಮಾಹಿತಿಗೆ ಸಮೀಪದ ಯಾವುದಾದರೊಂದು ನಮ್ಮ ಶಾಖೆಯೊಡನೆ ವಿಚಾರಿಸಿರಿ.
THE KARNATAKA BANK LIMITED

ವಾರದ ಸಣ್ಣ ಕಥೆ—

ಸೋಲೊಪ್ಪಿದವಳು.

ಬರೆದವರು. ಶ್ರೀ. ಕೆ. ತಿಮ್ಮಪ್ಪ ಗಟ್ಟಿ.

ನನ್ನ ಉಷಾ ಅಂತಿಮವಾಗಿ ಇಸೀ ಚೇರಿನಲ್ಲೆ ಕುಳಿತು ಓದುತ್ತಿದ್ದಳು.

ನಾನು ಬಂದುದು ತಿಳಿದಿಲ್ಲವೇನೋ ಎಂದು ಸ್ವಲ್ಪ ಕೆನ್ಸುವೆ. ಒಮ್ಮೆ ನನ್ನತ್ತ ವಿಚಿತ್ರ ನೋಟವನ್ನು ಬೀರಿ ನನ್ನ ಪ್ರೀತಿಯ ಉಷಾ ಇನ್ನಷ್ಟು ಒರಗಿ ಕುಳಿತು ಓದುವುದರಲ್ಲಿ ಮಗ್ನಳಾದಳು.

ನಮ್ಮ ಕೊಸ ಸಂಸಾರದಲ್ಲಿ ಇಂತಹ ದಿನವೇ ಬಂದಿರಲಿಲ್ಲ. ಮನೆಯಲ್ಲಿರುವುದು ನಾವಿಬ್ಬರೇ; ನಾನು ಮತ್ತು ನನ್ನೆ ಉಷಾ. ಸಂಜೆ ಮನೆಗೆ ಪ್ರವೇಶಿಸಿದೊಡನೆ ದಿನವೂ ಪ್ರೀತಿಯಿಂದ, ನಗುಮುಖದಿಂದ ಸ್ವಾಗತಿಸುತ್ತಿದ್ದಳು. ಬಿಸಿ ಬಿಸಿ ಕಾಫಿ ಕಾದಿರುತ್ತಿತ್ತು. ಅಮೃತಸಮಾನವಾದ ಈ ಕಾಫಿಯಲ್ಲದೆ ಬೇರಾವುದೂ ನನಗೆ ರುಚಿಸುತ್ತಿರಲಿಲ್ಲ. ಓದಕ್ಕಾಗಿ ಕಾತರಿಸಿ ಉತ್ಸಾಹದಿಂದ, ಉಪಸರದಿಂದ ಮನೆ ಸೇರುತಿದ್ದೆ. ಆದರೆ ಇಂದು?.....

ವಿಸ್ಮಯ ಮೇರೆ ಮೀರಿತು. ನನ್ನ ಕೆಣ್ಣೆದುರೇ ಉಷಾ ಕುಳಿತಲ್ಲಿಂದ ಏಳದೆ ರಾಣಿಯಂತೆ ಕುಳಿತಿದ್ದಳು. ನೆನ್ನ ಗಂಡುಸ್ತನದ ಕೆನ್ನೆಗೆ ಬರೆಯೆಳೆದಂತಾಯಿತು. ಸಿಟ್ಟಿನಿಂದ ಅವಾಚ್ಯ ಪುಸ್ತಕ ಉರಿಯುಲಾರಂಭಿಸಿದೆ. ಕಣ್ಣುಗಳೆರಡೂ ಕೆಂಪಗಾದುವು. "ಇರಲಿ ನೋಡೋಣ" ಎಂದುಕೊಂಡು ಕೋಟನ್ನೆತ್ತಿ ಗೂಟಕ್ಕೆ ತಗುಲಿಸಿ ಬಚ್ಚಲುಮನೆಗೆ ಹೋಗಿ ಕಾಲು ತೊಳೆದುಕೊಂಡು ಬಂದೆ. ನಾನೂ ಒಂದು ಇಸೀಚೇರನ್ನೆಳೆದು ಕುಳಿತುಕೊಂಡೆ. ಉಷಾ ನನ್ನ ಕಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ಓದುತ್ತಿದ್ದ ಪುಸ್ತಕವೇನೆಂದು ನೋಡಿದೆ. ಇದೊಂದು ಹಿಂದಿ ಕಾದಂಬರಿ "ಪ್ರೇಮಗೀತ"

"ಉಷಾ" ಅದಷ್ಟು ಕ್ರೋಧದೊಡನೆ ಪ್ರೇಮವನ್ನು ಬೆರೆಸಿ ಕೂಗಿದೆ. ಉಷಾ ಕುಳಿತಲ್ಲಿಂದಲೇ ತಲೆಯೆತ್ತಿ "ಏನು" ಎಂಬ ಭಾವದಿಂದ ನನ್ನನ್ನೊಮ್ಮೆ ನೋಡಿದಳು. ಅವಳ ಮುಖವಿಲ್ಲೇನೋ ನವೀನ ಕೆಚ್ಚಿನ ಭಾವನಿತ್ತು. ನಾನು ನನ್ನ ಸ್ವಾಭಿಮಾನ ನಾಚಿಕೆ, ಸಂಕೋಚವೆಲ್ಲವನ್ನು ಬದಿಗಿಟ್ಟು ಕೇಳಿದೆ.

"ಕಾಫಿ ಇಲ್ಲವೇನು?

"ಇರಲಿಲ್ಲವೇ?" ಉಷಾ ಗಂಭೀರವಾಗಿ ಕೇಳಿದಳು.

"ಎಲ್ಲಿ?" ಎಂದೆ ನಾನು ವಿಸ್ಮಿತನಾಗಿ.

"ಹೋಟೆಲಿದ್ದಲ್ಲಿ" ಉಪೆಯ ಉತ್ತರ!

ಅಬ್ಬಾ! ನನಗೆ ಬೆವರಿಹೋಯಿತು. ಇವಳಿಗೇನಾದರೂ ಪಿತ್ತವಿಕಾರವಾಗಿರಲಾರದಷ್ಟೇ ಎಂದುಕೊಂಡೆ. ಸ್ವಲ್ಪ ತಡೆದು ಅವಳೇ ಹೇಳಿದಳು.

"ಈ ದಿನ ನೀನೇ ಸ್ವಲ್ಪ ಮಾಡಿಬಿಡಿ. ಕಾಫಿ ಮಾಡುವುದೇನೂ ನಿನ್ನ ಫಂಡಮೆಂಟಲ್ ರೂಲ್ಸಲ್ಲ. ಮಾಡಿ ಸ್ವಲ್ಪ ನನಗೂ ಕೊಡಿ!"

ನಾನು ಎಲ್ಲಿದ್ದೇನೆ ಎಂದು ನನಗರಿವಾಗಲಿಲ್ಲ. ಎಲ್ಲಾದರೂ ತಪ್ಪಿ ಯಾರ್ಯಾರ ಮನೆ ಹೊಕ್ಕೆನೇನೋ ಎಂಬಷ್ಟು ಗಾಬರಿಯಾದೆ. ಅತ್ತಿತ್ತ ನೋಡಿ ನವರಸಗಳಂದಲೂ ಹೊರತಾದ ಒಂದು ಹೊಸ ಧ್ವನಿಯಲ್ಲಿ ಉಷೆಳ ಮುಖವನ್ನು ನೋಡುತ್ತಾ ಕೇಳಿದೆ:

"ಉಷಾ,"

"ಛೂ! ಬಾಯ್ಮುಚ್ಚಿ' ಏಕ ವಚನದಲ್ಲಿ ಕರೆದಿರಾ ಜಾಗ್ರತೆ ನಾನೂ ಹಾಗೆಯೇ ಮಾಡಬೇಕಾದೀತು!"

ಇವಳಿಗೆ ದೆವ್ವವೋ ಪಿಶಾಚಿಯೋ ಹಿಡಿದಿವೆಯೆಂದು ಖಂಡಿತವಾಗಿ ನಿರ್ಧರಿಸಿದೆ. ಮುಂದೇನು ಮಾಡಬೇಕೆಂದೇ ತೋರಲಿಲ್ಲ. ಈ ದೆವ್ವ ಬಿಡುವ ವರೆಗೆ ಎಲ್ಲಿಗಾದರೂ ಹೋಗೋಣವೆಂದು. ಕೋಟು ಸಿಕ್ಕಿಸಿಕೊಂಡು 'ಆನಂದ ಭವನ"ಕ್ಕೆ ಹೊರಟಿ ಹೊಸ್ತಿಲನ್ನು ದಾಟಬೇಕೆನ್ನುವಷ್ಟರಲ್ಲಿ ಹಿಂದಿನಿಂದ ಗಂಭೀರ ಸ್ವರ ಕೇಳಿ ಬಂತು.

'ನನಗೂ ಕೇಳುವ ಹಕ್ಕಿದೆ. ಎಲ್ಲಿ ಹೋಗುತ್ತಿರುವಿರಿ?" ಹಕ್ಕನ್ನು ನೆಗಳೇ ಕೇಳಿಕೊಳ್ಳುತ್ತಾ ಬಂದಿತ್ತು ಉಷೆಯ ದೈವ!

ನಾನು ನಿಂತು ಹಿಂತಿರುಗಿ ವಿನೀತನಾಗಿ ಹೇಳಿದೆ. "ದೆವ್ವನೇ ಕಾಫಿ ಕುಡಿಯಲು ಹೋಗುತ್ತಿರುವೆನು"

ಉಷಾ ಟಪ್ಪನೆ ಎದ್ದು ಸೆರಗನ್ನು ರಾಪ್ಪ ಧ್ವಜದಂತೆ ತಾರಿಸುತ್ತಾ, ಸರ್ರೆಂದು ಒಳಹೊಕ್ಕು ಅರೆನಿಮಿಷದಲ್ಲಿ ಸುರ್ರೆಂದು ಶೃಂಗಾರಪುರಿತಳಾಗಿ ಹೊರಬಂದಳು. ಅಯ್ಯೋ, ಇದೆಲ್ಲ ಹೋಟ್ಲಿಗೂ ಬೆನ್ನು ಹಿಡಿಯುತ್ತದೋ" ಎಂದು ಬೇಗ ಬೇಗ ಹೆಜ್ಜೆ ಹಾಕಿ ಹತ್ತಿರಿನಗಡಿನ ಒಳಿಬಂದೆ. ಹಿಂತಿರುಗಿ ನೋಡಿದಾಗ ಉಷಾ ಬಾಗಿಲಿಗೆ ಬೀಗ ಹಾಕಿ ಇನ್ನೊಂದು ಕಡೆಗೆ ತಿರುಗಿ ಕೊರಟೆ. ಹೋಗುವುದು ಕಂಡಿತು. ಸದ್ಯ ನನ್ನೊಂದಿಗೆ ಬರಲಿಲ್ಲವಲ್ಲಾ ಎಂದು ನಿಟ್ಟುಸಿರುಬಿಟ್ಟೆ. ಮರುಕ್ಷಣವೇ ಛ! ಹಾದಿರಗಿತ್ತಿ ನನ್ನ ಕಣ್ಣುದುರೇ ಎಲ್ಲಿಗೆ ಹೋರಟ. ಹೇ?" ಎಂದು ತಮಿ ಆನಂದ ಭವನದ ಬಿಸಿ ಕಾಫಿಗಾಗಿ ಮುನ್ನಡೆದೆ

ನಾನು ಆಂಜೆ ಆಫೀಸಿನಲ್ಲಿ ಕ್ಲಾರ್ಕ್ ಇಡೀ ದಿನ ದುಡಿದು ಸಾಕಾಗುತ್ತಿತ್ತು. ಉಷೆಯೂ S S L C. ವರೆಗೆ ಓದಿ ಒಂದು ವರ್ಷ ಕಾಲೇಜೂ ಹತ್ತಿದ ವಿದ್ಯಾವಂತೆ. ನಮ್ಮ ಮತ ಒಂದೇ ಆದರೂ ನಮ್ಮದು 'ಲವ ಮೇರೆಜ್' ಈ ಮುಂಬಯಿ ನಗರದಲ್ಲಿ ನಮ್ಮ ಹೊಸ ಪ್ರೇಮದ ಸಂಸಾರ ಆರಂಭವಾಗಿ ಐದಾರು ತಿಂಗಳುಗಳಾಗಿದ್ದುವು. ಇಂದು ಉಷಾ ಕಾಲಕ್ಕೆ ಸರಿಯಾಗಿದ್ದ ಉಷಾ ಇದೇ ದಿನ ಸಂಜೆ ಸಂಪೂರ್ಣ ಬದಲಾಗಿದ್ದಳು!

ನಾನು ಕಾಫಿಯನ್ನು ಹೀರಿ ಸ್ವಲ್ಪ ನಿಧಾನವಾಗಿಯೇ ಮನೆ ಸೇರಿದೆ. ಮನೆಗೆ ಮುಟ್ಟಿದಾಗ ಗಂಟೆ ಎಂಟು. ಮನೆಗೆ ಹಾಕಿದ ಬೀಗ ಹಾಕಿದಂತೆಯೇ ಇತ್ತು. ಇದೇನೋ ದೆರ್ದಿನ, ಪ್ರಳಯಕಾಲಕ್ಕೆ ತೋರುವ ಉತ್ಪಾತಗಳಂತೆ ಕೋರಿತು ನನಗೆ. ಅಷ್ಟು ಸೌಮ್ಯೆ, ಸುಶೀಲೆ, ಮುಗ್ಧೆ ಉಷಾ ಹೀಗಾಗಲು ಕಾರಣವೇನು? ನನ್ನೆ ಮನಸ್ಸು ಮಂಕಾಗಿ ಯೋಚನೆಸೆ ಸಿಟ್ಟು, ಉಪಾಯ ಯಾವುದೂ ಹೊಳೆಯಲಿಲ್ಲ. ಉಷಾ ಹೋದುದೆಲ್ಲಿ ಎಂದು ನನಗೆ ಮುಳ್ಳಿನಮೇಲೆ ನಿಂತಂತಾಗಿತ್ತು.

ನಾನು ಕಂಪೌಂಡಿನ ಗೋಡೆಯ ಹತ್ತಿರ ಬರುತ್ತಿದ್ದೆನಷ್ಟೇ. ಉಷಾ ಮನೆಗೆ ಬರುತ್ತಿರುವುದು ಕಂಡಿತು. ಮಸಕು ಮಸಕು ಕತ್ತಲೆ. ಅದರೂ ಆವಳೊಡನೆ ಮತ್ತಾರೋ ಇದ್ದಂತೆ ಕಂಡಿತು. "ಅಯ್ಯೋ ...." ನಾನು ನಡುಗಿಹೋದೆ. ಅದು.... ಅ...ದು ಹುಲಿಯಾಗಿರಲಿಲ್ಲ. ಕಮಲಾಬಾಯಿ ಮಹಿಳಾ ಸಂಘದ ಪ್ರಚಾರ ಕಾರ್ಯದರ್ಶಿ!

ನನಗೆ ಎಲ್ಲವೂ ಅರ್ಥವಾಯಿತು. ಈ ಮಹಿಳಾ ಸಂಘದ ಉದ್ಧೇರೆ ಮಹಿಳೆಯರ ಏಳಿಗೆ ಆದರೆ ಇದು ಮಾಡುತ್ತಿರುವುದೇನು? ಗಂಡನಾದ ನಾನು ಹೆಂಡತಿ! ಇಂದಿವರೆಲ್ಲಾ ಹಿಟ್ಲರುಗಳೇ ಸರಿ.

ನನ್ನ ನಡುಕವನ್ನು ಪ್ರಯತ್ನಪಟ್ಟು ನಿಲ್ಲಿಸಿದೆ. ನನ್ನ ರೊಚ್ಚು ಕೆದರಿತು. 'ನೋ ಡೋಣ' ಎಂದುಕೊಂಡು ಮೆಲ್ಲನೆ ಮನೆಯ ಹಿಂಭಾಗಕ್ಕೆ ಹೋದೆ. ಉಷೆಯ ಕೋಣೆಯಲ್ಲಿ ಮಾತುಕತೆ ಸಾಗುತಿತ್ತು. ಆಸ್ತಿಕನಿಗೆ ನಾಸ್ತಿಕ ಭೋದೆ ಮಾಡುವಂತೆ ಶುದ್ಧ ಪತಿವ್ರತೆ ಉಷೆಗೆ ಕಮಲಾಬಾಯಿ ಮತಿವ್ಯತಕೊಡುತ್ತಿದ್ದ(ಳು!)ರು!

ಉಷಾ 'ಹೂಂ'ಗುಟ್ಟುತ್ತಿದ್ದಳು. ಕಮಲಾಬಾಯಿ ಹೇಳುತ್ತಿದ್ದರುಃ "ನಾನು ಬೆಳಿಗ್ಗೆಯೇ ಹೇಳಿದ್ದೆನಲ್ಲಾ ಉಷಾದೇವಿ, ನಮ್ಮ ಉದ್ಧಾರವಾಗಬೇಕೋ ಈ ನಿಯಮಗಳನ್ನು ಪಾಲಿಸಬೇಕು. ನೋಡಿ, ಅವರಷ್ಟೇ ಹಕ್ಕು ನಮಗೂ ಇದೆ. ಈ ಗಂಡ(ಂದಿರು)ಸರು ನಮ್ಮನ್ನು ಏಕ ವಚನದಿಂದ ಕರೆಯಕೂಡದು. ಹಾಗೆ ಕರೆದರೆ ನಾವೂ ಕರೆಯಬೇಕು ಸಂಸಾರದಲ್ಲಿ, ಮನೆಯಲ್ಲಿ ದಿನದಿನ ಮಾಡಬೇಕಾದ ಕೆಲಸಗಳನ್ನೆಲ್ಲಾ ಅವರೇ ಮಾಡಿಕೊಳ್ಳಬೇಕು. ಊಟ, ಅಡಿಗೆ, ಬಟ್ಟೆ ಬಗೆಯುವುದು ಎಲ್ಲಾ...."

ಉಷಾ ಶಂಕೆಯಿಂದ ಮಧ್ಯದಲ್ಲೇ ದನಿಯೆತ್ತಿದಳುಃ "ಆದರೆ ನಮ್ಮಲ್ಲಿ ಹಣ?

"ಓಹೋ, ಅದಕ್ಕೇಕೆ ಹೆದರುತ್ತೀರಿ? ಜಾಗ್ರತೆಯಾಗಿ, ಮೃದುವಾಗಿ ಗಂಡಂದಿರ ಕೈಯಿಂದ ಜಾರಿಸಬೇಕು. ಉಷಾದೇವಿ, ನಮ್ಮ ಮಹಿಳಾಸಂಘದಲ್ಲಿ ಆರ್ಥಿಕ ಸ್ಥಿತಿ ಕೊಂಚ ಉತ್ತಮಗೊಳ್ಳಬೇಕು."

ಅಬ್ಬಾ! ತನ್ನ ಮನೆಯನ್ನು ತಾನೇ ಸುಡುವಂತೆ ಮಾಡುವ ಪ್ರಚಾರವೇ. ನನಗೆ ಸಿಟ್ಟು ಬರುತ್ತಿತ್ತು. ನೆನುವೂ ಬರುತ್ತಿತ್ತು. ಒಂದೂಂದು ಮಾತುಗಳು ಶೂಲಗಳಾಗಿ ಬಂದು ನನ್ನೆದೆಗೆ ನಾಟುತಿದ್ದುವು.

ಹಾವಾಡಿಗನೆದುರಿನ ಹಾವಿನಂತೆ ಉಷಾ ಮಾತಿಗೆ ತಲೆದೂಗುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲಿ, ಒಂದು....ಎರಡು.... ಇತ್ಯಾದಿ ಎಣಿಕೆಯುವುದು ಕೇಳಿಸಿತು. ಉಷಾ ಮಹಿಳಾ ಸಂಘದ ಸದಸ್ಯೆಯಾದಳು; ಮಾತ್ರವಲ್ಲ; ಆಜೀವ ಮೋಷಕ ಸದಸ್ಯೆಯಾದಳು!

"ಅಯ್ಯೋ ಹುಚ್ಚಿ! ಮನೆ ಹಾಳುಗೈದೆ!" ಎಂದು ನನ್ನ ಮುಷ್ಟಿ ಬಿಗಿಯಿತು. ಹೃದಯ ಕರಗಿತು.

"ನೋಡಿ, ಗಂಡನನ್ನು ದಾರಿಗೆ ತರುವ ಶ್ರಮ ಗೊತ್ತಾಯಿತು ತಾನೆ? ಇವರ ಸರ್ವಾಧಿಕಾರ ಕೊನೆಗಾಣಬೇಕು. ನಿಮ್ಮನ್ನು "ಉಷಾ" ಅಂತ ಕರೆದರೆ ನೀವೂ "ಮನೋಹರ" ಅಂತಲೇ ಕರೆಯಿರಿ. ಪ್ರತಿಯೊಂದರಲ್ಲೂ ಹೀಗೆಯೇ ದಾಸ್ಯತನ, ಪರಾನಲಂಬನ ಸಲ್ಲದು. ಏನು, ನಾನಿನ್ನು ಬರುತ್ತೇನೆ. ಅಂದ ಹಾಗೆ ನಾಳೆ ಸಭೆಗೆ ಬಂದು ಬಿಡಿ. ಗುಡ್ ನೈಟ್!"

ಅಬ್ಬಾ! ದೆವ್ವ ಜೋರಿಟು ಹೋಯಿತು. ನಾನು ಸ್ವಲ್ಪ ತಡೆದು ಒಳಹೊಕ್ಕು ಕೈಕಾಲು ತೊಳೆದೆ. ಎದೆಯಲ್ಲಿ ಸಿಟ್ಟು ಕುದಿಯುತಿತ್ತು. ಮಾತನಾಡಿಸಿದರೆ ಮತ್ತೂ ಜಟಿಲ! ಊಟಕ್ಕಾ ಸೊನ್ನೆ! ಅಂತೂ ಮುಸುಕು ಹಾಕಿ ಮಲಗಿಬಿಟ್ಟೆ. "ದೇವಾ, ಉಷಾ ಸಂಪೂರ್ಣ ಕಲ್ಲಾಗಿದ್ದಾಳೆ. ಅವಳನ್ನು ಮೊದಲಿನ ಉಷೆಯನ್ನಾಗಿ ಮಾಡು. ಅವಳಿಗೆ ಸದ್ಬುದ್ಧಿ ಕೊಡು. ಅವಳಿಗೆ ಕರುಣೆ ಬರಲಿ. ಅವಳು ಮಹಿಳಾ ಸಮಾಜಕ್ಕೆ ಸೇವವಿದ್ದರೆ ಸೇರಲಿ ಆದರೆ ಈ ದುರ್ಬುದ್ಧಿ ಬೇಡ. ಮಹಿಳೆಯರು ನ್ಯಾಯವಾದ ಪ್ರಾಧಿಕಾರಿಯನ್ನು ಅರಿಯುವಂತಾಗಲಿ. ನಾಳೆ ಉಷಾಕಾಲಕ್ಕೆ ನನ್ನ ಉಷೆ ಮೊದಲಿನ ಉಷೆಯಾಗಿಲಿ" ಎಂದು ಪ್ರಾರ್ಥಿಸಿ ನಿದ್ದೆ ಹೋದೆ.

ನಾನು ಎದ್ದಾಗ ಉಷೆಯಿನ್ನೂ ಎದ್ದಿರಲಿಲ್ಲ. ನನ್ನ ಗಂಡುಸ್ತನದ ಪತನ ಸಮೀಪಿಸಿತೆಂದುಕೊಂಡು ಬಚ್ಚಲು ಕೋಣೆಯೊಳ ಹೊಕ್ಕೆ. ದೇವರ ದಯೆಯಿಂದ ಉಷೆಯ ಬುದ್ಧಿ ಬದಲಾಗುವ ಮೊದಲೇ ತುಂಬಿಸಿಟ್ಟ ನೀರಿತ್ತು. 'ಬದುಕಿದೆ!" ಎಂದು ಸ್ನಾನಕ್ಕೆಳಿದೆ. ಎಲ್ಲಿಯಾವದೊ ಸ್ನಾನದ ಮಧ್ಯದಲ್ಲೋ ಎಚ್ಚರವಾದರೆ ಎಲ್ಲಿ ಸ್ವ-ಅಧಿಕಾರ ಚಲಾಯಿಸಿ ಹಂಡೆಯ ಮೇಲೆ ತನ್ನ ಹಕ್ಕನ್ನು ಸ್ಥಾಪಿಸುವಳೋ ಎಂದು ಬೇಗಬೇಗ ತಣ್ಣೀರನ್ನೇ ಹೊಯ್ದುಕೊಂಡು ಸ್ನಾನ ಮುಗಿಸಿದೆ.

ಏನೂ ಶುಭ ಸೂಚನೆ ಕಂಡು ಬರಲಿಲ್ಲ. ಕಾಫಿಗೆ ಸೆಣ್ಣೆ. ಉಷೆಗೆ ಇನ್ನೂ ಎಚ್ಚರವಾಗಿರಲಿಲ್ಲಿ. ಎಲ್ಲಾದರೂ ಕುಳಿತು ಹೊತ್ತು, ಕಳೆದು ಆಫೀಸಿಗೆ ಮುಟ್ಟಿ ಬಹುದೆಂದುಕೊಂಡು ಉಡುಪು ಧರಿಸಿ ಹೊರಟುಬಿಟ್ಟೆ.

"ಇಡೀ ದಿನ ದುಡಿದು ಬಾಳನ್ನು ಸಾಗಿಸಬೇಕು ನಾನು! ಹಣ ಸಂಪಾದಿಸಬೇಕು ನಾನು! ಇವರ ಸೇವೆ, ಕುಸ್ತಿ, ಸ್ನೋ ವಾಡರಿಗಳಿಗೂ ಹೊತ್ತು ಹೊತ್ತಿಗೆ ಹೊಟ್ಟೆಗೆ ಹಾಕಲು ಹಣ ತರಬೇಕು ನಾನು! ಆ ಮೇಲೆ ಇವರ ಹಕ್ಕಂತೆ! ಅಂತಾ

೧೧ನೇ ಪುಟ ನೋಡಿರಿ)

ದಿ ಕರ್ನಾಟಿಕ ಬ್ಯಾಂಕ್ ಲಿಮಿಟೆಡ್
(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದೆ; ಮೆಂಬರರಿ ಹೊಣೆ ಮಿತಿಕರಿಸಲ್ಪಟ್ಟಿದೆ)
ಹೆಡ್ ಆಫೀಸು: ಮಂಗಳೂರು, ದ. ಭಾರತ.
ಕೆಳಗಿನ ದರಗಳ ಬಡ್ಡಿಯಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು.
1ರಿಂದ 6 ತಿಂಗಳುಗಳ ವ್ಯಾದೆಗೆ . 4½%
6ರಿಂದ 18 ತಿಂಗಳುಗಳ ವ್ಯಾದೆಗೆ . 4½%
21 ತಿಂಗಳುಗಳ ವ್ಯಾದೆಗೆ .. 4½%
ದೊಡ್ಡ ಪ್ರಮಾಣದ ರೇವಣಾತಿಗಳಿಗೆ ಸ್ಪೆಶಲ್ ದರದ ಬಡ್ಡಿ ಕೊಡಲಾಗುವುದು
ಹೆಚ್ಚಿನ ಮಾಹಿತಿಗೆ ಸಮೀಪದ ಯಾವುದಾದರೊಂದು ನಮ್ಮ ಶಾಖೆಯೊಡನೆ ವಿಚಾರಿಸಿರಿ.
THE KARNATAKA BANK LIMITED

ಆರೋಗ್ಯ ಕ್ಷೇತ್ರದ ದೊಡ್ಡ ಮೈಲುಗಲ್ಲು—

ಮಲೇರಿಯಾ ಮಹಾಮಾರಿಯ ಹಿನ್ನಡೆ.

ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮವನ್ನು ಆರಂಭಿಸಿ ನಾಲ್ಕು ವರ್ಷಗಳಾಯಿತು; ಈ ಅಲ್ಪ ಅವಧಿಯಲ್ಲಿಯೇ, ಭಾರತದಲ್ಲಿ ಮಲೇರಿಯಾ ಹಾವಳಿ ಕಡಿಮೆಯಾಗಿದೆ, ಮಲೇರಿಯಾ ರೋಗಕ್ಕೆ ತುತ್ತಾಗುತ್ತಿದ್ದವರ ಸಂಖ್ಯೆ ೭೫೦ ಲಕ್ಷದಿಂದ ೨೦೦ ಲಕ್ಷಕ್ಕೆ ಇಳಿದಿದೆ. ಮಲೇರಿಯಾ ರೋಗದ ವಿರುದ್ಧ ಹೋರಾಟವನ್ನು ಭಾರತ ಸರಕಾರದ ಆರೋಗ್ಯ ಮಂತ್ರಿ ಶಾಖೆಯವರು, ಮಲೇರಿಯಾ ಸಂಸ್ಥೆಯ ಮೂಲಕ ನಡೆಸುತ್ತಿರುವರು. ಅಮೆರಿಕದ ತಾಂತ್ರಿಕ ಸಹಕಾರ ನಿಯೋಗ ಹಾಗೂ ರಾಜ್ಯ ಸರ್ಕಾರಗಳ ಸಹಕಾರವೂ ಸಹ ಇದರಲ್ಲಿರುವುದು.

ಮಲೇರಿಯಾ ರೋಗ ನಿರೋಧವು ಭಾರತದ ಕ್ಲಿಷ್ಟವಾದ ಆರೋಗ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ೧೯೫೨ರಲ್ಲಿ, ಒಟ್ಟು ಜನಸಂಖ್ಯೆಯಲ್ಲಿ ಬಹುಮಾರು ೨೦ ಕೋಟಿ ಜನರು ಮಲೇರಿಯಾ ರೋಗದ ಹರಡುವಿಕೆಯ ವ್ಯಾಪ್ತಿಗೊಳಗಾಗಿದ್ದರು. ಮಲೇರಿಯಾ ರೋಗದಿಂದ ವರ್ಷಕ್ಕೆ ಸರಾಸರಿಯಾಗಿ ೮ ಲಕ್ಷ ಜನರು ಮೃತರಾಗುತ್ತಿದ್ದರು. ಅದಕ್ಕಿಂತಲೂ ಹೆಚ್ಚು ಸಂಖ್ಯೆಯ ಜನರು, ಈ ರೋಗದ ಫಲವಾಗಿ ಅಶಕ್ತರೂ, ಆಸ್ವಸ್ಥರೂ ಆಗುತ್ತಿದ್ದರು. ಮಲೇರಿಯಾ ರೋಗವು ಹರಡುವಂತಹ ಕ್ಷೇತ್ರಗಳು ಭಾರತದ ನಾನಾ ಭಾಗಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹಂಚಿಹೋಗಿರುವುದರಿಂದ, ಮಲೇರಿಯಾ ರೋಗ ವಿರುದ್ಧ ಹೋರಾಟವನ್ನು ಪರಸ್ಪರ ಅತಿ ದೂರವಿರುವ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾಯಿತು.

ಮಲೇರಿಯಾ ರೋಗ ನಿರೋಧ ಕಾರ್ಯವು ಪರಿಣಾಮಕಾರಿಯಾದ, ಉತ್ತಮವಾದ ಫಲಿತಾಂಶಗಳನ್ನು ನೀಡಿದೆ. ೧೯೫೨ರ ಮಾರ್ಚ್ ತಿಂಗಳ ಕೊನೆಯ ವೇಳೆಗೆ ಸುಮಾರು ೧೭೪.೬ ಲಕ್ಷ ಜನರನ್ನು ಮಲೇರಿಯಾ ರೋಗದ ಹಿಡಿತದಿಂದ ಬಿಡಿಸಲಾಯಿತು. ರಾಷ್ಟ್ರೀಯ ಮಲೇರಿಯಾ ರೋಗ ನಿರೋಧ ಕ್ಷೇತ್ರಗಳಲ್ಲಿ ಮನೆಮನೆಗಳಲ್ಲಿ ಕ್ರಿಮಿನಾಶಕಗಳನ್ನು ಚುಮುಕಿಸುವುದರಿಂದ ಈ ಫಲ ದೊರೆಯಿತು. ೧೯೫೨-೫೩ ಮತ್ತು ೫೩-೫೪ರ ಅವಧಿಯಲ್ಲಿ ೧೯೪ ಲಕ್ಷ ಮಂದಿಯೂ, ೫೪-೫೫ ಮತ್ತು ೫೫-೫೬ರ ಅವಧಿಯಲ್ಲಿ ಮತ್ತೆ ೨೧೦ ಲಕ್ಷ ಮಂದಿಯೂ ಮಲೇರಿಯಾ ರೋಗದ ಹಿಡಿತದಿಂದ ಮುಕ್ತರಾದರೆಂದು ಅಂದಾಜು ಮಾಡಲಾಗಿದೆ. ಭಾರತದ ಮಲೇರಿಯಾ ಸಂಸ್ಥೆಯ ನೇತೃತ್ವದಲ್ಲಿ ಮಲೇರಿಯಾ ನಿರೋಧ ಕಾರ್ಯಾಚರಣೆಗಳು ನಡೆಯುತ್ತಿರುವ ಸೆಹಲೆಯಲ್ಲಿ ಈ ರೋಗದ ಹಾವಳಿ ೧೯೫೨ರಲ್ಲಿ ನೂರಕ್ಕೆ ೧೨.೫೫ ಇದ್ದುದು, ೫೫ರಲ್ಲಿ ನೂರಕ್ಕೆ ೧.೧೫ಕ್ಕೆ ಇಳಿದಿದೆ.

೧೯೫೨ರಲ್ಲಿ ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮದ ಬಗೆಗೆ ಪರಿಶೀಲನೆ ನಡೆಸಿದ್ದ ಮಲೇರಿಯಾ ರೋಗ ತಜ್ಞರು ಈ ವಿಧಾನವು ಅತ್ಯಂತ ಯಶಸ್ವಿಯಾದುದೆಂದು ಅಭಿಪ್ರಾಯಪಟ್ಟರು. ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ನಿರೋಧ ಕಾರ್ಯವು ೧೯೫೨ರಲ್ಲಿ ಆರಂಭವಾಯಿತು. ಆಲ್ಲಿಂದೀಚೆಗೆ ೧೦ ವರ್ಷಗಳಲ್ಲಿ, ಆಲ್ಲಿ ಗುಲ್ಮರೋಗದಿಂದ ಪೀಡಿತರಾಗಿದ್ದವರ ಸಂಖ್ಯೆ ಪ್ರತಿ ಶತ ೭೨ ಪ್ರತಿಶತ ಶೂನ್ಯಕ್ಕೆ ಇಳಿದಿದೆ. ಇದೇ ಪ್ರಕಾರ, ಮಲಬಾರ್ ಜಿಲ್ಲೆಯ ವೈನಾಡು ಮತ್ತು ನಿಲಾಂಬರ್ ತಾಲ್ಲೂಕುಗಳಲ್ಲಿಯೂ ಸಹ ಈ ಕಾರ್ಯಕ್ರಮವು ಆರಂಭವಾಗಿತ್ತು. ವೈನಾಡಿನಲ್ಲಿ ಗುಲ್ಮರೋಗ ಪೀಡಿತರ ಸಂಖ್ಯೆ ೧೯೫೨ರಲ್ಲಿ ಪ್ರತಿ ಶತ ೩೬ ಇದ್ದುದು ೧೯೫೫ರಲ್ಲಿ ಪ್ರತಿ ಶತಕ್ಕೆ ೦.೬ಕ್ಕೆ ಇಳಿಯಿತು. ನಿಲಾಂಬರ್‌ನಲ್ಲಿ ಅದು ಕ್ರಮವಾಗಿ ಪ್ರತಿ ಶತ ೨೫.೩ರಿಂದ ಪ್ರತಿ ಶತ ೨.೫ಕ್ಕೆ ಇಳಿಯಿತು.

ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯವನ್ನು ೧೯೫೨ರಲ್ಲಿ ಭಾರತದ ಮಲೇರಿಯಾ ಸಂಸ್ಥೆಯವರು, ಅಮೆರಿಕದ ತಾಂತ್ರಿಕ ಸಹಕಾರ ನಿಯೋಗ ಹಾಗೂ ರಾಜ್ಯಗಳ ಮಲೇರಿಯಾ ನಿರೋಧ ವಿಭಾಗಗಳ ಸಹಕಾರದೊಂದಿಗೆ ಪ್ರಥಮತಃ ರೂಪಿಸಿತು. ಭಾರತ ಸರ್ಕಾರದ ಆರೋಗ್ಯ ಮಂತ್ರಿ ಶಾಖೆಯವರೂ ಹಾಗೂ ಯೋಜನಾ ಆಯೋಗದವರೂ, ಈ ಕಾರ್ಯವಿಧಾನವನ್ನು ಅಂಗೀಕರಿಸಿರುವರು. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆಯನ್ನು ಮಲೇರಿಯಾ ಸಂಸ್ಥೆಯ ಡೈರೆಕ್ಟರವರ ವಶಕ್ಕೆ ಕೊಡಲಾಗಿದೆ. ಈ ಕಾರ್ಯವು ಹಲವು ವಿಭಾಗಗಳಲ್ಲಿ ನಡೆಯುವುದು ಪ್ರತಿಯೊಂದು ವಿಭಾಗವೂ ಸುಮಾರು ೧೦ ಲಕ್ಷ ಜನರಿಗೆ ಈ ರೋಗದ ವಿರುದ್ಧ ರಕ್ಷಣೆಯನ್ನೀಯುವುದು. ಕ್ರಿಮಿನಾಶಕಗಳನ್ನು ಚುಮುಕಿಸುವುದು ಮಲೇರಿಯಾ ನಿರೋಧ ಔಷಧಿಗಳನ್ನು ಉಚಿತವಾಗಿ ಹಂಚುವುದು, ಮಲೇರಿಯಾ ರೋಗಕ್ಕೆ ಈಡಾಗುವರಿಗೆ ಚಿಕಿತ್ಸೆ ನಡೆಸುವುದು ಮುಂತಾದ ವಿಷಯವು ಈ ವಿಭಾಗದ ಸಿಬ್ಬಂದಿಯಿಂದ ಈ ಕಾರ್ಯಕ್ರಮದ ಅಂಗವಾಗಿ ನಡೆಯುತ್ತದೆ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಇಂತಹ ೧೬೨ ವಿಭಾಗಗಳನ್ನು ವಿವಿಧ ರಾಜ್ಯಗಳಿಗೆ ಹಂಚಿಲಾಯಿತು. ಅಂದೀಚೆಗೆ ಮತ್ತೆ ೩೮ ವಿಭಾಗಗಳನ್ನು ಹೆಚ್ಚಿಸಲಾಗಿದೆ. ಅವುಗಳ ಸಂಖ್ಯೆಯನ್ನು ೨೦೦ಕ್ಕೆ ಏರಿಸಲು ಉದ್ದೇಶಿಸಿದೆ. ಮಲೇರಿಯಾ ನಿರೋಧ ಮಂತ್ರಿ ಶಾಖೆಯವರೂ ಹಾಗೂ ಆಕ್ರಮಣವಿರುವ ಇಡೀ ಕ್ಷೇತ್ರವನ್ನು ಕಾರ್ಯಕ್ರಮದ ವ್ಯಾಪ್ತಿಗೆ ತರಲಾಗುವುದು. ಅಮೆರಿಕದ ತಾಂತ್ರಿಕ ಸಹಕಾರ ನಿಯೋಗದ ಸಹಾಯದಿಂದ ಭಾರತ ಸರ್ಕಾರದವರು ಕೀಟನಾಶಕಗಳನ್ನು ಪಡೆಯುವರು. ತರಬೇತಿ ಪಡೆದ ಮಲೇರಿಯಾ ಅಧಿಕಾರಿಗಳು ಪ್ರತಿಯೊಂದು ವಿಭಾಗದಲ್ಲಿಯೂ ಇರುವರು. ಅವರ ಜೊತೆಯಲ್ಲಿ ಕೊನೆಯ ಪಕ್ಷ ೫ ಮಂದಿ ಇನ್ಸ್‌ಪೆಕ್ಟರುಗಳು, ೧೫೦ ಮಂದಿ ಕೆಲಸಗಾರರೂ ಇರುವರು. ಪ್ರತಿಯೊಂದು ವಿಭಾಗಕ್ಕೂ ಮೊದಲ ವರ್ಷ ೪,೨೫,೦೦೦ ರೂಪಾಯಿಗಳೂ, ಅನಂತರದ ವರ್ಷಗಳಲ್ಲಿ ೩.೫೫ ಲಕ್ಷ ರೂಪಾಯಿಗಳ ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ.

ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೧.೫೭ ಕೋಟಿ ರೂಪಾಯಿಗಳನ್ನು ಈ ಕಾರ್ಯಕ್ರಮಕ್ಕಾಗಿ ಖರ್ಚು ಮಾಡಲಾಗಿದೆ. ಆದರಲ್ಲಿ ೭.೫೯ ಕೋಟಿ ರೂಪಾಯಿಗಳಷ್ಟು ಅಮೆರಿಕದ ತಾಂತ್ರಿಕ ಸಹಕಾರ ನಿಯೋಗದವರಿಂದ ಟ್ರಕ್‌ಗಳು, ಜೀಪುಗಳು ಹಾಗೂ ಕ್ರಿಮಿನಾಶಕಗಳ ರೂಪದಲ್ಲಿ ದೊರೆತಿದೆ. ಉಳಿದ ೩.೯೮ ಕೋಟಿ ರಾಷ್ಟ್ರೀಯ ಮಕ್ಕಳ ನಿಧಿಯಿಂದ

(ಉಳಿದ ಪುಟ ನೋಡಿರಿ)

ಕ್ಷಯರೋಗ ಪೀಡಿತರಾಗಿ ಗುಣಹೊಂದಿದವರನ್ನು ಅವರ ಮುಂಚಿನ ಸ್ಥಾನಮಾನಗಳಿಗೆ ತಿರುಗಿ ತರುವ ವ್ಯವಸ್ಥೆ ಮಾಡದಿದ್ದರೆ ಕ್ಷಯರೋಗ ಚಿಕಿತ್ಸೆಯು ಪೂರ್ಣವಾಗಲಾರದು. ಕ್ಷಯರೋಗದಿಂದ ಗುಣಹೊಂದಿದವರಿಗೆ ಜೀವನ ಸಾಗಿಸುವ ವಿಧಾನಗಳ ಕೊರತೆಯುಂಟಾದರೆ, ಅವರಿಗೆ ಕ್ಷಯರೋಗ ಪುನರಾವರ್ತಿತಗಲುವುದು. ಆದುದರಿಂದ ರೋಗಪೀಡನೆಯಿಂದ ಗುಣಮುಖರಾದವರನ್ನು ಅವರವರ ಹಿಂದಿನ ಸ್ಥಾನಮಾನಗಳಿಗೆ ಮರಳಿ ತರುವ ಕಾರ್ಯವು ಸರಕಾರೇತರ ಸಂಸ್ಥೆಗಳ ಮೂಲಕ ಯೋಗ್ಯ ರೀತಿಯಲ್ಲಿ ಆಗಲು ಸಾಧ್ಯವಿದೆ. ಆದರೆ ಈ ಸಂಸ್ಥೆಗಳು ಕಾರ್ಯವೆಸಗಲು ಹಣ ಬೇಕು. ಟಿ. ಬಿ. ಮೊಹರುಗಳನ್ನು ಅಧಿಕ ಸಂಖ್ಯೆಯಲ್ಲಿ ಕೊಂಡುಕೊಂಡು ಉಪಯೋಗಿಸುವುದರಿಂದ ನೀವು ಅಂತಹ ಸಂಸ್ಥೆಗಳಿಗೆ ಸಹಾಯ ನೀಡಿದಂತಾಗುವುದು.

ಅಧಿಕ ಸಂಖ್ಯೆಯಲ್ಲಿ ಟಿ. ಬಿ. ಮೊಹರುಗಳನ್ನು
ಕೊಂಡುಕೊಳ್ಳಿರಿ
ಮತ್ತು
ಟಿ. ಬಿ. ಸಂಘ ಸಂಸ್ಥೆಗಳಿಗೆ ಸಹಾಯ ನೀಡಿರಿ.

ಮೊಹರುಗಳು ದೊರೆಯುವ ಸ್ಥಳಗಳು:—

ಗೌರವ ಕಾರ್ಯದರ್ಶಿ, ಮೊಹರು ಮಾರಾಟ ಸಮಿತಿ, ಗೋಪಾಲಕೃಷ್ಣ ದೇವ ಸ್ಥಾನದ ರಸ್ತೆ, ಮಂಗಳೂರು

ಜಿಲ್ಲಾ ಮೆಡಿಕಲ್ ಆಫೀಸರ್,
ಮಡಿಕೇರಿ, ಕೊಡಗು.

ಗೌರವ ಕಾರ್ಯದರ್ಶಿ, ಮೈಸೂರು ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ಸ್ಟೇಟಿನ ಇತರ ಏಜನ್ಸಿಗಳು.

ಏಂಟಿನೆ ಕ್ಷಯರೋಗ ಮೊಹರು
ಮಾರಾಟ ಚಳವಳಿ

ಸ್ಥಳ ದಾನ ಮಾಡಿದವರು:
ಮೆಘಟ್‌ಲಾಲ್ ಗಂಗಾಲ್‌ಭಾಯಿ ಮತ್ತು ಕಂಪೆನಿ,
ಪ್ರೈವೇಟ್ ಲಿ., ಬೊಂಬಾಯಿ.

ವಿಭಿನ್ನ ಸಂಸ್ಕೃತಿಯ ಕೇಂದ್ರ–

ವಿಯೆತನಾಮ ಪ್ರಜಾರಾಜ್ಯ

ಶ್ರೀ. ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ

ಹಿಂದೇಶಿಯಾ, ಹಿಂದೀಚೀನಾ, ಮಲಯಾ ಮತ್ತು ಸಯಾಮುಗಳು ಅತ್ಯಂತ ಪ್ರಾಚೀನ ಕಾಲದಲ್ಲಿ ಭಾರತವರ್ಷದ ಸಾಂಸ್ಕೃತಿಕ ಚೇತನದ ಕಲಾಕೇಂದ್ರವಾಗಿದ್ದು ಬಹಳ ಉಜ್ವಲ ಮತ್ತು ಪ್ರಭಾವಪೂರ್ಣ ರಾಷ್ಟ್ರಗಳಾಗಿದ್ದುವು. ವಾಸ್ತವವಾಗಿ ಇಂದಿನ ವಿಯೆಟ್‌ನಾಮ್ ಪ್ರಜಾತಂತ್ರವು ಪ್ರಾಚೀನ ಕಾಲದ ಚಂಪಾ ಮತ್ತು ಕಾಂಬೋಡಿಯಗಳಾಗಿವೆ.

ಭಾರತೀಯ ಧಾರ್ಮಿಕ-ಆಧ್ಯಾತ್ಮಿಕ ಚೇತನದ ಕ್ರೀಡಾಸ್ಥಳವು ಸಮುದ್ರ ಯಾನವೇ ಆಗಿತ್ತು. ಆ ಭೂಗಳಲ್ಲಿ ಭಾರತೀಯ ಸಂಸ್ಕೃತಿಯ ಆಳವು ಇಂದಿಗೂ ಕಂಡುಬರುತ್ತದೆ. ನಿಜವಾಗಿಯೂ ಹಿಂದೂ ಧರ್ಮಾವಲಂಬಿ ಪ್ರವಕ್ತೃಗಳು ಯಾವಾಗಲಾದರೂ ಧರ್ಮ ಪ್ರಚಾರದ ಕಾರ್ಯವನ್ನು ಮಾಡಲಿಲ್ಲ. ಆದರೆ ಧರ್ಮದ ಸಾಂಸ್ಕೃತಿಕ ಚೇತನವು ತನ್ನ ಆಧ್ಯಾತ್ಮಿಕ ವಿಕಾಸ ಪರಂಪರೆಯಿಂದ ಪ್ರಭಾವಿತ ಜನಾಂಗಗಳು ಲ್ಲೇಖಗಳು ದೊರೆಯುತ್ತವೆ. ಹೋಗುವಂತೆ ಜಾಗ್ರತವೂ ಸ್ಪೃಹಣೀಯವೂ ಆಗಿತ್ತು. ಭಾರತದ ಸಾಂಸ್ಕೃತಿಕ-ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ವಿಶ್ವದ ಎಲ್ಲ ಭೂಗಳಿಗಿಂತ ಪ್ರಾಚೀನವಾದ ಮತ್ತು ಜಾಜ್ವಲ್ಯಮಾನವಾದ ಕ್ಷೇತ್ರವಾಗಿದೆ.

ವಿಯೆತನಾಮಿನಲ್ಲಿ ಎಲ್ಲ ಧರ್ಮಗಳ ಮತಾವಲಂಬಿಗಳಿದ್ದಾರೆ. ವರ್ತಮಾನ ಕಾಲದಲ್ಲಿ ಈ ಗಣರಾಜ್ಯದಲ್ಲಿ ಎರಡೂವರೆ ಕೋಟಿ ಜನರಿದ್ದಾರೆ ಮತ್ತು ಕೇವಲ ಎರಡು ಲಕ್ಷ ಕೆತೋಲಿಕ ಕ್ರೈಸ್ತರನ್ನು ಹೊರತುಪಡಿಸಿದವರು ಬೌದ್ಧಮಾರ್ಗಾವಲಂಬಿಗಳಾಗಿದ್ದಾರೆ. ಇವ್ಹೇ ಅಲ್ಲ, ಕ್ರಿಸ್ತಾಬ್ದ ಆರಂಭದಿಂದ ಹತ್ತನೆಯ ಶತಮಾನದ ವರೆಗೆ ಇಲ್ಲಿ ವೈಷ್ಣವ ಮತ್ತು ಬೌದ್ಧ ಧರ್ಮಾವಲಂಬಿಗಳೇ ಪ್ರಮುಖರಾಗಿದ್ದರು. ವಿಯೆತನಾಮಿನಲ್ಲಿ ವಿದ್ಯಾಲಯ ಮತ್ತು ಆಧ್ಯಾತ್ಮಿಕ ಧರ್ಮಸಾಮಾಜಿಕ ಸ್ಥಳಗಳು ಭಾರತೀಯ ವಾಸ್ತುಕಲಾತ್ಮಕ ರೀತಿಯಲ್ಲಿ ಕಟ್ಟಲ್ಪಟ್ಟಿವೆ. ಇದರಿಂದ ಪ್ರಾಚೀನ ಕಾಲದಲ್ಲಿ ಭಾರತ ಮತ್ತು ವಿಯೆತನಾಮ್ (ಹಿಂದೀ ಚೀನಾ) ಗಳ ಸಂಬಂಧವು ಬಹಳ ಸೌಹಾರ್ದಪೂರ್ಣ ಮತ್ತು ಆತ್ಮೀಯವಾಗಿತ್ತೆಂದು ತಿಳಿಯಬಹುದು.

ಕೋಚೀನ್ ಚೀನಾದಲ್ಲಿ ೧೯೩೦ ರಲ್ಲಿ ಕಾವೋದಾಯೀ ಎಂಬ ಹೊಸ ಸಂಪ್ರದಾಯವು ಹುಟ್ಟಿಕೊಂಡಿತು. ಅದರ ಸಂಸ್ಥಾಪಕ-ಪ್ರಚಾರಕನು ಫಾಂಕೋಂಗ್ ತಾವೋ ಆಗಿದ್ದಾನೆ. ಆವನನ್ನು ವಿಯೆತನಾಮಿನ ಆಧುನಿಕ ಪೋಪನೆಂದು ಕರೆಯುತ್ತಾರೆ. ಕಾವೋದಾಯೀ ಎಂದರೆ ವಿಯೆತನಾಮಿ ಭಾಷೆಯಲ್ಲಿ ಉನ್ನತರಿಗೆ ಹೆಸರು. ಆ ಸಮಯದಲ್ಲಿ ಒಬ್ಬ ಮಹಾತ್ಮನು ಒಂದು ಸ್ವರವನ್ನು ಕೇಳಿದನು. ಕೂಡಲೇ ಅವನ ಖ್ಯಾತಿಯು ಒಬ್ಬ ಪೋಪನ ರೂಪವನ್ನು ತಾಳಿತು. ಈ ಸಾಂಪ್ರದಾಯಿಗಳು ಭಗವಾನ್ ಬುದ್ಧ ಮತ್ತು ಕ್ರಿಸ್ತ ಇವರನ್ನಲ್ಲದೆ ವಿಕ್ಟರ್ ಹ್ಯೂಗೋ, ಸನ್‌ಯಾತ್‌ಸೆನ್ ಮತ್ತು ಸ್ಟಾಲಿನ್ ಇವರನ್ನೂ ಪೂಜಿಸುತ್ತಾರೆ. ಇವರು ಸಮಾಜಸಾಹಾರಿಗಳೂ ಅಲ್ಲ ಶಾಕಾಹಾರದಲ್ಲಿಯೇ ಜೀವನ ನಿರ್ವಹಿಸುವರು. ಶರಾಬು, ನಾಂಸ, ಮೀನುಗಳು ಈ ಸಾಂಪ್ರದಾಯಿಗಳಿಗೆ ವರ್ಜಿತವಾಗಿವೆ. ಕಾವೋದಾಯಿ ಸಾಂಪ್ರದಾಯವಲಂಬಿಗಳು ಸಂತ ಜೋನ್, ವಿಕ್ಟರ್, ಗೋ, ಹ್ಯೂ, ರಾಷ್ಟ್ರಪತಿ ಸನ್‌ಯಾತ್‌ಸೆನ್, ದಾರ್ಶನಿಕ ದೇಕಾರ್ತೇ ಜಾನ್ ಆಫ್ ಆರ್ಕ್ ಮತ್ತು ಅಮೆರಿಕೆಯ ಭೂತಪೂರ್ವ ರಾಷ್ಟ್ರಪತಿ ರೂಸ್ವೆಲ್ಟರಿಂದ ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ ಮತ್ತು ತಮ್ಮ ಆತ್ಮಗಳನ್ನು ಪಾವನನೊಳಸಲಾರೋಡನೆ ಮಾತುಕತೆ ನಡೆಸುತ್ತಾರೆ. ಪೋಪರಾದ ಫಾವರು ಈ ಸಾಂಪ್ರದಾಯಿಕ ದೇವಾಲಯಗಳ ಮೇಲೆ ನಿಯಂತ್ರಣವಿಟ್ಟುಕೊಂಡಿದ್ದಾರೆ. ಈ ಧರ್ಮವನ್ನೊಪ್ಪುವವರು ಪಾರ್ಥನೆ ಮಾಡುವುದರಲ್ಲಿಯೇ ತಮ್ಮ ಸಮಯವನ್ನು ವ್ಯಯಿಸುತ್ತಾರೆ. ತೆರೆದ ಪಾದ, ಶ್ವೇತ ವಸ್ತ್ರಗಳನ್ನು ಧರಿಸಿ ತಲೆಯಲ್ಲಿ ತೆರೆಯನ್ನು ಹಾಕಿಕೊಂಡು ಇವರು ತಿರುಗುತ್ತಾರೆ. ಕಾವೋದಾಯಿ ಸಾಂಪ್ರದಾಯದ ಅಧಿಷ್ಠಾತೆಯು ಸಾಮಾನ್ಯವಾಗಿ ವಿಕ್ಟರ್ ಹ್ಯೂಗೋವಿನ ಆತ್ಮದ ಸಾಕ್ಷಾತ್ಕಾರ ಮಾಡುತ್ತದೆ. ಹೀಗೆ ಮಾಡುವುದರಿಂದ ಅವರಿಗನುಸಾರವಾದ ಸಾಂಪ್ರದಾಯದಲ್ಲಿ ಪೂರ್ಣತೆಯು ಲಭಿಸುವುದು ಮತ್ತು ಅವನಂತೆಯೇ ಸಂಬಂಧವು ಸೌಹಾರ್ದಪೂರ್ಣವಾಗುತ್ತದೆ ಹೋಗುವುದು.

ವರ್ತಮಾನ ಕಾಲದ ವಿಯೆತನಾಮದ ಗಣರಾಜ್ಯವು ಮೊದಲಿನ ಮೂರು ರಾಜ್ಯಗಳ ಸಮಿಲನವಾಗಿದೆ ಅನ್ನಾನ, ತೋಕೀನ ಮತ್ತು ಕೋಚೀನಗಳೇ ಈ ಪ್ರತ್ಯೇಕ ಭಾಗಗಳು. ಇವುಗಳಲ್ಲಿ ಫ್ರೆಂಚರ ಅಧಿಕಾರವು ಕೋಚೀನದಲ್ಲಿ ೧೮೫೮ ರಿಂದ, ಅನ್ನಾಮದಲ್ಲಿ ೧೮೬೪ ರಿಂದ ಮತ್ತು ತೋಕೀನದಲ್ಲಿ ೧೮೮೭ರಿಂದ ಬಂದಿರುವುದು ಚೀನೀ ಭಾಷೆಯಲ್ಲಿ ಕೋಚೀನವೆಂದರೆ, ಸುದೂರ ದಕ್ಷಿಣ ಎಂದರ್ಥ. ಫ್ರೆಂಚರು ಈ ಕ್ಷೇತ್ರಗಳಲ್ಲಿ ಉಪನಿವೇಶ ಮಾಡಿಕೊಂಡರು; ಏಕೆಂದರೆ, ಈ ಭಾಗಗಳಲ್ಲಿ ಅಕ್ಕಿಯು ಅತ್ಯಧಿಕ ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ ಮತ್ತು ವ್ಯಾವಸಾಯಿಕ ದೃಷ್ಟಿಯಿಂದ ಅವರಿಗದು ಬಹಳ ಲಾಭದಾಯಕವೆನಿಸಿದೆ. ೧೮೪೯ರಲ್ಲಿ ಜಾಪನೀಯರು, ಇದರ ನೇಲೆ ದಾಳಿಮಾಡಿ, ಮುಲಯಾವ ಆಕ್ರಮಣಕಾಲದಲ್ಲಿ ತಮ್ಮ ಯುದ್ಧದ ತಂಗುದಾಣ ಸ್ಥಿಳವನ್ನಾಗಿ ಮಾಡಿಕೊಂಡರು. ೧೮೪೫ರಲ್ಲಿ ಸಾವಾಟ್ ಕಾವೋದಾಯಿಯೆಮ್ಮ ಪದಚ್ಯುತನನ್ನಾಗಿ ಮಾಡಿ ವಿಯೆತನಾನು ಗಣರಾಜ್ಯವನ್ನು ಉದ್ಘೋಷಿಸಲಾಯಿತು. ಜಾಪಾನೀ ವಿರೋಧಿಗಳಾದ ರಾಷ್ಟ್ರವಾದಿ, ಕ್ರಾಂತಿಕಾರಿ, ಸಾಮ್ಯವಾದಿಗಳ ಸಂಮಿಲಿತ ಸರಕಾರವು ರಚಿಸಲ್ಪಟ್ಟಿತು. ಇದರಲ್ಲಿ ಶ್ರೀ ಹೋಚೀ ಮಿನ್ಹ್‌ರು ಪ್ರಧಾನಮಂತ್ರಿಯಾಗಿದ್ದ ವಿಯೆತ ಮಿನ್ಹ್ ದಳವು ಪ್ರಮುಖವಾಗಿತ್ತು. ಫ್ರೆಂಚರು ಸೈಗಾಯಿಸಲು ಬಯಸಿದರೂ ಕೋಚೀನ್ ಚೀನದ ಸಂಮಿಲನವಾಗದಿದ್ದುದರಿಂದ ಬಿದ್ದುಹೋಯಿತು. ದಶಂಬರ ೧೯೪೬ರಲ್ಲಿ ವಿಯೆತ ಮಿನ್ಹ್‌ನು ವಿಶೇಷರೂಪದಿಂದ ಹನೋಯಿಯು ಮೇಲೆ ಆಕ್ರಮಣಮಾಡಿದನು ಇದು ಎಂಟು ವರ್ಷಗಳ ಕಾಲ ನಡೆಯಿತು. ಈ ಯುದ್ಧವು ಸಾಮಾನ್ಯತಃ ಗೆರಿಲ್ಲಾ ಪದ್ಧತಿಯಲ್ಲಿ ನಡೆಯುತಿತ್ತು. ಈ ಬಗ್ಗೆ ಒಬ್ಬ ಸ್ವಿಸ್ ಪತ್ರಿಕಾಗಾರನು, "ವಿಯೆತ ಮಿನ್ಹ್‌ನ ಸೈನಿಕರು ನೀರಿನ ಒಂದು ಗಜ ಅಡಿಯಲ್ಲಿ ಗಂಟೆಗಟ್ಟಲೆ ಇದ್ದು ಕೊಂಡೂ ಗದ್ದೆಯ ಪೊದರುಗಳೆಡೆಯಲ್ಲಿದ್ದು ಕೊಂಡೂ ಉಜ್ಜೀವಿಸುತ್ತಾರೆ. ಮತ್ತವರಿಗೆ ಪ್ರಾಣಿಗಳ ಕಾಟುಕಾಗಲೂ ನಾಟುವುದಿಲ್ಲ. ಅವರು ಫ್ರೆಂಚರ ಸೈನ್ಯವನ್ನು ವಿಶಾಲ ಬಯಲಿನಲ್ಲಿ ಎದುರಿಸುವಾಗ ಸಂಖ್ಯೆಯಲ್ಲಿ ಮೂರುಮಡಿನಾಲ್ಮಡಿಯಾಗುತ್ತಾರೆ ಮತ್ತು ಗೆರಿಲ್ಲಾ ಯುದ್ಧವನ್ನೇ ಮಾಡುತ್ತಾರೆ" ಎನ್ನುತ್ತಾನೆ. ಆನೆಗಳ ಸಂಖ್ಯೆ ಅಧಿಕವಿರುವುದರಿಂದ ಯುದ್ಧದಲ್ಲಿ ಹತ್ತು ಸಾವಿರ ಆನೆಗಳನ್ನು ಉಪಯೋಗಿಸುತ್ತಾರೆ. ಕೊಂಬೋಡಿಯಾದಿಂದ ಲಾವೋಸ್‌ವರೆಗಿನ ಮಾರ್ಗದಲ್ಲಿ ಒಂದುಲಕ್ಷ ಆನೆಗಳಿರುವುವೆಂದು ನಂಬಲಾಗಿದೆ.

೧೯೪೯ರಲ್ಲಿ ಕೊಚೀನ್ ಚೀನವು ವಿಯೆತನಾಮದಲ್ಲಿ ವಿಲೀನ ಮಾಡಲ್ಪಟ್ಟಿತು. ಬಾವೊಡಾಯಿಯನ್ನು ಮೊನಃ ಸಿಂಹಾಸನದಲ್ಲಿ ಕೂರಿಸಲಾಯಿತು. ಮತ್ತು ಮೂರು ರಾಜ್ಯಗಳನ್ನೂ ಒಂದಾಗಿಸಿ ಫ್ರೆಂಚರು ಬಾವೊಡಾಯಿಗೆ ಸ್ವಲ್ಪ ಅಧಿಕಾರವನ್ನಿತ್ತು ಸರಕಾರ ತಯಾರಿಸುವ ಅಧಿಕಾರದಲ್ಲಿ ಅನುಮತಿಯಿತ್ತರು. ೧೯೫೦ರಲ್ಲಿ ಫ್ರೆಂಚರ ಸೈನಿಕರಿಗೆ ಡಿನ್ ಬಿನ್ ಕಥದಲ್ಲಿ ಕರಾರಾಗಿ ಯುದ್ಧವು ಕೊನೆಗೊಂಡಿತು. ಫ್ರೆಂಚ ಸರಕಾರಿ ಪ್ರತಿನಿಧಿ ಮತ್ತು ವಿಯೆತನಾಮದ ರಾಷ್ಟ್ರೀಯ ಸಮುದಾಳಿಗಳ ಸಂಮೇಳನವು ಜಿನೇವಾದಲ್ಲಿ ಸೇರಿತು ಆದರೆ, ಫ್ರೆಂಚ ಪ್ರತಿನಿಧಿ ಮತ್ತು ವಿಯೆತನಾಮದ ನೇತಾ ಜನರಲ್ ಗಿ-ಎಪು ನಡುವೆ ಒಪ್ಪಂದವಾದರೂ ವಿಯೆತನಾಮದ ಪರರಾಷ್ಟ್ರ ಮಂತ್ರಿಯು ಇವಕ್ಕೆ ಸಹಿ ಹಾಕಲು ಒಪ್ಪದಿದ್ದುದರಿಂದ ವಿಯೆತನಾಮವು ಎರಡು ಭಾಗವಾಯಿತು. ೧೭ನೆ ಅಕ್ಷಾಂಶ ರೇಖೆಯ ಉತ್ತರದ ಭಾಗವು ಉತ್ತರ ವಿಯೆತನಾವ್ ಎಂಬ ಹೆಸರಿನಿಂದ ವಿಯೆತಮಿನ್ಹ್‌ನ ಅಧಿಕಾರವಲ್ಲಿ ಉಳಿದು ದಕ್ಷಿಣಾಂಶದಲ್ಲಿ ಹೊಸ ಸರಕಾರವು ಸ್ಥಾಪನೆಗೊಂಡಿತು. ೧೯೫೬ರಲ್ಲಿ ಎರಡು ಭಾಗಗಳನ್ನೂ ಒಂದುಗೂಡಿಸಿ ಸಾಮಾನ್ಯ ಚುನಾವಣೆಯು ನಡೆಯಬೇಕೆಂಬ ಜಿನೇವಾ ಸಂಮ್ಮೇಳನದಲ್ಲಿ ಒಪ್ಪಲಾಗಿತ್ತು. ಆದರೆ, ಇಮಸರೆಗೂ ಹೀಗಾಗಲಿಲ್ಲ. ಜಿನೇವಾ ಸಂಮ್ಮೇಳನದ ಶರತ್ತುಗಳಿಗನುಗುಣವಾಗಿ ಈ ಭಾಗಗಳಿಗೆ ೧೯೫೪ರಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಸ್ವೀಯಲಾಯಿತು. ಸಾರ್ವಾಟ್ ಲಾವೋದಾಯಿಯನ್ನು ಖಾಯರ್ಲಿಯೇ ಅಧಿಕಾರದಿಂದ ಚ್ಯುತಗೊಳಿಸಲಾಯಿತು. ೧೯೫೫ರ ಅಕ್ಟೋಬರ ೧೯ನೆ ತಾರೀಕಿನಂದು ವಿಯೆತನಾಮವನ್ನು ಗಣತಂತ್ರವೆಂದು ಘೋಷಿಸಲಾ, ನ್ಗೋ ಮಿನ್ಹ್‌ಗಿಯೇ ಸರು ಅದರ ಪ್ರಥಮ ರಾಷ್ಟ್ರಪತಿಗಳಾಗಿ ಇಂದಿಗೂ ಯೋಗ್ಯರಾಗಿರುವರು ಶ್ರೀ ಗಿಯವರು ತಮ್ಮ ಜೀವನದ ವರ್ಷದಲ್ಲಿಯೇ ಬಾವೊದಾಯಿ ಸರಕಾರದಲ್ಲಿ ಗೃಹ ಮಂತ್ರಿಯಾಗಿದ್ದು ಆ ಸಮಯದಿಂದ ವಿಯೆತನಾಮಿ ರಾಜನೀತಿಯು ಪ್ರಮುಖ ತಮ ವ್ಯಕ್ತಿಯಾಗಿ ಬಾಳಿದ್ದಾರೆ. ಇವರ ಆಡಳಿತೆಯು ವ್ಯಾರಂಭಕಾಲದಿಂದಲೂ ಆಪತ್ತು ವಿಪತ್ತುಗಳಿಂದ ಕೂಡಿತ್ತು. ವಿಯೆತನಾಮದಲ್ಲಿ ರಾಜನೀತಿಯು ಹೀಗೆ ಹೆಂಚಾಗಿದ್ದಾಗ್ಯೂ, ವಿಭಿನ್ನ ಧರ್ಮಾವಲಂಬಿಗಳು ತಂತಮ್ಮೊಳಗೆ ಕಚ್ಚಾಡುತಿದ್ದಾಗ

ದೇವಣಾತಿಗಳ ಮೇಲೆ **ಅತ್ಯಧಿಕ** ಬಡ್ಡಿ ದರಗಳು

ಶೆಡ್ಯೂಲ್ಡ್ ಡಿಸಾಜಿಟ್‌ಗಳ ಮೇಲೆ ವರ್ಷಕ್ಕೆ **3%** ರಂತೆ

ಸೇವಿಂಗ್ಸ್ ಬ್ಯಾಂಕ್ ಡಿಸಾಜಿಟ್‌ನ ಮೇಲೆ ವರ್ಷಕ್ಕೆ **2½%** ವರೆವಿಗೂ

ಅಲ್ಪಾವಧಿ ಮತ್ತು ನಿರ್ದಿಷ್ಟಕಾಲದ ದೇವಣಾತಿಗಳಿಗೆ

ಅತ್ಯಂತ ಆಕರ್ಷಕ ದರಗಳು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ಬ್ಯಾಂಕ್ ಮ್ಯಾನೇಜರಲ್ಲಿ ವಿಚಾರಿಸಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ ಪೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದಾದದ್ದು.



ಮತ್ತು ಹೆಚ್ಚಾಗಿ, ಕೋಚಮಿನ್ದರ ನೇತೃತ್ವದಲ್ಲಿ ದೇಶವು ಸಾಮ್ಯವಾದದತ್ತ ಅಂದೋಲಿತವಾಗುತಿದ್ದಾಗ ಅವರು ರಾಷ್ಟ್ರಾಧಿಕಾರವನ್ನು ಸ್ವೀಕರಿಸಿದರು. ಹೋಚಮಿನ್ದರ ಸ್ಥಾನವು ಮಿಯತನಾಮಿನ ರಾಷ್ಟ್ರವಾದಿಗಳ ಪಾಲಿಗೆ ವಹಾತ್ಮಾ ಬುದ್ಧನ ಸ್ಥಾನವಾಗಿ ಪರಿಣಮಿಸಿತ್ತು.

ಮಿಯತನಾಮದ ಸಾಮಾಜಿಕ ಜೀವನವು ಬಹಳ ಮರುಳುಮಾಡುವುದಾಗಿದೆ. ಈಗ ಮಿಯತನಾಮದ ರಾಜಧಾನಿಯಾಗಿರುವ ಸೈಗೋನಿನ ಜೋಲೋಂನ ಹೆಸರಿನ ಒಂದು ಭಾಗವು ಅತ್ಯಂತ ಮನೋರಮ ವಾಗಿದೆ. ಹೆಂಗಸರು 'ಕೆಂಟಬೀಜ ನಮೂನೆ'ಯ ಬಟ್ಟೆಗಳನ್ನು ಧರಿಸುತ್ತಾರೆ; ಕಪ್ಪು ಪಾಯಿ-ಜಾಮಗಳಿಂದ ಅವರ ಸೌಂದರ್ಯವು ಅತ್ಯಾಕರ್ಷಕವಾಗಿ ಪರಿಣಮಿಸುವುದು ಖಾಯಂ. ಇಲ್ಲಿನ ಸ್ತ್ರೀಯರು ಮಿಶ್ರಿತ ವರ್ಣದವರಿಬೇಕು ಅವರನ್ನು ಯುರೇಶಿಯನರೆಂದು ತ್ತಾರೆ ಇವರು ಅಸಾಧಾರಣಕಮನೀಯ ಮತ್ತು ತರುಣಾಪೇಕ್ಷ ಸುಲಭ ಸೌಂದರ್ಯದಿಂದ ಮಾರ್ಗಚಿರರನ್ನು ತಮ್ಮತ್ತ ಸೆಳೆಯುತ್ತಾರೆ. ಜೋಲೋಸಿನ ಜಲಪಾನ ಗೃಹವು ಬಹಳ ಸುಂದರವಾಗಿದೆ. ಇಂದ್ರಧನುಷೆ ಎಂಬ ಹೆಸರಿನ ಒಂದು ಗೃಹವು ಏಶಿಯಾದಲ್ಲಿಯೆ ಸರ್ವೋತ್ತಮ ವಾಗಿದೆ. ಮೂರು ಸಾವಿರ ವರ್ಗದ ಸಾಮಗ್ರಿಗಳು ದೊರೆಯುವ ಈ ಜಲಪಾನ ಗೃಹವು ಆಶ್ಚರ್ಯಜನಕ ವಿಶೇಷತೆಯುಳ್ಳ ದ್ದಾಗಿದೆ. ಸ್ವಭಾವತಃ ಮಿಯತನಾಮಿ ಆಹಾರೋಪಚಾರಗಳು ಬಹಳ ಆಕರ್ಷಕವಿರುತ್ತವೆ

ಜೋಲೋಸಿನಲ್ಲಿ ಜೂಜಾಟದ ದೊಡ್ಡ ದೊಡ್ಡ ಕ್ಲೇತ್ರಗಳಿವೆ. ಎತಿಯಾದ ಅತ್ಯಂತ ಹಿರಿದಾದ ಈ ದ್ಯೂತ ಭವನವನ್ನು ಇದೀಗ ಮುಚ್ಚಿರುತ್ತಾರೆ. ಈ ಸ್ಥಳದಲ್ಲಿ ಎಲ್ಲ ಪದಾರ್ಥಗಳನ್ನು ಪಡಕೊಳ್ಳಬಹುದು. ಆಫೀಮ್ ಸೇವನೆಯು ಇಲ್ಲಿ ತನ್ನ ಅತಿಕ್ರಮಣವನ್ನು ಮಾಡಿಬಿಟ್ಟಿದೆ ಒಂದು ಸ್ಥಳದಲ್ಲಿ ಕೂತುಕೊಂಡು ಇಪ್ಪತ್ತು ಬಾರಿ ಪೈಸಿನ ಸ್ವಾದವನ್ನು ಹೀರಿದರೆ, ಅವರೆನ್ನುವಂತೆ ಅವರ ಆತ್ಮಗಳು ಕೊಳೆಯುತ್ತವೆ, ಶರೀರವು ಮೋಡದಂತೆ ಒಂದೇ ಸಾರಿ ಹಗುರವಾಗಿ ಹೋಗತ್ತದೆ; ಮತ್ತಿಬರಿಂದ ಜೀವನವು ಸೌಂದರ್ಯಮಯವಾಗಿ ಕಂಡು ಬರತ್ತದೆ

ಸೈಗೋನಿನ ಜೀವಪವನ್ನು ಅನುಭೂತಿಯಿಂದ ನೆ ಡುವುದಾದರೆ, ಅವರು ಅತ್ಯಂತ ಪ್ರಸನ್ನರಾಗಿರುವುದು ಫ್ರಾನ್ಸಿನವರನ್ನು ಹೊರಗೆ ಓಡಿಸಿದ್ದರಿಂದ ಎಂದು ತಿಳಿಯುತ್ತವೆ ಅವರು ಈಗ ಸಾಮ್ಯವಾದ ಇಲ್ಲವೇ ಬೇರೇನೆನೋ ರಾಜ್ಯ ನೈತಿಕ ವಿಚಾರಧಾರೆಗಳಿಗೆ ಮಹತ್ವವೀಯುವುದಿಲ್ಲ ಅಮೆರಿಕೆಯು ಭಾನೆಯಲ್ಲಿ ಒಂದರಿಂದ ಹತ್ತರವರೆಗೆ ಗಣಿಸುವನ್ನು ಕಲಿತ ದಿನ ವಿಡಿ ರಿಕ್ಷಾವನ್ನೆಳೆದರೂ ತಮ್ಮ ಉದರ ನಿರ್ವಹಣೆ ಮಾಡಿಕೊಳ್ಳಲಾರದ ರಿಕ್ಷಾ ಚಾಲಕನಾದರೂ ಬಿಳಿಯ ವರನ್ನು ತನ್ನ ಗಾಡಿಯಲ್ಲಿ ಕೂರಿಬಿಡುವುದಿಲ್ಲ—ಅವನು ಫ್ರೆಂಚನಿರಲಿ ಬಹುದೆಂಬ ಸಂದೇಹದಿಂದ ಮಿಯತನಾಮದ ಸಕಲ ಜನತೆಯು ಮನೋಭಾವನೆಯಲ್ಲಿಯೂ ಈ ಪ್ರಕಾರದ ಸ್ವೈಚ್ಛಾಮೇಲೆ ಕಠಿತ ಬಂಧವು ಮನೆಮಾಡಿರುವುದು.

೧೯೫೪ರಲ್ಲಿ ಫ್ರೆಂಚ್ ಸೇನೆಯು ಸೋತುಹೋದಾಗ, ಒಂದುಬಾರಿ ಅವಿರಿಕವು ಮಿಯತನಾಮಿನ ಸೈನ್ಯವನ್ನು ಸಂಪೂರ್ಣವಾಗಿ ಹಿಸಕಿಬಿಸಕಿನೋಡಿತು ಆಗ, ಮಿತ್ರರಾಷ್ಟ್ರಗಳ ತಡೆಯಿಂದ ಮತ್ತು ಅಂತಾರಾಷ್ಟ್ರೀಯ ಪರಿಸ್ಥಿತಿಯಿಂದಾಗಿ ಹಾಗೆ ಮಾಡಲಾಗಲಿಲ್ಲ ಕೊನೆಗೆ ನಡೆದ ಜಿನೇವಾ ಸಮ್ಮೇಳನದ ಸಂದರ್ಭದಲ್ಲಿ ಭಾರತದ ಪ್ರಧಾನ್ನ ಸ್ವರವು ವಿಯತನಾಮದ ಕಡೆಗಿತ್ತು. ಪತ್ತು ೧೯೫೪ರಲ್ಲಿ ಯುದ್ಧ ಸ್ಥಗಿತತೆಯು ಕಾರ್ಯಾನ್ವಿತವಾದಾಗ, ಅದು ಭಾರತದ ನೇತೃತ್ವದಲ್ಲಿಯೂ ಪೋಲೆಂಡ್ ಮತ್ತು ಕನಡಾದ ನಿರೀಕ್ಷಕತ್ವದಲ್ಲಿಯೂ ನಡೆಯಿತು

ಅಮೆರಿಕಯು ವಿಯತನಾಮದ ಸರಕಾರಕ್ಕೆ ಸಹಾಯ ನೀಡುತ್ತಲಿದೆ ಭತ್ತದ ಬೆಳೆ ಹೆಚ್ಚಿಸುವುದಕ್ಕಾಗಿ ಅದಕ್ಕೆ ಸುಮಾರು ೫೦ ಲಕ್ಷ ಡಾಲರ್ ಅನುದಾನವನ್ನಿತ್ತಿದೆ ವಿಯತನಾಮದಿಂದ ಸಾಮ್ಯವಾದಿಗಳನ್ನು ಹೆಡೆಮೆಡಿಸಲು ಅದನ್ನು ಆತ್ಮನಿರ್ಭರ ರಾಷ್ಟ್ರವಾಗಿರಿಸಬಯಸುತ್ತಿದೆ ಅಮೆರಿಕೆಯ ಗುಪ್ತಚರರು ಇಲ್ಲಿ ಎಲ್ಲೆಲ್ಲಿಯೂ ಸಂಚರಿಸಿಕೊಂಡಿದ್ದು ಕ್ಷಣ ಕ್ಷಣದಲ್ಲಿಯೂ ತನ್ಮ ಸರಕಾರಕ್ಕೆ ಇಲ್ಲಿನ ವರ್ತಮಾನವನ್ನು ತಿಳಿಸುತ್ತಾರೆ ಅಮೆರಿಕೆಯ ದೊತಾವಾಸದಲ್ಲಿದ್ದ ಒಬ್ಬ ಕಾರ್ಯದರ್ಶಿಯನ್ನು ಅವನು ವಿಯತನಾಮಿನ ಸಂಬಂಧದ ನೀತಿಗಳ ವಿವರವನ್ನು ವಿಯತನಾಮಿನ್ದರಿಗೆ ಕೊಟ್ಟನೆಂಬ ಆರೋಪ ಕೊರಿಸಿ ತೆಗೆದುಹಾಕಿರುವರು

ಲಂಚ ಸ್ವೀಕಾರವು ವಿಯತನಾಮದಲ್ಲಿ ಅತ್ಯಧಿಕವೆನಿಸಿದೆ ಈಗಿನ ಜಿಯಂ ಸರಕಾರವು ಇದನ್ನೆಷ್ಟು ನಿಯಂತ್ರಣದಲ್ಲಿಟ್ಟಿದೆ ಎಂದು ಹೇಳಬಾರುದಿಲ್ಲ ಆದರೆ, ಎರಡು ವರ್ಷಗಳಷ್ಟು ಪೂರ್ವದಲ್ಲಿ ಇದು ತನ್ನ ಪರಮಾವಧಿಯನ್ನು ಮುಟ್ಟಿತ್ತು. ಇಲ್ಲಿಯ ಜನತೆಯು ಬಹಳ ದರಿದ್ರರಾಗಿದ್ದರೆ, ಶ್ರೀಮಂತರನ್ನು ಅರಸುತ್ತ ರಾತಿ ಹಗಲು ತಿರುಗಾಡುತ್ತಿರುತ್ತಾರೆ ಸಮುದ್ರ ಜೀರ್ಣರ ಆಕ್ರಮಣ ಸಹ ಇಲ್ಲಿ ಹೆಚ್ಚಾಗಿರುವುದು

ವಿಯತನಾಮಿನ ವೈವಾಹಿಕ ಪದ್ಧತಿಯು ಭಾರತೀಯ ಸ್ಪರ್ಧಿಯಂತೆ ಬೇರೆಯಾಗಿದ್ದು ವಿಯತನಾಮಿನ ಪ್ರಜೆಗಳು ಪರಿಶ್ರಮಿಗಳೂ ಜಗಳ ಗಂಟರೂ ಆಗಿದ್ದರೂ ಸ್ವಚ್ಛಂದ ಸರಳವಾಗಿ ವಾರಿವಾರಿಕ ಸಾಮಾಜಿಕ ಜೀವನವನ್ನು ಬದುಕುತ್ತಾರೆ ಇಲ್ಲಿಯ ಜನಕ ಮತ್ತು ಯುವತಿಯರು ಧಾರ್ಮಿಕ ಸ್ಥಾನಗಳಲ್ಲಿ ಒಟ್ಟು ಸೇರಿದರು, ಬಹುವಾ ಯುವಕನು ಯುವತಿಯ ಜಂಗಿಲ್ಲವೇ ಬರುವನು ಇವರ ಪೊಲಸಿನೆಯು ಬೇಟೆಯಲ್ಲಿ ಪರಾಕ್ರಮತೆಗಳು ಕಾವ್ಯಾತ್ಮಕವಿದ್ದ ನವೆಂದು ವ್ಯಾರಂಭವಾಗುತ್ತವೆ ಹೆಂಡಲು ಯುವಕನು ಒಂದು ಗೀತೆಯನ್ನು ಹಾಡುತ್ತಾನೆ ಎಂದರೆ ನಂತರ ಯುವತಿಯು ಎಂದಕ್ಕೆ ಉತ್ತರಿಸುತ್ತಾನೆ ಇನ್ನೆ ಹೃದಯವು ಪ್ರತಿಯಾಗಿ ನಾನು ಹೋಗಿ ಸ್ವಪ್ನಲೋಕದಲ್ಲಿ ನೀನು ಕಳೆದುಹೋಗಿ ನವಿಯಲ್ಲಿ ಮಿನು ಕೊಳ್ಳುತ್ತಿ ಯುತ್ತೀಯಾ? ಎಂದು ಅವರು ಪರಸ್ಪರರಿಗೆ ಪ್ರಶ್ನೆಯಾಗಿ ಕೇಳಿಕೊಳ್ಳುತ್ತಾರೆ ಹೀಗೆ ರಾತ್ರಿಯಿಡೀ ಜೀವಪೋಗೆ ಸಂಧಾಷಣೆಯು ನಡೆಯುತ್ತಿರುತ್ತದೆ ಇನ್ನೊಂದು ಪದ್ಧತಿಗನುಸಾರವಾಗಿ ಯುವತಿಯರು ಬಾಗಿಲ ಒಳಯಲ್ಲಿ ಯುವಕನು ನುತ್ತು ತ್ತಿರುತ್ತಾನೆ. ಅಂತ್ಯದಲ್ಲಿ ಯಾವುದಾದರೊಂದು ಬಾಗಿಲಿನಿಂದ ನಿಯಂತ್ರಿತನಾಗಿ ಮನೆಯೊಳಗೆ ಬಾವಿರುತ್ತಾನೆ. ರಾತ್ರಿಯಿಡಿ ಯುವಕನಲ್ಲಿಯೇ ಉಳಿಯುತ್ತಾನೆ. ಯುವತಿಯು ಅವನ ಕವಿತೆಯಿಂದ ಮುಗ್ಧಳಾಗಿ ಅವನೊಡನೆ ಪ್ರೇಮಾಲಾಪ ಸಂಧಾಷಣೆಗಳಿಂದ ರಾತ್ರಿ ಕಳೆಯುತ್ತಾಳೆ. ಈ ರೀತಿಯಲ್ಲಿ ಬುದ್ಧಿವಂತ ಯುವಕನು ಸರ್ವೋತ್ತಮ ಲಾವ್ಣೋನೀ ಯುವತಿಯಲ್ಲಿ ಅಧಿಕಾರ ಪಡೆಯುತ್ತಾನೆ. ಈ ಪ್ರಥದಿಂದ ಯುವಕನು ಯುವತಿಯ ಸಂಪೂರ್ಣ ರಕ್ಷೆಯನ್ನು ಮಾಡುವನೆಂಬ ವಿಶ್ವಾಸವು ಆಕೆಯಲ್ಲಿ ಮೂಡದ ವಿನಃ ವಿವಾಹವು ನಡೆಯಲಾರದೆಂದು ತಿಳಿಯುತ್ತದೆ. ಈ ವಿಧಾನದಲ್ಲಿಯೂ ಭಾರತೀಯ ವೈವಾಹಿಕ ವಿಧಿಗಳ, ಮೂಲಗತ ಪ್ರಭಾವ ಮೂಡಿರುವುದು ಕಂಡು ಬರುತ್ತದೆ

ಇಂದು ಜರ್ಮನಿ, ಕೊರಿಯಾ, ವಿಯತನಾಮ ನುತ್ತು ಕೆಲವಂಶಗಳಲ್ಲಿ ಘಾರ್ಕ್ಕೀಯಾ ಸವೇತ ಚೀನಾದ ಸಮಸ್ಯೆಗಳು ವಿಕರೂಪದ್ದಿರುವುದ ಈ ದೇಶಗಳ ಎರಡು ರಾಜಕೀಯ ವಿಭಾಗಗಳಲ್ಲಿ ವಿಭಾಗಿತವಾಗಿವೆ, ಇವುಗಳಲ್ಲಿ ಒಂದರ ಮೇಲೆ ಅಮೆರಿಕಾ ಮತ್ತೊಂದು ಭಾಗದಲ್ಲಿ ರಷ್ಯೆ ತನ್ನ ಪ್ರಭಾವವನ್ನು ಬೀರುತ್ತಿವೆ ಒಂದು ಕ್ಷೇತ್ರದಲ್ಲಿ ಅಮೆರಿಕದ ವಿಚಾರ ಧಾರೆಗಳಿಂದ ಪ್ರಭಾವಿತವಾದ ಆಡಳಿತವೂ ಇನ್ನೊಂದರಲ್ಲಿ ಸಾಮ್ಯವಾದಿ ಪ್ರಭುತ್ವವಿರುವುದು ಆಕೆಯಿಂದ ಇದೆ ಪೂರ್ವ ಜರ್ಮನಿ, ಉತ್ತರ ಕೊರಿಯಾ ಚೀನ ಗಣರಾಜ್ಯ ಅಥವಾ ಉತ್ತರ ವಿಯತನಾಮದ ಶಾಸನ ವ್ಯವಸ್ಥೆಯು ಸುಚಾರು ಮತ್ತು ಸುದೃಢವಾಗಿರುವುದು ಪಶ್ಚಿಮ ಜರ್ಮನಿ, ದಕ್ಷಿಣ ಕೊರಿಯಾ, ಫಾರ್ಮೋಸಾ ಮತ್ತು ದಕ್ಷಿಣ ವಿಯತನಾಮ ದ್ವಿರುವುದಿಲ್ಲವೆನ್ನಬೇಕಾಗಿದೆ

ವಿಯತನಾಮಿನ ಶ್ರೀ ಜಿಯಂ ಗಣರಾಷ್ಟ್ರಪತಿತ್ವದಲ್ಲಿ ಮೊದಲಿನಕ್ಕಿಂತ ಅಧಿಕ ಸಂಯುಕ್ತತೆಯತ್ತ ಧಾವಿಸಿರುವುದು ಆಗಲಿ, ಎರಡು ಭಾಗಗಳೂ ಒಂದಾಗಿ ಸೇರಿ ಸಾರ್ವತ್ರಿಕ ಚುನಾವಣೆಯು ನಡೆಯುವ ವರೆಗೆ ಪ್ರಜಾ ತಾಂತ್ರಿಕ ಪರಂಪರೆಯು ತಲೆಯೆತ್ತಲಾರದು. ಮತ್ತು ಸರ್ವಾಂಗೀಣ ವಿಕಾಸಕಾರ್ಯವು ಫಲವತಿಯಾಗಲಾರದು

(ಸಾಫಾರ)

ಸೀತಾನದಿ
ಜಾನುವಾರು ಜಾತ್ರೆ

ದಕ್ಷಿಣ ಕನ್ನಡ ಜಿಲ್ಲಾ ರೈತರ ಅನುಕೂಲತೆಯ ಬಗ್ಗೆ ಕಾರ್ಕಳ ತಾಲೂಕು ಸೋಮೇಶ್ವರದ ಬಳಿ ಅಂದರೆ ಸೋಮೇಶ್ವರ ಘಾಟಿಯ ಬುಡದಿಂದ ೩ ಮೈಲು ಕೆಳಗೆ ಜಾನುವಾರುಗಳಿಗೆ ಅನುಕೂಲವಾದ 'ಸೀತಾ ನದಿ' ಎಂಬಲ್ಲಿ ತಾರೀಕು 3—12—57 ರಿಂದ 14—12—57ರ ವರೆಗೆ.

ಜಾನುವಾರು ಜಾತ್ರೆಯು

ಈ ಹಿಂದಿನ ವರ್ಷಗಳಂತೆ ಅತೀ ವಿಜೃಂಭಣೆಯಿಂದ ಜರಗುವುದು.

ಜಾನುವಾರೇ ನಮ್ಮ ಶ್ರಮಜೀವಿ ಸಂಪತ್ತಾದುದರಿಂದ ಅವುಗಳನ್ನು ಯೋಗ್ಯರೀತಿಯಿಂದ ಪೋಷಿಸುವ ಬಗ್ಗೆ ಪ್ರೋತ್ಸಾಹ ಕೊಡುವುದೇ ಈ ಜಾತ್ರೆಯ ಮುಖ್ಯ ಧ್ಯೇಯವಾಗಿರುತ್ತವೆ ಉತ್ತಮ ತರದ ಜಾನುವಾರುಗಳ ಮ್ಹಾಲಿಕರನ್ನು ಪ್ರಕಂಶಿಸುವುದಲ್ಲದೆ, ಜಾನುವಾರು-ಳಲ್ಲಿ ಉತ್ಕೃಷ್ಟವಾದುವುಗಳೆಂದು ಪರಿಗಣಿಸಲ್ಪಡುವ ಜಾನುವಾರುಗಳ ವ್ಹಾಲಿಕರಿಗೆ ಬಹುಮಾನವನ್ನು ಕೊಡಲಾಗುವುದು

ಈ ಜಾತ್ರೆಯಲ್ಲಿ ಉತ್ತರಕನ್ನಡ, ಮೈಸೂರು ಮತ್ತಿತರ ಪ್ರದೇಶಗಳಿಂದ ಜನರು ಬಂದು ಸಹಕರಿಸಿ ಈ ಜಾತ್ರೆಯನ್ನು ಯಶಸ್ವಿಗೊಳಿಸಬೇಕಾಗಿ ಸರಕಾರದ ಪರವಾಗಿ ಆಪೇಕ್ಷಿಸತ್ತೇನೆ

ಕೆ ಎಲ್ ಸೂರ್ಯನಾರಾಯಣನ್
ಅಸಿಸ್ಟಂಟ್ ಕಮಿಸನರ್
ಕುಂದಾಪುರ (ದ. ಕ.)
ರೆ ನಿ ಅಫೀಸ್,
ಕುಂದಾಪುರ ತಾ 13—11—57

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

H O ಉಡುಪಿ — ಸ್ಥಾಪನೆ: 1925

ವಿಸ್ತೃತ ಬೇಂಕಿಂಗ್ ಸೇವೆಗಾಗಿ ಹೊಸ ಶಾಖೆಗಳು:—

1. ಮಣಿಪಾಲ (ದ. ಕ. ಜಿಲ್ಲೆ)—ತಾ 25—11—57ರಲ್ಲಿ ತೆರೆಯಲ್ಪಟ್ಟಿತು
2. ಕೊಪ್ಪಲ (ರಾಯಚೂರು ಜಿಲ್ಲೆ)
3. ಬರೋಡ (ಬೊಂಬಾಯಿ ಪ್ರಾಂತ್ಯ) } ಸದ್ಯದಲ್ಲಿಯೇ ತೆರೆಯಲ್ಪಡುವುವು

ಪಿಗ್ಮಿ

ಸಹಸ್ರಾರು ಜನರು ಉಪಯೋಗಿಸುವ ರೇವಣಾತಿ ವಿಜ್ಞಾನವು ಚಿಕ್ಕ ಪುಡಿಕಾಸುಗಳನ್ನು ಸಂಗ್ರಹಿಸಲು ಸಾಧ್ಯವಿರುವ ಸುಲಭ ರೇವಣಾತಿ ಕ್ರಮ—

ಸಿಂಡಿಕೇಟಿನ 103 ಶಾಖೆಗಳ ಯಾವುದೇ ಉದ್ಯೋಗಸ್ಥನೂಡನೆ ವಿಚಾರಿಸಿರಿ

THE CANARA INDUSTRIAL & BANKING SYNDICATE LTD., UDIPI.

ನೋವುಗಳ ಅತ್ಯುತ್ಕೃಷ್ಟ ಸಂಹಾರಿಣಿ

ಅಮೃತಾಂಜನ

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೨೮-೧೧-೧೯೬೨	ಸಂಚಿಕೆ ೧೨

ಮಾತು ಸಾಕು, ಕೃತಿ ಬೇಕು

ಭಾರತ ಸರಕಾರವು ಭಾರತದ ವಿವಿಧ ರಾಜ್ಯಗಳಲ್ಲಿನ ಆಹಾರ ಪರಿಸ್ಥಿತಿಗಳನ್ನು ಅಭ್ಯಸಿಸಿ ಸುಧಾರಣೆಗಳನ್ನು ಕೈಗೊಳ್ಳಲು ಸಿಫಾರಸುಗಳನ್ನಿತ್ತಿಯಲು ಕಳೆದ ಜೂನ್ ತಿಂಗಳಲ್ಲಿ ಶ್ರೀ ಅಶೋಕ್ ಮೆಹತಾರ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿಯು ಸಂಚಾರವನ್ನು ಮುಗಿಸಿ, ತನ್ನ ವರದಿಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿದ್ದು, ಇದು ಕಳೆದ ವಾರ ಬಹುರಂಗವಾಗಿದೆ. ಈ ವರದಿಯನ್ನು ಅನುಲಕ್ಷಿಸಿ ಸಂಗ್ರಹವಾಗಿ ಸರಿಪಿಲಿಸುವಾಗ, ಅಶೋಕ ಮೆಹತಾ ಸಮಿತಿಯು ದೇಶದಲ್ಲಿ ಈಗ ಆಹಾರ ಪರಿಸ್ಥಿತಿಯು ನಿಜವಾಗಿಯೂ ಗಂಭೀರ ಸ್ಥಿತಿಯಲ್ಲಯೇ ಇದೆಯೆಂದು ಅಭಿಪ್ರಾಯಪಟ್ಟಿರುವಂತೆ ಕಂಡುಬರುತ್ತದೆ. ಆದರೆ ನಮ್ಮ ರಾಜ್ಯ ಮತ್ತು ಕೇಂದ್ರ ಮಂತ್ರಿಮಂಡಲದ ಹೋದಹೋದಲ್ಲೆಲ್ಲಾ ಈ ಪರಿಸ್ಥಿತಿಯನ್ನು ಬಣ್ಣಿಸಿ ಭಾಷಣ ಮಾಡಿ ಜನತೆಯನ್ನು ವಿಷಾದದಲ್ಲಿ ಮುಳುಗಿಸುವುದಕ್ಕಿಂತ ಹೆಚ್ಚಿನ ಪ್ರಯೋಜನವೇನೂ ಆಗುವ ಸಂಭವವಿಲ್ಲವೆಂದು ಅನಿಸುತ್ತಿರುವುದು. ಮೆಹತಾ ವರದಿಯು ಈ ಮಾತುಗಳಿಗೆ ಬೆಲೆಯಿಲ್ಲದಂತೆ ಮಾಡಿದೆ ಮತ್ತು ಭಾರತವು ಆಹಾರದ ವಿಷಯದಲ್ಲಿ ಸ್ವಾವಲಂಬಿ ರಾಷ್ಟ್ರವಾಗಲು ಇನ್ನೂ ಕೆಲವು ವರ್ಷಗಳು ಬೇಕಾಗುವುದೆಂದೂ, ಪ್ರಥಮ ಪಂಚವಾರ್ಷಿಕ ಯೋಜನೆಯ ಪರಿಣಾಮವಾಗಿ ಆಹಾರವು ಅಧಿಕೋತ್ಪತ್ತಿಯಾದರೂ, ಉಣ್ಣುವ ಬಾಯಿಗಳೂ ಅಷ್ಟೇ ಅಧಿಕವಾಗಿರುವುದರಿಂದ, ಆಹಾರ ಧಾನ್ಯಗಳ ಪರಿಸ್ಥಿತಿಯು ಹಿಂದಿನಂತೆಯೇ ಇರುವುದೆಂದೂ ಹೇಳಿದೆ. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳವಾಗುವ ನೀರಿಕ್ಷೆಯನ್ನು ನಾವು ಇಟ್ಟುಕೊಳ್ಳಬಹುದಿದ್ದರೂ ಕಷ್ಟಾಗಲಾರದು. ಅಂದೋಲಿತ ಉಯ್ಯಾಲೆಯಂತಿರುವ ದೇಶದ ವ್ಯವಹಾರ ಸ್ಥೈರ್ಯವು ಸ್ಥಿರ ರೂಪಧಾರಣೆ ಮಾಡಿದರೆ, ನಮ್ಮ ಒಂದೊಂದೇ ಸಮಸ್ಯೆಗಳು ದೂರವಾಗುವುವು. ಈ ದೆಸೆಯಲ್ಲಿ ಸರಕಾರ ಹಾಗೂ ಜನತೆ ಶಬ್ದರ್ಕರ್ತವ್ಯವೂ ಸಮವಾಗಿದೆ. ಎಲ್ಲರೂ ಕರ್ತವ್ಯಶೀಲರಾಗಿ ಭಾರತದ ಪ್ರಗತಿಯನ್ನು ಬಯಸಿ ದುಡಿದರೆ ಮಾತ್ರ ರಾಮರಾಜ್ಯದ ಕನಸು ನನಸಾದೀತು. ಹಾಗಾಗಲೆಂದೇ ನಮ್ಮ ಅಭಿಲಾಷೆ.

ಉಡುಪಿ

ಡಾ. ಯು. ಕೃಷ್ಣರಾಯರಿಗೆ ಮಾನಪತ್ರ—ಮುದ್ರಾಸ್ ಎಸೆಂಬ್ಲಿಯ ಸ್ಪೀಕರ್ ಡಾ. ಯು ಕೃಷ್ಣರಾಯರಿಗೆ ತಾ. 21ರಂದು ಉಡುಪಿಯು ಎಂಟು ಮಠಗಳ ಕಡೆಯಿಂದ ಶ್ರೀಕೃಷ್ಣ ಮಠದ ವತಿಯ ಮಹಜನಿಲ್ಲಿ ಮಾನಪತ್ರ ಅರ್ಪಿಸಿ ಗೌರವಿಸಲಾಯಿತು. ಪರ್ಯಾಯ ಅಧಿಪಪಾಯಿ, ಕಾಣಿಯೂರು ಪೀಠಾಧಿಪತಿಗಳು ಉಪಸ್ಥಿತರಿದ್ದರು. ಪಂಡಿತ ಸುಬ್ರಾಯ ಪುರಾಣಿಕರು ಸ್ವಾಗತಿಸಿ ಮಾನಪತ್ರ ವನ್ನೋದಿದರು. ಮುಖ್ಯ ಅತಿಥಿಗಳು ತನಗಿತ್ತ ಅಶೀರ್ವಚನ ಪೂರಿತ ಮಾನಪತ್ರಕ್ಕೆ ಕೃತಜ್ಞತೆ ಸೂಚಿಸಿದರು. ಕೃಷ್ಣಯ ಸಂಸ್ಕೃತ ಕಾಲೇಜನ್ನು ಅಖಿಲಭಾರತ ದೃಷ್ಟಿಯಲ್ಲಿ ಉನ್ನತ ಮಟ್ಟಕ್ಕೆ ತರುವಂತೆ ಪೀಠಾಧಿಪತಿಗಳು ಮನಸ್ಸುಮಾಡಬೇಕು. ಹಳೆ ಸಂಪ್ರದಾಯ ಪದ್ಧತಿಗಳಿಗೇನೇ ಮಾರುಹೋಗದೆ ಈಗಿನ ಸಮಾಜ ಧರ್ಮಕ್ಕೆ ಅನುಸಾರವಾಗಿ ಮಾಧಿಪತಿಗಳು ತಮ್ಮ ದೃಷ್ಟಿಕೋನವನ್ನು ಬದಲಾಯಿಸಬೇಕೆಂದು ವಿಜ್ಞಾಪಿಸಿಕೊಂಡರು.

ಶ್ರೀ ಕೃಷ್ಣಾಪುರ ಸ್ವಾಮಿಗಳಿಗೆ ಮಾನಪತ್ರ—ಉಡುಪಿ ಮುನಿಸಿಪಲ್ ಕೌನ್ಸಿಲಿನ ಇತ್ತೀಚೆಗೆ ಜರುಗಿದ ಸಭೆಯಲ್ಲಿ ಚೆಂಮೆನ್ ಶ್ರೀ ಕೆ. ಕೆ. ಪೈಗಳ ಸೂಚನೆಯಂತೆ ಮುಂದಿನ ಜನವರಿ ಉತ್ತರಾಧಿದಲ್ಲಿ ಶ್ರೀ ಕೃಷ್ಣಮಠ ಪರ್ಯಾಯ ಪೀಠವನ್ನೇರಲಿರುವ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥಸ್ವಾಮಿಗಳವರಿಗೆ ಮಾನಪತ್ರವೀಯಬೇಕೆನ್ನುವ ನಿರ್ಣಯವಾಯಿತು.

ವರ್ಗಾವರ್ಗಿ—ಉಡುಪಿಯಲ್ಲಿ ಸರಕಾರೀ ವಕೀಲರಾಗಿದ್ದ ಶ್ರೀ ಶೌಕೂರು ನಾರಾಯಣ ಸೆಟ್ಟರು ಮಂಗಳೂರಲ್ಲಿ ಹೊಸತಾಗಿ ತೆರೆಯಲ್ಪಟ್ಟಿರುವ ಸೆಶಲ್ ಮೆಜಿಸ್ಟ್ರೇಟ್ ಕೋರ್ಟಿಗೆ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿರುವರು.

ಮರಾಠ ಸಮಾಜದವರ ಅವಗಾಹನೆಗೆ—ಡಿ. ಸಿ ರಿಸರ್ವ್ ಲೀಡಿನ್ನು ತೆಡ್ಡೂಲ್ ಟ್ರೈಬ್ ಪಂಗಡಕ್ಕೆ ಸೇರಿದ ಮರಾಠಿಯವರಿಗೂ ಕೊಡಬಹುದೆಂದು ಜಿಲ್ಲಾಧಿಕಾರಿಗಳು ಅಮಾಯಕ ಸಹಸೀಲ್ದಾರರಿಗೆ ತಿಳಿಸಿರುವರೆಂದೂ ಸಂಬಂಧಪಟ್ಟವರು ದಮ್ಮಾಸ್ತಿಗೆ ಬರೆದುಕೊಳ್ಳಬಹುದೆಂದೂ ಜಿಲ್ಲಾ ಮರಾಠ ಸಮಾಜ ಸೇವಾ ಸಂಘದ ಅಧ್ಯಕ್ಷ ಕೆ. ಅಣ್ಣಯ್ಯ ನಾಯ್ಕರು ತಿಳಿಸುತ್ತಾರೆ.

ಹಾಯರ್‌ಗ್ರೇಡ್ ತರಬೇತಾದ ಶಿಕ್ಷಕರು—ಟಾಸಗಿಯಾಗಿ ಯಸ್. ಯಸ್. ಎಲ್. ಸಿ. ಪರೀಕ್ಷೆಗೆ ಪಾಜರಾಗಲು ಮೈಸೂರು ಸರಕಾರವು ಅನುಮತಿಯಿತ್ತಿದೆ.— ಈ ಬಗ್ಗೆ ಅರ್ಜಿಗಳು ದಶಂಬರ 10ರ ಒಳಗೆ ಸ್ವೀಕೃತವಾಗಬೇಕಾಗಿದೆ. ನಿಯಮಿತ ಅರ್ಜಿ ಫಾರಂಗಳನ್ನು ಸಕ್ಕಿಟರಿ, ಸೆಕಂಡರಿ ಎಜ್ಯುಕೇಶನ್ ಬೋರ್ಡು, ವಿಕ್ಟರಿ ಹಾಲ್ ಬೆಂಗಳೂರು-1 ಇವರಿಂದ ಮತ್ತು ಪಿಂಚಣಿಪಾಲು ಕವರು ಸಮೇತ ಬರೆದು ಪಡೆಯಬೇಕು ಅರ್ಜಿಗಳು ಜಿಲ್ಲಾ ವಿದ್ಯಾಧಿಕಾರಿಗಳ ಆಫೀಸಿಗೆ ದಶಂಬರ 5ರ ಒಳಗೆ ತಲಪಬೇಕೆಂದೂ ತಿಳಿದ ಬರುತ್ತದೆ ಎಂದು ಶ್ರೀ ಎಫ್ ದಾಂತಿಯವರು ತಿಳಿಸುತ್ತಾರೆ.

ನೇಕಾರ ಮುಷ್ಕರ—ಉಡುಪಿಯ ಕೆಲವು ಕಾರ್ಖಾನೆಗಳ ನೇಕಾರರು ಕಳೆದ 27 ದಿವಸಗಳಿಂದ ಮುಷ್ಕರ ಹೋರಾಟವನ್ನು ನಡೆಸುತ್ತಾ ಬಂದಿದ್ದು ಆದರ ಇತ್ಯರ್ಥದ ಬಗ್ಗೆ ಲೇಬರ್ ಆಫೀಸರರು ಕೈಹಾಕಿದುದರಿಂದ ಹೋರಾಟ ಹಿಂತೆಗೆಯಲಾಯಿತು. ತಾ. 29 ರಂದು ನೇಕಾರ ಮತ್ತು ಮಾಲಕರ ಸಭೆಯು ಲೇಬರ್ ಆಫೀಸರ ಹಿರಿತನದಲ್ಲಿ ಜರಗಿ ಪಜೂರರ ಕೇಳಿಕೆಗಳ ಕುರಿತು ವಿಚಾರ ವಿನಿಮಯ ನಡೆಯಲಿರುವುದು.

ವಿದ್ಯಾಭ್ಯಾಸ ಸತ್ಕಾರ—ಜಿಲ್ಲಾ ಕೃಷಿ ಅಧಿಕಾರಿಗಳ ಪರ್ಸನಲ್ ಅಸಿಸ್ಟಾಂಟರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟ ಸ್ಥಳೀಯ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್ ಶ್ರೀ ಯು. ವೆಂಕಟ್ರಾಯ ಪೈಗಳಿಗೆ ಪಿದಾಯಸೇಯುನ ಸತ್ಕಾರ ಸಮಾರಂಭವು ತಾ. 16ರಂದು ಶ್ರೀ ಕೆ. ರಘೀಂದ್ರನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಸಿ. ಕೆ ಸೆಟ್ಟಿ, ಶ್ರೀನಿವಾಸಮೂರ್ತಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಪೈಗಳ ಸ್ವಾನಕ್ಕೆ ವರ್ಗಾಯಿಸಲ್ಪಟ್ಟಿರುವ ಶ್ರೀ ರೆಬೆಲ್ಲೋರವರು ಧನ್ಯವಾದಗಳನ್ನಿತ್ತರು.

ಮಾಜಿ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಆಗಮನ—ಉಡುಪಿ ತಾಲೂಕ ಭೂಮಾಲಿಕರ ಮತ್ತು ಕೃಷಿಕರ ಸಂಘದ ಪ್ರತಿನಿಧಿಗಳ ಸಭೆಯು ತಾ. 23ರಂದು ರಾತ್ರಿ ಶ್ರೀ ಬಿ. ವಾಸುದೇವರಾವ್, ಆಡ್ವೋಕೇಟ್, ಅವರ ಮನೆಯಲ್ಲಿ ಜರಗಿತು. ಈ ಸಭೆಗೆ ಚಿತ್ತೈಸಿದ ಮೈಸೂರಿನ ಮಾಜಿಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ಜಕ್ತಿ ಸಮಿತಿ ವರದಿಯ ಕುರಿತು ಈ ಸಂಘದ ಅಭಿಪ್ರಾಯ ಭೇದಗಳ ಮಾಹಿತಿ ಕೊಡಲಾಯಿತು. ಸಂಘದ ಅಧ್ಯಕ್ಷ ವಕೀಲ್ ಶ್ರೀ ಬಿ. ತೀನಪ್ಪ ಹೆಗ್ಡೆಯವರು ಸ್ವಾಗತಿಸಿ ಪೂಮಾಲೆಯನ್ನಿತ್ತರು. ಶ್ರೀ ಎ. ಲಕ್ಷ್ಮೀನಾರಾಯಣ ರಾಯರು ಧಾರ್ಮಿಕ ಸಂಸ್ಥೆಗಳನ್ನು ಜಕ್ತಿ ಸಮಿತಿಯವರ ಆಧಾರದ ಮೇಲೆ ರೂಪಗೊಳ್ಳುವ ಕಾನೂನಿಂದ ಹೊರತು ಪಡಿಸಬೇಕೆಂದರು. ಶ್ರೀ ಹನುಮಂತಯ್ಯನವರು ಉತ್ತರಿಸುತ್ತಾ, ಜಕ್ತಿ ಸಮಿತಿಯು ವರದಿ ಮತ್ತು ಶಿಫಾರಸುಗಳು ನೂತ್ರ ನಮ್ಮ ಮುಂದಿವೆ. ಆದು ಯಾವ ರೂಪದಲ್ಲಿ ಕಾನೂನಾಗಿ ಬರುತ್ತದೆ ಎಂದು ನೋಡಬೇಕಾಗಿದೆ. ಸರಕಾರವೂ ಜನತೆಯ ಅಭಿಪ್ರಾಯಗಳನ್ನು ವಿವರಿಸಿ ತ್ತಿದೆ. ದ. ಕ. ಜಿಲ್ಲೆಯ ಎಮ್. ಎಲ್. ಎ. ಗಳೂ ಕಾಂಗ್ರೆಸ್ ಕಮಿಟಿಯವರೂ ಜಿಲ್ಲೆಯ ಪರವಾಗಿ ಕಾರ್ಯಾಸತ್ತರಾಗಿರುವರೆಂದು ಕೇಳಿದ್ದೇನೆ. ನಾನು ಕೂಡಾ ಸಾಧ್ಯವಿದ್ದಷ್ಟು ಸಹಕಾರ ನೀಡುತ್ತೇನೆಂದು ಹೇಳಿದರು. ಬಳಿಕ ಭೋಜನ ಸತ್ಕಾರವಾಯಿತು.

ಎಂ. ಜಿ. ಯಂ ಕಾಲೇಜು ಯೂನಿಯನಿನ—ಆಶ್ರಯದಲ್ಲಿ, ಇತ್ತೀಚೆಗೆ ವಿದೇಶ ಪ್ರವಾಸ ಮಾಡಿಕೊಂಡು ಬಂದಿರುವ ಶ್ರೀ ಟಿ. ಎ. ಪೈಗಳು ವಿದೇಶ ಪ್ರವಾಸದ ಅನುಭವಗಳ ಕುರಿತು ತಾ. 26ರಂದು ಭಾಷಣ ಮಾಡಿತ್ತರು.

ತಾ. 21ರಲ್ಲಿ ಶ್ರೀ ಬಿ ಕೇಶವ ಪೈಗಳು 'ಸಹದೇನ ಧರ್ಮ' ಎಂಬ ವಿಷಯದ ಕಾಲ ಕ್ಷೇಪ ನೀಡಿದರು.

ಮೈಸೂರು ಹಿಂದೀ ಪ್ರಚಾರ ಪರಿಷತ್—ಮೈಸೂರು ಸರಕಾರದಿಂದ ಮಂಜೂರಾತಿ ಪಡೆದ ಈ ಹಿಂದೀ ಪ್ರಚಾರ ಪರಿಷತ್ತಿನ ಹಿಂದೀ ಪರೀಕ್ಷೆಗಳಾದ ಪ್ರಥಮ, ಮಧ್ಯಮ, ಪ್ರವೇಶ, ಉತ್ತಮ ಮತ್ತು ಹಿಂದೀರತ್ನ ಪರೀಕ್ಷೆಗಳ ನೂತನ ಕೇಂದ್ರವು

ಉಡುಪಿಯಲ್ಲಿ ಅಂಬಲಪಾಡಿಯ ಗೀತಾ ಭವನದಲ್ಲಿ ಹೊಸತಾಗಿ ತೆರೆಯಲಾಗಿದೆ. ಮುಂದಿನ ಪರೀಕ್ಷೆಯು ಫೆಬ್ರವರಿ

ಮಹತ್ವದ ಸುದ್ದಿಗಳು

ತಲೆ ಕೆಳಗಾಗದು!

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅಧಾರಸ್ತಂಭಗಳಂತಿರುವ ಉಕ್ಕಿನ ಕಾರಖಾನೆಗಳು, ದೊಡ್ಡ ಬಂದರುಗಳ ವಿಸ್ತರಣೆ, ರೇಲ್ವೆಗಳ ಅಭಿವೃದ್ಧಿ ಮತ್ತು ಕೆಲವು ವಿದ್ಯುಚ್ಛಕ್ತಿ ಯೋಜನೆಗಳಿಗೆ ಎಂತಹ ಸಂದರ್ಭ ಬಂದರೂ ಧಕ್ಕೆ ತಗಲಲಾರದೆಂದೂ, ವಿದೇಶವಿನಿಮಯಗಳ ವಿಶೇಷ ಕೊರತೆಯುಂಟಾದರೆ ಸಾಮಾನ್ಯ ವಿದ್ಯುಚ್ಛಕ್ತಿ ಯೋಜನೆಗಳು ಮಾತ್ರ ಹಿಂದುಳಿಯುವುವೆಂದೂ ಭಾರತೀಯ ಆರ್ಥಿಕ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿ ಸಂಸತ್ ಕಾಂಗ್ರೆಸ್ ಸದಸ್ಯರೆದುರು ತನ್ನ ವಿದೇಶ ಸಂಚಾರದ ಫಲಶ್ರುತಿಯನ್ನಾಗಿ ಆಡಿದ್ದಾರೆ.

ಹಸಿಗಳು ಹಳ್ಳಕ್ಕೆ ಸೇರಲಿ

ಭಾರತದಲ್ಲಿನ ಬೇರೆ ಬೇರೆ ಸಣ್ಣ ಸಣ್ಣ ನೊತ್ತದ ಬಂಡವಳವಿರುವ ಬೇಂಕುಗಳು ಯಾವುದಾದರೂ ದೊಡ್ಡ ಬೇಂಕುಗಳೊಡನೆ ಸೇರ್ಪಡೆಹೊಂದಿ, ಮುಂದಿನ ಕೆಲ ವರ್ಷಗಳಲ್ಲಿ ಉದ್ಭವಿಸುವ ಭಾರತದ ವಾಣಿಜ್ಯ ಪರಿಸ್ಥಿತಿಗಳಿಗೆ ಈಗಲೇ ಅನುಕೂಲ ಮಾಡಿಕೊಳ್ಳಬೇಕೆಂದು ಭಾರತದ ರಾಜ್ಯಬೇಂಕಿನ ಉಪಾಧ್ಯಕ್ಷ ಶ್ರೀ ಗಾಡಗೀಳರು ಟಿಕ್ಕ ಪಟ್ಟ ಬೇಂಕರ್ಸ್‌ಗಳಿಗೆ ಉಪದೇಶವಿತ್ತಿರುವರು.

ಮೇಲುಗಾಡಿಯ ಸ್ವರ್ಗಯಾತ್ರೆ!

ಮುಂಬಯಿಯಿಂದ ಕರ್ನಾಟಕ ಮುಂಬಯಿ ಕಲ್ಕತ್ತ ಮೇಲುಗಾಡಿಯು ಕೇಂದ್ರ ರೇಲ್ವೆಯ ಉಗತಪುರಿ ಭಸಾವಳ ವಿಭಾಗದ ಪಡಾಲಿ ಹಾಗೂ ಅಸಾವಳ ನಿಲ್ದಾಣಗಳ ನಡುವೆ ಡಬ್ಬಿಗಳು ಉರುಳಾಡಿದ ದರ ಪರಿಣಾಮವಾಗಿ ಅಪಘಾತ ಘಟಿಸಿತು. ಇದರಿಂದಾಗಿ ನಾಲ್ಕು ಗಾಡಿಗಳು ಹುಡಿಯಾಗಿರುವುವೆಂದೂ ೯ ಜನರು ಮರಣಗೊಂಡಿರುವರೆಂದೂ ಜಾಗ ಜನರು ಗಾಯಿಲರಾಗಿರುವರೆಂದೂ ತಿಳಿದು ಬಂದಿದೆ. ಈ ಅವಘಟನೆಯು ಕಾರಣವು ದುರ್ಘಡಿಕೋರರ ಕಾರಸ್ಥಾನವೆಂದು ಅಭಿಪ್ರಾಯಪಡಲಾಗುತ್ತದೆ.

ಕಾನೂನು ಬೇಡ

ಸ್ಪರ್ಧಾವನವು ಆನೈತಿಕ ವ್ಯವಹಾರವೆಂಬುದನ್ನು ಜನತೆಗೆ ಮಂದಟ್ಟುಮಾಡಿಸಿ ಭಾರತದ ರಾಜಧಾನಿಯಲ್ಲಿ ಪಹರೆ ಇದಕ್ಕೆ ನಿರೋಧವನ್ನು ತರಬೇಕಾಗುತ್ತದೆ. ಇಲ್ಲಿ ಬೇರೆ ಬೇರೆ ರಾಷ್ಟ್ರಗಳ ಜನರು ಬರುತ್ತಿರುವುದರಿಂದ ಮತ್ತವರು ವಧ್ಯ ಪಾತ್ರರಾಗಿರಬಹುದಾದುದರಿಂದ ಒಂದು ಕಾನೂನಿನ ಬಲದಿಂದ ಅನನ್ನು ತಡೆಗಟ್ಟುವುದು ಸಾಧ್ಯವಲ್ಲ ಈ ವಿಷಯದಲ್ಲಿ ಸರಕಾರದ ಕಾರ್ಯಕ್ರಮಗಳಿಗಿಂತಲೂ ಸಾರ್ವಜನಿಕರು ಬಹಳ ಆಸ್ಥೆವಹಿಸಬೇಕಾಗಿದೆ ಎಂದು ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ಪಾರ್ಲಿಮೆಂಟಿನ ಸಪ್ತಾಹದ ಸಮಾರೋಪ ಭಾಷಣದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಪಂಪುಗಳಿಗೆ ವಿದ್ಯುತ್

ಇಂದಿನ ಗಂಭೀರ ಪರಿಸ್ಥಿತಿಗಳನ್ನು ಲಕ್ಷಿಸಿ ನೀರಾವರಿ ಕೆಲಸಕ್ಕೆ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದೂ ಆದರೆ ಸದ್ಯದ ಸರಕಾರಿ ವರ್ಷದ ಕೊನೆಯ ವರೆಗೆ ಪ್ರತಿ ಕುದುರೆ ಬಲಕ್ಕೆ ಬಂಡವಾಳ ತೊಡಗಿಸುವ ಪರಮಾವಧಿ ಮಿತಿಯನ್ನು ಒಂದು ಸಾವಿರದಿಂದ ೧೫೦೦ ರೂಪಾಯಿಗಳಿಗೆ ಹೆಚ್ಚಿಸಲು ಮೈಸೂರು ಸರಕಾರದ ವಿದ್ಯುತ್ ಮಂಡಳಿವು ನಿರ್ಧರಿಸಿದೆ. ಹಳೆಯ ಮೈಸೂರು ಪ್ರದೇಶಕ್ಕೆ ಸೀಮಿತ ಉಳಿದ ಮೈಸೂರು ಭಾಗಕ್ಕೆ ಜಾಗ ಪಂಪುಗಳನ್ನು ಮಂಜೂರು ಮಾಡಿದೆ.

ಬಾಲದ ಹಿಂದೆ ನಾಯಿಯೆ?

ಪಾಕಿಸ್ತಾನದ ಮೇಲೆ ಅಕ್ರಮಣ ನಡೆದಲ್ಲಿ ಜಮೆರಿಕವು ಖಡಕ್ಕೆ ಸಂಪೂರ್ಣ ನೆರವೀಯುವುದೆಂದೂ, ಆದರೆ, ತಾನು ಪಾಕಿಸ್ತಾನದ ಮೇಲೆ ಅಕ್ರಮಣವು ನಡೆಯುವುದೆಂದು ತಿಳಿಯುವುದಿಲ್ಲವೆಂದೂ ಅಮೆರಿಕದ ವಿದೇಶ ಮಂತ್ರಿ ಡಲ್ಲೆಸರು ಪಾಕ್ ವಿದೇಶ ಮಂತ್ರಿ ಫಿರೋಜ್‌ಖಾನ್ ನೂನರಿಗೆ ಹೇಳಿರುವರೆಂದು ವರದಿಯಾಗಿದೆ.

ನಾಗಾಜನರಿಗೆ ರಾಜ್ಯ

ಅಸ್ಸಾಮು ಮತ್ತು ಈಶಾನ್ಯ ಸರಹದ್ದಿನ ಗುಡ್ಡಗಾಡುಗಳ ಜನರು ವಾಸವಾಗಿರುವ ಪ್ರದೇಶಗಳನ್ನು ಬೇರ್ಪಡಿಸಿ ಪ್ರತ್ಯೇಕ ನಾಗಾ ರಾಜ್ಯವನ್ನು ಸ್ಥಾಪಿಸುವ ನಿರ್ಧಾರಕ್ಕೆ ಸರಕಾರವು ಬಂದಿದ್ದು, ಈ ಬಾರಿಯ ಲೋಕಸಭೆಯಲ್ಲಿ ಈ ವಿಧೇಯಕವು ಸರ್ವಾನುಮತದಿಂದ ಮಂಜೂರಾಯಿತು. ಅನುಕೂಲ ವಾತಾವರಣವು ಒದಗಿ ಬಂದರೆ ದಶಂಬರ ೧೫ನೆ ದಿನಾಂಕದಿಂದ ಈ ರಾಜ್ಯವು ಜೀವಕಳೆಯನ್ನು ಪಡೆಯುವುದು. ಕೇಂದ್ರದ ನೇರವಾದ ಆಡಳಿತೆಯ ಕೆಳಗೆ ಇದಿರುವುದು.

ಮಂತ್ರಿಮಂಡಲ ಉರುಳುವುದೆ?

ರಿಪಬ್ಲಿಕನ್ ಪಕ್ಷದ ನಾಯಕ ಡಾ. ಖಾನ್ ಸಾಹೇಬರು ತನ್ನ ಪಕ್ಷವು ಪ್ರತ್ಯೇಕ ಮತದಾನ ಪದ್ಧತಿಯನ್ನು ತರಲಿಚ್ಛಿಸುವ ಮುಸ್ಲಿಂ ಲೀಗಿನೊಂದಿಗೆ ಎಂದಿಗೂ ಸಹಕರಿಸದೆಂದೂ, ಚತೆ ಮತದಾನ ಪದ್ಧತಿಯನ್ನೇ ಬೆಂಬಲ ಕೊಡುವುದೆಂದೂ ಹೇಳಿದುದರಿಂದ, ಪಾಕ್ ಮಂತ್ರಿ ಮಂಡಳವು ಮುನಃ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದಿದೆ. ಉಳಿದ ರಾಜಕೀಯ ಪಕ್ಷಗಳಲ್ಲಿಯೂ ಚುಂದ್ರಿಗರ್ ಸರಕಾರದ ಕಡೆಗೆ ಜಿಗುಪ್ಸೆಯೇ ಅಧಿಕವಾಗಿ ಕಾಂಡ ಬಂದು ಮಂತ್ರಿಮಂಡಲವು ಸದ್ಯವೇ ಉರುಳುವ ಸಂಭವವಿದೆ.

ಸೆರೆಮನೆಯಲ್ಲಿ ನಾಯಕರು

ಭಾರತವ ಘಟನೆಯನ್ನು ಸುಡುವ ನೂತನೆ ಚಳವಳವನ್ನು ಕೈಗೊಳ್ಳಲಿದ್ದ ದ್ರಾವಿಡ ಕಜಗಂನ ಜನಪ್ರಿಯ ನಾಯಕ ತಂದೆ ಶ್ರೀ ರಾಮಸ್ವಾಮಿ ನಾಯ್ಕರರ ಜಯಂತಿ ಸಡಿಯಲಿಮ್ದು, ಆ ಪರೀಕ್ಷೆಯಲ್ಲಿ ಕೂಡಬಯಸುವ ವಿದ್ಯಾರ್ಥಿಗಳು ದಶಂಬರ ೩೦ಗಳ ಒಳ ದಿನಾಂಕದೊಳಗೆ ತಮ್ಮ ಅವೇದನ ಪತ್ರಗಳನ್ನು ಗೀತಾ ಭವನದ ಕಾರ್ಯದರ್ಶಿಯವರಿಗೆ ನಿರ್ದಿಷ್ಟ ಶುಲ್ಕದೊಂದಿಗೆ ಕಳುಹಿಸತಕ್ಕದ್ದು. ಹೆಚ್ಚಿನ ವಿವರಗಳಿಗೂ, ಅವೇದನಾ ಪತ್ರ, ಪಾಠ್ಯ ಕ್ರಮ, ನಮುನಾವಳಿ ಇತ್ಯಾದಿಗಳಿಗೂ ಆಪೇಕ್ಷಿತರು ಕಾರ್ಯದರ್ಶಿ, ಗೀತಾಭವನ, ಅಂಬಲಪಾಡಿ, ಉಡುಪಿ ಇವರೊಡನೆ ಪತ್ರವ್ಯವಹಾರ ನಡೆಸಬಹುದು; ಇಲ್ಲವೇ ಸಂಜೆ ಮಂಜಾನೆ ಭೇಟಿಯಾಗಬಹುದು.

ಗುರುಪುರ-ಕೈರಂ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ. ಟಿ ಮೋಹನ ಪೈ ಗಳ ಗೌರವಾರ್ಥವಾಗಿ ಗುರುಪುರದ ಹಿಂದೂ ಬೇಸಿಕ್ ಸೀನಿಯರ್ ಶಾಲೆಯಲ್ಲಿ ತಾ. 18 ರಂದು ಶ್ರೀ. ಎಸ್. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು.

ಭಾರತೀಯ ಐಕ್ಯದ ಏಕಮಾತ್ರ ಉಪಾಯ—

ಹಿಂದೀ ಭಾಷಾಧ್ಯಯನ

ಅಖಿಲ ಭಾರತೀಯ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಶ್ರೀನಾರಾಯಣರು ಇಂಗ್ಲಿಷಿನ ಬಗ್ಗೆ ಜನತೆಗಿರುವ ಮೋಹವನ್ನು ತೊರೆದು, ಹಿಂದಿಯನ್ನು ಸರಕಾರೀ ಭಾಷೆಯನ್ನಾಗಿ ಮಾಡುವಂತೆ ಸಹಕರಿಸಲು ಪ್ರಾರ್ಥಿಸಿಕೊಂಡಿದ್ದಾರೆ. ಹಿಂದಿಯನ್ನು ಭಾರತದ ಸರಕಾರೀ ಭಾಷೆಯನ್ನಾಗಿ ಮಾಡುವಲ್ಲಿ ಉತ್ತರ ಭಾರತೀಯರು ಯಾವುದೇ ಕಹಿ ಪ್ರಸಂಗಗಳನ್ನು ತರಲು ಪ್ರಯತ್ನಿಸಬಾರದು; ಮತ್ತು ದಕ್ಷಿಣ ಭಾರತದವರು ಹಿಂದಿಯು ತಮ್ಮ ಮೇಲೆ ವಶ್ಯತೆಯಿಂದ ಹೇರಲ್ಪಟ್ಟಿದೆಯೆಂದು ಭಾವಿಸಬಾರದು ಎಂದವರು ಕರೆಯಿತ್ತಿರುವರು.

"ಇನ್ನೂ ಕೆಲವಾರು ವರ್ಷಗಳವರೆಗೆ ಇಂಗ್ಲಿಷ್ ಭಾಷೆಯನ್ನೇ ಸರಕಾರಿ ಭಾಷೆಯನ್ನಾಗಿ ಮುಂದುವರಿಸಿಕೊಂಡು ಹೋಗಬೇಕೆಂಬವರೂ ನಮ್ಮಲ್ಲಿದ್ದಾರೆ. ನಾವೇನೂ ಇಂಗ್ಲಿಷ್ ಭಾಷೆಗೆ ವಿರೋಧಿಗಳಲ್ಲ ಜಗತ್ತಿನಲ್ಲಿ ಬಹಳ ಪ್ರಮುಖ ಸ್ಥಾನವನ್ನು ಪಡೆದ ಭಾಷೆಯಿದು. ಈ ಭಾಷೆಯಲ್ಲಿ ಅಪಾರ ಸಾಹಿತ್ಯಕೃತಿಗಳಿದ್ದು, ಅಂತರಾಷ್ಟ್ರೀಯ ವ್ಯವಹಾರಕ್ಕೆ ಇದು ಅತ್ಯಂತ ಸಹಕಾರಿಯಾಗಿದೆ ಹಿಂದಿ ಭಾಷೆಯನ್ನು ಸರಕಾರಿ ಭಾಷೆಯನ್ನಾಗಿ ಮಾಡುವಲ್ಲಿ ಯಾವ ಕಾರ್ಯವನ್ನೂ ಕೈಗೊಳ್ಳದೆ ಆ ಗದ್ದಿಗೆ ಭಾಷೆಯನ್ನೇ ನಮ್ಮ ಸರಕಾರೀ ಭಾಷೆಯನ್ನಾಗಿ ಯಾವ ಉದ್ದೇಶಕ್ಕಾಗಿ ಮುಂದುವರಿಸಿಕೊಂಡು ಹೋಗಬೇಕೆಂದು ನನಗೆ ತಿಳಿಯುವುದಿಲ್ಲ ಒಂದು ಪರದೇಶೀಯ ಭಾಷೆಯು ಎಂದೇ ಆದರೂ ಸ್ವದೇಶೀಯ ಭಾಷೆಯ ಸ್ಥಾನವನ್ನು ಪಡೆಯಲಾರದು. ಆದುದರಿಂದ ಸರಕಾರಿ ಭಾಷೆಯಾಗಿ ಹಿಂದಿಯ ಸ್ಥಾನವನ್ನು ಇಂಗ್ಲಿಷ್ ಭಾಷೆಯು ಆಕ್ರಮಿಸಬಾರದು.

"ಹಿಂದಿಯನ್ನು ನಮ್ಮ ರಾಷ್ಟ್ರಭಾಷೆಯನ್ನಾಗಿ ಏಕಾಯವಲ್ಲಿ ಅಪಸ್ವರವನ್ನೆಬ್ಬಿಸುವ ಕೆಲಸಂಖ್ಯೆಯ ಭಾರತೀಯರಿರುವುದು ನಮ್ಮ ದುರದೃಷ್ಟ. ನಾವು ದಕ್ಷಿಣ ಭಾರತದ ಇಲ್ಲನೇ ಮತ್ತಾವ ಪ್ರದೇಶದ ನಮ್ಮ ಸಹೋದರರ ಮನೋವೃತ್ತಿಯ ಬಗ್ಗೆ ಸಂದೇಹಪಡಬೇಕಾಗಿಲ್ಲ, ಉತ್ತರ, ಪಶ್ಚಿಮ, ಪೂರ್ವ ಭಾರತೀಯರೆಲ್ಲರೂ ದೇಶಾಭಿಮಾನದಲ್ಲಿ ದಕ್ಷಿಣ ಭಾರತದವರಿಗೂ ಇದೆ ದಾಕ್ಷಿಣ್ಯಾತ್ಯರು ಹಿಂದಿ ಭಾಷೆಯನ್ನು ಅಭ್ಯಸಿಸಲು ಪಡಬೇಕಾಗಿರುವ ಸಂಕಷ್ಟಗಳ ಪರಿವೆಯೂ ನಮಗಿದೆ. ಆದರೆ, ಕಳೆದ ಕೆಲವು ದಶಕಗಳಿಂದ ದಕ್ಷಿಣದವರು ಸ್ವೇಚ್ಛೆಯಿಂದಲೇ ಹಿಂದಿಯನ್ನು ಅಭ್ಯಾಸ ಮಾಡುತ್ತ ಬಂದಿರುವುದು ಸಂತೋಷದ ಸಂಗತಿ. ಉತ್ತರ ಭಾರತೀಯರು ಸರಕಾರಿ ಭಾಷೆಯನ್ನು ಹಿಂದಿಯನ್ನಾಗಿಸುವಲ್ಲಿ ತಮ್ಮಿತರ ನೋದರರ ಮನಸ್ಸಿಗೆ ನೋವನ್ನುಂಟುಮಾಡಬಾರದು; ದಾಕ್ಷಿಣ್ಯಾತ್ಯರೂ ಆ ಬಗ್ಗೆ ಬಿಗುಮಾನದಿಂದಿರಬಾರದು. ಇಂತಹ ಮನೋಭಾವನೆಗೆ ಯಾರಲ್ಲಿಯೂ ಇರಲಾರದು. ರಾಷ್ಟ್ರೀಯಾತೆಯ ಐಕ್ಯ ಮತ್ತು ಭವ್ಯತೆಯು ಬೃಷ್ಟಿಯಿಂದ ಮಾತ್ರ ನಾವೀ ಸಂಗತಿಯನ್ನು ಪರಿಶೀಲಿಸಬೇಕು. ಸಮ್ಮೇಲನಾಧ್ಯಕ್ಷರ ಮುಂದಾಳುತನದಲ್ಲಿ ಈ ಮಹಾ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಿಕೊಳ್ಳಬಲ್ಲೆವೆಂದು ನನಗೆ ದೃಢ ವಿಶ್ವಾಸವಿರುವುದು. ನಮ್ಮ ಪ್ರಧಾನಿಯವರು ಭಾರತದ ನವೀನ ಭಾಷೆಗಳನ್ನೆಲ್ಲವೂ ರಾಷ್ಟ್ರ ಭಾಷೆಗಳೆಂಬ ಮಾತನ್ನು ಆಗಾಗ ಹೇಳುತ್ತಾ ಬಂದಿದ್ದಾರೆ. ಅವುಗಳು ಸಹ ಹಿಂದಿಯಷ್ಟೇ ಮರ್ಯಾದ ಮತ್ತು ಸೌಕರ್ಯಗಳನ್ನು ಪಡೆಯಲು ಅರ್ಹವಾಗಿವೆ. ಅಖಿಲ ಭಾರತೀಯ ಉದ್ದೇಶಗಳಿಗಾಗಿ ಮಾತ್ರ ಹಿಂದಿಯು ರಾಷ್ಟ್ರ ಭಾಷೆಯಾಗುವುದು. ಆದರೆ, ಬೇರೆ ರೀತಿಯಲ್ಲಿ ಸಕಲ ದಕ್ಷಿಣ ಭಾರತದ ಹಲವಾರು ಭಾಷೆಗಳಲ್ಲಿ ಯಾವುದಾದರೊಂದನ್ನು ಕಲಿಯುವ ಮೂಲಕ (ತಮ್ಮ ಭಾಷೆಯನ್ನು ಹೊರತಾಗಿ) ತಮ್ಮನುಸರಿಸಿ ಭಾವನೆಯನ್ನು ಪ್ರದರ್ಶಿಸಬೇಕು.

ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ

ದಕ್ಷಿಣದ ಭಾಷೆಗಳಾದ ತಮಿಳು, ತೆಲುಗು, ಮಲೆಯಾಳ, ಮತ್ತು ಕನ್ನಡ ಎಂಬೀ ನಾಲ್ಕು ಭಾಷೆಗಳಲ್ಲಿ ಜ್ಞಾನವಾಯಕ್ಷಣ ಸಂಸ್ಕೃತಿಯ್ಕೋತ್ಕರವೂ ಅದ ಉಜ್ಜೀವುಟ್ಟದ ಪುಸ್ತಕಗಳನ್ನು ಸಾಧ್ಯವಾದಷ್ಟು ಕಡಿಮೆ ಬೆಲೆಗೆ ಪ್ರಕಟಿಸಲು ಮತ್ತು ಪ್ರೋತ್ಸಾಹಿಸಲು ಮದಿರಾಸಿನಲ್ಲಿ 'ಫೋರ್ಡ್ ಫೌಂಡೇಷನ್' ಸಂಸ್ಥೆಯು ಡಿಪಾರ್ಟ್‌ಮೆಂಟ್ ಮತ್ತು ಉದಾತ್ತತೆಗಳೇ ಈ ಪುಸ್ತಕ ಸಂಸ್ಥೆಯ ಸ್ಥಾಪನೆಗೆ ಕಾರಣವಾಗಿವೆ. ದಕ್ಷಿಣಭಾರತದ ಏಳು ಪ್ರಸಿದ್ಧವಿದ್ಯಾನಿಲಯಗಳ ಉಪಕುಲಪತಿಗಳು, ಫೋರ್ಡ್ ಫೌಂಡೇಶನ ಪ್ರತಿನಿಧಿಗಳು ಇವರ ಸಹಯೋಗದಿಂದ ಈ ಸಂಸ್ಥೆ ಜನ್ಮತಾಳಿದೆ. ಇಂಗ್ಲಿಷ್ ಭಾಷೆಯನ್ನರಿಯದ ಬಹು ಸಂಖ್ಯಾಕ ಜನತೆಗೆ ಬೇರೆ ಭಾಷೆಗಳಲ್ಲಿ ಉತ್ತಮ ಪುಸ್ತಕಗಳನ್ನು ಒದಗಿಸುವುದೂ ಪುಸ್ತಕಾರಿಕರಿಗೆ ಸರಿಪಡಿಸುವುದೂ ಈ ಸಂಸ್ಥೆಯ ಉದ್ದೇಶವಾಗಿವೆ. ಇದಕ್ಕಾಗಿ ಪ್ರಕೃತ ನೂರೈ ಅರ್ಥಾಪನೆಯೊಂದನ್ನು ಏರ್ಪಡಿಸಿಕೊಂಡಿದೆ. ತನ್ನ ಪ್ರಥಮ ಪ್ರಯತ್ನಗಳನ್ನು ಇದೀಗ ಪ್ರಕಟಿಸಿಕೊಳ್ಳುತ್ತಿದೆ. ಈ ಸಂಚಿಕೆಯ ಇನ್ನೊಂದೆಡೆ ಕಾಟ್ಟರವರಂತೆ ಜಕ್ಕವರ್ತಿ ರಾಜಗೋಪಾಲಾಚಾರ್ಯರಿಂದ ಸಿಲ್ಲನೆಯ ಕಾಡು' ಎಂಬ ಕಥಾಸಂಗ್ರಹ, ಶ್ರೀ ಕೆ ಕೆ ಪಿಳ್ಳೈ ರವರ 'ದಕ್ಷಿಣ ಭಾರತದ ಇತಿಹಾಸ', ಶ್ರೀ ವಿ ಜಂಗಮ ಗಾಡರ 'ಕಥಾಸಂಗ್ರಹ', ಶ್ರೀ ಎಂ ಮಾಯಪ್ಪ ಭಟ್ಟರ 'ಅಡಕಸ್ಥಳ ನತ ಗಸ್ತಳ' ಕಾವ್ಯಸಂಗ್ರಹ, ನೆಹರೂ ಬರೆದಿರುವ ಪತ್ರಗಳ ಸಂಗ್ರಹ 'ಲೆಟರ್ಸ್ ಟು ಚೀಫ್ ಮಿನಿಸ್ಟರ್ಸ್' ಇವು ಪ್ರಸಿದ್ಧವಿಸ್ಸಿಂಲ್ ಷಿನ್ ಇವರ 'ಗಾಂಧಿ' ಸೇರಿದಂತೆ ಮುಂದಿನ ಪುಸ್ತಕಗಳು ಇದೀಗ ಕನ್ನಡವಲ್ಲಿ ಸ್ವಲ್ಪ ಕಟವಾಗುತ್ತಿವೆ. ಕನ್ನಡವಲ್ಲದೆ ಪ್ರಕಟವಾಗುವ ಪುಸ್ತಕಗಳ ಪಟ್ಟಿಯಲ್ಲಿ ಮೇಲೆ ಕೊಟ್ಟಿರುವಲ್ಲಿ ಜಗದಗಲ ವ್ಯವಸ್ಥೆಯಾಗಿದೆ.

ಈ ಸಂಸ್ಥೆಯು ಪ್ರಕಾರಕರಿಗೆ ಸಲ್ಲಬೇಕಾದ ಪ್ರತಿಯಂತೆ ನೆವಾಗಿ ಉತ್ತಮ ಪುಸ್ತಕಗಳ ಪ್ರಕಾಶಕ್ಕೆ ಅಲ್ಪವಿತ್ತು ಸಹಾಯ ಮಾಡುತ್ತಿದೆ

ಮಂಗಳೂರು

ಕರ್ನಾಟಕ ಬೇಂಕಿನಲ್ಲಿ ಸತ್ಕಾರ ಸಮಾರಂಭ—ಸ್ಥಳೀಯ ಕರ್ನಾಟಕ ಬೇಂಕಿನ ಡ್ಯಾರೆಕ್ಟರ್ ಮಂಡಳಿಯವರು ತಾ. 22 ರಂದು ತಮ್ಮ ಬೇಂಕಿನ ವಹಾರದಲ್ಲಿ ಪದವೀಧರ ಎಸೆಂಬ್ಲಿ ಸ್ಪೀಕರರಾದ (ಡಾ|) ಯು. ಕೃಷ್ಣರಾಯರಿಗೆ ಒಂದು ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ಬೇಂಕಿನ ಚೆರ್‌ಮೆನ್ ಶ್ರೀ ಕೆ. ವ್ಯಾಸರಾಯ ಆಚಾರ್, ಜನರಲ್ ಮೆನೇಜರ್ ಶ್ರೀ ಕೆ. ಎಸ್. ಬಾಸ್ರಿ ಮತ್ತು ಏಜಂಟರಾದ ಶ್ರೀ ಕೆ. ವಾಸುದೇವರಾಯರು ಮುಖ್ಯ ಅತಿಥಿಗಳಿಗೆ ಯೂ ಪಾಲೆಯನ್ನರ್ಪಿಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತಭಾಷಣ ಮಾಡಿದರು. ಈ ಸಮಾರಂಭಕ್ಕೆ ಸಂಬಂಧ ಅನ್ಯ ಸುಮನಸ್ಕರೇ ನೇಕರು ಬಂದಿದ್ದರು.

ಸಹಕಾರಿ ಕಾರ್ಯಕರ್ತರ ಸಮ್ಮೇಳನ—ದ. ಕ. ಜಿಲ್ಲಾ ಸೆಂಟ್ರಲ್ ಕೋಸ್ ರೇಟಿವ್ ಬೇಂಕಿನ ಸಭಾಭವನದಲ್ಲಿ ತಾ. 24ರಂದು ಜರಗಿದ ಸಹಕಾರೀ ಕಾರ್ಯಕರ್ತರ ಸಮ್ಮೇಳನದಲ್ಲಿ, ಮೈಸೂರು ವಿಭಾಗದ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಸಿ. ಎ. ಜಮಖಂಡಿ ಪುರಿ, ಅವರು ಮಾತನಾಡುತ್ತಾ, ರೈತರು ಸಹಕಾರಿ ಸಂಘಗಳಿಂದ ಪಡೆದ ಸಾಲದಿಂದ ಅವರ ಉತ್ಪಾದನೆ ಹೆಚ್ಚುವಂತಾಗಬೇಕು. ಸಹಕಾರಿ ಸಂಘಗಳು ಬರೇ ಸಾಲ ಕೊಡುವ ಯಂತ್ರಗಳಾಗಿರದೆ ಜನ್ಮಿಗಾಗಿ ಮಡಿಯುವ ಶಕ್ತಿಯುತ ಸಂಸ್ಥೆಗಳಾಗಿರಬೇಕೆಂದರು. ಜಿಲ್ಲಾ ಕಲೆಕ್ಟರ್ ಶ್ರೀ ಪೈ ಸಿ. ಹೊಂಬಾಳ್ ಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು.

ವಾರ್ಷಿಕ ಮಹಾಸಭೆ—ಅಖಿಲಭಾರತ ಅಂಚೆ ಕೆಲಸಗಾರರೆ ಸಂಘದ ಪೋಸ್ಟ್ ಮೇನ್ ಮತ್ತು ನಾಲ್ಕನೇ ತರಗತಿಯ ದಕ್ಷಿಣ ಕನ್ನಡ ಶಾಖೆಯ ವಾರ್ಷಿಕ ಮಹಾಸಭೆಯು ತಾ. 21ರಂದು ಬೆಳಿಗ್ಗೆ ಅಧ್ಯಕ್ಷ ಶ್ರೀ ಬಿ. ಎಸ್. ಭಾಸ್ಕರ್ ರೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಶ್ರೀ ಶ್ರೀನಿವಾಸ ಆಚಾರ್ಯರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀಯುತ ಶೇಷಪ್ಪ ನವರು ವರದಿಯನ್ನೋದಿದರು. ಶ್ರೀಗಳಾವ ಮೈಸೂರಿನ ಎ. ರಾಮಣ್ಣ, ಕೆ. ಪಿ. ಆಚಾರ್ ಸದಾಶಿವರಾವ್, ಎಸ್. ಮಾಧವರಾವ್, ಬಿ. ವಿ. ಜನಾರ್ಧನ್, ಗುಟ್ಟಿಪ್ಪ ಮತ್ತು ಪಿ. ಡಿ. ಬಂಗೇರರೆ ಭಾಷಣಗಳಾದುವು.

ಮದ್ರಾಸು ವಿಶ್ವ ವಿದ್ಯಾಲಯದ ಆಶ್ರಯದಲ್ಲಿ—ಜರಗಿದ ಕಾಲೇಜುಗಳ ಕನ್ನಡ ವಾಕ್ಸ್ಪರ್ಧೆಯಲ್ಲಿ ಮಂಗಳೂರು ಕರಿಕಾಲಿ ಕಾಲೇಜಿನ IV ಬಿ. ಎ ತರಗತಿಯ ಶ್ರೀ ಈಶ್ವರ ಭಟ್ಟರಿಗೆ ಪೊದಲ ಬಹುಮಾನವೂ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಎಮ್. ಎ. ತರಗತಿಯ ಕುಮಾರಿ ಸುಂಗಲಾ ಅವರಿಗೆ ಎರಡನೆ ಬಹುಮಾನವೂ ದೊರಕಿದೆ. ಸ್ಪರ್ಧೆಯು ಮಂಗಳೂರು ಸರಕಾರಿ ಕಾಲೇಜಿನಲ್ಲಿ ನಡೆಯಿತು.

(೯ನೇ ಪುಟಕ್ಕೆ ಮುಂದುವರಿದಿದೆ)

ಬೊಂಬಾಯಿ

ಬೊಂಬಾಯಿ—ದ. ಕ. ಜಿಲ್ಲೆಯ ಸುಪ್ರಸಿದ್ಧ ವಾದ್ಯಗೋಷ್ಠಿಯ ಸರ್ವ ಶ್ರೀ ನಾಡ ಬಿದ್ದೆ ಚಿನ್ನಯ ಸೇರಿಗಾರ, ಕಾರ್ಕಳ ಕಾಳು ಸೇರಿಗಾರ, ಮೂಡಬಿದ್ರೆ ಗೋಪಾಲಕೃಷ್ಣ, ಉಡುಪಿ, ಸುಬ್ರಹ್ಮಣ್ಯ, ಎಲ್ಲೂರು ರಾಘವಣ್ಣ ಸೇರಿಗಾರ, ಉಡುಪಿ ನಾಸು ಸೇರಿಗಾರ ಇವರು ಬೊಂಬಾಯಿಗೆ ಬಂದಿದ್ದು ಅನಿವಲ್ಲರನ್ನು ತಾ. 15ರಂದು ವೇವಾಡಿಗ ಸುಧಾರಕ ಸಂಸ್ಥೆಯವರು ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು.

ಕಟ್ಟಹಾಡಿ—ಭೂಮಸೇಂದ್ರ ಪ್ರೊಡಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ಸ್ಥಾಪಕರ ದಿನ ಮತ್ತು 60 ಪರುಷಗಳ ಸಫಲ ಜೀವನವನ್ನು ಪೂರ್ತಿಗೊಳಿಸಿದ ಡಾ. ಎಸ್. ಆರ್. ಪೈಗಳ ಷಷ್ಟ್ಯಬ್ದಸನ ಸಮಾರಂಭವು ತಾ. 16 ರಂದು ಡಾ. ಟಿ. ಎಸ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಸಂಸ್ಥೆಯ ಡ್ಯಾರೆಕ್ಟರ್ ಶ್ರೀ ವಿಠಲಗಾಳಿ ರಾಮದಾಸ ನಾಯ್ಕರು ದಿನಂಗತ ವಿಠಲಗಾಳಿ ರಾಮಚಂದ್ರ ಯಾನೆ ತಿಮ್ಮ ನಾಯ್ಕರಿಂದ ಪ್ರಾರಂಭಗೊಳ್ಳಲ್ಪಟ್ಟ ಸಂಸ್ಥೆಯ ಈ ತನಕದ ಪ್ರಗತಿಯ ಇತಿಹಾಸವನ್ನು ಒಪ್ಪಿಸಿದರು. ಸಂಸ್ಥೆಯ ಎರಡನೇ ಕಟ್ಟಡಕ್ಕೆ ದಿವಂಗತ ಬಾಗಾಳಿ ಕೇಶವ ನಾಯ್ಕರ ಸವಿ ನೆನಪಿಗಾಗಿ ಕೇಶವ ಸದನ ಎಂದು ನಾಮಕರಣಮಾಡುವಂತೆ ಡಾ ಎಸ್. ಆರ್. ಪೈಗಳನ್ನು ವಿನಂತಿಸಿದರು. ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಬಾಗಾಳಿ ಜನಾರ್ಧನ ನಾಯ್ಕರು ಸುಮ್ಮು ಅತಿಥಿಗಳಿಗೆ ಮಾನಪತ್ರವರ್ಪಿಸಿದರು. ಸಭಿಕರ ಪರವಾಗಿ ಡಾ. ಕೆ. ಜೆ. ಕೆಗೆಯವರು ಮಾತನಾಡಿದರು. ಡಾ. ಎಸ್. ಆರ್. ಪೈಗಳು ಮತ್ತು ಡಾ. ಟಿ ಎಸ್. ಎ. ಪೈಗಳು ಸಮಯೋಚಿತ ಮಾತುಗಳನ್ನಾಡಿದ ಬಳಿಕ ಆಫೀಸು ಮೆನೇಜರ್ ಶ್ರೀ ಕೆ. ವಾಸುದೇವ ಕಾಮತರು ಧನ್ಯವಾದಗಳನ್ನರ್ಪಿಸಿದರು. ಆ ಮೇಲೆ ಭೋಜನಾ ಕಾರ್ಯಕ್ರಮವಾಯಿತು.

ಶ್ರೀ ಟಿ. ಎ. ಪೈಗಳಿಗೆ ಸ್ವಾಗತ ತಾ 22ರಂದು ಭೂವನೇಂದ್ರ ಪ್ರೊಡಕ್ಟ್ಸ್ ಪ್ರೈವೇಟ್ ಲಿಮಿಟೆಡ್—ಇದರ ನಿರ್ದೇಶಕ ಪ್ರವಾಸವನ್ನು ಮುಗಿಸಿಕೊಂಡು ಬಂದಿರುವ ಶ್ರೀ ಟಿ. ಎ. ಪೈಗಳಿಗೆ ಬೃಹತ್ಸಾಕಾರವಾಗಿತ್ತು ಗೌರವಿಸಿದರು. ಶ್ರೀ ರಾಮದಾಸ ನಾಯಕರು ಸ್ವಾಗತ ಭಾಷಣ ಮಾಡಿದರು. ಶ್ರೀ ಜನಾರ್ಧನ ನಾಯ್ಕರು ಶ್ರೀ ಪೈಗಳಿಗೆ ಹೂಮಾಲೆ ಹಾಕಿದರು. ಶ್ರೀ ಟಿ. ಎ. ಪೈಗಳು ತನ್ನ ವಿದೇಶ ಸಂಚಾರದ ಅನುಭವಗಳನ್ನು ವಿವರಿಸಿದರು. ಜರ್ಮನಿ ಜನರ ದೃಷ್ಟಾಂತವನ್ನು ಉದ್ಧರಿಸಿ, ನಮ್ಮ ದೇಶದಲ್ಲೂ ನಮ್ಮ ನೋಟವನ್ನು ಮೂರ್ನಾಡುಗೊಳಿಸಿ ಉತ್ಪಮಶೀಲರಾಗಬೇಕು. ನಮ್ಮಲ್ಲಿ ಸಿಗುವಲಾದ ಪ್ರಾಕೃತಿಕ ಸಂಪತ್ತಿದೆ. ಅದನ್ನು ಸಮುಪಯೋಗಗೊಳಿಸಿಕೊಳ್ಳಬೇಕು ನಾವು ದಕ್ಷತೆಗನ್ನಡ, ಉತ್ತರಕನ್ನಡ, ಶಿವಮೊಗ್ಗ ಜಲ್ಲೆಗಳ ಒಂದು ಸೀಮಿತ ಪ್ರದೇಶವಲ್ಲಿ ಪ್ರಯತ್ನ ನಡೆಸಬೇಕು. ಇದ್ದಿ ಆರಂಭಿಸಿದಷ್ಟೂ, ಸಿಂಚಿಪ ಸಂಪತ್ತೂ ಪೆಮ್ಮುತ್ತ ಸಾಗುರ್ಯವೂ ವಿಪುಲವಾಗಿರುವುದು. ಇವೆನ್ನು ಉಪಯೋಗಿಸಿಕೊಂಡು ದೇಶದ ಸಂಪತ್ತನ್ನು ಹೆಚ್ಚಿಸಬಹುದು ಎಂದರು.

ಮೂಡಬಿದ್ರೆ—ಮೈಸೂರು ಸುಬ್ಬಮಂ ಶ್ರಿಗಳು ತಾ. 21ರಂದು ಮೂಡಬಿದ್ರೆಗೆ ಆಗಮಿಸಿದಾಗ ಅಲ್ಲಿಯ ಭೂಮಾಲಿಕರು ಅವರಿಗೊಂದು ಮನವಿ ಒಪ್ಪಿಸಿದರು. ಶ್ರೀ ನಿಜಲಿಂಗಪ್ಪನವರು ಉತ್ತರವೀಯುತ್ತಾ, ಜಗತ್ತು ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಅದರೊಡನೆ ಪ್ರತಿಯೊಬ್ಬನೂ ತನ್ನಲ್ಲಿ ಬದಲಾವಣೆಗೂ ಶಿಸುಬೇಕಾಗುದು ಅತೀ ಅಗತ್ಯ. ಈ ನಿಯಮಕ್ಕೆ ಭೂಮಾಲಿಕರೂ ಹೊರತಾಗಿರಲು ಸಾಧ್ಯವಿಲ್ಲ. ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯೊಂದು ಯಾವುದನ್ನೇ ಆದರೂ ಮುಂದುನರಿಸಲೇಬೇಕೆಂಬ ನಿಯಮವೇನೂ ಇಲ್ಲ. ಭೂಶಾಸನ ಸಮಿತಿಯ ವರದಿಗೆ ಈ ಜಿಲ್ಲೆಯ ಜನರ ಬಹಳ ವಿರೋಧವಿದೆ. ಹೊಸ ಸಮಾಜವನ್ನು ರಚಿಸುವ ಹಿತ ದೃಷ್ಟಿಯಿಂದಿನದನ್ನು ಮರೆತು ಮುಂದುವರಿಯಬೇಕಾದುದು ಅಗತ್ಯವೆಂದು ಹೇಳಿದರು. ಧರ್ಮದ ಹೆಸರಲ್ಲಿ ಎಷ್ಟೋ ಕಡೆಯಲ್ಲಿ ಅನ್ಯಾಯವಾಗುತ್ತಾ ಇದೆ. ದೇವಸ್ಥಾನಗಳು ತಮ್ಮ ಜಮೀನಿನ ಮೇರೆ ಹೊಂದಿಕೊಂಡಿರಬೇಕಾಗಿಲ್ಲ. ಆದರೆ ಧ್ಯೇಯ ಉತ್ತಮವಾಗಿದ್ದು ದೇಶದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದರಲ್ಲಿ ಆವು ಸಹಾಯಕವಾಗುವುದಾದಲ್ಲಿ ಸರಕಾರವೇ ಅದಕ್ಕೆ ತಕ್ಕ ಪ್ರೋತ್ಸಾಹನವನ್ನು ಕೊಡುವುದು ಎಂದು ಹೇಳಿದರು. ಜಿಲ್ಲೆಯ ವೈಶಿಷ್ಟ್ಯಗಳಾದ ಆಳಿಯ ಸಂತಾನ ಹಾಗೂ ಇತರ ವಿಷಯದ ಕಡೆಗೆ ಸರಕಾರ ಸೂಕ್ತ ಗಮನವನಗಳನ್ನು ಕೊಟ್ಟು ತಕ್ಕ ಶಾಸನ ತರುವುದೆಂದರು.

ಕಾರ್ಕಳ ತಾಲೂಕು ಭೂಮಾಲಿಕ ಸಂಘದ ಪರವಾಗಿ ಶ್ರೀ ಎನ್. ಎಮ್. ಅಡ್ಯಂತಾಯರು ಕೂಡಾ ಮನವಿಯೊಪ್ಪಿಸಿದರು. ದ. ಕ. ಜಿಲ್ಲೆಯ ದೇವಸ್ಥಾನದ ಟ್ರಸ್ಟಿಗಳ ಪರವಾಗಿ ಶ್ರೀ ಕೆ. ವೇದವ್ಯಾಸ ನಾಯ್ಕರು ಒಂದು ಮನವಿಯನ್ನರ್ಪಿಸಿ, ಪಿಟ್ಟೆ ಅರೋಗ್ಯ ಕ್ಷೇತ್ರಗಳಲ್ಲಿ ಬಹಳ ಕೆಲಸಮಾಡುತ್ತಿರುವ ದೇವಸ್ಥಾನಗಳನ್ನು ಜತ್ತಿಸಮಿತಿ ಸೂಚನೆಗೆ ಳಿಂದ ಹೊರತುಗೊಳಿಸಬೇಕೆಂದು ಕೇಳಿಕೊಂಡರು.

ಹೊಸಬೆಟ್ಟು ಸಂಘದ ಕಟ್ಟಡ ಉದ್ಘಾಟನೆ—ಶ್ರೀ ನಿಜಲಿಂಗಪ್ಪನವರು ಕಾರ್ಕಳ ತಾಲೂಕಿನ ಹೊಸಬೆಟ್ಟು ವಿವಿಧೋದ್ದೇಶ ಸಹಕಾರಿ ಸಂಘದ ಹೊಸ ಕಟ್ಟಡವನ್ನು ಉದ್ಘಾಟಿಸುತ್ತಾ, ರೈತರ ಆರ್ಥಿಕಾಭಿವೃದ್ಧಿ ಸಾಧನೆಗೆ ಸಹಕಾರ ಅತೀ ಅಗತ್ಯ. ಪ್ರತಿ ಗ್ರಾಮದಲ್ಲಿ ಒಂದು ಸಹಕಾರಿ ಸಂಘವನ್ನು ಸ್ಥಾಪಿಸುವುದು ಅಗತ್ಯ. ಹಳ್ಳಿಯ ಜನತೆ ಪರಸ್ಪರ ಸಹಕಾರದಿಂದ ವರ್ತಿಸಿ ನಮ್ಮ ದೇಶದ ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು ನಾವು ಈಗ ಬೆಳೆಸುತ್ತಿರುವ ಆಹಾರ ನಮ್ಮ ದಿನನಿತ್ಯದ ಉಪಯೋಗಕ್ಕೂ ಸಾಲದ ಸ್ಥಾಗಿದೆ. ಅದನ್ನು ಹೆಚ್ಚಿಸಿ ಉಳಿಸುವಂತಾದ್ದಲ್ಲಿ ಮಾತ್ರ ಇಂತಹ ಸಹಕಾರಿ ಸಂಘಗಳಿಂದ ಹೆಚ್ಚಿನ ಉಪಯೋಗವಾಗುವುದು ಎಂದು ಹೇಳಿದರು. ಶ್ರೀ ಎಸ್ ನರಸಿಪ್ಪಯ್ಯ ಎಮ್. ಎಲ್. ಸಿ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಪುಟ್ಟಣ್ಣಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಕಾಳಾವರ—ಸ್ಥಳೀಯ ಸಹಕಾರಿ ಸಂಘದ ಹೊಸ ಕಟ್ಟಡದ ಉದ್ಘಾಟನೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ಪೈ ಸಿ. ಹೊಂಬಾಳಯ್ಯನವರು ತಾ. 17ರಂದು ನೆರವೇರಿಸಿದರು. ಶ್ರೀ ನಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಮೈಸೂರು ರಾಜ್ಯದ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಬಿ ಎ ಸಾಟೀಲರ ಅಕಾಲ ನಿಧನಕ್ಕಾಗಿ ಮೌನ ಪ್ರಾರ್ಥನೆಯಾಯಿತು. ಬಳಿಕ ಸಂಘದ ಅಧ್ಯಕ್ಷ ಶ್ರೀ ಕೆ. ಸಂಜೀವ ಸೆಟ್ಟಿರು ಸ್ವಾಗತ ಬಯಸಿದರು. ಶ್ರೀಗಳಾದ ಎನ್. ಎಸ್. ಪರಮೇಶ್ವರಯ್ಯ, ಕೆ. ಎಲ್. ಸೂರ್ಯನಾರಾಯಣ ರಾಯರು ಕಾಲೋಚಿತ ಮಾತುಗಳನ್ನಾಡಿದರು.

ಫಲಿಮಾರು—ತಾ. 14ರಂದು ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡ್ಯಾರೆಕ್ಟರ್ (ಡಾ|) ಟಿ. ಮೋಹನ ಪೈಗಳು ಫಲಿಮಾರು ಶಾಖೆಯನ್ನು ಸಂದರ್ಶಿಸಿದಾಗ, ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳ ಸರ ಅಧ್ಯಕ್ಷತೆಯಲ್ಲಿ ಅವರಿಗೆ ಸತ್ಕಾರವೀಯಲಾಯಿತು. ಶ್ರೀಬಾಗಲೋಡಿ ಕೃಷ್ಣರಾಯರು (ಡಾ| ಪೈಗಳ ಗುಣಗಾನ ಮಾಡಿದರು.

ಮೂಲ್ಕಿ—ಸ್ಥಳೀಯ ಕಾರ್ನಾಡು ಸದಾಶಿವರಾವ್ ಸ್ಮಾರಕ ಸೇವಾಶ್ರಮದ ಪ್ರಥಮ ವಾರ್ಷಿಕೋತ್ಸವವು ತಾ. 20ರಂದು ಶ್ರೀ ಕೆ. ಕೆ. ಸೆಟ್ಟಿ, ಎಸ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಿಗಿತು. ಬಿಹಾರಿನ ಮಾಜಿ ರಾಜ್ಯಪಾಲರೂ ಗಾಂಧಿ ಸ್ಮಾರಕನಿಧಿಯ ಅಧ್ಯಕ್ಷರೂ ಆದ ಶ್ರೀ ಆರ್. ಆರ್. ದಿವಾಕರರು ಕೀರ್ತಿಶೇಷ ಕಾರ್ನಾಡು ಸದಾಶಿವರಾಯರ ಭಾವಚಿತ್ರ ಅನಾವರಣ ಮಾಡಿದರು. ಶ್ರೀ ಜಿ. ಕುಹಾಬಲ ಸೆಟ್ಟಿರು ಸ್ವಾಗತ ಮಾತುಗಳನ್ನಾಡಿದರು. ಡಾ| ಸಂಜೀವನಾಥರು ಸೇವಾಶ್ರಮದ ವದಿಯನ್ನೋದಿದರು. ಡಾ. ಕೆ. ಪಿ. ಮಧ್ಯಸ್ಥರು ಶುಭಸಂದೇಶಗಳನ್ನೋದಿದರು. ದ. ಕ. ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ಶ್ರೀ ಎಚ್. ನಾರಾಯಣರಾವ್, ಡಾಯು. ಪಿ. ಮಲ್ಯರ ಭಾಷಣಗಳಾದುವು. ಡಾ| ಐ. ವಿ. ಅಸ್ರಣ್ಣರು ಧನ್ಯವಾದಸಿತ್ತರು.

ಶ್ರೀ ದಿವಾಕರರು ಸ್ಥಳೀಯ ಸರಕಾರಿ ಹೈಸ್ಕೂಲಿಗೂ ಭೇಟಿಯಿತ್ತು, ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಕೊಡಿಯಾಲ—ತಾ. 14ರಂದು ಕೊಡಿಯಾಲ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಮ್. ನಾರಾಯಣ ರೈಗಳ ಅಧ್ಯಕ್ಷತೆಯಲ್ಲಿ ನೆಹರೂಜಯಂತಿ ಆಚರಿಸಲಾಯಿತು.

ತಾ. 19ರಂದು ಶ್ರೀ ಪರಾರಿ ಸುಬ್ಬಣ್ಣ ರೈಗಳು ಮೂರು ತಿಂಗಳುಗಳಿರೀಡೀಚೆಗೆ ಉಸಿದ್ಧವ ಕೊಡುತ್ತಿದ್ದ ಹುಲಿಯೊಂದನ್ನು ಕೊಂದು ಊರವರ ಕಷ್ಟ ನೀಗಿದರು.

ಕಿನ್ನಿಗೋಳಿ—ಕಿನ್ನಿಗೋಳಿ ಗ್ರಾಮ ಸೇವಕರ ಕಾರ್ಯಕ್ಷೇತ್ರದ ರೈತ ಮುಂದಾಳುಗಳ ತರಬೇತಿ ಶಿಬಿರವು ಕಿನ್ನಿಗೋಳಿ ಸೈಂಟ್ ಮೇರೀಸ್ ಶಾಲಾ ವಠಾರದಲ್ಲಿ ತಾ. 15ರಂದು ಡಾ ಕೆ. ನಾಗಪ್ಪ ಆಳ್ವ, ಎಮ್. ಎಲ್. ಎ. ಅವರಿಂದ ಉದ್ಘಾಟಿಸಲ್ಪಟ್ಟಿತು. ಮಂಗಳೂರು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ. ಎಚ್. ಮುದ್ದಣ್ಣ ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು.

ಕೊಂಡಾಡಿ—ಕೊಂಡಾಡಿಯಲ್ಲಿ ಸ್ವಾತ್ಯಗ್ರಹ ಹೂಡಿ ಭೂಮಿ ತನಗೆ ಸಿಗಬೇಕೆಂದು ವಾದಿಸಿ ಆರ್ಜಿ ಸಲ್ಲಿಸಿದ್ದ ಗಾರಮ್ಮ ಎಂಬವರ ಆರ್ಜಿ ಕುಂದಾಪುರ ರೆವನ್ಯೂ ದಿವಾಜನಲ್ ಆಫೀಸರರ ಕೋರ್ಟಿನಲ್ಲಿ ತನ್ಮಯಾಗಿ ಅದು ತಿರಸ್ಕರಿಸಲ್ಪಟ್ಟಿತೆಂದು ತಿಳಿದು ಬರುತ್ತದೆ.

ಕುಂದಾಪುರ—ಬ್ಯೈಂದೂರು ಸಮಾಜಾಭಿವೃದ್ಧಿ ಮತ್ತು ಕುಂದಾಪುರ ರಾಷ್ಟ್ರೀಯ ಎಸ್ತರದಾ ಶ್ರೇತ್ರಗಳ ಗ್ರಾಮ ಪ್ರಮುಖರ ಕರಿಪತ್ತು ಮತ್ತು ಕೃಷಿ, ಕಲೆ ಹಾಗೂ ಗುಡಿ ಮತ್ತು ಕುಶಲ ಕೈಗಾರಿಕಾ ವಸ್ತು ಪ್ರದರ್ಶನವು ತಾ. 17 ಮತ್ತು 18ರಲ್ಲಿ ಜರಿಗಿತು. ಜಿಲ್ಲಾ ಕಲೆಕ್ಟರ್ ಶ್ರೀ. ವೈ ಸಿ. ಹೊಂಬಾಳಯ್ಯನವರು ಉದ್ಘಾಟನೆ ಮಾಡಿದರು. ಶ್ರೀ. ಸಿ. ಪುಂಜಯ್ಯ ಸೆಟ್ಟಿ, ಎಂ. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಶಿವರಾಮ ಕಾರಂತರ
ಅತ್ಯಪೂರ್ವ ಗ್ರಂಥ—
ಯಕ್ಷಗಾನ ಬಯಲಾಟ
ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. 6/-
ವಿ. ಪಿ. ಕಳಿಸುವುದಿಲ್ಲ.
ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?
ಮನೆ-ಮದ್ದು
HOME REMEDIES
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳಲ್ಲಿ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ. ರೂ. ೨—೦—೦ (ಟ್ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನದ ರಜತೋತ್ಸವ

ಧರ್ಮಸ್ಥಳ ಕ್ಷೇತ್ರದ ಹಿಂದಿನ ಧರ್ಮದರ್ಶಿಗಳಾಗಿದ್ದ ಕೀ. ಶೇ ಮಂಜಯ್ಯ ಹೆಗ್ಡೆಯವರು ೨೫ ವರ್ಷಗಳ ಹಿಂದೆ ಆರಂಭಿಸಿ ವಿಶಿಷ್ಟ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದ ಸರ್ವ ಧರ್ಮ ಸಮ್ಮೇಳದ ರಜತೋತ್ಸವವು ಇದೇ ತಾ. 19, 20 ಮತ್ತು 21ರಲ್ಲಿ ಈಗಿನ ಧರ್ಮದರ್ಶಿ ಶ್ರೀ ರತ್ನವರ್ಮ ಹೆಗ್ಡೆ, ಎಂ. ಎಲ್. ಎ ರವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ವಿಜೃಂಭಣೆಯಿಂದ ಜರಗಿತು

ಎಲ್ಲಾ ಧರ್ಮಗಳ ತತ್ವ ಹಿಂದೇ ವಿಶ್ವ ಶಾಂತಿಯ ಗುರಿ. ಮಾನವನ ಜೀವನದಲ್ಲಿ ಅನೇಕ ಕವಲು ದಾರಿಗಳಿರುತ್ತವೆ ಆದರೂ ತನಗೆ ಬೇಕಾದುದನ್ನು ಆರಿಸುವ ಸ್ವಾತಂತ್ರ್ಯ ತನ್ನ ವಿವೇಕಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಭಾರತದಲ್ಲಿ ವಿವಿಧ ಧರ್ಮಗಳ ಸಮನ್ವಯವಾಗಿದೆ. ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿ ಜಗತ್ತಿನಲ್ಲಿ ಚಿರಶಾಂತಿಗಾಗಿ ದುಡಿಯಬೇಕಾದ ಮಹತ್ತರ ಹೊಣೆಗಾರಿಕೆ ಎಲ್ಲರ ಮೇಲಿದೆ'ಎಂದು ತಾ 19ರಂದು ಸಂಜೆ ಮೈಸೂರಿನ ರಾಜ್ಯಪಾಲ ಶ್ರೀ ಜಯಚಾಮ ರಾಜೇಂದ್ರ ಒಡೆಯರ್‌ರವರು ವಿವಿಧ ಧರ್ಮ ಸಮ್ಮೇಳನದ ರಜತೋತ್ಸವ ಸಮಾರಂಭವನ್ನು ಉದ್ಘಾಟಿಸುತ್ತಾ ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿದಾನ ಮಾಜಿ ಉಪ್ಯಪಾಲರೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರೂ ಆದ ಶ್ರೀ ಆರ್. ಆರ್. ದಿವಾಕರರು ತಮ್ಮ ಭಾಷಣದಲ್ಲಿ 'ಈ ಕ್ಷೇತ್ರವು ಧರ್ಮಸ್ಥಳ ಮಾತ್ರವಲ್ಲ; ಧರ್ಮ ವೀರರೂ ಹೌದು ಈ ಪದಗಳ ಸಾರವನ್ನೂ ಅನ್ವರ್ಥ ಸಾಮರ್ಥ್ಯವನ್ನೂ ನಾವು ಅಳವಡಿಸಿಕೊಳ್ಳಬೇಕಾಗಿದೆ. ವಿಜ್ಞಾನ ಯುಗವು ಕೇವಲ ಐಶ್ವರ್ಯತ್ಮಕ ದೇಶಗಳಲ್ಲಿ ಮಾತ್ರ ಪ್ರಗತಿ ಸಾಧಿಸಿತೆನ್ನುವ ಪದ ಸರಿಯಲ್ಲ ನಮ್ಮಲ್ಲಿನ ಮಹತ್ವದ ಮಾತುಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಿ ಅವುಗಳನ್ನು ನಾವು ಲೋಕಕ್ಕೆ ಸಾರಬೇಕಾಗಿದೆ. ಜ್ಞಾನ ಮತ್ತು ವಿಜ್ಞಾನಗಳ ಸಮನ್ವಯ ಭಾರತದಲ್ಲಿದೆ ಅಶಾಭದಿಂದ ಮುಕ್ತರಾಗಬೇಕಾದರೆ ಜ್ಞಾನವಿಜ್ಞಾನಗಳೆರಡೂ ಬೇಕು ನಮ್ಮ ದೇಶದ ಗೌರವ, ವೈಶಿಷ್ಟ್ಯ ಗಂಭೀರತೆಯು ನುರ್ಮಗಳನ್ನು ಆಧುನಿಕ ವಿಜ್ಞಾನವನ್ನು ಸಮನ್ವಯಗೊಳಿಸುವುದರೊಂದಿಗೆ ಧರ್ಮಗಳ ಸಮನ್ವಯದ ತ್ತಲೂ ಗಮನ ಹರಿಸಬೇಕು ಮಹಾತ್ಮಾಜಿಯವರು ವಿವಿಧ ಧರ್ಮಗಳ ಸಾರಕ್ಕೆ ಪ್ರಾಧಾನ್ಯತೆ ಕೊಟ್ಟೇ ತಮ್ಮ ಪ್ರಾರ್ಥನೆ ಮಾಡುತ್ತಿದ್ದರು' ಎಂದು ಮುಂತಾಗಿ ಹೇಳಿದರು.

ಆರಂಭದಲ್ಲಿ ರಾಜ್ಯಪಾಲರಿಗೆ ಸಂಭ್ರಮದ ಸ್ವಾಗತವೀಯಲಾಯಿತು. ಶ್ರೀ ಡಿ. ಪುಟ್ಟು ಸ್ವಾಮಿಯವರು ರಾಜ್ಯಪಾಲರಿಗೂ ಶ್ರೀ. ಕೆ. ಬಿ ಜೈನರಾಜ ಹೆಗ್ಡೆಯವರು ಶ್ರೀ ದಿವಾಕರರಿಗೂ ಮಾನಪತ್ರ ಅರ್ಪಿಸಿದರು. ಶ್ರೀ ರತ್ನವರ್ಮ ಹೆಗ್ಡೆಯವರು ಸ್ವಾಗತಭಾಷಣ ಮಾಡಿ ಅಧ್ಯಕ್ಷರಿಗೂ, ಅಧ್ಯಾಟಕರಿಗೂ ಹೂ ಮಾಲೆ ಅರ್ಪಿಸಿದರು.

ಎರಡನೆ ದಿವಸದ ಸಮಾರಂಭವು

—ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಇಂದಿನ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾ 'ಸರ್ವೋದಯದ ಗುರಿಯನ್ನು ನಾವು ಸಾಧಿಸಿದ್ದೇ ಆದರೆ ಬಾಪೂ ಕಂಡ ರಾಮರಾಜ್ಯದ ಕನಸು ನೆನಸಾಗುತ್ತದೆ. ಈ ಮಹತ್ಕಾರ್ಯ ಸಾಧನೆಗಾಗಿ ಸಂಜವಾಷಿಕ ಯೋಜನೆಗಳ ಮೂಲಕ ನಮ್ಮ ರಾಜ್ಯದಲ್ಲಿ ಕೈಗೊಂಡಿರುವ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಪತ್ರಿಕಾ ಕರ್ತರು ಸಾಹಿತಿಗಳು ಇತ್ಯಾದಿ ಎಲ್ಲಾ ಜನರು ಸಂದರ್ಶಿಸಬೇಕು. ಪರಿಪೂರ್ಣದ ಸುಖ ಶಾಸ್ತ್ರಿಗಾಗಿ ಕಾಶಿ, ರಾಮೇಶ್ವರ, ಧರ್ಮಸ್ಥಳ, ಗೋಕರ್ಣ, ತಿರುಪತಿಗಳಿರುವಂತೆ, ಇಹಪೂರ್ಣದ ಸುಖಸಾಮ್ರಾಜ್ಯಕ್ಕಾಗಿ ತುಂಗಭದ್ರಾ, ಘಟಪ್ರಭಾ, ಕಾವೇರಿ ಮುಂತಾದ ಜಲಾಶಯ ವಿದ್ಯುತ್ ಉತ್ಪಾದನಾಕೇಂದ್ರ ಸೇತುವೆ ಇತ್ಯಾದಿಗಳಿವೆ ಈ ಯೋಜನಾ ಕಾರ್ಯಸ್ಥಾನಗಳನ್ನು ಪುಣ್ಯಕ್ಷೇತ್ರಗಳೆಂದು ಭಾವಿಸಬೇಕು. ಆವುಗಳ ಸಂದರ್ಶನವೂ ಅಗತ್ಯವೆಂದು ತಿಳಿಯಬೇಕು ಈ ಯೋಜನಾ ಕಾರ್ಯಕ್ಷೇತ್ರಗಳಲ್ಲಿನ ಕಾರ್ಮಿಕ ಪ್ರಗತಿಗಾಗಿ ತನು, ಮನ, ಧನಗಳನ್ನರ್ಪಿಸಲು ನಾಡಿನ ಜನರು ಸಂನದ್ಧರಾಗಬೇಕು ಈ ರೀತಿ ಜನಮನದ ಪರಿವರ್ತನೆ ಮತ್ತು ಪುನರ್ರೂಪಣದ ಕಾರ್ಯದಲ್ಲಿ ಸಾಹಿತ್ಯದ ಪಾತ್ರ ಮುಖ್ಯ ಇಂತಹ ಕಾರ್ಯಕ್ಷೇತ್ರಗಳ ಸಂದರ್ಶನಾರ್ಥವಾಗಿ ಪತ್ರಿಕಾ ಕರ್ತರನ್ನು ಕರೆದೊಯ್ಯುವಂತೆ ಸಾಹಿತಿಗಳಿಗೂ ಸಂದರ್ಶನಾ ಪ್ರವಾಸಗಳನ್ನು ಏರ್ಪಡಿಸುವ ಯೋಜನೆ ಸರಕಾರಕ್ಕಿದೆ ಅಂತಹ ಸಂದರ್ಶನಗಳು ದೇಶವಲ್ಲಿ ಆಗುತ್ತಿರುವ ಮಹಾ ಕಾರ್ಯಗಳನ್ನು ನೇರವಾಗಿ ನೋಡುವಂತಾಗಿ ಸೂಕ್ತ ಕೃತಿರಚನೆಗೆ ಪೂರಕ, ಪ್ರೇರಕವಾಗಿ ಯೋಜನೆಗಳಿಗೆ ಜನತೆಯ ಸಹಕಾರ ಸೌಹಾರ್ದಗಳು ನೂರ್ಮಡಿಯಾಗಿ ಆ ಮೂಲಕ ಒಪಗಿಬರುವುದೆಂಬ ಭರವಸೆ ನನಗಿದೆ" ಎಂದು ಹೇಳಿದರು. ಡಕ್ಷಿಣ ಕನ್ನಡ ಜಿಲ್ಲೆಯು ಶಿಕ್ಷಣಕ್ಷೇತ್ರ ಮತ್ತು ಆಧ್ಯಾತ್ಮಿಕ ಪ್ರಗತಿಗೆ ವಿವಿಧಗಳ ಕ್ಷೇತ್ರ ಧರ್ಮಸ್ಥಳ ಮಂಜುಯ್ಯ ಹೆಗ್ಡೆಯವರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ರತ್ನವರ್ಮ ಹೆಗ್ಡೆಯವರು ಸ್ವಾಗತಿಸಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರಿಗೂ ಶ್ರೀ ಶಿವಮೂರ್ತಿ ಶಾಸ್ತ್ರಿಗಳಿಗೂ ಸುವರ್ಣ ಕರಂಡಗಳಲ್ಲಿ ಮಾನಪತ್ರಗಳನ್ನರ್ಪಿಸಿದರು. ಶ್ರೀ ನಿಜಲಿಂಗಪ್ಪನವರು ಸುವರ್ಣ ಕರಂಡವನ್ನು ಶ್ರೀ ಕ್ಷೇತ್ರದಲ್ಲಿಯೇ ಇರಿಸಿಕೊಳ್ಳಬೇಕೆಂದು ಶ್ರೀ ಹೆಗ್ಡೆಯವರನ್ನು ವಿನಂತಿಸಿದರು. ಶ್ರೀ ಡಿ. ಪುಟ್ಟಸ್ವಾಮಿ ಮತ್ತು ಶ್ರೀ ಬೆಳ್ಳಿ ರಾಮಚಂದ್ರರಾಯರು ಮಾನಪತ್ರಗಳನ್ನು ಓದಿದರು

ಭಾಷಣಗಳು—ಶ್ರೀಗಳಾದ ಮಿರ್ಜಿ ಅಣ್ಣಾರಾವ್, ಎಮ್. ಸುಬ್ಬಯ್ಯ ಶೆಟ್ಟಿ, ಬಿ ಎಸ್ ರಾಮಾಜಾರಿ, ಕೆ ಜಿ ಕುಂದಣಕರ್, ಆ ನ ಕೃಷ್ಣರಾವ್, ಬಿ ಎಸ್. ಕುಲಕರ್ಣಿ, ಬಿ ಎಚ್. ಶ್ರೀಧರ, ಗೌಸ್ ಮೊಹಿದಿನ್ ಮುಂತಾದವರು ವಿವಿಧ ಸಾಹಿತ್ಯ ಗಳ ವಿವಿಧ ಮುಖಗಳ ಕುರಿತು ಉಪನ್ಯಾಸ ವಿತ್ತರು ಶ್ರೀಗಳಾದ ಎ ಜಿ. ದೊಡ್ಡಮೇಟಿ ಆರ್ ಎಸ್. ಪಂಚಮುಖಿ, ಎಮ್ ಜಿ. ನಂಜುಂಡ ರಾಧ್ಯ, ಎ. ಸುಬ್ಬಯ್ಯ ಶಾಸ್ತ್ರಿ, ಶ್ರೀ ಸಿ ಚೆನ್ನಬಸವೇಶ್ವರ, ಪ್ರೊಲಲನಾ ಸಯುವ್ ಕಾರಿ ಸಾಹೇಬ್, ಕೆ. ಎಸ್ ಧರಣೇಂದ್ರಯ್ಯ, ಕೆ. ತಿಪ್ಪೆ ರುದ್ರಯ್ಯ, ಎ ಎಸ್. ಬೊಗರ್ ಮೊದಲಾದವರು ಕೂಡಾ ಭಾಷಣಮಾಡಿದರು.

ಸಂಗೀತ ನಾಟ್ಯ ಸಮ್ಮೇಳನವನ್ನು

ತಾ 21ರಂದು ಕೇರಳ ರಾಜ್ಯಪಾಲ ಡಾ ಬಿ. ರಾಮಕೃಷ್ಣ ರಾಯರು ಉದ್ಘಾಟಿಸುತ್ತಾ, ಸಂಗೀತವು ಶ್ರವಣಾನಂದಕರವಾದರೆ ನೃತ್ಯವು ನೇತ್ರಾನಂದಕರ ಇವೆರಡರ ಸಮನ್ವಯ ಮನಸ್ಸಿಗೆ ಅತ್ಯಂತ ಆನಂದದಾಯಕವು. ಸಂಗೀತವು ಮನುಷ್ಯನಿಗೆ ಮಾತ್ರವಲ್ಲದೆ ಎಲ್ಲಾ ಪ್ರಾಣಿ ಪಕ್ಷಿಗಳಿಂದಲೂ ಆನಂದಿಸಬಹುದಾದ ಕಲೆ ಇದು ಸರ್ವವ್ಯಾಪಿಯಾಗಿದ್ದು ಯಾವುದೇ ಒಂದು ಭಾಷೆಯ ಮೇರೆಗೊಳಪಟ್ಟದ್ದಲ್ಲ ಸಾಂಸ್ಕೃತಿಕ ಏಕ್ಯ ಸಾಧಕವೂ ಆಗಿದೆ ಎಂದು ಹೇಳಿದರು ಸಭಾಧ್ಯಕ್ಷತೆ ವಹಿಸಿದ ಮೈಸೂರಿನ ಮಾಜಿ ಮಂತ್ರಿ ಶ್ರೀ ಕೆ. ಪಸುಮಂತಯ್ಯನವರು, ಭೂಸುಧಾರಣೆಯ ಕುರಿತು ಪ್ರಸ್ತಾಪಿಸುತ್ತಾ, ಯಾವುದೇ ಯೋಜನೆಯಿಂದಾಗಿ ದೇಶಕ್ಕೆ ಹಾನಿಯಾಗಬಾರದು ಸುಧಾರಣೆಗಳ ನೆವನದಲ್ಲಿ ಧಾರ್ಮಿಕ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಆತಂಕವಾರ್ಪಾರದು ಎಂದು ಮುಂತಾಗಿ ಹೇಳಿದರು ಶ್ರೀ ಡಿ ರತ್ನವರ್ಮ ಹೆಗ್ಡೆಯವರು ಮುಖ್ಯ ಅತಿಥಿಗಳಿಗೆ ಗೌರವ ಕರಂಡಗಳಲ್ಲಿ ಅಧ್ಯಕ್ಷರಿಗೂ ಉಪಾಧ್ಯಕ್ಷರಿಗೂ ಮಾನಪತ್ರಗಳನ್ನರ್ಪಿಸಿದರು.

ಸಂಗೀತ ನೈತ್ಯ—ಶ್ರೀ ಟಿ ಚೌಡಯ್ಯ

ಎಮ್. ಎಲ್. ಸಿ (ಪಿಟೀಲು) ಮತ್ತು ಶ್ರೀ ಪಾಳ್ಳಾಟು ಮುಟಿಯನರ (ಮೃದಂಗ) ಹಿಮ್ಮೇಳದೊಂದಿಗೆ ಶ್ರೀ ಜಿ ಎನ್ ಬಾಲ ಸುಬ್ರಹ್ಮಣ್ಯಂರವರ ಹಾಡುಗಾರಿಕೆ ಮತ್ತು ಬೆಂಗಳೂರಿನ ಶ್ರೀ ಯು ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗಾದೇವಿಯವರ ನೃತ್ಯಪ್ರದರ್ಶನವೂ ಸಂಗವಾಯಿತು.

ಮಂಗಳೂರು

ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ —ಅಶಕ್ತಯಿಳ್ಳವರ ಸಭೆಯೊಂದು ತಾ 18ರಂದು ಶ್ರೀ ಎ. ಎಸ್. ಕುತ್ತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ತರ್. ಕರ್ಕೇರ್ರ ಎಮ್. ಎಲ್ ಎ ಅವರು ಸ್ವಾಗತಭಾಷಣಮಾಡಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ರಾಜ್ಯ ಅಭಿವೃದ್ಧಿ ಕೌನ್ಸಿಲಿನ ಸದಸ್ಯ ಶ್ರೀ ಬಿ. ಬಿ. ಶೆಟ್ಟಿ ಮತ್ತು ಶ್ರೀ ಕೆ. ವಾಮನರಾಯರು ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರಕಾರವು ನೀಡುತ್ತಿರುವ ಸಹಾಯದ ಸಮುಪಯೋಗವನ್ನು ಪಡೆಯಲು ಜಿಲ್ಲಾ ಸಣ್ಣ ಪ್ರಮಾಣದ ಕೈಗಾರಿಕಾ ಅಭಿವೃದ್ಧಿ ಸಂಘ ವೊಂದನ್ನು ಸ್ಥಾಪಿಸುವ ಆವಶ್ಯಕತೆಯನ್ನು ವಿವರಿಸಿದರು. ಬಳಿಕ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಶ್ರೀ ಬಿ ಆರ್. ಕರ್ಕೇರರು ಕನ್ವೀನರರಾಗಿದ್ದು ಶ್ರೀಗಳಾದ ಪಿ. ಎಸ್. ಕುಡ್ವ, ಎ ಎಸ್. ಆಳ್ವ, ಬಿ ಬಿ ಶೆಟ್ಟಿ, ಬಿ ಎಮ್. ಹೆಗ್ಡೆ, ಎಫ್. ಎಕ್ಸ್. ಡಿ ಪಿಂಟೊ, ಗಣಪನರಾವ್ ಪಂಡಿತ್, ಡಾ. ಕೆ ನಾಗಪ್ಪ ಆಳ್ವ, ವೆಂಕಟ್ರಮಣ ಆಯ್ಯರ್, ಕೆ ವಾಸುನರಾವ್, ಜೆ ಬಿ ಡಿ. ಸೋಜಾ ಮೊದಲಾದವರು ಸದಸ್ಯರಾಗಿರುವ ಸಮಿತಿಯನ್ನು ರಚಿಸಲಾಯಿತು

ಭಾರತದ ಯೋಜನೆಯ ಯಶಸ್ಸಿಗೆ ವಿದೇಶ ವ್ಯಾಪಾರ ಹೆಚ್ಚಳದ ಅವಶ್ಯಕತೆ—ಶ್ರೀ ಟಿ. ಪಿ ಪೈಗಳ ಅಭಿಪ್ರಾಯ

—ಭಾರತದ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಬೇಕಾದಲ್ಲಿ ದೇಶದ ವಿದೇಶ ವ್ಯಾಪಾರವನ್ನು ಹೆಚ್ಚಿಸುವುದು ಆತ್ಯಾವಶ್ಯಕ ಪರಂಪ್ಪರಗಳು ನಮ್ಮಿಂದ ವ್ಯಾಪಾರ ಮಾಡಬೇಕೆಂದು ನಾವು ಆಶಿಸುವಾಗ ನಾವು ಅವರ ದೇಶಗಳಿಂದ ವ್ಯಾಪಾರ ಮಾಡಬೇಕೆಂದು ಅವರು ಅಪೇಕ್ಷಿಸುವುದು ಸಹಜ ಈ ದೃಷ್ಟಿಯಿಂದ ನಮ್ಮ ದೇಶವು ತನ್ನು ವಿದೇಶ ವ್ಯಾಪಾರವನ್ನು ಅಭಿವೃದ್ಧಿಗೊಳಿಸಬೇಕು ಎಂದು ಜರ್ಮನಿ ಮೊದಲಾದ ವಿದೇಶ ಪ್ರಯಾಣದಿಂದ ಹಿಂತಿರುಗಿದ ಶ್ರೀ ಟಿ ಎ. ಪೈಗಳು ಸ್ಥಳೀಯ ಸಿ ಪಿ ಸಿ ಕಂಪನಿಯ ಡ್ಯಾರೆಕ್ಟರ್ ಮಂಡಳಿಯವರು ತಾ. 21ರಲ್ಲು ಕೊಟ್ಟ ಭೋಜನ ಸತ್ಕಾರ ಸಮಾರಂಭದಲ್ಲಿ ಹೇಳಿದರು.

ಮೈಸೂರು ರಾಜ್ಯದ ನಾಲ್ಕು ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಗತಿಹೊಂದುವುದಕ್ಕೆ ಬೇಕಾದ ಎಲ್ಲಾ ಸೌಕರ್ಯಗಳಿಗೆ ಎಂದು ಶ್ರೀ ಪೈಗಳು ಹೇಳಿ ತಮ್ಮೊಳಗಿನ ಸಂಕುಚಿತ ಮನೋಭಾವನೆಯನ್ನು ಬಿಟ್ಟು ಈ ಪ್ರದೇಶದ ಪ್ರಗತಿಗಾಗಿ ಒಗ್ಗಟ್ಟಿನಿಂದ ದುಡಿಯಬೇಕೆಂದು ಕೇಳಿಕೊಂಡರು ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ ಮಂಜಯ್ಯ ಹೆಗ್ಡೆಯವರು ವಹಿಸಿದ್ದರು ಶ್ರೀ ವಿ. ಎಸ್. ಕುಡ್ವರು ಧನ್ಯವಾದಗಳನ್ನರ್ಪಿಸಿದರು

ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಮಂಗಳೂರಿನ ಅಗಸಿಯ ಕೃಷಿಕರ ಮಾರಾಟ ಸಂಘ ಮತ್ತು ಸರಬರಾಯಿ ಸಂಘಕ್ಕೆ ಭೇಟಿಯಿತ್ತಾಗ ಶ್ರೀ ಎಸ್. ಸರ್ವಪ್ಪಯ್ಯ ಎಮ್. ಎಲ್. ಸಿ ಯವರು ಸ್ವಾಗತಿಸಿದರು ಜಿಲ್ಲಾ ಸಹಕಾರಿ ಸೆಂಟ್ರಲ್ ಬ್ಯಾಂಕಿನವರು ಏರ್ಪಡಿಸಿದ ಸತ್ಕಾರಕೂಟದಲ್ಲಿ ಭಾಗವಹಿಸಿದಾಗ ಶ್ರೀ ಬಿ ನಿ ಶೆಟ್ಟರು ಜಿಲ್ಲೆಯ ಸಹಕಾರಿ ಕ್ಷೇತ್ರದ ಸಮಸ್ಯೆಗಳನ್ನು ವಿವರಿಸಿ ಸುಸಂಘಟಿತ ಸಹಕಾರಿ ಸಂಸ್ಥೆಗಳ ಮುಖ್ಯಮಂತ್ರಿಗಳು ಉತ್ತರಿಸುತ್ತಾ ಸಹಕಾರಿ ಕ್ಷೇತ್ರದಲ್ಲಿ ಜಿಲ್ಲೆಗೆ ಮದ್ರಾಸು ರಾಜ್ಯದಲ್ಲಿ ಬೊರಕುತ್ತಿದ್ದ ಸೌಕರ್ಯಗಳನ್ನೆಲ್ಲಾ ಒದಗಿಸುವುದಾಗಿ ಆಶ್ವಾಸನೆಯಿತ್ತರು ಮುಖ್ಯ ಮಂತ್ರಿಗಳು ರಾಜ್ಯದ ಮಾಜಿ ಆರೋಗ್ಯಮಂತ್ರಿ ಶ್ರೀ ಎ ಬಿ ಶೆಟ್ಟರನ್ನು ಅವರ ಸ್ವಗೃಹದಲ್ಲಿ ಭೇಟಿಯಾದರು ಕಂಕನಾಡಿ ಫಾದರ್ ಮುಲ್ಲರ್ಸ್ ಆಸ್ಪತ್ರೆಯನ್ನು ಸಂದರ್ಶಿಸಿದರು

ಕಡಿಯ ಪ್ರವಾಸಿ ಬಂಗ್ಲೆಯಲ್ಲಿ ಜಿಲ್ಲಾ ಭೂಮಾಲಿಕರ ಸಂಘ, ಕಲವಂಕಿಗಳ ಪ್ರತಿನಿಧಿಗಳು, ಕಾಸರಗೋಡಿನ ಪ್ರತಿನಿಧಿಗಳು ನಿಲ್ಲಾ ಬೋರ್ಡು ನೌಕರರ ಹಾಗೂ ಬಲ್ ಕರೆ ಕೈರರ ಸಂಘ, ನಾನಾಗತಿಟೆಡ್ ಆಫೀಸರರ ಪ್ರತಿನಿಧಿಗಳು ಎಂಬುಮಂತ್ರಿಗಳಿಗೆ ತಂತಮ್ಮ ಸಂಕಷ್ಟಗಳನ್ನು ನಿವೇದಿಸುವ ಮನವಿಗಳನ್ನಿತ್ತರು.

ಜಿಲ್ಲಾ ಭೂಮಾಲಿಕರ ಸಂಘವ ಪ್ರತಿನಿಗಳು ಶ್ರೀ ನಿಜಲಿಂಗಪ್ಪನವರನ್ನು ಭೇಟಿಯಾಗಿ ಜಿಲ್ಲಾ ಸಮಿತಿಯ ನವೆದಿಯ ಆಧಾರದ ಮೇಲೆ ಯಾವುದೇ ಭೂಕಾಸನವನ್ನು ಮುಂದೊತ್ತುವಾಗ ಬಾಗಿ ಕೇಳಿಕೊಂಡು, ಮುಂದೊತ್ತಿದಲ್ಲಿ ಅನರಿಂದ ಜಿಲ್ಲೆಯ ಸಣ್ಣ ಭೂಮಾಲಿಕರಿಗೆ ಬಹಳ ಹಾನಿಯೊಗುವುದೆಂದೂ ತಿಳಿಸಿದರು

ದ ಕ ಜಿಲ್ಲಾ ಬೋರ್ಡಿನ ಸಭೆಯು—ಇಂದು ತಾ ೨೦ನೇ ಶನಿವಾರ ಪೂರ್ವಾಹ್ನ 11ಗಂಟೆಗೆ ಬೋರ್ಡಿನ ಸೆಂಟ್ರಿಂಗ್ ಹಾಲಿನಲ್ಲಿ ಜರಗುವುದಾಗಿ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ತಿಳಿಸುತ್ತಾರೆ

ಡಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

52-1906-1957 ಐವತ್ತೆರಡು ವರುಷಗಳ ಪರಿಪಕ್ವ ಅನುಭವ

ಮತ್ತು

ದಕ್ಷಿಣ ಭಾರತದ **5** ರಂಸ್ಥಾನಗಳಲ್ಲಿ ಹಸರಿಸಿರುವ **49** ಶಾಖೆಗಳ ಮತ್ತು ದೇಶದಾದ್ಯಂತ ವಿಜನ್ನಿ ಏರ್ಪಾಡುಗಳ ಮೂಲಕ ಅತ್ಯಾಧುನಿಕ ಬ್ಯಾಂಕಿಂಗ್ ಸೇವೆಲ್ಲ ಳು. ಇದು ನಿಮ್ಮ ಬ್ಯಾಂಕ ಗಲು ಯೋಗ್ಯವಿದೆ!

ಬಹುಮುಖ ಸಾಹಿತ್ಯ ನಿರ್ಮಾಕ

(ಇನೇ ಪುಟದಿಂದ)

ವಿನಯ ಸೌಜನ್ಯ, ಇಂಜಿನಿಯರಿಂಗ್ ಇತ್ಯಾದಿ ಬುದ್ಧಿವಂತಿಕೇ ದಕ್ಷಿಣ ಕನ್ನಡ ಜಿಲ್ಲೆಯವರ ಉದ್ದಾಮೆ ಚಾತುರ್ಯ ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಕಡೆಯವರ ಸ್ಥಿರಚೇತನ ಸ್ವಭಾವ, ಹೈದರಬಾದ ಕಡೆಯವರ ಸಹನೆ ಮತ್ತು ಕಾರ್ಯಕ್ಕೆ ಕೊಡಗಿನವರ ವೀರಸಂದರ ವೈಶಿಷ್ಟ್ಯ ಇವೆಲ್ಲವೂ ಈ ಕರ್ನಾಟಕದಲ್ಲಿ ಸಂಗವವಾಗಿವೆ. ಇವೆಲ್ಲ ಶಕ್ತಿಗಳನ್ನು ಸಮನ್ವಯಗೊಳಿಸುವ ಹಿರಿಯ ಹೊಣೆಗಾರಿಕೆ ನಮ್ಮೆಲ್ಲರ ಮೇಲೆ ಬಿದ್ದಿದೆ ಅಂತೆಯೇ ಬೆಳೆಯುತ್ತಿರುವ ಕರ್ನಾಟಕದ ಅವಶ್ಯಕತೆಗಳನ್ನು ಪೂರೈಸಬಲ್ಲ ಮತ್ತು ಜನಪದದ ಮನವನ್ನು ಪರಿಪಕ್ವಗೊಳಿಸಿ ರೂಪಿಸಬಲ್ಲ ಬಹುಮುಖ ಸಾಹಿತ್ಯದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಬಹಳವಾಗಿದೆ ಈ ನಿಟ್ಟಿನಲ್ಲಿ ಸಾಹಿತಿಗಳೂ ಸಾಹಿತ್ಯ ಪೋಷಕರೂ ತಮ್ಮ ಪಾತ್ರವನ್ನು ಸರಿಪಾಲಿಸುವಂತಾಗಲಿ.

ಮುಕ್ತಿ ಸಾಧನೆಗಾಗಿ ಸರ್ವಧರ್ಮ ಸಮನ್ವಯವನ್ನೂ ಸಾಧಿಸಿದಂತೆ ಜನ ಸಾಮಾನ್ಯರ ಸೌಖ್ಯ ಸಾಧನೆಗಾಗಿ ನಮ್ಮೆಲ್ಲರ ಶಕ್ತಿ ಸಾಮರ್ಥ್ಯಗಳನ್ನು ಒಂದುಗೂಡಿಸಿ ದುಡಿಯಬೇಕಾಗಿದೆ. ಈ ನಾಡು ನುಡಿಯದು—ಅದನ್ನು ಕಟ್ಟಿ ನಿರ್ಮಿಸಿದ ಕೀರ್ತಿ ನಮ್ಮದಾಗಬೇಕು ಈ ಬಾಳು ನಮ್ಮದು— ಅದನ್ನು ಬದುಕಿದ ಗೌರವ ನಮ್ಮದಾಗಬೇಕು.

[ಧರ್ಮಸ್ಥಳದಲ್ಲಿ ತಾ. ೨೦ರಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾಡಿದ ಸಾಹಿತ್ಯೋತ್ಸವ ಉದ್ಘಾಟನಾ ಭಾಷಣದಿಂದ]

ಮಲೇರಿಯಾ ಮಹಾಮಾರಿಯ ಹಿನ್ನಡೆ

(೩ನೇ ಪುಟದಿಂದ)

೦.೧೫ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಕ್ವಿನ ನಾಶಕಗಳು ದೊರೆತಿವೆ. ಈ ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರದ ವೆಚ್ಚ ೦.೪೮ ಕೋಟಿ ರೂಪಾಯಿಗಳು; ರಾಜ್ಯ ಸರ್ಕಾರಗಳ ವೆಚ್ಚ ೫.೮೦ ಕೋಟಿ ರೂಪಾಯಿಗಳು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೨೭ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಹಂಚಲಾಗಿದೆ. ಅದರಲ್ಲಿ ೧೫ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರವದ ಪಾಲು. ೧೨ ಕೋಟಿ ರೂಪಾಯಿಗಳು ರಾಜ್ಯ ಸರ್ಕಾರಗಳ ಪಾಲು. ಕೇಂದ್ರ ಸರ್ಕಾರದ ಪಾಲಿನಲ್ಲಿ ವಿದೇಶಿ ಸಹಾಯವೂ ಸೇರಿರುವುದು.

ಮಲೇರಿಯಾ ನಿರೋಧ ಕಾರ್ಯಕ್ರಮದ ಧ್ಯೇಯವು ರೋಗ ನಿಯಂತ್ರಣವೇ ಆಥವಾ ಆ ರೋಗವನ್ನು ಸಮೂಲವಾಗಿ ನಾಶ ಮಾಡುವುದೇ – ಎಂಬ ಪ್ರಶ್ನೆ ಭಾರತ ಸರ್ಕಾರದ ಮುಂದಿರುವುದು. ವಿಶ್ವ ಆರೋಗ್ಯ ಸಂಸ್ಥೆಯು ಅಗ್ನೇಯ ಏಷಿಯಾ ಪ್ರಾದೇಶಿಕ ಸಮಿತಿಯ ೧೯ನೆಯ ಅಧಿವೇಶನವು ಮೆಹಲಿಯಲ್ಲಿ ೧೯೩೭ ಸೆಪ್ಟೆಂಬರ್‌ನಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಮಲೇರಿಯಾವನ್ನು ಸಮೂಲವಾಗಿ ನಾಶ ಗೊಳಿಸುವ ಧ್ಯೇಯವನ್ನು ಸ್ವೀಕರಿಸಲಾಯಿತು.

ಮಲೇರಿಯಾ ಸಂಸ್ಥೆಯು ಈ ರೋಗ ಕಾರಣ ಅದರ ನಿರೋಧಕ್ಕಾಗಿ, ಸಂಶೋಧನೆಗಳನ್ನು ನಡೆಸುತ್ತಿದೆ, ಮತ್ತು ಕೆಲಸಗಾರರಿಗೆ ಮಲೇರಿಯಾ ನಿರೋಧ ಕಾರ್ಯಕ್ರಮದಲ್ಲಿ ತರಬೇತಿಯನ್ನು ನೀಡುತ್ತಿದೆ. ಇಲ್ಲಿ ತರಬೇತಿಪಡೆದ ಕೆಲಸಗಾರರು ಮಲೇರಿಯಾ ಆಕ್ರಾಂತ ಕ್ಷೇತ್ರಗಳಿಗೆ ಹೋಗಿ, ಕೆಲಸ ಮಾಡುವರು. ಆಗ್ನೇಯ ಏಷ್ಯಾ ಬ್ರಿಟನ್ ಮತ್ತು ಅಮೆರಿಕದಿಂದ ಸಹ ಇಲ್ಲಿ ತರಬೇತಿಯನ್ನು ಪಡೆಯಲು ಜನರು ಬರುತ್ತಿರುವರು. ಈ ಸಂಸ್ಥೆಯು ಗ್ಯಿಳಾತಿ ಮುಂತಿ ವೈದ್ಯಾಧಿಕಾರಿಗಳು, ಳಿಂದ ಮುಂತಿ ತಂತ್ರಜ್ಞರು, ೯೩೬ ಮಂದಿ ಪರಿಚಿಕರು ತರಬೇತಿಯನ್ನು ಪಡೆದಿವೆ. ಮಲೇರಿಯಾ ಸಂಸ್ಥೆಯು ಸಂಶೋಧನೆಯ ಫಲವು ಹಿನಸಾಲಿನವರೆಗೆ ತಪ್ಪಲಿಸಿದೆ ಹಿಡಿನು ಕನಾಟಕದಲ್ಲಿಯು ಸರೆಗೆ, ಕಾಶ್ಮೀರದಿಂದ ಜನ್ಸಾಮಿನ ವರೆಗೆ ಲಭ್ಯವಾಗುವುದು. ಪೆಶಲಿಯಲ್ಲಿ ಮಲೇರಿಯಾ ನಿರೋಧ ಕಾರ್ಯದ ಜವಾಬ್ದಾರಿಯು

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ ೧೯೨೯ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು ೪½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

೧. ಮದುವೆಯೂ ಹತ್ತಲ ಮತ್ತು ಇತರ ನಗೆಯಾಟಗಳು– ನಾಟಕ ಕರ್ತರು: ಬೇಂದ್ರೆ ಲಕ್ಷ್ಮಣರಾಯರು. ಪ್ರಕಾಶಕರು: ಸಾಹಿತ್ಯ ಭಂಡಾರ, ಮಲ್ಲಿಗೆ, ಪುಟ್ಟಳ್ಳಿ. ಪುಟ ಕ್ರೌನ್ ೧/೮ರ ೧೫೦. ಬೆಲೆ ಸಾರ್ವತ್ರಿಕ ರೂ. ೧.೮೫.

ಪರಿವರ್ತನ, ಧಾರ್ಮಶ್ರೀ ಎಂಬ ನಾಟಕಗಳನ್ನೂ ಪಡೆದು ಬರೆದಿರಬೇಕು ಎಂಬ ಪಕಾರಕ ಸಂಕಲನವನ್ನು ಬರೆದಿರುವ ಬೇಂದ್ರೆ ಲಕ್ಷ್ಮಣರಾಯರೆ ಈ ಕೃತಿಯುರ್ ಏಕಾಂಕಗಳಿಂದ ಕೂಡಿದೆ. ಮದುವೆಹತ್ತಲವೆಂಬ ಪ್ರಾರಂಭದ ಏಕಾಂಕಿಯ ನ್ಮುಳಿದೆ, ಉಳಿದಿವುಗಳು ಚಿಕ್ಕವಾಗಿವೆ. ಹೆಸರೇ ಸೂಚಿಸುವಂತೆ, ಇದರಲ್ಲಿರುವ ಏಕಾಂಕಿಗಳಿಗೆಲ್ಲ ನಗೆಯೇ ಆಧಾರ. ಕೃತಿನಾಟಕವನ್ನು ಓದುವಾಗಲೂ ನಗೆಯು ಉಕ್ಕಿ ಬರುವುದು. ಇವೆ ಕಾಟುಂಬಿಕ ಜೀವನದ ಜವಕರವನ್ನು ಎತ್ತಿ ತೋರಿಸುತ್ತವೆ. ಎಲ್ಲವುಗಳಿಗಿಂತಲೂ, ಖೋಲಿ ಸಂಪಾದಿಸಲು ನಾಟಕವಾದಿ ರಂಗ ಎರವಾಗಿ ತಂದ ಪತ್ತಲಕ್ಕೆ ಬರಲಾಗಿ ಕುಮೂಗೆ ಮದಿವೀ ಪತ್ತಲ ದೊರೆತ ಘಟನೆ ಬಹಳ ಸುಂದರ ರೀತಿಯಲ್ಲಿ ಹೆಣೆಯಲ್ಪಟ್ಟಿವೆ. ಆತಿಥಿಗಳ ಕಾಟದಿಂದ ಸಾರಾಗಲೊಂದು ನಾಟಕವೂಡಿದ ಮುದ್ದಣ್ಣನು ಕೊನೆಗೆ ಬೇಡಿಸಲ್ಲಿ ಸಿಕ್ಕಿಬಿದ್ದ ಸಂಗತಿ ಅತಿಥಿ ಸಾರ್ವಭೌಮದಲ್ಲಿ ನಿರೂಪಿತವಾಗಿದೆ. ಗಂಡ ಹೆಂಡತಿಯನ್ನು ಬಲಾತ್ಕಾರದಿಂದೊಮ್ಮೆ ಸುಮ್ಮನಿಸಿದರೂ ದೈನಂದಿನ ಕಾರ್ಯಕ್ರಮಕ್ಕೆ ಪುಡದಿರೊಡನೆ ಸಂಧಾನವೇ ಬೇಕೆಂಬ ಅನುಭವವೇನ್ನ ವಿಚಾರವು 'ಗೋಪಾಳದ ಗೋಪಾಳದಲ್ಲಡಕವಾಗಿದೆ. ಅನ್ಯ ವರ್ಣ ಭಪೇತಕನ್ನುನ್ನಲ್ಲಿ ಅವಿಪಾಹಿತ ಪ್ರೌಢಿಯರ ಚಿತ್ರವನ್ನೂ ನಾರ್ಮಾನಕರಂ ಮತ್ತು ಕುಂಭಕರ್ಣಗಳಲ್ಲಿ ಸಾಂಸಾರಿಕ ಚಿತ್ರವನ್ನೂ ಸಂತಾನ ಲಕ್ಷ್ಮಿಯಲ್ಲಿ ಮಕ್ಕಳ ಕೋಲಾಹಲಗಳ ವಿಚಾರವನ್ನೂ ಕಾಣಬಹುದು. ತಿರುವು ಮುರುವಿನಲ್ಲಿ ಸಾರಿಗೆಯಧಿಕಾರಿಗಳ ತಪ್ಪಿಸಿದಾಗಿ ಪೇಚಿನಲ್ಲಿ ಬಿದ್ದ ಅಪ್ಸರೆ ಹಾಗೂ ಪಿಠ್ಠ ಕರ್ಮಗಾರನ್ನು ಕಾಣುತ್ತೇವೆ. ಹೀಗೆ ಪ್ರತಿಯೊಂದು ಕಿರುನಾಟಕಕ್ಕೂ ಒಂದೊಂದು ವಸ್ತು ವಿದ್ದರೂ ಅವು ಕೇವಲ ನಗೆಯಾಟಕ್ಕಾಗಿಯೇ ಇಲ್ಲಿ ಕೂಡಿಕೊಂಡಿವೆ. ಪುಸ್ತಕದ ಮೊದಲಿಗೆದ ಕೊನೆಯವರೆಗೂ ನಕ್ಕು ನಕ್ಕು ಪಣ್ಣಾಗಿಸುವ ಪಾತ್ರಗಳೂ ಘಟನೆಗಳೂ ಎದ್ದು ಕಾಣುತ್ತವೆ. ಆಯಾ ಪಾತ್ರಗಳ ಸ್ವಭಾವಾನುರೂಪಕ್ಕೆ, ವಿಶಾತ್ರಪರಿಜ್ಞೇಷಣೆಗಳು ಸಮರ್ಪಕವಾಗಿ ಬಂದಿವೆ. ನೈಜವಾದ ಧಾರವಾಡ ಕನ್ನಡದ ಸರಸಂಭಾಷಣೆ, ಅಲ್ಲಿ ಕಂಡುಬರುವ ಸಹಜ ರಸಿಕತೆ ಪಾತಿನ ಏರಿಗಳ ಓಟಗಳು ಮನಮೋಹಕವಾಗಿದೆ. ಈ ಮಾತುಗಳಲ್ಲಿ ಪ್ರಡದಬನೆ, ಚಿಮಣಿಕ್ಕಾರ, ಅನುಭವ, ಜ್ಞಾನ ಗಳು ಇನೆ ಎಂದೆ ಮುನ್ನುಡಿಕಾರ ಪ್ರಿನ್ಸಿಪಲ್ ಗೋಕಾಕರೊಡನೆ ನಾವೊಂದೆ ದೃನಿಗೂಡಿಸುತ್ತೇವೆ. ಇದೇ ರೀತಿಯ ಹಾಸ್ಯಪ್ರಧಾನ ಕೃತಿಗಳು ಕನ್ನಡದಲ್ಲಿ ತೀರಾ ವಿರಳವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಈ ಗ್ರಂಥವನ್ನು ಗೋಕಾಕರು ಮುನ್ನುಡಿಯು ಮೂಲಕ ಪರಿಸಿರುವರು. ಸಾಹಿತ್ಯಕೃತಿ ಪ್ರಕಾಶಕರಾದ ಮ. ಗೋವಿಂದರಾಯರು ತಮ್ಮ ಸಾಹಿತ್ಯ ಭಂಡಾರದ ಮೂಲಕ ಕೃತಿಯನ್ನು ಪ್ರಕಟಿಸಿರುವರು. ಅಂದವಾದ ರಕ್ಷಾಪತ್ರ, ಮುನ್ನುಡಿಗಳು ಪುಸ್ತಕದ ಗೌರವಕ್ಕೆ ತಕ್ಕುದಾಗಿದೆ. ಲೇಖಕರ ಪರಿಶ್ರಮಕ್ಕೂ ಪ್ರಕಾಶಕರ ಕಾರ್ಯಕ್ಕೂ ಕನ್ನಡಿಗರ ಬೆಂಬಲ ದೊರೆಯುವುದೆಂದು ಆಶಿಸುತ್ತೇವೆ.

ಸಾಹಿತ್ಯದ ಹಿನ್ನೆಲೆ— ಬತೆದನರು: ವಿದ್ವಾನ್ ಕೆ ವೆಂಕಟರಾಯಾಚಾರ್ಯರು, ಸುರತ್ಕಲ್ಲು ಪ್ರಕಾಶಕರು: ಸಾಹಿತ್ಯ ಭಂಡಾರ, ಪುಟ್ಟಳ್ಳಿ. ಪುಟ: ಕ್ರಾನ್ ೧ ಳರ ೧೨+೧೧೧ ಬೆಲೆ. ರೂ. ೧-೪-೦.

ಅಧುನಿಕ ಸಾಹಿತ್ಯದಲ್ಲಿ ಸಂಶೋಧನಾ ಸಾಹಿತ್ಯಕ್ಕೊಂದು ಮಹತ್ವದ ಸ್ಥಾನವಿದೆ. ಆದರೆ, ಆಂತಹ ಸಾಹಿತ್ಯವು ಇಂದು ಕನ್ನಡದಲ್ಲಿ ಬಹಳ ಅಪರೂಪವಾಗಿದೆ. ಅಂಗ್ಲ ಸಂಶೋಧಕರಿಗೆ ಪೂರ್ವದಲ್ಲಿ ಸ್ರಾಯ್ಕ್ ಭಾರತೀಯರಲ್ಲಿ ಸಂಶೋಧಕ ಪ್ರವೃತ್ತಿಯು ಮೂಡಿಲ್ಲವೆಂದು ತೋರುತ್ತದೆ. ಆದರೆ, ಕಳೆದೊಂದು ಶತಮಾನದಲ್ಲಿ, ಅಂಗ್ಲದೇಶದ ಮಹಾನೀಯರ ಸಾಹಸದಿಂದ ಸ್ಥಾಪಿಗೊಂದ ಕೆಲವರು ಈ ಕಷ್ಟಪ್ರದವಾದ ಸಾಮಸಪೂರ್ಣ ಕಾರ್ಯವನ್ನು ಕೈಕೊಂಡರು ಶ್ರೀರಂಗಾಪಾರ್, ನರಸಿಂಹಾಚಾರ್ಯರ್, ಗೋವಿಂದ ಪೈ, ಬಿ. ಎ. ಸಾಲೆತ್ತೂರ್, ಮುಳಿಯ ತಿಮ್ಮಪ್ಪಯ್ಯ, ಶಂ. ಬಾ ಜೋಶಿ, ರಂ ಶ್ರೀ ಮುಗಳಿ ಮೊದಲಾದವರ ಪರಿಶ್ರಮದಿಂದ, ಕಾಲಗರ್ಭದಲ್ಲಿ ಅಡಗಿದ ಕೆಲವು ಸಾಹಿತ್ಯ ಹಾಗೂ ಇತಿಹಾಸದ ಹಿನ್ನೆಲೆಗಳು ಬಯಲಿಗೆ ಬಂದಿವೆ. "ಸಾಹಿತ್ಯದ ಹಿನ್ನೆಲೆ" ಎಂಬ ಈ ಗ್ರಂಥವು ಕನ್ನಡ ಸಂಶೋಧನಾಕಾರ್ಯದಲ್ಲಿ ಒಂದು ಪ್ರಯತ್ನವೆಂದು ಹೇಳಬಹುದು. ಇದರಲ್ಲಿ ಪಂಪ ಭಾರತದ ಚಾಲುಕ್ಯರು ಯಾರು, ವಿಕ್ರಮಾರ್ಜುನನ ರಾಜಯರು, ಪಂಪಭಾರತದ ಕರ್ಣ, ಗದಾಯುದ್ಧದ ರಾಜಬಳಗ, ಕವಿರನ್ನನು ಶಾಸನ ಬರೆದಿದ್ದನೇ, ಕವಿರಾಜ ಮಾರ್ಗದ ಕವಿಯಾರು?, ವೇಸರವಾಸಿನುಯ್ಯನೂ ಜಯಸಿಂಯ ರಾಜನೂ, ಕುಮಾರವ್ಯಾಸನ ಕಾಲ ಯಾವುದು? ಶ್ರೀ ಮದ್ರಾಜಾರೈರೆ ಕಾಲಮಾನ ವಿಚಾರ, ವಿಜಯನಗರ ಕಾಲದ ಶಾಸನಗಳು, ಸತ್ಯ ಪುತ್ರ ಶಾತ್ವರ್ಥವಿಚಾರ, ಕೆಲವು ತುಳುನುಡಿಗಳು, ಕೆಮೋತ್-ವ್ಯಾಖ್ಯಾನ್ಸ್" ಪ್ರಕಟಿಸಿದ ಕೆಲವು ನುಡಿಮುತ್ತುಗಳು ಮೊದಲಾದ ಪಂಥರುಗಳ ಅಧ್ಯಯನ ವಿರಲು ಎಂಬ ವಿಷಯಗಳನ್ನು ಸಂಶೋಧನಾತ್ಮಕ ಲೇಖನಗಳು ಕಾಣಿಸಿಕೊಂಡಿವೆ. ಕೊನೆಯಲ್ಲಿ ಕನ್ನಡ ಸಾಹಿತ್ಯ ಸಂಶೋಧನಾರಂಗದಲ್ಲಿ ದುಡಿದ ಸಾಹಸೀ ಕರ ಸೂಕ್ಷ್ಮ ಪರಿಚಯ ವನ್ನೂ ಕೊಟ್ಟಿದ್ದಾರೆ. ಸಂಶೋಧಕರಲ್ಲಿ ಮುಖ್ಯವಾಗಿ ಸಾಸ್ಯ, ಕ್ಷ ಸಹಿಷ್ಣುತೆ, ಪ್ರಾಮಾಣಿಕತೆ, ವಿವೇಚನಾ ಬುದ್ಧಿ, ಕಲ್ಪನಾವಿಲಸ, ಕೃತಜ್ಞತಾಭಾವ ಗಳು ಇರಬೇಕಾಗುತ್ತದೆ. ಹಿಂದೆ ಆಯಾ ವಿಷಯಗಳಲ್ಲಿ ಬೇರಬೇರೆ ಸಂಶೋಧಕರು ಸಂಗ್ರಹಿಸಿದ ವಿಷಯ ಕೈಗೊಂಡ ನಿರ್ಣಯಗಳನ್ನು ಸರಿಯಾಗಿ ವಿಮರ್ಶಿಸಿ, ಅಭಿರುಚಿಪೂರ್ಣವಾದ ಕಂಡುಹಿಡಿಕೆಗಳನ್ನು ಎತ್ತಿತೋರಿಸಿ, ತನ್ನ ಬುದ್ಧಿಗೆ ಹೊಳೆದ ತಾನು ತನ್ನ ಶ್ರಮದಿಂದ ತಿಳಿದುಕೊಂಡ ಸತ್ಯಾಂಶಗಳನ್ನು ಹೊಸಗೆಡಪಬೇಕು ಇತಹ ಕಾರ್ಯದಲ್ಲಿ ಶ್ರೀಮಾನ್ ಆಚಾರ್ಯರು ಪ್ರಾಚೀನ ಸಾಹಿತ್ಯ ಸಂಶೋಧನ ಪುಸ್ತಕ ಹಾಗೂ ಲೇಖನಗಳನ್ನು ಸಂಗ್ರಹಿಸಿ, ಅವ ಳ ಸಹಾಯದಿಂದ ಈ ಮೇಲಿನ ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ ಕೃತಿ ಲೇಖನಾರಂಭದಲ್ಲಿ ತಮ್ಮ ಸಂಶೋಧನೆಯಫಲವನ್ನೂ ತಾವು ಅನುಸರಿಸಿರುವ ಆಧಾರ ಗ್ರಂಥ ಲೇಖನಗಳ ನಿರವನ್ನೂ ಕೊಟ್ಟಿದ್ದಾರೆ. ಈ ಸಂಗ್ರಹದ ಲೇಖನಗಳಲ್ಲಿ ಮೊದಲ ೧೫೦ ಪುಸ್ತಪ್ರತಿ ಸಂಕಲನಕ್ಕೆ ಮದ್ರಾಸು ಸರಕಾರದಿಂದ ಬಹುಬಾನಪೂರ್ವ ಹೊರತಿದ್ದು, ಸಂಶೋಧಕರಿಗೆ ಯೋಗ್ಯ ಪ್ರೋತ್ಸಾಹ ದೊರೆತಿವೆ ಈ ಮೊದಲೇ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಈ ಲೇಖನಗಳು ಪುಸ್ತಕರೂಪದಿಂದ ಬಂದಿದುದು ಈ ಪ್ರೋತ್ಸಾಹದಿಂದಾಗಿ ಸಾಧ್ಯವಾಗಿರಬೇಕು ಎಂದು ಹೇಳಲಡ್ಡಿಯಿಲ್ಲ. ಹಿಂದಿನ ಕೆಲವೊಂದು ಗ್ರಂಥ ಹಾಗೂ ಲೇಖನಗಳು ಈಗ ಕನ್ನಡಿಗೆ ದೊರವಾಗಿರುವುದರಿಂದ ಈ ಪುಸ್ತಕವಲ್ಲಿ ಅಂತರ್ಪುಗಳಲ್ಲಿ ಕೆಲವೆಷ್ಟನ್ನು ಪುನರಿಸಿರುವುದರಿಂದ, ಮುಂದಿನ ಸಂಶೋಧಕರಿಗೆ ಇದು ಮಾರ್ಗದರ್ಶನ ಮಾಡುತ್ತದೆ; ಸಾಹಿತ್ಯಾಭ್ಯಾಸಿಗಳಿಗೆ ಸರಿಯಾದ ವಿಷಯ ತೋರಿಸುತ್ತದೆ. ಇಂತಹ ಮಹತ್ವದ ಪುಸ್ತಕವನ್ನು ಕನ್ನಡದ ಸಂಶೋಧಕರೊಬ್ಬರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಪರಿಚಯವನ್ನು ಬರೆದು ಕಳಿಸಿಕೊಟ್ಟಿದ್ದಾರೆ. ಕನ್ನಡಿಗರೆಲ್ಲರೂ ಈ ಸಂಶೋಧನ ಗ್ರಂಥವನ್ನು ಅಭ್ಯಾಸಮಾಡಿ ಉದ್ದೇಶವುದೇಲಾದರೂ ಅಭಿವೃದ್ಧಿ ಸಂಗ್ರಹಿಸಬೇಕು. ಲೇಖಕರಿಗೆ ಹಾಗೂ ಪ್ರಕಾಶಕರಿಗೆ ಕೆಲಸಕ್ಕೆ ತಕ್ಕ ಪ್ರತಿಫಲ ದೊರೆಯಬೇಕು. —ಗೋರಾ

ಉಷಾ ಹೊಲಿಗೆ ಯಂತ್ರಗಳು



ನಗದಿಗೆ ಅಥವಾ ಸುಲಭ ಕಂತುಗಳ ಪದ್ಧತಿಯಲ್ಲಿ ಮಾರಾಟಕ್ಕೆ ಸಿಗುತ್ತವೆ.

ಎರಡು ವರ್ಷಗಳ ವರೆಗೆ ಉಚಿತ ದುರಸ್ತಿಯ ಗ್ಯಾರಂಟಿ.

ಪ್ರಮುಖ ಪಟ್ಟಣಗಳಲ್ಲೆಲ್ಲ
ಉಷಾ ಏಜಂಟರಿದ್ದಾರೆ.

ಸೋಲ್ ಸೆಲ್ಲಿಂಗ್ ಏಜಂಟರು:
ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
ಮದ್ರಾಸು—1

೭೦ ವರ್ಷಗಳಿಂದಲೂ ಪ್ರಸಿದ್ಧ ಇದ.

ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಏಗ್ಯೂಮಿಕ್ಶರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: **ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್,**
ಬ್ರಾಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಭೂಸುಧಾರಣೆ—

ಆದರ ಪೂರ್ವೋತ್ತರಗಳೇನು?

ಲೇ:— ಶ್ರೀ. ಕೂತಿಗೋಡು ನಾಗಭೂಷಣ ಭಟ್ಟ, ಬೆಳಗುತ್ತ.

ಶ್ರೀ ಜಿತ್ತಿ ಸಮಿತಿಯವರು ಉತ್ತರ ಕರ್ನಾಟಕದ ಕರಿ ಭೂಮಿಗಾಗಲಿ ನೀರಾವರಿ ಅನುಕೂಲತೆಗಳಿಲ್ಲದ ಬಯಲಾಡು ಪ್ರದೇಶಗಳಿಗಾಗಲಿ ವಿಭಿನ್ನವಾದ ಮಳೆ ಬರುವ ಪ್ರದೇಶಗಳಿಗಾಗಲಿ ಪ್ರತ್ಯೇಕವಾದ ಪಶ್ಚಿಮ ಕನ್ನಡ ಮುಂತಾದ ಸ್ವಲ್ಪ ಕಾಡು ಪ್ರದೇಶಗಳಿಗಾಗಲಿ ನೀರಾವರಿ ಅನುಕೂಲತೆಯಿರುವ ಪ್ರದೇಶಗಳಿಗೆಲ್ಲಾ ಒಂದೇ ವಿಧವಾದ ಗೇಣಿ ಶಾಸನವಿರಬೇಕೆಂದು ಹೇಳುವದೇ ತೀರಾ ಅಸಮಂಜಸವೂ ಅಸಾಮರ್ಪಕವೂ ಆಗಿರುತ್ತದೆ. ಮತ್ತೆರಡನೆಯ ಗುಡ್ಡ ಕಾಡು ಪ್ರದೇಶದಲ್ಲಿರುವ ಹಿಡುವಳಿದಾರರು ಪಟ್ಟ ಶ್ರಮವಾಗಲಿ, ಕಾಲವಾಗಲಿ, ಮೂಲ ಧನವಾಗಲಿ ಎಷ್ಟು ವ್ಯಯವಾಗಿ ಜಮೀನು ರೂಢಿಗೆ ತಂದಿರುತ್ತಾರೆಂಬುದನ್ನು ನಾವೂ ಪರಿಶೀಲಿಸಲ್ಲವೆಂಬುದನ್ನು ಹೇಳಬೇಕಾಗುತ್ತದೆ. ನಮ್ಮ ದೇಶದ ಜನರ ಆರ್ಥಿಕ, ಸಾಮಾಜಿಕ, ಕೌಟುಂಬಿಕ ಸ್ಥಿತಿಗೆ ಅನುಸರಿಸಿ ರಾಜ್ಯಾಂಗ ಘಟನೆಯ ಕಾನೂನು ರಚಿಸಿರುವುದಾಗಿರುತ್ತದೆ. ಘಟನಾವಳಿಯ ಕಾನೂನುಗಳನ್ವೇನೂ ತಿಳಿಯದ ಶ್ರೀ ಜಿತ್ತಿ ಸಮಿತಿಯ ಶಿಫಾರಸ್ಸುಗಳು ಕೃಷಿಕನ ಉತ್ಪಾದನೆಗೆ ನಿಯಂತ್ರಣವನ್ನು ತಂದಿರುವದೂ ಅಲ್ಲದೆ ಭೂಸುಧಾರಣೆಯ ಹೆಸರಿನಲ್ಲಿ ಜನೋನ್ನತಿಯ ಕಿತ್ತು ಹಂಚುವದನ್ನು, ತೋರಿಸಿಪ್ಪು ಪರಿಹಾರ ಕೊಡುವ ದರೋಡೆಕೋರತನವನ್ನೂ ಶಾಸನವನ್ನಾಗಿ ಮಾಡಲು ಸಲಹೆ ಮಾಡಿವೆ ಇವರು ಮಾಡಿರುವ ಸಲಹೆಗಳೆಲ್ಲಾ ಕಾನೂನಾಗಿ ಜ್ಯಾರಿಯಲ್ಲಿ ಬಂದರೆ ಕೃಷಿಕನ ಕೃಷಿಯೂ ಆರ್ಥಿಕ ಅವನತಿಯೂ ಏಕ ಕಾಲದಲ್ಲಿ ಸಂಭವಿಸುತ್ತದೆ.

ಭೂ ಮಾಲಿಕರು ತಮ್ಮ ಜೀವಿತ ಕಾಲದಲ್ಲಿ ಶ್ರಮ, ಕಾಲ, ಮೂಲಧನಗಳನ್ನು ವ್ಯಯ ಮಾಡಿ ತಮ್ಮ ವೃದ್ಧಾಪ್ಯದಲ್ಲಿ ಸುಖವಾಗಿರಬೇಕೆಂದೂ ತಮ್ಮ ಕಷ್ಟಾರ್ಜಿತವು ತಮ್ಮ ಸಂತತಿಗೆ ಇರಬೇಕೆಂದೂ ರೂಢಿಸಿದ ಭೂಮಿಯನ್ನು ಭೂಸುಧಾರಣೆಯ ಹೆಸರಿನಲ್ಲಿ ಕಿತ್ತು ಪಂಚುವದರಿಂದ ಭೂಸುಧಾರಣೆ ಆಗುತ್ತೆಂದೂ ಆರ್ಥಿಕ ಆಹಾರ ವಸ್ತುಗಳ ಉತ್ಪಾದನೆಯಾಗಿ ಆರ್ಥಿಕ ಔನ್ನತ್ಯ ಕೃಷಿಕುಲಕ್ಕೆ ಉಂಟಾಗುವದೆಂದೂ ಜಿತ್ತಿ ಸಮಿತಿಯ ಶಿಫಾರಸಾಗಿದೆ. ಇದು ಇವರ ಆನುಭವಿಕತೆಯು ಪ್ರತಿಕಲವಾಗಿರುತ್ತದೆ. ಇದು ಇವರ ಅಧಿಕಾರ ವ್ಯಾಪ್ತಿಗೆ ಮೀರಿದ ಸಲಹೆ ಆಗಿರುತ್ತದೆ.

ಆಧುನಿಕ ಆಹಾರ ವಸ್ತುಗಳ ಉತ್ಪಾದನೆ ಆಗಬೇಕಾದರೆ ಸಾಗುವಳಿ ವಿಸ್ತೀರ್ಣ ಆಗಬೇಕು, ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂಬ ಖಾತ್ರಿ ಕೃಷಿಕರಿಗೆ ಬರಬೇಕು. ನಮ್ಮ ಶ್ರಮಾರ್ಜಿತವಾದ ಭೂಸ್ಥಿತಿ ತಮ್ಮ ಸಂತತಿಗೆ ಖಂಡಿತವಾಗಿ ಇರುತ್ತದೆಯೆಂಬ ಭರವಸೆ ಇವರೇನೇ ದೇಶದ ಆರ್ಥಿಕ ಉನ್ನತಿಯಾಗಲೀ ಆಧಿಕ ಆಹಾರವಸ್ತುಗಳ ಉತ್ಪಾದನೆಯೇ ಆಗಲಿ ಮಾಡಲು ಸಾಧ್ಯವೇ ಇಲ್ಲದ ಅರ್ಥವಿಲ್ಲದ ಸಮತಾನಾದವನ್ನು ಕೃಷಿಕ ವರ್ಗದಲ್ಲಿ ಕಾನೂನು ಮೂಲಕ ತಂದಿಟ್ಟ ಪರಿಪ್ರೇಕ್ಷೆಯನ್ನು ಪಂಚುವುದೂ ಅಲ್ಲದೆ ಕೃಷಿಕರ ಕ್ರಿಯಾಶಕ್ತಿಯನ್ನು ಕುಂಠಿತಗೊಳಿಸಿದಂತಾಗುತ್ತದೆ.

ಶಾಸ್ತ್ರಜ್ಞನ ಜ್ಞಾನಗಳು ಅನುಭವಜನ್ಯ ಜ್ಞಾನದಿಂದ ಕೂಡಿದವರಾಗಿ ಸರ್ವರ ಹಿತವೃಷ್ಟಿಯಿಂದ ತ್ರಿಕಾಲಾಬಾಧಿತವಾದ ಕಾನೂನನ್ನಾಗಲೀ ಸಲಹೆಗಳನ್ನಾಗಲೀ ನೋಡಿದರೆ ಆದರಿಂದ ಸಮಾಜದ ಸರ್ವರ ಯೋಗ ಕ್ಷೇಮಕ್ಕೂ ಸಹಾಯವಾದೀತೇ ವಿನಃ ಶ್ರೀ ಜಿತ್ತಿ ಸಮಿತಿಯವರ ಸಲಹೆಯಂತೆ ಕೃಷಿಕರ ವರ್ಗವನ್ನು ಮಾತ್ರ ಸಮಾಜದ ಸಮತಾವಾದದ ಪರೀಕ್ಷಾ ಕ್ಷೇತ್ರವನ್ನಾಗಿ ಮಾಡಿ ಜ್ಯಾಪಾರ, ಕೈಗಾರಿಕೆ ಮತ್ತು ಸರಕಾರಿ ನೌಕರರ ಸಂಬಳ ಸಾರಿಗೆಯ ವರವಾನಗಳನ್ನು ಸಮಾಜ ಸಮತಾವಾದಕ್ಕೆ ಒಳಪಡಿಸದೇ ಬಿಟ್ಟಿರುವದೇ ಕೃಷಿ ವರ್ಗಕ್ಕೆ ಬಾಧಿರುವ ದ್ರೋಹವೂ ಪಕ್ಷಪಾತವೂ ಆಗಿರುತ್ತದೆ.

ಗೇಣಿದಾರರ ಕಾನೂನಳಿಯಲ್ಲಿರುವ ಜನೋನಿನ ಪೂರ್ವಸ್ಥಿತಿಯನ್ನು ಜಿತ್ತಿ ಸಮಿತಿಯವರು ತಿಳಿದೇ ಇಲ್ಲ. ಕಾಡುಮೇಡುಗಳನ್ನು ದರಖಾಸ್ತಿನಲ್ಲಿ ಪಡೆದ ಖಾತೆದಾರರನು ಶ್ರಮ-ಕಾಲ-ಮೂಲ ಧನಗಳನ್ನು ವ್ಯಯಮಾಡಿ ಜಮೀನನ್ನು ಕೃಷಿಪಾಡಿ ಫಲಲು ಬರಲು ಬರುವಾದ ನಂತರ ಅಲ್ಲಿ ರೈತರನ್ನು ಇಟ್ಟು ಆವರಿಗೆ ಎತ್ತು-ಕರಿ-ಬೀಜಕ್ಕೂ, ಊಟಕ್ಕೂ ಧನಸ ಕೊಟ್ಟು ಖರ್ಚಿನ ಆವಶ್ಯಕತೆಗಿಂತ ಹಣ ಒಪಗಿಸಿ ಆವನಿಂದ ತನ್ನ ಮೂಲಧನದ ಬಡ್ಡಿಗಾಗಿ ಮೂರನೇ ಒಂದರಷ್ಟು ಗೇಣಿಯನ್ನೋ ನಾಲ್ಕನೇ ಒಂದರಷ್ಟು ಗೇಣಿಯನ್ನೋ ಪಡೆಯುತ್ತಿದ್ದಾರೆ. ಆದ ಬೆಳೆಯಲ್ಲಿ ಒಂದರಷ್ಟನ್ನು ಆಲ್ಲಿರುವ ರೈತರಿಗೆ ಜೀವನಕ್ಕಾಗಿ ಒಂದರಷ್ಟನ್ನೂ ಕೃಷಿಯ ಶ್ರಮಜೀವಿಗಳಿಗೆ ಪಡಿತರದ ಬಗ್ಗೂ ಒಂದರಷ್ಟನ್ನು ಭೂಮಾಲಿಕನು ಪೂರಾರಿಯನ ಮೂಲಧನದ ಬಡ್ಡಿಗೂ ನಿಸ್ಸರ್ಪ ಮಾಡಿಕೊಂಡು ಗೇಣಿ ಪಡೆಯುತ್ತಿದ್ದಾನೆಯೇ ವಿನಾ ಗೇಣಿದಾರರೇನೇ ಜಮೀನು ಕಡಿದು ಆಬಾದಿಗೆ ತಂದು ಹಿಡುವಳಿದಾರನ ವರ್ಗಕ್ಕೆ ಗೇಣಿಪಾನತಿ ಮಾಡಿದ ದಾಖಲೆ ಇದುವರೆಗೂ ಎಲ್ಲೂ ಇಲ್ಲ. ಈಗಿರುವ ಗೇಣಿದಾರರೆಲ್ಲ ಖಾತೆದಾರರ ಏಜಂಟರುಗಳಾಗಿರುವರೆ ವಿನಾ ಇವರುಗಳು ಯಾರೂ ಈಗ ಇವರು ಸಾಗುವಳಿ ಮಾಡುತ್ತಿರುವ ಜಮೀನನ್ನ ಕೃಷಿಗೆ ಕಾಲವನ್ನಾಗಲೀ ಮೂಲಧನವನ್ನಾಗಲೀ ವಿನಿಯೋಗಿಸಿದವರಲ್ಲ. ವ್ಯವಸಾಯವು ಮತ್ತುಮೂನದಲ್ಲಿ ಅನುಸರಿಸಿ ಏಕಕಾಲದಲ್ಲಿ ನಡೆಯಬೇಕಾದ್ದರಿಂದ ಸಣ್ಣ ವ್ಯವಸಾಯಗಾರರು ವಿನಾ ಸೇಕಡಾ ೨೦ ಜನ ವ್ಯವಸಾಯಗಾರರು ಕೂಲಿಗಳನ್ನು ಕರೆದು ವಿವಿಧ ವ್ಯವಸಾಯವನ್ನು ಮಾಡಿಸ (ತಿಳಿದವರಿಂದ) ಬೇಕಾಗುವದರಿಂದ ಈ ವ್ಯವಸಾಯದ ಶ್ರಮಜೀವಿಗಳು ಪಡಿತರವನ್ನು ಹಿಡಿದವರಿಗಾಗಿ ನ್ಯಾಯವನ್ನು ಕೊಡಿಸಿ ಸಮಾಜ ಸಮತಾವಾದದ ಕಾನೂನಿನ ಬೆಂಬಲ ಸಿಗುತ್ತದೆಂದು ಭಾವಿಸಿ ಖಾತೆಯ ಕಕ್ಕೆ ತಮಗೆ ಬರಬೇಕೆಂದು ಹೇಳಲಿಕ್ಕೆ ಹೊರಟಿರುವದೇ ಆಗುತ್ತದೆ. ಭೂಮಾಲೀಕರ ಮತ್ತು ಗೇಣಿದಾರರಲ್ಲಿ ಮತ್ತು ಶ್ರಮಜೀವಿಗಳಲ್ಲಿ ಮೆದಾಲೆಯ ಪಲ್ಟಾಜಿಸವನ್ನು ಸಾಮಾಜ ಸಮತಾವಾದವು ಹೇಸಿನಲ್ಲಿ ಬಿತ್ತಿದ್ದರೆ ಅನರ್ಥ ಪರಿಣಾಮವೇ ಸರಿ.

ದೇಶವು ರಾಜಕೀಯ ಆರ್ಥಿಕ-ಸಾಮಾಜಿಕ ಪ್ರಗತಿ ಆದಹೊರತು ದೇಶಾಭ್ಯುದಯ ಖಂಡಿತ ಆಗಲಾರದು. ಪರಕೀಯರ ಅಳ್ವಿಕೆಯಿಂದ ತಪ್ಪಿಸಿಕೊಂಡಾಗ ಸ್ವಕೀಯರಾವ ನನ್ನು ಮುಖಂಡರ ಕೇಂದ್ರೀಕೃತ ಆಡಳಿತ ಪದ್ಧತಿಯಿಂದ ಪ್ರಜಾಕೋಸಣಿಯು ಮೊಪಲಿಗಿತ ಲೂ ಆಧಿಕವಾಗಿ ಈಗ ಇಲ್ಲಿ ನಡೆಯುತ್ತಿದೆ. ರಾಷ್ಟ್ರಾಭ್ಯುದ್ಧಿಯಾಗಿ ಪ್ರಜಾಪ್ರಭುತ್ವವು ಸುಸ್ಥಿರವಾಗಿ ಬೆಳೆಯಬೇಕಾದರೆ ಜನರ ಉತ್ಪಾದನಾ ಶಕ್ತಿಯು ಬೆಳೆಯಬೇಕು. ಉತ್ಪಾದನಾ ಶಕ್ತಿ ಬೆಳೆಯಬೆ ಇರುವಾಗ ತೀರ್ಗಿ, ಸುಂಕ ಕಂದಾಯಗಳ ಹೊರೆ ಮಿತಿಮೀರಿ ಹೇರಿ ಕೃತಕ ರೀತಿಯಿಂದ ಹಣದ ಉಬ್ಬರವನ್ನು ಉಂಟುಮಾಡಿರುವ ಸರಕಾರದ ಆರ್ಥಿಕ ನೀತಿಯಿಂದ ರಾಷ್ಟ್ರದ ಅವನತಿಯೇ ವಿನಾ ಪ್ರಗತಿಗಾಮಿಯಾಗಿಲ್ಲ.

ಜೀವನಾವಶ್ಯಕವಾದ ಆಹಾರ ಸಮಾರ್ಥಗಳನ್ನು ವಿಶೇಷವಾಗಿ ಉತ್ಪಾದನೆ ಮಾಡಿ ಆ ಭಾವನಕ್ಕೂ ಕ್ಷಾಮಕ್ಕೂ ಸ್ವಕೀಕಾರವನ್ನು

ಸೋಲೊಪ್ಪಿದವಳು

(೨ನೇ ಪುಟದಿಂದ)

ಮವಾಗಿ ಕೆಲಸಗಳೆಂಬಾಗ ದಿನವಿಡೀ ಹರಟೆ ಹೊಡೆದು ವ್ಯರ್ಥವಾದವನ್ನು ಕಳಿತು, ಗಂಡಸು ಇಷ್ಟು ಶ್ರಮಿಸಿದರೂ ತನ್ನ ದಾಸರೀಗನಬೇಕೆಂದು ಬಯಸುವ ಇವರ ಹಕ್ಕೆಗೇನು ಆರ್ಥ? ನಿಜವಾದ ಮಹಿಳಾಸಂಘದ ಉದ್ದೇಕವೇನು? ಈ ಬಣ್ಣದ ಬೆಡಗಿನ ಚಟ್ಟಿಗಳ ಆದರ್ಶವೇನು?" ಎಂದು ಲಘಿಸುತ್ತಾ, ಇದರಿಂದಾಗಿ ನನ್ನೆ ಉಷೆ ಹಾಳಾದಳಲ್ಲಾ ಎಂದು ಚಿಂತಿಸುತ್ತಾ ಮುನ್ನಡೆದೆ.

'ಆದಂತಾಗಲಿ" ಎಂದು ನಾನು ಆ ದಿನ ಮನೆಗೆ ಹೋಗಲಿಲ್ಲ. ನನಗೆ ತುಂಬಾ ಸಿಟ್ಟು, ನೋವೂ ಉಂಟಾಗಿತ್ತು. ಹೋಟೆಲೊಂದರಲ್ಲಿ ಆ ರಾತ್ರಿಯನ್ನು ಚಡಪಡಿಸುತ್ತಾ ಕಳೆದೆ. ಮರುದಿನ ಪ್ರಾತಃಕಾಲದಲ್ಲೆ ಸೊಗಸಾಗಿ ಸ್ನಾನ ತೀರಿಸಿ ಕಾಫಿ ಹೀರಿ ಆಫೀಸಿಗೆ ಹೋದೆ. ನನ್ನ ತಲೆಯಲ್ಲಿ ಉಷೆಯ ಚಿಂತೆ, ತಡೆಯಲಾರದ ಉತ್ಕಂಠತೆ, ಹೆದರಿಕೆ! ಆದರೆ ಜಟ ವೂ ಇತ್ತು. ಉಷೆಯ ಬಗೆಗೆ ಕ್ರೋಧವೂ ತಿರಸ್ಕಾರವೂ ಉಂಟಾಗಿತ್ತು. ವಿನಾಕಾರಣ ಸಪ್ಪರಣಾಮವಾಗಲೆಂದು ಹಾರೈಸಿದೆ. ಸಂಜೆ ಸ್ವಲ್ಪ ಬೇಗನೆ ಕೃತಕ ಉತ್ಸಾಹವನ್ನು ತೋರಿಸುತ್ತಾ ಸಿಳ್ಳು ಹಾಕುತ್ತಾ ಮನೆಯನ್ನು ಸ್ಪರ್ಶಿಸಿದೆ. ಉಷಾ ಮನೆಯಲ್ಲೇ ಇದ್ದಳು. ಒಂದು ದಿನ ಹೇಗೆ ಕಳೆದಳೆಂದು ತಿಂಯಲಿಲ್ಲ ಸಿಂದೇ ಹೊತ್ತಿನಲ್ಲಿ ಕಮಲಾಬಾಯಿ ಯವ ಭೋದನೆಯಿಂದ ಸಂಪೂರ್ಣ ಬದಲಾದ ಉಷೆಯ ಮುಖದಲ್ಲಿ ಸ್ವಲ್ಪ ಗಾಬರಿಯಿತ್ತು. ಈಗ ಮುಖ ಸ್ವಲ್ಪ ಬಾಡಿತ್ತು.

ಆರೆಗಳಿಗೆ ನನ್ನನ್ನೇ ನೋಡಿದಳು. ಆದರೆ 'ತನ್ನ ತಪ್ಪಿ' ದ ದುರಭಿಮಾನ ಇಳಿದಿರಲಿಲ್ಲ ಮನದಲ್ಲಿ ನೋವು, ಕತೂಹಲ, ಪ್ರೇಮವಿದ್ದರೂ ಕೊಳ್ಳೇಯದ ಹಟ ಅಷ್ಟು ಬೇಗ ಹೋಗಲೊಪ್ಪದು. ಸೋಲೊಪ್ಪದು. ನಾನು ನಗಲಿಲ್ಲ, ಅಳಲಿಲ್ಲ, ಮುಖಗಂಟಿ. ಹಾಕಲಿಲ್ಲ. ಆ ದಿನ ನಮ್ಮೊಳಗೆ ಮಾತೇ ಇಲ್ಲ ಮರುದಿನ ಬೇಗನೇ ಎದ್ದು 'ಟಿಸಿಯೋಗದೆ ಬೆಣ್ಣೆ ಕರಗದು' ಎಂದು ವ ನೆಬಟ್ಟು ಆಫೀಸು ಸೇರಿದೆ. ಹೇಗಾಗುತ್ತಿರುವಂತೆಯೇ ಒಂದು ಉಪಾಯವು ಹೊಳೆಯಿತು. ನಾನು ಸಂತೋಷದಿಂದ, ಪರಮಾನಂದದಿಂದ ಕುಣಿದುಬಿಟ್ಟೆ. ಅಂಗಡಿಯಿಂದ ಸ್ವಲ್ಪ ಕಾಗದ ತೆಗೆದು ಒಂದು ಪತ್ರ ಬರೆದೆ. ನನ್ನ ಆಕ್ಷಂಗಳನ್ನು ಸಾಧ್ಯವಿದ್ದಷ್ಟೂ ಬದಲಾಯಿಸಿದೆ.

ಪ್ರಿಯ ಮನೋಕಾಂತ ರಾಯರಿಗೆ, ನಿಮ್ಮ ಮಿತ್ರ ಆನಂದ ರಾಯನ ವಂದನೆಗಳು ನೊನ್ನೆದು ದಿನ ನೀವು ಮನೆಗೆ ಹೋಗದೆ ನನ್ನಲ್ಲಿ ಉಳಕೊಂಡಿರಿ. ನಿಮ್ಮ ಗೋಳು ತೋಡಿಕೊಂಡಿರಿ. ನಿಮ್ಮ ಹೆಂಡತಿ ಕಟ್ಟು ಹೋದವಳು ಅವಳು ಹಾದರಕ್ಕೆ ಬಲಿಯಾದಳು ಎಂದಿರಿ. ಸರಿ ಇದಕ್ಕೆ ಪರಿಹಾರವನ್ನು ಕೇಳಿದಿರಿ.

ಹೌದು! ಎಲ್ಲೆಲ್ಲೂ ಈ ಹಾವಳಿ ಆರಂಭವಾಗಿದೆ. ಇವಕ್ಕೆ ನಿಮಗೆ ತಕ್ಕ ಪರಿಹಾರ ಒಂದು ಕುಲೀನ ಕನ್ಯೆಯೊಡನೆ ವಿವಾಹ. ನನಗೆ ದೂರದ ತಂಗಿಯೊಬ್ಬಳಿದ್ದಾಳೆ. ಒಳ್ಳೆಯ ಚೆಲುವೆ; ಒಳ್ಳೆಯ ಗುಣ. ನಿಮ್ಮ ಆಫೀಸಿನ ಎದುರೇ ಅವಳ ಶಾಲೆ S. S. L C ಕ್ಲಾಸಿನಲ್ಲಿ ಓದುತ್ತಿದ್ದಾಳೆ. ನಿಮ್ಮನ್ನು ಹೆಲ್ಮೆಟ್ಟಿನಾ ನೋಡಿದ್ದಾಳಂತೆ. ಅವಳೂ ಈ ಕಾರ್ಯಕ್ಕೆ ಸಮ್ಮತಿಸಿದ್ದಾಳೆ. ನೀವು ಖಂಡಿತ ಒಪ್ಪುವಿರಿ ಎಂದು ನಾನು ದೃಢವಾಗಿ ನಂಬುತ್ತೇನೆ. 'ಶುಭಸ್ಯ ಶೀಘ್ರಂ' ಎಂಬಂತೆ ಆದಷ್ಟು ಬೇಗ ರುಚಕಾರ್ಯ ಜರಗಲಿ. ನಿವು ಗೆ ಮೌಂಟ್ ರೋಡಿನಲ್ಲಿ ಒಂದು ಮನೆ ನೋಡಿದ್ದೇನೆ. ನಿನ್ನು ಭಾನೇ ಸಂಬಾರ ಒಳ್ಳೆ ಾದಾಗುವುದೆಂದು ನನಗೆ ಭರವಸೆಯಿದೆ. ಬುದ್ಧಿಯಿಲ್ಲದ, ಆಯೋಗ್ಯಳಾದ ಮಡದಿಯಿಂದೇನು ಪ್ರಯೋಜನ? ನಿವ್ಯ ಆ ಹೆಂಡತಿಯನ್ನು ಪರಿತ್ಯಜಿಸಿರಿ. ನಿಮ್ಮ ಸುಖವೇ ಈ ಗೆಳೆಯನ ಸಂತೋಷ.

ನಿಮ್ಮ ಮಿತ್ರ,
ಆನಂದರಾಯ.

ಒಕೋಟಿಯ ಮೇಲೆ ನನ್ನ ವಿಳಾಸ ಬರೆದು Post ಗೆ ಹಾಕಿಬಿಟ್ಟೆ. ಸವಾನ ಹಕ್ಕೆನು ಸ್ವ-ಅಧಿಕಾರವ ನವಉಷೆ ಅದನ್ನು ಖಂಡಿತವಾಗಿಯೂ ಒಡೆದು ಓದದಿರಲಾರಳೆಂದು ನನಗೆ ದೃಢವಾದ ನಂಬಿಕೆಯಿತ್ತು.

ಸಂಜೆ ಆತುರದಿಂದಲೇ ಮನೆಸೇರಿದೆ. ಹೊಸ್ತಿಲು ದಾಟಿದೆ ತಡ, ಉಷಾ ನನ್ನ ಉಷಾ ಗೋಳೋ ಎಂದು ಅಳುತ್ತಾ ಕಾಲಮೇಲೆ ಬಿದ್ದಳು. ಬಹಳ ಹೊತ್ತಿನ ವರೆಗೆ ಕಾಲು ಬಿಡಲಿಲ್ಲ, ಅಳು ನಿಲ್ಲಲಿಲ್ಲ. ಅವಳಿಗೆ ನಂಬಿಕೆ ಹುಟ್ಟಿಸಬೇಕಾವರಿಸಿ ಕುಸುರಾಯಿತು. ಕ್ಷಮೆ ಕೇಳಿದವಳಿಗೆ ಕ್ಷಮೆಯಿತ್ತ ಉಷಾ ನೀನಿರುವೆ" ಎಂದು ಮೊಗವೆತ್ತಿ ಕೇಳಿದೆ. ಉಷಾ ಮುಂದೆ ಸಂಯೋಜನೆ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಪರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ಥರು: ಷಾ ಕಂಪೆನಿ, ಮಂಗಳೂರು—1.

ಭಾರತ ಕಲಾ ಸಂಗ್ರಹಾಲಯ—

ಪಂಜಾಬರಾಜ್ಯ ವಸ್ತುಸಂಗ್ರಹಾಲಯ

ಭಾರತದ ಕೆಲವೇ ಪ್ರಸಿದ್ಧ ವಸ್ತು ಸಂಗ್ರಹಾಲಯಗಳಲ್ಲಿ ಪಂಜಾಬ ರಾಜ್ಯದ ಸಿಮ್ಲಾದಲ್ಲಿರುವ ವಸ್ತು ಸಂಗ್ರಹಾಲಯವು ಒಂದಾಗಿದೆ. ಇದನ್ನು ಕೆಲಸಮಯದಲ್ಲಿಯೇ ಶಾಶ್ವತವಾಗಿ ಚಂಡೀಗಢದಲ್ಲಿ ಸ್ಥಾಪಿಸುವ ಆಲೋಚನೆಯಿದೆ. ಈ ಸಂಗ್ರಹಾಲಯದಲ್ಲಿ ಗಾಂಧಾರ ಶೈಲಿಯ ಮೂರ್ತಿಕಲೆಯು ಬಹಳ ಮಹತ್ವವನ್ನು ಪಡೆದಿವೆ. ಇತರ ಕೆಲವು ಪ್ರಕಾರದ ಅಮೂಲ್ಯವಸ್ತುಗಳು ಮುಖ್ಯವಾಗಿ ಪಹಾಡಿ ಆವರಲ್ಲೂ ಕಾಂಗ್ರ ಕಲಾಪದ್ಧತಿಯ—ಚಿತ್ರಗಳು ಪ್ರಮುಖ ಸ್ಥಾನವನ್ನಾಕ್ರಮಿಸಿರುವುವು. ಭಾರತದ ಕಲಾನಿಧಿಗಳಲ್ಲಿ ಒಂದಾದ ಈ ವಸ್ತು ಸಂಗ್ರಹಾಲಯವು ಸ್ವಾತಂತ್ರ್ಯ ಪ್ರಾಪ್ತ್ಯನಂತರ ವಿಭಜನೆಗೊಂಡು ಭಾರತದ ಪಾಲಿಗೆ ಒಂದು ಭಾಗವು ದೊರೆತಿದೆ.

ದೇಶ ವಿಭಜನೆಯ ನಂತರ, ಭಾರತ ಮತ್ತು ಪಾಕಿಸ್ತಾನದ ನಡುವೆ, ಲಾಹೋರಿನ ಕೇಂದ್ರ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹ ಮಾಡಲಾಗಿದ್ದ ವಸ್ತುಗಳ ಹಂಚಿಕೆಯಾಯಿತು. ಆಗ ಗಾಂಧಾರ ಶೈಲಿಯ ಮೂರ್ತಿಗಳು ಪಂಜಾಬಿನ (ಭಾರತದ) ಪಾಲಿಗೆ ಬಂದವು. ಈ ಮೂರ್ತಿಗಳನ್ನು ಇಂದು ತಾತ್ಕಾಲಿಕವಾಗಿ, ಸಿಮ್ಲಾದಲ್ಲಿ ಪಂಜಾಬ್ ರಾಜ್ಯ ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ. ಈ ಮೂರ್ತಿಗಳನ್ನು ಸ್ಥೂಲ ದೃಷ್ಟಿಯಿಂದ ನೋಡಿದಾಗ ಸಹ, ಈ ಮೂರ್ತಿಗಳನ್ನು ನಿರ್ಮಿಸಿದ ಕಲಾಕಾರರ ಕೌಶಲ ಹಾಗೂ ಈ ಮೂರ್ತಿಗಳ ಕಲಾತ್ಮಕ ಸಮೃದ್ಧಿಯು ಅರಿವುಂಟಾಗುವುದು. ಅದರ ಜೊತೆಗೆ, ಈ ಕಲಾವಿದರು ಈ ಮೂರ್ತಿಗಳನ್ನು ನಿರ್ಮಿಸುವಲ್ಲಿ ಪ್ರೇರಣ ಶಕ್ತಿಯಾಗಿದ್ದ ಅವರ ಧಾರ್ಮಿಕ ಭಾವನೆಯೂ ನಮಗೆ ಸ್ಪಷ್ಟವಾಗುವುದು.

ಗಾಂಧಾರ ಶೈಲಿಯು ಕಲೆಯು ಹೆಸರು ಪ್ರಾಚೀನ ಗಾಂಧಾರದಿಂದ ಬಂದಿದೆ. ಗಾಂಧಾರವು ಪೇಶಾವರ್ ಜಿಲ್ಲೆ, ಪಾಕಿಸ್ತಾನ ಬನ್ನೇರು, ಸ್ವಾತ್ ಮತ್ತು ಬಜೌರ್‌ನ ಆಕ್ರಮಿಕ್ಕಿದ ಪ್ರದೇಶಗಳು ಸೇರಿ ಆಗಿದ್ದಿತ್ತು. ಕ್ರಿಸ್ತಪೂರ್ವ ಹಾಗೂ ಕ್ರಿಸ್ತ ಶಕ ಗರ್ಭದ ಸುಮಾರು ಶತಮಾನಗಳ ವರೆಗೆ, ಈ ಪ್ರದೇಶವು ಪ್ರತ್ಯೇಕ ಪ್ರಾಂತ್ಯ ಅಥವಾ ಸ್ವತಂತ್ರ ರಾಜ್ಯವಾಗಿತ್ತು.

ಗಾಂಧಾರವು ಬಾಹ್ಯಾಗ್ರಿಯ ಸ್ಥಿತಿಯಲ್ಲಿದ್ದಾಗ, ಈ ರಾಜ್ಯದಲ್ಲಿ ಅಫ್ಘಾನಿಸ್ತಾನದ ಬಹುಭಾಗ, ಚಿತ್ರಾಲ್, ಮತ್ತು ಕಾಶ್ಮೀರಗಳು ಸೇರಿದ್ದವೆಂದು ತಿಳಿಯಲಾಗಿದೆ. ಪಂಜಾಬಿನ ಸಟ್ಲೆಜ್ ನದಿಯು ಈ ರಾಜ್ಯದ ದಕ್ಷಿಣದ ಗಡಿಯಾಗಿತ್ತು. ಈ ರಾಜ್ಯವು ರಮಣೀಯವಾಗಿಯೂ, ಪ್ರಕೃತಿ ಸೌಂದರ್ಯದಿಂದ ಕೂಡಿಯೂ, ಫಲವತ್ತಾಗಿಯೂ ಇದ್ದುದರಿಂದ, ಇದನ್ನು ಉದ್ಯಾನವನ'ವೆಂದು ಆರ್ಯರು ವರ್ಣಿಸಿರುವರು. ಅಶ್ವಗಳು ದಾಳಿಂಬ ಮತ್ತು ಸುಂದರ ಸ್ತ್ರೀಯರಿಗೆ ಈ ರಾಜ್ಯ ಪ್ರಸಿದ್ಧವಾಗಿತ್ತು. ಕನಿಷ್ಕನ ಆಳಿಕೆಯಲ್ಲಿ ಹಾಗೂ ಅವನ ನಂತರ ಆಳಿದ ಹುವಿಷ್ಕ ಮತ್ತು ವಸುದೇವರ ಕಾಲದಲ್ಲಿ ಗಾಂಧಾರವು ಅತ್ಯಂತ ವೈಭವದಿಂದಿದ್ದಿತು ಈ ಮೂರ್ತಿ ಶಿಲ್ಪಗಳು ಈ ಕಾಲಕ್ಕೆ ಸೇರಿದವೆಂದು ಸಾಮಾನ್ಯವಾಗಿ ಹೇಳಬಹುದು.

ಈ ಮೂರ್ತಿಗಳನ್ನು ಕರಿಯ ಶಿಲೆಯಲ್ಲಿ ಕಡೆಯಲಾಗಿದೆ. ಅವು ದೇಶವಿಭಜನೆಯಾಗುವ ಮೊದಲು, ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿ ದೊರೆತವು. ಈ ಪ್ರದೇಶದ ಐತಿಹಾಸಿಕ ಹೆಸರನ್ನೇ, ಅಲ್ಲಿ ದೊರೆತ ಕಲಾವಸ್ತು ವರ್ಗಕ್ಕೆ ಇಟ್ಟಿದ್ದರಿಂದ, ಅದಕ್ಕೆ ಗಾಂಧಾರ ಶಿಲ್ಪಕಲೆಯೆಂದು ಹೆಸರಾಯಿತು.

ಈ ಕಲಾಶೈಲಿಯ ಬಗೆಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಫಾಷರ್ ರವರ ಮಾತುಗಳಲ್ಲಿ ಹೇಳುವುದಾದರೆ, ಗಾಂಧಾರ ಕಲೆಯು ಉದ್ಭವವು ಗ್ರೀಸ್ ಸಂಸ್ಕೃತಿ (ಹೆಲೆನಿಸಂ) ಮತ್ತು ಬೌದ್ಧ ಸಂಸ್ಕೃತಿಗಳ ಪರಸ್ಪರ ಮಿಲನದಿಂದ ಆಗಿದೆ. ಆಂದರೆ. ಈ ಶೈಲಿಯು ಚಿತ್ರಗಳೆನ್ನು ಬುದ್ಧನ ಜೀವನದ ಘಟನೆಗಳು ಹಾಗೂ ತತ್ಸಂಬಂಧದಂತಹ ಕತೆಗಳಆಧಾರದಮೇಲೆ ರೂಪಿಸಲಾಗಿದೆ. ಪ್ರಾಪ್ತವಾಗಿರುವ ಅವಶೇಷಗಳ ಆಧಾರದ ಮೇಲೆ ಗ್ರೀಸಿನ ಸಂಸ್ಕೃತಿಯ ಪ್ರಮಾಣವು ಅಧಿಕ ಪ್ರಮಾಣದಲ್ಲಿ ಮೂಡಿರುವುದರಿಂದ, ಆ ಶೈಲಿಯನ್ನು ಭಾರತೀಯ ಗ್ರೀಕ್ ಶೈಲಿಯೆಂದೆ ಕರೆಯಬಹುದೆನ್ನಬಹುದು.

ಭಾರತದ ವಾಯುವ್ಯ ಗಡಿಯಲ್ಲಿರುವ ಗಾಂಧಾರವು ಭಾರತೀಯರು, ಗ್ರೀಕರು ಮತ್ತು ಇರಾನಿಯನ್ನರ ನಾಗರಿಕತೆಗಳು ಸಂಗಮಗೊಳ್ಳುತ್ತಿದ್ದ ಸ್ಥಳವೆಂದು ಇತಿಹಾಸವು ತಿಳಿಸುತ್ತದೆ. ಈ ಕಲೆಯಲ್ಲಿ ಬಳಸಲಾಗುವ ವಿಶಿಷ್ಟ ತಂತ್ರವನ್ನು ಪ್ರತಿಭಾನಂತ ಗ್ರೀಕ್ ಮತ್ತು ರೋಮನ್ ಕಲಾವಿದರಿಂದ ತೆಗೆದುಕೊಳ್ಳಲಾಗಿದೆಯೆಂಬುದು ನಿರ್ವಿವಾದ ಆದರೂ, ಅವುಗಳನ್ನು ಭಾರತೀಯ ಅಗತ್ಯತೆಗಳಿಗೆ ಅನುಗುಣವಾಗಿ ಮಾರ್ಪಾಡು ಮಾಡಿಕೊಳ್ಳಲಾಗಿದೆ; ಅನೇಕ ಇರಾನಿ ನಾಗರಿಕತೆಯ ಅಂಶಗಳೂ ಅವುಗಳಲ್ಲಿ ಬೆರೆತು ಕೊಂಡಿವೆ.

ಗಾಂಧಾರ ಕಲೆಯ ಆಕರ್ಷಣೆ—ವ್ಯಾಪ್ತಿಯು, ಮತೀಯ ಹಾಗೂ ಸೌಂದರ್ಯೋಪಾಸನ ವಿಷಯುಕ್ಕಷ್ಟೆ ಮಿತಿಗೊಂಡಿರಲಿಲ್ಲ. ಗಾಂಧಾರ ರಾಜ್ಯದ ಏನೂರು ವರ್ಷಗಳ ಇತಿಹಾಸದ ಮೇಲೆ; ಆಗಿನ ಕಾಲದ ಜನಜೀವನದ ಮೇಲೆ ಈ ಕಲೆಯು ಬೆಳಕು ಚೆಲ್ಲುತ್ತದೆ. ಇವನ್ನು ನಿರ್ಮಿಸಿದ ಶಿಲ್ಪಿಗಳು, ಇಡಿ ಜನತೆಯ ಸಂಸ್ಕೃತಿಯನ್ನು ತಮ್ಮ ಕಲಾಕೃತಿಗಳಲ್ಲಿ ಒಡಮೂಡಿಸಿದ್ದಾರೆ.

ಈ ಮೂರ್ತಿಗಳಲ್ಲಿ ಆ ಕಾಲದ ಎಲ್ಲಾ ವರ್ಣಗಳ ಜನತೆಯ ವೇಷ ಭೂಷಣಗಳು, ವಸತಿ-ಸದನ-ಗಳು ಶಸ್ತ್ರಾಸ್ತ್ರಗಳು, ಉಪಕರಣಗಳು, ಕವಚಗಳು, ಪ್ರಸಾಧನ ಸಾಮಗ್ರಿಗಳು, ಆಭರಣಗಳು ಮೇನಾ ಗಾಡಿಗಳು, ಕುದುರೆಗಳು, ಬೇಸಾಯ ಉಪಕರಣಗಳು, ಸಂಗೀತ ವಾದ್ಯಗಳು ಇತ್ಯಾದಿಗಳೆಲ್ಲವೂ ಈ ಶಿಲ್ಪಗಳಲ್ಲಿ ಚಿತ್ರಿತವಾಗಿವೆ. ಜನತೆಯು ಕಾರ್ಯನಿರತವಾಗಿರುವುದು, ಕ್ರೀಡೆಗಳಲ್ಲಿ ಅಥವಾ ಪೂಜೆಗಳಲ್ಲಿ ತೊಡಗಿರುವುದು, ಲಗ್ನ ಸಮಾರಂಭಗಳಲ್ಲಿರುವುದು ಇತ್ಯಾದಿಗಳನ್ನು ಈ ಕಲಾಕೃತಿಗಳಲ್ಲಿ ನೋಡಬಹುದು. ನೃತ್ಯ ಕಲಾಪಿದರು, ಸಂಗೀತಗಾರರು, ಪ್ರವಾಸಿಗಳು, ಜಟ್ಟಿಗಳು ಮತ್ತು ಕಳ್ಳರು ಇವರೆಲ್ಲರೂ ಈ ಶಿಲ್ಪಗಳಲ್ಲಿ ಸ್ಥಾನಪಡೆಯದೆ ಇಲ್ಲ. ಗಾಂಧಾರ ಸಂಸ್ಕೃತಿಯ ಜನಜೀವನದ ವಿಸ್ತೃತ ಪರಿಚಯ ಈ ಶಿಲ್ಪಗಳಿಂದ ವ್ಯಕ್ತವಾಗುವುದು.

ಗಾಂಧಾರ ಶೈಲಿಯಲ್ಲಿ ಅತ್ಯಂತ ಮಹತ್ವದ ಸಾಧನೆಯೆಂದರೆ, ಬುದ್ಧನ ಮೂರ್ತಿ. ಗಾಂಧಾರ ಶೈಲಿಯ ಮೊದಲಿನ ಭಾರತೀಯ ಶೈಲಿಯಲ್ಲಿ ಬುದ್ಧನು ಮನುಷ್ಯ ರೂಪದ ಬದಲು, ಸಂಕೇತಗಳ ರೂಪದಲ್ಲಿ ಚಿತ್ರಿತವಾಗಿತ್ತಿದ್ದನು. ಆದರೆ ಈ ಶೈಲಿಯಲ್ಲಿ ಭಾರತ ಮತ್ತು ಗ್ರೀಸಿನ ಧರ್ಮ ಹಾಗೂ ಕಲೆಗಳ ಸಮನ್ವಯ ಮಾಡಿಕೊಂಡು, ಎಲ್ಲದಕ್ಕಿಂತಲೂ ಮೊದಲು ಬುದ್ಧನನ್ನು ಮಾನವರೂಪದಲ್ಲಿ ಕಡೆಯಲಾಯಿತು. ಗಾಂಧಾರ ಬುದ್ಧನ ಶಿರಸ್ಸು, ಅಪೊಲೊನ ರೀತಿಯಲ್ಲಿರುವುದು. ಅವನ ವೇಷ ಭೂಷಣ ರೋಮನ್‌ನ ಟೋಗಾ ದೊಂದಿಗೆ ತುಂಬ ಹೋಲುವುದು. ಈ ರೀತಿಯು ಮೂರ್ತಿಗಳನ್ನು ಯಾರೋ ಭಾರತೀಯ ಬೌದ್ಧರ ಆದೇಶದ ಮೇಲೆ ಗ್ರೀಸಿನ ಶಿಲ್ಪಿಯೊ ರೂಪಿಸಬಲ್ಲನೆಂದು ಫಾಷರ್ ರವರು ತಿಳಿಸಿರುವರು.

ಗಾಂಧಾರ ಶೈಲಿಯ ಕಲೆಯಲ್ಲಿ ಪೂರ್ವ ಹಾಗೂ ಪಶ್ಚಿಮದ ಕಲೆಗಳು ಸಮನ್ವಯಗೊಂಡು, ಒಂದು ಹೊಸ ಕಲಾ ವ್ಯಾಕರಣವು ರೂಪುಗೊಂಡಿದೆಯೆನ್ನಬಹುದು. ಅದೇ ಅದರ ವೈಶಿಷ್ಟ್ಯವೆನ್ನಬಹುದು

ಗಾಂಧಾರ ಶೈಲಿಯ ಶಿಲ್ಪಕಲಾವಿದರು, ಬುದ್ಧನನ್ನು ಯಾನ ರೂಪದಲ್ಲಿ ಚಿತ್ರಿಸಿದರೋ, ಅದೇ ರೂಪದಲ್ಲಿ ಅಫ್ಘಾನಿಸ್ತಾನ, ಮಧ್ಯ ಏಷಿಯಾ ಚೀನಾ ಮತ್ತು ಜಪಾನಗಳಲ್ಲಿಯೂ ಚಿತ್ರಿಸಲಾಗಿದೆ. ಅವುಗಳು ಭಾರತೀಯ ಹಾಗೂ ಸ್ಥಳೀಯ ಗುಣಗಳನ್ನು ಹೊಂದಿದ್ದರೂ, ವ್ಯಾಕಾರದಲ್ಲಿ ಭಾರತೀಯವೆಂದು ಹೇಳುವಲ್ಲಿ ಯಾವ ಸಂಶಯವೂ ಇರುವುದಿಲ್ಲ. ಈ ಶೈಲಿಯ ಮೂರ್ತಿಗಳು, ಬಹುತ, ಮತ್ತು ಸಾಂಚಿ ಅಥವಾ ಗುಪ್ತರ ಕಾಲ ಅಥವಾ ಪಲ್ಲವರ ಕಾಲದ ಮೂರ್ತಿಗಳ ಪ್ರತಿಸ್ಪರ್ಧಿಗಳೆಂದು ಹೇಳಲಾಗುವುದಿಲ್ಲ. ಆದರೂ ಅವುಗಳನ್ನು ಹೊರತೆಗೆದ ಪ್ರಭಾವಕ್ಕೆ ಬಿದ್ದ ಪ್ರಾಚೀನ ಭಾರತೀಯ ಶೈಲಿಯು ಒಂದು. ವ್ಯಾಕರಣವೆಂದು ಪರಿಗಣಿಸಬಹುದು.

ಸದ್ಗ್ರಂಥ ವಾಚನಕ್ಕೆ ಇದೊಂದು ಕರೆ.

ಮೈಸೂರು ರಾಜ್ಯಪಾಲರು ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು "ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ"ಯವರ ಆಶ್ರಯದಲ್ಲಿ ವಿವಿಧ ಪ್ರಕಾಶನದಿಂದ ಪ್ರಕಟಿತವಾಗುವ "ಮನೆಮನೆಗೆ ಪುಸ್ತಕ ಭಂಡಾರ" ಗ್ರಂಥ ಮಾಲೆಯ ಪ್ರಥಮ ಕನ್ನಡ ಪ್ರಕಟಣೆಗಳ ಪ್ರಕಾಶನ ಸಮಾರಂಭವನ್ನು ನೆರವೇರಿಸಿ ಕೊಡಲು ದಯೆಯಿಟ್ಟು ಸಮ್ಮತಿಸಿದ್ದಾರೆ.

ಸ್ಥಳ: ಟೌನ್ ಹಾಲ್, ಬೆಂಗಳೂರು ನಗರ.
ಕಾಲ: ಸಂಜೆ ೬ ಗಂಟೆ. ದಿನಾಂಕ ೨೭—೧೧—೧೯೫೭.

ಸರ್ವರಿಗೂ ಸುಸ್ವಾಗತವಿದೆ.

ಅತ್ಯಲ್ಪ ಬೆಲೆಯಲ್ಲಿ ಪ್ರಕಟವಾಗುವ ಪುಸ್ತಕಗಳು

1. ಕಲ್ಪನೆಯ ಕಾಡು: ಮೂ. ಲೇ. ರಾಜಾಜಿ. ಅನು. ಕೆ. ಸಂಪದ್ಗಿರಿರಾವ್. ಪ್ರಕಾಶನ: ಸತ್ಯ ಬೋಧನ ಪ್ರಕಟನ ಮಂದಿರ ಬೆಂಗಳೂರು-೨. ಬೆಲೆ ರೂ. ೧-೨೫ ನ.ಪೈ.
2. ದಕ್ಷಿಣ ಭಾರತ ಇತಿಹಾಸ: ಮೂಲ ಲೇ. ಕೆ.ಕೆ ಪಿಳ್ಳೈ. ಅನು ಜಿ.ಎಸ್. ಕೃಷ್ಣರಾವ್. ಪ್ರಕಾಶನ: ಪರಿಮಳ ಸಾಹಿತ್ಯ ಮಂದಿರ ಬೆಂಗಳೂರು-೪. ಬೆಲೆ. ರೂ. ೧-೨೫ನ.ಪೈ.
3. ನಾಗರಿಕ ಮತ್ತು ರಾಜ್ಯಾಂಗ: ಮೂಲ ಲೇ ಪ್ರೊ ಎಂ. ರತ್ನಸ್ವಾಮಿ. ಅನು.ಕೆ. ಕೆ.ಪೂಜಾರಿ. ಪ್ರಕಾಶನ: ನೇತ್ರಾವತಿ ಪ್ರಕಾಶನ ಬೆಂಗಳೂರು-೯. ಬೆಲೆ. ೬೦ ನ. ಪೈ.
4. ಅಡಿಗೆ ಮನೆಯ ಸೌಭಾಗ್ಯ: ಮೂಲ ಲೇ. ಕುಮಾರಿ ಎ. ಕೆ. ಜೋಷಿಯ ಮತ್ತು ಕುಮಾರಿ ಸಿ. ಎಸ್. ರಕ್ಷಂ. ಅನು. ಬಿ. ಈಶ್ವರ ಭಟ್. ಕನ್ನಡ ಪ್ರಸಂಚ ಪ್ರಕಾಶನ ಮಂಗಳೂರು. ಬೆಲೆ ರೂ. ೧.
5. ಕಳಗನ್ನಡ-ನಡುಗನ್ನಡ-ಕಾವ್ಯಸಂಗ್ರಹ: ಸಂಗ್ರಹ: ಎಂ. ಸುಬ್ರಾಯಪ್ಪ ಭಟ್ಟ. ಪ್ರಕಾಶನ: ಸಮಾಜ ಪುಸ್ತಕಾಲಯ ಧಾರವಾಡ ಬೆಲೆ. ರೂ. ೧.೫೦.ನ.ಪೈ.
6. ಪಕಾಂತಿ ನಾಟಕಗಳು. ಸಂಗ್ರಹ: ಅಮ್ಮ ರಂಗಾಚಾರ್ಯ. ನಾ. ಕಸ್ತೂರಿ ಪ್ರಕಾಶನ, ಶರತ್ ಪಬ್ಲಿಸ್ಟೀಸ್, ಬೆಂಗಳೂರು-೪. ಬೆಲೆ ರೂ. ೨.
7. ಕಥಾಸಂಗ್ರಹ. ಸಂಗ್ರಹ. ಡಿ. ಜವರೇ ಗೌಡ. ಪ್ರಕಾಶನ: ನವಜೀವನ ಪ್ರಕಟಣಾಲಯ, ಬೆಂಗಳೂರು-೪. ಬೆಲೆ ರೂ. ೨.
8. ಕಾವ್ಯಶ್ರೀ ಸಂಗ್ರಹ. ದ. ರಾ. ಬೇಂದ್ರೆ, ಮಾರಿಯಪ್ಪ ಭಟ್. ಪ್ರಕಾಶನ: ಶ್ರೀ ಕೃಷ್ಣಾ ಪ್ರೆಸ್, ಬೆಂಗಳೂರು-೩. ಬೆಲೆ ರೂ. ೧-೭೫ ನ.ಪೈ.
9. ಚೇರ್‌ಮನ್ ಪೆರುನಾಳ್, ಮೂಲ ಲೇ. ಕಪ್ಪನ್ ಕೃಷ್ಣ ಮೇನನ್. ಅನು ನಾ. ಕಸ್ತೂರಿ. ಪ್ರಕಾಶನ: ನೇತ್ರಾವತಿ ಪ್ರಕಾಶನ ಬೆಂಗಳೂರು-೯. ಬೆಲೆ ರೂ. ೧-೭೫
10. ಪ್ರಕಾಶ ಮಂದಲಿ. ಮೂಲ ಲೇ ವೇದನಾಯಗಂ ಪಿಳ್ಳೈ. ಅನು, ಮತ್ತೂರು ಕೃಷ್ಣಮೂರ್ತಿ. ಪ್ರಕಾಶನ: ನೇತ್ರಾವತಿ ಪ್ರಕಾಶನ, ಬೆಂಗಳೂರು-೯. ಬೆಲೆ ರೂ. ೧.
11. ಸಿದ್ಧಾರ್ಥ. ಮೂಲ ಲೇ. ಹರ್ಮನ್ ಹೆಸ್. ಕನ್ನಡಿಸಿದವರ್ಕಿಂ ಬಿ. ಎಸ್. ರಾಮಶ್ವಾಮಿ ಆಯ್ಯಂಗಾರ್. ಪ್ರಕಾಶನ: ನವಚೇತನ ಪ್ರಕಟಣಾಲಯ, ಬೆಂಗಳೂರು-೪. ಬೆಲೆ ರೂ. ೨.
12. ಗೆದ್ದು ನೋತವನು. ಮೂಲ ಲೇ. ಆರ್ನೆಸ್ ಹೆಮಿಂಗ್ವೇ. ಪ್ರಕಾಶನ: ಸ್ಟ್ಯಾಂಡರ್ಡ್ ಬುಕ್ ಡಿಪೋ, ಬೆಂಗಳೂರು-೨. ಬೆಲೆ ರೂ. ೧
13. ಗಾಂಧಿ: ಮೂಲ ಲೇ. ವಿನ್ಸೆಂಟ್ ಷೀನ್. ಅನುವಾದ: ವಿ. ಎಸ್. ನಾರಾಯಣರಾವ್. ಪ್ರಕಾಶನ: ಎಜುಕೇರ್ ಸಾಹಿತ್ಯ (ಪ್ರೈ) ಲಿಮಿಟೆಡ್. ಬೆಂಗಳೂರು-೨. ಬೆಲೆ ರೂ. ೨.
14. ಕೊಕಾರೊ. ಮೂಲ ಲೇ, ಸೊಸೆಕಿನಾಟ್ಸುಮೆ. ಅನುವಾದ- ಡಿ. ವಿ. ರಂಗಪ್ಪ ವೇಂದ್ರ ಪ್ರಕಾಶನ: ನ್ಯೂಸ್ ಪೇಪರ್ ಹೌಸ್, ಮೈಸೂರು. ಬೆಲೆ ರೂ. ೧.
15. ಸ್ಯಾನ್ ಲೂಯಿ ಸೇತುವೆ. ಮೂಲ ಲೇ. ಥಾರ್ಂಟರ್ ವೈಲ್ಡರ್. ಅನುವಾದ ಸೇವನಿರಾಜ ಮಲ್ಲ. ಪ್ರಕಾಶನ: ಬಾಲ ಸಾಹಿತ್ಯ ಮಂಡಲಿ, ಮಂಗಳೂರು. ಬೆಲೆ ರೂ. ೧.

(ಬೆಲೆಗಳು ಬದಲಾವಣೆಯಾಗುವ ಸಂಭವವಿದೆ.)

ಈ ಪುಸ್ತಕಗಳು ಶೀಘ್ರದಲ್ಲಿಯೇ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವುವು.

ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ
೩ ಪೀಟರ್ ಕ್ರಾಫ್ಟ್ ರೋಡ್, ನುಂಗುಂಬಾಕ್ಕಂ, ಮದ್ರಾಸ್ ೫೧.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭ VOL. 37

5—12—1957

ಸಂಚಿಕೆ ೧೩ NO. 13

ತೊಟ್ಟಿಲು ತೂಗುವ ಕೈಯ ಕೈವಾಡ—

ಕಲಾಕಾರ ರವಿವರ್ಮ

ಶ್ರೀ ನಿ ನಾರಾಯಣ ಬಲ್ಲಾಳ.

ಶ್ರೀರಸು ಮನೆತನದ ಶ್ರೇಷ್ಠ ಕಲಾಕಾರನಾದ ರಾಜಾ ರವಿವರ್ಮನು ೧೮೪೮ನೇ ಎಪ್ರಿಲ್, ೨೯ರಂದು ತಿರುವಾಂಕೂರು ಮಹಾರಾಜರ ವಂಶದಲ್ಲಿ ಕಿಲಿಮನೂರ್ ಎಂಬ ದಕ್ಷಿಣ ಭಾರತದ ಹಳ್ಳಿಯೊಂದರಲ್ಲಿ ಜನಿಸಿದನು. ಕಿಲಿಮನೂರ್ ಎಂಬ ಸ್ಥಳವು ಎರಡು ಶತಮಾನಗಳ ಮೊದಲು ರಾಜಾ ರವಿವರ್ಮನ ಹಿರಿಯರಿಗೆ—ಅವರ ಕಲಾ ಪ್ರೌಢಿಮೆಯನ್ನು ಕಂಡುಕೊಂಡ ಸಂಸ್ಥಾನದ ಮಹಾರಾಜರಿಂದ ಬಹುಮಾನ ದೊರೆಯಿತು. ಬಹುಮಾನವಾಗಿ ದೊರೆತ ಸಂಪತ್ತು–ತಾನೊಳಗೊಂಡಿದ್ದ ಪ್ರಕೃತಿಯಿಂದ ರಾಜಾ ರವಿವರ್ಮನಲ್ಲಿ ಹುದುಗಿದ್ದ ಸುಪ್ತ ಜೀವನವನ್ನು ಹುರಿದುಂಬಿಸಿ ಜೀವನೋತ್ಸಾಹ ಈ ಸ್ಥಳವು ಬಹಳ ಸುಂದರ ಹಾಗೂ ಮನಸೋಹಕವಾದ ಹಳ್ಳಿಯಾಗಿತ್ತು. ಇದರಿಂದ ರವಿವರ್ಮನ ಹೃದಯದಲ್ಲಿ ಪ್ರಕೃತಿಯ ಪ್ರತಿ ಸ್ವಾಭಾವಿಕ ರೂಪದಿಂದ ವಿಶೇಷ ಪ್ರೇಮ ಉತ್ಪನ್ನವಾಯಿತು. "The hand that rocks the cradle rules the world," ಎಂಬುದು ರವಿವರ್ಮನ ಮಟ್ಟಿಗೆ ಅಕ್ಷರಶಃ ನಿಜವಾಗಿದೆ.

ರವಿವರ್ಮನ ತಾಯಿ ಶ್ರೀಮತಿ ಉಮಾ ಅಂಬಾ ಬಾಯಿಯವರು ಅಗಿನೆ ಕಾಲದಲ್ಲಿ ಶ್ರೇಷ್ಠ ಕವಯಿತ್ರಿಯಾಗಿದ್ದರು. ಆದುದರಿಂದಲೇ ಅವರ ಎಲ್ಲಾ ಮಕ್ಕಳು ಹುಟ್ಟುನಾಗಲೇ ಯಾವುದಾದರೊಂದು ಕಲೆಯ ಅಭಿಮಾನಿಗಳಾಗಿಯೇ ಹುಟ್ಟಿದರು

ರವಿವರ್ಮನು ಪಾಠಶಾಲೆಗೆ ಸೇರಿದ ಪ್ರಥಮ ದಿನವೇ "ಅವನೊಬ್ಬ ಉತ್ತಮ ಚಿತ್ರಕಾರ, 'ಬಾಲ ಕಲಾನಿಧಿ' ಎಂದು ಹೇಳಲ್ಪಟ್ಟು, ತನ್ನ ಪ್ರತಿಭೆಯ ಪರಿಚಯ ಮಾಡಿಕೊಟ್ಟನು ತನ್ನ ತೋರು ಬೆರಳಿನಿಂದ ಹೂಯಿಗೆಯ ಮೇಲೆ ಅಕ್ಷರ ಬಳ್ಳಿಗಳನ್ನು ತಿದ್ದುವ ಬದಲು, ಅದೇ ಬೆರಳು ಹೂಯ್ಗುಳ ಮೇಲೆ ಚಿತ್ರಗಳನ್ನು ಬರೆಯುತ್ತಿದ್ದಿತು. ಸಮಯ ಕಳೆದಂತೆಲ್ಲಾ ಚಿತ್ರಕಲೆ ಇವನ ವಿದ್ಯಾಭ್ಯಾಸವಾಯಿತು. ಓದು–ಬರೆಹಗಳನ್ನು 'ಹವ್ಯಾಸ'ಗಳನ್ನಾಗಿ ತೆಗೆದುಕೊಳ್ಳಬೇಕಾಯಿತು ಆದರೆ ಸಂಸ್ಕೃತವನ್ನು ಅತ್ಯಂತ ಶ್ರದ್ಧೆಯಿಂದ ಕಲಿತುದು ಅವನ ಶ್ರೇಯಸ್ಸಿಗೆ ನಾಂದಿಯಾಯಿತು. ಈ ವಿಚಾರದಲ್ಲಿ ಅವನ ತಾಯಿ ಅವನಿಗೆ ವಿಶೇಷ ಸಹಾಯವನ್ನು ಮಾಡಿದರು. ಭಾರತದ ಚರಿತ್ರಾರ್ಹ ಘಟನೆಗಳನ್ನು ಮಗನಿಂದ ಚಿತ್ರದ ಮೂಲಕ ಸಿದ್ಧಗೊಳಿಸುತ್ತಿದ್ದರು ಈತನ ಕುಟುಂಬದವರು ಇವನೊಬ್ಬ ಪ್ರಖ್ಯಾತ ರಾಜಕಾರಣ ಪಟು ವಾಗಿ, ತನ್ನ ಸೇನಾನಿಯಾಗಬೇಕೆಂದಿದ್ದರೂ ಅವರ ಎಣಿಕೆ ತಪ್ಪಾಗಿತ್ತು. ಅವರ ಇಚ್ಛೆಗೆ ವಿರೋಧವಾಗಿಯೇ ರವಿವರ್ಮ ಚಿತ್ರಕಾರನಾಗಿ ಪ್ರಖ್ಯಾತನಾದನು ಈತ ಬಾಲ್ಯದಲ್ಲಿ ತನ್ನ ಕುಶಲ ಕಲೆಯಿಂದ ಜನರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸಿದುದಲ್ಲದೆ, ಅವರಿಂದ ಹಲವು ಇನಾಮುಗಳನ್ನು ಕೂಡಾ ಪಡೆದನು ಈತನ ಪ್ರತಿ ಚಿತ್ರವೂ ತಾಯಿಯಿಂದ ತಿದ್ದಲ್ಪಟ್ಟು ಹೊಗಳಲ್ಪಟ್ಟು, ಪ್ರೇಮದ ಬಂದು ಮುತ್ತು ಸಿಗುತ್ತಿದ್ದವರೆಗೂ ಮತ್ತು ಅತ್ಯಸಂತೋಷ ಸಿಗುತ್ತಿರುವವರೆಗೂ ಸಮಯ ರವಿವರ್ಮ ಮತ್ತೊಬ್ಬರ ಮಾತಿಗೆ, ಟೀಕೆಗೆ, ಬೈಗಳಿಗೆ ಬೆಲೆ ಕೊಟ್ಟವನಲ್ಲ.

ರಾಜ ವಂಶಸ್ಥನು. ಕಲಾವಿದನಾಗಿ ಮೆರೆಯುತ್ತಿದ್ದುದನ್ನು ರಾಜ ಮನೆತನದ ವರಿಂದ ಸಹಿಸಲಾಗಲಿಲ್ಲ ತಿರುವಾಂಕೂರಿನ ರಾಜನಾದ ರಾಜಾ ಕೇರಳ ವರ್ಮನ ರಕ್ಷಣೆ ಮತ್ತು ಬೆಳವಣಿಗೆಗೆ ಒಲ್ಲಿ ರವಿವರ್ಮ ಕುಂಚ ಕಲೆಯಲ್ಲಿ ವಿಶೇಷ ಅನುಭವವನ್ನು ಪಡೆದನು. ರವಿವರ್ಮನ ವಯಸ್ಸಿಗೂ ಮಿಕ್ಕಿದ ಯೋಗ್ಯತೆ ಹಾಗೂ ಪ್ರಸಿದ್ಧಿಯನ್ನು ಕಂಡು ಆಶ್ಚರ್ಯಗೊಂಡ ರಾಜನು ಆತನಿಗೆ ನತ್ತ ತಂಗಿಯನ್ನೇ ಕೊಟ್ಟು ಮದುವೆ ಮಾಡಿಸಿದನು ತದನಂತರ ತನ್ನ ಹೆಂಡತಿಯೊಡನೆ ತಿರುವನಂತಪುರದ ಅರಮನೆಯಲ್ಲಿ ರಾಜನ ಬೀಡಿಕೆ ಮೇರೆಗೆ ಬಳಿದುಕೊಂಡನು.

ಆಲ್ಲಿ ಆಸ್ಥಾನ ಕಲಾ ಪಂಡಿತನಾದ ರಾಮಸ್ವಾಮಿ ನಾಯಕ್ ಎಂಬವನೊಡನೆ ರವಿವರ್ಮನ ಪರಿಚಯ ಬೆಳೆಯಿತು ತನ್ನ ಪ್ರತಿಭೆಯ ಕುರಿತು ಜಂಭ ತಳೆದಿರುವ ರಾಮಸ್ವಾಮಿ ನಾಯಕ್‌ನು ತನ್ನ ವಿದ್ಯೆಯನ್ನು ಮತ್ತೊಬ್ಬರಿಗೆ ಹೇಳಿಕೊಡಲು ಹಿಂಜರಿಯುತ್ತಿದ್ದನು ಎಲ್ಲಿ ತನ್ನಗಿಂತಲೂ ಹೆಚ್ಚಿನ ಕೀರ್ತಿ ತನ್ನ ಶಿಷ್ಯರೇಗಳಿಸಿಕೊಳ್ಳುವರೋ ಎಂದಿರುವ ಗ, ರವಿವರ್ಮನಿಗೆ ಆವನ ಪರಿಚಯದಿಂದ ಅವನ ಗಣವಷ್ಟೇ ತಿಳಿಯಿತಲ್ಲದೆ ಬೇರಾವ ಪ್ರಯೋಜನವೂ ಸಿಗಲಿಲ್ಲ. ಆದರೆ ಭಾಗ್ಯವು ಯೋಗ್ಯತೆಯುಳ್ಳ ಮನುಷ್ಯನ್ನು ಹುಡುಕಿಕೊಂಡೇ ಅವನ ಕಾಲಿಗೆ ಬಂದು ಬೀಳುವುದು.

ಆದೇ ದಿನಗಳಲ್ಲಿ ದಿಯೋಡರ್ ಜಾನ್ಸನ್ ಎಂಬ ಆಂಗ್ಲ ಚಿತ್ರಕಾರನು ರಾಜಧಾನಿಯಲ್ಲಿದ್ದನು, ರಾಜನ ತೈಲ ಚಿತ್ರವನ್ನು ನಿರ್ಮಿಸುವ ಕಾರ್ಯದಲ್ಲಿದ್ದನು. ರಾಜನ ಕೇಳಿಕೆಯು ಮೇರೆಗೆ ರವಿವರ್ಮನನ್ನು ತೈಲ ಚಿತ್ರ ನಿರ್ಮಾಣದಲ್ಲಿ ತಾಬೇತಿಗೊಳಿಸಿದುದಲ್ಲದೆ ತನ್ನ ಸಹಾಯಕನನ್ನಾಗಿ ನೇಮಿಸಿಕೊಂಡನು. ರಾಜಾಶ್ರಯದಲ್ಲಿ ನಡೆದ ಚಿತ್ರ ಪ್ರದರ್ಶನದಲ್ಲಿ ರವಿವರ್ಮನ ಚಿತ್ರವೇ ಸರ್ವರಿಂದಲೂ ಹೊಗಳಲ್ಪಟ್ಟಿತು. ಅಲ್ಲದೆ ಆ ಪ್ರದರ್ಶನದಲ್ಲಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ತೈಲ ಚಿತ್ರ ಕಲಾವಿದರೆಲ್ಲಾ ಭಾಗವಹಿಸಿದ್ದರು.

ರವಿವರ್ಮನ ಜೀವನದಲ್ಲಿ ಆದೊಂದು ಮಹತ್ವದ ಘಟನೆ. ಮದ್ರಾಸಿನಲ್ಲಿ ೧೮೭೨ರಲ್ಲಿ ನಡೆದ ಅಖಿಲ ಭಾರತ ಚಿತ್ರಪ್ರದರ್ಶನದಲ್ಲಿ ರವಿವರ್ಮನ 'ನಾಯರ್ ಹೆಂಡತಿ' ಚಿತ್ರಕ್ಕೆ ಚಿನ್ನದ ಪದಕ ದೊರೆಯಿತು. ಅಂದಿನಿಂದ ರವಿವರ್ಮ ಜಗತ್ತಿನ ಪ್ರಖ್ಯಾತ ಚಿತ್ರಗಾರರಲ್ಲೊಬ್ಬನೆಂದು ಹೆಸರು ಪಡೆದನು. ಆಗ ಮದ್ರಾಸಿನ ಗವರ್ನರರಾಗಿದ್ದ ಲಾರ್ಡ್ ಹೋಬರ್ಟ್‌ರು ರವಿವರ್ಮನ ಚಿತ್ರಕಲೆಯನ್ನು ಪ್ರಶಂಸಿಸುತ್ತಾ "Ravi Varma was a artist of first Magnitude" ಎಂದು ಹೇಳಿದರು

ತದನಂತರ ಕಲವು ದಿನಗಳ ಬಳಿಕ ವಿಯೆನ್ನಾ ದಲ್ಲಿ ಜರಗಿದ ಅಂತರಾಷ್ಟ್ರೀಯ ಚಿತ್ರ ಸ್ಪರ್ಧೆಯಲ್ಲಿ ರವಿವರ್ಮನ ಚಿತ್ರಕ್ಕೆ ಚಿನ್ನದ ಪದಕವಲ್ಲದೆ, ಅಭಿನಂದನಾ ಪತ್ರವೂ ದೊರೆಯಿತು.

ಭಾರತದ ಚಕ್ರವರ್ತಿ ಏಳನೇ ಎಡ್ವರ್ಡರು ೧೯೦೨ರಲ್ಲಿ ತಿರುವನಂತಪುರವನ್ನು ಸಂದರ್ಶಿಸಿದಾಗ ರವಿವರ್ಮನ ಚಿತ್ರಗಳನ್ನು ಕಾಣುವ ಭಾಗ್ಯ ದೊರೆಯಿತು ಮೆಚ್ಚಿದ ಚಕ್ರವರ್ತಿಗಳು ರವಿವರ್ಮನನ್ನು ತುಂಬಾ ಹೊಗಳಿದರು. 'ಶಕುಂತಲೆಯು ದುಷ್ಯಂತನಿಗೆ ಪ್ರೇಮ ಪತ್ರವನ್ನು ಬರೆಯುವ ಚಿತ್ರವನ್ನು ನೋಡಿ ವಿಸ್ಮಿತನಾಗಿ ಬರೆವ ಚಿತ್ರ ಮದ್ರಾಸಿನಲ್ಲಿ ಜರುಗಿದ ಪ್ರದರ್ಶನದಲ್ಲಿ ಚಿನ್ನದ ಪದಕ ಪಡೆಯಲು ಅರ್ಹವಾಯಿತು

ಬಕ್ಕಿಂಗ್‌ಹ್ಯಾಮ್‌ನ ಡ್ಯೂಕ್ ಆರನೆಯ ಮದ್ರಾಸಿನ ಗವರ್ನರ್ ರಾಗಿದ್ದರು ಅವರು ತಮ್ಮ ಭಾವಚಿತ್ರವನ್ನು ಬರಸಬೇಕೆಂದು ಪಾಶ್ಚಾತ್ಯ ಚಿತ್ರ ತಜ್ಞರನ್ನು ಕರೆಸಿ, ಬರೆಸಿದ್ದರೂ ಗವರ್ನರರಿಗೆ ತೃಪ್ತಿಯೇ ಆಗಲಿಲ್ಲವಂತೆ ಅದೇ ಕರೆಯು ರಾಜಾ ರವಿವರ್ಮನಿಗೂ ಹೋಯಿತು. ಇತರ ಖಲವರು ಬರೆದ ಚಿತ್ರಗಳಿಗಿಂತಲೂ ಅತ್ಯುತ್ತಮವಾದ ಚಿತ್ರವನ್ನು ರವಿವರ್ಮನು ಕಲವೇ ದಿನಗಳಲ್ಲಿ ಬರೆದು ಕೊಟ್ಟನು. ಯಾವ ಕೆಲಸವು ಜಗತ್ತಿನ ಇತರ ದೇಶಗಳ ಚಿತ್ರಕಾರರಿಂದ ಅಸಾಧ್ಯವಾಯಿತೋ, ಆ ಕೆಲಸವನ್ನು ಅರಸ ಮನೆತನದ ಭಾರತದ ಶ್ರೇಷ್ಠ ಕಲಾಕಾರ ರಾಜಾ ರವಿವರ್ಮನು ಮಾಡಿ ತೋರಿಸಿಕೊಟ್ಟನು ಇದರಿಂದ ಅತ್ಯಪ್ಪೆಯ್ಯ ವಿನೀತರಾದ ಗವರ್ನರ್ ಡ್ಯೂಕರು ಸಂತೋಷಪಟ್ಟು, ಹೆರಳ ದಂತ ನಾಮಾ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O MANGALORE. Estd 1931

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಉಕ್ಕಿನ ಗಿಡುಗನ ಬೆನ್ನ ಮೇಲೆ

ಶ್ರೀ. ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ.

ಮುಂಜಾವದ ನಸುಕಿನಲ್ಲಿ ಭೇರಿಯ ಮೊಳಗಿನಂತೆ ಪ್ರತಿಧ್ವನಿಯನ್ನು ವಾತಾವರಣದಲ್ಲಿ ತುಂಬಿಸಿತ್ತ ವರ್ತಮಾನವು ಹರಿಡಿತ್ತು. ಗಂಡಸರು ಕೆಸರಿನಿಂದ ಕೊಳಕಾದ ತಮ್ಮ ಕೈಗಳನ್ನು ಸುತ್ತಿದ ಮೊಂಡು ಒಟ್ಟೆಯಲ್ಲಿಯೇ ಒರಸಿಕೊಂಡು ಗದ್ದೆಯಿಂದ ಧಾವಿಸಿದರು. ಹೆಂಗಸರು ತಮ್ಮ ಮಕ್ಕಳಿಗಾಗಿ ಆರ್ತಧ್ವನಿಯಿಂದ ಕೂಗತೊಡಗಿದರು. ಮಕ್ಕಳು ಸಂತೋಷದಿಂದ ಕುಣಿದಾಡುತ್ತಾ ಮುಂದೆ ಮುಂದೆ ಓಡುತಿದ್ದರು.

"ಹಾರಾಡುವ ಆಶ್ಚರ್ಯಕರ ವಸ್ತು ವಂತೆ! ನಾವೂ ಆಕಾಶದಲ್ಲಿ ಒಂದು ಸುತ್ತು ಹಾರಬಹುದು" ಒಬ್ಬನೆಂದ.

"ನಾವು ಮೋಡಗಳನ್ನು ಮುಟ್ಟುವೆವು. ಮಳೆ ಬರಿಸಲು ನಮ್ಮ ಮುಷ್ಟಿಯೊಳಗೆ ಮೋಡಗಳನ್ನು ಹಿಡಿಯುವೆವು" ಇನ್ನೊಬ್ಬನೆಂದ.

ಭಾರತದ ಪಶ್ಚಿಮ ಪಕ್ಷದ ಹಳ್ಳಿಯೊಂದು ಮೈದಾನದಲ್ಲಿ ಆ ಹಾರಾಡುವ ಆಶ್ಚರ್ಯಕರ ವಸ್ತು ನಿಂತಿತ್ತು; ಅದರ ರೆಕ್ಕೆಗಳ ಮೇಲೆ ಆಗಾಗಲೇ ಉದಯಿಸುತ್ತಿದ್ದ ಸೂರ್ಯನ ಕಿರಣಗಳು ಹೊಡೆಯುತಿದ್ದವು. ಜನಜಂಗುಳಿ ಪ್ರತಿನಿಮಿಷದಲ್ಲೂ ಹೆಚ್ಚುತ್ತ ಬರುತ್ತಿತ್ತು.

ಗಾಡಿ ಹೊಡೆಯುವ ಭೂಷಣ ತನ್ನ ಎತ್ತಿನ ಜತೆಯನ್ನು ಎಬ್ಬಿಸಿ ಅವಸರ ಪಡುತಿದ್ದ. ಅವನು ಜತೆಯ ಬೆನ್ನು ತಿಕ್ಕಿದ. ಸಣ್ಣ ಬೆತ್ತದಿಂದ ಮೃದುವಾಗಿ ಕುಟ್ಟಿ, ಪ್ರತಿಯೊಂದರಿ ಬಾಲವನ್ನೂ ಎಳೆದ. "ನಿದ್ದೆ ಮಾಡಬೆ ಓಡಿರಿ" ಎಂದ. ಏಕೆಂದರೆ, ಕಣ್ಣು ರೆಪ್ಪೆ ಮುಚ್ಚುವುದಕ್ಕೂ ಅಲ್ಲಿ ಅವಕಾಶವಿರಲಿಲ್ಲ; ಹಾರಾಟದ ಆಶ್ಚರ್ಯಕರ ವಸ್ತು ಯಾವ ಕ್ಷಣದಲ್ಲಿಯೂ ಮಾಯುವಾಗಬಹುದಿತ್ತು. ಮಾನವನ ಜೀವನದಲ್ಲಿಯೇ ಆಶ್ಚರ್ಯಯುಕ್ತವಾದ ಮತ್ತು ಅಪರೂಪವೆನಿಸಿದ ಈ ಅವಕಾಶವನ್ನು ಯಾರು ತಾನೆ ಕಳೆದುಕೊಳ್ಳಬಯಸಿಯಾರು? ಅವರು ನೀಲಿ ಮೇಘ ಆಕಾಶದಲ್ಲಿ ಜಿಕ್ಕೆಯಂತೆ ಹಾರಾಡುವ ಅಥವಾ ರಾತ್ರಿಯೊತ್ತಿನಲ್ಲಿ ಚಲಿಸುವ ನಕ್ಷತ್ರದಂತೆ ಓಡುವ ಅದನ್ನು ಕಂಡಿದ್ದರು. ಆದರೆ ಇದೀಗ ಭೂತಳದಲ್ಲಿ ಸರಿಯಾಗಿ ಕಣ್ಣಾರೆ ಕಾಣುವ ಸುಯೋಗ ಒದಗಿಬಂದಿದೆ. ಅದರ ರೆಕ್ಕೆಯಿಂದ ಕೂಡಿದ ಶರೀರವನ್ನು ಕಾಣುವ ಸದವಕಾಶ ಒದಗಿದೆ. ಆಲ್ಲದೆ, ಅದು ಎತಕ್ಕಾಬಂತ? ಕೇವಲ ಒಂದರೆಗಳಿಗೆ ಭೂಮಿಯಲ್ಲಿ ವಿರಾಮ ಪಡೆಯುವುದಕ್ಕಾಗಿಯೇ ಅಥವಾ ಬೇರೇನಾದರೂ ಮಹತ್ತರ ಕಾರಣವಿದೆಯೇ ಎಂಬ ಸಮಸ್ಯೆಗಳನ್ನೂ ಪರಿಹರಿಸಬೇಕಾಗಿದೆ.

ಮಾರ್ಗದಲ್ಲಿ ತುಂಬಿದ್ದ ಧೂಳಿಯಡಿಯಲ್ಲಿ ಮರದ ಗಾಳಿಗಳು ತೂಕುಸೋಗುತಿದ್ದಂತೆ ಭಾಸವಾಗುತಿದ್ದವು. ಎತ್ತುಗಳು ನಾಗಾಲೋಟಕ್ಕೆ ವ್ಯಾರಂಭಿಸಿದುವು. "ಓಡಿರಿ, ಓಡಿರಿ, ಉಸಿರು ಕಟ್ಟುವವರೆಗೆ ವೇಗವಾಗಿ ಓಡಿರಿ" ಎನ್ನುತಿದ್ದ ಭೀಷಣ

ಗಾಡಿಯು 'ಜ್ಞಾನಸೋಪಾನ'ದ ಸಮೀಪ ಬಂದಾಗ, ಅಜ್ಜಿಯೇ ವಾಸವಾಡುತಿದ್ದ ಹಳ್ಳಿ ಉಪಾಧ್ಯಾಯರ ಮಡದಿ ಕಾಮಿನಿಯು ಮನೆಬಾಗಿಲಿನಿಂದ ತಲೆ ಹೊರಹಾಕಿದಳು. 'ಎತ್ತಿನ ಗಾಡಿ, ನಮ್ಮನ್ನು ಆ ಆಶ್ಚರ್ಯಗಳ ಆಶ್ಚರ್ಯ ನಿಂತಿರುವ ಮೈದಾನಕ್ಕೆ ಕರೆದೊಯ್ವೆಯ?" ಆಕೆ ಕೇಳಿದಳು.

ಆಕೆಯ ಅನಾವೃತ ಪಾದಗಳಲ್ಲಿ ಧೂಳಿಯ ಕಣಗಳು ಕುಳಿತವು. ಆಕೆಯ ಒಂದು ಕೈ ಬಾಗಿಲ ದಾರದಂಡವನ್ನು ಒತ್ತಿ ಹಿಡಿದಿತ್ತು. ಮತ್ತು ಇನ್ನೊಂದು ಆರು ವರ್ಷದ ಮಗಳಾದ ಬಾಬಲುವಿನ ತೋಳನ್ನು ಭದ್ರಪಡಿಸಿಕೊಂಡಿತ್ತು. ಭೀಷಣ ಮೂಗು ದಾವನ್ನೆಳೆಯುತ್ತಿರುವಾಗಲೇ ಆಕೆ ಪ್ರಶ್ನಿಸಿದಳು—"ಬಾಡಿಗೆ ಏನು?"

"ಏಕೆ ತಾಯಿ, ನಾನು ಅಜ್ಜಿಗೆ ಕಣ್ತುಂಬಿಸಿಕೊಳ್ಳಲು ಹೋಗುತಿದ್ದೇನೆ. ನಿಮ್ಮಿಂದ ಹೇಗೆ ಬಾಡಿಗೆ ಪಡೆಯಲಿ?" ಅವನ ಕಣ್ಣುಗಳು ಆಡಿಗೆ ಮನೆಯ ಮಾಡಿನ ಮೇಲೆ ಹೋಗಿ ಮುಖದಲ್ಲಿ ಕಿರುನಗೆ ಮೂಡಿಸಿತು: 'ಆಹಾ, ಎಂತಹ ಕುಂಬಳಕಾಯಿ ಬಳ್ಳಿಯನ್ನು ಬೆಳೆಸಿದ್ದೀರಿ? ಹಳದಿ ಹೂವುಗಳಿಂದ ಅದೆಷ್ಟು ರಮ್ಯವಾಗಿದೆ?' ಅತ ಉದ್ಗರಿಸಿದ.

"ಆ ಬಳ್ಳಿಯ ಪ್ರಥಮ ಕಾಯಿ ನಿನಗೆ" ಆಕೆ ಎಂದಳು ಇದರಿಂದ ಮಾತು ಮುಗಿಯಿತು. ಕಾಮಿನಿ ತನ್ನ ಮಗಳೊಂದಿಗೆ ಗಾಡಿಯ ಹಿಂದುಗಡೆಯಿಂದ ಮೇಲೆ ಹತ್ತಿದಳು. ಗಾಡಿಯು ಗಜ್ಜೆಗಳ ನಡುವಿನ ಮೈದಾನದತ್ತ ಹೋಗುವ ಸಣ್ಣ ಒಣಿಯಲ್ಲಿ ಮುಂದುವರಿಯುತಿತ್ತು. ನಸು ಹೆಚ್ಚಿದ ಬಣ್ಣದ ತೆನೆಗಳಲ್ಲಿನ ಭತ್ತದ ಕಾಳುಗಳು ಗಾಳಿಯ ವೇಗದಲ್ಲಿ ಉದುರುತಿದ್ದವು.

"ಆಕೆ ಆ ಆಶ್ಚರ್ಯವಸ್ತುವನ್ನು ನೋಡಲು ಇಲ್ಲವಾದಳು. ಎಂತಹ ದುರದೃಷ್ಟ ಶಾಲಿಯಾಕೆ! ಹೆಳ್ಳಿಗೆ ಳಳ್ಳಿಯೇ ಆದನ್ನು ನೋಡುತ್ತಿದೆ. ಆಕೆ ಮಾತ್ರ ಇಲ್ಲದಾದಳು!" ಆತ ತನಗೆ ತಾನೇ ಹೇಳಿಕೊಳ್ಳುತಿದ್ದ.

"ಯಾರು, ಗಾಡಿಯವನೆ?"

"ನನ್ನ ಬಡ ಅಜ್ಜಿ! ಚತುರ ಯಂತ್ರಗಳೆಂದರೆ ಹುಚ್ಚು ಎನ್ನುತ್ತಾಳೆ! ಹಿಂದೆ ಕಂಟಿ ಗಾಡಿಗಳು ಬಂದಾಗ ಸಹ ಇದೇ ಮಾತನ್ನು ಆಡುತ್ತಿದ್ದಳು."

"ಕಂಬಿಗಾಡಿಗಳೆ? ಅದಿಲ್ಲಿಗೆ ಬಂದು ಹಲವಾರು ವರ್ಷಗಳುರುಳಿದುವು" ಕಾಮಿನಿ ಹೇಳಿದಳು.

ಗಾಡಿಗಾರ ನೆಗಾಡಿದ. "ಅಲ್ಲವೆ ಮತ್ತೆ? ಅಜ್ಜಿ ಹಲವಾರು ವರ್ಷ ಪ್ರಾಯವಾಗಿಲ್ಲವೆ? ಆಗ ಆಕೆಗೆ ೧೪-೧೫ ವರ್ಷವಿರಬಹುದು."

'ಯಾವಾಗ?" ಕಾಮಿನಿ ಗಟ್ಟಿಯಾಗಿ ಕೇಳಿದಳು. 'ನನಗೆ ಹೇಳು" ಆಕೆಯ ಸ್ವರ ಪ್ರಾರ್ಥಿಸುವಂತಿತ್ತು.

"ನಮ್ಮ ಸೋಣಮಿತಿಯಿಂದ ಒಂದು ಮೈಲು ನಡಿಗೆ ದೂರದ ಚೂರ್ಣಿಯಲ್ಲಿ ಕಂಬಿಗಾಡಿಯ ನಿಲ್ದಾಣವನ್ನು ಕಟ್ಟಿದ್ದರು."

"ಸರಿ, ಮುಂದೇನು?"

"ಅಜ್ಜಿಗೆ ಆಗ ೧೪-೧೫. ವಿವಾಹಿತಳಾಗಿ ಸ್ವಲ್ಪ ಸಮಯವಾಗಿತ್ತು."

"ನಾನು ಕಿವಿಗುಡುತ್ತಾ ಇದ್ದೇನೆ" ಗಾಡಿಗಾರ ತಡೆದುದರಿಂದ ಕಾಮಿನಿ ಹೇಳಿದಳು.

"ಅಜ್ಜಿಯು ಬೆಂಕಿಯು ಹೊಗೆಯುಗುಳುವ ಯಂತ್ರಗಳನ್ನು ಕಂಡಿದ್ದಳು. ಈಗ ಸವಿೂಪದಲ್ಲಿಯೇ ಆನೆಯಂತೆ ನಿಂತುಕೊಂಡಿರುವುದನ್ನು ಕಾಣಬಹುದಿತ್ತು. ಆ ಕಬ್ಬಿಣದ ಚರ್ಮವನ್ನು ಕೈಯಿಂದ ಮುಟ್ಟಿನೋಡಬಹುದಿತ್ತು. ಏಕೆಂದರೆ, ಅಜ್ಜನು ಆಕೆಯನ್ನು ಚೂರ್ಣಿಗೆ ಕರೆದುಕೊಂಡು ಹೋಗಿದ್ದ."

ಭೀಷಣ ತನ್ನ ಕಥೆಯಲ್ಲಿಯೇ ತಲ್ಲೀನನಾಗಿ, ಎತ್ತುಗಳನ್ನು ಮರೆತು ಆಲಿಸುವವರತ್ತ ಮುಖತಿರುಗಿಸಿ ಮಾತು ಮುಂದುವರಿಸಿದ:

"ಒಂದು ದಿನ ಅಜ್ಜ ಚೂರ್ಣಿಗೆ ಆಕೆಯನ್ನು ಕರೆದುಕೊಂಡು ಹೋದ. ಅವರು ಕಾಯುತಿದ್ದರು. ಸ್ವಲ್ಪ ದೂರದಲ್ಲೊಂದು ಗುಡುಗನ್ನು ಕೇಳಿದರು. ಆಗಿಬಂಡಿಯು ಗಾಡಿಗಳ ಸಾಲಾನಾಲನ್ನೇ ಎಳೆದುಕೊಂಡು ಬರುತ್ತಿತ್ತು. ಎಲ್ಲ ಪುಗಳಿಗೂ ಬಣ್ಣ ಬಳೆದಿದ್ದರು. ಕನ್ನಡಿ ಇಟ್ಟಿದ್ದರು. ಐದು ಕ್ಷಣ ಆಕೆ ಶತ್ತಂತಾದಳು. ಗಾಡಿಯು ಕಾಯುವಂತಿರಲಿಲ್ಲ; ಅಜ್ಜ ಆಕೆಯನ್ನು ಎಚ್ಚರಿಸಿದನಂತರ ಆಕೆ ಜಾಗೃತಳಾದಳು. ಆಕೆ ಮೊತ್ತಮೊದಲು ನೂರಾರು ಚಕ್ರಗಳನ್ನು ನೋಡಲು ಕತ್ತು ಬಗ್ಗಿಸಿದಳು. ಆಕೆಯ ವೇಲೆ ಯಂತ್ರಗನ್ನೆಲ್ಲಾ ನೋಡಿ ನೀಲಿ ಚಡ್ಡಿ ಅಂಗಿ ಧರಿಸಿದವನನ್ನೂ ಕಂಡಳು. ಆತ ಆ ಬೃಹದ್ವಾವ ರಾಕ್ಷಸನನ್ನು ನಡೆಸುತಿದ್ದ. ಆಕೆ ಎಣ್ಣೆಯಿಲ್ಲದೆ ಉರಿಯುವ ಬತ್ತಿಗಳನ್ನು ಕೈಗಳಿಲ್ಲದೆ ಬೀಸುವ ಬೀಸಣಿಗೆಗಳನ್ನು ಎಲ್ಲೆಲ್ಲಿಯೂ ನೋಡಿ ಪ್ರಯಾಣಿಕರನ್ನು ಕಾಣಲು ಸುತ್ತಮುತ್ತ ತಿರುಗಿ ನೋಡತೊಡಗಿದಳು. ಕೊನೆಗೆ ದೊಡ್ಡ ಕೂ ಶಬ್ದವನ್ನು ಮಾಡಿ ವ್ಹೂಶ್ ವ್ಹೂಶ್ ಸದ್ದಿನೊಡನೆ ಗಾಡಿಯ ಹಿಂದೆ ಗಾಡಿಯು ನಯುವಾದ ಕನ್ನಡಿಯಲ್ಲಿ ಜಾರುವಂತೆ ಜಾರುತ್ತಾ ಹೋಗುತ್ತಿರುವುದನ್ನು ಕಂಡಾಗ ಮಾಯ ಶತ್ತಂತಾದಳು. ಆಕೆ ತನ್ನ ತಾಳಿಗೆಯನ್ನು ತಿರುಗಿಸಿದಾಗ ಸ್ವಲ್ಪ ಸಮಯ ಕಳೆದಿತ್ತು. ಅಜ್ಜನತ್ತ ತಿರುಗಿ ಆಕೆ ಹೇಳಿದಳು. "ನಿಜವಾಗಿಯೂ ಇದೊಂದು ಶಕ್ತಿ ಪೂರ್ಣ ಪ್ರತಿಮೆ! ಇದನ್ನು ಕಾಣಲು ನಾನು ಇಪ್ಪತ್ತೊಂದು ಸತ್ಯಾರ್ಯಗಳನ್ನು ಮಾಡಿ ಪುಣ್ಯವತಿಯಾಗಿದ್ದೆ." ಆಕೆ ಕಣ್ಣುಗಳನ್ನು ಮುಚ್ಚಿ ಕೈಗಳನ್ನು ಹಣೆಗೆ ತಾಗಿಸಿ ಜೋಡಿಸಿ ಆ ಮೂರ್ತಿಗೆ ಪ್ರಣಾಮ ಮೂಡಿದಳು. ಅಜ್ಜನು ನಗುತಿದ್ದ ಅದರೆ, ಅತನ ಕಣ್ಣುಗಳು ತೇವಗೊಂಡಿದ್ದುವು. ಮೂರುನಾಲ್ಕು ದಿನಾನಂತರ ಅವರು ಪುನಃ ಚೂರ್ಣಿಗೆ ತೆರಳಿದರು. ಈ ಬಾರಿ ಅವರಿಬ್ಬರು ತಿಕೀಟುಗಳನ್ನು ಕೊಂಡರು. ಗಾಡಿಯಲ್ಲಿ ಪ್ರಯಾಣಿಸಿದರು. ಮುಂದಿನ ನಿಲ್ದಾಣದ ವರೆಗೆ ಹೋಗಿ, ನಡೆದುಕೊಂಡು ಹಿಂತಿರುಗಿದರು."

ಭೀಷಣನು ಒಂದರೆಕ್ಷಣ ಹೆಳೆಯ ಸ್ಮರಣೆಗಳನ್ನ ಜ್ಞಾಪಕಕ್ಕೆ ತರುವವನಂತೆ ತಡೆದನು. ಅವನ ಧ್ವನಿಯು ವಂದವಾಗಿತ್ತು: "ಇಂದಾಕೆ ಮುದುಕಿಯಾದರೂ ಚುತುರ ಯಂತ್ರಗಳ ವಿಷಯದಲ್ಲಿ ಹಿಂದಿನ ವರ್ಷಗಳಂತೆಯೇ ಬಹಳ ಉತ್ಸುಕಳಾಗಿರಬಹುದು."

"ಪಾಪ, ಆಕೆ ಈ ಹಾರಾಡುವ ಈ ಅದ್ಭುತ ವಸ್ತುವನ್ನು ಕಾಣಲಾರಳೆಂಬುದೇ ವ್ಯಸನ" ಕಾಮಿನಿ ತನ್ನ ದಯೆಯನ್ನು ಪ್ರದರ್ಶಿಸಿದಳು.

"ಆಕೆ ನನ್ನನ್ನು ಬೇಗನೆ ಹೋಗಿ ಇದನ್ನು ನೋಡುವಂತೆ ಅಜ್ಞಾಪಿಸಿದಳು. ಆಕೆ ನನ್ನ ಕಣ್ಣುಗಳು ನೋಡಿದುದರಿಂದಲೇ ತೃಪ್ತಿಪಡುವಳು ಅದು ಹೇಗಿದೆ, ಅದರ ವಾಸನೆ ಹೇಗೆ ಎಲ್ಲವೂ ಆಕೆಗೆ ಬೇಕು...."

ಒಂದು ಕ್ಷಣ ವಿೂನ. ಗಾಡಿಗಾರ ಕುದುರೆಗಳನ್ನು ಚಪ್ಪರಿಸಿ, "ಕತ್ತೆ ಮಕ್ಕಳೆ, ಓಡಿ, ಎನು ದಾಡಿ ನಿಮಗೆ?" ಎಂದ. ಈ ಬೇಸರಬರಿಸುವ ಮಾತುಕತೆಯಿಂದ ಬೇಸತ್ತ ಬಾಬಲು ಈಗ 'ಬೇಗನೆ ಬೇಗನೆ' ಎಂಬ ಪಲುಕನ್ನೂ ಗಾಡಿಕಾರನ

(೧೨ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಕಫ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ. ವಿ. ಕೆಫೆ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ಭಾರತೀಯ ಮಹಾ ವೈದ್ಯ—

ಆಯುರ್ವೇದದ ಹುಟ್ಟು

ಶ್ರೀ ಕೆ. ದೇವದಾಸ, ಶಿರೋಮಣಿ, ಉಡುಪಿ.

ಭರತಖಂಡದಲ್ಲಿ ಆಯುರ್ವೇದವು ಯಾವ ರೀತಿಯಲ್ಲಿ ಆವಿರ್ಭವಿಸಿತು ಮತ್ತು ಅದು ಹೇಗೆ ವಿಕಾಸಗೊಂಡಿತು ಎಂಬ ವಿಷಯವನ್ನು ಶ್ರೀ ವಾಗ್ಭಟಾಚಾರ್ಯನು ಆಯುರ್ವೇದದ ಸರ್ವೋತ್ಕೃಷ್ಟ ಗ್ರಂಥವಾದ ತನ್ನ "ಅಷ್ಟಾಂಗ ಹೃದಯ" ಎಂಬ ಗ್ರಂಥದಲ್ಲಿ ಒಂದೆರಡು ಶ್ಲೋಕಗಳಲ್ಲೇ ಸ್ಪಷ್ಟವಾಗಿ ಉಲ್ಲೇಖಿಸಿರುವನು—

"ಬ್ರಹ್ಮಾ ಸ್ಮೃತ್ವಾಯುಷೋ ವೇದಂ
ಪ್ರಜಾಪತಿಮಜಿಗ್ರಹತ್,
ಸೋಶ್ವಿನೌ, ತೌ ಸಹಸ್ರಾಕ್ಷಂ-ಸೋತ್ರಿ
ಪುತ್ರಾದಿಕಾನ್ ಮುನೀನ್,
ತೇಗ್ನಿವೇಶಾದಿಕಾನ್, ತೇ ತು ಪೃಥಕ್
ತಂತ್ರಾಣಿ ಕೇನಿರೇ।
ತೇಭ್ಯೋತಿವಿಪ್ರಕೀರ್ಣೇಭ್ಯಃ ಸಾಯುಷಃ
ಸಾಲ್ಪತರೋಚ್ಚಯಂ
ಕ್ರಿಯಾಕೇಷ್ವಾಂಗ ಹೃದಯಂ ನಾತಿ ಸಂ
ಕ್ಷೇಪ ವಿಸ್ತರಂ॥"

(ಆಯುರ್ವೇದವನ್ನು ಬ್ರಹ್ಮನು ಪ್ರಜಾಪತಿಗೂ, ಆತನು ಅಶ್ವಿನೀ ದೇವತೆಗಳಿಗೂ, ಅವರು ಇಂದ್ರನಿಗೂ ಹೇಳಿಕೊಟ್ಟರು ಇಂದ್ರನು ಆತ್ರೇಯಾದಿಗೂ ಅವರು ಅಗ್ನಿ ವೇಶಾದ್ಯರಿಗೂ ಕಲಿಸಿದರು. ಅಗ್ನಿ ವೇಶಾದ್ಯರು ಬೇರೆ ಬೇರೆ ಗ್ರಂಥಗಳನ್ನು ರಚಿಸಿದರು. ಅವರೆ ಖಾರಸರ್ವಸ್ವವಾಗಿ ಈ ಅಷ್ಟಾಂಗ ಹೃದಯವು ರಚಿತವಾಯಿತ)

ಶ್ರೀ ವಾಗ್ಭಟನ ಕಥನವನ್ನು ವಿಮರ್ಶಿಸಿದರೆ ಆಯುರ್ವೇದದ ಕಾಲವು ಪ್ರಧಾನವಾಗಿ ಎರಡು ಅವಸ್ಥೆಗಳಲ್ಲಿದ್ದುದು ಕಂಡುಬರುತ್ತದೆ. ಆರ್ಯರು ಹಿಮಾಚಲದ ಉತ್ತರ ದಿಕ್ಕಿನಿಂದ ಭರತ ಖಂಡಕ್ಕೆ ಬಂದು ನೆಲೆಸಿದನಂತರದಿಂದ ಚರಿತ್ರಕಾರರು ಹೇಳುತ್ತಾರೆ. ಅವರು ಹಿಂದೂ ದೇಶಕ್ಕೆ ಪ್ರವೇಶ ಮಾಡುವ ವರೆಗಿನ ಚರಿತ್ರೆಯಲ್ಲಿ ಆಯುರ್ವೇದದ ಮೊದಲನೆಯ ಕಾಲ- ಚರಿತ್ರೆಯು ಅಡಕವಾಗಿರಬೇಕು. ಸಹಸ್ರಾಕ್ಷನ ಆಯುರ್ವೇದ ಶಿಕ್ಷಣದ ವರೆಗಿನ ಕಾಲವದು.

ಬ್ರಹ್ಮನು ದೇವ- ಮಾನವರ ಆದಿ ಸಿತಾಮಹನು. ಸಂಸ್ಕೃತ ಭಾಷೆಯೊಂದರಲ್ಲೇ ಆತನಿಗೆ ಹತ್ತಿಪ್ಪತ್ತು ಹೆಸರುಗಳಿವೆಯಷ್ಟೆ. ಅಂತೆಯೇ ಬೇರೆ ಭಾಷೆಗಳಲ್ಲೂ ಆತನ ಹೆಸರು ಮಾತ್ರ ಬೇರೆ ಬೇರೆ ಇರಬಹುದು. ಆತನೂ ಬ್ರಹ್ಮನೇ ಆದಿಪಿತಾಮಹನೆಂದು ಎಲ್ಲರೂ ಸಮ್ಮತಿಸುತ್ತಾರೆ ಆತನು ತನ್ನ ಕಾರ್ಯವಾದ ಸಂತತಿ ಉತ್ಪಾದನವನ್ನು ಎಲ್ಲಿ ಮಾಡತೊಡಗಿದನೆಂಬುದು—ಅದೇ— ಆ ಸ್ಥಳ ಯಾವುದು ಎಂಬ ಸಂಗತಿಯು ಮಾತ್ರ ಚರಿತ್ರೆಗೆ ಗೋಚರವಾಗದ ವಿಷಯವಾಗಿದೆ. ಅಂತೂ ಅವರ ಸ್ಥಳವಾದ ಉತ್ತರ ಧ್ರುವ—ಹಿಮಾಚಲಗಳ ನಡುವೆಯಾಗಿರಬಹುದು.

ಆಲ್ಲಿ ಕೆಲಕಾಲದಲ್ಲೇ ದೇವದಾನವ ಪಂಗಡಗಳಲ್ಲಿ ಕಲಹವು ತಲೆದೋರಿ ಅನರ್ಥಗಳು ಸಂಭವಿಸಿದ್ದು ಕ್ಷೀರ ಸಾಗರ ವನ್ನು ಮಥನ ಮಾಡಿದ್ದೂ ಪುರಾಣಗಳಲ್ಲಿ ಉಲ್ಲಿಖಿತವಾಗಿದೆ ಭಗವಂತನು ಧನ್ವಂತರಿಯಾಗಿ ಒಂದು ಬ್ರಹ್ಮನಿಗೆ ಆಯುರ್ವೇದ ರಹಸ್ಯವನ್ನು ಕೂಟ್ಟದ್ದೂ ಸುಮಾರು ಅದೇ ಕಾಲವಾಗಿರಬೇಕು. ಆ ಕಾಲಗಲ್ಲಿ ಭಗವಂತನಲ್ಲಿ ಏನಾದರೂ ಹೊರೆಯಿಡಬೇಕಾದರೆ ಎಲ್ಲರೂ ಬ್ರಹ್ಮನನ್ನು ಮುಂದುಮಾಡುತ್ತಿದ್ದರು. ಆತನೇ ಅವರ ಅಧಿನಾಯಕನು ಇಂದ್ರ ಸೋದಲಾದವರು ಒಂದೊಂದು ವಿಭಾಗಕ್ಕೂ ಒಡೆಯರಾಗಿದ್ದರು. ಬಳಿಕಾಗಿರಬೇಕು ಅವರ ಪುಣ್ಯ ಕ್ಷೇತ್ರವಾಗಿತ್ತು.

ಬ್ರಹ್ಮನ ತರುವಾಯ ಆತನ ಪುತ್ರರೆಲ್ಲೊಬ್ಬನಾದ ದಕ್ಷನೇ ಪ್ರಜಾಪತಿಯಾದನು. ಶ್ರೀ ಧನ್ವಂತರಿಯು ಅಮೃತಲೋಕದ ಅಧಿಪತಿಯನ್ನು ಬ್ರಹ್ಮನು ತನ್ನ ಸುತನಾದ ದಕ್ಷ ಪ್ರಜಾಪತಿಗೆ ದಯಪಾಲಿಸಿದನು ಉತ್ತರ ಧ್ರುವ—ಹಿಮಗಿರಿಗಳ ನಡುವೆ ಆತನು ಅಧಿಪತ್ಯವಾಳುತ್ತಿದ್ದಾಗ ಅಶ್ವಿನೀ ದೇವಿಯು ಆವಳ ಜವಳಿ ಮಕ್ಕಳು ಆ ಧನ್ವಂತರೀ ವಿದ್ಯೆಯನ್ನು ಕಲಿತರು. ಮಾತ್ರವಲ್ಲ ಆ ವಿದ್ಯೆಯ ಪ್ರಭಾವವನ್ನು ಜೆನ್ನಾಗಿ ತೋರಿಸಿಕೊಟ್ಟರು. ಅಶ್ವಿನೀ ಕುಮಾರರ ಧನ್ವಂತರಿ ವಿದ್ಯಾ ವಾರಿಧಿತ್ವವನ್ನೂ ಅವರ ಆಶ್ಚರ್ಯಕಾರಕ ಚಿಕಿತ್ಸಾ ಕ್ರಮವನ್ನೂ ಹೊಗಳುವ ಸೂಕ್ತಗಳು ಋಗ್ವೇದದ ಮೊದಲನೆಯ ಮಂಡಲದಲ್ಲಿ ಕಾಣಸಿಗುತ್ತವೆ. ಸ್ಕಾಗಿನಿಲ್ಲಿ ಹೇಳುವ ಡ್ಯೊಸ್ಕೌರೈ (Dioskorai)ಗಳೂ ಆರ್ಯರ ಅಶ್ವಿನೀ ಕುಮಾರರೂ ಸಮಾನವಾಗಿ ವರ್ಣಿಸಲ್ಪಟ್ಟಿದ್ದಾರೆಂದು ಅಭಿಜ್ಞರು ಹೇಳುತ್ತಾರೆ.

ಋಗ್ವೇದದಿಂದ ಅಶ್ವಿನೀ ಕುಮಾರರ ಕುರಿತು ತಿಳಿಯಬಯಸುವದೇನೆಂದರೆ-ಅವರು ನಿತ್ಯ ಯೌವನ ಸಂಪನ್ನರು ಅವರು ರಥದಲ್ಲಿ ಕಳತು ಯಾತ್ರೆಮಾಡುವಾಗ ಸೂರ್ಯನ ಮಗಳು ಆ ರಥವನ್ನು ನಡಿಸುತ್ತಿದ್ದಳು. ಅವರ ಅನೇಕ ಅದ್ಭುತ ಕೃತ್ಯಗಳನ್ನು ಸ್ತುತಮಂಡಲದಲ್ಲಿ ನೋಡಿದರೆ ತಿಳಿಯಬಹುದು ದೇವ ವೈದ್ಯರಾದ ಅವರು ಕುರುಡನನ್ನು ಚಿಕಿತ್ಸೆಯಿಂದ ಗುಣಪಡಿಸಿದ್ದಾರೆ ಅವರ ಕಾಲಲ್ಲಿ ಶತ್ರುಗಳಾದ ದಾನವರೊಡನೆ ಯುದ್ಧ ನಡೆದಾಗ ದೇವ ಸೈನ್ಯದಲ್ಲಿದ್ದ ವಿಶ್ಪಲೆಯೆಂಬವಳ ಕಾಲು ಮುರಿದು ಹೋಯಿತಂತೆ ಆಗ ಭಿಷಜ್ಮಣಿಗಳಾದ ಅಶ್ವಿನೀ ಕುಮಾರರು ವಿಶ್ವಲೆಗೆ ಉಕ್ಕಿನ ಕಾಲನ್ನು ಸೇರಿಸಿ ಮುಂಚಿನಂತೆಯೇ ಮಾಡಿದರೆಂದೂ ಗೋತತ್ಸಪ್ರದೆ ರುದ್ರನೆಂಬ ವೈದ್ಯ ಶಿಖಾಮಣಿಯೂ ಆ ಕಾಲದಲ್ಲಿದ್ದುದಾಗಿ ವೇದದಿಂದ ತಿಳಿಯಬಹುದು ಜ್ವರ, ಕಾಸ, ರಕ್ತಸ್ರಾವ, ಗಂಡಮಾಲೆ ಮೊದಲಾದ ರ್ವ್ಯಾಧಿಗಳನ್ನು ಅಥರ್ವಣ ವೇದದಲ್ಲಿ ವಿಸ್ತರಿಸಿದ್ದಾರೆಂದು ವಿಮರ್ಶಕರಿ ಮತಗಳಿರುತ್ತವೆ.

ರೋಗಗಳೆಲ್ಲವೂ ಸಣ್ಣ ಕ್ರಿಮಿಗಳ ಮೂಲಕ ಉಂಟಾಗುತ್ತವೆಂದು ವಾಶ್ಚಾತ್ಯರ ಮತ ವಾತ ಪಿತ್ತ ಕಫಗಳೆಂಬ ತ್ರಿದೋಷಗಳ ವೈಷಮ್ಯವೇ ರೋಗಕ್ಕೆ ಮೂಲವೆಂಬುದು ಭಾರತೀಯರ ಸಿದ್ಧಾಂತ. ಅದನ್ನೇ ವಾಗ್ಭಟನು ಅಷ್ಟಾಂಗ ಹೃದಯದಲ್ಲಿ—

"ವಾಯು ಪಿತ್ತಂ ಕಫಶ್ಚೇತಿ
ತ್ರಯೋದೋಷಾ ಸಮಾಸತಃ
ವಿಕೃತಾವಿಕೃತಾರ್ಯೆನ
ಶ್ಚೆಂತೇತೇ ಸರ್ವಜಂತವಃ ಚ"

ಎಂದು ಹೇಳಿರುವನು. ಸಪ್ರಸಿದ್ಧ ವೈದ್ಯಾಗ್ರಣಿಯಾದ ಶ್ರೀ ಗಣನಾಥ ಸೇನರು ತಮ್ಮ "ಪ್ರತ್ಯಕ್ಷಿ ಶಾರೀರ"ದಲ್ಲಿ ಇವರ ಒಂದು ವಿಮರ್ಶನ್ನೇ ಮಾಡಿರುವರು ಆದಿಂಲಿ-ಪ್ರಕೃತ ಈ ವಿಷಯವನ್ನೇಕೆ ಹೇಳಿವೆನೆಂದರೆ ಧನ್ವಂತರೀ ವಿದ್ಯೆಯ ಆ ಆದಿಕಾಲದಲ್ಲಿ ರೋಗೋತ್ಪತ್ತಿಗಳಲ್ಲಾ ಕ್ರಿಮಿಗಳೇ ಕಾರಣವೆಂಬ ಮತವು ಏಕಾಭಿಪ್ರಾಯವಾಗಿಯೇ ಇದ್ದಿರಬೇಕೆಂದು ಈ ಕೆಳಗಿನ ಮಂತ್ರದಿಂದ ತಿಳಿಯುತ್ತದೆ—

"ಸರ್ವೇಷಾಚ ಕೃಮೀಣಾಂ ಸರ್ವಾಸಾಂ
ಚ ಕೃಮೀಣಾಂ ಭಿನದ್ಮ್ಯಶ್ಮನಾ ಶಿರೋ
ದಹಾಮ್ಯಗ್ನಿನಾಮುಖಂ"

(ಅ ವೇ ೫-೨೩-೧೦)

ಇದು ರೋಗೋತ್ಪತ್ತಿಗೆ ಕಾರಣವಾದ ಕ್ರಿಮಿನಿವಾರಣ ಮಂತ್ರವಾಗಿದೆ. ಅದ್ದರಿಂದ ಮೊದಲು ಕ್ರಿಮಿಗಳೇರೋಗ ಕಾರಣವೆಂಬ ಮತವಿದ್ದು ಕ್ರಮೇಣ ತಜ್ಞರ ಪರಿಶೋಧನೆಯಿಂದ ತ್ರಿದೋಷವಿಕಾರವೇ ರೋಗಕಾರಣವೆಂಬ ಅಭಿಪ್ರಾಯಕ್ಕೆ ಬಂದುದಾಗಿಯೂ ಊಹಿಸಲೆಡೆಯಿದೆ.

ಈ ರೀತಿ ಅಂದಿನ ಜನರು ಅಶ್ವಿನೀ ಕುಮಾರರ ಪ್ರಭಾವದಿಂದ ಸುಖಿಗಳಾಗಿದ್ದಾಗ ಸಹಸ್ರಾಕ್ಷನು ಅವರಿಗೆ ಅಧಿನಾಯಕನಾದನು ಆಗ ಅವರೆಲ್ಲರೂ ಹಿಮವಾಚಲದ ಬಳಿಯ ತಿಬೆಟ್ಟಿನಲ್ಲೊ (ತ್ರಿವಿಷ್ಟಪ) ವತ್ತಿಲೆನ್ನೇ ವಾಸಮಾಡುತ್ತಿದ್ದರು. ಸಹಸ್ರಾಕ್ಷನೂ ಆ ಅಶ್ವಿನೀ ಕುಮಾರರಿಂದ ಧನ್ವಂತರೀ ವಿದ್ಯೆಯನ್ನಭ್ಯಾಸಮಾಡಿದನು. ಆದರೆ ಆತನು ಅಂತಹ ಚಿಕಿತ್ಸೆ ಮಾಡಿ ಕೀರ್ತಿ ಗಳಿಸಿದ ಹಾಗೆ ವಿಶೇಷವಾಗಿ ತೋರುವದಿಲ್ಲ

ಸಹಸ್ರಾಕ್ಷನ ಆಳಕೆಯ ಕಾಲದಲ್ಲಿ ಯಾಗಿರಬಹುದು. ಕೆಲವರು ಹಿಮಗಿರಿಯನ್ನು ದಾಟಿ ಭರತ ಖಂಡದಲ್ಲಿ ವಾಸ ಮಾಡತೊಡಗಿದರು. ಆಗಲೇ ಪಶ್ಚಿಮ ಕ್ಕಾಗಲಿ ಪೂರ್ವಕ್ಕಾಗಲಿ ಜನರು ಹೋಗುವಾರೆಂಬಷ್ಟಿಲಿಕ್ಕಿಲ್ಲ ಆದ್ದರಿಂದ ಹಿಮಗಿರಿಯ ಉತ್ತರದವರು ಒಂದು ವರ್ಗವೆಂದೂ ದಕ್ಷಿಣದವರು ಮತ್ತೊಂದು ವರ್ಗವೆಂದೂ ಪರಿಗಣಿಸಲ್ಪಟ್ಟರು

ಆ ದೇವೇಂದ್ರನ ದಕ್ಷಸಹಸ್ರಾಕ್ಷನಿಂದ ಭರತಖಂಡ ನಿವಾಸಿಗಳಾದ ಆತ್ರೇಯರು ಸೋದಲಾದವರು ಆ ವಿದ್ಯೆಯನ್ನು ಚೆನ್ನಾಗಿ ಕಲಿತರು ಇಲ್ಲಿಗೆ ಧನ್ವಂತರೀ ವಿದ್ಯೆಯೆಂಬ ಆಯುರ್ವೇದದ ಮೊದಲನೆಯ ಕಾಲಘಟ್ಟವು ಮುಗಿಯಿತು.

ಭರತ ಖಂಡದ ಮೊದಲಿನ ವೈದ್ಯ ವಿದ್ಯಾವಲ್ಲಭನು ಆತ್ರೇಯನೆಂದು ನಮಗೆ ತಿಳಿಯಬಂತು ಹೆಡಗಿನಲ್ಲಿ-ಯಾವಿಮಾನದಲ್ಲಿ ಕುಳಿತು ಪರದೇಶಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಇಂದಿನವರು ಸ್ವದೇಶಕ್ಕೆ ಬರುವಂತೆ ಹಿಂದಿನವರೂ ಕೂಡಾ ವಿಮಾನದಲ್ಲಿ ಕುಳಿತು ತ್ರಿವಿಷ್ಟಪಕ್ಕೆ ಹೋಗಿ ಕಲಿತುಬಂದುದೊಂದದ್ಭುತ ವೆನ್ನಲಿಕ್ಕೇನೂ ಇಲ್ಲ.

ವೇದವಾಧಾರದಿಂದ ನವ ಗುಂಥ ತಿಳಿಯಬಂದುದೇನೆಂದರೆ ಆತ್ರೇಯ ಸೂಕ್ತಗಳನ್ನು ಗ್ರಥನ ಮಾಡುವುದಕ್ಕೆ ಮೊದಲೇ ಆಯುರ್ವೇದವು ಬೋಧದಲ್ಲಿ ಅದ್ಭುತ ಕಾಂತಿಯಿಂದ ಬೆಳಗುತ್ತಿತ್ತು ಎಂಬುದು.

ಭರತಖಂಡದಲ್ಲಿ ಹಿರೀ ಆಚಾರ್ಯರಾದ ಆತ್ರೇಯರು ತ್ರಿವಿಷ್ಟಪಕ್ಕೆ ಹೋಗಿ ಆಯುರ್ವೇದವನ್ನು ಕಲಿತು, ಮಥನ ಮಾಡಿ, ಬೇಕಾದ ಪಾಕ್ರಮವನ್ನೂ ಮಾಡಿ ಆ ವಿದ್ಯೆಗೆ "ಆಯುರ್ವೇದ" ವೆಂಬ ಅಭಿಧಾನವನ್ನೂ ಕೊಟ್ಟು ಅಗ್ನಿವೇಶಾದ್ಯರೆ ಮೊದಲಾದ ಶಿಷ್ಯರಿಗೆ ಸಮಗ್ರವಾಗಿ ಉಪದೇಶಿಸಿದರು. "ಆತ್ರೇಯ ದರ್ಶನ" ವೆಂಬ ಆ ಆಯುರ್ವೇದವನ್ನು ಅಗ್ನಿವೇಶಾದ್ಯರು ಕಲಿತು ಆ ವಿಷಯವನ್ನು ಬೇರೆ ಬೇರೆ ವಿಭಾಗಿಸಿ ಗ್ರಂಥರಚನೆ ಮಾಡತೊಡಗಿದರು. ಅಗ್ನಿವೇಶರೇ ಆಯುರ್ವೇದದ ಮೊದಲನೆಯ ಗ್ರಂಥಕಾರರು. ಸಾಕ್ಷಾತ್ ಧನ್ವಂತರೀ ಕೃಪಾಪಾತ್ರರಾದ ಸುಶ್ರುತ ಮೊದಲಾದವರೂ ಗ್ರಂಥರಚನೆ ಮಾಡಿದರು ಆದರೆ ಅಗ್ನಿವೇಶರ ಚರಕ ಸಂಹಿತೆಯೆ ಪ್ರಾಚೀನ ಗ್ರಂಥವೆಂದು ತಿಳಿಯಬಂದಿದೆ ಅಂತೂ ಇಂದಿನ ಆಯುರ್ವೇದ ಶಾಸ್ತ್ರಕ್ಕೆ ಅಗ್ನಿವೇಶಾದ್ಯರ ಚರ

(ಐನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
H. O ಉಡುಪಿ. ಸ್ಥಾಪನೆ: 1925.
ವಿಸ್ತೃತ ಬ್ಯಾಂಕಿಂಗ್ ಸೇವೆಗಾಗಿ ಹೊಸ ಶಾಖೆಗಳು:-
1. ಮಣಿಪಾಲ (ದ. ಕ ಜಿಲ್ಲೆ)—ತಾ 25—11—'57ರಲ್ಲಿ ತೆರೆಯಲ್ಪಟ್ಟಿತು
2. ಕೊಪ್ಪಲ (ರಾಯಚೂರು ಜಿಲ್ಲೆ)
3. ಬರೋಡ (ಬೊಂಬಾಯಿ ಪ್ರಾಂತ್ಯ) } ಸದ್ಯದಲ್ಲಿಯೇ ತೆರೆಯಲ್ಪಡುವುವು.
ಪಿಗ್ಮಿ
ಸಹಸ್ರಾರು ಜನರು ಉಪಯೋಗಿಸುವ ರೇವಣಾತಿ ವಿಧಾನವು ಚಿಕ್ಕ ಪುಡಿಕಾಸುಗಳನ್ನು ಸಂಗ್ರಹಿಸಿಡಲು ಸಾಧ್ಯವಿರುವ ಸುಲಭ ರೇವಣಾತಿ ಕ್ರಮ-
ಸಿಂಡಿಕೇಟಿನ 103 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ
THE CANARA INDUSTRIAL & BANKING SYNDICATE LTD., UDIPI.

ಯುವಜನ ಮಾರ್ಗದರ್ಶನ ವ್ಯವಸ್ಥೆ---

ರಾಷ್ಟ್ರೀಯ ವಿದ್ಯಾರ್ಥಿ ಸೈನಿಕ ದಳ

ಶ್ರೀ ಬಿ. ಎನ್. ರಾಧಾಕೃಷ್ಣನ್.

ಪ್ರಾಚೀನ ಗ್ರೀಸ್‌ನಲ್ಲಿ, ಸ್ಪಾರ್ಟನ್ನರು, ವೀರಯೋಧರನ್ನು ಅರಿಸಲು ತಮ್ಮದೇ ಆದ ಪದ್ಧತಿಯನ್ನು ಅನುಸರಿಸುತ್ತಿದ್ದರು. ಮಕ್ಕಳು ಜನಿಸಿದಾಗ, ಅವುಗಳಲ್ಲಿ ಆರೋಗ್ಯ ಶಿಶುಗಳನ್ನು ಅವರು ಒಲಿಂಪಸ್ ಪರ್ವತಕ್ಕೆ ಎಸೆದುಬಿಡುತ್ತಿದ್ದರು. ಇದು ಪಾಶವೀವರ್ತನೆಯಾದಾಗ್ಯೂ ಎಲ್ಲಾ ದಿಕ್ಕುಗಳಲ್ಲಿಯೂ ಶತ್ರುಸಮೂಹದಿಂದ ಸುತ್ತುವರಿಯಲ್ಪಟ್ಟಿರುವ ರಾಷ್ಟ್ರವು, ದುರ್ಬಲ ಜನತೆಯ ರಾಷ್ಟ್ರವಾಗಿರಲು ಸಾಧ್ಯವಿಲ್ಲವೆಂಬುದು ಅದರ ನಿಶ್ಚಲ ನಂಬಿಕೆಯಾಗಿತ್ತು. ಭಾರತದಲ್ಲಿ ನಾವು, ಬೇರೆ ಪದ್ಧತಿಯನ್ನೇ ಅನುಸರಿಸುತ್ತಿದ್ದೇವೆ. ಬ್ರಿಟಿಷ್ ಕಾಲದಲ್ಲಿ ಹಾಗೂ ಈಗಿನ ಕಾಲದಲ್ಲಿ; ಯಾವುದೇ ವಿಪತ್ಕಾರಿ ಸಂದರ್ಭವನ್ನು ಎದುರಿಸಿ ಹೋರಾಡುವಂತಹ ಕುರಿಗಳ ತರಬೇತಿಯನ್ನು ಪಡೆದ ಸೇನೆ ನಮ್ಮಲ್ಲಿದೆ.

ಪುನರುತ್ಥಾನಗೊಂಡ ಭಾರತವು ಎದುರಿಸಬೇಕಾದ ಸಮಸ್ಯೆಗಳು ಹಲವು: ಅದರಲ್ಲಿ ಯುವಜನಸ್ತೋಮವನ್ನು ಶಿಸ್ತಿಗೆ ಅನುಗೊಳಿಸುವ ಸಮಸ್ಯೆಯು ಪ್ರಾಮುಖ್ಯ ಸಮಸ್ಯೆಗಳಲ್ಲೊಂದಾಗಿದೆ. ಏಕೆಂದರೆ, ಇಡೀ ರಾಷ್ಟ್ರದ ಭವಿಷ್ಯವು ರಾಷ್ಟ್ರಭವ್ಯವೃದ್ಧಿಯ ಈ ದೃಷ್ಟಿಕೋಣವನ್ನು ಅವಲಂಬಿಸಿರುವುದು.

ಎನ್. ಸಿ. ಸಿ., ಅಥವಾ ರಾಷ್ಟ್ರೀಯ ವಿದ್ಯಾರ್ಥಿ ಸೈನಿಕ ದಳವನ್ನು ಸ್ಥಾಪಿಸಿರುವುದು, ಮುಖ್ಯವಾಗಿ, ನಮ್ಮ ವಿದ್ಯಾರ್ಥಿವೃಂದದ ಮನೋರಂಗದಲ್ಲಿ, ನಾಯಕತ್ವ, ಮೈತ್ರೀಭಾವ, ಸಾಮಾಜಿಕ ಹಿತರಕ್ಷಣಾದೃಷ್ಟಿಯನ್ನು ಒಡಮೂಡಿಸುವ ಉದ್ದೇಶದಿಂದ; ಅವಾಯಕಾರಿ ಸಂದರ್ಭಗಳಲ್ಲಿ ಧೈರ್ಯಸ್ಥೈರ್ಯದಿಂದ ಹೋರಾಡುವಂತಹ ಮನೋಭಾವವನ್ನು ಅವರಲ್ಲಿ ಬೀಸುವ ಉದ್ದೇಶದಿಂದ, ಯುವಜನರ ಮನಸ್ಸು ಬಹಳ ಸುಲಭವಾಗಿ ಕೆಡುಕು ಪ್ರಭಾವಗಳಿಗೆ ಬಲಿಬೀಳುತ್ತದೆ. ಯುವಜನರಲ್ಲಿ ಅನೇಕರು, ಈ ದುಷ್ಪ್ರಭಾವಗಳಿಗೆ ಬಲಿಬಿದ್ದು, ಬಹಳ ಕತವಾಗಿ ಅರಿವನ್ನು ತಂದುಕೊಂಡ ಪ್ರಸಂಗಗಳುಂಟು. ಯುವಜನರಲ್ಲಿ ಪ್ರಬಲ ಮನಸ್ಸನ್ನು ಅನುಗೊಳಿಸಲು, ವಿಶ್ವವಿದ್ಯಾನಿಲಯದಲ್ಲಿ, ಪರಿಪೂರ್ಣವಾದ ಶಿಸ್ತಿನ ಶಿಕ್ಷಣ ನೀಡಬೇಕಾಗಿರುವುದು. ನಮ್ಮ ಕಾಲೇಜುಗಳಲ್ಲಿರುವ ಪ್ರಯೋಗ ಶಾಲೆಗಳು ನಮಗೆ ನೈಪುಣ್ಯಾನಿಕ ಹಾಗೂ ತಾಂತ್ರಿಕ ಮಾರ್ಗದರ್ಶನವೀಯುವಂತೆ, ಎನ್. ಸಿ. ಸಿ. ಯವರಿಗೆ ನೀಡುವ ಸೇನಾತರಬೇತಿಯು (ಮಿಲಿಟರಿ ಟ್ರೈನ್ಸ್) ತರಬೇತಿಯು ವಿದ್ಯಾರ್ಥಿಗಳಿಗೆ ಶಿಸ್ತಿನ ಜೀವನವನ್ನು ತಂದುಕೊಡುತ್ತದೆ. ಎಂತಹನೆಯದಾಗಿ, ಎನ್. ಸಿ. ಸಿ. ಯು ವಿದ್ಯಾರ್ಥಿಗಳಲ್ಲಿ ಕರ್ತವ್ಯ ಪ್ರಜ್ಞೆ, ಇತರರೊಂದಿಗೆ, ಕರ್ತವ್ಯದಲ್ಲಿ ಸಹಯೋಗ, ಮತ್ತು ಸಹಕಾರವನ್ನೀಯುವ ಸದ್ಭಾವನೆಯನ್ನುಂಟುಮಾಡುತ್ತದೆ.

ಕೆಲವು ಗುಣಗಳು ಜನ್ಮತಃ ಬರುತ್ತವೆ; ಮತ್ತೆ ಕೆಲವನ್ನು, ಸುಭದ್ರ ಶಿಕ್ಷಣದಿಂದ, ಉತ್ತಮ ಸ್ನೇಹದಿಂದ, ಹಾಗೂ ಸಹವಾಸದಿಂದ ಸಾಧಿಸಿಕೊಳ್ಳಬಹುದು. ಮಾನವನಿಗೆ, ಸೂಕ್ತರೀತಿಯಲ್ಲಿ ಸೂಕ್ತ ಸಮಯದಲ್ಲಿ, ಸೂಕ್ತ ನಿರ್ದೇಶನ ದೊರೆಯದಿದ್ದರೆ, ಅವನು ಅಪನಾರ್ಗಕ್ಕೆ ಬೀಳುವುದು ಸಹಜ. ಸರಿಯಾದ ನಾಯಕತ್ವದ ಅಭಾವವೇ ಪರ್ಟ್ಟಲ್ಲಿ ಅಪಾಯ ಪಂಡಿತ. ಅತ್ಯಂತ ಸಬಲವಾದುದೆನಿಸಿದ ಸೇನೆಯೂ ಸಹ, ಸರಿಯಾದ, ದೃಢ ಮನೋಭಾವವುಳ್ಳ ಮುಂಡಾಳರಿದಿದ್ದರೆ, ಪರಾಜಯಗೊಳ್ಳುವುದು. ಆದ್ದರಿಂದ, ಇಂದಿನ ಪರಿಸ್ಥಿತಿಯಲ್ಲಿ ಕ್ರಮಬದ್ಧ ಶಿಕ್ಷಣದ ಅಗತ್ಯವಿರುವುದು ಈ ಅಗತ್ಯವನ್ನು ಎನ್. ಸಿ. ಸಿ. ಪಾತ್ರವೇ ಪೂರೈಸಬಲ್ಲುದು

ಎನ್. ಸಿ. ಸಿ. ಯು ಸಲ್ಲಿಸುವ ಸಾಮಾಜಿಕ ಹಿತರಕ್ಷಣಾ ಸೇವೆಯನ್ನು ಇಲ್ಲಿ ವಿವರಿಸುವುದರ ಅಗತ್ಯವಿಲ್ಲ. ನಮ್ಮ ಸೈನಿಕ ವಿದ್ಯಾರ್ಥಿದಳಗಳು, ಕ್ಷಾಮ ಡಾಮರಗಳು, ಪ್ರವಾಹಗಳು ಸಂಭವಿಸಿದ ಕಾಲದಲ್ಲಿ ಅಭೂತಪೂರ್ವ ಸೇವೆಯನ್ನು ಸಲ್ಲಿಸಿವೆ. ಪ್ರವಾಹದ ಹಾವಳಿಗೊಳಗಾದ ಕ್ಷೇತ್ರಗಳಲ್ಲಿ, ರಾಷ್ಟ್ರೀಯ ವಿಪತ್ತು ಮತ್ತು ಬ್ಲಾಕ್ ಅಭಿವೃದ್ಧಿ, ಹಾಗೂ ಸಾಮುದಾಯಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ಎನ್. ಸಿ. ಸಿ. ದಳದವರು ನೀಡಿರುವ ಸೇವೆಯನ್ನು ನಿಜವಾಗಿಯೂ ಸುವರ್ಣಾಕ್ಷರಗಳಲ್ಲಿ ಕೆತ್ತಿಬೇಕಾಗಿದೆ. ಎನ್. ಸಿ. ಸಿ. ಯ ವಿಧಾಯಕ ಕರ್ತವ್ಯದ ವ್ಯಾಪ್ತಿಗೆ ಇದೊಂದೇ ನಿದರ್ಶನ ಸಾಕು.

ಎನ್. ಸಿ. ಸಿ. ಯ ಬಗೆಗೆ ಜನತೆ ಒಂದು ದೋಷರಹಿತ ಚಿತ್ರಣವನ್ನೇ ಕಲ್ಪಿಸಿಕೊಳ್ಳುತ್ತಾರೆ: ಆಗತ್ಯಬಿದ್ದ ಸಂದರ್ಭಗಳಲ್ಲಿ ಸೇನೆಗೆ ಭರ್ತಿಮಾಡಿಕೊಳ್ಳುವುದಕ್ಕಾಗಿ, ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣವಿದೆಂದು ಅವರ ಅಭಿಮತ. ಆದರೆ, ಈ ಯೋಜನೆಯಲ್ಲಿ ಇಟ್ಟುಕೊಂಡಿರುವ ಉದ್ದೇಶಗಳಲ್ಲಿ ಅದು ಒಂದಂಶ ಮಾತ್ರವಾಗಿದೆ. ಈ ದೃಷ್ಟಿಯಿಂದಾಗಿ, ಕೆಲವು ವಿದ್ಯಾರ್ಥಿಗಳ ತಂದೆ ತಾಯಿಗಳು, ತಮ್ಮ ಮಕ್ಕಳು ಎನ್. ಸಿ. ಸಿ. ಗೆ ಸೇರುವುದನ್ನು ಪ್ರತಿಭಟಿಸುವರು.

ನಮ್ಮ ರಾಷ್ಟ್ರ ಶಾಂತಿಪ್ರಿಯ ರಾಷ್ಟ್ರ. ಸಮರ, ಕಲಹ, ಧಾಳಿಗಳನ್ನು ಅದು ವಿರೋಧಿಸುತ್ತದೆ. ವಿಶ್ವದ ರಾಷ್ಟ್ರಗಳ ನಡುವೆ ಉತ್ತಮ ಹಾಗೂ ಶಾಂತಿಯುತ ಸಹಬಾಳ್ವೆಯನ್ನು ಉತ್ತೇಜನಗೊಳಿಸುವ ಧ್ಯೇಯವನ್ನು ಪಾಲಿಸುತ್ತಿರುವ ಭಾರತವು ಪಂಚಶೀಲ ತತ್ವವನ್ನು ಸ್ವೀಕಾರಮಾಡುತ್ತಿದೆ. ವಿಶ್ವಶಾಂತಿ ಮತ್ತು ಭ್ರಾತೃಭಾವನೆಯ ಪ್ರಸಾರವನ್ನು, ನಮ್ಮ ಮಾನ್ಯ ಪ್ರಧಾನ ಮಂತ್ರಿಗಳು ನಿಸ್ಪೃಹತೆಯಿಂದ ಅವಿಶ್ರಾಂತವಾಗಿ ನಡೆಯುತ್ತಿರುವರು. ನಾವು ಗಳಿಸಿರುವ ಸ್ವಾತಂತ್ರ್ಯವು ಅಹಿಂಸೆಯ ಫಲವೆಂಬುದೇನೂ ಸುಳ್ಳಲ್ಲ. ನಮ್ಮ ಸ್ವಾತಂತ್ರ್ಯವನ್ನು ಪಾಲಿಸಿಕೊಳ್ಳಲು ನಾವು ಅಗಾಧ ಸಂಖ್ಯೆಯ ಸೇನಾಬಲವನ್ನು ಹೊಂದಿರಬೇಕಾಗಿಲ್ಲ. ಇದು 'ಪ.ಷ್ ಬಟನ್' (ಒತ್ತು ಗುಬ್ಬಿ) ಯುದ್ಧದಂಥದ ಕಾಲ; ಅಗಾಧ ಸಂಖ್ಯೆಯ ಸೇನಾಬಲವನ್ನು ಇಟ್ಟುಕೊಂಡು ಉಪಯೋಗವೇನು? ಆದ್ದರಿಂದ ಎನ್. ಸಿ. ಸಿ. ಯು, ಯುದ್ಧದ ಸಿದ್ಧತೆ ಎಂದು ತಿಳಿದುಕೊಳ್ಳುವುದು ತರ್ಕಬದ್ಧವಲ್ಲ. ಈ ಯೋಜನೆಯು, ಯುದ್ಧ ಸಿದ್ಧತೆಯ ಸ್ಥಿತಿಯನ್ನು ಪಾಲಿಸಿಕೊಂಡು ಬರುವುದಕ್ಕಿಂತ ನಮ್ಮಲ್ಲಿರುವ ಸಾಮಾಜಿಕ, ಆರ್ಥಿಕ ಕುಂದುಕೊರತೆಗಳನ್ನು ತೊಡೆದು ಹಾಕುವುದಕ್ಕೆ ಹೆಚ್ಚು ಗಮನವೀಯುತ್ತದೆ.

ನಮ್ಮ ದೇಶವು, ಬಹುಭಾಷೆ, ಮತ್ತು ಕೋವಿನ ಜನರನ್ನುಳ್ಳ ದೇಶ. ಆದಾಗ್ಯೂ, ನಮ್ಮಲ್ಲಿ ವಿಪುಲವಾದ ಸಾಂಸ್ಕೃತಿಕ ಪರಂಪರೆ ಇದೆ. ಭಾರತವು ವಿಶ್ವದ ರಾಷ್ಟ್ರಗಳ ಪಂಕ್ತಿಯಲ್ಲಿ ಗೌರವನ್ವಿತ ರಾಷ್ಟ್ರವಾಗಿ ನಿಲ್ಲಲು, ಅದು ತನ್ನ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡುಬರಬೇಕು. ಆದ್ದರಿಂದ ನಮ್ಮ ಯುವ ಜನಾಂಗವು, ಉನ್ನತ ಮಟ್ಟದ ಸೈನಿಕ ಹಾಗೂ ಶೀಲ ಸ್ವಭಾವವುಳ್ಳ ಮಗ್ಗ, ದೃಷ್ಟಿಯನ್ನು ಇಟ್ಟುಕೊಂಡಿರುವುದು ಅಗತ್ಯವಲ್ಲವೆ? ಪ್ರಸ್ತುತದಲ್ಲಿರುವ ಅಗತ್ಯವಾದ ಸಮಸ್ಯೆಗಳನ್ನು ಎದುರಿಸಲು ಉನ್ನತ ಮಟ್ಟದ ನೈತಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯನ್ನು ರೂಪಿಸಿ ಪರಿಪಾಲಿಸಿಕೊಳ್ಳುವಂತಹ ನಿರ್ದಿಷ್ಟ ಯೋಜನೆಯನ್ನು ಎನ್. ಸಿ. ಸಿ. ಹೊಂದಿದೆ.

ನಮ್ಮ ವಿದ್ಯಾರ್ಥಿಗಳು ಈ ಮಹತ್ತಾವಕಾಶವನ್ನು ಸದುಪಯೋಗಪಡಿಸಿಕೊಳ್ಳುವರೆಂದು ಹೇಳುವ ಅಗತ್ಯವಿಲ್ಲ. ದೇಶದ ಭವಿಷ್ಯವನ್ನು ರೂಪಿಸುವುದರಲ್ಲಿ ತಾವು ಅತ್ಯಂತ ಮಹತ್ವರವಾದ ಪಾತ್ರವನ್ನು ನಿರ್ವಹಿಸಬೇಕೆಂಬುದು ಅವರಿಗೂ ಗೊತ್ತು. ಈ ಗುರಿಯನ್ನು ಸಾಧಿಸಲು, ಎನ್. ಸಿ. ಸಿ. ಯು ಸುಗಮ ಮಾರ್ಗವನ್ನು ಹಾಕಿ ಕೊಡುವುದು. ಎನ್. ಸಿ. ಸಿ. ಯ 'ಜೆಹಾದ್' ಅಥವಾ 'ಕ್ರೂಸೆಡ್' ಎಲ್ಲ. ಎನ್. ಸಿ. ಸಿ. ಯು, ಉತ್ಸಾಹ, ಭ್ರಾತೃಭಾವನೆ ಮತ್ತು ಶೀಲ ಸ್ವಭಾವಗಳ ರಾಷ್ಟ್ರದ ಕರೆ.

In the Court of the District Munsif of Karkala

O. S. No. 305/1957.

Between

Narayana Barve and another—Plaintiffs.

Ishwara Bhatta & others--Defendants

To the defendants.

1) Ishwara Bhatta, son of Ishwara Bhatta.

2) Krishna Bhatta, son of Thirumaleshwara Bhatta Both residents of Hosthota, Thenka Karandur Village of Karkal Taluk.

Whereas the plaintiffs have instituted the above suit for Rs. 2060/37 and further interest and Cost etc. towards mulgeni rent arrears and the said suit stands posted to 19—12—1957; you are hereby informed that you are at liberty to appear before the said Court at 11 A. M. on the said date and plead your defence, if any, failing which you will be declared exparte and the suit will be decided in your absence.

P. Ramachandra Rao.
Pleader for plaintiff.

Karkal, Dated 23—11—57.

ಠೇವಣಾತಿಗಳ ಮೇಲೆ ಅತ್ಯಧಿಕ ಬಡ್ಡಿ ದರಗಳು

ಥ್ರಿಫ್ಟ್ ಡಿಪಾಜಿಟ್‌ಗಳ ಮೇಲೆ ವರ್ಷಕ್ಕೆ 3% ರಂತೆ

ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ನ ಮೇಲೆ ವರ್ಷಕ್ಕೆ 2½% ವರೆವಿಗೂ

ಅಲ್ಪಾವಧಿ ಮತ್ತು ನಿರ್ದಿಷ್ಟಕಾಲದ ಠೇವಣಾತಿಗಳಿಗೆ

ಅತ್ಯಂತ ಆಕರ್ಷಕ ದರಗಳು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ಬ್ರಾಂಚ್ ಮ್ಯಾನೇಜರಲ್ಲಿ ವಿಚಾರಿಸಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ ಶೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದಾದದ್ದು.

ಗೋ ವಿಜಯ

(ಗೋವಿನಕಥೆ)

ಶ್ರೀ ಮುಟ್ಟಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರಿಗೂ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಬ್ರಿಟಿಷರ ಕುಯುಕ್ತಿಗೆ ಭಾರತದ ಔಷಧಿ---

ಕಾಮನ್‌ವೆಲ್ತಿನಿಂದ ಹೊರಬರಲಿ.

ಶ್ರೀ ಎಂ. ರಘುನಂದನ ರಾವ್ ತಲ್ಲೂರು

ಕಾಶ್ಮೀರ 'ಸಮಸ್ಯೆ'ಯು ಯೋಗ್ಯ ತೀರ್ಮಾನವೊಂದಕ್ಕೆ ಬರುವ ಲಕ್ಷಣ ಗಳೇನೂ ಕಾಣಿಸುತ್ತಿಲ್ಲ. ಚರ್ಚಿಲ್ ಆಂಗ್ಲರಿಂದು ತಮ್ಮ ತರ ವಿತ್ರರೊಡಗೂಡಿ ಭಾರತದ ನಿಲುವಿಗೆ ವಿರೋಧ ಮಾಡುತ್ತಿದ್ದಾರೆ ಸೇಡು ತೀರಿಸಿಕೊಳ್ಳುವ ಮನೋವೃತ್ತಿ – ಆಂಗ್ಲರ ಈ ವಿರೋಧಕ್ಕೆ ಕಾರಣವೆಂಬುದನ್ನಿಲ್ಲಿ ವಿವರಿಯಲಾಗದು. ಹಿಂದೆ ಜಗತ್ತಿದ ಸಾರ್ವ ಭೌಮಾಧಿಕಾರಕ್ಕೊಳಪಟ್ಟ ಸುಯೇಜ್ ಕಾಲುವೆಯ ಮೇಲ ಧಾಳಿ ನಡೆಸಿ, ತನ್ನ ಆಕ್ರಮಣ ಶೀಲ ಮನೋವೃತ್ತಿಯನ್ನ ಜಗಜ್ಜಾಹೀರ ಪಡಿಸಿದ ಬ್ರಿಟನಿನ ವರ್ತನೆಯನ್ನು ಜಾರತವು ತೀವ್ರವಾಗಿ ಖಂಡಿಸಿದ ಕಾರಣದಿಂದ ಬ್ರಿಟನ್ ಇಂದು ಭಾರತದ ವಿರುದ್ಧ ಅಲ್ಲಸಲ್ಲದ ವರ್ತನೆಗಳನ್ನಾರಂಭಿಸಿದೆ ಆಕ್ರಮಣಕಾರನೋರ್ವನೊಡನಿರುವುದು ವಿಹಿತವಲ್ಲೆಂದು ಕಾಮನ್‌ವೆಲ್ತ್ ನಿಂದ ಹೊರಬರಲು ಭಾರತ ಸರಕಾರಕ್ಕೆ ಹಲವರು ಆಗಲೇ ಒತ್ತಾಯಪಡಿಸಿದ್ದರೂ.. ಆದರೆ ಶಾಂತಿಗೆ ಕಟ್ಟುಬಿದ್ದು, ಭಾರತ ಸರಕಾರವು ಅಂದು ಬಹಳ ತಾಳ್ಮೆಯಿಂದ ಕಾಮನ್‌ವೆಲ್ತ್ ಕೂಟದಿಂದ ಹೊರ ಬರಲು ತನ್ನ ಅಸಮ್ಮತಿಯನ್ನು ತೋರಿಸಿತ್ತು "ಸಮಯ ಬಂದಾಗ ಆಲೋಚಿಸಲಾಗುವುದೆ"ಂದು ಸರಕಾರೀ ನಾಯಕರ ನೇಕರು ನುಡಿದಿದ್ದರು ಆ "ಸಮಯ" ಈಗ ಒದಗಿ ಬಂದಿದೆ. ಕಾಶ್ಮೀರದ ಕುರಿತಾಗ ಭಾರತದ ನಿಲುವಿಗೆ ಬ್ರಿಟನ್ ಇಂದು ತೀವ್ರ ವಿರೋಧಿಯಾಗಿರುವುದು ಎಲ್ಲರಿಗೂ ತಿಳಿದೇ ಇರುವ ವಿಷಯ ಭಾರತದ ಪ್ರತಿನಿಧಿಯಿಂದು ವಾದಿಸುವ ಭಾರತೀಯ ಧೋರಣೆಯಲ್ಲಿನ ಸತ್ಯಾಂಶಗಳನ್ನೂ ನೋಡದೇ ತಮ್ಮದೇ ಹಟಮಾರಿತನದಿಂದ ಭಾರತಕ್ಕೆ ಆಪ್ತಿಯವಾಗುವಂತಹ ನಿರ್ಣಯವನ್ನು ತಪೂರಿಸುವ ದರ್ದ್ದಿಂದು ಕಾರ್ಯಪ್ರವೃತ್ತವಾಗಿವೆ, ಬ್ರಿಟನ್ ಮತ್ತದರ ಮಿತ್ರರಾಷ್ಟ್ರಗಳು ಆದರೆ ರಷ್ಯ ಮಾತ್ರ, ಭಾರತದ ಸ್ವಾತಂತ್ರ್ಯಕ್ಕೆ ಭಕ್ಕೆಯೊಡಗಬಹುದಾದಂತಹ ನಿರ್ಣಯವನ್ನು ತನ್ನ ವಿಶೇಷ ಮತಾಧಿಕಾರದಿಂದ ವಿಫಲಗೊಳಿಸುವುದು ಖಂಡಿತ.

ಭದ್ರತಾ ಸಮಿತಿಯ ಲ್ಲೀದು ವಾದಿಯನ್ನೂ ಪ್ರತಿವಾದಿಯನ್ನೂ ಒಂದೇ ಮಟ್ಟಿನಲ್ಲಿಡಲಾಗಿದೆ! ವಾದಿಯು ಇತ್ತ ದೂರನ್ನೆಂದು ಸರಿಯಾಗಿ ಪರಿಶೀಲಿಸಲಾಗಿಲ್ಲ ಇದರಿಂದ ವ್ಯಕ್ತವಾಗುವುದೇನೆಂದರೆ– ಭದ್ರತಾ ಸಮಿತಿಯಲ್ಲಿನ ಬ್ರಿಟನ್ ಮತ್ತಿತರ ಪ್ರಬಲ ರಾಷ್ಟ್ರಗಳು ನ್ಯಾಯಾನುವರ್ತಿಯಾಗಿಲ್ಲ. ಇಲ್ಲದಿದ್ದರೆ ಕಾಶ್ಮೀರದ ವಿವಾದವು ಎಂದೋ ಒಂದು ತೀರ್ಮಾನಕ್ಕೆ ಬರಬೇಕಿತ್ತು. ಯುಕ್ತರಾಷ್ಟ್ರ ಸಂಘದಿಂದಲೇ ಕಳುಹಿಸಲ್ಪಟ್ಟ ಹಲವರು ರಾಯಭಾರಿಗಳೂ, ನೀರೀಕ್ಷಕರೂ ಪಾಕಿಸ್ತಾನದ ಆಕ್ರಮಣವನ್ನು ಸರ್ವವಿದಿತಪಡಿಸಿದರೂ, ಯೋಗ್ಯ ತೀರ್ಮಾನವೊಂದನ್ನು ಹುಡುಕುವ ಬದಲಾಗಿ ಈ ರಾಷ್ಟ್ರಗಳು ತನ್ನು ವಿರೋಧಿಗಳೊಡನೆ ಸೇಡು ತೀರಿಸಿಕೊಳ್ಳುವ ಹವಣಿಕೆಯಲ್ಲಿವೆ, ಮಾತ್ರವಲ್ಲ, ಇನ್ನೂ ವಿಳಂಬ ಮಾಡಲೆತ್ನಿಸುತ್ತಿವೆ ಕಾಶ್ಮೀರದಲ್ಲಿಂದು ಭವಿಷ್ಯ ನಿರ್ಧಾರದ ಸಮಸ್ಯೆ ಉಳಿದಿಲ್ಲ. ಉಳಿದಿರುವುದಾದರೆ ಅದು ಪಾಕ್ ಆಕ್ರಮಣದ ಬರ್ಬಾಸ್ತಿನ ಹಾಗೂ ಕಾಶ್ಮೀರಿಗಳಿಗೆ ಅವರ ಪ್ರದೇಶವನ್ನು ಬಿಟ್ಟುಕೊಡುವ ಪ್ರಶ್ನೆ ಮಾತ್ರ. ಅದನ್ನಿಂದು ಭಾರತ ಭದ್ರತಾ ಸಮಿತಿಯಲ್ಲಿ ಕೇಳಿತ್ತಿದೆ. ಆದರೆ ಸ್ವಾಲಪಾಶ್ಚಾತ್ಯರೆ, ಇದಕ್ಕೆ ಕಿವಿಕೊಟ್ಟಂತೆ ಕಾಣುವುದಿಲ್ಲ ಇದಂದಾಗಿ, ಪಾಕಿಸ್ತಾನದ ಆಕ್ರಮಣಕಾರಿ ಮನೋವೃತ್ತಿಗೆ ಪಾಶ್ಚಾತ್ಯರು ಬೆಂಬಲ ನೀಡುವುದು ವ್ಯಕ್ತವಾಗಿದೆ ಇಲ್ಲದಿದ್ದರೆ ಭದ್ರತಾ ಸಮಿತಿಗೆ ಭಾರತವು ಕೊಟ್ಟ ದೂರನ್ನು—ಪಾಕಿಸ್ತಾನದ ಆಕ್ರಮಣ – ಪರಿಶೀಲಿಸದೇ "ಜನಮತ ಗಣನೆ"ಯೆಂದು ಹುಯಿಲೆಬ್ಬಿಸುತ್ತ ವೃಥಾ ಕಾಲಹರಣವನ್ನೇಕ ಮಾಡಬೇಕು. ಪಾಶ್ಚಾತ್ಯರು ಹಾಗೆ ದರೆ ಪಾಕ್ ಆಕ್ರಮಣ ಬರ್ಬಾಸ್ತಾಗುವಂತಿಲ್ಲವೆ ? ಪಾಕಿಸ್ತಾನದ ದುರ್ವರ್ತನೆ ಬ್ರಿಟನಿನಂತಹ ಮಹಾರಾಷ್ಟ್ರಗಳಿಗೆ ಸಮ್ಮತವೇ? ಜಾಗಾದಲ್ಲಿ, ಈ 'ಸಮಸ್ಯೆ'ಯನ್ನಿಂದು ಇವರು ಎಷ್ಟು ಚರ್ಚಿಸಿದರೇನು ಫಲ? ಆದರೆ ಪಾಶ್ಚಾತ್ಯರ ಈ ತೆರದ ವರ್ತನೆಯು ಪರಿಣಾಮ ಮಾತ್ರ ಗಂಭೀರವಾಗಿಬಹುದು ಚುನಾವಣೆ ನಡೆಸುವ ಕುರಿತು ಭಾರತವು ಭದ್ರತಾಸಮಿತಿಗೆ ದೂರಿತ್ತಿಲ್ಲ ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ಜುನಾವಣೆಗಳು ಈ ಹಿಂದೆಯೇ ನಡೆದಿವೆ. ಭಾರತ ಕೊಟ್ಟ ದೂರೆಂದರೆ, ತನ್ನ ಅವಿಭಾಜ್ಯ ಅಂಗವಾದ ಕಾಶ್ಮೀರದಲ್ಲಿ ನೆಡೆದ ಆಕ್ರಮಣ ಹಿಂದೆಗೆದುಕೊಳ್ಳಲ್ಪಡಬೇಕೆಂದು. ಆದರೆ ಭಾರತದ ಪ್ರತಿನಿಧಿ ಎಷ್ಟು ಸರ್ಮರ್ಥವಾಗಿ ಭಾರತೀಯ ಧೋರಣೆಯನ್ನು ಮಂಡಿಸಿ, ಒರಟು ಧೋರಣೆಯು ಪಾಶ್ಚಾತ್ಯರೊಡನೆ ಕಂಠಶೋಷಣೆ ಮಾಡಿ ಬಳಲಿದರೂ, ಪಾಶ್ಚಾತ್ಯರಿಂದು ಅದಕ್ಕೆ ಕಿವಿಗೊಡಲಾರರು! ಪಾಕಿಸ್ತಾನದ ಪ್ರತಿನಿಧಿಯು ಪ್ರಲಾಪಕ್ಕೆ ಮಾತ್ರ ಹೂಂಗುಟ್ಟುತ್ತಿದ್ದಾರೆ, ಆವರು ಬ್ರಿಟನ್ ತನ್ನಿತರ ಮಿತ್ರರೊಡನೆ ಭಾರತಕ್ಕೆ ಆಷ್ಟೊಗಾಲಿಡುತ್ತಿದೆ ಇದೆಂದೂ ನ್ಯಾಯಸಮ್ಮತವಾಗದು ಇದೀಗ ಭಾರತದ ಸೈನ್ಯ ಪರೀಕ್ಷೆಯಕಾಲ. ಶಾಂತಿಗೆ ಕಟ್ಟುಬಿದ್ದು, ಇತರ ಹಂಗಿಗೊಳಗಾಗಿ ತನ್ನ ಸ್ವಾತಂತ್ರ್ಯವನ್ನು ವಿಕ್ರಯಿಸಿಕೊಳ್ಳಲು ಭಾರತೀಯ ಜನತೆಯೆಂದಿಗೂ ಸಿದ್ಧವಿಲ್ಲ ಆದರೆ ಭಾರತ ಸರಕಾರವು ಇನ್ನೂ ತಾಳ್ಮೆ ವಹಿಸುತ್ತ ನಡೆದಿರುವುದು ಯುಕ್ತವೆನಿಸದ. ಸ್ನೇಹಬಯಸುವನೊಡನೆ ಮೈತ್ರಿ ಬೆಳಸಬೇಕೇ ಹೊರತು, ಅದನ್ನು ತಿರಸ್ಕರಿಸುವವನೊಡನೆ ಮಿತ್ರತ್ವಕ್ಕೆ ಅವೇಕ್ಷೆ ಪಡುವುದ ಭಾರತದ ಸಾರ್ವಭೌಮಾನಕ್ಕೇ ದೊಡ್ಡ ಕುಂದು ಬ್ರಿಟನ್ ಅಂತೂ ಭಾರತದೊಡನೆ ಸ್ನೇಹ ಬಯಸುತ್ತಿಲ್ಲಿ ಕಾಶ್ಮೀರ ವಿವಾದದಲ್ಲಿ ಆದು ಪಾಕಿಸ್ತಾನದ ಪಕ್ಷಪಾತ ಧೋರಣೆಯೇ ಇದಕ್ಕೆ ಸಾಕ್ಷಿ. ಆದುದರಿಂದ ಆಕ್ರಮಣಕಾರಿ ಮನೋವೃತ್ತಿಯನ್ನತ್ತೇಜಿಸುವ ಬ್ರಿಟನಿನ ವರ್ತನೆಯನ್ನ ಖಂಡಿಸಿ, 'ಶರಣು ಪ್ರತಿವಾದಿ ಧೋರಣೆಯನ್ನು ವಹಿಸಿ ಭಾರತವು **ಕಾಮನ್‌ವೆಲ್ತ್‌ನಿಂದ ಹೊರಬರಲಿ!** ಕಾಮನ್‌ವೆಲ್ತ್‌ನಲ್ಲಿರುವುದರಿಂದ ಭಾರತ ಕ್ಕಿಷ್ಟ ಕ್ಷೇಮವಿಲ್ಲ.

ಭಾರತದ ಯೋಜನೆಯ ಸಾಫಲ್ಯ---

ಅಮೆರಿಕೆಯ ಮಹತ್ವದ ಪಾತ್ರ

ಭಾರತಕ್ಕೆ ಅಮೇರಿಕೆಯು ಎಷ್ಟರಮಟ್ಟಿಗೆ ಧನ ಸಹಾಯವನ್ನೀಯಬಲ್ಲುದೆಂಬುದು ಈ ವರ್ಷಾಂತ್ಯದಲ್ಲಿಗೂತ್ತಾಗುವುದು. ಮತ್ತು ನೆಪ್ಯಾದ್ವೀಪ ಪಂಚವಾರ್ಷಿಕ ಯೋಜನೆಯು ಆ ವಿದೇಶೀ ಸಹಾಯದ ಮೊತ್ತವನ್ನೇ ಆಶ್ರಯಿಸಿಕೊಂಡಿರುವುದು.

ಭಾರತಕ್ಕೆ ಅಮೆರಿಕೆಯು ಸಹಾಯವನ್ನು ಕೊಡುವುದೇ ಇಲ್ಲವೇ ಎಂಬ ವಿಷಯದಲ್ಲಿ ಆನುಮಾನಪಡುವ ಅವಕಾಶವಿಲ್ಲಿ ಅಮೆರಿಕೆಯು ಸರಕಾರದ ಹೃದಯದಲ್ಲಿ ಭಾರತದ ಅವಶ್ಯಕತೆಗಳೇನು ಎಂಬುದ ತಿಳಿದುಬಂದಿದೆ. ಅಧ್ಯಕ್ಷ ಐಸನ್ ಹಾವರ ಮತ್ತು ವಿದೇಶೀಯ ವಿಭಾಗವು ಈ ಪ್ರಶ್ನೆಯನ್ನು ಕುರಿತು ವಿಚಾರ ಮಾಡುತ್ತಿದ್ದಾರೆ ಆಲ್ಲದೆ, ಭಾರತ ಮತ್ತು ಅಮೆರಿಕಗಳ ಮಧ್ಯದಲ್ಲಿರುವ ರಾಜನೈತಿಕ ಮತಭೇದವು ಭಾರತಕ್ಕೆ ಆರ್ಥಿಕ ಸಹಾಯವನ್ನು ಕೊಡುವುದಕ್ಕೆ ಎಂದಿಗೂ ತಡೆಯಾಗುವುದಿಲ್ಲವೆಂದೂ ವಿಶ್ವಸನೀಯವಾಗಿ ತಿಳಿದುಬಂದಿದೆ ಆದರೆ, ಅಮೆರಿಕೆಯ ರಾಷ್ಟ್ರಾಧ್ಯಕ್ಷರು ಈ ಸಂದರ್ಭದಲ್ಲಿ ಭಾರತಕ್ಕೆ ಸಹಾಯನೀಡುವ ಕುರಿತ ಸಂಯುಕ್ತರಾಷ್ಟ್ರದ ಕಾಂಗ್ರೆಸ್ಸಿಗೆ ವಿಶೇಷ ಸಂದೇಶ ನೀಡದ ವರೇ ಆರ್ಥಿಕ ಇಲ್ಲವೇ ಎಂಬುದು ಮಾತ್ರ ನಿಸ್ಸಂದಿಗ್ಧವಾಗಿ ತಿಳಿದು ಬಂದಿಲ್ಲ

ಅಮೆರಿಕೆಯ ಕಾಂಗ್ರೆಸ್ಸಿನ ಸಭೆಯು ನುಂದಿನ ವರ್ಷದ ಜನವರಿ ತಿಂಗಳ ಪ್ರಥಮ ಸವತ್ತಾಹದಲ್ಲಿ ನಡೆಯಲಿರುವುದು ಅಮೆರಿಕೆಯ ಸಂರಕ್ಷಣದಿಕ್ಕರು ಪ್ರಸ್ತೋಪಾಸ್ಪ್ರೆ ವಿಕಾಸಕಾರ್ಯಕ್ರಮಗಳಲ್ಲಿ ಜನವನ್ನ ತೊಡಗಿಸಲು ಬಯಸುತ್ತಿರುವುದರಿಂದ, ಆರ್ಥಿಕ ಸಹಾಯತಾ ಕಾರ್ಯಕ್ರಮದ ಕಡೆಗೆ ಬಲವನ್ನು ವ್ಯಾಪಿಸಲಿಚ್ಛಿಸುವುದಿಲ್ಲ ಆಲ್ಲದೆ, ಒಂದು ವೇಳೆ ಅಮೆರಿಕೆಯು ಭಾರತಕ್ಕೆ ವಿಶೇಷ ಸಹಾಯವನ್ನು ಕೊಟ್ಟುಪಕ್ಷದಲ್ಲಿ ಅಮೆರಿಕೆಯ ಇತರ ಮಿತ್ರದೇಶಗಳು ಸಹ ಇದೇ ರೀತಿಯಲ್ಲಿ ಸಹಾಯವನ್ನು ಯಾಚಿಸಬಹುದೆಂಬ ಆಶಂಕೆಯು ಕೂಡ ಅವರ ತಲೆಯೊಳಗೆ ಸುಳಿದಾಡುತ್ತಿದೆ.

ಈ ಕಠಿನತೆಗಳನ್ನ ಹೊರತ ಪಡಿಸಿ, ಭಾರತದ ವಿಕಾಸ ಕಾರ್ಯಕ್ರಮಗಳಲ್ಲಿ ಅಮೆರಿಕೆಯು ಎಷ್ಟು ಅಧಿಕ ಭಾಗವನ್ನು ವಹಿಸಲು ಸಾಧ್ಯವಾಗಬಹುದೆಂದು ಆಲೋಚಿಸಲಾಗುತ್ತಿದೆ. ಅಮೆರಿಕೆಯು ಗೋಧಿಯ ಸಾಲವನ್ನು ಹೊಸ ಸಾಲವನ್ನಾಗಿ ಪರಿವರ್ತಿಸುವ ಮಾತುಕತೆಗಳೂ ನಡೆಯುತ್ತಿವೆ ಈ ಸ್ವರೂಪವು ತಾತ್ಕಾಲಿಕ ಪರಿಹಾರವನ್ನು ಕೊಡುವುದು. ಭಾರತದಲ್ಲಿ ವಿಶೇಷವೆಂಬ ಕಾರ್ಯಗಳಿಗಾಗಿಯೂ ಈ ಸಾಲದಿಂದ ಸಹಾಯವು ದೊರೆಯುವುದು ಆಯಾತ ನಿರ್ಯಾತ ವ್ಯೋಮ ಸಹಕಾರದ ಪೇಪರವಲ್ಲಿ ನಿಜ ಅರ್ಥೈಗಳ ಸಹಾಯ ನೀಡುವ ಕುರಿತಾದ ನಿಶ್ಚಿತ ಯೋಜನೆಗಳಬಗ್ಗೆ ವಿಚಾರವಾಗುತ್ತಿದೆ ಭಾರತಕ್ಕೆ ಸಾವಾನ್ಯ ಆಧಾರ ಮೇಲೆ ವ್ಯಾಪಕ ಸಾಲವನ್ನೀಯುವುದೆಂಬ ವಿಶ್ವಾಸವಿರುವುದು.

ಭಾರತಕ್ಕೆ ತೀರಾ ಧಾನ್ಯಗಳನ್ನು ಕೊಡುವುದಕ್ಕೆ ಅಮೆರಿಕೆಯು ಭಾರತದೊಡನೆ ಒಪ್ಪಂದ ಮಾಡಿಕೊಳ್ಳುವ ಕಾರ್ಯವು ನಡೆಯುತ್ತಿದೆ. ಭಾರತವು ಸಹ ತನಗಿರುವ ಅವಶ್ಯಕತೆಗಳ ಪ್ರಮಾಣವನ್ನು ಅಮೆರಿಕೆಗೆ ಕೊಟ್ಟಿರುತ್ತದೆ. ಉತ್ತರ ಪ್ರದೇಶ ಮತ್ತು ಬಹಾರ ರಾಜ್ಯಗಳ ಬರಗಾಲ ಪೀಡಿತ ಕ್ಷೇತ್ರಗಳಿಗೆ ತಕ್ಷಣ ಆಹಾರ ಧಾನ್ಯಗಳನ್ನು ಕಳುಹಿಸುವ ಕುರಿತಾಗಿ ಅಮೆರಿಕೆಯು ವಿಧಾನವನ್ನು ತಯಾರಿಸುವ ಅವಶ್ಯಕತೆಯು ಮೇಲೆ ವಿಚಾರವಿನಿಮಯಗಳು ನಡೆಯುತ್ತಾ ಇವೆ

ಭಾರತವು ಸಹ ತನಿಯೆಕೆಯಿಲ್ಲಿ ನಿರ್ಮಿಸಲಾದ ಬೂಸ ವಿಶೇಷ ವಿಕಾಸಕೇಂದ್ರದಿಂದ ನೀತೆತ್ತುವ ಮತ್ತು ವಿದ್ಯುತ್ ತಯಾರಿಸುವ ಕೆಲವು ಯೋಜನೆಗಳಿಗೆ ಹಣವನ್ನು ತೆಗೆದುಕೊಳ್ಳುವುದು ಸಾಧ್ಯ

(ಉಳಿದ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧} [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನಿತ್ಯಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ತನು ಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	ಡಿ–೦೨–೧೯೫೭	೦೩

ಪಾಯಸದಲ್ಲಿ ಪಾಪಾಸೆ?

ನಾಗಾ ಜನರಿಗೆ ಸ್ವತ್ರೀಕ ರಾಜ್ಯವೊಂದನ್ನು ಸ್ಥಾಪಿಸುವ ಬಗ್ಗೆ ಭಾರತ ಸರಕಾರವು ತಕ್ಕ ಕಾರ್ಯಕ್ರಮಗಳನ್ನು ತೀರ್ಮಾನವಾಗಿ ಸ್ವೀಕರಿಸಿದುದರ ಪರಿಣಾಮವಾಗಿ ಈ ತಿಂಗಳ ಮೊದಲನೆಯ ದಿನಾಂಕ ಹೊಸ ರಾಜ್ಯವೆ ಉದ್ಘಾಟನೆ ಹೊಂದುವಂತಾಯಿತು ಸ್ವಭಾವತಃ ಕ್ರೂರಿಗಳೂ ಅವಿವೇಕಿಯೂ ಅಸಂಸ್ಕೃತರೂ ಆಗಿರುವ ನಾಗಾ ಜನರನ್ನು ನಾನಾ ಪರಿಯಿಂದ ಬಗ್ಗು ಬಡಿಯಲು ಬಯಸಿತಾನರೋ, ನಾಗಾ ಜನರು ತಮ್ಮ ಕೊಹಿಮಾ ಸಮ್ಮೇಳನದ ಶಾಂತಿ ಮತ್ತು ಪಾಪಾರ್ಜನೆಗಳಿಂದಲೇ ಬಂದ. ಒಪ್ಪಂದಕ್ಕೆ ಬರುವುದಾಗಿ ನಿರ್ಧರಿಸಿ, ಸ್ವತ್ರೀಕ ರಾಜ್ಯ ಸ್ಥಾಪನೆಯ ಬೇಡಿಕೆಯನ್ನು ಕಳೆದ ಫೆಬ್ರವರಿ ತಿಂಗಳಲ್ಲಿ ಪ್ರಧಾನಿ ನೆಹರೂರವರ ಮುಂದಿಟ್ಟಿದ್ದರು. ಅಂದ., ನೆಹರೂ, ಈ ಬೇಡಿಕೆಯನ್ನು ಮನ್ನಿಸಿ, ಆಗು ವರೆಗಿನ ರಾಜಾಪರಾಧಗಳಿಗೆ ಕ್ಷಮೆಯನ್ನು ಕೊಡುವ ಭರವಸೆಯನ್ನಿತ್ತಿರುವರಲ್ಲದೆ. ಮುಂದೆ ಸರಕಾರ ಕ್ಕೆ ವಿಧೇಯರಾಗಿ ಬಾಳಬೇಕೆಂಬುದಾಗಿ ಎಚ್ಚರಿಸಿದ್ದರು. ಅಂತೂ ಮಾತುಕತೆಗಳ ಪ್ರತೀಕವಾಗಿ ಈ ಬಗ್ಗೆ ಒಂದು ಶಾಸನವು ಸಹ ಮಂಜೂರಾಗಿ ದಶಂಬರ ೧೫ರಂದು ಕೇಂದ್ರ ಸರಕಾರದಡಿಯಲ್ಲಿ ಹೊಸ ನಾಗಾ ರಾಜ್ಯವು ಸ್ಥಾಪನೆಗೊಂಡಿತು. ಅಸ್ಸಾಮಿನಿಂದ ಪ್ರತ್ಯೇಕಿಸಲ್ಪಟ್ಟ ಈ ನೂತನ ಘಟಕದಲ್ಲಿ ನಾಗಾ ಗುಡ್ಡಗಳು ಮತ್ತು ಟಿಯುಸ್ಸಾಂಗ್ ಗಡಿನಾಡುಗಳು ಸೇರಿವೆ. ಕೊಹಿಮಾ ಸಮ್ಮೇಳನದ ಪ್ರಮುಖ ಬೇಡಿಕೆಯು ಪೂರ್ತಿಸಲ್ಪಟ್ಟಿದ್ದರೂ, ಕಾರ್ಯರೂಪದಲ್ಲಿ ಬಾರದಾಗಿ ನಾಗಾ ಜನರು ಕರ್ಪಚಿತ್ತರಾಗಿದ್ದುಕೊಂಡು ಈ ಔತ್ಪನವನ್ನು ವಿಜೃಂಭಣೆಯಿಂದ ಆಚರಿಸಬೇಕಾಗಿತ್ತು. ಆದರೆ, ನೂರು ಜಿಲ್ಲೆಗಳ ರಾಜಧಾನಿಗಳಾದ ಕೊಹಿಮಾ, ಮೊಕೋಕ್ ಚುಂಗ್ ಮತ್ತು ಟಿಯುಸ್ಸಾಂಗ್ ನಗರಗಳಲ್ಲಿ ಯಾವುದೇ ರೀತಿಯ ಉತ್ಸವಗಳೂ ಜನರಿಂದ ಆಚರಿಸಲ್ಪಡಲಿಲ್ಲವೆನ್ನುವುದು ಸೋಜಿಗದ ಸಂಗತಿ. ಕೆಲ ಮುಂದಿಯ ಹೊರತಾಗಿ ಬಹು ಸಂಖ್ಯಾಕ ನಾಗಾ ಜನರು ಈ ಉತ್ಸವ ಆಥವಾ ಸಂತೋಷದ ದಿನದಲ್ಲಿ ಯಾವ ಪಾತ್ರವನ್ನೂ ವಹಿಸದಿರುವುದು ಸಂದೇಹಕ್ಕೆಡೆಯಿಲ್ಲದಂತಿದೆ. ನಾಗಾ ಜನಾಂಗದಲ್ಲಿಯೇ ಬಿರುಕಿದ್ದುದು, ಅದರಲ್ಲಿ ಅಧಿಕ ಸಂಖ್ಯಾಕ ದಂಗೆಕೋರರು ಈ ಹೊಸ ಆಡಳಿತ ವಿಧಾನದ ಕುರಿತು ತಾವು ತಳೆಯಬಹುದಾದ ನಿಲುವಿನ ಬಗ್ಗೆ ತೀವ್ರ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ ಎಂಬ ವರದಿ ಬಂದಿದೆ. ನಾಮಾನ್ಯವಾಗಿ ಕೊಹಿಮಾ ಸಮ್ಮೇಳನದಲ್ಲಿ ಮುಖ್ಯ ಪಾತ್ರ ವಹಿಸಿದವರು ಈ ವಿಭಾಗಕ್ಕೆ ಸಹಕಾರಿಗಳಾಗಿದ್ದರೂ ದಂಗೆಗಾರರ ನಾಯಕಮಣಿ ಫಿಝೋರವರ ಅಂತಿತದಲ್ಲಿರುವ ವರು ಪೂರ್ತ ತಮ್ಮ ದಂಗೆಯೇಳುವ ಮನೋವೃತ್ತಿಯನ್ನು ಮತ್ತೂ ಬಲಪಡಿಸಲು ಬಯಸುತ್ತಿರುವುದು ಶೋಚನೀಯ. ನಾಗಾ ಜನರನ್ನು ಇತರ ಭಾರತೀಯರಂತೆಯೇ ನಾಗರಿಕ ಗೌರವದಿಂದ ಕಾಣುತ್ತಿರುವ ಭಾರತ ಸರಕಾರವ ವಿರುದ್ಧ-ತಮ್ಮ ಹಿತಸಂಬಂಧವಾಗಿ ಸ್ಥಾಪನೆಗೊಂಡ ಹೊಸ ಕ್ಷೇತ್ರವ ಪ್ರತಿಯಾಗಿ ಹೋರಾಡುವ ಮನೋಭಾವನೆಯನ್ನು ತಾಳಿರುವುದು ನಿಜವಾದರೆ, ಅದು ಅವಿವೇಕದ ಪರಮಾವಧಿಯಾಗಿದೆ. ಕೊಹಿಮಾ ಸಮ್ಮೇಳನದಲ್ಲಿ ಮಂಜೂರಾದ ಗೊತ್ತುವಳಿಗಳನ್ನು ನಿರಾಕರಿಸಿ ನಾಗಾ ಗುಡ್ಡಗಳಲ್ಲಿ ಗಲಭೆಯೇಳಿಸಬಯಸುವ ಈ ಜನರನ್ನು ಏನೆನ್ನಬೇಕೋ ತಿಳಿಯದಾಗಿದೆ. ರೋಗದಿಂದ ಬಳಲುತಿದ್ದ ತಮ್ಮ ನಾಯಕ ಫಿಝೋನನ್ನು ಕಾಡಿನಲ್ಲಿ ಆಶ್ರಿತಿಟ್ಟು ಸಶಸ್ತ್ರ ನಾಗಾಜನರು ಕಾಯುತ್ತಿರುವರಂತೆ. ಆ ನಾಯಕ ಸಿಸ್ಸೋ ಕೊನೆಯ ತನಕ ಹೋರಾಡುತ್ತಿರುವುದಾಗಿ ಪ್ರತಿಜ್ಞೆಗೈದಿರುವನಂತೆ. ಮುಂದಕ್ಕಾಗಿ ತಮ್ಮ ನಿಂಗೆಯೇಳುವ, ಅಶಾಂತಿಯನ್ನು ಹರಡಿಸುವ ಹಾಗೂ ತನ್ಮೂಲಕ ದೇಶದ ನೆಮ್ಮದಿಯನ್ನು ಕೆಡಿಸುವ ತನ್ಮ ದಕ್ಷಗತವಾದ ಗುಣಗಳನ್ನು ಇನ್ನಾದರೂ ತೊರೆಯಲು ಅವರು ಸಿದ್ಧರಿಲ್ಲವೆಂಬುದು ಸತ್ಯವಾಯಿತು. ನಾಗಾ ಜನರ ಹಿತರಕ್ಷಣೆಯನ್ನು ಭದ್ರವಾಗಿ ಮಾಡಲು ಮತ್ತಷ್ಟು ಅನುಕೂಲವಾಗುವಂತೆ, ಮತ್ತು ನಾಗಾ ಜನರ ಕೊಹಿಮಾ ಸಮ್ಮೇಳನದ ಆಗ್ರಹಪೇಡಿಕೆಯಂತೆ ಕೇಂದ್ರ ಸರಕಾರೀ ಕ್ಷೇತ್ರವನ್ನಾಗಿ ಪ್ರತ್ಯೇಕಗೊಂಡ ನಾಗಾ ರಾಜ್ಯ ಇನ್ನು ಅಲ್ಲಿನ ನಿವಾಸಿಗಳಿಗೆ ಅನುಕೂಲವಾಗುವಂತೆ ಅವರ ಅನೇಕ್ಷೆಯಂತೆ ರೂಪಧಾರಣೆ ಮಾಡಲು ಯಾರ ಅಭ್ಯಂತರವೂ ಇರುವುದಿಲ್ಲ. ಅಲ್ಲದೆ ಕೇಂದ್ರ ಸಂಪತ್ತಿಗೆ ಸಹ ಈ ಹೊಸ ಕ್ಷೇತ್ರದಿಂದ ಒಬ್ಬ ಸದಸ್ಯನನ್ನು ನಾಮಕರಣ ಮಾಡಿಯೋಗ್ಯ ಪ್ರಾತಿನಿಧ್ಯಗಳನ್ನು ಕಲ್ಪಿಸಿಕೊಡಲಾಗುವುದು. ಆದರಿಂದ ಇನ್ನಾದರೂ ಈ ನಾಗ ಜನರು ತಮ್ಮ ಉದ್ರೇಕೀ ಮನೋಭಾವನೆಯನ್ನು ತ್ಯಜಿಸಿ, ಭಾರತ ಸಂಕಾರದೊಂದಿಗೆ ಸಹಕರಿಸಿ, ತಮ್ಮ ಭವಿಷ್ಯವನ್ನು ಉಜ್ವಲಗೊಳಿಸುವಲ್ಲಿ ಪ್ರಯತ್ನಶೀಲರಾಗಬೇಕು. ಅದನ್ನು ಹೊರತು ಅರಾಂತಿಯನ್ನು ಹರಡಿಸಿದಲ್ಲಿ ಭಾರತವೂ ತನ್ನ ಶಕ್ತಿ ಸಾಮರ್ಥ್ಯಗಳಂದಲಾದರೂ ಅದನ್ನು ಅಡಗಿಸಬೇಕಾಗಿ ಬರಬಹುದು. ದಂಗೆಗಾರರೆ ಕುಳಿವು ಈಗಾಗಲೇ ಅಲ್ಲಲ್ಲಿ ಕಂಡುಬರುತ್ತಿರುವುದರಿಂದ. ಕಾನೂನು ಮತ್ತು ಕಾಯ್ದೆ ವ್ಯವಸ್ಥೆಗಳಿಗೆ ಒದಗಿಬರುವ ಯಾವುದೇ ಬೆದರಿಕೆಯನ್ನಾದರೂ ಅಣಗಿಸಲು ಸರಕಾರವು ತಕ್ಕ ಜಾಗರೂಕತೆಯಿಂದಿದೆ. ದಂಗೆಗಾರರು ಆಕ್ರಮಣ ನಡೆಸುವ ಸ್ಥಳಗಳಲ್ಲಿ ಸೈನ್ಯ ಮತ್ತು ಸಶಸ್ತ್ರ ಪೋಲೀಸ ಪಡೆಗಳಿದ್ದು ತಕ್ಕ ಮುಂಜಾಗ್ರತೆಯಲ್ಲಿ ತಲ್ಲೀನವಾಗಿದೆ. ಆದರೆ, ಯಾವಾಗಲೂ ಕಟ್ಟ ಮೇಲೆ ಬುದ್ಧಿ ಬರುವುದಕ್ಕಿಂತ ಮೊದಲೇ ಜಾಣತನವನ್ನು ಪ್ರದರ್ಶಿಸುವುದು ವಿವೇಕ. ನಾಗಾಜನರ ಆಕ್ರಮಣ ಮತ್ತು ದಂಗೆಗಳ ನ್ನು ಇನ್ನು ಭಾರತ ಸರಕಾರವು ಸಹಿಸಿಕೊಂಡಿರದೆ, ಅವರಿಗೆ ಬುದ್ಧಿ ಕಲಿಸಿಯೇ ತೀರುತ್ತದೆ ಎಂಬುದಂತೂ ಸತ್ಯ. ಆದುದರಿಂದ ನಾನಾ ಜನರು ಪಾಯಸದಲ್ಲಿ ಪಾಪಾಸವನ್ನು ಎಸೆಯದೆ ತಮಗೆ ಒಲಿದು ಬಂದ ಸೌಲಭ್ಯಗಳ ಸಂಪೂರ್ಣ ಲಾಭವನ್ನು ಪಡೆದು ತಮ್ಮ ಹಾಗೂ ತನ್ಮೂಲಕ ದೇಶದ ಉದ್ಧಾರಕಾರ್ಯದಲ್ಲಿ ಉಳಿದ ಪ್ರದೇಶಗಳ ಭಾರತೀಯರಂತೆಯೇ ಸಹಯೋಗಿಗಳಾಗಿ ಬಾಳುವರೆಂದು ಆಶಿಸುತ್ತೇವೆ ಪರಮಾತ್ಮನೂ ಅವರಿಗೆ ತಮ್ಮ ದೇಹ, ಆತ್ಮ ಶಕ್ತಿಯ ಸದ್ವಿನಿಯೋಗಮಾಡುವಂತೆ ಸದ್ವಿವೇಕೋದಯವನ್ನುಂಟುಮಾಡಲಿ.

ಉಡುಪಿ

ಶ್ರೀ ಟಿ. ಎ. ಪೈಗಳಿಗೆ ಸತ್ಕಾರ ಕೂಟಗಳು— ಸ್ಥಳೀಯ ಎಸ್. ಜಿ. ಎಮ್. ಕಾಲೇಜ್ ಯೂನಿಯನ್ ನೇತೃತ್ವದಲ್ಲಿ ತಾ ೨೭ರಂದು ಯೂನಿಯನ್ ಅಧ್ಯಕ್ಷ ಶ್ರೀ ವಿನೋದ ಕುಮಾರ ಸೆಟ್ಟರ ಅಧ್ಯಕ್ಷತೆಯಲ್ಲಿ ವಿದೇಶ ಪ್ರವಾಸದಿಂದ ಹಿಂತಿರುಗಿರುವ ಶ್ರೀ ಟಿ. ಎ. ಪೈಗಳಿಗೆ ಸತ್ಕಾರಕೂಟವಾಯಿತು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸ್ವಾಗತ ಭಾಷಣಗೈದಿದರು. ಶ್ರೀ ಪೈಗಳು ತನ್ನ ವಿದೇಶ ಸಂಚಾರದ ಕುರಿತು ಭಾಷಣವಿತ್ತರು.

ವಿಕ್ಟೋರಿಯಾ ಜುಬಿಲಿ ಕ್ಲಬ್ಬಿನಲ್ಲಿ— ತಾ ೨೭ರಂದು ಶ್ರೀ ಟಿ. ಎ. ಪೈಗಳಿಗೆ ಸತ್ಕಾರವೀಯಲಾಯಿತು. ಕ್ಲಬ್ಬಿನ ಅಧ್ಯಕ್ಷ ಡಾ. ಯು. ಸುಂದರರಾಯ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು ಡಾ. ಕೆ. ಎಲ್. ಐತಾಳರು ಸ್ವಾಗತ ಭಾಷಣಗೈದಿದರು. ಶ್ರೀ ಪೈಗಳು ಹಲವಾರು ವಿಷಯಗಳಲ್ಲಿ ತಾನು ಪಡೆದ ಅನುಭವವನ್ನು ವಿವರಿಸಿದರು. ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಎನ್. ವಿ. ಕಾಮತರು ಧನ್ಯವಾದಗಳನ್ನಿತ್ತರು

ಮುಕುಂದ ನಿವಾಸದಲ್ಲಿ— ಕೆನರಾ ಇಂಡಸ್ಟ್ರಿಯಲ್ ಬ್ಯಾಂಕಿಂಗ್ ಸಿಂಡಿಕೇಟ್, ಶ್ರೀ ರಾಮಕೃಷ್ಣ ಥಿಯೇಟರ್, ಜೈಭಾರತ ಮಿಲ್ಸ್, ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ಸ್, ಕೆನರಾ ಮೆಡಿಕಲ್, ಮಣಿಪಾಲ ಪ್ರಿಂಟರ್ಸ್, ಪೇಂಡ್‌ಲೂರ್ ಟೆಕ್ಸ್ ಟೈಲ್ಸ್, ಜನರಲ್ ಇನ್ವೆಸ್ಟ್‌ಮೆಂಟ್, ಕಮರ್ಶಿಯಲ್ ಕೋರ್ಪರೇಶನ್, ನಟರಾಜಪ್ಪ ಎಜೆಕ್ಟ್ ಕೋರ್ಪರೇಶನ್ ಸಂಸ್ಥೆಗಳ ಜಾಲಕರು ತಾ೨೨ರಂದುಸಂಜೆ ಮುಕುಂದ ನಿವಾಸದಲ್ಲಿ ಶ್ರೀ ಟಿ ಎ.ಪೈಗಳಿಗೆ ಸತ್ಕಾರವಿತ್ತು ಗೌರವಿಸಿದರು. ಶ್ರೀ ರೋಲ್ಫ್ ಫೆರ್ನಾಂಡೀಸರು ಸಭಾಧ್ಯಕ್ಷತೆ ವಹಿಸಿದ್ದರು. ಸಂಘ ಸಂಸ್ಥೆಗಳ ಪರವಾಗಿ ಶ್ರೀ ಪೈಗಳಿಗೆ ಸುಪ್ತಾಹಾರ ಏರ್ಪಡಿಸಲಾಯಿತು. ಬಳಿಕ ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ| ಟಿ. ಎಮ್. ಎ.ಪೈಗಳು ಸ್ವಾಗತ ಭಾಷಣ ಮಾಡಿ ತಾ ಶ್ರೀ ಟಿ ಎ. ಪೈಗಳು ತನ್ನ ವಿದೇಶ ಪ್ರವಾಸದ ಅನುಭವದಿಂದ ರಾಷ್ಟ್ರಕ್ಕೆ ಹೆಚ್ಚಿನ ಸೇವೆಸಲ್ಲಿಸಲು ಸಮರ್ಥರಾಗಲಿ ಎಂದು ಹರಸಿದರು. ಶ್ರೀ ಪೈಗಳು ವಿದೇಶ ಪ್ರವಾಸದಲ್ಲಿರುವ ಸಮಯ ವಿವಿಧ ಕ್ಷೇತ್ರಗಳನ್ನು ಸಂದರ್ಶಿಸಿ ಪಡೆದ ಅನುಭವಗಳನ್ನು ಹೃದಯಂಗಮವಾಗಿ ನುನನಾಟುವಂತೆ ತಿಳಿಸಿದರು. ಶ್ರೀ ಎ. ಜೆ. ಆಳ್ವರಿಯವರು ಧನ್ಯವಾದಗಳನ್ನಿತ್ತರು.

ಉಗ್ರಾಣ ಮೂಹೂರ್ತ— ಮುಂಬರುವ ಜನವರಿ ತಿಂಗಳ ತಾ. 17ರಂದು ಬೆಳಿಗ್ಗೆ ಪರ್ಯಾಯ ಪೀಠವನ್ನೇರಲಿರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮಿಗಳವರ ಪರ್ಯಾಯ ಮಹೋತ್ಸವದ ಪೂರ್ವಸಿದ್ಧತೆಯ ಕೊನೆಯಂಗವಾದ ಭತ್ತ ಮುಸುರಾ ಉಗ್ರಾಣ ಪ್ರಾರಂಭೋತ್ಸವವು ತಾ ೨೫ರಂದು ಪೂರ್ವಾಹ್ನ ಶ್ರೀಮದಾಚಾರ್ಯರ ಶಿಷ್ಟ ಸಾಂಪ್ರದಾಯಗಳಿಗನುಸಾರವಾಗಿ ವೈಭವದಿಂದ ಜರಗಿತ್ತು. ಶ್ರೀಗಳವರು ಸದ್ಯವೇ ತೀರ್ಥಯಾತ್ರಾ, ದಿಗ್ವಿಜಯಗಳಿಗಾಗಿ ಹೊರಡಲಿರುವರು.

ಡಾ| ಎಸ್. ಆರ್. ಪೈಗಳಿಗೆ ಸತ್ಕಾರ ಕೆನರಾ ಬೇಂಕಿಂಗ್ ಕೋರ್ಪರೇಶನಿನ ಸಲಹೂರು ಇಪ್ಪತ್ತೆರಡು ವರ್ಷಗಳಿಂದ ಸತತ ಅಧ್ಯಕ್ಷರಾಗಿರುವ ಡಾ| ಎಸ್. ಆರ್. ಪೈಗಳನ್ನು ಅವರ ಷಷ್ಟ್ಯಬ್ದಿ ಪೂರ್ತಿಸಲಾಗಿ ಅವರನ್ನು ಗೌರವಿಸಲು ಬೇಂಕಿನ ಡೈರೆಕ್ಟರರು ಮತ್ತು ಶಿಬಂಧಿಯವರು ತಾ. ೩೦ರಂದು ಸತ್ಕಾರ ಸಮಾರಂಭವನ್ನು ಜರುಗಿಸಿದರು. ಶ್ರೀ ವಿ. ಎಸ್. ಕುಡ್ವ ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಗೋಪಾಲ ಕಾಮತರು ಸ್ವಾಗತಮಾತುಗಳನ್ನಾಡಿದರು. ಡೈರೆಕ್ಟರರ ಪರವಾಗಿ ಡಾ. ಯು. ಸುಂದರರಾಯರು ಡಾ. ಪೈಗಳ ಬಹುಮುಖ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು. ಬೇಂಕಿನ ಜನರಲ್ ಮೆನೇಜರ್ ಶ್ರೀ ವಿ. ಆರ್. ಕಾಮತರು ಶಿಬಂಧಿ ಪರವಾಗಿ ಮಾತನಾಡಿದರು ಬೇಂಕಿನ ಡೈರೆಕ್ಟರರೊಬ್ಬರಾದ ಶ್ರೀ ಕೊಟ್ಟಿಕಾರ್ ಪದ್ಮನಾಭ ಪೈಗಳು ಡಾ. ಪೈಗಳಿಗೆ ದಶತಿ ಕೆತ್ತಿಸಿದ ಶ್ರೀಕೃಷ್ಣ ಮೂರ್ತಿಯನ್ನು ಕೃತಾದಿ ಮಂಟಪವನ್ನು ಸಮರ್ಪಿಸಿದರು. ಮುಖ್ಯ ಅತಿಥಿಗಳು ತಮಗಿತ್ತ ಸತ್ಕಾರ ಅಭಿನಂದನೆಗಳಿಗಾಗಿ ಸರ್ವರನ್ನು ವಂದಿಸಿದರು. ಸಭಾಧ್ಯಕ್ಷರು ಕೂಡಾ ಡಾ. ಪೈಗಳ ಬಹುಮುಖ ಸೇವೆಯನ್ನು ಕೊಂಡಾಡಿ ಮುಂದೆಯೂ ದ್ವಿಗುಣಿತ ಉತ್ಸಾಹದಿಂದ ಸೇವೆ ಸಲ್ಲಿಸುವಂತೆ ಪರಮಾತ್ಮನು ಅನುಗ್ರಹಿಸಲೆಂದು ಪಾರ್ಥಿಸಿದರು ಬೇಂಕಿನ ಡಿಪ್ಯುಟಿ ಮೆನೇಜರ್ ಶ್ರೀ ಕೆ. ಶಂಕರನಾರಾಯಣ ಶೆಣೈಯವರು ಧನ್ಯವಾದಗಳನ್ನಿತ್ತರು.

ಗ್ರಂಥ ಪ್ರಕಾಶನ ಸಮಾರಂಭ— ಉಡುಪಿ ಕರ್ನಾಟಕ ಸಂಘದ ನಾಯಕ ವಂದಿಯವರು ಅಧ್ಯಾಹ್ವಾನಿಸಿರಲು ಡಾ. ಕೆ ಎಲ್. ಐತಾಳರಿಂದ ಬರೆಯಲ್ಪಟ್ಟ 'ನಾನಾ ನ್ಯ ರೋಗಗಳು', ಶ್ರೀ ಯು. ರಾಘವೇಂದ್ರ ಆಚಾರ್ಯರಿಂದ ಬರೆಯಲ್ಪಟ್ಟ 'ಚಂದ್ರರೇಖಕಳ್ಳ ಪಯಣ' ಮತ್ತು ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರಿಂದ ಬರೆಯಲ್ಪಟ್ಟ 'ಭೌತಿಕ ದರ್ಶನ' ಎಂಬೀ ಮೂರು ಗ್ರಂಥಗಳನ್ನು ತಾ ೨೨ರಂದು 'ನವಯುಗ' ಪೂಜಿಗೆಯಲ್ಲಿ ನಿರ್ಮಿಸಲಾದ ಸಿಮಾರಂಭದಲ್ಲಿ ಶ್ರೀ ಕೆ. ಶಿವರಾಮ ಕಾರಂತರು ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಕು ಶಿ. ಹರಿದಾಸ ಭಟ್ಟರು ಸ್ವಾಗತ ಮಾತುಗಳನ್ನಾಡಿದರು.

ಶ್ರೀ ಕಾರಂತರು ತನ್ನ ಉದ್ಘಾಟನಾ ಭಾಷಣದಲ್ಲಿ ಗ್ರಂಥ ಬರೆಯುತ್ತಿರುವವರು ತಮ್ಮ ಯಾರ ಬಗ್ಗೆ ಬರೆಯುತ್ತಿದ್ದೇವೆ, ಅದರ ಮಟ್ಟ ಹೇಗಿರಬೇಕು ಎಂಬಿತ್ಯಾದಿ ವಿಷಯಗಳನ್ನು ಸ್ಪಷ್ಟಮತ ಆಲೋಚಿಸುವುದು ಅವಶ್ಯಕವೆಂದರು. ಜನ ಸಾಮಾನ್ಯರಲ್ಲಿ ತಿಳುವಳಿಕೆಯನ್ನುಂಟು ಮಾಡುವಂತಹ ಪುಸ್ತಕಗಳು ಆಗತ್ಯವಾಗಿ ಬೇಕಾಗಿ ಬರಬೇಕೆಂದು ಸಲಹೆ ನೀಡಿದರು. ಅತಿಥಿಗಳಾದ ಶ್ರೀ ನೆಗಳೂರು ರಂಗನಾಥ, ಧಾರವಾಡ ಆವರು ಮಾತನಾಡುತ್ತಾ ದೊಡ್ಡ ದೊಡ್ಡ ಪದವೀಧರರೆ ಸರ್ಟಿಫಿಕೇಟು ಪಡೆದಿದ್ದಾರೆಂಬಲ್ಲಿ, ಭಾಷಾಪಾಂಡಿತ್ಯವೆಲ್ಲವೂ ವಿಷಯಜ್ಞಾನ ಇಲ್ಲದೆ ಹೋದರೆ ಅಂತಹವರಿಗೆ ಗ್ರಂಥ ಕರ್ತರಾಗಲು ಅರ್ಹತೆಬರುವುದಿಲ್ಲವೆಂದರು. ಗ್ರಂಥಕರ್ತರಾಗುವವರಿಗೂ ಒಂದು ರೀತಿಯ ಶಿಕ್ಷಣದ ಅವಶ್ಯಕತೆಯಿದೆ. ಎಂದು ನುಡಿದರು. ಸಭಾಧ್ಯಕ್ಷರು ಸಂಘದ ಗೊತ್ತುಗುರಿಗಳನ್ನು ವಿವರಿಸಿ, ಆತಿಥಿಗಳಿತ್ತ ಸೂಚನೆಗಳನ್ನು ಗಮನದಲ್ಲಿಡುವುದಾಗಿ ಹೇಳಿದರು. ಬಳಿಕ ಕಾರ್ಯದರ್ಶಿಯವರಿಂದ ಧನ್ಯವಾದಾರ್ಪಣೆಯಾಯಿತು.

ಭಾರತ ಸೇವಕ ಸಮಾಜದ ಶಿಬಿರ ಸಂಚಾಲಕರ ತರಬೇತಿ— ಬೆಳಗಾವಿ ನಲ್ಲಿ ಇಂದು ತಾ. 8-12-57ರಿಂದ 17-12-57ರ ವರೆಗೆ ಜರಗಲಿರುವ ಅಂತರಾಷ್ಟ್ರೀಯ ಭಾರತ್ ಸೇವಕ ಸಮಾಜದ ಶಿಬಿರ ಸಂಚಾಲಕರ ತರಬೇತಿ ಶಿಬಿರಕ್ಕೆ ನಮ್ಮ ಜಿಲ್ಲೆಯಿಂದ ಮೂವರು ಗಂಡಸರೂ ಇಬ್ಬರು ಮಹಿಳೆಯರೂ ತೆರಳಿದುವರಾಗಿ ಕಳೆದುಬಂದಿದೆ.

ಮಹತ್ವದ ಸುದ್ದಿಗಳು

ಮಹಾ ಮಾರಿಯ ಪುನರಾವೃತ್ತಿ

ಕಳೆದ ಚಳಿಗಾಲದಲ್ಲಿ ಸೊತ್ತಮೊದಲು ಫ್ಲೂ ವ್ಯಾಧಿಗೀಡಾದ ಜಪಾನಿನಲ್ಲಿ ಇದೀಗ ಅದು ಎರಡನೆಯ ಬಾರಿ ವ್ಯಾಪಂಭವಾಗಿದೆ. ಏಶ್ಯಾ, ಇರೋಪು, ಆಸ್ಟ್ರೇಲಿಯಾ ಮತ್ತು ಅಮೆರಿಕಗಳಲ್ಲಿ ಹೋದ ಬಾರಿ ಹರಡಿದಂತೆ ಈ ವ್ಯಾಧಿಯು ಈ ಸಲ ಸಹ ವ್ಯಾಪಿಸುವ ನಿರೀಕ್ಷೆಯಿದೆ. ಅಲ್ಲದೆ ಗತ ವರ್ಷಕ್ಕಿಂತ ಈ ವರ್ಷ ಗಂಭೀರ ರೀತಿಯಲ್ಲಿ ಈ ಪಿಡ್ಡು ಪರಿಣಾಮವನ್ನುಂಟು ಮಾಡುತ್ತಿರುವುದರಿಂದ ಜಪಾನಿನ ಜನರು ವಿವಂಚನೆಗೀಡಾಗಿದ್ದಾರೆ. ಮೊಗಿಗೆ ಗಾಳಿ ಸೋಷುವ ಯಂತ್ರಗಳನ್ನು ಧರಿಸಿಯೇ ಅನೇಕ ಜಾವಾನೀಯರು ಸಂಚರಿಸಿ ಫ್ಲೂ ಬೇನೆಯಿಂದ ದೂರವಿರಲು ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ೬ ಲಕ್ಷದ ೬೦ ಸಾವಿರ ಮಂದಿಗೆ ಈ ರೋಗವು ತಗಲಿರುವುದೆಂದೂ, ಈ ಚಳಿಗಾಲ ವಿಡಿ ಫ್ಲೂ ಹರಡುತ್ತಲಿದ್ದರೆ, ಜಪಾನಿನ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರಿಗೆ ಅಂಟುವುದೆಂದೂ ತಿಳಿದುಬಂದಿದೆ. ಅಲ್ಲದೆ, ಇದರಿಂದ ಅಧವಾ ಇದರ ಮೂಲಕ ಸುಮಾರು ೫೦೦ ಮಂದಿ ಸತ್ತಿರುವರೆಂದೂ ವರದಿಯಾಗಿದೆ.

ಕಾಸರಗೋಡಿನ ಅದೃಷ್ಟ (?)

ಈ ತಿಂಗಳಲ್ಲಿ ಕೇರಳದ ತಿರುವನಂತಪುರದಲ್ಲಿ ಸೇರಲಿರುವ ದಕ್ಷಿಣ ಪ್ರಾದೇಶಿಕ ಮಂಡಳದ ಸಭೆಯಲ್ಲಿ ಕಾಸರಗೋಡಿನ ಪ್ರಶ್ನೆಯೂ ಚರ್ಚಿಸಲ್ಪಡುವ ನಿರೀಕ್ಷೆಯಿದೆ ಎಂದು ವಿಶ್ವಸನೀಯವಾಗಿ ತಿಳಿದು ಒಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ ಕಾಸರಗೋಡು ತಾಲೂಕಿನ ಕುಂಬಳೆ ಮತ್ತು ಮಂಜೇಶ್ವರ ಹಿಕ್ಕಾಗಳನ್ನು ಕೇರಳದಿಂದ ಮೈಸೂರು ರಾಜ್ಯಕ್ಕೆ ವರ್ಗಾಯಿಸಲು ತಕ್ಕ ಒಡಂಬಡಿಕೆಗಳಾಗುವ ಸಂಭವವಿದೆ. ಈ ಬಗ್ಗೆ ಕಾಸರಗೋಡು ತಾಲೂಕಿನ ಹಲವಾರು ಪಂಚಾಯತ ಬೋರ್ಡುಗಳೂ, ಮಲಬಾರು ಜಿಲ್ಲಾ ಬೋರ್ಡೂ ತಕ್ಕ ನಿರ್ಣಯಗಳನ್ನು ಈ ಗಾಗಲೇ ಕೈಗೊಂಡಿವೆ. ಆದರೆ, ಕಾಸರಗೋಡಿನ ಪ್ರಶ್ನೆಯು ಮಾತ್ರ ಜಟಿಲವಾಗಿದ್ದು, ಅದರ ಕುರಿತು ನಿರ್ಣಯವನ್ನು ಮಾಡಲು, ಒಬ್ಬ ನಿಷ್ಪಕ್ಷಪಾತಿ ಸಂಚಾಯತಗಾರರಿಗೆ ಒಪ್ಪಿಸುವುದೆಂದೂ ಗೊತ್ತಾಗಿದೆ. ಈ ಒಡಂಬಡಿಕೆಗಳ ಪರಿಣಾಮ ಇನ್ನು ತಿಳಿಯಬೇಕು.

ಮಹಾತ್ಮರಿಗೆ ಗೌರವ

ದಕ್ಷಿಣ ಭಾರತದಲ್ಲಿ ಶ್ರೇಷ್ಠನಾದ ಮಧ್ವಾಚಾರ್ಯ ಸಂಸ್ಥಾಪಕನಾದ ಶ್ರೀ ಶಿವಾಜಿ ಮಹಾರಾಜನು ಬಿಜಾಪುರದ ಅದಿಲಶಾಹಿ ಸುಲ್ತಾನರ ವಿರುದ್ಧ ಹೋರಾಡಲು ಪ್ರತಾಪಗಡವೆಂಬ ಕೋಟೆಯನ್ನು ಕಟ್ಟಿಸಿದ್ದನ. ಈ ಕೋಟೆಯಲ್ಲಿ ಶಿವಾಜಿ ಮಹಾರಾಜನ ಅಶ್ವಾರೂಢ ಪ್ರತಿಮೆಯನ್ನು ಕಳೆದ ಹಿನೆ ದಿನಾಂಕದಂದು ಪ್ರಧಾನಿ ನೆಹರೂ ಅನಾವರಣ ಮಾಡಿದರು. ಶಿವಾಜಿ ಮಹಾರಾಜರು ಕೇವಲ ಮಹಾರಾಷ್ಟ್ರದ ಸುಪುತ್ರರಾಗಿರದೆ ಭಾರತದ ಪುತ್ರವರೇಣ್ಯರಾಗಿದ್ದಾರೆ; ವಿದೇಶೀಯರ ವಿರುದ್ಧ ಸಮರಹೂಡುವ ಕೆಲಸದಲ್ಲಿ ಅಗ್ರಗಣ್ಯರಾದ ಶಿವಾಜಿ ಮಹಾರಾಜರಿಗೆ ಎಲ್ಲರೂ ಗೌರವ ಸಲ್ಲಿಸಬೇಕು ಎಂದವರು ಹೇಳಿದರು. ಈ ಮೊದಲೇ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಒಂದು ವಿಭಾಗವು ವಿಶಾಲ ಮಹಾರಾಷ್ಟ್ರ ಬೇಡಿಕೆಯನ್ನು ಮುಂದಿಟ್ಟುಕೊಂಡು ಮತಪ್ರದರ್ಶನೆ ಮಾಡಲು ನಿರ್ಧರಿಸಿತ್ತಾದರೂ ಆ ವರನ್ನು ದೂರದ ವಾಯಿಯಲ್ಲಿಯೇ ತಡೆಗಟ್ಟಲಾಯಿತೆಂದು ಪ್ರತಾಪಗಡದಲ್ಲಿ ಯಾವ ಗೊಂದಲವೂ ಇರಲಿಲ್ಲ.

ಮಾನವೀಯತಾ ದರ್ಶನ

"ಸಾಮಾಜಿಕ ನ್ಯಾಯಕ್ಕೆ ಭಂಗ ವೊದಗದಂತೆ, ಹಿಂಸಾ ವಾರ್ಗಕ್ಕೆ ಬಲಿಬೀಳದಂತೆ ವರ್ಗ ಕಲಹಕ್ಕೆ ನಿವಾರಣೋಪಾಯವನ್ನು ಕಂಡುಹಿಡಿದ ರೀತಿಯಲ್ಲಿ ಸಾಮಾಜಿಕ ತತ್ವಜ್ಞಾನವನ್ನು ಬೆಳೆಸಿಕೊಂಡು ಬರುವುದಕ್ಕಾಗಿ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸಕ್ರಮವೇರ್ಪಡಬೇಕು. ಸರಕಾರದ ಬೇಡಿಕೆಗಳನ್ನು ಪೂರೈಸುವಂತೆ ಶಿಕ್ಷಣ ಕ್ರಮಗಳನ್ನಿಟ್ಟುಕೊಳ್ಳುವುದಲ್ಲದೆ ಸಮಾಜದ ಮನಸ್ಸಾಗಿ, ವಿವೇಕವಾಗಿ ಕೆಲಸ ಮಾಡಬೇಕು. ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಮಾನವೀಯತೆಯನ್ನು ಬೆಳೆಸಿಕೊಂಡು ಬರಬೇಕು. ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ವ್ಯವಸ್ಥಾಪಕರು ರಾಜಕೀಯ ವರ್ಚಸ್ಸಿಗೊಳಗಾಗಿರುವುದರಿಂದಲೇ ಶಿಕ್ಷಣ ಮಟ್ಟವು ಇಳಿದಿದೆಯಷ್ಟೆ ಕೇವಲ ಆರ್ಥಿಕ ದೃಷ್ಟಿಯಿಂದಲ್ಲ. ಪ್ರಾಧ್ಯಾಪಕರು ವಿದ್ಯಾರ್ಥಿಗಳ ಮೇಲೆ ಯೋಗ್ಯ ಪ್ರಭಾವ ಬೀರಿದರೆ, ವಿದ್ಯಾ ಮಟ್ಟವನ್ನು ಉನ್ನತೀಕರಿಸಬಹುದು." ಎಂದು ಶ್ರೀ ಸಿ. ಡಿ. ದೇಶಮುಖರು ದಿಲ್ಲಿ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ನುಡಿದರು.

ರಾಜಕೀಯದಿಂದ ನಿರ್ಲಿಪ್ತ

"ಭಾರತ ಸೇವಕ ಸಮಾಜವು ರಾಜಕೀಯದಿಂದ ನಿರ್ಲಿಪ್ತವಾಗಿದೆ. ಯಾವ ಪಕ್ಷದವರೂ ಅದರಲ್ಲಿ ಸೇರಿಕೊಳ್ಳಬಹುದು. ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಭಾರತೀಯರು ಪಾಸ್ಯದಲ್ಲಿರುವಾಗ ಜನುಭವಿಸುತ್ತಿದ್ದ ಕಷ್ಟಗಳನ್ನು ದೂರಮಾಡಲು ನಿರ್ಧರಿಸಿದ್ದು ದಾರಿದ್ರ್ಯವೇ ನ ಹಾಸಮನ್ಯೆಯಾದುದರಿಂದ, ಇದರ ಪರಿಹಾರಕ್ಕಾಗಿ ದುಡಿಯುತ್ತಿದೆ. ಸರಕಾರವು ಈ ಕಾರ್ಯವನ್ನು ಮಾಡುತ್ತಿದೆಯಾದರೂ ಜನತಾ ಸಹಕಾರವು ಅಗತ್ಯವಾದುದರಿಂದ, ಸಮಾಜವು ಅದನ್ನು ಪಡೆದು ಮಾಡುತ್ತಿದೆ. ಶ್ರಮದಾನದ ಮೂಲಕ ವಿವಿಧ ಯೋಜನೆಗಳನ್ನು ಕಾರ್ಯಾನ್ವಿತಮಾಡುವಲ್ಲಿ ಸಹಕರಿಸುವುದು ಸಮಾಜದ ಮೊದಲನೆ ಕಾರ್ಯವಾಗಿದೆ. ಲೌಕಿಕ ಪ್ರಗತಿ ಮಾತ್ರ ಸ್ವತಂತ್ರಭಾರತದ ಗುರಿಯಾಗಿದೆ, ನೈತಿಕ ಧ್ಯೇಯವೂ ವ ಹತ್ವದ್ದಾಗಿದೆಯೆಂದು ಜನರಿಗೆ ಮಂದಟ್ಟಮಾಡುವುದು ಸಮಾಜದ ಎರಡನೆ ಗುರಿಯಾಗಿದೆ ಇದನ್ನು ಕಾರ್ಯಕರ್ತೀ ಮಾಡುವುದೇ ಭಾರತ ಸೇವಕ ಸಮಾಜದ ಗುರಿ" ಎಂದು ಶ್ರೀ ಗುಲ್ಜಾರೀಲಾಲನಂದಾ ಹೇಳಿದ್ದಾರೆ.

ಪ್ರಕಟಣೆ

ಉಡ್ಡಿ ತಾಲೂಕು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯ ದಶಾವತಾರ ಮೇಳವನ್ನು 1957—58ರಲ್ಲಿ ತಿರುಗಾಡಿಸುವ ಹಕ್ಕನ್ನು ಎಂತೋಮೆಂಟ್ ಕಮಿಶನರ ಹುಕುಮಿಗೆ ವಳಪಟ್ಟು ಸ್ಥಿರಪಡಿಸುವರೆ ತಾ. 8—12—57ನೇ ದಿನ ಬೆಳಿಗ್ಗೆ ಗಂಟೆ 11ಕ್ಕೆ ಮುನಃ ರವಲಂ ಕರೆಯಲಾಗುವುದು. ಕಾಯಸ್ಥುಳ್ಳವರು ಸದ್ರಿ ಸಮಯಾ ಹಾಜರಾಗಿ ಮೇಳವನ್ನು ಪಡಕೊಳ್ಳಬಹುದು. ಏಲಂ ಶರತ್ತನ್ನು ದೇವಸ್ಥಾನದ ಆಫೀಸಿನಲ್ಲಿ ತಿಳಿದುಕೊಳ್ಳತಕ್ಕದ್ದು.

(Sd) B. Umesh Rao
Executive Officer.
ಮಂದಾರ್ತಿ ದೇವಸ್ಥಾನ, ತಾ. 2. 12. 57

ನಿವೃತ್ತ ವೆಟರ್ನರಿ ಡಾ। ಆಚ್ಚಣ್ಣ ಸೆಟ್ಟರ ಶೋಚನೀಯ ನಿಧನ—ಸಂ

ಸುಮಾರು 30 ವರ್ಷಗಳ ಹಿಂದೆ ಉಡುಪಿಯಲ್ಲಿ ಸರಕಾರವು ಜಾನುವಾರು ಆಸ್ಪತ್ರೆ ತೆರೆದಾಗ ಪ್ರಥಮ ಡಾಕ್ಟರರಾಗಿದ್ದು ನಂತರ ಜಿಲ್ಲೆಯ ಹಾಗೂ ಹೊರಪ್ರದೇಶಗಳಲ್ಲಿ ವರ್ಗಾಯಿಸಿ ಹೋದಾಗಲೂ ದಕ್ಷ ಪಶುಚಿಕಿತ್ಸೆಯನ್ನು ಸೈದು ಕೀರ್ತಿಗಳಿಸಿ ಸುಮಾರು ಹದಿನೈದು ವರ್ಷಗಳ ಹಿಂದೆ ಉದ್ಯೋಗದಿಂದ ನಿವೃತ್ತರಾಗಿ ಕಡೆಕಾರಿನಲ್ಲಿ ಸ್ವಂತ ನಿವಾಸದಲ್ಲಿ ವಿಸಮಯ ವಿಕೀಯಿಂದ ಡಾ| ಕೆ. ಆಚ್ಚಣ್ಣಸೆಟ್ಟರು ತಾ. 2 ಸೋಮವಾರ ಮಧ್ಯರಾತ್ರಿಯ ನಂತರ ಮಂಗಳೂರು ಸರಕಾರೀ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆನ್ನಲು ತುಂಬಾ ವಿಷಾದಿಸುತ್ತೇವೆ. ಅವರು ಕಳೇಬರವನ್ನು ಮರುದಿವಸ ಕಡೆಕಾರಿಗೆ ತಂದು ಅಂತಿಮಕ್ರಿಯೆ ನಡೆಸಲಾಯಿತು. ದಿವಂಗತರು ಹಿತಮಿತವಾದ ನಡೆನುಡಿಯುಳ್ಳವರೂ ಸರಳ ಸಾದಾ ಜೀವನವೂ ಆಗಿದ್ದು ಜನಾನುರಾಗ ಗಳಿಸಿದ್ದರು. ಕೆಲವು ವರ್ಷಗಳ ವರೆಗೆ ವಿಶ್ವಯಿಂಕಿನ ಡ್ಯಾರೆಕ್ಟರಾಗಿದ್ದೂ, ಸ್ಥಳೀಯ ಶಾಲೆಯ ಸಲಹೆಗಾರ ಸಮಿತಿಸದಸ್ಯರಾಗಿದ್ದೂ ಸೇವೆ ನೂಡಿದ್ದರು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಆವರ ಹೆಂಡತಿ ಮಕ್ಕಳ ಹಾಗೂ ಕುಟುಂಬ ವರಿಗುಂಟಾದ ಆಪಾರ ದುಃಖದಲ್ಲಿ ನಮ ಸಂತಾಪವನ್ನು ಸೂಚಿಸುವು.

ಮಣಿಪಾಲ ಗೀತಾ ಮಂದಿರದಲ್ಲಿ

ಗೀತಾ ಜಯಂತಿ ಮತ್ತು ದ್ವಿತೀಯ ವಾರ್ಷಿಕೋತ್ಸವವು ತಾ. 3ರಂದು ಲೈಫ್ ಇನ್ಶೂರೆನ್ಸ್ ಕೋರ್ಪೊರೇಶನ್ ಆಫ್ ಇಂಡಿಯಾದ ಉಡುಪಿ ವಿಭಾಗದಲ್ಲಿ ಸೀನಿಯರ್ ಡಿವಿಜನಲ್ ಮ್ಯಾನೇಜರ್ ಶ್ರೀ ಕೆ. ಆರ್. ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಭಜನೆ ಮತ್ತು ಪೂಜೆಗಳಾದ ನಂತರ ಮಂದಿರ ಸಮಿತಿ ಅಧ್ಯಕ್ಷ ಶ್ರೀ ಟಿ. ಎ. ಪೈ ಗಳ ಸ್ವಾಗತಭಾಷಣವಾಯಿತು. ವರದಿವಾಚನಾನಂತರ ಬಳಿಕ ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ ಮತ್ತು ಉ. ಲಕ್ಷ್ಮೀನಾರಾಯಣ ಕಿಣಿಯವರ ಭಾಷಣಗಳಾದುವು ಉಪಾಧ್ಯಕ್ಷ ಶ್ರೀ ಟಿ ರಮೇಶ್ ಪೈಗಳು ಧನ್ಯವಾದವಿತ್ತರು. ರಾತ್ರಿ ಕಸ್ತೂರ್ಬಾ ಮಣಿಕಲ್ ಕಾಲೇಜಿನ ಕಲಾವಿದರಿಂದ ಡಾ| ಕೆ ಪಿ ಪೈಗಳು ಸ್ವರ್ಚಿಗಳಲ್ಲಿ ವಿಜಯೀಗಳಾದವರಿಗೆ ಪಾರಿತೋಷಕವಿತರಣೆ ಮಾಡಿದರು ಮಂದಿರದ ಬಾಲಕಿಯರು 'ನಸ್ಸ ಗೋಪಾಲ' ಅಭಿನಯಿಸಿದ ನಂತರ ಉಡುಪಿಯ ನಾಟ್ಯಕೂಟದವರಿಂದ 'ಸರ್ವಪಕ್ಷ ಸಮ್ಮೇಳನ' ಪ್ರದರ್ಶಿಸಲಾಯಿತು.

ಗೀತಾ ಜಯಂತಿ—ಅಂಬಲಪಾಡಿ ಗೀತಾ ಭವನದಲ್ಲಿ ದಿನಾಂಕ ೩ರಂದು ಗೀತಾ ಜಯಂತಿಯು ಶ್ರೀ ಕೆ. ಎಲ್ ಎನ್ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನೆರವೇರಿತು ಪ್ರಾರಂಭದಲ್ಲಿ ಶ್ರೀ ಅನಂತರಾಯರು ಉಡುಪರು ಗೀತೆಯ ಮೂರನೆ ಅಧ್ಯಾಯವನ್ನು ಪಠಿಸಿದರು ಆ ಮೇಲೆ, ಶ್ರೀ ಕೆ. ಪದ್ಮನಾಭ ಭಟ್ಟರು ಗೀತೆಯಲ್ಲಿ ಆಡಕವಾದ ಭಕ್ತಿ, ಕರ್ಮ ಮತ್ತು ಜ್ಞಾನಯೋಗಗಳ ಕುರಿತಾಗಿಯೂ ಶ್ರೀ ಗೋಪಾಲಕೃಷ್ಣ ಭಟ್ಟರು ಗೀತೆಯ ಮಾತ್ಸರ್ಯಕೆಯ ಬಗ್ಗೆಯೂ ಶ್ರೀ ಎಸ್ ನೋ ಪೀಡಂದರಾಯರು ವಿಶ್ವ ಧರ್ಮ ಮತ್ತು ಗೀತಾ ತತ್ವ ಎಂಬ ವಿಷಯದ ಮೇಲೆಯೂ ವ್ಯಾಖ್ಯಾನಿಸಿದ್ದರು. ಅಧ್ಯಕ್ಷರು ಗೀತೆಯು ಅಜ್ಯಾಪದ ಕುರಿತಾಗಿ ಉದ್ಬೋಧ ಭಾಷಣವಿತ್ತರೊಳಿತ ಸಭೆಯ ಮಂಗಳವಾಯಿತು.

ಕರ್ನಳ—ಇಲ್ಲಿಯ ಫಾರೆಸ್ಟ್ ಡೆಪ್ಯುಟಿ ತಹಸೀಲ್ದಾರರಾಗಿದ್ದ ಎಲ್. ಫೆರ್ನಾಂಡಿಸ್ ರವರು ಸರಕಾರಕ್ಕೆ ವಂಚನೆ ಮಾಡಿದರೆಂಬ ಆಪಾದನೆಯ ಮೇರೆಗೆ ಅವರನ್ನು ಸಸ್ ಪೆಂಡ್ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಕುಂಬಡಾಜೆ—ಸ್ಥಳೀಯ ಶ್ರೀ ಸುಬ್ರಮ್ಮಣ್ಯ ಎಯುಡೆಡ್ ಕಿರಿಯ ಪ್ರಾಥಮಿಕ ಶಾಲೆಮರಿಕ್ಕಾ ನವಲ್ಲಿ ತಾ. 2ನೇರಂದು 'ವೀರ ನಾಲ್ವಿ' ಎಂಬ ಪ್ರಸಂಗದ ಯಕ್ಷಗಾನ ಕೂಟವು ಶ್ರೀಗಳಾದ ಮಂದಪ ಮೂರೆ ಮಂಜಪ್ಪ ಸೆಟ್ಟರ ಮತ್ತು ಮಾಲಿಂಗ ರೈ ಇವರ ಸ್ಮರಣಾರ್ಥವಾಗಿ ಮಂದಪ ಮೂರೆ ಮಂಜಪ್ಪ ಸೆಟ್ಟರ ಮತ್ತು ಮಾಲಿಂಗ ರೈ ಇವರ ಸ್ಮರಣಾರ್ಥವಾಗಿ ಎನ್. ಸಾಧವ ಭಟ್ಟ, ವಾಸುದೇವ, ಅಮ್ಮುಣ್ಣಾಯ, ಎಸ್. ಎಸ್ ರೈ ಇವರ ಮೃದಂಗವಾದನ—ಕಿಟ್ಟಣ್ಣ ಸೆಟ್ಟ, ಪಿ. ಜೆ. ರೈ, ಪಿ ಎಸ್ ರೈ, ಎನ್. ಕಿಮ್ಮುಣ್ಣ ರೈ ಪಿ. ಎಸ್. ಭಟ್, ಪಿ. ತ್ಯಾಂಪಣ್ಣ ರೈ, ಸಿ. ವೆಂಕಪ್ಪ ರೈ, ಜೋಪಿ. ಮಣಿಮಾಣಿ ಸೋದರಾದವರ ಆರ್ಥಿಕಾಗಾರಿಕೆಯೊಂದಿಗೆ ಯಶಸ್ವಿಯಾಗಿ ಜರಿಗಿತು. ಶಾಲಾ ಮುಖ್ಯೋಪಾಧ್ಯಾಯರು ಶ್ರೀ ಪಿ ಸುಬ್ರಹ್ಮಣ್ಯ ಭಟ್ಟರು ಧನ್ಯವಾದಗಳನ್ನಿತ್ತರು

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction Madras.

ಮುದ್ದಣ ಸ್ಮಾರಕ ಸಾಹಿತ್ಯೋತ್ಸವ

ವು—ಸ್ಥಳೀಯ ಎಸ್. ಜಿ. ಎಸ್. ಕಾಲೇಜಿನಲ್ಲಿ ತಾ. 29, 30ಮತ್ತು ಡಿಸೆಂಬರ ತಾ. 1ರಲ್ಲು ಜರಗಿತು. ಪ್ರಾರಂಭ ದಿನದ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ವಹಿಸಿದ್ದರು. ಧಾರವಾಡದ ಶ್ರೀ ನೆಗಳೂರು ರಂಗನಾಥ ಮತ್ತು ಮಂಗಳೂರು ಗವರ್ನಮೆಂಟ್ ಕಾಲೇಜ್ ಕನ್ನಡ ಪ್ರಾಧ್ಯಾಪಕ ಶ್ರೀ ಎಮ್. ಆನಂದರಾಯರು ಮುಖ್ಯಭಾಷಣಗಾರರಿದ್ದರು. ರಾತ್ರಿ 'ಗೋವಿಂದ ಪಿಂಯ' (ಹಿಂದಿ) ಮತ್ತು 'ಪಂಜಭೂತ' (ಕನ್ನಡ) ನಾಟಕಗಳು ಅಭಿನಯಿಸಲ್ಪಟ್ಟವು. ಎರಡನೆ ದಿವಸದಲ್ಲಿ ಶ್ರೀ ಕೆ. ಶಿವರಾಮ ಕಾರಂತರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಬೈಕಾಡಿ ವೆಂಕಟಕೃಷ್ಣ ಐಯರು ಮುಖ್ಯ ಉಪನ್ಯಾಸ ಕರಿದ್ದರು. ರಾತ್ರಿ ಯಕ್ಷಗಾನ 'ಅರ್ಜುನ ಸುಧನ್ವ' ಬಯಲಾಟ ಪ್ರದರ್ಶನ ನಡೆಯಿತು. ಕೊನೆಯ ದಿನ ಪ್ರೊ ಪಿ. ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ನೇರಿದ ಉಪ್ಪ ವದಲ್ಲಿ ಶ್ರೀ ಕ. ಶಿ ಹರಿದಾಸ ಭಟ್ಟರು ಸ್ವಾಗತಭಾಷಣ ಮಾಡಿದರು. ಶ್ರೀ ಬಡಕ್ಕಿಲ ಕೃಷ್ಣಭಟ್ಟರು, ಎಡ್ಮೋಕೇಟ್ ಭಗ್ವಾಪತಿ ಅವರು 'ಕವಿ ಕತೆಗಳೋತ್ಸ' ವಿಷಯದಲ್ಲೂ, ಮೈಸೂರು ಮಹಾರಾಜ ಕಾಲೇಜಿನ ತೆಲುಗು ಪ್ರಾಧ್ಯಾಪಕ ವಿದ್ವಾನ್ ಶ್ರೀ ಕೆ. ಸುಬ್ಬರಾಮಪ್ಪನವರು 'ತೆಲುಗು-ಕನ್ನಡ' ಸಾಹಿತ್ಯದ ವಿಷಯದಲ್ಲೂ ಭಾಷಣ ಮಾಡಿದರು ರಾತ್ರಿ 'ಮಹಾಶ್ವೇತೆ ಮತ್ತು ಶುದ್ರಕುಂಬಿ' ನಾಟಕಗಳು ಅಭಿನಯಿಸಲ್ಪಟ್ಟವು.

In the Court of the District Munsif of Mangalore

S. C. No. 445/57.

Between:-

K. G. Sankappa Bhandary —Plaintiff.

and

Y. Anandaram Shetty —Defendant

To,

Y Anandaram Shetty son of K Venkappa Shetty Vakil, Coondapur town - Defendant;

Please take notice that the above suit filed by the plaintiff for the recovery of Rs 160-12 Np's against you is posted to 14—12—1957 at 11 A. M. for your appearance before the above court If you fail to appear before the said court on the said date, either in person or through a pleader the matter will be decided in your absence.

By order of the court

(*Sd*) N. Mahabala
Advocate for Plaintiff.

Mangalore dated 2—12—1957.

ಮಂಗಳೂರು

ಯುವಕ ಕಾಂಗ್ರೆಸ್ ಸಭೆಯು—

ಬಜ್ಪೆ ವಾರ್ಡ್ ಕಾಂಗ್ರೆಸ್ ಸಮಿತಿಯ ಈಚೀ ರಿಯಲ್ಲಿ ಮುನಿಸಿಪಲ್ ಕೌನ್ಸಿಲರ್ ಶ್ರೀ ಕೆ. ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ.ಯವರು ಯುವಕ ಸಂಘಟನೆಯ ಮಹತ್ವದ ವಿಷಯದಲ್ಲಿ ಭಾಷಣಮಾಡಿದರು. ಡಾ. ಬಿ. ವಿ. ಮಹಾಯಸ್, ಶ್ರೀಗಳಾದ ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ಗಜಾನನ ಪಂಡಿತ್, ಎಮ್. ಎಲ್. ಎ; ಎಫ್. ಎಕ್ಸ್. ಡಿ. ಪಿಂಟೊ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಎ. ಖಾದರ್, ಅವರು ಧನ್ಯವಾದವನ್ನಿತ್ತರು.

ಜಿಲ್ಲಾ ಅಭಿವೃದ್ಧಿ ಮತ್ತು ಹಿತ ಚಿಂತನಾ ಬೋರ್ಡಿನ ಸಭೆಯು—

ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಬಿ. ಬಿ. ಶೆಟ್ಟರು ಬೋರ್ಡಿನ ಕಾರ್ಯಕಲಾಪಗಳ ವರದಿಯನ್ನು ಓದಿದರು. ನವೆಂಬರಿಯಲ್ಲಿ ಬೋರ್ಡಿನ ಕಚೇರಿಯಿಂದ ಕಳಪೆ ಆರು ತಿಂಗಳುಗಳಲ್ಲಿ ಸಾಧಿಸಲಾದ ಕಾರ್ಯಕಲಾಪಗಳನ್ನು ನಮೂದಿಸಲಾಗಿತ್ತು. ಮೈಸೂರು ರಾಜ್ಯ ಆಡಳಿತ್ವ ಕೌನ್ಸಿಲೆಗೆ ಚುನಾಯಿಸಲ್ಪಟ್ಟ ಸಿ. ಕೆ. ಬೋರ್ಡಿನ ಕಾರ್ಯದರ್ಶಿ ಶ್ರೀ ಬಿ. ಬಿ. ಶೆಟ್ಟರನ್ನು ಈ ಸಭೆಯಲ್ಲಿ ಗೌರವಿಸಲಾಯಿತು.

ದ ಕ ಜಿಲ್ಲಾ ಬೋರ್ಡಿನ ಸಭೆಯು—

ತಾ. ೩೦ರಂದು ಶ್ರೀ ಬಿ. ಮಂಜಯ್ಯ ಜೆ ಪ್ಪಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾವಾಸ್ಪದವಾದ ಕಾರಣೋಪಾತ್ತ ತಾಲೂಕಿನ ಕನ್ನಡ ಪ್ರದೇಶಗಳಾದ ಕುಂಬಳೆ ಮತ್ತು ಮಂಜೇಶ್ವರ ಫಿರ್ಕಗಳನ್ನು ಮೈಸೂರು ರಾಜ್ಯದೊಡನೆ ವಿಲೀನಗೊಳಿಸಬೇಕು. ವಿವಾದಾಸ್ಪದವಾದ ಕಾಸರಗೋಡು ಫಿರ್ಕವನ್ನು ಪಥ್ಯ ಸ್ಪಿಕೆಗೆ ಒಪ್ಪಿಸಬೇಕೆಂಬುದಾಗಿ ಮೈಸೂರ, ಕೇರಳ ಮತ್ತು ಕೇಂದ್ರ ಸರಕಾರಗಳನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಎ. ಭೀಮ ಭಟ್ಟರ ನಿರ್ಣಯವು ಶ್ರೀ ಎ. ಕೃಷ್ಣಶೆಟ್ಟಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಪಾಸಾಯಿತು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯು—

ತಾ. ೨೮ರಂದು ಜರಗಿತು. ಕಾಸರಗೋಡು ತಾಲೂಕಿನ ಕುಂಬಳೆ ಮತ್ತು ಮಂಜೇಶ್ವರ ಫಿರ್ಕಾಗಳ ಮಟ್ಟಿಗೆ ಒನ್ಮತಾಭಿಪ್ರಾಯವಿರುವುದರಿಂದ ಆ ಎರಡು ಫಿರ್ಕಾಗಳನ್ನು ಕೂಡಲೇ ಮೈಸೂರು ರಾಜ್ಯಕ್ಕೆ ಸೇರಿಸಬೇಕು. ಕಾಸರಗೋಡು ಫಿರ್ಕಾದ ವಿಚಾರವನ್ನು ಮಧ್ಯಸ್ಥಿಕೆಗೆ ಬಿಟ್ಟುಕೊಡಬೇಕು ಮತ್ತು ಈ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕೆಂದು ಮೈಸೂರು, ಕೇರಳ ಮತ್ತು ಕೇಂದ್ರ ಸರಕಾರಗಳನ್ನು ನಿರ್ಣಯವಾಯಿತು. ಶ್ರೀ ಬಿ. ಬಿ. ಶೆಟ್ಟರು ನಿರ್ಣಯವನ್ನು ತಂದಿದ್ದು ಅದು ಶ್ರೀ ಜಿ. ಆರ್. ಕಕ್ಕೇರ, ಎಮ್. ಎಲ್. ಎ ಅವರಿಂದ ಅನುಮೋದಿಸಲ್ಪಟ್ಟಿತು.

ರೋಟರಿ ಕ್ಲಬ್ಬಿನ ಸಭೆಯು—

ತಾ 28ರಂದು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಶ್ರೀ ಕೆ. ಪಿ. ಕಕ್ಕೂರಿಯವರು ಗತ ಸಭೆಯ ವರದಿಯನ್ನೋದಿದರು. ಸ್ಥಳೀಯ ಗವರ್ನಮೆಂಟ್ ಕಾರೇಜಿನ ಪ್ರಿನ್ಸಿಪಾಲ್ ಶ್ರೀ ಸಿ. ವಿ. ಜೋಶಿಯವರು "ವಿಶ್ವವಿದ್ಯಾಲಯದ ಶಿಕ್ಷಣ" ಎಂಬ ವಿಷಯದ ಮೇಲೆ ಭಾಷಣಮಾಡುತ್ತಾ, ದಕ್ಷಿಣ ಕನ್ನಡದ ಕಾಲೇಜುಗಳು ಈಗ ಪ್ರಿ ಯುನಿವರ್ಸಿಟಿ ವರ್ಜಿಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯ ಕ್ರಮವನ್ನು ಜಾರಿಗೆ ಮತ್ತು ಸೀನಿಯರ್ ಡಿಗ್ರಿ ವರ್ಜಿಗಳಲ್ಲಿ ಮುಮ್ಮಾಸು ವಿಶ್ವವಿದ್ಯಾಲಯದ ಪಠ್ಯ ಕ್ರಮವನ್ನು ಅನುಸರಿಸುತ್ತಿವೆ. ಈ ವಿದ್ಯಾರ್ಥಿಗಳನ್ನು ಯಾರು ಪರೀಕ್ಷೆಗೆ ಕುಳಿತು ಈವರೆಗೆ ಯಾವ ನಿರ್ಣಾಯಕವೂ ಆಗಿಲ್ಲವಾದುದರಿಂದ ಈ ಪರೀಕ್ಷೆಯನ್ನು ನಡೆಸುವಂತೆ ಮೈಸೂರು ವಿಶ್ವವಿದ್ಯಾಲಯವನ್ನೂ ಕರ್ನಾಟಕ ಮತ್ತು ಮುಮ್ಮಾಸು ವಿಶ್ವವಿದ್ಯಾಲಯಗಳನ್ನು ಅದಷ್ಟು ಬೇಗನೆ ಕೇಳಿಕೊಳ್ಳಬೇಕೆಂದರು. ಈ ದಿಸೆಯಲ್ಲಿ ಬೇಗನೆ ಕಾರ್ಯಾಚರಣೆಯನ್ನು ಕೈಕೊಳ್ಳಲಿದ್ದಕ್ಕಾಗಿ ಈ ವರ್ಷ ಪ್ರಿ ಯುನಿವರ್ಸಿಟಿ ಮತ್ತು ಜೂನಿಯರ್, ಸೀನಿಯರ್ ಡಿಗ್ರಿ ವರ್ಜಿಗಳಲ್ಲಿ ರುವವರಿಗೆ ಶಾರೀರ್ಷಿಯ ಭವಿಷ್ಯವೇನೆಂದು ಹೇಳುವುದು ಸಾಧ್ಯವಿಲ್ಲವೆಂದರು. ಜಿಲ್ಲೆಯ ಶಾಸನ ಸಭಾ ಸದಸ್ಯರು ಈ ದಿಸೆಯಲ್ಲಿ ಕಾರ್ಯಾಚರಣೆ ಕೈಕೊಳ್ಳುವುದು ಅಗತ್ಯವೆಂದು ಅಧ್ಯಕ್ಷರು ಹೇಳಿದರು.

ಕಲ್ಯಾಣಪುರ, ಮಾಬುಕಳ, ಉಪ್ಪುಂದ ನದಿಗಳಿಗೆ—

ಸೇತುವೆಯನ್ನು ಕಟ್ಟಿಸುವರೆ ತಯಾರಿಸಲಾದ ಯೋಜನೆಗೆ ಕೇಂದ್ರ ಸರಕಾರದ ಕೊನೆಯ ಮಂಜೂರಾತಿ ದೊರೆತಿರುವುದು. ಜಿಲ್ಲೆಯ ಒಳನಾಡಿನ ಹಾಲಾಡಿ, ವಂಡ್ಸೆ, ಹಿಡ್ಕಲ್ ಮೊದಲಾದೆಡೆಗಳಲ್ಲಿ ಸೇತುವೆ ನಿರ್ಮಾಣಮಾಡುವ ಯೋಜನೆಯನ್ನು ಮಂಜೂರುಮಾಡುವ ಬಗ್ಗೆ ಕೇಂದ್ರ ಸರಕಾರದ ಸಾರಿಗೆ-ಸಂಪರ್ಕ ಖಾತೆಯ ಮಂತ್ರಿ ಮತ್ತು ಮೈಸೂರಿನ ಮುಖ್ಯ ಮಂತ್ರಿಗಳು ಆಶ್ವಾಸನೆಯಿತ್ತಿರುವರಾಗಿ ತಿಳಿದುಬರುತ್ತದೆ.

ನಗರ ಸಭೆಯು—

ತಾ. 29ರಂದು ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾರೆಗಳ ಅಧ್ಯಾಪಕರಿಗೆ ಹೊಸ ವೇತನ ಮಟ್ಟವನ್ನು ಮಂಜೂರು ಮಾಡುವ ವಿಷಯವನ್ನು ಜೂನಿಯರ್ ಡಿಗ್ರಿ ವರ್ಜಿಗಳಲ್ಲಿ ಮುಮ್ಮಾಸು ವಿಶ್ವವಿದ್ಯಾಲಯದ ಪಠ್ಯ ಕ್ರಮವನ್ನು ಅನುಸರಿಸಿರುತ್ತಿವೆ. ಈ ವಿದ್ಯಾರ್ಥಿಗಳನ್ನು ಯಾರು ಪರೀಕ್ಷೆಗೆ ಕುಳಿತು ಈವರೆಗೆ ಯಾವ ನಿರ್ಣಾಯಕವೂ ಆಗಿಲ್ಲವಾದುದರಿಂದ ಈ ಪರೀಕ್ಷೆಯನ್ನು ನಡೆಸುವಂತೆ ಮೈಸೂರು ವಿಶ್ವವಿದ್ಯಾಲಯವನ್ನೂ ಕರ್ನಾಟಕ ಮತ್ತು ಮುಮ್ಮಾಸು ವಿಶ್ವವಿದ್ಯಾಲಯಗಳನ್ನು ಅದಷ್ಟು ಬೇಗನೆ ಕೇಳಿಕೊಳ್ಳಬೇಕೆಂದರು. ಈ ದಿಸೆಯಲ್ಲಿ ಬೇಗನೆ ಕಾರ್ಯಾಚರಣೆಯನ್ನು ಕೈಕೊಳ್ಳಲಿದ್ದಕ್ಕಾಗಿ ಈ ವರ್ಷ ಪ್ರಿ ಯುನಿವರ್ಸಿಟಿ ಮತ್ತು ಜೂನಿಯರ್, ಸೀನಿಯರ್ ಡಿಗ್ರಿ ವರ್ಜಿಗಳಲ್ಲಿ ರುವವರ ಶಾರೀರ್ಷಿಯ ಭವಿಷ್ಯವೇನೆಂದು ಹೇಳುವುದು ಸಾಧ್ಯವಿಲ್ಲವೆಂದರು. ಜಿಲ್ಲೆಯ ಶಾಸನ ಸಭಾ ಸದಸ್ಯರು ಈ ದಿಸೆಯಲ್ಲಿ ಕಾರ್ಯಾಚರಣೆ ಕೈಕೊಳ್ಳುವುದು ಅಗತ್ಯವೆಂದು ಅಧ್ಯಕ್ಷರು ಹೇಳಿದರು.

ಕಲ್ಯಾಣಪುರ, ಮಾಬುಕಳ, ಉಪ್ಪುಂದ ನದಿಗಳಿಗೆ—

ಸೇತುವೆಯನ್ನು ಕಟ್ಟಿಸುವರೆ ತಯಾರಿಸಲಾದ ಯೋಜನೆಗೆ ಕೇಂದ್ರ ಸರಕಾರದ ಕೊನೆಯ ಮಂಜೂರಾತಿ ದೊರೆತಿರುವುದು. ಜಿಲ್ಲೆಯ ಒಳನಾಡಿನ ಹಾಲಾಡಿ, ವಂಡ್ಸೆ, ಹಿಡ್ಕಲ್ ಮೊದಲಾದೆಡೆಗಳಲ್ಲಿ ಸೇತುವೆ ನಿರ್ಮಾಣಮಾಡುವ ಯೋಜನೆಯನ್ನು ಮಂಜೂರುಮಾಡುವ ಬಗ್ಗೆ ಕೇಂದ್ರ ಸರಕಾರದ ಸಾರಿಗೆ-ಸಂಪರ್ಕ ಖಾತೆಯ ಮಂತ್ರಿ ಮತ್ತು ಮೈಸೂರಿನ ಮುಖ್ಯ ಮಂತ್ರಿಗಳು ಆಶ್ವಾಸನೆಯಿತ್ತಿರುವರಾಗಿ ತಿಳಿದುಬರುತ್ತದೆ.

ನಗರ ಸಭೆಯು—

ತಾ. 29ರಂದು ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾರೆಗಳ ಅಧ್ಯಾಪಕರಿಗೆ ಹೊಸ ವೇತನ ಮಟ್ಟವನ್ನು ಮಂಜೂರು ಮಾಡುವ ವಿಷಯವನ್ನು ಜೂನಿಯರ್ ಡಿಗ್ರಿ ವರ್ಜಿಗಳಲ್ಲಿ ಮುಮ್ಮಾಸು ವಿಶ್ವವಿದ್ಯಾಲಯದ ಪಠ್ಯ ಕ್ರಮವನ್ನು ಅನುಸರಿಸಿರುತ್ತಿವೆ. ಈ ವಿದ್ಯಾರ್ಥಿಗಳನ್ನು ಯಾರು ಪರೀಕ್ಷೆಗೆ ಕುಳಿತು ಈವರೆಗೆ ಯಾವ ನಿರ್ಣಾಯಕವೂ ಆಗಿಲ್ಲವಾದುದರಿಂದ ಈ ಪರೀಕ್ಷೆಯನ್ನು ನಡೆಸುವಂತೆ ಮೈಸೂರು ವಿಶ್ವವಿದ್ಯಾಲಯವನ್ನೂ ಕರ್ನಾಟಕ ಮತ್ತು ಮುಮ್ಮಾಸು ವಿಶ್ವವಿದ್ಯಾಲಯಗಳನ್ನು ಅದಷ್ಟು ಬೇಗನೆ ಕೇಳಿಕೊಳ್ಳಬೇಕೆಂದರು. ಈ ದಿಸೆಯಲ್ಲಿ ಬೇಗನೆ ಕಾರ್ಯಾಚರಣೆಯನ್ನು ಕೈಕೊಳ್ಳಲಿದ್ದಕ್ಕಾಗಿ ಈ ವರ್ಷ ಪ್ರಿ ಯುನಿವರ್ಸಿಟಿ ಮತ್ತು ಜೂನಿಯರ್, ಸೀನಿಯರ್ ಡಿಗ್ರಿ ವರ್ಜಿಗಳಲ್ಲಿ ರುವವರ ಶಾರೀರ್ಷಿಯ ಭವಿಷ್ಯವೇನೆಂದು ಹೇಳುವುದು ಸಾಧ್ಯವಿಲ್ಲವೆಂದರು. ಜಿಲ್ಲೆಯ ಶಾಸನ ಸಭಾ ಸದಸ್ಯರು ಈ ದಿಸೆಯಲ್ಲಿ ಕಾರ್ಯಾಚರಣೆ ಕೈಕೊಳ್ಳುವುದು ಅಗತ್ಯವೆಂದು ಅಧ್ಯಕ್ಷರು ಹೇಳಿದರು.

ಕಲ್ಯಾಣಪುರ, ಮಾಬುಕಳ, ಉಪ್ಪುಂದ ನದಿಗಳಿಗೆ—

ಸೇತುವೆಯನ್ನು ಕಟ್ಟಿಸುವರೆ ತಯಾರಿಸಲಾದ ಯೋಜನೆಗೆ ಕೇಂದ್ರ ಸರಕಾರದ ಕೊನೆಯ ಮಂಜೂರಾತಿ ದೊರೆತಿರುವುದು. ಜಿಲ್ಲೆಯ ಒಳನಾಡಿನ ಹಾಲಾಡಿ, ವಂಡ್ಸೆ, ಹಿಡ್ಕಲ್ ಮೊದಲಾದೆಡೆಗಳಲ್ಲಿ ಸೇತುವೆ ನಿರ್ಮಾಣಮಾಡುವ ಯೋಜನೆಯನ್ನು ಮಂಜೂರುಮಾಡುವ ಬಗ್ಗೆ ಕೇಂದ್ರ ಸರಕಾರದ ಸಾರಿಗೆ-ಸಂಪರ್ಕ ಖಾತೆಯ ಮಂತ್ರಿ ಮತ್ತು ಮೈಸೂರಿನ ಮುಖ್ಯ ಮಂತ್ರಿಗಳು ಆಶ್ವಾಸನೆಯಿತ್ತಿರುವರಾಗಿ ತಿಳಿದುಬರುತ್ತದೆ.

ನಗರ ಸಭೆಯು—

ತಾ. 29ರಂದು ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾರೆಗಳ ಅಧ್ಯಾಪಕರಿಗೆ ಹೊಸ ವೇತನ ಮಟ್ಟವನ್ನು ಜಾರಿಗೊಳಿಸುವುದು ಎಂದು ನಿರ್ಣಯವಾಯಿತು. ಕಾಫಿಕಾಡ್ ಮುನಿಸಿಪಲ್ ಹಾ. ಎ. ಶಾಲೆಯಲ್ಲಿ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಕೈಲಚಿತ್ರವನ್ನಿಡಲು ಡಾ. ಬಿ. ಎ. ಮಹಾಯಸರಿಗೆ ಅನುಮತಿಕೊಡಲಾಯಿತು.

ಶಿರ್ವ—ಸ್ಥಳೀಯ ಸೈಂಟ್ ಮೇರೀಸ್ ಹೈಸ್ಕೂಲಿನಲ್ಲಿ ತಾ. 23ರಂದು ಶ್ರೀ ಟಿ. ಎ. ಪೈಗಳು ತಮ್ಮ ಸದೇಶ ಪ್ರವಾಸದ ಅನುಭವಗಳ ಕುರಿತು ಭಾಷಣಮಿತ್ತರು. ಶಾಲಾ ಮೆನೇಜರ್ ರೆ ಫಾ| ಎಚ್. ಗೊನ್ಸಾಲ್ವೀಸರು ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಹೆಡ್ಮಾಸ್ಟರ್ ಶ್ರೀ ಎಲ್. ಮೆಂಡೋನ್ಸರು ಸ್ವಾಗತಿಸಿದರು. ಡಾ. ಕೆ ಆಚಾರ್ಯರು ಮಾನಪತ್ರವಿತ್ತರು. ಶ್ರೀ ಎಮ್ ಗೋಪಾಲಕೃಷ್ಣ ಪೈಗಳು ಧನ್ಯವಾದವಿತ್ತರು.

ಬೈರಂಜೆ—ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿಸಂಘದ ಸ್ಥಾಪನೆಯು ತಾ 23ರಲ್ಲು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಕೇಶವ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಆಜ್ಜು ತ ನಾಯಕ ಮತ್ತು ವೈ ಪಾಂಡುರಂಗ ಶಾಸ್ತ್ರಿಗಳು ಸಂಘದ ಉದ್ದೇಶಗಳನ್ನು ವಿವರಿಸಿದರು. ನಂತರ ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿತು.

ಕೆಂಜನೂರು—ತಾ 22ರಂದು ಬೆಳಿಗ್ಗೆ ದಿವಂಗತ ಬಸ್ರೂರು ಮಹಾಲಿಂಗ ಶೆಟ್ಟರ ಧರ್ಮಪತ್ನಿ ಶ್ರೀಮತಿ ಕೆಂಜನೂರು ದೊಡ್ಡ ಮನೆ ನಾಗಮ್ಮ ಸೆಟ್ತಿಯವರು ತನ್ನ 90ನೆ ವಯಸ್ಸಿನಲ್ಲಿ ನಿಧನರಾದರು.

ಸುಬ್ರಹ್ಮಣ್ಯ—ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಚಂಪಾಷಷ್ಠಿ ಮಹೋತ್ಸವದ ಅಂಗವಾಗಿ ತಾ. 24ರಂದು ಧರ್ಮ ಸಮ್ಮೇಳನವು ಶ್ರೀ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿಭುದೇಂದ್ರ ತೀರ್ಥರಾಜಾಸಿಗಳವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀಗಳಾದ ಕೃಷ್ಣ ಭಟ್, ಕೆ ಕಾಂತರ್ಕೆ ಮೊದಲಾದವರ ಭಾಷಣಗಳಾದುವು. ಆರಂಭದಲ್ಲಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತಭಾಷಣಮಾಡಿದರು. ಕೊನೆಯಲ್ಲಿ ಶ್ರೀ ಬೆಳ್ಳಾರೆ ಕಿಟ್ಟಣ್ಣ ರೈಗಳು ಧನ್ಯವಾದವಿತ್ತರು.

ದೇಲಂಪಾಡಿ—ಇಲ್ಲಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 23ರಲ್ಲು ನಡೆದ ಸಭೆಯಲ್ಲಿ ಅಧ್ಯಕ್ಷ ಸ್ಥಾನವಹಿಸಿದ ಶ್ರೀ ಕರಿಕ್ಕಾಡು ಮಾಸ್ತರ್ ವಿಷ್ಣುಮೂರ್ತಿ ಭಟ್ಟರು ಯಕ್ಷಗಾನ ಕಲೆಯ ಮಹತ್ವವನ್ನು ವಿವರಿಸಿದರು. ಅಂದು ಶ್ರೀಕೃಷ್ಣ ಪೂಜೆ ಮತ್ತು ವೀರ ಅಭಿನನ್ನು ಎಂಬ ಪ್ರಸಂಗದ ಗುಳ್ಟಗಾನ ಕಾಲಕ್ಷೇಪವಾಯಿತು.

ಅಮೆರಿಕೆಯ ಮಹತ್ವದ ಪಾತ್ರ

(ಹಳೆ ಸುದ್ದಿಯಿಂದ)

ವಾಗಿಜೆ. ಈಗ ಭಾರತದಲ್ಲಿ ಸಂಚಾರ ಮಾಡುತ್ತಿರುವ ಫ್ರಾನ್ಸಿನ ರಾಜಪ್ರತಿನಿಧಿ ಶ್ರೀ ಜಿ ಎಸ್ ಪೊಮಿದಾರವರು ಭಾರತ ದಲ್ಲಿ ಬಂಡವಾಳ ಹೂಡಲು ಈಗ ಪರಾ ರ್ಶನ ವನ್ನು ಏರ್ಪಡಿಸಿದ್ದಾರೆ. ಅವರು ಸಂಜೆ ಪ್ರಯುಕ್ತಗೋಷ್ಠಿಯ ಆಮೆರಿಕೆಯೊ ಡನೆ ನಡೆಸುತ್ತಿರುವ ಸಹಕಾರಿತೆಗಳನ್ನು ಬೆಳೆಸಲಿರುವರು ಅವರು ದಶಂಬರೆ ತಿಂಗಳ ಮಧ್ಯಕಾಲದಲ್ಲಿ ವಾಷಿಂಗ್ಟನ್ನಿಗೆ ಮರಳುವ ನಿರೀಕ್ಷೆಯಿದೆ.

ಭಾರತದ ದ್ವಿತೀಯ ಯೋಜನೆಯು ಬಹುತೇಕ ಅಮೆರಿಕೆಯು ತೀಕ್ಷ್ಣದಲ್ಲಿ ಕೈಗೊಳ್ಳುವ ಸಹಾಯ ಧನದ ಮೊತ್ತದ ಮೇಲೆ ನಿರ್ಧರವಾಗಿದೆ ಎಂದು ಈಗ ಖಡಾ ಖಂಡಿತವಾಗಿ ಹೇಳಬಹುದು. ಆದುವರೆಗೆ ಈ ವಿಷಯದಲ್ಲಿ ಯಾವ ಊಹಾ ಪೋಹವೂ ಮಾಡಿದರೂ ಅದು ನಿಸ್ಸಂಶಯೋಜಕವೆಂಬುದರಲ್ಲಿ ಸಂದೇಹವಿಲ್ಲ. ಅಂತೂ ಅಮೆರಿಕೆಗೆ ಭಾರತಕ್ಕೆ ಸಹಾಯ ನೀಡಲು ಮನಸ್ಸಿನೆ; ಆದರೆ, ಅದೇನು ನಿರ್ಣಯ ಕೈಗೊಳ್ಳುವುದೋ ಅದನ್ನು ಕಾದುನೋಡಬೇಕು; ಅಷ್ಟೆ.

ದಿ ನಿಜಯೂ ಬೇಂಕ್, ಲಿಮಿಟೆಡ್, ಬೈಂದೂರು, ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗದಿಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಸಲ-ವ-ಬಡ್ಡಿ ಯೊವುದನ್ನೂ ಇನ್ನೂ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಅಲ್ಲದೆ, ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರೆಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗದುಗಳನ್ನು ಇದೇ ದಶಂಬರ ತಿಂಗಳ 20ನೇ ಶುಕ್ರವಾರ ಅಪರಾಹ್ನ ಗಂಟೆ 3.0ಕ್ಕೆ ಯೊ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಮುನಃ ನೋಟೀಸು ಕೊಡದೇನೇ ಬೇಂಕಿನ ವತಿಯಿಂದ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಜಂಜ್ಯಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ. ನ.ಪೈ
1115/55	ಶ್ರೀ ಸಣ್ಣ, ಸುಕ್ರನ ಮಗ, ತೋಟ್ಟಿ, ಬೈಂದೂರು	15 0
1211/55	,, ಹಟ್ಟುವದ ಮಹಾಬಲ ಸೇರುಗಾರ, ಜಗ್ಗಯ್ಯ ಸೇರುಗಾರರೆ ಮಗ, ಪಡುವರಿ.	80 81
62/56	,, ಯು. ಸುರೇಶ ನಾಯಕ್, ನಾರಾಯಣ ನಾಯಕರ ಮಗ ಬೈಂದೂರು.	26 87
383/56	,, M. V. ಜೋಸೆಫ್, ವಾಕರಿಯವರ ಮಗ, ಹಾಲಿಪಾಲ್ಕಟ್ಟಿ ಸಬ್ಲೆರಿಯವರು ಕೊಲ್ಲೂರು, P. O.	76 69
604/56	,, ಮದ್ದೋಡಿ ರಾಮಕೃಷ್ಣ ಸೇರಿಗಾರ, ಹನುಮಂತ ಸೇರುಗಾರರೆ ಮಗ, ಮಯ್ಯಾಡಿ.	34 37
660/56	,, ಮದ್ದೋಡಿ ನಾರಾಯಣ ಸೇರುಗಾರು, ಸೇಷಯ್ಯ ಸೇರುಗಾರರೆ ಮಗ, ಮಯ್ಯಾಡಿ.	28 38
682/56	,, ಕೋಟಿ ರಾಮ ಸೇರುಗಾರ, ದಾಸಪ್ಪ ಸೇರುಗಾರರೆ ಮಗ, ಪಡುವರಿ.	47 32
697/56	,, ಮದ್ದೋಡಿ ಮಂಜುನಾಥ ಸೇರುಗಾರ, ಗಣಪಯ್ಯ ಸೇರುಗಾರರೆ ಮಗ, ಮಯ್ಯಾಡಿ.	68 06
750/56	,, ಸಣ್ಣ, ಸುಕ್ರನ ಮಗ, ತೋಟ್ಟಿ, ಬೈಂದೂರು.	13 87
816/56	,, ಯು. ನಾರಾಯಣ ನಾಯಕ್, ಟೀಚರ್, ಬೋರ್ಡ್ ಎಲಿಮೆಂಟರಿ ಶಾಲೆ, ಬೈಂದೂರ.	45 19
878/56	,, ಕೋಟಿ ಸುಬ್ರಾಯ ಸೇರುಗಾರ, ದಾಸಪ್ಪ ಸೇರುಗಾರರೆ ಮಗ, ಪಡುವರಿ.	11 62
886/56	ಶ್ರೀಮತಿ ತುಳಸಿ, ಕೊಡನಾಡಿ, ಮಾಬುನಾಥ ಸೇರುಗಾರರ ಮಗಳು, ಹೊಸಾಡು ಯೆತ್ತರೆ ಗಿಳ್ಳಮ್ಮ, ಬೈಂದೂರು.	11 62
1067/56	ಶ್ರೀ ಹಟ್ಟುವದ ಮಹಾಬಲ ಸೇರುಗಾರ, ಬಗ್ಗಯ್ಯ ಸೇರುಗಾರರೆ ಮಗ ಪಡುವರಿ.	60 94
1122/56	ಶ್ರೀಮತಿ ಮಂಜಿದೇವಡಿಗಿತ್ತಿ, ಮಲಿಯ ಮಗಳು, ಹಾವಳಿಸುನೆ, ಬೀಯಾನ್ಸು, ಬೈಂದೂರು.	16 88
790/55	ಶ್ರೀ ಹಟ್ಟುವದ ಮಹಾಬಲ ಸೇರುಗಾರ, ಬಗ್ಗಯ್ಯ ಸೇರುಗಾರರೆ ಮಗ ಪಡುವರಿ.	11 72

ಬೈಂದೂರು, 29_11_'57.

ಎಚ್. ರಾಜೀವ ಶೆಟ್ಟಿ, ಏಜಂಟ್.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 345/1957

ದಿ

ಚಿತ್ರ ಪ್ರಪಂಚ

ಕನ್ನಡ ಮಾಯಾಬಜಾರ್

ಮಾಯೆ

ಎಂತಹ ಅರ್ಥವ್ಯಾಪ್ತಿಯುಳ್ಳ ಶಬ್ದ ಎಷ್ಟು ಅರ್ಥ ಗರ್ಭಿತವಾದ ಶಬ್ದ

ಜಗತ್ತನ್ನು ಸೃಷ್ಟಿಸಿ ನಡೆಸುತ್ತಿರುವ ಮಹಾ ಶಕ್ತಿ ಮಾಯೆ- ಶಕ್ತಿ ಮಾಯೆ, ದೈವನಾಯೆ ಕಾರ್ಯಕಾರಣಗಳ ಕರ್ಮಕಥೆಯ ಹಿಂಬದಿಯಲ್ಲಿಯೂ ಈ ಮಾಯೆಯ ಮಾಯಾಜಾಲ ಕಣ್ಣೆದುರಿನಲ್ಲಿರುವ ಪ್ರತ್ಯಕ್ಷ ವಸ್ತುಗಳು ನಿಜವಲ್ಲ. ಅವು ಮಾಯಾಜನಿತ, ಮಾಯಾ ನಿರ್ಮಿತ.

ಬಟ್ಟೆಯಲ್ಲಿ ಎಲ್ಲವೂ ಮಾಯಾಜಾಲದಲ್ಲಿ ಸಿಕ್ಕಿರುವ ಬರಾಜರಗಳು, ಅವುಗಳ ಜೀವನ ಮಾಯಾಬಜಾರಿನಲ್ಲಿ

ಮಾಯೆಯಿಂದಲೇ ನಾವು ಕರ್ಮ ಜೀವಿಗಳು.

ಈ ಕರ್ಮಕಾಂಡದ ಪ್ರಚೋದನ ಶಕ್ತಿಯೂ ನಮ್ಮೊಳಿಜೇ ಅಡಗಿರುವುದು ಅದರಲ್ಲಿಯೇ ಎಲ್ಲ ಕಾರ್ಯಗಳ ಪರಂಪರೆ

ಮಾನವ ಜೀವನದಲ್ಲಿರುವ ಮಮತಾಕಾಂಕ್ಷೆಯೇ ಇದರ ತಳಹದಿಯೆಂದು ತಿಳಿದು ಬರುವುದು

ಆಕಾಂಕ್ಷೆಯು ಗುರಿಯು ತಿಳಿದಿದೆ ನಮಗೆ, ಆದರೆ ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಅದೃಷ್ಟವಾದ ಮಾಯಾಜಾಲ.

ಆ ವ್ಯೂಹದಲ್ಲಿ ಸಿಕ್ಕಿ ತೊಳಲಿ, ನೊಂದು, ಕೆಲಸಾರಿ ಪರಿವರ್ತರಾಗಿ ಜೀವನವನ್ನು ಸಾಗಿಸುವೆವು ಏನೇ ಆಗಲಿ, ನಾವು ಮಾಯಾಬಜಾರಿನಲ್ಲಿ ಹರಿದಾಡುವೆವು.

ಈ ಗಹನವಾದ ಮತ್ತು ಸ್ವಾರಸ್ಯವಾದ ಅಂಶವನ್ನು "ಮಾಯಾಬಜಾರ್" ಕೃತಿಯಲ್ಲಿ ವಿಜಯರವರು ಶಶಿರೇಖಾ ಪರಿಣಯದ ಕಥೆಯಾಗಿ ಚಿತ್ರಿಸಿ ತಮ್ಮ ಮುಂದೆ ಇಟ್ಟಿರುವರು.

ಪುರಾಣದಿಂದ ಆಯ್ದಿರುವ ಕಥಾವಸ್ತು, ಜನನಿದಿತವಾದ ಕಥಾನಕೆ ಅಲ್ಲಿಯ ಪಾತ್ರಗಳೆಲ್ಲಾ ನಮಗೆ ಚಿರಪರಿಚಿತ

ಆದರೂ ಅವರನ್ನು ಮಮತಾಕಾಂಕ್ಷೆಯೆಂಬ ಆಕೆಯು ಬಿಟ್ಟಿಲ್ಲ, ಸೇದಿನ ಭೀಕರ ಹಿನ್ನೆಲೆಯು ಬಿಟ್ಟಿಲ್ಲ

ದುರ್ಯೋಧನ, ಕರ್ಣ, ಲಕ್ಷ್ಮಣ, ಕುವಾರ, ಶಕುನಿ, ಕೃಷ್ಣ, ಬಲರಾಮ, ರೇವತಿ, ಸುಭದ್ರೆ, ಹಿಡಿಂಬಿ, ಘಟೋತ್ಕಚ, ಅಭಿಮನ್ಯು, ಶಶಿರೇಖೆ—ಎಲ್ಲರೂ ಪ್ರಧಾನ ಪಾತ್ರಗಳು ಈ ಕಥಾನಿಕೆಯಲ್ಲಿ.

ಒಬ್ಬೊಬ್ಬರಲ್ಲಿ ಒಂದೊಂದು ಆಲೆ ಅದನ್ನು ಸಫಲಗೊಳಿಸುವುದಕ್ಕಾಗಿ ತಮ್ಮ ತಮ್ಮ ಜಾಲಗಳನ್ನು ಹರಡುತ್ತಾರೆ ಆದರೆ ಎಲ್ಲಕ್ಕೂ ಹೆಚ್ಚಿನವಾಗಿ ಮಾಯಾಜಾಲವು ಅವರನ್ನು ಆವರಿಸುತ್ತದೆ ಆವರೆಲ್ಲಿರೂ ಮಾಯಾಬಜಾರಿನಲ್ಲಿ ಸರಿದಾಡುವ ವ್ಯಕ್ತಿಗಳು. ಅವರ ಕಾರ್ಯಗಳ ಪರಿಣಾಮವಾದರೂ ಮಾಯೆಯಿಂದ ರೂಪುಗೊಳ್ಳುವುದು ಅದರ ರಹಸ್ಯದ ಪರಿಚಯ ಅವರಿಗಿರುವುದಿಲ್ಲ.

ದುರ್ಯೋಧನನು ಮಾನಧನ ತನ್ನ ಪ್ರತಿಜ್ಞೆಯನ್ನು ಹೇಗಾದರಾಗಲಿ ಸರ್ವವಿಧದಲ್ಲಿಯೂ ವೃದ್ಧಿಗೊಳಿಸುವ ಹಿರಿದಾದ ಆಶೆ ಅವನದು ಗುರುವಾದ ಬಲರಾಮನ ಮಗಳಾದ ಶಶಿರೇಖೆಯನ್ನು ತಂದು ಮಗ ಲಕ್ಷ್ಮಣನಿಗೆ ವಿವಾಹಮಾಡಿ ಯಾದವರ ಸಹಾಯ ದೊರೆತರೆ ಮುಂದೆ ತನಗೆ ತನ್ನವರಿಗೆ ಸಾಮ್ರಾಜ್ಯ ದೊರೆಯುವುದೆಂದು ಆಶೆ

READY FOR SALE
ELEPHANTS TRAINED IN FOREST WORKS
Please contact with.
P Sankara Pillai
Post Kudamaloor
Kottayam
TRAVANCORE

ಕರ್ಣನಿಗೆ ಪಾಂಡವರಲ್ಲಿ ವಿರೋಧ ಅನ್ನ ವಿಟ್ಟು ಕಾಪಾಡಿದ ಸ್ವಾಮಿಯ ಸಾನ್ನಿಧ್ಯವಾಗಬೇಕೆಂಬ ಸಹಜವಾದ ಮಹದಾಸೆ.

ಶಕುನಿ ಶಕುನಿ ಮಹಾಸ್ವತ್ತ. ಗಾಂಧಾರ ವಂಶವನ್ನು ನಿರ್ಮೂಲ ಮಾಡಿದ ಕೌರವರನ್ನು ಯಾವ ರೀತಿಯಿಂದಲಾದರೂ ನಾಶ ಮಾಡಿ ತನ್ನ ಹಗೆತನ ಸಾಧಿಸಲು ಸರ್ವಶಕ್ತಿಯನ್ನು ವಿನಿಯೋಗಿಸುತ್ತಿರುವ ನುಣಾ ತಂತ್ರಕುಟಿಲತೆಯಿಂದಲೇ ಅವನ ಕಾರ್ಯ ಸಾಧನೆ

ಬಲರಾಮನಾದರೋ ದುರ್ಯೋಧನನ ಗುರು ಪತ್ನಿಯಾದ ರೇವತಿಯ ಪ್ರೇರಣೆಯಿಂದ ಮಗಳನ್ನು ಉನ್ನತ ಸ್ಥಿತಿಯಲ್ಲಿರುವ ಕೌರವನ ಮನೆಗೆ ಕೊಡಲು ಒಪ್ಪುವನು ತಂಗಿ ಸುಭದ್ರೆಗೆ ಕೊಟ್ಟ ಮಾತನ್ನು ಸಫಾ ಮಾಡಿಯುವನು

ರೇವತಿ ಸಿನಿವಂತಿಕೆಯನ್ನು ಪೂಜಿಸುವ ಸಾಧಾರಣ ಸ್ತ್ರೀ

ಸುಭದ್ರೆಯು ಶಶಿರೇಖೆಯನ್ನು ವಾಗ್ದತ್ತವಾಗಿ ಅಣ್ಣನಿಂದ ಪಡೆದ ಪುಣ್ಯವತಿ, ಶ್ರೀಕೃಷ್ಣನ ಸಲಹೆಯಂತೆ ನಡೆಯುವಳು ಘಟೋತ್ಕಚನ ಮಾಯಾ ಶಕ್ತಿಯಿಂದ ಶಶಿರೇಖೆಯನ್ನು ಸೊಸೆಯೊಗಿ ಪಡೆಯುವಳು

ಅಭಿಮನ್ಯವತ್ತು ಶಶಿರೇಖೆಯರು ಒಬ್ಬರಲ್ಲಿ ಒಬ್ಬರು ಅನುರಕ್ತರು, ಸಂಯೋಗ್ಯರಾದ ನಧೂವರರು ಹಲವಾರು ಕಾರಣದಿಂದ ಇವರ ವಿವಾಹಕ್ಕೆ ಅಡ್ಡಿಬಂದರೂ ಕೊನೆಗೆ ಅವು ದೂರವಾಗಿ ಮುದುವೆಮಾಡಿಕೊಳ್ಳುವರು

ಘಟೋತ್ಕಚನು ಹೇಳಿಕೇಳಿ ಮಾಯಾವಿಯಾದ ರಾಕ್ಷಸ ಕೃಷ್ಣನ ಸೂಜಿಸೆಯಂತೆ ಮಾಯಾಶಕ್ತಿಯು ಪ್ರದರ್ಶನವಾಲಂಬಿಸಿದಂದ ಕೌರವರನ್ನೂ ಬಲರಾಮ ರೇವತಿಯರನ್ನೂ ಮೋಸಗೊಳಿಸಿ ಶಶಿರೇಖಾ ಪರಿಣಯವನ್ನು ಸಾಧಿಸುವನು

ಇಷ್ಟೆಲ್ಲದ ಮುಖ್ಯಪಾತ್ರ ಶ್ರೀಕೃಷ್ಣ ಭಗವಂತನಾದ ಶ್ರೀಕೃಷ್ಣ ಪರಂಧಾಮರ ಪಕ್ಷಪಾತಿ, ಧರ್ಮ ಪಕ್ಷಪಾತಿ ಅಡಿದ ಮಾತನ್ನು ಸಮಯ ಸಾಧಿಸಿ ನಡೆಸಿಕೊಡುವವನು ಶ್ರೀಕೃಷ್ಣನ ಮಾಯಾಬಜಾರಿನಲ್ಲಿ ಎಲ್ಲರೂ ಕೈಗೊಂಬೆಗಳು ಮಾಯಾಪ್ರಪಂಚದ ಸೂತ್ರಧಾರಿಯವನು

ಅಭಿಮನ್ಯು ಮತ್ತು ಶಶಿರೇಖೆಯರು ನವಜವನಿ ನೌಕಾಕ್ರೀಡೆಯಲ್ಲಿರ ವಾಗ ಹಿರಿಯರಾದ ರೇವತಿ ಬಲರಾಮರು ಬರುವಾಗ ಶ್ರೀಕೃಷ್ಣನು ತನ್ನ ಯೌವನ ದಿನಗಳನ್ನು ನೆನಸಿಕೊಂಡು ರುಕ್ಮಿಣೀ ಸಮೇತನಾಗಿ ನೌಕಾಕ್ರೀಡೆಯಲ್ಲಿರುವನು ಈ ಪ್ರಸಂಗದಲ್ಲಿ ಆತನ ಅತ್ತಿಗೆ ಮತ್ತು ಅಣ್ಣ ಮೋಸಹೋಗುವರು

ಶಕ್ತಿ ಸಂಚಯನವು ಅವಾಸ್ತವದಲ್ಲಿ ಆದರೆ ಅದು ಅತ್ಯಘಾತುಕವಾಗುವುದೆಂದು ಪ್ರಸ್ಫುಟವಾಗಿ ಸೂಚಿಸಲು ಮೋಹಿನಿ ಭಸ್ಮಾಸುರ ಕಥೆಯನ್ನು ನೈತ್ಯರೂಪದಲ್ಲಿ ಅಳವಡಿಸಿರುವರು.

ಮಾಯಾ ಪ್ರಪಂಚವ ಮಾಯೆಯನ್ನು ಕಂಡು ನಾವು ಆಶ್ಚರ್ಯರಾಗುವಿರಿ ಮುಂ ರಾಗುವಿರಿ.

ಯಾಥಾರ್ಥತೆಯಲ್ಲಿ ಕಾಲ್ಪನಿಕತೆ

ಕಾಲ್ಪನಿಕತೆಯಲ್ಲಿ ಯಥಾರ್ಥತೆ

ಇದೇ "ನವಾಯೂ ಬಜಾರ್"ನಲ್ಲಿರುವ ವಿಶೇಷ ಆಕರ್ಷಣೆ

ನೆನಪಿರಲಿ! "ಮಾಯಾ ಬಜಾರ್" ವಿಜಯರವರಿಂದ ನಾವಿನ ಸೃಷ್ಟಿಯೋವಿನಲ್ಲಿ ನಾಗಿರೆಡ್ಡಿ ಚಕ್ರಪಾಣಿ ಇವರ ನಿರ್ಮಾಪಕತ್ವದಲ್ಲಿ ತಯಾರಾದ ಚಿತ್ರ

ದೇಹಸ್ಥಿತಿಗೆ ಸರಿಹೋಗದ ವಿಶೇಷ ಕೆಲಸದ ಬೆಸೆಯಿಂದಾಗಿ ಒಮ್ಮೆ ಕ್ಷಯರೋಗಕ್ಕೆ ಸಿಲುಕಿ ಗುಣಹೊಂದಿದ ನೂರಾರು ಮಂದಿ ಸುನಹ ಕ್ಷಯರೋಗಕ್ಕೆ ಸಿಲುಕುವವರಿದ್ದಾರೆ ಅಂತಹವರನ್ನು ರಕ್ಷಿಸಲು ವೈದ್ಯಕೀಯ ಮೇಲ್ವಿಚಾರಣೆಗೊಳಪಟ್ಟ ವೃತ್ತಿಯನ್ನು ಆವರಿಗೆ ಒದಗಿಸಿಕೊಡಬೇಕ ಈ ಕಾರ್ಯವನ್ನು ಕ್ಷಯರೋಗ ನಿವಾರಣಾ ಸಂಘಗಳು ನೆರವೇರಿಸಲು ಸಾಧ್ಯವಿವೆ ಆದರೆ ಈ ಕಾರ್ಯಕ್ಕೆ ಹಣಬೇಕು.. ಟಿ. ಬಿ ಮೊಹರುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪಡಕೊಂಡು ನೀವು ಸಹಾಯಮಾಡಬಲ್ಲಿರಿ

ಎಂಟನೆ
ಟಿ. ಬಿ. ಮೊಹರು
ಮಾರಾಟ ಚಳವಳಿ

ಮೊಹರುಗಳು ದೊರೆಯುವ ಸ್ಥಳಗಳು:–

ಗೌರವ ಕಾರ್ಯದರ್ಶಿ, ಮೊಹರು ಮಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನದ ರಸ್ತೆ, ಮಂಗಳೂರು

ಜಿಲ್ಲಾ ಮೆಡಿಕಲ್ ಆಫೀಸರ್, ಮಡಿಕೇರಿ, ಕೊಡಗು

ಗೌರವ ಕಾರ್ಯದರ್ಶಿ, ಮೈಸೂರು ಕ್ಷಯರೋಗ ಸಮಿತಿ ಲೇಡಿ ವಿಲ್ಲಿಂಗ್‌ಡನ್ ಟಿ ಬಿ ಕ್ಲಿನಿಕ್ ಮತ್ತ ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ರಾಜ್ಯದ ಇತರ ಏಜನ್ಸಿಗಳು.

ಈ ಸ್ಥಳ ದಾನನಾಡಿದವರು–

ಇಂಡಿಯನ್ ಅಲ್ಯೂಮಿನಿಯಮ್ ಕಂಪೆನಿ ಲಿಮಿಟೆಡ್,
ಕಲಕತ್ತ.

'NAVAYUGA' WEEKLY

is in the list of periodicals and Newspapers approved for use in Secondary Schools as per proceedings Roc No 466 N/50 date 2-12-1950 of the Director of public Instruction Madras

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ –ಸಂ ನ

ಭೂ ಸಮಸ್ಯೆ—
ಜತ್ತಿ ಸಮಿತಿಯ ವರದಿಯೂ ಭೂ ಸುಧಾರಣೆಯೂ—

ಡಾ| ಕೆ. ದಾಸಪ್ಪ ಶೆಟ್ಟಿ, ಪುತ್ತೂರು.

ಈಗ ನಮ್ಮ ಊರಲ್ಲಿ ಮತ್ತು ಭೂಲೋಕದಲ್ಲಿ ಕೌತುಕ ಮತ್ತು ಆಶ್ಚರ್ಯಕರವಾದ ವಿಷಯಗಳು ಎರಡು. ಒಂದನೆಯದು ರಷ್ಯ ವು ಹಾರಿಸಿದ ಸುರಿಚಂದ್ರ, ಎರಡನೆಯದು ಜತ್ತಿ ಸಮಿತಿಯ ಸಾರಿಸಿದ ವರದಿ. ನಮ್ಮೂರಲ್ಲಿ ಜತ್ತಿ ಸಮಿತಿಯ ವರದಿಯು ಹೊರಬಿದ್ದ ಅನಂತರ ಮನೆ ಸುತ್ತು ಬೀದಿ ಬೀದಿಗಳಲ್ಲಿ ಎಲ್ಲರ ಬಾಯಲ್ಲಿಯೂ ಇದೇ ಜಪ ಜತ್ತಿ ಸಮಿತಿಯು ಉರೂರು ತಿರುಗುತ್ತಿರುವಾಗ ಇದರಿಂದ ಏನೋ ಒಂದು ಜನರಿಗೆ ಹಿತವಾದ ಒಂದು ವಿಷೇಶ ಸುಧಾರಣೆ ಬರಬಹುದೆಂದು ಜನರು ಕುತೂಹಲವುಳ್ಳವರಾಗಿದ್ದರು. ಪರ್ವತವು ಪ್ರಸವವೇದನೆಯಿಂದ ಇಲಿಯನ್ನು ಹೆತ್ತಂತಾಯಿತು. ಯೋಜನಾ ಸಮಿತಿಯ ನಿರ್ದೇಶದಂತೆ ಅವರು ವರ್ತಿಸಿದ್ದಾರಲ್ಲದೆ ನಮ್ಮ ರಾಜ್ಯದ ಭೂಸ್ಥಿತಿ, ಪ್ರಕೃತಿಸಂಕಟಿತ ಕಡೆಗೆ ಅವರ ಮಿದುಳನ್ನು ಉಪಯೋಗಿಸಿದಂತೆ ಕಾಣುವುದಿಲ್ಲ.

ದಕ್ಷಿಣ ಕನ್ನಡದ ಶೇಕಡಾ ಐಂಬತ್ತು ಭೂಮಾಲಕರು ಆಳಂಸಂತಾನಿಗರು. ಇವರು ಪಾರ್ಲಾಮೆಂಟರಿಯ ಅವಿಭಕ್ತ ಕುಟುಂಬದಲ್ಲಿ ರುವಂತೆ ಗಂಡಸರಲ್ಲಿ ಪಾಲಾಗುವ ಕಾನೂನು ಬಂದಿದ್ದರೂ ಅದರ ಸಿದ್ಧಾಂತದ ತೀರ್ಪಾನವು ಇನ್ನೂ ಬಾಕಿ ಇದೆ. ಒಂದು ವೇಳೆ ಇನ್ನು ಪಾಲಿಗೆ ಡಿಕ್ರಿಯಾದರೂ ಸ್ವಾಧೀನಕ್ಕೆ ಬರುವಾಗ ಅವರಿಗೆ ಸಿಕ್ಕುವ ಒಂದು ಅಥವಾ ಎರಡು ಮುಡಿ ಗದ್ದೆ ಸಹ ಬೇಸಾಯಕ್ಕೆ ಸಿಕ್ಕದಂತಾಗಿದೆ. ಸಂದರ್ಭವಶಾತ್ ಗಂಡ ಹೆಂಡಿರು ಬೇರೆ ಬೇರೆ ತಾಲೂಕಿನವರಾದರೆ, ಹೆಂಡತಿ ತನ್ನ ಗಂಡ ಅಥವಾ ಅಸ್ತಿಯನ್ನು ಬಿಡಬೇಕಾಗುತ್ತದೆ.

ದಕ್ಷಿಣ ಕನ್ನಡದಲ್ಲಿ ಬೇರೆ ದೊಡ್ಡ ಭೂಮಾಲಿಕರಿಂದರೆ ದೇವಸ್ಥಾನ, ಇಗರ್ಜಿ, ಮಠ ಮತ್ತು ಟ್ರಸ್ಟ್. ಇವುಗಳಿಂದ ದಾನ ಧರ್ಮ, ಉತ್ಸವಗಳು ಸರಿಯಾಗಿ ನಡೆಯತ್ತವೆಯಲ್ಲದೆ, ಅನೇಕ ಶಾಲೆ, ಕಾಲೇಜು, ಛತ್ರ ಮೊದಲಾದ ರಾಷ್ಟ್ರಾಭಿವೃದ್ಧಿಯ ಸಂಸ್ಥೆಗಳಿಗೆ ಆಧಾರವಾಗಿವೆ. ಈ ವರದಿಯು ಅವುಗಳ ನಾಶಕ್ಕೆ ಕಾರಣವಾಗುತ್ತದೆ.

ಮೈಸೂರು ಸರಕಾರದ ಈ ನಿಯೋಜಿತ ಸುಧಾರಣೆಯು ಪಳ್ಳಿಯ ಜನತೆಗೆ ಕೊಟ್ಟರುವ ಆಘಾತಕ್ಕೆ ಬೇರೆ ಸಮಾನಪಾವ ಘಟನೆಗಳು ಇತಿಹಾಸದಲ್ಲಿ ಸಿಕ್ಕುವುದು ಕಷ್ಟ. ಒಕ್ಕಲು ತನದ ಸಂಪೂರ್ಣ ನಿರೀಕ್ಷೆಯ ಹಳ್ಳಿಯ ಆರ್ಥಿಕ ಮನ್ನಡೆಯನ್ನು ಜಡಗೊಳಿಸುವುದಲ್ಲದೆ ಆರಕೆಯ ದೃಷ್ಟಿಯಿಂದಲೂ ಕಾರ್ಯಗತ ಗೊಳಿಸುವುದು ಕಷ್ಟಸಾಧ್ಯವೆಂದು ಅನುಭವ ಸಿದ್ಧ ವಿಚಾರ.

ಸಮಿತಿಯ ಈ ಕ್ರಾಂತಿಕಾರಿ ಶಿಫಾರಸುಗಳಿಂದ ಧನಿಗಳಾಗಲೀ,- ಒಕ್ಕಲಿಗಳಾಗಲೀ ಕೃಷಿಕ ಮಜೂರರಾಗಲಿ ತೃಪ್ತಿಹೊಂದಿಬಂತಿ ಕಾಣುವುದಿಲ್ಲ ಶೇಕಡಾ ಒಂಬತ್ತು ಭೂಮಾಲಿಕ ಕೃಷಿಕರು ಇರುವ ನಮ್ಮ ದೇಶದಲ್ಲಿ ಇದೊಂದು ಪಾಸನ ಬದ್ಧ ಸಾಮೂಹಿಕ ದರೋ.-. ದಿನದಿನಕ್ಕೆ ಕಾನೂನು ಬದಲಾಯಿಸುವುದರಿಂದ ದೇಶದಲ್ಲಿ ಆಸ್ಥಿರತೆ ಉಂಟಾಗಿದೆ. ನಮ್ಮ ದೇಶದಲ್ಲಿ ಭೂಮಾಲಕ ಕೃಷಿಕರು ಶೇಕಡಾ ಒಂಬತ್ತು ಇದ್ದರೂ ಅವರು ಸಂಘಟಿತರಾಗುವುದಿಲ್ಲ ಆದುದರಿಂದ ಬೇರೆ ಯಾರ ಲಾಭಕ್ಕೂ ಪ್ರಯೋಜನವಿದೆ ಭೂಮಾಲಿಕರ ಮೇಲೆ ಮಾತ್ರ ದೌಜಾಡಿದ್ದಾರೆ. ಬಸ್ಸಿನಿಂದ ತನ್ನ ಅಸ್ತಿ ಉಪಯೋಗಿಸಿ ಹುದಕ್ಕಾಗಿ ಯೋಗ್ಯ ಜಾಡಿಗೆ ಯಾ ಗೇಣಿಯನ್ನು ಪಡೆಯಲಿರುವ ಅಧಿಕಾರವು ನ್ಯಾಯಾಂಗಗಳ ಪರಿಶೀಲನೆಗೊಳಗಾಗದೆ ಕಸಿಯಲ್ಪಟ್ಟರೆ ಅಂತಹ ಅಸಹಕಾರವು ಧನಿಗೆ ಅಸ್ತಿಯ ನ್ಯಾಯಸಮ್ಮತ ಉಪಯೋಗಕ್ಕೆ ತಡೆಮಾಡಿದಂತೆ ಮತ್ತು ಅದು ಅವನ ಅಸ್ತಿಯನ್ನೇ ಕಸಿದು ಕೊಂಡಂತೆ ಆಗುತ್ತದೆ. ಇಂತಹ ಕಾನೂನು ಅಮೇರಿಕದಲ್ಲಿ ನ್ಯಾಯಬಾಹಿರವಾಗಿದೆ. ವೆಚ್ಚ ಮಾಡಿದ ಧಂಡವಾಳಕ್ಕೆ ತಕ್ಕ ಲಾಭವನ್ನು ಗಳಿಸಲು ಪ್ರಜೆಗಳಲ್ಲಿ ಏಂದು ನಗರಕ್ಕೆ ಅವಕಾಶವಿಹ್ಲ, ಇನ್ನೊಬ್ಬನಿಂದ ಅಂತಹ ಹಕ್ಕನ್ನು ತೆಗೆಯುವುದು ಎಲ್ಲರಿಗೂ ಸಮಾನ ಸಂರಕ್ಷಣೆಕೊಡುವ ರಾಜನದ ಭರವಸೆಗೆ ವಿರೋಧ ವಾದುದು. ಇದು ಪ್ರಜಾಸ್ವಭುತ್ವದ ನೆವದಲ್ಲಿ ಭೂಮಾಲಕ ವರ್ಗಕ್ಕೆ ದ್ರೋಹವೆಸಗಿ ಅಕಾಂತಿಯ ಬೀಜವನ್ನು ಬಿತ್ತಿದಂತಾಗುವುದು.

ಇಂದು ಫಲಪ್ರದವಾಗಿರುವ ಭೂಮಿ, ವಾಲಿಕವಿಗೆ ಮಳೆ, ಗಾಳಿ, ಬಿಸಿಲುಗಳಂತೆ ಪ್ರಕೃತಿಯ ಉಡುಗೊರೆಯಾಗಿ ಸಿಕ್ಕಿದುದಲ್ಲ. ತಮ್ಮ ಜೀವ ನುತ್ತು ಧಂಡವಾಳಗಳೆನ್ನು ಆ ಖಾಯ್ಕೆಯ್ದಿದ್ದಿ ಮಾಡಿದ ಸಾಹಸದ ಫಲವನ್ನು ಆವರಿಂದು ತಿನ್ನುತ್ತಿದ್ದಾರೆ ಕ್ರೂರಪ್ರಭುಗಳಿಂದಲೂ, ಕರಿಣ ಕಾಹಿಲೆಗಳಿಂದಲೂ ಸಾಲೆ ನಾಡು ಆಗಮ್ಮವಾಗಿದ್ದಾಗ ಊರಿಂದೂರಿಗೆ ಮಾರ್ಗ ವರ್ಗೈರೆ ಯಾವ ಸಂಪರ್ಕವೂ ಇಲ್ಲದ ಸಮಯದಲ್ಲಿ ಎಲ್ಲಾ ಕಷ್ಟಗಳನ್ನು ಸಹಿಸಿ ನಮ್ಮ ಉಷ್ಣಮಶೀಲರು ಅಲ್ಲಿ ನೆಲೆನಿಂತು ಬೆಚ್ಚನೆಮಾಡುವ ಧಂಡವಾಳಕ್ಕಾಗಲೀ, ಕಸ್ಟ ಸಹಿಸುವ ಜೀವನಕ್ಕಾಗಲೀ ಬದಗಲಿಯವಾದ ಆಪತ್ತುಗಳನ್ನು ಲೆಕ್ಕಿಸದೆ ಅಲೆ ಹೊಟ್ಟೆಯಲ್ಲಿ ಕಾಡುಕಡಿದು ತೆಗ್ಗಾದಕ್ಕೆ ಮತ್ತು ಸಣವನ್ನು ಸುರಿಸಿ ನೂಡಿದೆ ಇಂತಹ ಉದ್ಯಮಶೀಲರ ಕಸ್ಟಗಳಿಗೆ ತಕ್ಕ ಪ್ರತಿಫಲ ದೊರಕಬೇಡವೆನ್ನುವುದು ನ್ಯಾಯನೀತಿ ತಿಳಿದ ಪ್ರತಿಯೊಬ್ಬನೂ ಒಪ್ಪುವಂತಿದ್ದು. ಭೂ ಸುಧಾರಣೆಯ ನೆಪದಲ್ಲಿ ಈ ಪ್ರತಿಫಲದ ಆಪಹರಣವು ಹಗಲು ದರೋಡೆಯೆನಿಸದೆ?

ಜಗತ್ತಿನಲ್ಲಿ ಭೂಮಿಯ ಉಪಯೋಗದಲ್ಲಿರುವ ಪದ್ಧತಿಗಳು ಮುಖ್ಯವಾಗಿ ಮೂರು ವಿಧ. ಇದರಲ್ಲಿ ಒಂದನೆಯದು ಕೆಲವರು ಭೂಸ್ವಾಮ್ಯವನ್ನು ಹೊಂದಿ ಅದನ್ನು ಲಾಭ ಮೂಲಕವಾಗಿ ಇತರರಿಗೆ ಉಪಯೋಗಕ್ಕೆ ಕೊಡುವುದು ಅದು ಫ್ರಾನ್ಸ್, ಇಂಗ್ಲೆಂಡು, ಅಮೇರಿಕಾದಲ್ಲಿದೆ. ಉಳುವವರಿಗೆ ಲಾಭದಾಯಕವಾಗಿರುವಂತೆ ಸುಧಾರಣೆ ಹೊಂದಿರುವುದು ಎರಡನೆಯದು. ಈ ದೇಶಗಳಲ್ಲಿ ಕೂಡಾ ೨೫೦ ಎಕ್ರೆ ಹಿಡುವಳಿಗಳನ್ನು ತೊಂದರೆಗುರಿಯಾಗಿಸುವ ಗೊಡವೆಗೆ ಅವರು ಹೋಗುವುದಿಲ್ಲ ಇದು ಜರ್ಮನಿ, ಪೂರ್ವದ ರುಮೇನಿಯಾ ಮತ್ತು ಯುಗೊಸ್ಲಾವಿಯಗಳಲ್ಲಿದೆ. ಮೂರನೆಯ ಕ್ರಮವಾದ ಭೂಕ್ರಾಂತಿಯು ರಶ್ಯಾ ಚೈನಾದಲ್ಲಿದೆ. ಜತ್ತಿ ಸಮಿತಿಯು ನಮ್ಮಂತೆಯೇ ಪ್ರಜಾಸ್ವಭುತ್ವವುಳ್ಳ ಫ್ರಾನ್ಸ್, ಇಂಗ್ಲೆಂಡು ಮತ್ತು ಅಮೇರಿಕದ ಈಗ ನಮ್ಮಲ್ಲಿರುವ ಪದ್ಧತಿಯನ್ನೇ ಅನುಸರಿಸಬೇಕಿತ್ತು ಆವರೆ ಸಮಿತಿಯು ಬೇರೆ ರೀತಿ ವರ್ತಿಸಿದೆ ಅಮೇರಿಕಾ ಮತ್ತು ಇಂಗ್ಲೆಂಡುಗಳಲ್ಲಿ ಎಂತಹ ಅಲ್ಪ ಸಂಖ್ಯಾಕರಾಗಿ ತಕ್ಕ ಸಂರಕ್ಷಣೆ ಇರುವುದಲ್ಲದೆ ಪ್ರಜಾಸ್ವಭುತ್ವದ ಅವಿಸರ್ಜನೀಯ ಅಂಗವಾಗಿ ಸೊತ್ತುಗಳ ಇರುವಿಕೆಗೆ ಯೋಗ್ಯ ಭದ್ರತೆಯೂ ದೊರೆತಿದೆ. ಅಂತಹ ರಾಷ್ಟ್ರಗಳಲ್ಲಿ ಮಾತ್ರ ಪ್ರಬಲಸ್ವಭುತ್ವ ಯಶಸ್ವಿಯಾಗಬಲ್ಲುದು ನಾವು ಪ್ರಜಾಸ್ವಭುತ್ವ ಸಿದ್ಧಾಂತಿಗಳಾಗಿ ಉಳಿಯ ಬೇಕಾದರೆ ಬಾಕಿಗಿ ಸೊತ್ತುಗಳ ಇರುವಿಕೆಗೆ ಬರುವ ಆತಂಕಗಳು ಪ್ರಜಾಸ್ವಭುತ್ವದ ಸ್ಥಿರತೆಗೆ ತಡೆಯಾಗುವುದೆಂಬ ತಿಳುವಳಿಕೆ ಜನಸಾಮಾನ್ಯರಲ್ಲಿ ಉಟಾಗುವಂತೆ ಪರಿಸ್ಥಿತಿಯನ್ನು ಉಟಾಗಿಸುವುದು ನಮ್ಮ ಕರ್ತವ್ಯ.

ಆದರೆ ಈಗ ನಮ್ಮ ಸರಕಾರದ ಮೇಲೆ ಜನಸಾಮಾನ್ಯರಿಗೆ ಅನುಮಾನ ಮತ್ತು ಅಸಂತುಷ್ಟಿ ಉಂಟಾಗಿದೆ. ದಿನ ಬಂದಕ್ಕೆ ರೆಕ್ಕೆಪುಕ್ಕ ಬಿದ್ದಂತೆ ಕಾನೂನು ಬಂದು ಸರಕಾರದ ಅನಾಶ್ರಿತ ಧೋರಣೆಯಿಂದ ಜನಾಂಗವು ಕುಸಿದು ಹೋಗಿದೆ (ಭೂರಹಿತರಿಗೆ ಭೂಮಿ, ಉಳುವವನೇ ನೆಲಗೊಡೆಯು" ವರ್ಗೈರೆ ದೊಡ್ಡ ದೊಡ್ಡ ಟೊಳ್ಳು ವಾಕ್ಯಗಳನ್ನು ಓಟುಗೆಣಾಗಿ ಉಪಯೋಗಿಸುತ್ತಾರಲ್ಲದೆ ಜನರ ನಿಜವಾದ ಸಂಕಷ್ಟದ ಕಡೆಗೆ ಗಮನಕೊಡುವುದಿಲ್ಲ. ಭೂಹಿತರಿಗೆಲ್ಲಾ ಭೂಮಿಯನ್ನು ಕೊಡಲು ಅಸಾಧ್ಯವೆಂದು ಗೊತ್ತಿದ್ದೇ ಅವರು ಈ ಕೂಗೆ ಬಿಸುವುದು ಶುದ್ಧ ವಂಚನೆ. ಉಳುವವನೇ ನೆಲಡೊಡೆಯನೆಂಬುದು ಮತ್ತೊಂದು ದೊಡ್ಡ ಟೊಳ್ಳು ವಾಕ್ಯ. ಈ ಹೊತ್ತಿನ ಉಳುವವನು ನಾಳೆಯ ಮಂತ್ರಿ ನ ಸರಕಾರಿ ನೌಕರನಾಗಬಹುದು ಈ ಹೊತ್ತಿನ ಮಂತ್ರಿಯಾ ಜಡ್ಡರು ನಾಳೆಯ ಉಳುವವನಾಗಬಹುದು. ಇದಕ್ಕೆ ಉದಾಹರಣೆಯಾಗಿ ನುದ್ರಾಸಿನ ಮಾಜಿ ಆರೋಗ್ಯ ಮಂತ್ರಿ ಡಾ| ರಾಜನ್ ಮತ್ತು ಭಾರತದ ಮುಖ್ಯ ನ್ಯಾಯಾಧೀಶರಾಗಿದ್ದ ಮೆಹರ್ ಚಂದ್ ಮಹಾ ಜನರನ್ನು ತೆಗೆದುಕೊಳ್ಳಬಹುದು. ನನ್ನನ್ನು ಸಂಬಸಿಸುವ ಟೊಳ್ಳು ವಾಕ್ಯಗಳು ನಮಗೆ ಬೇಕಾಗಿಲ್ಲ ಈ ಆಧುನಿಕ ಸನುಗಳು ನಿರ್ಣಾಣ ಮಾಡುವ ಜಾತಿ ಆಧಾರ ವರ್ಗ ನಮಗೆ ಬೇಕಾಗಿಲ್ಲ. ನಮಗೆ ಬೇಕಾದುದು ಜಾತ್ಯತೀತ ವರ್ಗಾತೀತ ಸಮಾಜ ಭೂಮಿಯನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿ ಸಿಕ್ಕದವರಿಗೆಲ್ಲಾ ಹಂಚಿದರೆ ಆದರ ಉತ್ಪಾದನೆಯು ಹೆಚ್ಚಾಗಲಾರದು. ಯಾವ ಯೋಗ್ಯತೆಯೂ ಇಲ್ಲದ ಒಬ್ಬನು ರಾಜಕಾರಣಿ ಆಗಬಲ್ಲನು. ಆದರೆ ಎಲ್ಲರೂ ವಕೀಲರಾಗಲೂ, ಡಾಕ್ಟರುಗಳೂ, ಇಂಜಿನಿಯರುಗಳೂ ಹೇಗೆ ಆಗಲಾರರೋ ಹಾಗೆಯೇ ಎಲ್ಲರೂ ಕೃಷಿಕರಾಗಲಾರರು ನ್ಯಾಯವಾದ ಬೇಸಾಯಕ್ಕೆ ಕಸ್ಟಜೀವನ, ಕ್ರಯಾರಕ್ತಿ ಸಾಮರ್ಥ್ಯ, ಬುದ್ಧಿ ವಂತಿಕೆ ಮತ್ತು ಧಂಡವಾಳ ಬೇಕು ಉಳುವ ಕೈಮ್ಮ, ದಿತ್ತುವ ಸಮಯ, ಕಾಲಾನುಸೃಮ ಹವಾಮಾನ ಇವುಗಳ ಅನುಭವ ಬೇಕು. ವೈಜ್ಞಾನಿಕ ರೀತಿಯಲ್ಲಿ ಉತ್ತಮ ವ್ಯವಸಾಯ ಮಾಡಲು ವಿಶಾಲ ಭೂಮಿಯುಳ್ಳ ಮ್ಯಾಲಿಕರಿಗೆ ಮಾತ್ರ ಸಾಧ್ಯ. ಆರು ಮಾತ್ರ ಅಧಿಕ ಉತ್ಪಾದಿಸಬಲ್ಲರು. ಅವರು ಬಿಕ್ಕ ಭೂಮ್ಹಾಲಿಕರಿಗೆ ಮಾರ್ಗದರ್ಶಕರು ಅವರೇ ಹಳ್ಳಿಯ ಬೆಂಕರು. ಆದ್ದರಿಂದ ಅಂತಹವರ ಸಂಖ್ಯೆಯನ್ನು ಅದಷ್ಟು ಹೆಚ್ಚಿಸಿ ಸಡಿಸಿದರೆ ಮಾತ್ರ ವ್ಯವಸಾಯವು ಊರ್ಜಿತಗೊಂಡೀತು.

ಮೈಸೂರು ರಾಜ್ಯದಲ್ಲಿ ಕೃಷಿಗೆ ಯೋಗ್ಯ ವಿದ್ದು ಬಂಜರು ಬಿದ್ದಿರುವ ಸುಮಾರು ೫೫ ಲಕ್ಷ ಎಕ್ರೆ ಭೂಮಿಯನ್ನು, ಭೂರಹಿತರಿಗೆ ಪಂಚಿಕೊಟ್ಟು ಈಗ ಪುನ್ಯೆಯವಾಗಿರುವ ಲಕ್ಷ ಗಟ್ಟಿ ಧನವನ್ನು ಅದಕ್ಕೆ ಉಪಯೋಗಿಸಿ ಅವರಿಂದ ಕೃಷಿ ಸಾಧಿಸಿದರೆ ಉತ್ಪಾದನೆಯು ಹೆಚ್ಚುವುದು ಹಸನಾಗಿ ಮಾಡಿ ಈಗ ಒಳ್ಳೇ ಫಲವನ್ನು ಕೊಡುವ ಭೂಮಿಯನ್ನು ಕಸಿದು ಕೊಂಡು, ಸಣ್ಣ ಸಣ್ಣ ಭೂಮಿಗಳನ್ನಾಗಿ ಮಾಡುವುದೆಂದರೆ ಸಂಪೂರ್ಣವಾಗಿ ಇದು ಬಡತನವನ್ನೂ, ಕ್ಷಾಮವನ್ನೂ ಹಂಚಿದಂತಾಗುವುದು ಹೆಚ್ಚಿನ ಭೂರಹಿತರು ಒಳ್ಳೆಯ ಬೇಸಾಯಗಾರರಲ್ಲ. ವರ್ಷವಷ್ಟಿ ಬರಬಹುದಾದ ಹಾನಿ, ನಷ್ಟ ಮತ್ತು ಆಡಚಣೆಗಳನ್ನು ಇದಿರಿಸಲು ಸಾಧ್ಯನಿಲ್ಲಸಿವರು ಇದರಿಂದ ಸಮಾಜ ಸಮತಾವಾದದ ಸ್ವರ್ಗ ರಾಜ್ಯನಿರ್ಮಾಣವಾಗಲಾರದು.

ರೋಗರುಜೆ, ಕ್ಷಾಮ ಜಾನುವಾರುಗಳಿಲ್ಲದ ಕಾಲಕಾಲಕ್ಕೆ ಸಮೃದ್ಧಿಯಾದ ಬೆಳೆ ಬೆಳೆದು ಧನಗಳು ತುಂಬಾ ಹಾಲುಕೊಟ್ಟು ಜನರ ಸುಖಸಂತೋಷವನ್ನು ಹೆಚ್ಚಿಸುವ ರಾಮರಾಜ್ಯ ನಮಗೆ ಬೇಕಲ್ಲದೆ, ಪೋಲೀಸಿಗೆಗಳಿಗೆ ಹೂರಿ ಹೋಗಿ ಸೀತಾಪಹರಣಗಾದಂತೆ ವನವಾಸಕ್ಕೆ ಬ್ಬುವ ರಾಮರಾಜ್ಯ ಬೇಡ.

ಆಯುರ್ವೇದದ ಹುಟ್ಟು

(೩ನೇ ಪುಟದಿಂದ)

ಕ ಕಂಹಿಕಾದಿ ಗ್ರಂಥಗಳೇ ಮೂಲವೆಂಬುದು ನಿರ್ವಿವಾದ.

ಆಯುರ್ವೇದ ವಿದ್ಯೆಯು ಪ್ರಚುರವಾದಂತೆಯೇ ಗ್ರಂಥಗಳಲ್ಲಿ ವಿಷಯಗಳ ಕ್ರಮಿಕರಣದಕಡೆಗೆ ವಿದ್ವಾಂಸರ ಮನ ಸೆಳೆಯಿತು. ಅಗ್ನಿವೇಶಾದ್ಯರ ಹಾಗೂ ಇನ್ನೂ ಕೆಲವರ ಗ್ರಂಥಗಳಲ್ಲಿ ಬೇರೆ ಬೇರೆ ವಿಷಯಗಳಿಗೆ ಪ್ರಾಧಾನ್ಯವಿದ್ದು ಅವೇ ಪಸ್ಕೃತವಾಗಿದ್ದುದರಿಂದ, ವಿಷಯ ಕ್ರಮಿಕರಣದ ಕುತೂಹಲವುಂಟಾಗಿ ಕಾಲ ಕ್ರಮೇಣ ಚಿಕಿತ್ಸಾ ವಿಭಾಗದಲ್ಲಿ ೮ ಅಂಗಗಳು ಏರ್ಪಟ್ಟವು.

"ಕಾಯ-ಬಾಲ-ಗ್ರಹೋಧ್ವಾಂಗ-
ಶಲ್ಯದಂಷ್ಟ್ರಾ-ಜರಾ-ವೃಷಾನ್
ಅಷ್ಟಾವಂಗಾನಿ ತಸ್ಯಾಹುಃ ಚಿಕಿತ್ಸಾ
ಯೇಷು ಸಂಶ್ರಿತಾ"

(ಕಾಯ ಚಿಕಿತ್ಸೆ, ಬಾಲ ಚಿಕಿತ್ಸೆ, ಗ್ರಹ ಚಿಕಿತ್ಸೆ, ಊರ್ಧ್ವಾಂಗ ಚಿಕಿತ್ಸೆ, ಶಲ್ಯ ಚಿಕಿತ್ಸೆ, ರಸಾಯನ ಚಿಕಿತ್ಸೆ, ವಿಷ ಚಿಕಿತ್ಸೆ ಮತ್ತು ವಾಜೀಕರಣ ಚಿಕಿತ್ಸೆ ಇವೇ ಎಂಟಂಗಗಳು.)

ಈ ವಿಷಯ ಭೇದದ ಮೂಲಕ ಒಬ್ಬೊಬ್ಬ ಆಚಾರ್ಯರೂ ಆಯುರ್ವೇದ ಶಾಸ್ತ್ರವನ್ನು ವಿಮರ್ಶಿಸಿ ಪುಷ್ಟಿಗೊಳಿಸಿದರು. ಆ ವಿಧವಾಗಿ ಬೆಳೆದ ಆಯುರ್ವೇದ ಸಾಗರದ ಮರ್ಮವನ್ನು ಒಮ್ಮೆಯೇ ತಿಳಿಯಲು ಅಸಾಧ್ಯವಾದುದರಿಂದ ಒಂದೇ ಗ್ರಂಥದಲ್ಲಿ ಕ್ರಮವಾಗಿ ಅದರ ತಿರುಳನ್ನು ಕ್ರೋಡೀಕರಿಸಬೇಕಾದ ಸಂದರ್ಭವೂ ಬಂತು. ಶ್ರೀ ವಾಗ್ಭಟಾಚಾರ್ಯರೇ ಆ ಕಾರ್ಯವನ್ನು ಪೂರೈಸಿ "ಅಷ್ಟಾಂಗ ಹೃದಯ"ವೆಂಬ ಪದ್ಯಗ್ರಂಥವನ್ನು ಲೋಕಕ್ಕೊಪ್ಪಿಸಿದರು. ಅಷ್ಟಾಂಗ ಹೃದಯವೆಂಬ ಗ್ರಂಥದಲ್ಲಿ ಸೂತ್ರಸ್ಥಾನ, ಶಾರೀರ ಸ್ಥಾನ, ನಿದಾನ, ಚಿಕಿತ್ಸಾದಿ ವಿಭಾಗಗಳಿವೆ. ಆ ಒಂದೇ ಗ್ರಂಥದ ಸರಿಯಾದ ಅಭ್ಯಾಸದಿಂದ ಆತನು ಆಯುರ್ವೇದದಲ್ಲಿ ಅಸಮ ಪಾಂಡಿತ್ಯವನ್ನುಗಳಿಸಬಹುದು.

ಸುಳಿಯಾದ ರೀತಿಯಲ್ಲಿ ಆಯುರ್ವೇದ ಪುಸ್ತಕಗಳು ಹೆಚ್ಚಲಿ. ಆಯುರ್ವೇದದ ಜ್ಞಾನವನ್ನು ಎಲ್ಲರೂ ಪಡೆಯಲಿ. ಗಿಡ ಮೂಲಿಕೆಗಳಿಂದ ಸರಿಯಾದ ರೀತಿಯ ಶೋಧವು ಇನ್ನೂ ಸಾಗಲಿ. ಅಕೃತ್ರಿಮವಾದ ಔಷಧಗಳು ಶಾಸ್ತ್ರೀಯ ರೀತಿಯಲ್ಲಿ ಇನ್ನೂ ತಯಾರಾಗಲಿ. ಸರ್ವರಿಂದಲೂ ಸರಕಾರದಿಂದಲೂ ಆಯುರ್ವೇದಕ್ಕೆ ಬೆಂಬಲ—ದೊರಕಲಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅನಿರಿಷ್ಟ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾತಿಸ್ಮೃತಿ: ಪಾ ಕಂಪೆನಿ, ಮಾಂಗಳೂರು—1.

ಶ್ರೀ ಶಿವರಾಮ ಕಾರಂತರ
ಅಪೂರ್ವ ಗ್ರಂಥ—

ಯಕ್ಷಗಾನ ಬಯಲಾಟ

ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. 6/-
ವಿ. ಪಿ. ಕಳಿಸುವುದಿಲ್ಲ-
ರೂ.7/- ಕಳಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪುಸ್ತಕ-ನಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಾಡಿ ಎರಡು ಪ್ರತಿಗಳನ್ನು ಕಳಸಬೇಕು. ಸಂ. ನ.)

ಅಮೃತ ಲಹರಿ– (ಗೀತರೂಪಕಗಳು) ಕವಿ ಶ್ರೀ. ಎಸ್. ವೆಂಕಟರಾಜ. ಪ್ರಕಾಶಕರು, ಶ್ರೀ ಕೃಷ್ಣ ಪ್ರಕಾಶನ, ಉಡುಪಿ. ಪುಟ ಕ್ರೌನ್ ೧/೪ರ ೮೪ ಬೆಲೆ ರೂ. ೧-೧೫-೦.

ಕೇರಳ ಕನ್ನಡ ಜಿಲ್ಲೆಯಲ್ಲಿ ಮಾತ್ರ ವಲ್ಲ, ಕರ್ನಾಟಕದ ಶ್ರೇಷ್ಠ ಕವಿಗಳ ಪಂಕ್ತಿಯಲ್ಲಿ ಸಮಜೋದಿಯೆನಿಸಿದ ಕವಿ ವೆಂಕಟರಾಜರು ಈಗಾಗಲೇ ತಮ್ಮ ಕವಿತಾಕಾಮಿನಿಗಳಂತಹ ಕವಿತಾ ಸಂಕಲನ ಮುಕ್ತಿತರ ಕೃತಿಗಳಿಂದ ಚಿರಪರಿಚಿತರಾಗಿದ್ದಾರೆ. ಈಗ ಅಮೃತ ಲಹರಿಯೆಂಬ ಐದು ಗೀತರೂಪಕಗಳನ್ನು ಬರೆದು ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇದರಲ್ಲಿ ಸೀತೆಯು ಮಾಯಾಹರಿಣವನ್ನು ಬಯಸಿ ರಾಮನನ್ನು ಆದರ ಹಿಂದೆ ಕಳುಹಿಸಿ, "ನಾಥನಿಯೆದ ಮಾತಿನಲ್ಲೆಯ ನೂರಿ ತಾನೆ ನಾಟಕಳೆ ನಾಂದಿಯ ಬರೆದ ಕಲ್ಯಾಣ ರೇಖೆ"; ಫೆನಫೋರ ತಪಸ್ಸ್ಯಾಚರಿಸುತ್ತಿದ್ದ ವಿಶ್ವಾಮಿತ್ರನು "ಬರಿದೆ ಕಾಳ್ಕಂದಂತೆ ಸೊಹನ ಜೀವಿತವೇಕೆ? ನಿನ್ನ ಸಾರುಪನೆ ನಸಗಿದುವ ಭೋಗ!" ಎಂದು ಪ್ರಾರ್ಥಿಸಿದ ಮೇನಕೆಗೆ "ನಿನ್ನ ಹುಣ್ಣಿಮೆ ಸಂಗವ ಜಗುಳಿ ಭಾರತದ ಭವಿಷತ್ತ್ ಬೆಳಗಬೇಕು ಎಂದ ನುಡಿಗೆ ಒಪ್ಪಿ "ನಿನ್ನ ಗೆಲವೇ ಭವದ ಸದ್ವಿಚಾರ" ಎಂದು ಮೆಚ್ಚಿ ಮಂದರಿಂದಾದಿ ತಪೋಭಂಗ, ಅನಿಯಿಂದಲೂ ಚಂದ್ರನನ್ನೇ ಮೆಚ್ಚಿ ಕೊನೆಗೆ ಆತನನ್ನು ಒಲಿಸಿ, "ಇದೋ ನಿನ್ನ ಹೆಣ್ತನವು ನಿನ್ನಧೀನ"ವೆಂದು ತನ್ನನ್ನೇ ಒಪ್ಪಿಸಿದ ತಾರೆಯ "ಮಿಲನರಾತ್ರಿ" ಶಿವ ಪೂಜೆಯಿಂದ ಆತನನ್ನೇ ತನ್ನ ಪತಿಯಾಗಿ ಪಡೆದ "ಮಂಗಲ ಗೌರಿ". ಮತ್ತು ರಾಧಾ ಮತ್ತು ಚಂದ್ರಾವಳಿಯವರು ಕೃಷ್ಣನನ್ನು ಕಂಡ "ದಿವ್ಯದರ್ಶನ" ಎಂಬ ಐದು ರೂಪಕಗಳು ಸಂಗ್ರಹಿತವಾಗಿವೆ. ಪ್ರತಿಯೊಂದು ರೂಪಕವೂ ಸಾಹಿತಿಕ ಶೈಲಿಭರಿತವಾಗಿದ್ದು ಭಾವಯುಕ್ತವಾಗಿರುವುದು. ಭಾವಕ್ಕನುಗುಣವಾಗಿ ಪದ ಪ್ರಯೋಗ ಮಾಡುವಲ್ಲಿ, ಬಂಧವನ್ನು ಶಿಥಿಲ ಮಾಗೂ ಓಜೋಪೂರ್ಣವಾಗಿ ಬಳಸುವಲ್ಲಿ ಕವಿಗಳು ಕೃತಾರ್ಥರಾಗಿದ್ದಾರೆ. ಪ್ರಾರಂಭದ "ಕಲ್ಯಾಣರೇಖೆ"ಯಲ್ಲಿ ಸೀತೆಯು ತನ್ನ ಪತಿಯಾಜ್ಞೆ ಹೊರಿಮುದರಿಂದಲೇ ಅನಂತ ಕಷ್ಟಗಳಿಗೆ ಭಾಗಿಯಾದ ಕಥೆಯು ಖೈನ ರಾಮಾಯಣದಿಂದ ಅರಿತಿಲಾಗಿದ್ದರೂ, ಉಳಿದುವು ಹಿಂದೂ ಪುರಾಣಗಳಿಂದ ಉದ್ಧೃತವಾಗಿವೆ. ಪ್ರತಿರೂಪಕವೂ ಲಯಬದ್ಧವಾಗಿದ್ದು ಸುಂದರವಾಗಿ ಹಿಡಲು, ಹಾಡಲು ಸರಿಯಾಗಿ ಬರೆಯಲ್ಪಟ್ಟಿವೆ. ಮಾತ್ರವಲ್ಲದೆ, ರಂಗಭೂಮಿಯಲ್ಲಿ ಅಭಿನಯಿಸಲು ಹೊಂದಿಕೊಳ್ಳುವಂತೆ ರೂಪಿಸಲಾಗಿದೆ. ಕವಿ ವೆಂಕಟರಾಜರ ಮನೋಮಂಥಕ, ಭಾವಾರ್ಥಗರ್ಭಿತ, ಪ್ರಾಸದ ಶೈಲಿಯು ಇರ್ನ್ನು ಲಹರಿ ತಂಬ ಕಾಣಬಗುಮೆ "ಅಮೃತ ಲಹರಿ"ಗು ನಿಜವಾಗಿಯೂ ಅಮೃತದ ಸೌಂದರ್ಯಗಳನ್ನು ನಾಜರ ಪ್ರೇಕ್ಷಕರ ಬುದ್ಧಿಗೆ ಹನಿಸುವುದೆಂದು ಧೈರ್ಯವಾಗಿ ಹೇಳಬಹುದು. ಕವಿಗಳ ಪರಿಶ್ರಮಕ್ಕೆ ತಕ್ಕ ಸ್ಪೋತ್ಸಾಹವು ದೊರೆಯುತ್ತದೆಂದು ಹಾರೈಸುತ್ತೇವೆ.

ಸೌರಭ— (ಕವಿತಾ ಸಂಕಲನ) ಬರೆದವರು ಮತ್ತು ಪ್ರಕಾಶಕರು: ಶ್ರೀ ಎಚ್. ವಿಟ್ಠಲ ಶೆಣೈ, ವಿದ್ವಾನ್, ಎಸ್ ವಿ. ಹೈ ಸ್ಕೂಲ್, ಗಂಗೊಳ್ಳಿ, ಪಕ್ಕ ಪುಟ್ ಕ್ರೌನ್ ೧೮ರ ೩೬ ಬೆಲೆ: ರೂ. ೦-೬೦ (೩೭ನಯೇ ಪೈಸೆ)

ತಮ್ಮ ವಿಕಸಿತ ಸೌಭಾಗ್ಯ ಮತ್ತು ಪೂರ್ಣಮಾ ರಜನಿಗಳೆಂಬೆರಡು ಕಾವ್ಯಬಂಧಗಳನ್ನು ಬರೆದ ಶ್ರೀ ವಿಟ್ಠಲ ಶೆಣೈಯವರು ಇದೀಗ ತಾವು ೧೯೩೮ರಿಂದ ೪೪ರ ವರೆಗೆ ಬರೆದಿದ್ದ ಕವನಗಳನ್ನು ಸೌರಭವೆಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಭಾವಗೀತೆಗಳ ಜನಪ್ರಿಯತೆಯು ಈ ಕಾಲದಲ್ಲಿ ಇದೆಷ್ಟು ಉಪಯೋಗಕಾರಿಯೋ ಎಂದು ಹೇಳಬರುವುದಿಲ್ಲ. ಇದರಲ್ಲಿ ಒಟ್ಟು ೧೮ ಕವನಗಳಿವೆ. ಇವುಗಳಲ್ಲಿ ಸುಖದ:ಖ, ಕೋಗಿಲೆಗೆ ಕಲ್ಲೆಸೆದ ಸೌರಭ ವೆಂಬ ಕವನಗಳು ಉತ್ತಮವಾಗಿವೆ. ಗೋಪಿಯ ವಾರ್ತೀಕ್ಷಣದ ವರ್ಣನೆಯೂ ಹೃದಯಂಗಮವಾಗಿವೆ ಶಿಲ್ಪಿಯೆಂಬರ್ಥದಲ್ಲಿ ಬಳಸಿದ "ಟಿಪ್ಪಿಗ", 'ನಿರ್ಝರದ ಕಲನಾದ' ಮೊದಲಾದ ಪದುಪಯೋಗಗಳನ್ನು ಹಿಡಿದರೆ, ಉಳಿದ ಪದಗಳು ಸಾಮಾನ್ಯವಿವೆ. ಪಂಡಿತರಿಗೆ ಮಾತ್ರ ಅರ್ಥವಾಗಬಲ್ಲ ಕೆಲವೊಂದು ಪದ ಪ್ರಯೋಗಗಳು ಅಲ್ಲಲ್ಲಿ ಕಂಡು ಬರುತ್ತವೆ. ಕವಿಗಳಿಂದ ಜನಸಾಮಾನ್ಯಾಭಿರುಚಿಗೆ ಹೊಂದಿಕೊಳ್ಳುವ ಕಾವ್ಯಗಳೂ ಹೊರಗೆ ಬರಲೆಂದು ನಿರೀಕ್ಷಿಸಿದರೆ ತಪ್ಪಾಗಲಾರದು.

ಸೈಂಟ್ ಜೋರ್ಜರ ಹೊಮಿಯೋಪಥಿ ಮತ್ತು ಟಿಶ್ಯೂ ಮಿಕ್ಸ್ಚ್ ಔಷಧಗಳ ಕೈಪಿಡಿ–ಸಂಪಾದಕರು: ಡಾ. ಜೋಸೆಫ್ ಜಕರಿಯಸ್ ಪ್ರಕಾಶಕರು: ಸೈಂಟ್ ಜಾರ್ಜರ ಹೊಮಿಯೋಪೆಥಿಕ್ ಕ್ಲಿನಿಕ್ ಮತ್ತು ಫಾರ್ಮಸಿ,ಜಯಂತ ಬಿಲ್ಡಿಂಗ್ ಮೈಸೂರು ಕ್ರಾಸ್ ರೋಡ್, ಮಂಗಳೂರು. ೧ ಪುಟಗಳು: ಕ್ರೌನ್ ೧/೮ರ ೧೯+೧೦೦. ಬೆಲೆ: ರೂ ೦ ೫೮.

೧೯೩೬ರಲ್ಲಿ ಮೈಸೂರು ದಸರಾ ಪ್ರದರ್ಶನದಲ್ಲಿ ಪ್ರಶಸ್ತಿ ಪತ್ರವನ್ನು ಪಡೆದ ಈ ಸಂಸ್ಥೆಯವರು ಬಯಸಕಾಲದಿಂದಲೂ ಹೋಮಿಯೋಪೆಥಿ ಮತ್ತು ಟಿಶ್ಯೂ ಔಷಧಿಗಳಲ್ಲಿ ಅನುಭವ ಪಡೆದು ಉತ್ತಮ ರೀತಿಯಲ್ಲಿ ರೋಗಿಗಳನ್ನು ಉಪಚರಿಸುತ್ತಿದ್ದಾರೆ. ಈ ಹೊತ್ತಗೆಯಲ್ಲಿ ಕೆಲವೊಂದು ಸಾಮಾನ್ಯ ರೋಗಗಳು, ಅವುಗಳ ಲಕ್ಷಣ ಮತ್ತು ತನ್ಮೂಲಿಕೆಥಿ ಹಾಗೂ ಅವುಗಳನ್ನು ತೆಗೆದುಕೊಳ್ಳುವ ಕ್ರಮ ಮತ್ತು ಬೆಲೆಗಳನ್ನು ನಿರೂಪಿಸಲಾಗಿದೆ. ಆರೋಗ್ಯವೇ ಭಾಗ್ಯವಾದುದರಿಂದ, ಈ ಹೊತ್ತಗೆಯನ್ನು ಕೃತಿ ಮನೆಯಲ್ಲಿಯೂ ಇಟ್ಟುಕೊಂಡರೆ, ವೈದ್ಯ ವಿಧಾನವನ್ನು ಸುಲಭದಲ್ಲಿ ತಿಳಿದುಕೊಳ್ಳಬಹುದು.

ದಶಾಂಶ ನಾಣ್ಯಗಳು— ಪ್ರಕಾಶಕರು: ಭಾರತ ಸರಕಾರದ ಆರ್ಥಸಚಿವಾಲಯದ ಅರ್ಥಿಕ ಇಲಾಖೆ, ದೆಹಲಿ ಸುಟಗಳು ಡೆಮ್ಮಿ ೧/೮ರ ೪೮. ಬೆಲೆ ರೂ. ೦ ೪-೦.

ಈ ಕಿರುಹೊತ್ತಗೆಯಲ್ಲಿ ಭಾರತ ಸರಕಾರವು ಇತ್ತೀಚೆಗೆ ವ್ಯವಹಾರದಲ್ಲಿ ತಂದ ಭಾರತೀಯ ದಶಾಂಕ ನಾಣ್ಯ ಪದ್ಧತಿಯ ಸಂಪೂರ್ಣ ಪರಿಚಯವನ್ನು ಮಾಡಿಕೊಡಲಾಗಿದೆ. ನಾಣ್ಯಗಳ ಆಕಾರ, ಲೋಹ, ಭಾರ, ಲೇಖನೇತ್ಯಾದಿಗಳನ್ನು ಸೂಕ್ತ ಚಿತ್ರಗಳೊಂದಿಗೆ ವಿವರಿಸಲಾಗಿದೆ. ಭಾರತೀಯ ನಾಣ್ಯಪದ್ಧತಿಯ ಶಾಸನ (೧೯೪೫) ವಿಧಿಮಯ ಕೋಷ್ಟಕ, ಪೊದಲಾದುವನ್ನೂ ಸೇರಿಸಿರುವುದು ಉತ್ತಮವಾಗಿದೆ. ಜನರೆಲ್ಲರಿಗೂ ಅವಶ್ಯ ಜ್ಞಾನವನ್ನೊದಗಿಸುವಲ್ಲಿ ಈ ಪುಸ್ತಕವು ಸಹಾಯಕವಾಗದಿರದು.

ವಿವಾಹ, ಸಂಬಂಧ ವಿಚ್ಛೇದ ಮತ್ತು ಉತ್ತರಾಧಿಕಾರ– (ಹಿಂದಿ ಭಾಷೆಯಲ್ಲಿ) ಪ್ರಕಾಶಕರು: ಮಹಿಳಾ ವಿಭಾಗ, ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿ, ನವ ದೆಹಲಿ. ಸುಟ ಡೆಮ್ಮಿ ೧/೮ರ ೨೧ ಬೆಲೆ ರೂ. ೦-೨-೦

ಭಾರತೀಯ ಸ್ತ್ರೀಯರಿಗೆ ಸರಕಾರವು ಒದಗಿಸಿಕೊಟ್ಟ ಸ್ವಾತಂತ್ರ್ಯ ಮತ್ತು ಸಮಾನತೆಯ ಸದುಪಯೋಗವಾಗಲು ಪ್ರಕಾಶಕರು ಹಿಂದೀ ಭಾಷೆಯಲ್ಲಿ ಆ ಶಾಸನದ ವಿವರಗಳನ್ನು ಪ್ರಸಿದ್ಧಿಪಡಿಸಿದ್ದಾರೆ. ಹಿಂದಿ ಬಲ್ಲ ಸ್ತ್ರೀಯರಿಗೆ ಈ ಸಣ್ಣ ಪುಸ್ತಕವು ತಮಗೆ ಶಾಸನವು ಕೊಟ್ಟ ಸೌಲಭ್ಯಗಳನ್ನು ಅರ್ಥಪೂರ್ಣವಾಗಿಸಬಲ್ಲುದು. ಭಾಷೆಯು ಸರಳವಾಗಿದ್ದು ಯತಾರ್ಥವಾಗಿದೆ. ಆದರೆ, ಕೇವಲ ಕಾನೂನಾನಿಂದ ನೆಮ್ಮದಿಹೊಂದುವೆವೆಂಬ ಕಲ್ಪನೆಯು ಅಪ್ಪೊಂದು ಕ್ಷೇಮಕರವಲ್ಲವಾದರೂ ಈ ಸಣ್ಣ ಪುಸ್ತಕವು ಸ್ವಾಗತಾರ್ಹವಾಗಿದೆ.

—ಗೋರಾ

ಸುಲಭ ದರದಲ್ಲಿ ಸಿಗುತ್ತವೆ

ವೆರ್ಗ ಊಳಿಗ ಪುಸ್ತಕಗಳು, ಕೊನೈಟ್ ರಬೀನಿ, ಫೌಂಟೆನ್‌ಪೆನ್‌ಗಳು, ಪೆನ್ಸಿಲ್‌ಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮ್‌ಗಳು, ಕೆರಿಫುಡು ಪುಸ್ತಕ, ರವೀಂದಿಗಳು, ಕೋರ್ಟ್ ಫೀಸಿಗೆ ಬೇಕಾಗುವ ಸರ್ವ ವಿಧದ ಫಾರ್ಮ್‌ಗಳು, ಜಾಲ್ತಿ ನಮೂನೆಯ ಜಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಸೀದಿ ಪುಸ್ತಕಗಳು. ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೆರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಉಕ್ಕಿನ ಗಿಡುಗನ ಬೆನ್ನಮೇಲೆ

(ನಿನ್ನೆ ಪುಟದಿಂದ)

ನ್ನೂ ಎಚ್ಚರಿಸಿದಳು. "ರೆಕ್ಕೆಯಿರುವ ಅದ್ಭುತ ವಸ್ತು ಹಾರಿಹೋದ ಮೇಲೆ ನಾವು ಅಲ್ಲಿ ತಲಪುವುದೆ?" ಕೊಂಕು ನುಡಿದಳು.

ಜನಜಂಗುಳಿ ದೃಷ್ಟಿಗೋಚರವಾಯಿತು. ಗಾಡಿ ಅಲ್ಲಿ ತಲಪಿತು. ಭೀಷಣನು ಎತ್ತುಗಳನ್ನು ಬಿಟ್ಟನು." ಜ್ಞಾನಸೋವಾನದ ತಾಯಿಗೆ ದಾರಿಬಿಡಿರಿ" ಎಂದಾತ ಜನರ ಮಧ್ಯೆ ನೂಕಿ ದಾರಿಮಾಡತೊಡಗಿದ.

ಬರೀ ಸಣ್ಣಮಟ್ಟ: ಭೀಷಣನು ನಿರಾಶನಾದ. ಒಂದು ಮಿಡಿತ! ಅದರಲ್ಲಿ ಉಗಿಬಂಡಿಯ ಶಕ್ತಿಯಾಗಲಿ, ದೊಡ್ಡಸ್ತನವಾಗಲಿ, ಇರಲಿಲ್ಲ. ಆಕಾಶದಲ್ಲಿನ ಮಾರ್ಗದಲ್ಲಿ ಹಾರಾಡಲು ಸಹಾಯಮಾಡುತ್ತದೊ ಎಂಬಂತಿರುವ ಎರಡು ಚಕ್ರಗಳಿಂದ ಕೂಡಿದ ಒಂದು ಆಕಾರ! ಕಾಲುಗಳಿಲ್ಲದೆ ಅವುಗಳಿಗೆ ಬದಲಾಗಿ ಚಕ್ರಗಳಿಂದ ಕೂಡಿದ ಗಿಡುಗ! ರೆಕ್ಕೆಗಳೇನೋ ಬಹಳ ಗಟ್ಟಿಯಾಗಿದ್ದುವು ಮತ್ತು ಕೈಹಿಡಿಗೆ ನಿಲುಕದಂತಿದ್ದುವು. ಮಿನಿನ ಬಾಲದಂತಹ ಒಂದು ಬಾಲ ಮುಂದುಗಡೆ ಈಟಿಗಳು, ಪ್ರಾಯಃ ಆಕಾಶಬಟ್ಲೆಯ ಹಾರಾಡುವಾಗ ಚಾಲಕನು ಈ ಈಟಿಗಳಿಂದ ಮುತ್ತುವ ಶತ್ರುಗಳನ್ನು ತರಿಯುತ್ತಾನೋ ಏನೋ!

ಅಜ್ಜಿಯು ಹೆಚ್ಚಿನದನ್ನು ಕಳೆದುಕೊಂಡಂತಾಗಲಿಲ್ಲ. ಇದು ಭೀಷಣನಿಗೆ ಸಂತೋಷವನ್ನುಂಟು ಮಾಡಿತು. ಆದರೂ ಆಕೆಯ ನೆಚ್ಚುಗೆಯನ್ನಾತ ಮರೆತುಬಿಡುವಂತಿಲ್ಲ. "ಅಜ್ಜಿ, ವಾಯುಗಾಡಿಯು ಉಗಿಯಂತ್ರಕ್ಕಿಂತ ಇಮ್ಮಡಿ ದೊಡ್ಡದಿದೆ. ಅದರಲ್ಲಿ ಗುಂಡುಗಳನ್ನು ಸುತ್ತಲೂ ಇಟ್ಟಿದ್ದಾರೆ. ಅದಕ್ಕೊಬ್ಬ ಸೈನಿಕನ ಪರಿಮಳವಿದೆ. ಅದನ್ನು ನೋಡುವುದೆಂದರೆ, ಹೆದರಿಕೊಂಡಂತೆ" ಎಂದಾತ ಹೇಳುವನಿದ್ದ. ಆಗ, ಅಜ್ಜಿ ಅದನ್ನು ಕೇಳಿ ತಪ್ಪಿಯಿಂದ ತಲೆದೂಗುವಳು." ನಾನು ತಿಳಿದುಕೊಂಡಂತೆಯೇ ಸರಿ. ನಮ್ಮ ಪುರಾಣ ರಾಮಾಯಣದಲ್ಲಿ ಆಕಾಶದಲ್ಲಿ ಹಾರುವ ರಥದ ಸಂಗತಿಯಿದೆ. ಭೀಷಣ, ಜೀವನವೊಂದು ದೊಡ್ಡ ಚಕ್ರ. ಸಮಯದ ಭಾಗದಲ್ಲಿ ಒಂದು ನೂರು ವರ್ಷಗಳಲ್ಲಿ ಕೇವಲ ಒಂದು ಬೆರಳಿನಷ್ಟಗಲ ಮಾತ್ರ ನೇಯಬಲ್ಲುದು. ಸಮಯವು ಕಳೆಯುತ್ತಾ ಬಂದಂತೆ ಅದರ ತುದಿಯು ಕೆಳಗೆ ಹೋಗಿ ಕಣ್ಣಿಗೆ ಗೋಚರಿಸುವುದಿಲ್ಲ. ಆದರೆ. ಸಮಯ ಮತ್ತೂ ಮುಂದುವರಿದಾಗ, ಅಡಿಯಲ್ಲದ್ದುದು ಮುನ್ನಲೆಗೆ ಬರುತ್ತದೆ"

ಎಲ್ಲರೂ ಅದನ್ನು ನೋಡಿದರು. ಅದರದು ಏಕಕ್ಕಾಗಿ ಅಲ್ಲಿ ಬಂದಿತೆಂದು ತಿಳಿದರಲಿಲ್ಲ ಸ್ವಲ್ಪ ಸಮಯದ ಮೇಲೆ ಆದು ಮಾನವ ಸಾಗರದ ಹರ್ಷೋದ್ಗಾರಗಳ ನಡುವೆ ಮೇಲೆದ್ದು ಆಕಾಶದಲ್ಲಿ ಹಾರತೊಡಗಿತು.

ತಾಯಿಯ ಸೆರಗಿನ ತುದಿಯನ್ನು ಬೆರಳಲ್ಲಿ ಹಿಡಿದುಕೊಳ್ಳುತ್ತಾ ಬಾಬುಲು ಕೇಳಿದಳು. "ಅಮ್ಮಾ ಆಕಾಶಬಲ್ಲಿ ಹಕ್ಕಿಗಳು ಇದರೊಡನೆ ಯುದ್ಧಮಾಡಿದರೆ?

"ಹಕ್ಕಿಗಳಿಗೆ ಕೆಟ್ಟ ಆಲೋಚನೆಯಿಲ್ಲ ಮಗೂ, ಕಾಗೆಗಳು ಮಾತ್ರ ಹಾಗೆ ಮಾಡಬಹುದು. ಆದರೆ, ಅವು ಅಷ್ಟೆತ್ತರಕ್ಕೆ ನೆಗೆಯಲಾರವು."

"ಒಂದು ವೇಳೆ, ಚಂಡಾಲ ಕಾಗೆಗಳು ಅಷ್ಟೆತ್ತರಕ್ಕೆ ಹಾರಿದರೆ?....."

"ಆಗ ಇದು ಹೊಗೆಯನ್ನು ಕಾರುತ್ತದೆ. ಕಾಗೆಗಳು ನೆಲಕ್ಕೆ ಬೀಳುತ್ತವೆ."

ಗಾಡಿಗಾರ ಗುಂಪಿನಿಂದ ದೂರನಿಂತು ಕಣ್ಣನ್ನು ಮಚ್ಚಿ ಭೂತಳಕ್ಕೆ ನಮಸ್ಕರಿಸಿದ. ಉಕ್ಕಿನ ಗಿಡುಗ! ಅಜ್ಜಿ ತಿಳಿದುಕೊಂಡಿರುವುದಕ್ಕಿಂತ ಇದು ನಿಜಕ್ಕೂ ಹೆಚ್ಚಿನದು. ಇಲ್ಲಿ ಸಾಮಾನ್ಯ ಮಿಡಿತೆಯಂತಿದ್ದು ಈಗ ಆಕಾಶದಲ್ಲಿ ಹಾರುತ್ತಿದೆಯಲ್ಲ! ಉಗಿಬಂಡಿಗಿಂತ ನಿಜಕ್ಕೂ ಹೆಚ್ಚು ಶಕ್ತಿಯಿದ್ದಿರಬೇಕು. ಇಂತಹುದನ್ನು ನೋಡಲು ನಲುವತ್ತೆರಡು ಒಳ್ಳೆಯ ಕೆಲಸಮಾಡಿದ ಪುಣ್ಯ ಬೇಕು!"

"ಅಂತೂ...." ಭೀಷಣ ಸಂಶಯಗ್ರಸ್ತನಾಗಿ ತನಗೆ ತಾನೇ ಜೇಳಕೊಂಡ. ಅವನ ಎತ್ತುಗಳು ಹುಲ್ಲು ಮೇಯುತ್ತಿದ್ದವು. ಅವನ್ನು ಹತ್ತಿರ ಕರೆದು, ಅವುಗಳಲ್ಲೊಂದರ ಭುಜನನ್ನು ಒರಗುತ್ತ ನಿಂತು ಆಲೋಚಿಸತೊಡಗಿದ. "ಈ ಉಕ್ಕಿನ ಗಿಡುಗವು ರೆಕ್ಕೆಯಿರುವ ಇತರ ಪಕ್ಷಿಗಳಿಗಿಂತಲೂ ವೇಗವಾಗಿ ಓಡುತ್ತಿದೆ. ವೇಗವು ಆತ್ಯಾಸೆಯಿಂದ ದೂರವನ್ನೇಕೆ ತಿನ್ನುತ್ತದೆ? ಎರಡು ಮೂರುಗಂಟೆಗಳ ಕಾಲದಲ್ಲಿಯೇ ಪ್ರಯಾಣವನ್ನೇಕೆ ಮುಗಿಸುವಂತೆ ಮಾಡುತ್ತದೆ?"

ಭೀಷಣನು ಏನೂ ಹೇಳಲು ಸಮರ್ಥನಾಗಲಿಲ್ಲ. "ಆಕಾಶ ಮಾರ್ಗದಲ್ಲಿ ಓಡುವುದು ಬಹಳ ಸುಲಭವೆ? ಮಾರ್ಗದಲ್ಲಾದರೆ ಜನರೊಡನೆ ಮಾತಾಡಬಹುದು; ಗದ್ದೆಯಲ್ಲಿ ನೆಟ್ಟ ಹೆರಿನ ಕೋಡನ್ನು ಮುರಿದು ತಿನ್ನಬಹುದು; ಆದರೆ, ವೇಗವು ದೂರವನ್ನು ಕಡಿಮೆಮಾಡುತ್ತದೆ. ಇದು ಏಕೆ?

"ಅಜ್ಜಿಗೆ ಉತ್ತರ ಗೊತ್ತಿರಬಹುದು. ಅವಳಿಗೆ ಚತುರ ಯಂತ್ರಗಳದ್ದೇ ಹುಚ್ಚು. ಆಕೆ ಎಳೆ ಪ್ರಾಯದವಳಿರುವಾಗಲೂ ಅದೇ ಉತ್ಸಾಹದಲ್ಲಿದ್ದಳು. ಈಗ ತಲೆ ಎಲ್ಲವೂ ಬಿಳಿಯಾದಾಗ, ಮೈಯೆಲ್ಲವೂ ಸುಕ್ಕುಗಟ್ಟಿರುವಾಗ ಸ್ವರ್ಗದಲ್ಲಿ ಸುಖವಾಗಿರುವಾಗ ಸಹಾ ಅವೇ ಹುಚ್ಚು" ಅವನೊಮ್ಮೆ ತನ್ನ ಮುಖವನ್ನು ಒರಸಿಕೊಂಡ, ಆತನಿಗೆ ಅಜ್ಜಿಯ ಭೂತವು ಬಡಿದಂತಾಯಿತು. ಗಟ್ಟಿಯಾಗಿ ಅವನು ಕೂಗತೊಡಗಿದ-ಆಕಾಶಬಟ್ಲೆಯ ಯಾವಾಗಲೋ ಹಾರಿಹೋದ ಉಕ್ಕಿನ ಹಕ್ಕಿಯನ್ನು ನೋಡುವವನಂತೆ—"ಎಲೆ ಹಕ್ಕಿಯೇ, ಅಲ್ಲಿ ನನ್ನ ಅಜ್ಜಿಯಿದ್ದಾಳೆ. ಆಕೆಯ ಜೀವಕ್ಕೆ

(ನಿನ್ನೆ ಪುಟದಿಂದ)

ಗ್ರಿಗಳನ್ನು ಸುರಸ್ಕಾರವಾಗಿ ಇತ್ತರು.

ಹೀಗಾಗಿ ಭಾರತೀಯ ಸಂಸ್ಥಾನದ ಹಲವು ರಾಜರುಗಳು ರವಿವರ್ಮನ ಮುಖಾಂತರ ತಮ್ಮ—ತಮ್ಮ ಚಿತ್ರಗಳನ್ನು ಮಾಡಿಸಿಕೊಂಡರು. ಅವರಲ್ಲಿ ಬಡೋದಾ ಭಾವನಗರ, ಮೈಸೂರು, ಉದಯಪುರ-ಮೊದಲಾದ ಸಂಸ್ಥಾನದ ರಾಜರುಗಳ ಹೆಸರು ಉಲ್ಲೇಖನೀಯವಾಗಿವೆ.

ಭಾರತದ ಎಲ್ಲಾ ಸಂಸ್ಥಾನಧೀಶರು ರವಿವರ್ಮನನ್ನು ತಮ್ಮ ಆಸ್ಥಾನದಲ್ಲಿರಿಸಿಕೊಳ್ಳಲು ಬಯಸಿದರು. ಕನಿಷ್ಠ ಪಕ್ಷ ಅವನ ಕೆಲವು ಕೃತಿ ರತ್ನಗಳನ್ನಾದರೂ ಆಸ್ಥಾನದಲ್ಲಿರಿಸಿ, ಧನ್ಯರಾಗಬೇಕೆನ್ನುವಷ್ಟು ಅವರೆಲ್ಲ ಉತ್ಸುಕಂಠಿಗಿದ್ದರು.

ಬರೋಡಾದ ದಿವಾನರಾದ ಮಾಧವ ರಾಯರಿಗೊಮ್ಮೆ, ರವಿವರ್ಮನ 'ಕವಿ ಕುಂಚ ಪ್ರೌಢಿಮೆ'ಯನ್ನು ನೋಡುವ ಸುಯೋಗ ಒದಗಿ ಬಂತು. ಮನಸೋತು ಹುಚ್ಚರಾದ ಮಾಧವ ರಾಯರು ರವಿವರ್ಮನ ಎಲ್ಲಾ ಚಿತ್ರಪ್ರತಿಗಳನ್ನು ಬರೋಡಾದ ಗಾಯಕವಾಡ ಮಹಾರಾಜರಲುವಾಗಿ ತರಿಸಿಕೊಂಡರು. ಅವರ ಕಲಾನಿದರೂ, ಜ್ಯೋತ್ಸಾಹಕರೂ ಆದ ಸಯ್ಯಾಜಿರಾವ್ ರವಿವರ್ಮನನ್ನು ಗಲಗರಲ್ಲಿ ತಮ್ಮಲ್ಲಿಗೆ ಕರೆಸಿ, ರವಿವರ್ಮನ ತಯಾರಿಸಿದ ಅಮರ ಕೃತಿಗಳ ಸಲುವಾಗಿ ಒಂದು ಪಡಸ್ಸೊ ಸನ್ಮಾನವನ್ನೇರ್ಪಡಿಸಿದರು.

ಗಲಗರಲ್ಲಿ ತಯಾರಿಸಿದ ಮೈಸೂರು ಮಹಾರಾಜರ ಭಾವಚಿತ್ರವು 'ಬಹುಯುಕ್ತ ಚಮತ್ಕಾರದ ಕೆಲಸ'(Master piece)ವೆಂದು ಪರಿಗಣಿಸಲ್ಪಟ್ಟಿದೆ. ಈ ಚಿತ್ರಗಳು ನಂತರ ಲಂಡನ್ ಮತ್ತು ಕಲ್ಕತ್ತಗಳಲ್ಲಿ ಪ್ರದರ್ಶಿಸಿ, ಪ್ರಸಿದ್ಧಿಗೆ ಬಂದುವು. ಇದರಿಂದಾಗಿ ರವಿವರ್ಮನ ಕೀರ್ತಿಯು ಇನ್ನೂ ಹೆಚ್ಚಾಯಿತು.

ರವಿವರ್ಮನ ಕೀರ್ತಿಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಆತನ ತಾಯಿಯು ಸ್ವರ್ಗಸ್ಥರಾದರು. ಇದರಿಂದ ರವಿವರ್ಮನ ಮನಸ್ಸಿನಮೇಲೆ ಬಲನಾದ ಪರಿಣಾಮ ಉಂಟಾಯಿತು. ಆ ಪರಿಣಾಮವು ರವಿವರ್ಮನ ಉಳಿದ ಜೀವಿತಕಾಲವನ್ನು ಮಂಕುಗೊಳಿಸಿತು.

ರವಿವರ್ಮನ ಚಿತ್ರಗಳಿಗೆ ಹೆಚ್ಚಾಗಿ ಮರುಳಾಗಿದವರಿಂದರೆ—ಬರೋಡದ ಗಾಯಕವಾಡರು. ಗಲಗರಲ್ಲು ತಮ್ಮ ವೇಷಿಗೆ ತಣ್ಣಗಿನ್ನು ನೀಲಗಿರಿಯಲ್ಲಿ ಕಳೆಯುತ್ತಿದ್ದಾಗ, ರವಿವರ್ಮನ ಪ್ರಸಿದ್ಧಿಯನ್ನು ಇನ್ನೂ ಬೆಳೆಸಲೋಸುಗ ಅವನನ್ನು ತಮ್ಮಲ್ಲಿಗೆ ಕರೆಸಿ, 'ರಾಮಾಯಣ, ಮಹಾಭಾರತ'ಗಳ ಉತ್ತಮ ಹಾಗೂ ಯೋಗ್ಯ ಸನ್ನಿವೇಶಗಳನ್ನು ರವಿವರ್ಮನ ಮೂಲಕ ಚಿತ್ರಿಸಿದರು. ರವಿವರ್ಮನ ಕೆಲಸವೆಂದರೆ ಮಣಿ ಪೋಣಿಸಿದಂತೆಯೇ. ರವಿವರ್ಮನ ಸಸಂಸ್ಕೃತ ಜ್ಞಾನವು ಈ ಪುಣ್ಯ ಚಿತ್ರಗಳ ಕಾರ್ಯದಲ್ಲಿ ಅತ್ಯಂತ ವಿಶೇಷ ಪಾತ್ರವನ್ನು ವಹಿಸಿತು. ಗಲಗರಿಂದ ಆ ಎಲ್ಲಾ ಕೃತಿಗಳನ್ನು ಗಾಯಕವಾಡದ ರಾಜರಿಗೆ ಅರ್ಪಿಸಿದನು. ಅವು ಕೆಲವು ಸಮಯಗಳ ವರೆಗೆ ಸಾರ್ವಜನಿಕ ಪ್ರದರ್ಶನಕ್ಕಾಗಿ ಇಡಲ್ಪಟ್ಟನಂತರ ಬರೋಡಕ್ಕೆ ತೆಗೆದುಕೊಂಡು ಹೋದರು.

ಮುಂದಿನ ಕತೆಗಳ ಆಧಾರದಿಂದ ಮಾತ್ರವಲ್ಲದೆ ರವಿವರ್ಮನು ಭಾರತದ ಶ್ರೇಷ್ಠ ಕವಿಗಳ, ಸಾಹಿತಿಗಳ ಚಿತ್ರ ಮಾಡಿದನು. ಭವಭೂತಿ, ಬಾಣ, ಕಾಳಿದಾಸ, ಶಂಕರಾಚಾರ್ಯ- ಮೊದಲಾದವರೇ. ಮಾತ್ರವಲ್ಲದೆ ಭಾರತದ ಪ್ರಾಕೃತಿಕ ಸನ್ನಿವೇಶಗಳೂ ರವಿವರ್ಮನ ಚಿತ್ರವಸ್ತುಗಳಾದುವು. ರವಿವರ್ಮನ ಕುಂಚದಿಂದ ತಪ್ಪಿ ಹೋದ ಯಾವ ಸನ್ನಿವೇಶವಾಗಲೀ ಘಟನೆಯಾಗಲೀ ಇಲ್ಲ. ಅವನ ಕೃತಿಗಳೆಲ್ಲವೂ ಒಂದಲ್ಲೊಂದು ಕಾರಣದಿಂದ ಅಮೇರಿಕಾ, ಯುರೋಪು, ಲಂಡನ್—ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿಯೂ ಪೌರ್ವಾತ್ಯ ದೇಶಗಳಲ್ಲಿಯೂ ಜನ್ಯ ಮನ್ನಣೆಯನ್ನೂ ಬಹುಮಾನವನ್ನೂ ಗಳಿಸಿಕೊಂಡವು.

ರವಿವರ್ಮನ ಕೊನೆಗಾಲ ಅತ್ಯಂತ ಕೀರ್ತಿಮಯವಾಗಿತ್ತು. ಜೀವಿತ ಕಾಲದಲ್ಲಿಯೂ, ತದನಂತರವೂ ದೊರೆತ ಕೀರ್ತಿ ಜಗತ್ತಿನ ಇತರ ಯಾವ ಚಿತ್ರಗಾರನಿಗೂ ಸಿಗಲಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ. ಭಾರತದ ಚಿತ್ರಕಲೆಯಲ್ಲಿ ಹೊಸ ಪಂಥವನ್ನು— ಹೊಸ ನೀತಿಯನ್ನು ಸ್ಥಾಪಿಸಿದ ರವಿವರ್ಮನು ೧೯೦೬ನೇ ಅಕ್ಟೋಬರ ತಿಂಗಳ ಕೊನೆಯಂದು ಪರಾಂಧಾಮನನ್ನೈದಿದನು.

ರಾಜಾ ರವಿವರ್ಮನು ಕಲಾಕ್ಷೇತ್ರದಲ್ಲಿ ಭಾರತನನ್ನು ಮೇಲಕ್ಕೆತ್ತಿ ಹಿಡಿದು ಒಂದು ಗೌರವದ ಸ್ಥಾನವನ್ನಿತ್ತಿದ್ದಾನೆ. ಭಾರತೀಯರಾದ ನಾವು ನಮ್ಮ ಈ ಶ್ರೇಷ್ಠ ಕಲಾವಿದ ರಂಜಾ ರವಿವರ್ಮನನ್ನು ಎಂದಿಗೂ ಮರೆಯಲಾರೆವು!

(ಆಧಾರ)



Edited, Printed & Published by K H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

12—12—1957

ಸಂಚಿಕೆ ೧೪
NO. 14

ಭಾರತದ ಹದಿನೈದನೆಯ ಭಾಷೆ—

ಸಿಂಧಿಗೆ ಮಾನ್ಯತೆ ದೊರೆಯಲಿ

ಸಿಂಧಿ ಭಾಷೆಗೆ ಸಂವಿಧಾನದ ಅನುಸೂಚಿಯಲ್ಲಿ ಹದಿನೈದನೆಯ ಭಾಷಾ ರೂಪದಲ್ಲಿ ಸ್ಥಾನವೀಯಬೇಕೆಂಬ ಬೇಡಿಕೆಯು ಇಂದು ನಿನ್ನೆಯದಲ್ಲ. ಕಳದ ವಾರದಲ್ಲಿ ಸಹ ಇನ್ನೊಮ್ಮೆ ಭಾರತದ ರಾಜಧಾನಿಯಾದ ನವದೆಹಲಿಯಲ್ಲಿ ಆಯೋಜಿತ ಪ್ರಥಮ ಅಖಿಲ ಭಾರತ ಸಿಂಧೀ ಭಾಷಾ ಸಮ್ಮೇಲನದಲ್ಲಿ ಈ ಬೇಡಿಕೆಯು ಪ್ರತಿಧ್ವನಿಸಲ್ಪಟ್ಟಿತು ಈ ಸಮ್ಮೇಲನದಲ್ಲಿ ೨೦ ಲಕ್ಷ ಸಿಂಧೀ ಭಾಷೆಯನ್ನಾಡುವ ಜನರ ಪ್ರತಿನಿಧಿಗಳು ಮತ್ತು ಕೆಲವು ಪ್ರಮುಖ ಸಂಸತ್ಸದಸ್ಯರು ಸಹ ಈ ಕಡೆಗೆ ಉಚಿತ ಹೆಜ್ಜೆಯನ್ನಿಡುವಂತೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಅಸಾಮಿನ ಹಿಂದಿನ ರಾಜ್ಯಪಾಲ ಶ್ರೀ ಜಯರಾಮದಾಸ ದೌಲತರಾಮರು ಈ ಸಮ್ಮೇಳನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇವರ ಭಾಷಣವು ಅನೇಕ ದೃಷ್ಟಿಗಳಿಂದ ಮಹತ್ವಪೂರ್ಣವಾಗಿದೆ. ಸಂಸತ್ಸದಸ್ಯ ಪ್ರೊಫೆಸರ್ ಎನ್. ಆರ್ ಮಲ್ಕಾನೀ, ಆಚಾರ್ಯ ಕಾಕಾ ಸಾಹೇಬ ಕಾಲೇಲ್ಕರ, ಪಂಡಿತ ಬನಾರಸೀದಾಸ ಚತುರ್ವೇದಿ ಮತ್ತು ಪ್ರಸಿದ್ಧ ಭಾಷಾ ಶಾಸ್ತ್ರಿ ಡಾ ರಘುವೀರರು ಸಹ ಸಿಂಧೀ ಭಾಷೆಯು ಆಗ್ರಹದ ಸಮರ್ಥನೆಯನ್ನು ಸೂಡುತ್ತಾ ಓಜಸ್ವಿಯಾದ ಭಾಷಣಮಾಡಿದರು. ಮತ್ತು ಸಿಂಧಿಯನ್ನು ಸಂವಿಧಾನದ ಅನುಸೂಚಿಯಿಂದ ಹೊರಗಿಸುವುದು ಅನ್ಯಾಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಇದುವರೆಗೆ ಸಿಂಧಿಭಾಷೆಗೆ ಸಂವಿಧಾನದಲ್ಲಿ ಮಾನ್ಯತೆ ದೊರೆಯದಿರುವುದರಿಂದ ಸಿಂಧಿಭಾಷೆಯನ್ನಾಡುವ ಜನರಿಗೆ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕ್ಷೇತ್ರದಲ್ಲಿ ಅನೇಕ ಕಠಿನತೆಗಳನ್ನು ಎದುರಿಸಬೇಕಾಗಿ ಬಂದಿದೆ.

ಸಿಂಧಿಭಾಷೆಗೆ ಮಾನ್ಯತೆಯೊಯಬಾರದೆನ್ನುವವರು ವಾದದಲ್ಲಿ ಸಿಂಧಿಭಾಷೆಯನ್ನಾಡುವವರಿಗೆ ಇಂದು ತಮ್ಮದೇ ಆದ ಪ್ರಾಂತವಿಲ್ಲವೆಂಬುದೂ ಒಂದಾಗಿದೆ. ದೇಶದ ಯಾವುದೇ ಒಂದು ಭಾಗದಲ್ಲಿಯಾದರೂ ಸಿಂಧಿಯ ಪ್ರಾಧಾನ್ಯವಿಲ್ಲ. ಅಲ್ಲದೆ ಭಾರತದಲ್ಲಿ ಸಿಂಧೀಭಾಷೆಯ ಜನರ ಸಂಖ್ಯೆಯು ನಗಣ್ಯವಾಗಿದೆ ಎಂದವರು ಹೇಳುತ್ತಾರೆ.

ಪರಿವರ್ತಿತ ರಾಜನೈತಿಕ ಪರಿಸ್ಥಿತಿಗಳ ಕಾರಣದಿಂದ ವಸ್ತುತಃ ಸಿಂಧೀ ಭಾಷೆಯು ಜನರಿಗೆ ಉತ್ತರದಾಯಿತ್ವವಿಲ್ಲ, ಸಿಂಧೀ ಭಾಷೆ, ಸಿಂಧೀ ಸಾಹಿತ್ಯಗಳಿಗೆ ಅನ್ಯ ಭಾಷೀಯ ಭಗಿನಿಯರೊಂದಿಗೆ ಪಂಕ್ತಿಯನ್ನು ಸಂಮಾನಪೂರ್ವಕವಾಗಿ ಕೊಡುವ ಪ್ರಯಾಸವನ್ನು ಕೈಗೊಳ್ಳಬಾರದೆಂದು ಯಾರೂ ಹೇಳುವಂತಿಲ್ಲ

ಸಿಂಧಿಯು ಕೇವಲ ಪಶ್ಚಿಮ ಪಾಕಿಸ್ತಾನವನ್ನು ತ್ಯಜಿಸಿ ಭಾರತಕ್ಕೆ ಓಡಿಬಂದ ಲಕ್ಷಾಂತರ ಜನರ ಭಾಷೆ ಮಾತ್ರವಲ್ಲ, ಪಶ್ಚಿಮ ಪಾಕಿಸ್ತಾನದಲ್ಲಿಯೂ ಸುಮಾರು ೩೦ ಲಕ್ಷಕ್ಕೂ ಮಿಕ್ಕಿದ ಜನರು ಮುಕ್ತಕಂಠದಿಂದ ಸಿಂಧಿ ಭಾಷೆಯನ್ನಾಡುವರಿದ್ದಾರೆ ಈ ಮೂವತ್ತು ಲಕ್ಷ ಜನರ ಕಣ್ಣುಗಳು ಭಾರತದಲ್ಲಿರುವ ಸಿಂಧೀ ಭಾಷಾ ಜನರ ವೈಕ್ಷಣಿಕ ಮತ್ತು ಸಾಹಿತ್ಯ ಗತಿವಿಧಿಗಳಲ್ಲಿ ನೆಟ್ಟಿವೆ.

ವಸ್ತುತಃ ಎಲ್ಲ ಭಾರತೀಯರ ಮನಸ್ಸಿನಲ್ಲಿಯೂ ಸಿಂದೀಯರ ಧೀಮ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕಡೆಗೆ ಅಸೀಮ ಆದರವಿರುವುದು ಪ್ರಧಾನಮಂತ್ರಿ ಶ್ರೀ ನೆಹರೂಗಳ ಮೂಲಕ ಒಂದು ಬಾರಿ ರಾಷ್ಟ್ರಗೀತೆಯೀದ "ಸಿಂಧ" ಶಬ್ದವನ್ನು ತೆಗೆದು ಹಾಕಲು ಪ್ರಕಟ ಮಾಡಿದ ಗಂಭೀರ ಆಪತ್ತಿಯು ಇದರ ಜ್ವಲಂತ ಪ್ರಮಾಣವಾಗಿದೆ. ಇದನ್ನು ಮಷ್ಟೀಕರಿಸುತ್ತ ಉಪ ಗೃಹ ಮಂತ್ರಿ ಶ್ರೀ ದಾತಾರರು ಭಾರತದ ರಾಷ್ಟ್ರಗೀತೆಯಿಂದ ಸಿಂಧ ಶಬ್ದವನ್ನು ತೆಗೆದು ಬಿಡುವ ಆವಶ್ಯಕತೆಯಿದೆ. ಎಂದು ಸರಕಾರವು ಕಂಡುಕೊಂಡಿಲ್ಲ ಎಂದು ಹೇಳಿದರು, ಭಾರತೀಯರ ಮನದಲ್ಲಿ ಸಿಂಧ ಮತ್ತು ಸಿಂಧೀಯರ ಬಗ್ಗೆ ಇಂದಿಗೂ ಅಪನಷ್ಟದ ಭಾವನೆಯೆದೆ ಮತ್ತು ಈ ಭಾವನೆಯಲ್ಲಿ ರಾಷ್ಟ್ರದ ರಾಜನೈತಿಕಮಾನ ಚಿತ್ರದಲ್ಲಿ ಆದ ಪರಿವರ್ತನೆಯ ಯಾವ ವಿಪರೀತ ಪರಿಣಾಮವೂ ಆಗಲಾರದೆಂಬುದು ಸ್ಪಷ್ಟವಿದೆ

ಇಂದು ಭಾರತದಲ್ಲಿ ಉರ್ದುವಿಗೆ ತನ್ನದೇ ಆದ ವಿಶಿಷ್ಟ ಪ್ರಾಂತ ಯಾ ಪ್ರದೇಶ ವಿಲ್ಲದೆ ಹೋದರೂ ಅದಕ್ಕೆ ಅನುಸೂಚಿತ ಭಾಷೆಗಳಲ್ಲಿ ಸ್ಥಾನ ದೊರೆಯುತ್ತದೆ ಮತ್ತು ಫ್ರೆಂಕ್ ಅಂಥೋನಿಯಂತಹ ಸಜ್ಜನ ಆಂಗ್ಲೋಯರಿಗೆ ಸಹ ಸಂವಿಧಾನ ದ್ವಾರಾ ವಾನ್ಯತೆ ಪ್ರಾಪ್ತವಾದರೆ, ಈ ಹೇತುವಿಗೆ ಆಂದೋಲನ ಮಾಡಬಹುದಾಗಿದೆ. ಹಾಗಾದರೆ, ಸಂಸ್ಕೃತಜನ್ಯವಾದ ವತ್ತು ಈ ದೇಶದಲ್ಲಿ ಲಕ್ಷಾಂತರ ಜನರು ಮಾತನಾಡುವ ಸಿಂಧಿಭಾಷೆಗೆ ಅನುಸೂಚಿತ ಭಾಷೆಗಳಲ್ಲಿ ಸ್ಥಾನ ದೊರೆಯಬೇಕೆಂದು. ಕೇಳಬಾರದೆಂದು ಹೇಳುವುದು ಸರಿಯೇ? ಬೊಂಬಾಯಿಯ ಉದಾಹರಣೆಯನ್ನೇ ತೆಗೆದುಕೊಂಡಲ್ಲಿ ಇಪ್ಪತ್ತನಕಾಲೇಜ ಗಳಲ್ಲಿ ಗುಜರಾತಿ ಮತ್ತು ಮರಾಠೀ ಜನರ ನಂತರ ಸಿಂಧೀ ಭಾಷೆಯು ವಿದ್ಯಾರ್ಥಿಗಳ ಸಂಖ್ಯೆಯಿದೆ ಇಂಗ್ಲಿಷ್ ಭಾಷೆಗ ಈ ಕಾತೇಜುಗಳಲ್ಲಿ ಆರನೆಯ ಸ್ಥಾನವಿದೆ, ವತ್ತು ಉರ್ದುವಿನ ನಾಮಾವಶೇಷ ಸಹ ಇಲ್ಲವುದಿಲ್ಲ

ದಿಲ್ಲಿಯ ಸಿಂಧೀ ಭಾಷಾ ಸಮ್ಮೇಳನದಲ್ಲಿ ಶ್ರೀ ಜಯರಾಮದಾಸ ದೌಲತರಾಮರು ತಮ್ಮ ಆಧ್ಯಕ್ಷ ಭಾಷಣದಲ್ಲಿ ಸಿಂಧೀ ಭಾಷೆ ಮತ್ತು ಸಾಹಿತ್ಯದ ಕೆಲವು ವಿಶೇಷತೆಗಳ ಉಲ್ಲೇಖವನ್ನೂ ಮಾಡಿರುವರು ಈ ಉಲ್ಲೇಖಗಳು ಸಹ ಗಮನಿಸಬೇಕಾದುದಿವೆ. ಶ್ರೀ ಜಯರಾಮದಾಸರು ಹೇಳಿದರು —

(೧) ಎಲ್ಲಿ ಅನ್ಯ ಭಾರತೀಯ ಆರ್ಯ ಭಾಷೆಗಳ ರೂಪವು ಬದಲಾಯಿತೋ ಅಲ್ಲಿ ಸಿಂಧಿಯು ಅರಬೀ ಮತ್ತು ಫಾರಸೀ ಮಾತಾಡುವವರು ಭಾರತದ್ಲಿ ಪ್ರಭುತ್ವ ಸ್ಥಾಪಿಸಿದ ನಂತರವೂ ತಮ್ಮ ಮೂಲ ವ್ಯಾಕೃತ ರೂಪದ ರಕ್ಷಣೆಯನ್ನು ಮಾಡಿದರು,

(೨) ಸಿಂಧಿಯು ಕೇವಲ ವ್ಯಾವಹಾರಿಕ ಭಾಷೆ ಮಾತ್ರವಲ್ಲ; ಆದಕ್ಕೆ ತನ್ನದೇ ಆದ ಸಾಹಿತ್ಯ ಪರಂಪರೆಯಿರುವುದು.

೩) ಆದರಲ್ಲಿ ಪ್ರಾಚೀನ ಸಾಹಿತ್ಯ ಇದೆ ಮತ್ತು ಅರ್ವಾಚೀನ ಸಾಹಿತ್ಯ ಸಹ ಇರುತ್ತದೆ

೪) ಸಿಂಧಿಯಲ್ಲಿ ಆದರ ಜನಪದೀಯ ಶಬ್ದಗಳನ್ನೂ ಸೇರಿಸಿದ ಪಕ್ಷದಲ್ಲಿ ಆದರಲ್ಲಿ ಒಂದೂವರೆ ಲಕ್ಷ ಶಬ್ದಗಳ ಸಂಗ್ರಹವಿದೆ.

ಶ್ರೀ ಜಯರಾಮದಾಸ ದೌಲತರಾಮರ ಒಂದು ತರ್ಕದಲ್ಲಿ ಸ್ವಲ್ಪ ಬಲವಿದೆ. ಅವರು ಹೇಳಿದರು; ಎಲ್ಲಾ ಮುಟ್ಟುಗಲ್ಲುಗಳಿಂದ ನೋಡಿದರೂ ಸಿಂಧಿಯು ಸಂವಿಧಾನಿಕ ಮಾನ್ಯತೆಯನ್ನು ಪಡೆಯಲು ಅರ್ಹವಾಗಿದ್ದರೂ, ಅದು ತನ್ನದೇ ಆದ ಒಂದು ಪ್ರಾಂತವನ್ನು ಪಡೆದಿಲ್ಲ ಮತ್ತು ಆದನ್ನಾಡುವ ಜನರೆಲ್ಲಾ ಒಂದೆಡೆಯಲ್ಲಿಯೇ ಸೇರಿಕೊಂಡಿಲ್ಲ ಇದೇ ವಿರುದ್ಧ ಪಕ್ಷದವರ ವಾದವಾಗಿದೆ. ೫೭ ಲಕ್ಷ ಕಾಶ್ಮೀರೀ ಭಾಷೆಯ ಜನರಿಗೆ ಮತ್ತು ೩೫ ಲಕ್ಷ ಮಲಯಾಳಿ ಭಾಷೆಯ ಜನರಿಗೆ ಬೇರೆ ಬೇರೆ ಭಾಷೆಯನ್ನು ಸ್ವೀಕಾರ ಮಾಡುವುದಾದರೆ, ಸಿಂಧೀ ಭಾಷೆಯೂ ಆದಕ್ಕೇಕೆ ಅಸಾವಾದನೆಂದು ತಿಳಿಯಬೇಕು? ಸಿಂಧೀ ಭಾಷೆಯು ಇಂದು ಒಂದೇ ಪ್ರದೇಶದಲ್ಲಿ ಸ್ಥಾಯಿಯಾಗಿಲ್ಲದಿರುವುದಕ್ಕೆ ದೇಶ ವಿಭಜನೆಯಿಂದ ಉತ್ಪನ್ನವಾದ ಪರಿಸ್ಥಿಗಳು ಮತ್ತು ಶರ್ನವರ್ತ ಮಂತ್ರಾಲಯಗಳೇ ಉತ್ತರದಾಯಿಯಾಗಿವೆ.

ಈ ಸಮ್ಮೇಳನದ ಕೆಲವು ವಿಶೇಷತೆಗಳು ಉಲ್ಲೇಖನೀಯವಿವೆ. ಸಂಮೇಳನದ ಉದ್ಘಾಟನೆಯು ಸಂಸತ್ಸದಸ್ಯ ಮತ್ತು ಬೊಂಬಯಿ ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿ ಶ್ರೀ ಪಿ. ವಿ. ರಾಜೇಯವರು ನಡಿಸಿದರು ಇವರು ವಿದ್ವಾಂಸರಾಗಿಯು ಪ್ರಸಿದ್ಧ ಸಾಹಿತ್ಯಕಾರರಾಗಿದ್ದಾರೆ

(ಉಳಿದ ಪುಟ ನೋಡಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. MANGALORE. Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಹಾವಿನ ಹೆಡೆಯ ಮರಿಯಲ್ಲಿ

ಶ್ರೀ ಕೆ. ತಿಮ್ಮಪ್ಪಗಟ್ಟಿ.

ಝುಗ್ ಝುಗ್! ಝುಗ್ ಝುಗ್ ಕೂ ss.....

ಝುನಕ್! ಝುನಕ್! ಎಂದು ನರ್ತಕಿಯು ನರ್ತನವನ್ನು ನಿಲ್ಲಿಸಿ ಕಾಲನ್ನಿಟ್ಟಂತೆ ರೈಲು ಬಂದು ನಿಲ್ವಾಣದಲ್ಲಿ ನಿಂತಿತು. ನಿಲ್ವಾಣದಲ್ಲಿ ಜನಸಂದಣಿ, ನೂಕುನುಗ್ಗಲು, ಗಲಿಬಿಲಿ-ಗದ್ದಲ ಆರಂಭವಾಯಿತು!

ರೈಲಿನಿಂದ ಇಳಿದು ಊರಿಗೆ ಹೋಗುವವರು ಊರಿನಿಂದ ಬಂದು ರೈಲನ್ನೇರುವವರು ಅತ್ತ ಇತ್ತ ನಡೆದಾಡುತ್ತಿದ್ದರು. ಹಲವರು ಆಪ್ತರಲ್ಲೇ ಇಳಿದು ಹಂಚಾರಿ ದಾಟಿಬಿಟ್ಟಿದ್ದರು. ಹುಬ್ಬನ್ನೂ ಆಪಕರವೇ ಮೈನೆತ್ತು ಬಂದಂತೆ ಉರುಳಾಡುತ್ತಾ ತನ್ನ ಗಂಟುಮೂಟೆಗಳನ್ನು ಹೊತ್ತುಕೊಂಡು ಹೊರಟೀಳುತ್ತಿದ್ದರೆ. 'ಕೂಲಿ ಕೂಲಿ' ಎಂಬ ಕೂಲಿಯಾಳುಗಳ ಬೊಬ್ಬೆಗೆ ದನಿಯಾಗಿ, ಗಂಟು ಮೂಟೆಯನ್ನೆ ಹೊರಲಾಗದವನು, ಹೊರಲಿಚ್ಛೆಯಿಲ್ಲದಿದ್ದವರು 'ಏಕೂಲಿ' ಎಂದು ಕೂಗುತ್ತಿದ್ದರು. ಒಂದೆಡೆಯಲ್ಲಿ ಬೀಡಾ ಬೀಡಿ ಸಿಗರೇಟಿನ ಕೂಗು; ಮತ್ತೊಂದೆಡೆಯಲ್ಲಿ ಪತ್ರಿಕೆ ಮಾರಾಟಗಾರನ ರಾಗನಾಲೆ! ಎಲ್ಲವನ್ನೂ ಹಿಂದಿಕ್ಕಿ ಜನರ ಬೊಬ್ಬೆ!

ಹೆಂಗಸರು ಗಂಡಸರು, ಮಕ್ಕಳು ಮರಿಗಳು, ಧನಿಕರು ಬಡವರು ಎಲ್ಲರೂ ಇದ್ದರು ಆಲ್ಲ! ಕಾಲು ಟಾಂಗಾಗಳ ಶಬ್ದಗಳು ನಿಲ್ವಾಣದ ಹಿಂದಿನಿಂದ ಕೇಳಿ ಬರುತ್ತಿದ್ದುವು. ಅಲ್ಲಲ್ಲಿ ಮಾತುಕತೆಗಳು, 'ಓ, ಹೋ,ಹೋಯ್' ಎಂಬ ಕರೆಗಳು, ಅತ್ತಿತ್ತ ಪರಸರ ನಡೆಯುವ ಸದ್ದು' ಟೆಲಿಫೋನಿನ ಕರೆಗಂಟೆ, ಹೊರಗೆಳನ್ನು ಹೊತ್ತು ತಂದಿಡುವುದು, ವಾಪಸಗಳ ಓಡಾಟ .....ಎಲ್ಲ ಗದ್ದಲಕ್ಕೂ ಶ್ರುತಿಯಾಗಿ ಅಗಿಬುಂತ್ರದ 'ಭುಗ್' 'ಭುಗ್' ಶ್ವಾನೋಚ್ಛ್ವಾಸ! ಎಲ್ಲವೂ ಸೇರಿ ಆಲ್ಲಿ ಪರ್ವಗದ್ದಲ ಸನ್ನಿವೇಶವನೇ ನಡೆದಿತ್ತು!

ಪ್ರಯಾಣಿಕರು ಹಲವರು ಒಂದಿಯ ಸ್ನೇಹಿ ಆಗಲೇ ಹರಟೆಗಾರಂಭಿಸಿದ್ದರು. ಮುದುಕರು ವೀಳ್ಯ ಜಗಿಯುವುದು, ಯುವಕರು ಧೂಮ್ರಪಾನಮಾಡುವುದು, ಮಕ್ಕಳು ಮಾರಿಗಳ ಪೆಪ್ಪರಮಿಂಟು ಚೀಪುವುದು ಅವಿರತವಾಗಿ ನಡೆಯುತ್ತಿತ್ತು. ಅಂದಿನ ಬಿಸಿ ಬಿಸಿ ಸುದ್ದಿಗಳ ವಿಮರ್ಶೆ, ಬಿಸಿ ಬಿಸಿ ವರ್ಷವಾನ ಪತ್ರಿಕೆಯ ವಾಚನ, ವಿಮರ್ಶೆ, ಚರ್ಚೆಗಳು ಆರಂಭವಾಗಿದ್ದುವು. ಕೋರ್ಟು ವ್ಯವಹಾರಗಾರರು ರೈಲಿನೊಳಗೇ ನಕಲಿ ವಾದ ಪ್ರತಿವಾದ ಕ್ಕಾರಂಭಿಸಿದ್ದರು. ಶಾಲೆ, ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪುಸ್ತಕಗಳನ್ನು ಹಿಡಿದು ಕುಳಿತಿದ್ದರು. ಹಲವರು ನಮ್ಮೂರು, ನಿಮ್ಮೂರು, ಮಳೆ ಬೆಳೆ, ನೆಂಟಸ್ತಿಕೆ ಎಂದುಕೊಂಡು ಹರಟುತಿದ್ದರು.

ರೈಲು ಹೊರಡಲು ತುಂಬಾ ಹೊತ್ತಿತ್ತು. ಇನ್ನೂ ಪ್ರಯಾಣಿಕರು ದೂರದಿಂದಲೇ ವೇಗವಾಗಿ ಬರುತ್ತಿರುವುದು ಕಾಣಿಸುತಿತ್ತು. ತಲೆಯಲ್ಲಿದ್ದ ಮುಂಡಾಸು ಒಂದು ಕಂಕುಳಲ್ಲಿ, ಕೊಡೆ ಯನ್ನೊಂದು ಕಂಕುಳಲ್ಲಿ, ಒಂದು ಕೈಯಲ್ಲಿ ಕಾಲಿನ ಜೋಡುಗಳು, ಇನ್ನೊಂದು ಕೈಯಲ್ಲಿ ಕಚ್ಚೆಯ ತುದಿ ಹಿಡಿದುಕೊಂಡು ಓವ್ ಗೃಹಸ್ಥನು ಓಡಿ ಬರುತ್ತಿದ್ದನು. ಪಾಪ! ಹೆಳ್ಳಯವನಿರಬೇಕು.? ರೈಲ್ವೇ ಸಮಯ ಹೇಗೆ ಅವನಿಗೆ ಗೊತ್ತಿರಬೇಕು? ಹಿಂದಿನಿಂದ ಇಬ್ಬರು ಮೂವರು ಹೆಂಗಸರು ನುತ್ತೋರ್ವ ವ್ಯಾಯಸ್ಥನೂ, ಒಬ್ಬ ಯುವಕನೂ ಸವೇಗ ವಾಗಿಯೇ ಬರುತ್ತಿದ್ದರು. ನಿಲ್ವಾಣದ ಹತ್ತಿರ ಬಂದಿದ್ದರೂ "ರೈಲು ಹೊರಡಲು ಎಷ್ಟು ಹೊತ್ತಿದೆ?" ಎಂದು ದಾರಿಗನೊತ ನೆಂಬಿಡಬರುತ್ತಿದ್ದ ಗೃಹಸ್ಥನು ಕೇಳಿದನು.

"ಓ ಅಜ್ಜಯ್ಯ, ಯಾಕಿಷ್ಟು ಗಡಿಬಿಡಿ? ಇನ್ನೂ ಒಂದು ಗಂಟೆಯಿದೆ ನಿಧಾನವಾಗಿ ಹೋಗಿರಿ" ಎಂದು ಆ ದಾರಿಗನು ಉತ್ತರವಿತ್ತನು. ಆದಾ! ಎಂದು ನಿಟ್ಟುಸಿರಿಟ್ಟು ಮುದುಕನು ಹಿಂದಿನ ಬಳಗವನ್ನೊಮ್ಮೆ ನೋಡಿ ರೈಲ್ವೇ ಸ್ಟೇಶನಿನೊಳ ಹೊಕ್ಕನು.

ಎಲ್ಲರೂ 'ಪ್ಲಾಟ್ ಫಾರಮಿ'ಗೆ ಬಂದರು. ಇಬ್ಬರು ಸೋಸ್ಟ್‌ಮ್ಯಾನ್‌ಗಳೊಂದ ಡೆಯಲ್ಲಿ ಟಪ್ಪಾಲು ಜೀಲಗಳನ್ನು ಹರಿ ಸ್ಥಿಸುತ್ತಾ ರೈಲಿಗೆ ತುಂಬುತ್ತಿದ್ದರು. ಪ್ಲಾಟ್ ಫಾರಮ್‌ನಲ್ಲಿ ವಿಶೇಷ ಗಲಭೆಯಿರಲಿಲ್ಲ. ರೈಲು ಹೊರಡಲು ಇನ್ನುವ ಹೊತ್ತಿನ ಜ್ಞಾನವಿದ್ದವರು, ಆಲ್ಲಲ್ಲಿ ಹೊರಗೆ ನಿಂತು ಸುಖದುಃಖ, ಮಾತುಕತೆ ಬೀಳ್ಕೊಡುಗೆಗಳನ್ನು ಸಾಗಿಸಿದ್ದರು. ಕೆಲವರು ಉಪಾಹಾರಗೃಹದಲ್ಲಿ ಉಲ್ಪಾಹಾರವನ್ನು ಸ್ವೀಕರಿಸುವುದರಲ್ಲಿ ಮಗ್ನರಾಗಿದ್ದರು. ಉಳಿದವರು ಮಾತ್ರ, ಆಗಲೇ ಬಂಡಿಯೇರಿ ಸ್ಥಳವನ್ನು ಆಕ್ರಮಿಸಿ ಭದ್ರಪಡಿಸಿಬಿಟ್ಟಿದ್ದರು!

ಪೂರ್ವೋಕ್ತ ಗೃಹಸ್ಥನ ಬಳಗವು ಒಂದೆಡೆ ನಿಂತಿತ್ತು. ಏನೋ ಬೀಳ್ಕೊಡುಗೆಯ ಮಾತುಕತೆಯನ್ನೆ ಜರಗಿಸುತ್ತಿದ್ದರೂ ಅದು ಸಾಧಾರಣವಾದ ಬೀಳ್ಕೊಡುಗೆಯಾಗಿರಲಿಲ್ಲ. ಒಬ್ಬಳು ಹರೆಯದ ಹುಟ್ಟಿ ಯುವತಿ ಒಂದೆಡೆ ಮುದುಡಿ ನಿಂತಿದ್ದಳು.. ಯುವಕನೂ ಮೌನವಾಗಿ ನಿಂತಿದ್ದನು. ಎಲ್ಲರ ಮುಖದಲ್ಲಿಯೂ ಚಿಂತೆಯ ಛಾಯೆ ಹರಿದಿತ್ತು. ಆ ಯುವತಿ ಯುವಕರಿಬ್ಬರು ನವ ವಧೂವರರು ವಧುವಿನ ತಂದೆ ತಾಯಿಗಳವಳನ್ನು ಪತಿಗೃಹಕ್ಕೆ ಕಳುಹಿಸಿ ಬೀಳ್ಕೊಳ್ಳುವ ಸಲುವಾಗಿ ಇಲ್ಲಿವರೆಗೆ ಬಂದಿದ್ದರು. ಮಗಳಿಗೆ ಹೇಳಬೇಕಾದ ಹಿತನುಡಿಗಳನ್ನು ಆಶೀರ್ವಾದವನ್ನು ಅವಳ ತಂದೆ ತಾಯಿಗಳು ಪೂರೈಸಿದರು. "ಆಗಾಗ ಬರುತ್ತಿರಿ ಗಂಡ ಮತ್ತು ಹೆಂಡತಿ ಒಟ್ಟಾಗಿ ದಸರೆಗೆ ಬನ್ನಿ" ಎಂದು ವಧುವಿನ ತಂದೆ ಅಳಯನ ಮುಖ ನೋಡುತ್ತ ನುಡಿದನು. ಏವರೂ ರೈಲ್ವೇಗಾಡಿಯ ಬಳಿ ಬಂದರು.

"ಹೋಗಿ ಬರ್ತೀನಪ್ಪಾ" ಎಂದು ಮಗಳು ತಂದೆ ತಾಯಿಗಳಿಗೆ ಕಾಲುಮುಟ್ಟಿ ವಂದಿಸಿದಳು. ಅಳು ಉಕ್ಕಿ ಬರುತ್ತಿತ್ತು.

"ಅಳಬೇಡಮ್ಮಾ ಬಾ ಕುಳಿತುಕೋ" ಎಂದು ಆತ್ತೆ ರೈಲನ್ನೇರಿ ಸೊಸೆಯನ್ನು ಕುಳ್ಳಿರಿಸಿದಳು.

"ಬರ್ತೀವಿ ಮಾವಯ್ಯ" ಅಳಯನೂ ಮಾವನಿಗೆ ನಮಸ್ಕರಿಸಿದನು. ಎಲ್ಲರ ಕಣ್ಣಂಚಿನಲ್ಲೂ ಕಂಬನಿ. ವಧುವಿನ ತಂದೆ ತಾಯಿಗಳಿಬ್ಬರೂ ಭಾರವಾದ ಹೃದಯದಿಂದ ಬೀಳ್ಕೊಟ್ಟು ಸ್ವಗ್ರಾಮಕ್ಕೆ ಹಿಂತಿರುಗಿದರು. ಒಳತ್ತಿರುವ ಸೊಸೆಯನ್ನು ಅತ್ತೆ ಸಮಾಧಾನಪಡಿಸುತ್ತಿದ್ದಳು.

ಐವತ್ತು ಅರುವತ್ತು ರಾಶಿ ಮಕ್ಕಳನ್ನು ಕೂಡಿಕೊಂಡು ಇಬ್ಬರು ಉಪಾಧ್ಯಾಯರು ಪ್ಲಾಟ್‌ಫಾರಮಿಗೆ ಬಂದರು ಎಲ್ಲೋ ದೂರಕ್ಕೆ ಪ್ರವಾಸಗೈಯುವವರಾಗಿರಬೇಕು. ಮಕ್ಕಳೆಲ್ಲರೂ ಚಿಕ್ಕವರೇ ಹಾಡುತ್ತಾ, ನಲಿಯುತ್ತಾ, ಚಮತ್ಕಾರಗಳನ್ನು ಕಂಡು ವರ್ಣಿಸುತ್ತಾ, ಮಾತನಾಡುತ್ತಾ ಮಕ್ಕಳಲ್ಲಿ ಗುಂಪು ಗುಂಪಾಗಿ ರೈಲಿನ ಬಳಿ ಬಂದರು. ಎಲ್ಲರೂ ಸಂತೋಷದಲ್ಲಿ, ಆತುರದಲ್ಲಿ ಮುಳುಗಿದ್ದರು., ಎಲ್ಲರ ಮುಖದಲ್ಲಿಯೂ ಹರ್ಷದ ಬೆಳಕು ಬೆಳಗುತ್ತಿತ್ತು. ಎಲ್ಲರೂ ರೈಲನ್ನೇರಿದರು.

ವ್ಯಾಪಾರಿಗಳ ಮುಂಡಾಸಿನ ತಂತ್ರ ಪೊಂದು ಹೆರುಕು ಮುರುಕು ಹಿಂದಿ-ಮರಾಠಿ ಮಾತನಾಡುತ್ತಾ ರೈಲೇರಲು ಬರುತ್ತಿತ್ತು. ಆ ಗುಂಪನ್ನು ಬೀಡಿಸಿಕೊಂಡು ಯುವಕರ ತಂಡವೊಂದು ಪ್ಲಾಟ್ ಫಾರಂನಲ್ಲಿ ಹರಟುತ್ತಾ ಬಂತು. ಊರನ್ನು ಬಿಟ್ಟು ವ್ಯಾಸಂಗಕ್ಕಾಗಿ ಪುದೇಶಕ್ಕೆ ಹೋದ ಅಣ್ಣತಮ್ಮಂದಿರಿಬ್ಬರು ತಮ್ಮ ಗೆಳೆಯರೊಂದಿಗೆ ಬಂದು ರೈಲು ಹತ್ತಿದರು. ಕೆಲ ವರ್ಷದಿಂದ ತಂದೆತಾಯಿಗಳನ್ನು ಕಮ್ಮೂರನ್ನು ನೋಡದ ಆ ಸಹೋದರರ ಮುಖದಲ್ಲಿ ಆತುರ, ಆನಂದಗಳು ಲಾಸ್ಯವಾಡುತ್ತಿದ್ದುವು. ಅವರೊಂದಿಗೆ ಪಯಣ ಬೆಳೆಸುವ ಸ್ನೇಹಿತರು ಅವರೊಡನೆ ಬಂಡಿಯೇರಿದರು. ಉಳಿದವರು ಬೀಳ್ಕೊಡಲೆಂದು ಹೊರಗೇ ನಿಂತರು.

"ಚಂದ್ರು ಸುರೇಶ್, ಇನ್ನೊಮ್ಮೆ ಬೇಗನೆ ಬನ್ನಿ. ನಮ್ಮನ್ನೆಲ್ಲಾ ಮರೆತು ಮನೆಯಲ್ಲೇ ಡೇರೆ ಹೊಡೀ ಬೇಡಿ. ಹೋದೊಡನೆ ಕಾಗದಹಾಕಿರಿ" ಎಂದು ಗೆಳೆಯರ ಮಧ್ಯದಿಂದ ಒಬ್ಬನು ಎಚ್ಚರಿಸಿದನು.

"ಅಂತೂ ಕಲ್ಯಾಣ ಸುಮೂಹೂರ್ತಕ್ಕೆ ಕುಂಕುಮಾಂಕಿತ ಸುಲಗ್ನ ಪತ್ರಿಕೆ ಕಳಿಸಲು ಮರಿಬೇಡ ಜೆಂಡ್ರಾ" ಮತ್ತೊಬ್ಬನು ಗಟ್ಟಿಯಾಗಿ ಎಚ್ಚರಿಸಿದನು. ಎಲ್ಲರೂ ಗೊಳ್ಳೆಂದು ನಕ್ಕರು.

"ಆಲ್ಲಾ ಈ ಶಂಕರ ಯಾಕೆ ಇವರೊಡನೆ ಇಂದೇ ಹೊರಟಿದ್ದಾನೆ? ಟೋ ಶಂಕರ್ ನಿನ್ನ ಡಾರ್ಲಿಂಗ್ ಮನೆಯಲ್ಲೇ ಇರಬಹುದು ಕಣೋ, ಆಗಲಿ ತುಂಬ ಕಾಲವಾಯ್ತೆಂತ ಇಷ್ಟು ಅವಸರವೇನು? ಮೊನ್ನೆ ತಾನೆ ಪತ್ರ ಬಂದಿತ್ತಲ್ಲಾ?" ಎಂದು ಆ ಸಹೋದರರೊಡನೆ ಹೊರಟ ಅವರೂರಿನ ವಿವಾಹಿತ ಮಿತ್ರನನ್ನುದ್ದೇಶಿಸಿ ಒಬ್ಬನು ಆಣಕಿಸಿ ಕೇಳಿದನು.

"ಡಿಯರ್, ಡಿಯರ್ ಅಂತ ಆಲ್ಲೋ ಕೂಪ್ಟಿದ್ದೀಯ, ಆಲ್ಲಾ ಬರೋ ತಿಂಗಳನ ಟ್ರೈಪ್ಪಿಗೆ ಬರ್ತೀಯಾ?' ಎಂದು ಮತ್ತೊಬ್ಬನು ಕೇಳಿದನು.

"ಆಲ್ಲಿ ಒಂದೇ ಡಿಯರ್ ಇರೋದು ಕಣೋ, ಇಲ್ಲಿ ಕೀಟಲೆ ಕೊಡೋ ತುಂಬಾ ಡಿಯರ್ಸ್ ಇದ್ದೀರಲ್ಲಾ; ಆಗಲಿ, ಟ್ರೈಪ್ಪಿಗೆ ಬಂದೇ ಬರ್ತೀನಿ" ಎಂದು ಅವನು ಉತ್ತರಿಸಿದನು.

"ಸುರೇಶ್, ಚಂದ್ರೂ ನೆನಪಿರಲಿ, ಟ್ರೈಪ್ಪಿಗೆ ಎಲ್ಲರೂ ಬರಬೇಕು" ಹೊರಗಿಂದ ಗೆಳೆಯರು ಕೂಗಿ ಹೇಳಿದರು.

"ಓ ಬಂದೇ ಬರ್ತೀವೆ" ಇಬ್ಬರೂ ನಕ್ಕು ನುಡಿದರು. ರೈಲು ಹೊರಡುವ ಸೂಚನೆಯಾಯಿತು. ಮೆಲ್ಲನೇ ಚಕ್ರಗಳು ಉರುಳಲಾರಂಭಿಸಿದುವು. "ಗುಡ್ ಬೈ, ಗುಡ್ ಬೈ!" ಎಲ್ಲರೂ ಪರಸ್ಪರ ಅಭಿನಂದಿಸಿದರು ರೈಲು ಮುಂದುವರಿಯಲಾರಂ

(೧೦ನೇ ಪುಟ ನೋಡಿರಿ)

ತೇವಣಾತಿಗಳ ಮೇಲೆ ಅತ್ಯಧಿಕ ಬಡ್ಡಿ ದರಗಳು

ಥ್ರಿಫ್ಟ್ ಡಿಪಾಜಿಟ್‌ಗಳ ಮೇಲೆ ವರ್ಷಕ್ಕೆ 3% ರಂತೆ

ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ನ ಮೇಲೆ ವರ್ಷಕ್ಕೆ 2½% ನರೆವಿಗೂ

ಅಲ್ಪಾವಧಿ ಮತ್ತು ನಿರ್ದಿಷ್ಟಕಾಲದ ತೇವಣಾತಿಗಳಿಗೆ
ಅತ್ಯಂತ ಆಕರ್ಷಕ ದರಗಳು

ಹೆಚ್ಚಿನ ನಿವರಗಳಿಗೆ ನಿಮ್ಮ ಸಮೀಪದ ಬ್ಯಾಂಚ್ ಮ್ಯಾನೇಜರಲ್ಲಿ ವಿಚಾರಿಸಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ ಪೆಡ್ಯೂಲ್ಡ್ ಬ್ಯಾಂಕುಗಳೆಲ್ಲೆಲ್ಲಾ ಅತ್ಯಂತ ದೊಡ್ಡವಾದುದ್ದು.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

Q'Crown RUBBER STAMP CO.

BALMATTA ROAD, MANGALORE.

ಸಂಶೋಧಕರಿಗೊಂದು ಆಹ್ವಾನ—

ನೀವೇಕೆ ಪ್ರಯತ್ನಿಸಬಾರದು?

ಶ್ರೀ ಎಸ್. ಗೋಪೀಚಂದರಾವ್, ಪಿದ್ವಾನ್, ನಿಶಾರದ.

ಮಾನವನನ್ನು ಪರಮಾತ್ಮನು ತನ್ನ ಪ್ರತಿಕೃತಿಯಲ್ಲಿಯೇ ಮಾಡಿದನು. ಅವನು ದಿವ್ಯ ಪಿತ ಸ್ವರೂಪನು. ಸೃಷ್ಟಿಯ ಉತ್ತಮೋತ್ತಮ ಕೃತಿಯಾಗಿದ್ದಾನೆ. ನರನೇ ನಾರಾಯಣನಾಗಿದ್ದಾನೆ. ಸೃಷ್ಟಿಯ ವಿಕಾಸದ ಚರಮ ಒಂದು ಮನುಷ್ಯನೇ ಆಗಿದ್ದಾನೆ. ಬ್ರಹ್ಮನ ಕಲೆಯು ಮಾನವನಲ್ಲಿ ಸಂಪೂರ್ಣರೂಪದಲ್ಲಿ ಅಭಿವ್ಯಕ್ತಿಪಡೆದುದರಿಂದಲೇ ಅವನು ಚರಾಚರ ಜಗತ್ತಿನ ಭೋಕ್ತಾರನಾಗಿದ್ದಾನೆ.

ಇಂತಹ ಮಾತುಗಳನ್ನು ನಾವು ಯಾವಾಗಲೂ ಕೇಳುತ್ತಾ ಬಂದಿದೇವೆ. ಕೇಳಿ ನಾವು ಗೌರವಾನ್ವಿತರೂ ಆಗಿದೇವೆ. ನಾವು ಸೃಷ್ಟಿಯ ರಾಜರೂ ಆಗಿದೇವೆ ಸೃಷ್ಟಿ, ಜಲ, ವಾಯು-ಎಲ್ಲವನ್ನೂ ನಮ್ಮ ಸೇವಕರಂತೆ ಇಟ್ಟುಕೊಂಡಿದೇವೆ. ಎಲ್ಲವೂ ನಮ್ಮ ಸುಖ-ಆರಾಮಗಳಿಗೋಸ್ಕರವೇ ಇರುವುದೆಂದು ತಿಳಿದಿದೇವೆ.

ಎಲ್ಲ ಪ್ರಾಣಿಗಳಲ್ಲಿಯೂ ನಮ್ಮ ಕಾಯವು ಸುಂದರವಾಗಿದೆ ರೋಮ, ನರನಾಡಿ ರಹಿತವಾದ ನಮ್ಮ ಶರೀರ ಅದೆಷ್ಟು ಕಮನೀಯವಾಗಿರಲಾರದು! ಆದರೆ, ನಾವದನ್ನು ಜಗತ್ತಿನ ಸಮಸ್ತ ಸಾಧನೆಗಳಂದ ಬೆಳೆಸಿಕೊಂಡು ಒಂದೇ ಸವನೆ ಮನೋಹಾರಿಗಳಾಗುತ್ತೇವೆ.

ನಮ್ಮ ವಸ್ತ್ರ, ನಮ್ಮ ಶೃಂಗಾರ ಸಾಧನ ಅಪ್ರತಿಮವಾಗಿವೆ. ಯಾತಾಯಾತ ಕ್ಕಾಗಿ ನಾವು ವಿಧವಿಧದ ವಾಹನಗಳನ್ನು ರಚಿಸಿದೇವೆ. ವಾಸಿಸಲು ಸುಂದರ ಗೃಹಗಳನ್ನು ನಿರ್ಮಿಸಿದೇವೆ. ನಗರಗಳನ್ನು ಕಟ್ಟಿದೇವೆ. ಐವತ್ತಾರು ಭೋಗಗಳನ್ನೂ ಮೂವತ್ತಾರು ವ್ಯಂಜನಗಳನ್ನೂ ಶೋಧಿಸಿದೇವೆ. ವಿದ್ಯುತ್ತನ್ನು ಸೆರೆಹಿಡಿದಿದೇವೆ. ದೂರವನ್ನು ಸವಿಾಪ ಮಾಡಿದೇವೆ. ಅಪರಿಚಿತ ಶಕ್ತಿಯನ್ನು ಪ್ರಕೃತಿಯಿಂದ ಅಪಹರಿಸಿಕೊಂಡಿದೇವೆ.

ನಿಜವಾಗಿಯೂ ನಾವು ಧನ್ಯರಾಗಿದೇವೆ.

ಮತ್ತು ನಮ್ಮ ಆತ್ಮವಂಚನೆಯೂ ಧನ್ಯವಾಗಿದೆ. ನಮ್ಮನ್ನು ಮೋಸಗೊಳಿಸುವುದರಲ್ಲಿಯೂ ನಮ್ಮ ಶಕ್ತಿ ಅಸೀಮವೆಂದು ತಿಳಿದುಬರುತ್ತದೆ. ಇಲ್ಲವಾದರೆ, ನಾವು ಪರಮಾತ್ಮನ ರೂಪವಲ್ಲ, ಪರಮಾತ್ಮನ ಸರ್ವೋತ್ಕೃಷ್ಟ ಕೃತಿಯೆಂದಿಗೂ ಅಲ್ಲ, ಮತ್ತು ಸೃಷ್ಟಿಯಿಂದಿನ ಚರಮಬಿಂದುವೂ ಅಲ್ಲವೆಂಬುದನ್ನು ನಾವು ತಿಳಿಯುತ್ತಿರಲಿಲ್ಲವೆ?

ಏಕೆ?

ನಮ್ಮ ಶರೀರವು ರೋಗಗಳ ತವರ್ಮನೆಯಾಗಿದೆ. ಮಾನವ ಶರೀರವನ್ನು ಆಕ್ರಮಿಸುವಷ್ಟು ರೋಗ-ವ್ಯಾಧಿಗಳು ಮತ್ತಾವ ಜೀವಧಾರಿಯನ್ನೂ ಅಂಟುವುದಿಲ್ಲ. ನಾಯಿ, ಬೆಕ್ಕು, ಕುದುರೆ, ದನ, ಸಿಂಹ, ಕತ್ತೆ, ಪಕ್ಷಿ, ಏಾನು, ಪೊಸಳೆ, ಮೊಸಳೆ ಯಾವುದನ್ನು ಬೇಕಾದರೂ ನೋಡಿರಿ, ಕೀಟ, ಪತಂಗಗಳನ್ನು ತೆಗೆಯಿರಿ, ನಮಗಿರುವಷ್ಟು ರೋಗ ಮತ್ತಾವುದಕ್ಕೂ ಇರುವುದಿಲ್ಲ. ಅವನ್ನು ಗಣಿಸುವ ಆವಶ್ಯಕತೆಯಿಲ್ಲ, ನಿಮಗದು ಸ್ವಯಂ ವೇದ್ಯವಾಗಿರುವುದು.

ಮತ್ತು ಇವೆಲ್ಲವೂ ನಾವು ನಮ್ಮ ರಕ್ಷಣೆ-ಸಹನೆಗಳ, ಆಹಾರ-ಆಸರೆಗಳ ಪರಮ ವೈಜ್ಞಾನಿಕ ಅಧ್ಯಯನವನ್ನೆ ಮಾಡುತ್ತಾ ಇರುವಾಗ! ಉತ್ತಮೆತೊಡುಗೆಗಳ ತತ್ವಗಳನ್ನು ಅರಿತಿದೇವೆ; ವಿಟಮಿನ್ ಪ್ರೋಟೀನ್‌ಗಳ ಸಂಪೂರ್ಣ ಪರಿಚಯಸ್ಥರಾದೇವೆ; ಸಮಯಾನುಸಾರ ಭೋಜನ ಮಾಡಲು ಕಲಿತಿದೇವೆ; ಬಟ್ಟೆಗಳ ವಿಜ್ಞಾನಗಳನ್ನು ತಿಳಿದಿದೇವೆ; ಆರೋಗ್ಯ ಸಿದ್ಧಾಂತಗಳನ್ನು ಹೃದಯಂಗಮವಾಗಿಟ್ಟುಕೊಂಡಿದೇವೆ!

ವಾಯು, ಜಲ, ಪೃಥ್ವಿ, ಉದ್ಭಿಗ್ಗ, ಖನಿಜ, ಜೀವಾಚರ, ತರಕಾರಿ ಸೊಪ್ಪು, ಮೀನು ಮಾಂಸ, ಎಲ್ಲವುಗಳ ಗುಣದೋಷಗಳೂ ನನಗೆ ತಿಳಿದಿವೆ. ನಮ್ಮಲ್ಲಿ ನಿರ್ಧಾರಕ್ಕಿರುವ ನಿರ್ಧಾರಕರಾದವರೂ ಭೋಜನದ ಕಡೆಗೆ ಯಥಾಸಾಧ್ಯ ಧ್ಯಾನವೀಯುತ್ತಾರೆ. ಅದನ್ನು ಸ್ವಾದಿಷ್ಟ ಮತ್ತು ಪೌಷ್ಟಿಕವನ್ನಾಗಿಸುತ್ತಾರೆ. ಉಚಿತ ಸಮಯದಲ್ಲಿ ಉಣ್ಣುತ್ತೇವೆ. ಯೋಗ್ಯ ವೇಳೆಯಲ್ಲಿ ಮಲಗುತ್ತೇವೆ. ವ್ಯಾಯಾಮ ಮತ್ತು ಶರೀರ ವೃದ್ಧಿಯ ಕಡೆಗೆ ಸಾಕಷ್ಟು ಗಮನವೀಯುತ್ತೇವೆ.

ಹಾಯಿ, ಇವೆಲ್ಲವನ್ನೂ ನಾವು ಮಾಡುತ್ತೇವೆ ರಾತ್ರಿ ಹಗಲು ಶರೀರವನ್ನು ನೀರೋಗಿಯಾಗಿಡಲು ಅಸಕ್ತರಾಗಿರುತ್ತೇವೆ. ಪರಂತು ಮೂವತ್ತೆರಡು ಹಲ್ಲುಗಳ ನಡುವಿನ ನಾಲಗೆಯಂತೆ ನಾವು ಬದುಕುತ್ತೇವೆ ನಾಲ್ಕೂ ಕಡೆ ರೋಗಗಳು ಘಾಳಿಯಿಡುತ್ತವೆ. ಅಗಣಿತ ರೋಗಗಳ ಬೀಡು-ಮಾನವ ಶರೀರ!

ಅಲ್ಲಲ್ಲಿ ನೀರು ಕುಡಿಯಲು ನಾವು ಅಂಜುತ್ತೇವೆ. ಮಿತಿಮೀರಿ ತಿನ್ನಲು ಪ್ರಾಣದ ಭಯವೆನ್ನುತ್ತೇವೆ. ಕೆಲವೊಮ್ಮೆ ಚುಚ್ಚುಮದ್ದನ್ನು ಚುಚ್ಚಿಸುತ್ತೇವೆ ಬೇರೊಮ್ಮೆಯೋಗಾಸನವನ್ನು ಮಾಡುತ್ತೇವೆ. ಸಿಂಕಕ್ಕೆ ಹೆದರಿ ವಂತೆ ವೇಳೆಮೀರಿ ತಿನ್ನಲುಉಂಜುತ್ತೇವೆ ಸಣ್ಣ ಸಣ್ಣ ಮಕ್ಕಳು ಸಹ ಡಾಕ್ಟರಿ ಮತ್ತು ವೈದ್ಯಕ, ಹಿತ ಸುತ ಮತ್ತು ಹೋಮ್ಯೋಪೆಥಿಗಳ ವಿಷಯ ಬರೆದದನ್ನು ಓದುತ್ತಾರೆ. ಸೃಷ್ಟಿಯ ಆರಂಭಕಾಲದಿಂದಲೂ ಸರಕಾರ, ಸನಾಜ, ವಿಜ್ಞಾನವೆಲ್ಲವೂ ನಾವು ನೀರೋಗಿಗಳಾಗಿರುವಂತೆ ಪ್ರಯತ್ನ ನಡೆಸುತ್ತಾ ಇವೆ.

ಆದರೆ, ನಾವು ರೋಗಕ್ಕೆ ತುತ್ತಾಗಿದ್ದೇವೆ!

ಇದು ಪರಮಾತ್ಮನ ಪ್ರತಿಜ್ಞೆಯೆ ಕೇಗಾದೀತು? ಇದು ಸೃಷ್ಟಿಯ ಅನುಪಮ ಕಲಾಕೃತಿ ಹೇಗಾದೀತು?

ಇನ್ನೊಂದೆಡೆ ನೋಡಿರಿ-ನಮ್ಮ ಕೊಳಕು ಆಹಾರ ಪಶುಪಕ್ಷಿಗಳು ತಿನ್ನಬಲ್ಲುವು; ತಿನ್ನುತ್ತವೆ. ಯಾವ ಆಹಾರದಿಂದ ಮನುಷ್ಯನು ಸಾಯುವೆ ಹೋಗಬಹುದಾದರೂ ರೋಗಗ್ರಸ್ತನಾಗುವುದು ಖಂಡಿತವೋ ಅಂತಹದನ್ನು ಮಾನವೇತರ ಪ್ರಾಣಿಗಳು ಮನಸ್ಸಂತೋಷದಿಂದಲೇ ತಿನ್ನುತಿವೆ; ಆದರೆ ಅವುಗಳ ಬಾಲ ಸಹ ಡೊಂಕಾಗುವುದಿಲ್ಲ!

ಅಪಕ್ವ ಹಣ್ಣು, ಕಟ್ಟ ಹಾಲು, ಹಳಸಲು ಅನ್ನ, ಕಡ್ಡಿತಿಪ್ಪೆ, ಎಲ್ಲವನ್ನೂ ನಾವು ತ್ಯಜಿಸುತ್ತೇವೆ; ಜಾನುವಾರುಗಳಿಗೆ ಕೊಡುತ್ತೇವೆ ಮತ್ತು ಅವೇ ಅವುಗಳಿಗೆ ಅಮೃತ ಸದೃಶವಾಗುತ್ತವೆ!

ಪ್ರಾಯಃ ಜಾನುವಾರುಗಳು ಪ್ರತಿಕ್ಷಣವೂ ತಿನ್ನುತ್ತಾ ಇರುತ್ತವೆ. ಇವುಗಳಿಗೆ ಸಮಯದ ಧ್ಯಾನವಿಲ್ಲ; ಹೊಟ್ಟೆಯಲ್ಲಿ ಜೀರ್ಣವೂ ದೂರ ತಿಂ ಎ, ತಿಂದುಕೊಳ್ಳುತ್ತಾ ದಾರಿ ನಡೆಯುತ್ತಾ ಇರುತ್ತವೆ.

ಯಾವಾಗಲಾದರೊಮ್ಮೆಯಾದರೂ ಅಜೀರ್ಣವಾಗುವುದಿಲ್ಲ, ಬೇರೆ ರೋಗದ ಗಾಳಿಯೂ ಸೋಂಕುವುದಿಲ್ಲ.

ನಾವು ಯಾವುದಾದರೂ ಹಕ್ಕಿಯಂತೆ ಶರೀರವನ್ನು ಬೀಳಬಿಟ್ಟರೆ, ಅಥವಾ ತಿನ್ನತೊಡಗಿದರೆ, ನಾವು ಪತ್ತೇ ಹೋದೇವು ಹರಿದಿಂದ ತಿಂದರೆ ರೋಗಕ್ಕೆ ತುತ್ತಾಗುವೆ. ನಡೆಯುವುದು ತಿರುಗುವುದು ಅಸಾಧ್ಯವಾಗುತ್ತದೆ ಸ್ವಲ್ಪ ಚಿರಾಮ ತೆಗೆದುಕೊಳ್ಳಲು ಡಾಕ್ಟರು ಉಪದೇಶಿಸುತ್ತಾರೆ ಆದರೆ, ಮೊಲವು ತುಂಬಿದ ಹೊಟ್ಟೆಯನ್ನು ಹೊತ್ತುಕೊಂಡೇ ಮೈಲುಮೈಲು ಓಡುತ್ತದೆ. ಹಕ್ಕಿಗಳು ಕಾಳುಕಡ್ಡಿಯನ್ನು ತುಂಬಿಸಿಕೊಂಡೇ ಗಾಳಿಯಲ್ಲಿ ಹಾರುತ್ತವೆ.

ಆದರೆ ಅವು ಸ್ವಲ್ಪ ಚೂರ್ಣವನ್ನು ಸೇವಿಸುವುದನ್ನು ನಾವು ಕಾಣುವುದಿಲ್ಲ. ಮೊಲದ ಕೇಲೂ ಮುರಿಯುವುದನ್ನು ಕೇಳುವುದಿಲ್ಲ.

ಈ ಸ್ಥಿತಿ ನಾವ್ಯಾ ನಿಟ್ಟಿನಲ್ಲಿದೆ ಸ್ವಾಸ್ಥ್ಯ, ಸ್ವಸ್ಥಭೋಜನ, ಆಹಾರ ವಿಹಾರನ ಎಲ್ಲ ನಿಯಮಗಳೂ ಮಾನವನಿಗೆ ಪಾತ್ರವೆಂದು ತಿಳಿಯಬೇಕು. ಅನ್ಯ ಪ್ರಾಣಿಗಳನ್ನು ಇವರಿಂದ ಎತ್ತರದಲ್ಲಿ ಕೂರಿಸಲಾಗಿದೆ. ಅವುಗಳ ಶರೀರವನ್ನು ಪರಮಾತ್ಮನು ಈ ರೀತಿಯಾಗಿ ಮಾಡಿದ್ದಾನೆಂದು ತಿಳಿಯುತ್ತದೆ; ಮತ್ತು ಮನುಷ್ಯವದ್ದನ್ನು..... ಈ ನೀವೇ ಆಲೋಚಿಸಿ ಹೇಳಬಲ್ಲಿರಿ.

ಪರಮಾತ್ಮನು ಮಾನವನಿಗೆ ನಿರೋಗಿ ಜೀವನವನ್ನೀಯದೆ ಹೋದರೂ ಬುದ್ಧಿಯೊಂದನ್ನು ಕೊಟ್ಟಿದ್ದಾನೆ. ಅದುದರಿಂದ ಮಾನವೇತರ ಪ್ರಾಣಿಗಳ ನಿರೋಗಿ ಜೀವನದ ಒಳಗುಟ್ಟಿನೆಂಬುದನ್ನು ಕಲಿತುಕೊಳ್ಳುವಲ್ಲಿ ಈ ಒದ್ದಿಶಕ್ತಿಯನ್ನುಪಯೋಗಿಸಬೇಕು ಔಷಧಿಗಳ ಶೋಧನೆಯಲ್ಲಿ ಇದು ಅಧಿಕ ಉಪಯೋಗಿಯಾಗಬಹುದು.

ಆಗಲಿ, ಬನ್ನಿ, ಆಲೋಚಿಸಿರಿ—

ಭೋಜನ, ಪಾನ, ಅಕ್ಷರ, ವಿಹಾರ, ಜನ್ಮ, ಮರಣ ಎಲ್ಲವೆಲ್ಲಿಯೂ ಮಾನವ ಮತ್ತು ಮಾನವೇತರ ಪ್ರಾಣಿ ಎರಡೂ ಒಂದೇ ಸಮವಾಗಿವೆ. ಎಲ್ಲವಕ್ಕೂ ಶಾರೀರಿಕ ಆವಶ್ಯಕತೆಗಳು ಏಕಸಮವಾಗಿವೆ. ಮುಖ್ಯ ಅನುಭೂತಿಗಳು ಸಹ ಒಂದೇ.

ಶರೀರದ ಒಳಚನೆ ಸಹ ಒಂದರೊಡನೊಂದು ಹೊಂದಿಕೊಳ್ಳುತ್ತದೆ.

ಆದರೂ ಅಂತರವೇನು? ಮಾನವೇತರ ಪ್ರಾಣಿಗಳಲ್ಲಿ ಶರೀರದ ರೋಗರುಜಿನಗಳೊಡನೆ ಹೋರಾಡಿ ಗೆಲ್ಲುವ ಯಾವ ಶಕ್ತಿಯು ಅಡಕವಾಗಿದೆ? ನಮ್ಮಲ್ಲಿ ಯಾವ ಶಕ್ತಿಯ ಕೊರತೆಯಿದೆ?

ಏನು ಆಲೋಚಿಸಿದಿರಿ?

ನಿಮ್ಮ ತಿಳುತಳಿಕೆಯಲ್ಲಿ ಎರಡು ಭಿನ್ನ ತೆಗಳು ಕಾಣಬರುವುವು: ನಗುವುದು ಮತ್ತು ಎರಡು ತಿಂಗಳುಗಳಲ್ಲಿ ನಡೆಯುವುದು.

ಜಗತ್ತಿನ ಬೇರಾವ ಪ್ರಾಣಿಯೂ ನಗಲಾರದು. ಎಲ್ಲವೂ ಪರಮಾತ್ಮನು ತನಗೆ ಕೊಟ್ಟ ಕೈಕಾಲುಗಳ ಬಲದಿಂದಲೇ ನಡೆಯುವರು

ಇದು ಹೊರತಾದ ಜನ್ಮಜಾತ ರಕ್ಷಣೆ ಸಹನೆಗಳ ಅಂತರವಿವ್ವಲ್ಲಿ ನೀವು ಹೇಳಿರಿ.

(ನಾನೇ ಮಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
H. O. ಉಡುಪಿ. Estd 19 '5

ತಾ 16–12–1957ರಲ್ಲಿ
ರಾಯಚೂರು ಜಿಲ್ಲೆಯ ಕೊಪ್ಪಳ್‌ದಲ್ಲಿ
ಸಿಂಡಿಕೇಟ್ ಬೇಂಕಿನ ಹೊಸ ಶಾಖೆಯು ತೆರೆಯಲ್ಪಡುವುದು

ಅಧಿಕೃತ ಭಂಡವಾಳ:	Rs	56,00, 00
ತೆತ್ತ ಭಂಡವಾಳ:	Rs	32,28,787
ವಾಲು ಭಂಡವಾಳ:	Rs	32,10,487
ಪಾವತಿಯಾದ ಭಂಡವಾಳ:	Rs.	28,33,000
ಕ್ಷೇಮನಿಧಿ:	Rs.	18,00,000

ರೇವಣಾತಿ ರೂ. 9·64 ಕೋಟಿಗೂ ಮಿಕ್ಕಿದೆ.
ಚಲಾವಣಾ ನಿಧಿ ರೂ. 11·64 ಕೋಟಿಗೂ ಮಿಕ್ಕಿದೆ.
ಒಟ್ಟು ಶಾಖೆಗಳು: 103.

ಟಿ. ಎ. ಪೈ ಬಿ. ಕಾಂ (ಡೊಂ)
ಎಫ್. ಆರ್. ಇ. ಎಸ್.,
ಜನರಲ್ ಮ್ಯಾನೇಜರ್.

ಡಾ। ಟಿ. ಮಾಧವ ಪೈ,
ಎಂ. ಬಿ. ಬಿ ಎಸ್.,
ಮ್ಯಾನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.
UDIPI.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ನೀವು ಅವಶ್ಯ ನೋಡಬೇಕು—

ಅಳ್ವರ್ ವಸ್ತುಸಂಗ್ರಹಾಲಯ.

ದೆಹಲಿಗೆ ನೂರು ಮೈಲಿಗಳ ದೂರದಲ್ಲಿ ಅಳ್ವರ್‌ನಲ್ಲಿ ವಸ್ತು ಸಂಗ್ರಹಾಲಯವಿರುವುದು. ಸ್ಥಳದಲ್ಲಿದ್ದ ಪುಸ್ತಕ ಶಾಲೆ (ಹಸ್ತ ಪತ್ರಿಕೆಗಳ ಭಾಂಡಾರ), ಚಿತ್ರಶಾಲೆ ಹಾಗೂ ಸಿಲೇಹಖಾನಾ (ಶಸ್ತ್ರಾಸ್ತ್ರ ಸಂಗ್ರಹಾಲಯ) ಈ ಮೂರು ಸಂಸ್ಥೆಗಳನ್ನು ವಿಲೀನಗೊಳಿಸಿ ೧೯೪೩ ನವೆಂಬರ್ ತಿಂಗಳಲ್ಲಿ ಈ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಯಿತು. ಅಳ್ವರ್ ನಗರದಲ್ಲಿರುವ ಮೂರು ಅಂತಸ್ತಿನ ಪುರಾತನ ಅರಮನೆಯಲ್ಲಿ ಇಡೀ ವಸ್ತುಗಳನ್ನು ಸಂಗ್ರಹಿಸಿಡಲಾಗಿದೆ.

ಈ ಅರಮನೆಯ ಹೆಜಾರಖ್ನೊಂಗರಲ್ಲಿ ಅಳ್ವರ್ ಸಂಸ್ಥಾನದ ಹಿಂದಿನ ಅರಸರು ಧರಿಸುತ್ತಿದ್ದ ಮಾಂದಿಲ್ (ರುಮಾಲು), ಅಂಗಜರ್ಜ ಟೋಪಿಗಳು ಫರ್ಗಲ್, ಜೋಗಾ, ಸದಾರಿ ಜಮಾ ಮುಂತಾದ ಪೋಷಾಕುಗಳನ್ನು ಪ್ರದರ್ಶಿಸಲಾಗಿದೆ. ಜರಿ ಹಾಕಿದ ಪೋಷಾಕುಗಳೇ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ.

ಪೋಷಾಕುಗಳ ಜೊತೆಗೆ ಬಿದಿರಿನಕೆಲಸ, ಅರಸಿನ ಕೆಲಸ ಮತ್ತು ದಂತದ ಕೆಲಸದ ವಸ್ತುಗಳನ್ನೂ ಪ್ರದರ್ಶಿಸಲಾಗಿದೆ. ಇಲ್ಲಿ ಸ್ಫಟಿಕ, ಪ್ರಶಸ್ತ ಶಿಲೆ ಮುಂತಾದ ಶಿಲೆಗಳಿಂದ ತಯಾರಿಸಿದ ಸುಂದರವಾದ ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಮೈಸೂರು ಮತ್ತು ನಗೀನಾಗಳಲ್ಲಿ ಮಾಡಿದ ಮರದ ಸಾಮಾನುಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ರಾಜಸ್ಥಾನದಲ್ಲಿ ಗಂಧದ ಮರದಲ್ಲಿ ತಯಾರಾದ ಕುಂಚವನ್ನು ಹಾಗೂ ಒರಿಸ್ಸಾದ ಕಟಕ್‌ನಲ್ಲಿ ಮಾಡಿದ ಬಳ್ಳಿ ಕೆಲಸದ ನಾಜೂಕಾದ ವಸ್ತುಗಳನ್ನು ಈ ವಿಭಾಗದಲ್ಲಿ ಪ್ರದರ್ಶಿಸಲಾಗಿದೆ.

ಈ ವಿಭಾಗದಲ್ಲಿ ಸುರಾತನ ಸಂಗೀತ ವಾದ್ಯಗಳನ್ನು ಕೂಡ ಇಡಲಾಗಿದೆ. ಇಲ್ಲಿ ಎಲುಬು, ಸಾಂಬಗಳನ್ನು ತೆಗೆದು ಹಾಕಿ ಆಕಾರಬರುವಂತೆ ಭರ್ತಿಮಾಡಿರುವ ಪಕ್ಷಿ ಪ್ರಾಣಿಗಳನ್ನು ಉತ್ತರ ಭಾರತದ ವಿಭಿನ್ನ ಪೋಷಾಕುಗಳನ್ನು ನಿರೂಪಿಸುವ ಮಣ್ಣಿನ ಸಾಮಾನುಗಳನ್ನು, ಹಿತ್ತಾಳೆಯ ವಾಶ್ರೆ ಪಡಿಗೆಗಳನ್ನೂ, ಜಯಪುರ, ಮಲ್ಲಾನ್, ಸಿಲೋನ್ ಹಾಗೂ ಬಂಗಾಳಗಳಲ್ಲಿ ಮಾಡಲ್ಪಟ್ಟ ಪಿಂಗಾಣಿ ಸಾಮಾನುಗಳನ್ನೂ ಇಡಲಾಗಿದೆ.

ಈ ವಸ್ತು ಸಂಗ್ರಹಾಲಯದ ಎರಡನೆಯ ಹಜಾರದಲ್ಲಿ ಹಿಂದಿ, ಸಂಸ್ಕೃತ ಮತ್ತು ಫಾರಸಿ ಭಾಷೆಗಳಲ್ಲಿ ರಚಿತವಾದ ಸುಮಾರು ೨,೦೦೦ ಹಸ್ತ ಪ್ರತಿಗಳನ್ನು ಇಡಲಾಗಿದೆ. ಇವುಗಳಲ್ಲಿ ಕೆಳಗೆ ಉಲ್ಲೇಖಿಸಿರುವ ಹಸ್ತ ಪ್ರತಿಗಳು ಅಮೂಲ್ಯವಾದವು:—

೧. ಭಾಗವತ:— ಸುಂದರವೂ, ಸ್ಪುಟವೂ ಆದ ಸಣ್ಣ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುವ ೮೦ ಅಡಿಗಳ ಉದ್ದದ ಸುರುಳಿಯ ಗ್ರಂಥವಿದು. ಈ ಗ್ರಂಥದಲ್ಲಿ ಸುಂದರವಾದ ಚಿತ್ರಗಳೂ ಇರುವುವು.

೨. ಗೀತಾಗೋವಿಂದ:— ರಾಜಾಸ್ಥಾನಿ ಚಿತ್ರಕಲೆಯ ಅಳ್ವರ್ ಶಾಖೆಯ ಚಿತ್ರಗಳ ಸಂಗ್ರಹವಿದು.

೩. ವಾಕಿಯಾತ್-ಎ-ಬಾಬರಿ:— ಹುಮಾಯೂನನ ಕಾಲಕ್ಕೆ ಸೇರಿದ ಈ ಅಮೂಲ್ಯ ಹಸ್ತ ಪ್ರತಿಯು ಫಾರಸಿ ಭಾಷೆಗೆ ತರ್ಜುಮೆ ಮಾಡಲ್ಪಟ್ಟಿದೆ. ಈ ಹಸ್ತ ಪ್ರತಿಯ ಮೂಲವು ತುರ್ಕಿ ಭಾಷೆಯಲ್ಲಿದೆ. ಈ ಹಸ್ತ ಪ್ರತಿಯು ಹುಮಾಯೂನ್‌ನಿಂದ ಹಿಡಿದು ಷಾಹೆಜಹಾನ್ ವರೆಗೆ ನೊಗಲಾಯಿ ಚಕ್ರವರ್ತಿಗಳ ನೊಹರುಗಳನ್ನು ಒಳಗೊಂಡಿದೆ. ಇದರಲ್ಲಿ ಭಾರತೀಯ ಹಾಗೂ ಇರಾನೀ ಚಿತ್ರ ಕಲೆಯ ಮಿಶ್ರಣವನ್ನು ಕಾಣಬಹುದು,

೪. ಕುರಾನ್:— ಕುರಾಸಿನ ಈ ಅದ್ಭುತ ಹಸ್ತ ಪ್ರತಿಯಲ್ಲಿ ಅರಬ್ಬಿ ಭಾಷೆಯ ಪದ್ಯಗಳನ್ನೂ ಹಾಗೂ ಅವುಗಳ ಫಾರಸಿ ಭಾಷೆಯ ತರ್ಜುಮೆಯನ್ನೂ ಕೊಡಲಾಗಿದೆ. ಈ ಹಸ್ತ ಪ್ರತಿಯನ್ನು ಅಳ್ವರರ ಮೂರನೆಯ ಅರಸರ ಕಾಲದಲ್ಲಿ ಸುಲೇಮಾನ್ ಸೌವಾಗರದಿಂದ ೩,೦೦೦ ರೂ. ಗಳಿಗೆ ಕೊಳ್ಳಲಾಯಿತು.

೫. ಶಾಹನಾಮ:— 'ಶಾಹನಾಮಾ' ಹಸ್ತ ಪ್ರತಿಯನ್ನು ಮಹಾರಾಜಾ ವಿನಯ ಸಿಂಹರ ಕಾಲದಲ್ಲಿ ಕೊಳ್ಳಲಾಯಿತು. ಈ ಹಸ್ತ ಪ್ರತಿಯಲ್ಲಿ ಮೊಗಲಾಯರ ಉತ್ತರ ಕಾಲದ ವರ್ಣಚಿತ್ರಗಳಿವೆ.

೬. ಗುಲಿಸ್ತಾನ್:— ಶೇಕ್ ಸಾದೀಯ 'ಗುಲಿಸ್ತಾನ' ಹಸ್ತ ಪ್ರತಿಯನ್ನು ಮಹಾರಾಜ ವಿನಯಸಿಂಹರ ಕಾಲದಲ್ಲಿ ಒಂದೂ ಕಾಲು ಲಕ್ಷ ರೂಗಳ ವೆಚ್ಚದಲ್ಲಿ ಅಳ್ವರ ಸಂಸ್ಥಾನದ ಕುಶಲಕರ್ಮಿಯಾದ ಲಿಪಿಗಾರರೊಬ್ಬರಿಂದ ಸಿದ್ಧಪಡಿಸಲಾಯಿತು. ಈ ಗ್ರಂಥದ ಪ್ರತಿ ಪುಟವನ್ನು ಬರೆಯಲು ೧೨ ದಿನಗಳು ಬೇಕಾಯಿತು. ಇಡೀ ಗ್ರಂಥವನ್ನು ಪೂರ್ಣಗೊಳಿಸಲು ೧೫ ವರ್ಷಗಳು ಹಿಡಿದವು.

೭. ನಳದಮನ:— ಅಕ್ಬರನ ಕಾಲದಲ್ಲಿ ಅನೇಕ ಧಾರ್ಮಿಕ ಗ್ರಂಥಗಳನ್ನು ಫಾರಸಿ ಭಾಷೆಗೆ ಅನುವಾದಿಸಲಾಯಿತು. ಹೀಗೆ ಅನುವಾದಿಸಲ್ಪಟ್ಟ 'ನಳದಮನ' ಒಂದು.

ಇಲ್ಲಿ ಸಂಗ್ರಹಿಸಿಟ್ಟಿರುವ ಇತರ ಅಮೂಲ್ಯವಾದ ಹಸ್ತ ಪ್ರತಿಗಳಾವುವೆಂದರೆ: ಸಿಕಂದರ್ ನಾಮಾ, ಕೆಸ್ಸಾ ಬಬ್ರೆ ಮುನೀರ್, ಯೂಸುಫ್ ಜ ಲೈಖಾ ಹಾಗೂ ಸದ್ಬೆಂದ್. ಉಗುರಿನಲ್ಲಿ ಅಕ್ಷರಗಳನ್ನು ಕೆತ್ತಿರುವ ಗ್ರಂಥ, 'ಕರೀಮಾ', ದಂತದ ತೆಳು ಹಾಳೆಗಳ ಮೇಲೆ ಬರೆಯಲ್ಪಟ್ಟಿರುವ 'ಜಫ್ರ್ ಬಂದ್ ಕಾಫೀ', ಕೆಸೆಯುಲ್ಲಿ ಡಬಹುದಾದಂತಹ ಆಕಾರದ ಗ್ರಂಥ ಸಾಹೇಬ್, ಕುರಾನ್ ಮತ್ತು ಭಾಗವತ ಇವುಗಳು ವಸ್ತು ಸಂಗ್ರಹಾಲಯದ ಈ ಹಜಾರದಲ್ಲಿ ಪ್ರದರ್ಶಿಸಲ್ಪಟ್ಟಿದ್ದು ವೀಕ್ಷಕರ ಗಮನವನ್ನು ಸೆಳೆಯುತ್ತವೆ.

ಅಳ್ವರ್ ವಸ್ತು ಸಂಗ್ರಹಾಲಯವು ಮೊಗಲ್ ಹಾಗೂ ರಾಜಾಸ್ಥಾನಿ ಶೈಲಿಗಳ ಚಿತ್ರಗಳಿಗೆ ಹೆಸರುವಾಸಿಯಾದದ್ದು; ಈ ವರ್ಣಚಿತ್ರಗಳನ್ನು ಸೊಗಸಾಗಿ ಜೋಡಿಸಿ ಪ್ರದರ್ಶಿಸಲಾಗಿದೆ. ರಾಜಾಸ್ಥಾನಿ ಶೈಲಿಯ ಜಯಪುರ, ಜೋಧಪುರ, ಉದಯಪುರ, ಕೋಟಾಬೂಂದಿ ಹಾಗೂ ಕಿಶನ್ ಘರ್ ಮುಂತಾದ ಶಾಖೆಗಳ ಚಿತ್ರಗಳನ್ನು ಇಲ್ಲಿ ನೋಡಬಹುದು. ಬೂಂದಿ ಶಾಖೆಯ ರಾಗ-ರಾಗಿಣಿಯರ ಚಿತ್ರಗಳು ಸುಲಭವಾಗಿವೆ. ಇವನ್ನು ಇಲ್ಲಿ ಕಾಣಬಹುದು. ಕೆಲವು ಚಿತ್ರಗಳ ಮೇಲೆ ಮೊಗಲಾಯರ ಆಸ್ಥಾನದ ಮೊಹರನ್ನೂ ಕಲಾಕಾರರ ಹೆಸರುಗಳನ್ನೂ ಹಾಕಲಾಗಿದೆ.

ಚಿತ್ರಕಲಾ ವಿಭಾಗದಲ್ಲಿ ಮೊಗಲ ಶೈಲಿಯ ಚಿತ್ರಗಳು ಹೇರಳ ಸಂಖ್ಯೆಯಲ್ಲಿವೆ. ಆಲಿ ಅಹಮ್ಮದ್ ದೆಹಲ್ವಿಯು ಚಿತ್ರಿಸಿರುವ ಜಹಂಗೀರ್ ಬಾದಶಾಹನ ವರ್ಣ ಚಿತ್ರ ಆಬುಲ್ ಹಸನ್ ಚಿತ್ರಿಸಿರುವ ಶಾಹ ಜಹಾನನ ಚಿತ್ರ, ಜಹಂಗೀರನ ಕಾಲದ ಬ್ಲಿ ಹೊನ್ನಾಹಾರ್ ಚಿತ್ರಿಸಿರುವ ಸಯದ್ ಹುಸೇನ್ ಆಲಿ ಖಾನನ ಚಿತ್ರ, ದಾಂಚಂದನು ಚಿತ್ರಿಸಿರುವ ಶರಬಿಯಾತ್ ಖಾನ್ ನ ಚಿತ್ರ, ಕೈಯಲ್ಲಿ ಗಿಡುಗವೊಂದನ್ನು ಹಿಡಿದು ಕೊಂಡಿರುವ ಹುಮಾಯೂನನ ಚಿತ್ರ—ಇವು ಈ ವಿಭಾಗದಲ್ಲಿ ಮುಖ್ಯವಾದವು. ಚಿತ್ರ ಶಾಲೆಯಲ್ಲಿ ಬಾರಹ್ ಸೂಸದ ಚಿತ್ರಗಳೂ ಇವೆ.

ವಸ್ತು ಸಂಗ್ರಹಾಲಯದ ಮೂರನೆಯ ಹಜಾರದಲ್ಲಿ ಅಕ್ಬರ್, ಜಹಂಗೀರ್, ಶಹಾಜಹಾನ್, ದಿಲಾವರ್, ಶಿಕೋಹ್, ನಾದಿರ್ ಶಹಾ ಮತ್ತು ಆಲಂಗೀರ್ ಇವರು ಉಪಯೋಗಿಸುತ್ತಿದ್ದ ಖಡ್ಗಗಳು ಮುಂತಾದ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಲಾಗಿದೆ. ಕೆಲವು ಇರಾನೀ ಖಡ್ಗಗಳೂ ಇವೆ. ಇವುಗಳ ಮೇಲೆ ಇರಾನಿನ ಅರಸರ ಮೊಹರುಗಳನ್ನು ಕಾಣಬಹುದು.

ಈ ಶಸ್ತ್ರಾಸ್ತ್ರ ವಿಭಾಗದಲ್ಲಿರುವ ಉಲ್ಲೇಖನೀಯವಾದ ಶಸ್ತ್ರಾಸ್ತ್ರಗಳಲ್ಲಿ ಮುಖ್ಯವಾದವು:—(೧) ಒಂದೇ ಒರೆಯಲ್ಲಿರುವ ಎರಡು ಖಡ್ಗಗಳು; (೨) ಒಂದು ಲಕ್ಷ ರೂಪಾಯಿಗಳ ಬೆಲೆಗೆ ಕೊಳ್ಳಲಾದ ಲಾಖೀ ಖಡ್ಗ; (೩) ಮುಹಮ್ಮದ್ ಘೋರಿಗೆ ಸೇರಿದ ಲೋಹ ಕವಚ.

ಈ ವಿಭಾಗದಲ್ಲಿ ಪ್ರದರ್ಶನಕ್ಕೆ ಇಡಲಾಗಿರುವ ವಿಚಿತ್ರ ವಸ್ತುಗಳಲ್ಲಿ ಪಿಸ್ತೂಲು ಹಾಗೂ ಈಟಾರಿ ಎಂಡನ್ನೂ ಒಳಗೊಂಡ ಶಸ್ತ್ರ, ದಿವಂಗತ ಮಹಾರಾಜ ಜಯಸಿಂಹನು ಉಪಯೋಗಿಸುತ್ತಿದ್ದ ಬಾಂಡ, ಆರದಂ, ಶಿರಸ್ತ್ರಾಣವನ್ನು ಕತ್ತರಿಸಬಲ್ಲ ಖಡ್ಗ, ಒಂದೇ ಒರೆಯಲ್ಲಿರುವ ಎರಡು ಕಠಾರಿಗಳು, ಎರಡು ಲೋಹಗಳಿಂದ ಮಾಡಲ್ಪಟ್ಟ ಖಡ್ಗ, 'ಅಲ್ಲಾ' 'ಅಲ್ಲಾ' ಎಂಬ ಶಬ್ದಗಳನ್ನೊಳಗೊಂಡ ಖಡ್ಗ, ಬಂದೂಕಿನ ಆಕಾರದ ಬಿಲ್ಲು, ಯಶವಂತರಾವ್ ಹೋಳ್ಕರ್‌ಗೆ ಸೇರಿದ ಲೋಹ ಕವಚ.

ನಾಗಫಾನ್, ಉಜಬೆಕ್, ಮೀರು, ಬಘನಿಖಾ, ಸಾಖಾ, ತೇಗಾ, ಮಾರಸೆಚೆ, ದಂತಮಂಜಾ, ಜಫರ್ ತಕಿಯಾ, ಸೋಸಾಸ್ ಪಟ್ಟಾಸೇಲ್ ಕುಬ್ಜ, ಖಾಂಜರ್, ಶಾಹಪಸಂದ್, ದಬ್, ಆರ್ಸೀ ಹಾಗೂ ಗುರ್ಜ್ ಮುಂತಾದ ಪುರಾತನ ಶಸ್ತ್ರಗಳು ಈ ವಿಭಾಗದಲ್ಲಿವೆ.

ಈ ವಸ್ತು ಸಂಗ್ರಹಾಲಯವನ್ನು ವಿದ್ಯಾರ್ಥಿಗಳೇ ಅಲ್ಲದೆ, ವಿದ್ವಾಂಸರೂ, ಕಲಾಪ್ರೇಮಿಗಳೂ ಮಹಾರಾಜರೂ ಅವಶ್ಯಕವಾಗಿ ನೋಡಬೇಕು.

ಬಿದಿರಿನ ಬಗ್ಗೆ ನಿನುಗೇನುಗೊತ್ತಿದೆ?

ಕುಶಲವಸ್ತುಗಳ ನಿರ್ಮಾಣಸಾಧನ

ಮಾನವ ಜನಾಂಗದಲ್ಲಿ ನಾಗರಿಕತೆ ಆರಂಭಗೊಂಡಂದಿನಿಂದಲೂ ಬಿದಿರನ್ನು ಬೇರೆ ಬೇರೆ ಕಾರ್ಯಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಮನೆಗಳ ಹೊದಿಕೆ, ಗುಡಿಸಲುಗಳ ಗೋಡೆಗಳನ್ನು ಕಟ್ಟುವುದು, ಎತ್ತಿನ ಗಾಡಿಗಳ ತಯಾರಿ ಮೊದಲಾದು ವುಗಳಿಗೆ ಬಿದಿರು ಅತ್ಯಗತ್ಯ. ಪೊರಕೆ, ದೊಣ್ಣೆ, ಬಿಲ್ಲುಬಾಣಗಳು ಮೊದಲಾದು ವುಗಳನ್ನೂ ಬಿದಿರಿನಿಂದ ಮಾಡುತ್ತಾರೆ. ನಮ್ಮ ಆಲ್ಪವೃತ್ತಿಯ ಬೇಸಾಯಗಾರರಿಗೆ ಈ ಬಿದಿರಿನಿಂದೊದಗುವ ಕೆಲಸವೂ ಒಂದು ಉಪವೃತ್ತಿಯಂತಾಗಿದೆ ಎಂಬರೆ, ಅದು ಅತಿಶಯೋಕ್ತಿಯಲ್ಲ.

ನಮ್ಮ ದಿನನಿತ್ಯದ ಬಳಕೆಗೆ ಉಪಯೋಗಿಸುವ ಬುಟ್ಟಿಗಳನ್ನು ಬಿದಿರು, ಬೆತ್ತ ಮತ್ತು ಹುಲ್ಲು ಮೊದಲಾದುವುಗಳಿಂದ ತಯಾರಿಸುತ್ತಾರೆ. ಈ ಕುಶಲ ಕಲೆಗಳಲ್ಲಿ ಸೃಷ್ಟಾತ್ಮಕ ಪ್ರತಿಭೆಯನ್ನು ತೋರಿಸುವುದಕ್ಕೆ ಸಾಕಷ್ಟು ಅವಕಾಶ ವಿದೆಯೆಂದು ಕೌಶಲಪೂರ್ಣ ವಸ್ತುಗಳನ್ನು ಪ್ರತಿಯೊಂದು ರಾಜ್ಯವೂ ತನ್ನದೇ ಆದ ವಿಧಾನದಲ್ಲಿ ಮಾದರಿ ಹಾಗೂ ಪ್ರಮಾಣಗಳಲ್ಲಿ ತಯಾರಿಸುತ್ತದೆ. ಒಂದು ರಾಜ್ಯದಲ್ಲಿ ಸಿದ್ಧವಾದ ಕುಶಲವಸ್ತು ಇನ್ನೊಂದು ರಾಜ್ಯದಲ್ಲಿ ನಿರ್ಮಿಸಲಾದ ವಸ್ತುವಿಗಿಂತ ಭಿನ್ನವಾಗಿದ್ದರೂ ಕಲಾ ವೈಶಿಷ್ಟ್ಯತೆಯಲ್ಲಿ ಯಾವ ಅಂತರವೂ ಇರುವುದಿಲ್ಲವೆಂದು ದೃಢವಾಗಿ ಹೇಳಬಹುದು.

ಅಸ್ಸಾಮ ರಾಜ್ಯದ ಪರಂಪರಾಗತ ಶೈಲಿಯಲ್ಲಿ ಸಿದ್ಧವಾದ ಬುಟ್ಟಿಗಳು ಮತ್ತು ಅಲಂಕರಣ ಜಾಪಿಗಳು ಸರಳ ವಿನ್ಯಾಸಕ್ಕೆ ಬಹಳ ಪ್ರಸಿದ್ಧವಾದುವುಗಳು. ಈ ಆಧುನಿಕ ಯುಗದಲ್ಲಿ ಸಹ ಇದನ್ನು ಅನೇಕ ವಿಧಗಳಲ್ಲಿ ಬಳಸಿಕೊಳ್ಳುವುದು ಸಾಧ್ಯವಿದೆ.

ವರ್ತಮಾನಕಾಲದ ಜನತಾಭಿರುಚಿಗೆ

(೧೯೯ ಪುಟ ನೋಡಿರಿ)

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

52 1906/1957 - ಐವತ್ತೆರಡು ವರುಷಗಳ ಪರಿಪಕ್ವ ಅನುಭವ

ಮತ್ತು

ದಕ್ಷಿಣ ಭಾರತದ 5 ಸಂಸ್ಥಾನಗಳಲ್ಲಿ ಪಸರಿಸಿರುವ 49 ಶಾಖೆಗಳ ಮತ್ತು ದೇಶದಾದ್ಯಂತ ಏಜನ್ಸಿ ವಿಶ್ವಾಸದುಗಳ ನೂಲಕ ಅತ್ಯಾಧುನಿಕ ಬ್ಯಾಂಕಿಂಗ್ ಸವಲತ್ತುಗಳು. ಇದು ನಿಮ್ಮ ಬ್ಯಾಂಕಾಗಲು ಯೋಗ್ಯವಿದೆ!

ಅಲ್ಪಕಾಲದಲ್ಲಿ ಅಧಿಕ ಲಾಭ ತರುತ್ತದೆ!

ಕೋಳಿ ಸಾಕುವ ಉದ್ದಿಮೆ

ಅಲ್ಪ ಬಂಡವಾಳದಲ್ಲಿ ಅತ್ಯಲ್ಪ ಅವಧಿಯಲ್ಲಿ ಕೋಳಿಗಳನ್ನು ಸಾಕಬಹುದಾದುದರಿಂದ, ವಿಶ್ವದಲ್ಲಿ ಅತ್ಯಧಿಕ ಸಂಖ್ಯೆಯ ಜನರು ಇತರ ಜಾನುವಾರುಗಳನ್ನು ಸಾಕುವ ಬದಲಾಗಿ ಕೋಳಿಗಳನ್ನು ಸಾಕುತ್ತಿದ್ದಾರೆ. ಪ್ರಪಂಚದ ಎಲ್ಲ ದೇಶಗಳಲ್ಲಿ ಅಮೆರಿಕವು ಅನೇಕ ವಿಷಯಗಳಲ್ಲಿ ಮುಂದುವರಿದ ದೇಶವಾಗಿರುವಂತೆ ಕೋಳಿ ಸಾಕಣೆಯಲ್ಲಿಯೂ ಅಭಿವೃದ್ಧಿಯನ್ನು ಪಡೆದಿದೆ. ಅಲ್ಲಿ ೪೬೪೦ ಲಕ್ಷಕ್ಕೂ ಮಿಕ್ಕಿದ ಕೋಳಿಗಳಿವೆ ಎಂದು ಅಂಕೆಸಂಖ್ಯೆಗಳ ಬಲ್ಲವರು ಲೆಕ್ಕಹಾಕಿದ್ದಾರೆ. ಚೀನಾ, ಮತ್ತು ಭಾರತಗಳು ಸಹ ಅಂತೆಯೇ ಕೋಳಿ ಸಾಕಣೆಯಲ್ಲಿ ಹಿಂದುಳಿದಿಲ್ಲ.

ಜಗತ್ತಿನಲ್ಲಿ ಕೋಳಿಗಳನ್ನು ಹೆಚ್ಚಾಗಿ ಮೊಟ್ಟೆಗಳನ್ನು ಪಡೆಯುವ ಸಲುವಾಗಿ ಸಾಕುತ್ತಾರೆ. ಒಂದು ಕೋಳಿಯು ತಾನು ಮೊಟ್ಟೆಯಿಡುವ ಪ್ರಮಾಣವನ್ನು ಕಡಿಮೆ ಮಾಡಿದ ಸಂದರ್ಭದಲ್ಲಿ ಅಂತಹ ಕೋಳಿಗಳನ್ನು ಮತ್ತೆ ಇಟ್ಟುಕೊಳ್ಳುವುದಿಲ್ಲ. ಹಾಗಿದ್ದರೂ ಸಹ ಅಮೆರಿಕೆಯಲ್ಲಿ ವಾಣಿಜ್ಯಕ್ಕಾಗಿಯೇ ಕೋಳಿಗಳನ್ನು ಸಾಕುತ್ತಾರೆ. ಅಲ್ಲಿ ಸಹಕಾರೀ ಸಂಸ್ಥೆಗಳ ಸ್ಥಾಪನೆ, ಮೊಟ್ಟೆಗಳ ರಕ್ಷಣಾ ವಿಧಾನಗಳು ಮತ್ತು ಸಂಗ್ರಹದ ಅಭಿವೃದ್ಧಿಯಿಂದ ಕೋಳಿಗಳ ಉತ್ಪನ್ನಗಳ ವಾರಾಂತದ ವ್ಯವಸ್ಥೆಗೆ ಬಹಳ ನೆರವು ದೊರೆತಿದೆ.

ಕೋಳಿ ಸಾಕಣೆಯಲ್ಲಿ ಕೋಳಿ ಮರಿಗಳು ಅತ್ಯಂತ ಸಾಮಾನ್ಯವಾದುವುಗಳಾಗಿದ್ದರೂ ಅನೇಕ ರಾಷ್ಟ್ರಗಳಲ್ಲಿ ಮುಖ್ಯವಾಗಿ ಚೀನಾ, ಅಮೆರಿಕೆ, ರಶ್ಯಾ, ಭಾರತ ಮತ್ತು ಯುರೋಪು ಖಂಡದ ದೇಶಗಳು ಮೊಟ್ಟೆಗಳಿಗಾಗಿ ಮತ್ತು ಮಾಂಸಕ್ಕಾಗಿ ಬಾತುಕೋಳಿಗಳನ್ನು ಸಾಕುವ ಪದ್ಧತಿಯನ್ನಿಟ್ಟುಕೊಂಡಿವೆ. ಅಮೆರಿಕ, ಇಂಗ್ಲೆಂಡ್, ಕೆನಡಾ, ಅಯರ್‌ಲೆಂಡ್ ಮತ್ತು ಟರ್ಕಿಗಳಲ್ಲಿ ಟರ್ಕಿ ಎಂಬ ಜಾತಿಯ ಕೋಳಿಗಳ ಉತ್ಪಾದನೆಯು ಬಹು ಹಿರಿಯ ಉದ್ದಿಮೆಯ ಸ್ಥಾನವನ್ನು ಪಡೆದಿದೆ. ಜರ್ಮನಿ, ಪೋಲೇಂಡ್, ಚೀನಾ ಮತ್ತು ರಶ್ಯಗಳಲ್ಲಿ ಕೇವಲ ಮಾಂಸವನ್ನು ಪಡೆಯುವುದಕ್ಕಾಗಿಯೇ ಈ ಬಾತು ಕೋಳಿಗಳನ್ನು ಸಾಕುತ್ತಾರೆ.

ಭಾರತದಲ್ಲಿ ಕೋಳಿ ಸಾಕಣೆಯು ಒಂದು ಉಪವೃತ್ತಿಯಾಗಿರುವುದೆಂಬುದನ್ನು ತಿಳಿದಿದ್ದರೂ ಈ ಉದ್ಯಮವು ಬಹಳವಾಗಿ ಕುಂಟುತ್ತಾ ನಿಧಾನವಾಗಿ ಮುನ್ನಡೆಯುತ್ತಿದೆ. ಭಾರತದಲ್ಲಿರುವ ದೇಶೀ ಕುಕ್ಕುಟವು ಸಾಮಾನ್ಯವಾಗಿ ಐವತ್ತು ಮೊಟ್ಟೆಗಳನ್ನು ಒಂದು ವರ್ಷದಲ್ಲಿ ಕೊಡುವುದು. ಸುಧಾರಿಸಿದ ಕೋಳಿಯು ಸರಾಸರಿ ನೂರಿಪ್ಪತ್ತು ಮೊಟ್ಟೆಗಳನ್ನು ನೀಡಬಲ್ಲುದು. ಈ ಉದ್ಯಮದ ಅಭಿವೃದ್ಧಿಯಲ್ಲಿ ರಾಣಿಖೇತ್, ಫೌಲ್-ಆಕ್ಸ್ ಮತ್ತು ಸ್ಪಿರೋ ಕೋಯೆ ಟೊಸಿಸ್ ಎಂಬ ರೋಗಗಳು ಅಡ್ಡ ಬಂದಿವೆ. ಆದರೆ ಇಂತಹ ಮಹಾ ಮಾರಿಗಳಿಗೆ ಪ್ರತಿಬಂಧಕವೆನಿಸಿದ ಪರಿಣಾಮಕಾರಿಯಾದ ಲಸಿಕೆಗಳನ್ನು ಇದೀಗ ಕಂಡು ಹಿಡಿಯಲಾಗಿದ್ದುದರಿಂದ ಇವುಗಳ ಹಾವಳಿಯನ್ನು ತಪ್ಪಿಸಲು ಸ್ವಲ್ಪ ಅನುಕೂಲವೆನಿಸಿದೆ.

೧೯೫೫-೫೬ರಿಂದ ಭಾರತದಲ್ಲಿ ಕೋಳಿ ಸಾಕಣೆಯ ಅಭಿವೃದ್ಧಿಗೆ ವಿಶೇಷ ಗಮನವೀಯಲಾಗುತ್ತಿದೆ. ಆ ವರ್ಷ ಕೋಳಿ ಸಾಕಣೆಯ ಅಭಿವೃದ್ಧಿ ಯೋಜನೆಯ ಪೂರ್ವಭಾವಿಯಾಗಿ ಒಂದು ವ್ಯಾಯೋಗಿಕ ಕಾರ್ಯಕ್ರಮವನ್ನು ಕೈಗೊಂಡು ೩೩ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಪ್ರಾಯೋಗಿಕ ಯೋಜನೆಗಳಿಂದ ದೊರೆತ ಅನುಭವದ ಆಧಾರದ ಮೇಲೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಖಿಲ ಭಾರತ ಕೋಳಿ ಸಾಕಣೆ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಯಿತು. ೨೫೮೫೧೧ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೫೫ ಪ್ರಾದೇಶಿಕ ಕ್ಷೇತ್ರ ಮತ್ತು ೩೦೦ ಪ್ರದರ್ಶನ ಹಾಗೂ ವಿಸ್ತರಣ ಕ್ಷೇತ್ರಗಳ ಸ್ಥಾಪನೆಯೇ ಈ ಯೋಜನೆಯ ಮಹೋದ್ದೇಶವಾಗಿದೆ. ಪ್ರಾದೇಶಿಕ ಕೇಂದ್ರಗಳಿಗೆ ಮಾತ್ರವೇ ೪೧.೨೦ ಲಕ್ಷ ರೂಪಾಯಿಗಳ ನೆಚ್ಚವಾಗುವುದು. ಈ ವೆಚ್ಚವನ್ನು ಕೇಂದ್ರ ಸರಕಾರದವರು ವಹಿಸಿರುವರು. ಈ ಪ್ರಾದೇಶಿಕ ಕ್ಷೇತ್ರಗಳ ಸ್ಥಾಪನೆಯನ್ನು ಭಾರತದ ಎಲ್ಲ ಮೂಲೆಯಲ್ಲಿಯೂ ತೆರೆಯಲಾಗಿದೆ. ಉತ್ತರ ಭಾರತದ ದೆಹಲಿಯಲ್ಲಿ ಪಂಜಾಬ, ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನ, ಮತ್ತು ಜಮ್ಮೂ ಕಾಶ್ಮೀರ ರಾಜ್ಯಗಳು ಪ್ರಯೋಜನ ಪಡೆಯುವಂತೆಯೂ, ದಕ್ಷಿಣ ಭಾರತದ ಮೈಸೂರು, ಮದರಾಸು, ಕೇರಳ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ಪ್ರಯೋಜನಕ್ಕಾಗಿ ನೈಸೂರಲ್ಲಿಯೂ, ಪಶ್ಚಿಮ ಭಾರತದ ಮುಂಬಯಿಯಲ್ಲಿ ಮುಂಬಯಿ ಮತ್ತು ಮಧ್ಯ ಪ್ರದೇಶ ರಾಜ್ಯಗಳ ಉಪಯೋಗಾರ್ಥವಾಗಿಯೂ, ಪೂರ್ವ ಭಾರತದ ಒರಿಸ್ಸಾದಲ್ಲಿ ಒರಿಸ್ಸಾ, ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂ, ತ್ರಿಪುರ ಮತ್ತು ಮಣಿಪುರಗಳ ಪ್ರಯೋಜನಕ್ಕಾಗಿಯೂ, ಗುಡ್ಡನಾಡಿನ ಕ್ಷೇತ್ರಗಳಿಗಾಗಿ ಹಿಮಾಚಲ ಪ್ರದೇಶದ ಕಮಲಾಹಿಯಲ್ಲಿಯೂ ಹೀಗೆ ಒಟ್ಟು ಐದು ಕ್ಷೇತ್ರಗಳನ್ನು ತೆರೆಯಲಾಗಿದೆ.

ಹೊಸ ವಾಯು ಗುಣಕ್ಕೆ ಒಗ್ಗುವಂತಹ ಮೊಟ್ಟೆಗಳನ್ನು ಸಂಗ್ರಹಿಸಿಟ್ಟು ಮತ್ತು ಒಂದು ದಿನ ವಯಸ್ಸಿನ ಕೋಳಿ ಮರಿಗಳನ್ನು ಕೋಳಿ ಸಾಕಣೆ ವಿಸ್ತರಣೆ ಕೇಂದ್ರಗಳ ಸ್ಥಾಪನೆಗಾಗಿ ಆ ಕ್ಷೇತ್ರದ ಪಕ್ಕದಲ್ಲಿನ ರಾಜ್ಯಗಳಿಗೆ ಸರಬರಾಯಿ ಮಾಡುವುದು ಇಂತಹ ವ್ಯಾಪಕ ಪ್ರಾದೇಶಿಕ ಕ್ಷೇತ್ರಗಳ ಮೊದಲನೆಯ ಕೆಲಸವಾಗಿದೆ. ಪ್ರಾದೇಶಿಕ ಕ್ಷೇತ್ರ ವಿಸ್ತರಣ ಕೇಂದ್ರಗಳು, ಮತ್ತು ಕೋಳಿ ಸಾಕಣೆಯ ಅಭಿವೃದ್ಧಿ ಬ್ಲಾಕ್‌ಗಳಿಗೆ ಬೇಕಾದ ಸಿಬ್ಬಂದಿಗೆ ತರಬೇತಿ ಕೇಂದ್ರವಾಗಿಯೂ ನಿರ್ವಹಿಸುವುದು, ಪ್ರಾದೇಶಿಕ ಕ್ಷೇತ್ರ, ಕೋಳಿಗಳ ಪಾಲನೆಯ ಬಗೆಗೆ ಮುಖ್ಯವಾಗಿ ಸಂಬಂಧಪಟ್ಟ ಕ್ಷೇತ್ರಕ್ಕೆ ಅವ್ಯಯಿಸುವಂತೆ ಸಂಶೋಧನೆಗಳ ಪ್ರಯೋಗಗಳನ್ನು ಕಾರ್ಯರೂಪಕ್ಕೆ ತರುವುದು ಈ ಕ್ಷೇತ್ರಗಳ ಕೆಲಸವಾಗಿದೆ. ದೆಹಲಿಯಲ್ಲಿರುವ ಕೋಳಿ ಸಾಕಣೆಯ ಕೇಂದ್ರವನ್ನು ಉತ್ತರ ಪ್ರಾದೇಶಿಕ ಕ್ಷೇತ್ರವನ್ನಾಗಿ ಪರಿವರ್ತಿಸಲಾಗುತ್ತಿದೆ. ತಾಂತ್ರಿಕ ಸಹಕಾರ ಮಂಡಲಿಯ ಯೋಜನೆಯ ಪ್ರಕಾರ, ೩೦೨೦೦ ಕೋಳಿ ಮರಿಗಳನ್ನು ನೇರವಾಗಿ ಪಡೆಯಲಾಗಿದೆ. ಇವುಗಳನ್ನು ಇತರ ಕೇಂದ್ರಗಳಿಗೆ ಕಳುಹಿಸುವ ಮೊದಲು ದೆಹಲಿ ಕೇಂದ್ರದಲ್ಲಿ ಬೆಳೆಸಲಾಯಿತು.

ಹೀಗೆ ಸ್ಥಾಪಿತವಾದ ಐದು ಕ್ಷೇತ್ರಗಳಲ್ಲಿಯೂ ಅದಕ್ಕೆ ಸೇರಿದಂತೆ ಒಂದೊಂದು ಪ್ರದರ್ಶನ ವಿಭಾಗವನ್ನು ತೆರೆಯಲು ಉದ್ದೇಶಿಸಲಾಗಿದೆ. ಈ ಪ್ರದರ್ಶನ ವಿಭಾಗಗಳ ಮೂಲಕ ಆಧುನಿಕ ವಿಧಾನಗಳಲ್ಲಿ ಕೋಳಿ ಸಾಕುವ ಪದ್ಧತಿಯ ಕುರಿತಾಗಿ ಖಾಸಗಿಯಾಗಿ ಕೋಳಿ ಸಾಕುವವರಿಗೆ ತಕ್ಕ ತರಬೇತಿಯನ್ನೀಯಲಾಗುವುದು. ಗ್ರಾಮಗಳಲ್ಲಿ ದೊರೆಯುವ ಮೊಟ್ಟೆಗಳ ಗುಣಾಂತಗಳು ಹೆಚ್ಚುಗಾಲವಿರುವಂತೆ ಮಾಡುವುದಕ್ಕಾಗಿ ಒಂದೊಂದು "ಡಿಫರ್ಟ್‌ಲೈಸೇಶನ್" ವಿಭಾಗವನ್ನೂ ತೆರೆಯಲಾಗುವುದು.

ಸೇಕಡ ಜಂಬತ್ತು ಉತ್ತಮ ದರ್ಜೆಯ ದೇಶೀ ಕೋಳಿಗಳ ಉತ್ಪಾದನೆಯನ್ನು ಹೆಚ್ಚಿಸಲು ಸಹ ಈ ಕೇಂದ್ರಗಳಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಈಗ ಪ್ರತಿ ವ್ಯಕ್ತಿಗೆ ದೊರೆಯುವ ವರ್ಷವೊಂದಕ್ಕೆ ಸರಾಸರಿ ನಾಲ್ಕು ಮೊಟ್ಟೆಗಳ ಸಂಖ್ಯೆಯನ್ನು ಇಪ್ಪತ್ತಕ್ಕೆ ಏರಿಸಬೇಕೆಂಬ ಮಹೋದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಮೊದಲೇ ಹೇಳಿದಂತೆ ಕೋಳಿ ಸಾಕಣೆಯು ಅಲ್ಪವ್ಯಯಾಸಕರವಾದ ಉಪವೃತ್ತಿಯಾಗಿದೆ. ಇದನ್ನು ಬಲಪಡಿಸುವುದರಿಂದ ದೇಶದ ನೈಯಕ್ತಿಕ ಆದಾಯವು ಹೆಚ್ಚುವುದು; ತನ್ಮೂಲಕ ದೇಶವೂ ಅಭಿವೃದ್ಧಿಯಾಗುವುದು. ಆದುದರಿಂದ ಈ ಸುಲಭಪ್ರದವಾದ ಉದ್ದಿಮೆಯು ಬೆಳೆಯುವಂತೆ ಮಾಡುವುದು ಅಗತ್ಯವೆನಿಸಿದೆ

ನೋಟೀಸು

ಪೆರ್ದೂರು ಮಹತೋಭಾರ್ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಬತ್ತ ಮುಡಿ ೬೭೬ (ಆರ್ನೂರ ಇಪ್ಪತ್ತೈದು) ಖರೀದಿಗೆ ಕೊಡುವುದಿದೆ. ಈ ಬಗ್ಗೆ ಇದೇ ತಾರೀಕು 28-12-1957ನೇ ಸೋಮವಾರ ಅಪರಾಹ್ನ ಗಂಟೆ ೩ಕ್ಕೆ ಭಂಡಾರದ ಶರ್ತಕ್ಕೆ ವಳಪಟ್ಟು ಎಕ್ಸಿಕ್ಯೂಟಿವ್ ಅಫೀಸರರ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಪೇಕ್ಷೆ ಉಳ್ಳವರು ಆ ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

ಪ. ಸೂ:- ಬತ್ತವನ್ನು ವಹಿಸಿಕೊಂಡವರು ಏಲಂ ಆದ ತಾರೀಕಿನಿಂದ 3 ದಿನದ ಒಳಗೆ ಡೆಲಿವರಿ ಪಡಕೊಳ್ಳತಕ್ಕದ್ದು.

K. B. Shetty.
Executive Officer.
SRI ANANTHAPADMANABHA TEMPLE, PERDUR.
ಪೆರ್ದೂರು, ತಾ. 6-12-1957.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. P. 21/1957.

ಸರಸ್ವತಿ — ಅರ್ಜಿದಾರರು.

ಪುಲಿಮಾಜಿ. ಹಿರಿಯರ ಹೆಸ್ರು ಗೊತ್ತಿಲ್ಲ. ಮೈಸೂರು ಸಂಸ್ಥಾನದ ಚಿತ್ರದುರ್ಗ ಟೌನಿನ ಮೊಡ್ಡ ಪೇಟೆಯಲ್ಲಿರುವನ — ಎದ್ರಿ.

ಮೇಲ್ಕಂಡ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ಅರ್ಜಿದಾರರು ಮತ್ತು ಎದ್ರಿಯೊಳಗಾದ ವಿವಾಹವ್ಯವಹಾರ್ತೆದ ಮಾಡಬೇಕೆಂತ, ಅರ್ಜಿದಾರರು ಮೇಲ್ಕಂಡ ಅರ್ಜಿಕೊಟ್ಟಿರುವುದರಿಂದ, ಆ ಕುರಿತು ನಿಮ್ಮ ಆಕ್ಷೇಪಣೆಗಳನ್ನು 19.12.1957ನೇ ಇಸವಿ ದಶಂಬ್ರ 19ನೇ ತಾರೀಕಿನಲ್ಲಿ ಹಗಲು 10 ಘಂಟೆಗೆ, ಎದ್ರಿಯಾದ ನೀವು ಮೇಲ್ಕಂಡ ಕೋರ್ಟು ಮುಂದೆ ದಾಖಲು ಮಾಡುವುದು. ತಪ್ಪಿದ್ರೆ ಸದ್ರಿ ವಿಷಯದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ.

P. A. Ariga,
Advocate for Petitioner.
ಪೊಳ್ತೂರು: ಪುತ್ತೂರು,
ತಾ. 27-11-1957.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೨-೧೨-೧೯೫೬	೧೪

ವಿಮೋಚನೆಗಾಗಿ ಒತ್ತಾಯ

ಈ ತಿಂಗಳ ಇಪ್ಪತ್ತೈದನೆಯ ದಿನಾಂಕದಂದು ದಕ್ಷಿಣ ವಲಯದ ಪ್ರಾದೇಶಿಕ ಸಮಿತಿಯ ಸಭೆಯು ಎರಡನೆಯ ಬಾರಿಗೆ ತಿರುವನಂತಪುರಲ್ಲಿ ಸೇರಲಿದೆ. ಈ ಸಮಿತಿಯ ಸಭೆಯೆಯಾನಲ್ಲಿ ಕಾಸರಗೋಡಿನ ಪ್ರಶ್ನೆಯೂ ಪುನರ್ವಿವೇಚನೆಗೆ ಬರುವುದೆಂದು ದೃಢವಾಗಿ ನಂಬಲಾಗಿದೆ. ಕಾಸರಗೋಡು ಮೂಲತಃ ಕನ್ನಡ ಭಾಷಾ ಪ್ರದೇಶವಾಗಿದ್ದು, ಅದು ಕರ್ನಾಟಕದೊಂದಿಗೆ ಸೇರಬೇಕೆಂದು ನಾವು ಈ ಮೊದಲೇ ಸ್ಪಷ್ಟಾಭಿಪ್ರಾಯವನ್ನು ಕೊಟ್ಟಿರುವೆವು. ಅದೂ ಪ್ರಕೃತದ ಸ್ಥಿತಿಗತಿಗಳನ್ನವಲೋಕಿಸಿ ಚುದ್ರಗಿರಿ ಹೊಳೆಯ ಉತ್ತರ ಪ್ರದೇಶವು ನ್ಯಾಯಸಮ್ಮತಿಯಾಗಿಯೂ ಮೈಸೂರೆಂಬ ನಾಮಧೇಯದಿಂದ ಹುಟ್ಟಿಕೊಂಡ ಕರ್ನಾಟಕಕ್ಕೆ ಸೇರಬೇಕಾದುದು ಅಗತ್ಯ. ಇದನ್ನೂ ನಮ್ಮಿತರ ಸಹೋದ್ಯೋಗಿಗಳಂತೆ ನಾವೂ ಈ ಪುಟಗಳಲ್ಲಿ ಬರೆದಿದ್ದೇವೆ. ಇದೀಗ ವ್ಯಕ್ತವಾಗುವ ಒಂದು ವರದಿಯಂತೆ ತಿರುವನಂತಪುರದ ಸಮಿತಿಯ ಸಭೆಯಲ್ಲಿ ಈ ಪ್ರಶ್ನೆ ಬರುವ ಸಂಭವವು ಹೆಚ್ಚಾಗಿರುವುದರಿಂದ, ಈ ಅವಸರದಲ್ಲಿ ಸಹ ನಮ್ಮ ಅಭಿಪ್ರಾಯವನ್ನು ಮತ್ತಷ್ಟು ಸ್ಪಷ್ಟಪಡಿಸಬಯಸುತ್ತೇವೆ. ಕಾಸರಗೋಡು, ಅದರಲ್ಲೂ ಚಂದ್ರಗಿರಿಯ ಉತ್ತರದ ಭಿಕ್ಕಾಗಳು ಮೈಸೂರಿಗೆ ಸೇರಬೇಕೆಂಬುದರಲ್ಲಿ ಕನ್ನಡಿಗರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಇದೀಗ ಕುಂಬಳೆ ಮತ್ತು ಮಂಜೇಶ್ವರ ಭಿಕ್ಕಾಗಳನ್ನು ಮೈಸೂರಿಗೆ ಸೇರಬೇಕೆಂಬ, ಕಾಸರಗೋಡು ಭಿಕ್ಕಾದ ಪ್ರಶ್ನೆಯನ್ನು ನಿಸ್ಪಕ್ಷವಾತ ಪಂಚಾಯತಿಗೆ ಒಪ್ಪಿಸಬೇಕೆಂಬ ಕೆಲವರಲ್ಲಿ ನಿರ್ಧಾರವಾಗಿದ್ದು, ಇದಕ್ಕೆ ಕೇರಳದ ಕಮ್ಯೂನಿಸ್ಟರ ಬೆಂಬಲವೂ ಇರುವುದೆಂದು ತಿಳಿದುಬಂದಿದೆ. ಇದರ ದ್ಯೋತಕವಾಗಿ, ಮಂಜೇಶ್ವರ ಜಿಲ್ಲಾ ಬೋರ್ಡು ಈ ಸಂಬಂಧದಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿ ತನ್ನ ಒಪ್ಪಿಗೆಯ ಮುದ್ರೆಯನ್ನೊತ್ತಿರುತ್ತದೆ. ಇದೀಗ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು, ಕಾಸರಗೋಡು ಕರ್ನಾಟಕ ಸ್ವಾಂತೀಕರಣ ಸಮಿತಿಗಳು ನಿರ್ಣಯಗಳನ್ನು ಕೈಗೊಂಡಿವೆ. ಬಂಬ್ಯಗಳಗಡಿಪ್ರದೇಶದಲ್ಲಿನ ತಾಲೂಕು ಮೊದಲಾದ ವಿಷಯದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಸಂಬಂಧಪಟ್ಟ ರಾಜ್ಯ ಸರಕಾರಗಳು ಶಾಂತರೀತಿಯಿಂದ ಒಮ್ಮತದ ನಿರ್ಧಾರಕ್ಕೆ ಬಾರದೇ ತೀರ್ಮಾನಿಸಿಕೊಳ್ಳಬೇಕೆಂದೂ, ಅಂತಹ ಸಂದರ್ಭದಲ್ಲಿ ಕೇಂದ್ರವೂ ಅನಿವಾರ್ಯವೆಂದೂ ಈ ಮೊದಲೇ ಕೇಂದ್ರ ಸರಕಾರದ ಅಪೇಕ್ಷೆಯಾಗಿತ್ತು. ಪ್ರಕೃತದ ವಾತಾವರಣವನ್ನು ನೋಡಿದರೆ, ಕೇರಳದ ಮುಖ್ಯಮಂತ್ರಿ ಶ್ರೀ ನಂಬೂದಿರಿಪಾದರೂ ಈ ವಿಷಯದಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೊಡನೆ ಒಂದು ಏಕಮತದ ನಿರ್ಧಾರವನ್ನು ಮಾಡಲು ಸಿದ್ಧರಿದ್ದಾರೆಂದು ತಿಳಿದು ಬಂದಿದೆ. ಪ್ರಾಯಃ ಈ ಕುರಿತಾದ ಮಾತುಕತೆಗಳು ಈಗಾಗಲೇ ನಡೆದು ಹೋಗಿರಬಹುದು. ಹಾಗಿರುವಾಗ ನಮ್ಮ ಕನ್ನಡ ಬಂಧುಗಳು ಕಳೆದ ಒಂಬತ್ತು ವರ್ಷದಲ್ಲಿ ಪಟ್ಟ ಕಷ್ಟ ಕಾರ್ಪಣ್ಯಗಳು ದೂರವಾಗುವ ಸಲ್ಲಕ್ಷಣಗಳು ಗೋಚರಿಸುತ್ತಿವೆಯೆಂದು ನಂಬಬಹುದು. ಆಶಿಸಲು ಎಂದೂ ಆತಂಕವಿರಲಾರದು. ಆದರೆ, ತಡವೇಕೆ? ಏನೋ ಯಾವುದೋ ಒಂದು ದುರ್ವ್ಯಷ್ಟದ ದೆಸೆಯಿಂದಾಗಿ ನಮ್ಮಿಂದ ದೂರವಿರುವ ನಮ್ಮ ಬಂಧುಗಳನ್ನು ನಾವು ಸದಾಕಾಲವೂ ನೆನೆಯುತ್ತೇನೆ. ಈ ವಿವಾದವನ್ನು ನಾವು ಈಗಾಗಲೇ ಒಂದು ವರ್ಷದಷ್ಟು ಬೆಳೆಸಿದ್ದೇವೆ. ಇನ್ನೂ ಇನ್ನೂ ಬೆಳೆಸುತ್ತಾ ಬಂದು, ಗಡಿಯನ್ನು ಮುಂದೆ ಹಾಕುತ್ತಾ ಕೂರುವುದು ಯಾವ ಸರಕಾರಕ್ಕೆ ಇರಲಿ, ಜನತೆಗೇ ಆಗಲಿ ಶಕ್ತಿಕಾರಿಯಲ್ಲ; ಬದಲು, ನೆಮ್ಮದಿಯ ಭಂಗಕ್ಕೆ ಕೇತುವಾಗುವುದು ಖಂಡಿತ. ಆದುದರಿಂದ, ದಕ್ಷಿಣ ವಲಯದ ಸಭೆಯ ಅವಸರದಲ್ಲಿ, ಈ ವಿವಾದದಲ್ಲಿ ಸೂಕ್ತ ಚರ್ಚೆ ನಡೆದು, ಕಾಸರಗೋಡಿನ ಕನ್ನಡಿಗರ ನ್ಯಾಯವಾದ ಬಯಕೆಯನ್ನು ಈಡೇರಿಸಲು ಸಮಿತಿಯನ್ನು ಒತ್ತಾಯ ಪಡಿಸುವುದು ಕನ್ನಡಿಗರೆಲ್ಲರ ಕರ್ತವ್ಯ ಆದುದರಿಂದ ಆ ಒಗ್ಗೆ ಒಂದು ಅಂತಿಮ ನಿರ್ಧಾರಕ್ಕೆ ಬಂದು, ಮೈಸೂರಿನೊಂದಿಗೆ ಮಾತುಕತೆಗಳನ್ನು ಮುಂದುವರಿಸಿ, ಕಾಸರಗೋಡು ಕನ್ನಡವಾಗಿಯೇ ಉಳಿಯುವಂತೆ ಮಾಡುವುದರಲ್ಲಿ ಸಹಕಾರಿಯಾಗಬೇಕು— ನಮ್ಮ ಸಹೋದರರು ಕಳೆದೊಂದು ವರ್ಷದಲ್ಲಿ ಪಟ್ಟ ಬನ್ನಗಳನ್ನು ಮರೆತು ನವೈಂದಿಗೆ ಸಲಿಸು ಕಾಣಿಯುವಂತಾಗಬೇಕು. ಅವಿಲ್ಲದೆ, ಈ ಪ್ರಶ್ನೆಯು ಪ್ರಸಕ್ತಪಡೆತ್ತದೆ ನಾವು ಮಾನವಾಗಿ ಕಾತರೆ, ನಮ್ಮ ಬಯಕೆಯನ್ನೆರಿದಿಗೂ ಈಡೇರಿಸಿಕೊಳ್ಳಲಾತೆವು; ಹಾಗಾಗಿ ಈಗಾಗಲೇ ಕೇರಳೀಕರಣವಕ್ಕ ಮುನ್ನಡೆಯುತ್ತಿರುವ ಕಾಸರಗೋಡಿ, ಇನ್ನು ಕೆಲವೇ ಸಮಯದಲ್ಲಿ ತನ್ನ ಕನ್ನಡತನವನ್ನು ಒತ್ತಾಯದಿಂದ, ಒಪ್ಪಿದ ಮನಸ್ಸಿನಿಂದ, ಜುಲುಮೆಯಿಂದ ಬರೆತು, ಪರರನ್ನು ಅನುಕರಿಸಿ ಬಾಳಬೇಕಾದ ದುಸ್ಸಂದರ್ಭವೊದಗುವುದು ಖಂಡಿತ. ಆದುದರಿಂದ, ಕನ್ನಡ ರಾಜ್ಯದ ಮುಂದಾಳುಗಳು, ಕನ್ನಡದ ಸ್ನೇಮಿಗಳು ಎಲ್ಲ ಕನ್ನಡಿಗರು ಒಕ್ಕೊರಲಿನಿಂದ ತಮ್ಮ ಎರಡು ಲಕ್ಷ ಸೋದರ ಸೋದರಿಯರ ಉಳಿವು ಳಿವಿನ ಪ್ರಶ್ನೆಯಲ್ಲಿ ತ್ವರಿಗೆ ನ್ಯಾಯ ದೊರಕಿಸಲು ಪ್ರಯತ್ನಿಸಬೇಕು, ಮತ್ತು ಜಯಶೀಲರಾಗಬೇಕು. ಅದು ಬಿಟ್ಟು ಕೈಕಟ್ಟಿ ಕುಳಿತರೆ, ಕಾಸರಗೋಡು ಈಗಾಗಲೇ ಕೈಯಿಂದ ತಪ್ಪಿದೆ—ಇನ್ನು ಮುಂದೆ, ಅದು ನಮ್ಮಿಂದ ಬಹಳ ದೂರ ಸಾಗಿದಂತೆಯೇ ಸರಿ. ಯಾವ ಕಾರಣವೇ ಇರಲಿ, ಎಲ್ಲ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ತೊರೆದು

ಕನ್ನಡದ ನೆಲವಾದ ಕಾಸರಗೋಡಿನಲ್ಲಿ ಕೇರಳೀಕರಣಕ್ಕೆ ಇನ್ನಾವುದೂ ಅಪ್ಪದೆ ದೊರೆಯದಂತೆ ಮಾಡಲು ದಕ್ಷಿಣಿಗರಿ ಕಾರ್ಯಪ್ರವೃತ್ತರಾಗಬೇಕು. ಕನ್ನಡಿಗರೂ ಕನ್ನಡ ರಾಜ್ಯದ ಸರಕಾರವೂ ಈ ಪ್ರಶ್ನೆಯನ್ನು ಗಂಭೀರವಾಗಿ ತ್ವರಿತವಾಗಿಯೇ ಪರಿಶೀಲಿಸಿ, ದಕ್ಷಿಣವಲಯ ಸಮಿತಿಯ ಸಭೆಯ ಮುಂದೆಯೇ ತಕ್ಕ ಒಡಂಬಡಿಕೆಯಾಗುವಂತೆ ನೋಡಿಕೊಳ್ಳಬೇಕಾ ಕಾಸರಗೋಡು ಕೈಗೆ ಬರುವಂತೆ ಮಾಡಬೇಕು. ಹಾಗಾಗುವಂತೆ ಸಕಲರೂ ಕರ್ತವ್ಯ ಶೀಲರಾಗಿ ತಮ್ಮ ಕರ್ತವ್ಯದಲ್ಲಿ ಜಯಪ್ರದರಾಗಲಿ ಎಂಬುದಾಗಿ ನಾವು ಹಾರೈಸುತ್ತೇವೆ.

ರಾಷ್ಟ್ರೀಯ ವಿಸ್ತರಣಾಸೇವೆಯಲ್ಲಿ—

ಆರ್ಥಿಕಾಭಿವೃದ್ಧಿಗೆ ಮಹತ್ವವಿರಲಿ.

ಭಾರತದ ಯೋಜನಾಸಮಿತಿಯು ನೇಮಿಸಿದ ಜನಪದ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವಾ ಸಂಬಂಧದ ಅಧ್ಯಯನ ಮಂಡಲಿಯು ಇತ್ತೀಚೆಗೆ ವರದಿಯನ್ನು ಪ್ರಕಟಿಸಿದೆ. ಇದುವರೆಗೆ ಹಿತಂರಕ್ಷಣಾ ಚಟುವಟಿಕೆಗಳಿಗೆ ಹೆಚ್ಚಿನ ಗಮನವೀಯಲಾಗುತ್ತಿದ್ದು ಇನ್ನು ಮುಂದೆ ಆದರ ಬದಲು ಆರ್ಥಿಕ ಅಭಿವೃದ್ಧಿಗೆ ಅಧಿಕ ಮಹತ್ವವೀಯುವುದು ಅಗತ್ಯವೆಂದು ಈ ಅಧ್ಯಯನ ಮಂಡಲಿಯು ತನ್ನ ವರದಿಯಲ್ಲಿ ಸ್ಪಷ್ಟಪಡಿಸಿದೆ.

ಕುಡಿಯುವ ನೀರಿನ ಪೂರೈಕೆ, ವ್ಯವಸಾಯ ವತ್ತು ಪಶುಪಾಲನೆಯನ್ನು ಅಭಿವೃದ್ಧಿಪಡಿಸುವುದು, ಸಹಕಾರೀ ಚಟುವಟಿಕೆಗಳು, ಗ್ರಾಮಾಂತರ ಕೈಗಾರಿಕೆ ಮತ್ತು ಆರೋಗ್ಯ—ಇವುಗಳಿಗೆ ಪ್ರಾಧಾನ್ಯವೀಯಬಹುದೆಂದು ಈ ವರದಿಯು ತಿಳಿಸಿದೆ.

ಶ್ರೀ ಬಲವಂತ ರಾಯ್ ಜಿ ಮೆಹತಾರವರು ಈ ಅಧ್ಯಯನ ಮಂಡಲಿಯ ನಾಯಕರು. ೧೯೫೨ರ ದಶಂಬರದಲ್ಲಿ ಯೋಜನಾ ಸಮಿತಿಯು ಈ ಅಧ್ಯಯನ ಮಂಡಲಿಯನ್ನು ಸಾಮುದಾಯಿಕ ಅಭಿವೃದ್ಧಿ ಕಾರ್ಯಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಯಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಿ ವರದಿಮಾಡಲು ನೇಮಿಸಿದ್ದರು. ಗ್ರಾಮ ಪಂಚಾಯತಿಗಳನ್ನು ಉನ್ನತ ಮಟ್ಟದಲ್ಲಿ ಜನಸ್ತೋಮ ಸಂಸ್ಥೆಗಳೊಂದಿಗೆ ಅಂಗ ಸಂಸ್ಥೆಗಳೋಪಾದಿಯಲ್ಲಿ ಸಂಬಂಧ ಕಲ್ಪಿಸುವ ದೃಷ್ಟಿಯಿಂದ ಜಿಲ್ಲಾ ಅಭಿವೃದ್ಧಿ ಮಂಡಲಿಗಳ ಸಂಯೋಜನೆಗೆ ಸಲಹೆಗಳನ್ನು ನೀಡಬೇಕೆಂದು ಈ ಮಂಡಲಿಗೆ ನಿರ್ದೇಶನವೀಯಲಾಗಿತ್ತು.

ಈ ಮಂಡಲಿಯು ಆರಿಸಿದ ಕೆಲವು ಅಭಿವೃದ್ಧಿ ಕೇಂದ್ರಗಳಿಗೆ ಭೇಟಿಕೊಟ್ಟು ಆ ಸ್ಥಳದ ಜನಸಾಮಾನ್ಯರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಮತ್ತು ಜನವದ ಅಭಿವೃದ್ಧಿ ಕೆಲಸಕ್ಕೆ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಸಂಬಂಧಪಟ್ಟವರೊಂದಿಗೆ ಸವಾಲೋಚನೆಗಳನ್ನು ನಡೆಸಿತು.

ಪರಿಣಾಮಕಾರಿಯಾದ ಗ್ರಾಮಾಂತರ ಅಭಿವೃದ್ಧಿಗೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವೇ ಸರಿಯಾದ ಉಪಾಯವೆಂದು ಈ ಅಧ್ಯಯನ ಮಂಡಲಿಯು ಸೂಚಿಸಿ, ಸರಕಾರದವನು ತಮ್ಮ ಕೆಲವು ಕರ್ತವ್ಯಗಳನ್ನು ಗ್ರಾಮ ಪಂಚಾಯತಿಗಳಿಂದ ಪರೋಕ್ಷವಾಗಿ ಆರಿಸಲ್ಪಟ್ಟು ರಚನೆಯಾದನ್ನಯ ಗ್ರಾಮಾಡಳಿತ ಸಂಸ್ಥೆಗೆ ಆಕರ್ಷವ್ಯಗಳನ್ನು ವಹಿಸಿಕೊಡಬೇಕೆಂದು ಈ ಮಂಡಲಿಯು ತಿಳಿಸಿದೆ. ಈ ಮಂಡಲಿಗೆ ಪಂಚಾಯತಿ ಸಮಿತಿಯೆಂದು ಕೆಸರಿಡ ಬಹುದೆಂದೂ ತಿಳಿಸಿದೆ. ಬೇಸಾಯ ಅಭಿವೃದ್ಧಿ, ಪಶುಪಾಲನೆ, ಸ್ಥಳೀಯ ಕೈಗಾರಿಕೆಗಳಿಗೆ ಉತ್ತೇಜನ, ಸಾರ್ವಜನಿಕ ಆರೋಗ್ಯ ಹಿತರಕ್ಷಣಾ ಕೆಲಸಗಳು, ಪ್ರಾಥಮಿಕ ಶಾಲೆಗಳ ಅಡಳಿತ, ಅಂತೆ ಅಂಕಗಳ ಸಂಗ್ರಹಣೆ ಮತ್ತು ದಾಖಲೆ ಈ ಸಂಬಂಧದ ಹೊಣೆಗಾರಿಕೆಗಳನ್ನು ಈ ಪಂಚಾಯತಿ ಸಮಿತಿಗಳಿಗೂ ನಿರ್ವಹಿಸಬೇಕೆಂದು ಅಧ್ಯಯನ ಮಂಡಲಿಯು ತನ್ನ ವರದಿಯಲ್ಲಿ ತಿಳಿಸಿದೆ.

ಈ ಪಂಚಾಯತಿ ಸಮಿತಿಯು ರಾಜ್ಯ ಸರಕಾರದ ಪ್ರತಿನಿಧ್ಯವನ್ನು ಪಡೆದ ಸಂಸ್ಥೆಯಾಗಿ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು. ಈ ಸಮಿತಿಗೆ ಭೂಕಂದಾಯ, ತೆರಿಗೆ ಮೊದಲಾದವುಗಳಲ್ಲಿ ಒಳ್ಪ ಪಾಲನ್ನು ಕೊಡುವುದಲ್ಲದೆ ಸರಕಾರದವು ಸಹಾಯ ಧನವೂ ದೊರೆಯಬೇಕು ಎಂದು ಈ ಅಧ್ಯಯನ ಮಂಡಲವು ಅಭಿಪ್ರಾಯಪಟ್ಟಿದೆ.

ಅಭಿವೃದ್ಧಿ ಯೋಜನೆಗಳಲ್ಲಿ ವಿನಿಯೋಗಿಸಬೇಕಾದ ಕೇಂದ್ರ ಹಾಗೂ ರಾಜ್ಯಗಳ ಹಣವನ್ನು ಈ ಸಮಿತಿಯು ಆದಾಜು ಮಾಡಬೇಕು ನೀರಿನ ಪೂರೈಕೆ, ನೈರ್ಮಲ್ಯ, ದೀಪ ವ್ಯವಸ್ಥೆ, ರಸ್ತೆಗಳ ನಿರ್ಮಾಣ, ಭೂಮಿಯ ಅಡಳಿತ, ದಾಖಲೆಗಳು ಮತ್ತು ಅಂಕೆ ಅಂಕಗಳ ಸಂಗ್ರಹಣೆ ಇತ್ಯಾದಿಗಳು ಗ್ರಾಮ ಪಂಚಾಯತಿಯ ಕಡ್ಡಾಯ ಕರ್ತವ್ಯವಾಗಿರಬೇಕು ಎಂದು ಈ ಮಂಡಲಿಯು ಸಿಫಾರಸು ಮಾಡಿದೆ.

ಗ್ರಾಮಸೇವಕರನ್ನು ಗ್ರಾಮ ಪಂಚಾಯತಿಯ ಅಭಿವೃದ್ಧಿ ಕಾರ್ಯದರ್ಶಿಯನ್ನಾಗಿ ಮಾಡುವುದರಿಂದ ಅವರಿಬ್ಬರೊಳಗೆ ಸಂಪರ್ಕವನ್ನು ಕಲ್ಪಿಸಬಹುದೆಂದು ಈ ವರದಿಯು ತಿಳಿಸಿದೆ. ಪಂಚಾಯತಿ ಸಮಿತಿಗಳ ನಡುವೆ ಅಗತ್ಯವಾದ ಸಮನ್ವಯಗಳನ್ನು ಸಾಧಿಸುವುದಕ್ಕಾಗಿ ಜಿಲ್ಲಾ ಪರಿಷತ್ತುಗಳಿರಬೇಕು. ಈ ಪರಿಷತ್ತುಗಳಲ್ಲಿ ಸಮಿತಿಗಳ ಅಧ್ಯಕ್ಷರು, ರಾಜ್ಯ ಸುತ್ತು ಕೇಂದ್ರ ಸರಕಾರಗಳ ಶಾಸನ ಸಭೆಗಳ ಪ್ರತಿನಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳೂ ಇರಬೇಕು. ಜಿಲ್ಲಾ ಕಲೆಕ್ಟರರು ಈ ಪರಿಷತ್ತಿನ ಅಧ್ಯಕ್ಷರಾಗಿರಬೇಕು ಎಂದೀ ಮಂಡಳಿಯು ಸೂಚಿಸಿದೆ.

ಅಭಿವೃದ್ಧಿ ಕಾರ್ಯಗಳಲ್ಲಿ ಜನತೆಯ ಸಹಕಾರವು ಅಧಿಕ ಪ್ರಮಾಣದಲ್ಲಿ ದೊರೆಯುವಂತೆ ಕಾರ್ಯಕ್ರಮಗಳನ್ನು ಯೋಜಿಸಬೇಕೆಂದೂ ಈ ಅಧ್ಯಯನ ಮಂಡಲಿಯು ವರದಿಮಾಡಿದೆ.

ಉತ್ತಮ ಬೀಜದ ಧಾನ್ಯಗಳನ್ನು ಪೂರೈಸುವುದು, ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸುವುದು — ಇವುಗಳಿಗೆ ಅನೇಕ ಸಲಹೆಗಳನ್ನೂ ಈ ಅಧ್ಯಯನ ಮಂಡಲಿಯು ನೀತಿಯುತ್ತದೆ.

ಮಹತ್ವದ ಸುದ್ದಿಗಳು

ಗೋಕರ್ಣ ಮೇಲೆ ಮಳೆ

ಒಂದು ದೇಶದ ಧ್ವಜ ಮತ್ತು ಘಟನೆಗಳನ್ನು ಒಪ್ಪಲು ನಿರಾಕರಿಸುವವರೇನು ಮಾಡಬೇಕು ಎಂಬ ಶೃಷ್ಟಿಗೆ ಭಾರತದ ಪ್ರಧಾನಿ ನೆಹರೂ ಅವರು, ಅಂತಹ ಮನುಷ್ಯರು ಈ ದೇಶದಿಂದ ಹೊರಟುಹೋಗಬೇಕೆಂಬುದಾಗಿ ಉತ್ತರಿಸಿದರು ದ್ರಾವಿಡ ಗಡುಗುಮಿನ ರಾಷ್ಟ್ರಧ್ವಜವನ್ನೂ ರಾಷ್ಟ್ರಘಟನೆಯನ್ನೂ ಬಹಿರಂಗವಾಗಿ ಸುಟ್ಟುಹಾಕುವ ಚಳವಳವನ್ನು ಪ್ರಸ್ತಾಪಿಸುತ್ತಾ ಇಂತಹ ಕಾಲದಲ್ಲಿಯೂ ಕಾದು ಮನ ವ್ಯರ ವರ್ತನೆಯನ್ನು ತೋರಿಸುತ್ತಿರುವುದು ನಿಷ್ಠಾದಕರವೆಂದರು. ಭಾರತದ ಧ್ವಜ ಹಾಗೂ ಘಟನೆಗಳು ಸ್ವೀಕಾರವಾಗದಿರುವ ನಾಗರಿಕರು ತನ್ನ ಯೋಜನೆಗಳಿಗೆ ರೂಪಾಯಿ ಬಂಡವಳವನ್ನೇ ಅವಲಂಬಿಸಬೇಕು, ವಿದೇಶಗಳಿಂದ ದೊರೆಯಬಹುದಾದ ಸಾಲವಾದರೂ ಭಾರತದಲ್ಲಿಯ ವಾತಾವರಣ ಮತ್ತು ಇಲ್ಲಿ ದೊರೆಯಬಹುದಾದ ಬಂಡವಳದ ಮೇಲೆಯೇ ಹೊಂದಿಕೊಂಡಿದೆ ಎಂದು ಅಭಿಪ್ರಯಪಟ್ಟಿದ. ಭಾರತದ ಬಗ್ಗೆ ಅಮೆರಿಕನರ ತಪ್ಪು ಭಾವನೆಯು ಅದಷ್ಟು ದೂರವಾಗಿದೆಯೆಂದೂ ಖಾಸಗಿ ಬಂಡವಾಳವು ಉತ್ತೇಜಿತ ಪ್ರವಣಾದಲ್ಲಿ ಅಮೆರಿಕೆಯಿಂದ ಬರಬಹುದೆಂದೂ ಅದು ತಿಳಿಸಿದೆ

ಕೋಸದ ಪ್ರತಿಕ್ರಿಯೆ

ಇಂಡೋನೇಶಿಯವಲ್ಲಿನ ಡಚ್ಚರನ್ನು ದೇಶಬಿಟ್ಟು ಹೊರನಡೆಯುವಂತೆ ಸರಕಾರವು ಆದೇಶವಿತ್ತಿರುವುದಷ್ಟೇ ಇದೀಗ ಇಂಡೋನೇಶಿಯನ ಬೇಂಕ್ ಕೆಲಸಗಾರ ಸಂಘವು ಜಕಾರ್ತಾದಲ್ಲಿರುವ ಎಲ್ಲ ಡಚ್ ಬೇಂಕುಗಳನ್ನು ಸ್ವಾದೀನಪಡಿಸಿದೆಯೆಂದು ಪ್ರಕಟಿಸಿದೆ ಈ ಬೇಂಕುಗಳ ಸೊತ್ತುಗಳು ಇಂಡೋನೇಶಿಯಾ ಪ್ರಜಾರಾಜ್ಯದ ಸೊತ್ತುಗಳಾಗುವುವೆಂದೂ ಅದು ಪ್ರಕಾಶಪಡಿಸಿದೆ ಗ್ರಂಥಾಲಯ ಸಕ್ಕರೆ ಕಾರಖಾನೆ ಮೊದಲಾದ ಆಸ್ತಿಗತನ್ನೂ ಇಂಡೋನೇಶಿಯನ್ನರು ವಶಪಡಿಸಿದ್ದಾರೆ. ಡಚ್ಚರ ಆಸ್ತಿಯನ್ನು ಸೇನ ಧಿಕಾರಿಯು ಅಪ್ಪಣೆಯಿಲ್ಲದೆ ವಶವಡಿಸಿಕೊಳ್ಳುವುದು ಅಪರಾಧವಾಗುವುದೆಂದು ದಕ್ಷಿಣ ಸುಮಾತ್ರಾದ ಸೇನಾಧಿಕಾರಿಯು ಪ್ರಕಟಿಸಿರುವನು. ಇಂಡೋನೇಶಿಯನ್ನರ ಈ ಪ್ರತಿಕ್ರಿಯೆಯು ಆಸ್ಟ್ರೇಲಿಯದ ವಿರುದ್ಧ ಹೊರಳುವ ಲಕ್ಷಣಗಳೂ ಕಂಡುಬರುತ್ತಿವೆ ಏಕೆಂದರೆ, ಆವರು ಡಚ್ಚರಿಗೆ ಬೆಂಬಲ ಕೊಡುತ್ತಿದ'

ಶೈತ ಜನರ ಅಯಾತ

ತುಂಗಭದ್ರಾ ಯೋಜನೆಯ ಕಕ್ಷೆಯಲ್ಲಿ ಬರುವ ಭೂಮಿಯನ್ನು ಸಗುನಾಡುವ ಸಲುವಾಗಿ ಹೊರಗಿನಿಂದ ಶೈತ ಕೆಲಸಗಾರರನ್ನು ಕರೆಯಿಸಲು ಮೈಸೂರು ಸರಕಾರವು ನಿರ್ಧರಿಸಿದೆ. ಈ ಭೂಮಿ ಸಾಗುವಳಿಗಾಗಿ ಮೊದಲು ರಾಜ್ಯದ ಜನರಿಗೆ ಪ್ರಾಶಸ್ತ್ಯಕೊಡಲಾಗುವುದು. ಆದರೆ ಜನರು ಸಾಕಷ್ಟಾಗಿ ಮುಂದೆ ಬರದಿದ್ದರೆ ನೆರೆಯ ರಾಜ್ಯದವರ ಬೇಡಿಕೆಗಳನ್ನು ಪರಿಶೀಲಿಸಲಾಗುವುದು ಎಂದೊಂದು ಸರಕಾರೀ ಪ್ರಕಟಣೆ ಹೊರಬಿದೆ

ಪಾಕ್ ಕಾಶ್ಮೀರದ ದುಃಸ್ಥಿತಿ

ಪಾಕಿಸ್ತಾನಾಕ್ರಮಿತ ಕಾಶ್ಮೀರದಲ್ಲಿ ಪ್ರಿನ್ಸಿಪಾಲರ ಸಭೆಯು ನಿರ್ಧರಿಸಿತು. ಯೋಜನಾ ಮಂಡಳಗಳನ್ನು ಸ್ಥಾಪಿಸಿರದ ಕಾಲೇಜುಗಳು ಉಳಿತಾಯು ಸಂಸ್ಥೆಯನ್ನಾದರೂ ಸ್ಥಾಪಿಸಿ ಹೆಚ್ಚು ಜನ ವಿದ್ಯಾರ್ಥಿಗಳನ್ನು ಸದಸ್ಯರನ್ನಾಗಿ ಮಾಡಿಕೊಂಡು ಅವರು ನಗರದ ಸಾಧ್ಯ ವಿದ್ದಷ್ಟು ಹೆಚ್ಚು ನಾಗರಿಕರೊಂದಿಗೆ ಸಂಪರ್ಕ ಬೆಳೆಸಿ ಉಳಿತಾಯು ಯೋಜನೆಯನ್ನು ಬಲಪಡಿಸುವಂತೆ ಮಾಡಬೇಕು ಎಂದೂ ಸಭೆಯಲ್ಲಿ ತೀರ್ಮಾನಿಸಿದರು.

ಭಾರತಕ್ಕೆ ಬಂಡವಳವಲ್ಲಿಂದ?

ಶಿತ್ರೀಜೆಗೆ ಅಮೆರಿಕಾ, ಕೆನಡಾ, ಬ್ರಿಟನ್, ಫ್ರಾನ್ಸ್ ಹಾಗೂ ಪಶ್ಚಿಮ ಜರ್ಮನಿಗಳನ್ನು ಸಂದರ್ಶಿಸಿಕೊಂಡು ಬಂದ ಬಿಲ್ಲಾರ ನಾಯಕತ್ವದಲ್ಲಿ ಹೊರಟಿದ್ದ ಔದ್ಯೋಗಿಕ ಮಂಡಲವು ಭಾರತವು ತನ್ನ ಯೋಜನೆಗಳಿಗೆ ರೂಪಾಯಿ ಬಂಡವಳವನ್ನೇ ಅವಲಂಬಿಸಬೇಕು, ವಿದೇಶಗಳಿಂದ ದೊರೆಯಬಹುದಾದ ಸಾಲವಾದರೂ ಭಾರತದಲ್ಲಿಯ ವಾತಾವರಣ ಮತ್ತು ಇಲ್ಲಿ ದೊರೆಯಬಹುದಾದ ಬಂಡವಳದ ಮೇಲೆಯೇ ಹೊಂದಿಕೊಂಡಿದೆ ಎಂದು ಅಭಿಪ್ರಯಪಟ್ಟಿದ. ಭಾರತದ ಬಗ್ಗೆ ಅಮೆರಿಕನರ ತಪ್ಪು ಭಾವನೆಯು ಅದಷ್ಟು ದೂರವಾಗಿದೆಯೆಂದೂ ಖಾಸಗಿ ಬಂಡವಾಳವು ಉತ್ತೇಜಿತ ಪ್ರವಣಾದಲ್ಲಿ ಅಮೆರಿಕೆಯಿಂದ ಬರಬಹುದೆಂದೂ ಅದು ತಿಳಿಸಿದೆ

ಕೋಸದ ಪ್ರತಿಕ್ರಿಯೆ

ಇಂಡೋನೇಶಿಯವಲ್ಲಿನ ಡಚ್ಚರನ್ನು ದೇಶಬಿಟ್ಟು ಹೊರನಡೆಯುವಂತೆ ಸರಕಾರವು ಆದೇಶವಿತ್ತಿರುವುದಷ್ಟೇ ಇದೀಗ ಇಂಡೋನೇಶಿಯನ ಬೇಂಕ್ ಕೆಲಸಗಾರ ಸಂಘವು ಜಕಾರ್ತಾದಲ್ಲಿರುವ ಎಲ್ಲ ಡಚ್ ಬೇಂಕುಗಳನ್ನು ಸ್ವಾದೀನಪಡಿಸಿದೆಯೆಂದು ಪ್ರಕಟಿಸಿದೆ ಈ ಬೇಂಕುಗಳ ಸೊತ್ತುಗಳು ಇಂಡೋನೇಶಿಯಾ ಪ್ರಜಾರಾಜ್ಯದ ಸೊತ್ತುಗಳಾಗುವುವೆಂದೂ ಅದು ಪ್ರಕಾಶಪಡಿಸಿದೆ ಗ್ರಂಥಾಲಯ ಸಕ್ಕರೆ ಕಾರಖಾನೆ ಮೊದಲಾದ ಆಸ್ತಿಗತನ್ನೂ ಇಂಡೋನೇಶಿಯನ್ನರು ವಶಪಡಿಸಿದ್ದಾರೆ. ಡಚ್ಚರ ಆಸ್ತಿಯನ್ನು ಸೇನ ಧಿಕಾರಿಯು ಅಪ್ಪಣೆಯಿಲ್ಲದೆ ವಶವಡಿಸಿಕೊಳ್ಳುವುದು ಅಪರಾಧವಾಗುವುದೆಂದು ದಕ್ಷಿಣ ಸುಮಾತ್ರಾದ ಸೇನಾಧಿಕಾರಿಯು ಪ್ರಕಟಿಸಿರುವನು. ಇಂಡೋನೇಶಿಯನ್ನರ ಈ ಪ್ರತಿಕ್ರಿಯೆಯು ಆಸ್ಟ್ರೇಲಿಯದ ವಿರುದ್ಧ ಹೊರಳುವ ಲಕ್ಷಣಗಳೂ ಕಂಡುಬರುತ್ತಿವೆ ಏಕೆಂದರೆ, ಆವರು ಡಚ್ಚರಿಗೆ ಬೆಂಬಲ ಕೊಡುತ್ತಿದ'

ಅಕ್ಕಯ ತ್ಯಾಗ

ಅಕ್ಕಿಯು ವಿಶೇಷ ಕೊರತೆಯಿರುವುದರಿಂದ ಅದರ ಉಪಯೋಗವನ್ನು ಕಡಿತ ಮಾಡಬೇಕೆಂದು ಪ್ರಧಾನಿ ನೆಹರೂರವರು ಜನತೆಗೆ ಕರೆಗೆ ಓಗೊಟ್ಟ ಕೂಡಲೆ ವಿನೋಬಾಜೀ ಸಂಪೂರ್ಣ ಅಕ್ಕಿ ಯತ್ಯಾಗ ಮಾಡಿ ಪೂರ್ತಿ ಗೋದಿ ಯನ್ನೇ ಒಳಸುತಿದ್ದಾರೆ

ವಿದ್ಯುತ್ ದರದಲ್ಲಿ ರಿಯಾಯತಿ

ಮೈಸೂರು ರಾಜ್ಯದಲ್ಲಿನ ಧಾರ್ಮಿಕ, ಪರೋಪಕಾರಿ ಮತ್ತು ಸವಜನ ಕೆಲವೈಣ ಸಂಘ ಸಂಸ್ಥೆಗಳು ಬಳಸುವ ವಿದ್ಯುಚ್ಛಕ್ತಿ ಶ್ರವಣಾದ ದರದಲ್ಲಿ ರಿಯಾಯತಿ ಕೊಡಬೇಕೆಂದು ರಾಜ್ಯ ವಿದ್ಯುಚ್ಛಕ್ತಿ ಮಂಡಲದ ಸಭೆಯ ಲ್ಲಿ ನಿರ್ಣಯಿಸಲಾಗಿದೆ. ಪುಸ್ತಕ್ಕಾರ ನಗರಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸಲನುಕೂಲವಾಗುವಂತೆ ವಂಗಳೂರಿನ ವಿದ್ಯುಚ್ಛಕ್ತಿ ಉದಕೇಂದ್ರವನ್ನು ವಿಸ್ತರಿಸುವ, ರಾಜ್ಯದಲ್ಲಿನ ಅನೇಕ ನೀರಾವರೀ ಪಂಪಿಂಗ್ ಸ್ಟೇಶನುಗಳಿಗೆ ವಿದ್ಯುಚ್ಛಕ್ತಿ ಪೂರೈಸುವ ಯೋಜನೆಗಳಿಗೂ ಮಂಡಳವು ತನ್ನ ಒಪ್ಪಿಗೆಯಿತ್ತಿದೆ

ಉಡುಪಿ

ಅಂಚೆ ತಂತಿ ರಿಕ್ರಿಯೇಶನ್ ಕ್ಲಬ್ಬಿನ ಮಹಾ ಸಭೆಯು–ತಾ ೪ರಂದು ಹೆಡ್ ಪೋಸ್ಟಾಫೀಸಿನಲ್ಲಿ ಮಿಸ್ ಜೆ ಎಸ್. ಲೋಬೋರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟರನ್ನು ಗೌರವಿಸಲು ಜರಗಿತು ಕಾರ್ಯದರ್ಶಿ ಶ್ರೀ ವಿ ಶಿವಾನಂದ ಹೊಳ್ಳರು ಸ್ವಾಗತಿಸಿ, ಕ್ಲಬ್ಬಿಗೆ ಇಲಾಖೆಯ ಸಹಾಯ ಸಹಕಾರ್ಯಗಳನ್ನು ಅಪೇಕ್ಷಿಸಿದರು ಶ್ರೀಗಳಾದ ಕೆ ಮಹಾಲಿಂಗನವರು ಲೀಡಿಯೊ ಸೆಟ್ಟಿನ ಹೂರ್ಕೆ ಮತ್ತು ರಂಮಚಂದ್ರ ಕೋಟಾಲರು ಇಲಾಖೆ ಮೈನ್ಮನಲ್ಗಳ ಸರಬರಾಯಿ ಅಪೇಕ್ಷಿಸಿ ಮಾತನಾಡಿದರು ಸುಪರಿಂಟೆಂಡೆಂಟ್ ಕೆಸ್ಸನ್ ಎಸ್ ಎ ಸಲಾಮರು ಉತ್ತರವಿಯುತ್ತಾ, ತನ್ನಿಂದ ಸಾಧ್ಯವಾದಷ್ಟು ಸಹಾಯ ನೀಡುವುದಾಗಿ ಭರವಸೆಯಿತ್ತರು ಶ್ರೀಗಳಾದ ರಾಮಚಂದ್ರ ಬರುಡೆ ಮತ್ತು ಸೀತೇತಾ ಕುಂದರರ ಸಂಗೀತ ಅಧ್ಯಕ್ಷ ಭಾಷಣ, ವಂದನಾರ್ಪಣೆಗಳಾಗಿ ಸಭೆಯು ಕೊನೆಗೊಂಡಿತು

ಮೈಲಿಗೆ ಪ್ರತಿಬಂಧಕ ದಾಳು ಹಾಕಿಸಿಕೆ–ಉಡುಪಿಯ ಸರಹದ್ದಿನಲ್ಲಿ ಮೈಲಿಗೆ ತರಿದೋರಿರುವುದರಿಂದಲೂ ಉಡುಪಿಯ ಹೊರತುವ 'ಪಾಕ್‌ಕಾಶ್ಮೀರ' ಪತ್ರಿಕೆಯ ಮಾಜಿ ಸಂಪಾದಕರೊಬ್ಬರ ಪತ್ನಿ ನಾಜದಾ ಬೇಗಂ ಪಾಕ್ ಪೋಲೀಸರ ಕಣ್ಣು ತಪ್ಪಿಸಿ ಭಾರತಗಡಿಗೆ ಬಂದಿದ್ದಾಳೆ ತನ್ನ ಕೊಸನ್ನೆತ್ತಿಕೊಂಡು ಹಿಮುಚಳಿಗಳನ್ನು ಗಣಿಸದೆ ಆಕೆ ಬಂದಿರುವಳು. ಪಾಕ್ ಆಕ್ರವಿತ ಕಾಶ್ಮೀರದಲ್ಲಿ ಮಸ್ಲಿಂ ಸ್ತ್ರೀಯರಿಗೆ ಸುರಕ್ಷಿತತೆಯಿಲ್ಲ. ಪಾಕಿಸ್ತಾನೀ ಸೈನಿಕರು ಮತ್ತು ಪೋಲೀಸರು ಅವರ ಶೀಲಹರಣ ಮಾಡುತ್ತಾರೆ. ನೂರಾರು ಮಕ್ಕಳು ಉಪವಾಸ ಬಿದ್ದು ಸಾಯುತಿದ್ದಾರೆ ಆದರೆ, ಪಾಕ ಸರಕಾರದ ದಬ್ಬಾಳಿಕೆ ಭೀಕರವಾಗಿದ್ದರೂ, ನೂರಾರು ಸ್ತ್ರಿಯರು ಅದರ ವಿರುದ್ಧ ವತ ಪ್ರದರ್ಶನ ನಡೆಸುತ್ತಲಿದ್ದಾರೆ ಎಂದುಕೆ ತಿಳಿಸಿದ್ದಾಳೆ ತನ್ನ ಪತಿಯು ಪಾಕ್ ಸರಕಾರದ ಅಕ್ರಮದಿಂದಾಗಿ ಜನತೆಗಾದ ಅನ್ಯಾಯ ವನ್ನು ಪನಃ ಪುನಃ ಬರೆದುದರಿಂದ ಅವರನ್ನು ಓಡಿಸಲಾಯತೆಂದೂ ಆ ಮೇಲೆ ತನ್ನ ಆಸ್ತಿಪಾಸ್ತಿಯನ್ನು ಜಪ್ತು ಮಾಡಿ ತನ್ನನ್ನು ನಿರ್ಗತಿಕಳನ್ನಾಗಿ ಮಾಡಿದರೆಂದೂ ಆಕೆ ತಿಳಿಸಿದ್ದಾಳೆ

ಅಕ್ಕಿಯ ತ್ಯಾಗ

ಅಕ್ಕಿಯು ವಿಶೇಷ ಕೊರತೆಯಿರುವುದರಿಂದ ಅದರ ಉಪಯೋಗವನ್ನು ಕಡಿತ ಮಾಡಬೇಕೆಂದು ಪ್ರಧಾನಿ ನೆಹರೂರವರು ಜನತೆಗತ್ತ ಕರೆಗೆ ಓಗೊಟ್ಟ ಕೂಡಲೆ ವಿನೋಬಾಜೀ ಸಂಪೂರ್ಣ ಅಕ್ಕಿ ಯತ್ಯಾಗ ಮಾಡಿ ಪೂರ್ತಿ ಗೋದಿ ಯನ್ನೇ ಒಳಸುತಿದ್ದಾರೆ

ವಿದ್ಯುತ್ ದರದಲ್ಲಿ ರಿಯಾಯತಿ

ಮೈಸೂರು ರಾಜ್ಯದಲ್ಲಿನ ಧಾರ್ಮಿಕ, ಪರೋಪಕಾರಿ ಮತ್ತು ಸವಜನ ಕೆಲವೈಣ ಸಂಘ ಸಂಸ್ಥೆಗಳು ಬಳಸುವ ವಿದ್ಯುಚ್ಛಕ್ತಿ ಶ್ರವಣಾದ ದರದಲ್ಲಿ ರಿಯಾಯತಿ ಕೊಡಬೇಕೆಂದು ರಾಜ್ಯ ವಿದ್ಯುಚ್ಛಕ್ತಿ ಮಂಡಲದ ಸಭೆಯ ಲ್ಲಿ ನಿರ್ಣಯಿಸಲಾಗಿದೆ. ಪುಸ್ತಕ್ಕಾರ ನಗರಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸಲನುಕೂಲವಾಗುವಂತೆ ವಂಗಳೂರಿನ ವಿದ್ಯುಚ್ಛಕ್ತಿ ಉದಕೇಂದ್ರವನ್ನು ವಿಸ್ತರಿಸುವ, ರಾಜ್ಯದಲ್ಲಿನ ಅನೇಕ ನೀರಾವರೀ ಪಂಪಿಂಗ್ ಸ್ಟೇಶನುಗಳಿಗೆ ವಿದ್ಯುಚ್ಛಕ್ತಿ ಪೂರೈಸುವ ಯೋಜನೆಗಳಿಗೂ ಮಂಡಳವು ತನ್ನ ಒಪ್ಪಿಗೆಯಿತ್ತಿದೆ

ನಗರ ಸಭೆಯು–ತಾ ೨ರಂದು ಸಂಜೆ ಸಭಾಪತಿ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು 1956–57ನೇ ವರ್ಷದ ಆಡಳಿತ ವರದಿಯು ನಗರಸಭೆಯಲ್ಲಿ ಮಂಜೂರಾಗುವ ಮೊದಲೇ ಅದನ್ನು ಸರಕಾರಕ್ಕೆ ಕಮೀಶನರರು ಕಳುಹಿಸಿದುದರ ಬಗ್ಗೆ ಜಾ ಪಿ ಜಿ ಆಚಾರ್ಯರು ಆಕ್ಷೇಪ ಸೂಚಿಸಿದರು. ನಗರದಲ್ಲಿಯ ಕೆಲವು ಬೀದಿಗಳ ಹೆಸರುಗಳು ವರದಿಯಲ್ಲಿ ಇಲ್ಲವಾದುದರಿಂದ ಅವುಗಳನ್ನು ಸೇರಿಸಬೇಕೆಂದು ಸಭೆ ಸೂಚಿಸಿದರು ಬಳಿಕ ವರದಿ ಮಂಜೂರಾಯಿತು

ಫಯರ್ ಸರ್ವಿಸ್ ಆಫೀಸು ಇರತಕ್ಕ ಸ್ಥಳದ ಟೇಕ್ಸ್ ವಸೂಲಿ ಬಗ್ಗೆ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರರಿಗೆ ನೋಟೀಸ್ ಕೊಡಬೇಕೆಂದು ಸಭೆಯ ಅಭಿಪ್ರಾಯವಾಯಿತು ಮುನಿಸಿಪಲ್ ಬಿಲ್ ಕರೆಕ್ಟರರಿಬ್ಬರಿಗೆ ಹೊಸ ಸ್ಯಾಕಲುಗಳನ್ನು ಪರಿಂದಿಸಿಮಾಡಲು, ರೂಪಾಯಿ ಎಂದು ನೂರಂತೆ ಅಡ್ವಾನ್ಸ್ ಕೊಡಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು ಕೆಲವು ವಾರ್ಡುಗಳಲ್ಲಿ ಹೊಸ ಇಲೆಕ್ಟ್ರಿಕ್ ದೀಪಗಳನ್ನು ಹಾಕಿಬೇಕೆಂದು ಡಾ ಪಿ ವಿ ವ್ಯಾಸರಿಯರೂ ಶ್ರೀ ಎನ್ ಸೀತಾರಾಮು ಕಾಮತರೂ ತಂದೆ ನಿರ್ಣಯಗಳ ಕುರಿತು ಚರ್ಚೆ ನಡೆಯು ಕೊನೆಗೆ ಅವು ಪಾಸಾದುವು ಡಾ ಪಿ ಜಿ ಆಚಾರ್ಯರು ನಗರ ಸಭೆಯ ಆಡಳಕಾಸಿನನ್ವಯ, ಅಸಮ್ಮತಿಯನ್ನು ಸೂಚಿಸಿದರು

ವಿದ್ಯಾ ಪ್ರೇವಾಸ–ಸ್ಥಳೀಯ ಕಡಿಯೂರಿ ಹಾ ಎ ಶಾಲೆಯ ಸುಮಾರು ೧೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ತಾ ೯ರಂದು ಕಾರ್ಕಳ ಹಾಗೂ ಮೂಡಬಿದ್ರೆಯ ಪ್ರವಾಸವನ್ನು ಕೈಕೊಂಡು, ಪ್ರೇಕ್ಷಣೀಯ ಸ್ಥಳಗಳನ್ನು ಪರಿಶೀಲಿಸಿ, ವಿಷಯಾನುಭವ ಪಡೆದು ಅದೇ ದಿನ ಸಂಜೆ ಮರಳಿ ಉಡುಪಿಯನ್ನು ಬಂದುಸೇರಿದರು

ಉಡುಪಿ ಪತ್ರಿಕೋದ್ಯಮಿಗಳ ಸಂಘದ ಸಭೆಯು ತಾ ೪ರಂದು ಸಂಜೆ ನವಯುಗ ಪ್ರೆಸ್ಸಿನಲ್ಲಿ ಜರಗಿ ಜಿಲ್ಲಾ ಡಿಸ್ಟ್ರಿಕ್ಟ್ ಕೌನ್ಸಿಲರರು ಈ ತನಕ ಮಂಗಳೂರ್ನಲ್ಲಿ ಕರೆಯುತ್ತಿದ್ದ ಪತ್ರಿಕಾ ಸರಿಷತ್ತನ್ನು ಇನ್ನು ಮುಂದೆ ಸತ್ಪತ್ರಿಕಾರ ಉಡುಪಿಯಲ್ಲೂ ಕರೆಯುವಂತೆ ಅವರನ್ನು ವಿನಂತಿಸಲ ಮಂತ್ರಿಗಳು ಕುಂದಾಪುರ ಡಿಸ್ಟ್ರಿಕ್ಟಿನಲ್ಲಿ ಸಂಚಾರ ಕಾರ್ಯಕ್ರಮವಿಟ್ಟುಕೊಂಡಾಗ ಅವರನ್ನು ಹಿಂಜಾಲಿಸಿ ಪತ್ರಿಕೆಗಳಿಗೆ ಸುದ್ದಿಯನ್ನು ಕೊಡಲು ಅನುಕೂಲವಾಗುವಂತೆ ವಿನಂತಿಸಲ ನಿರ್ಣಯ ತಾಳಲಾಯಿತು. ಸರಕಾರವನ್ನು ಕೇಳಿಕೊಳ್ಳುವ ಮೊದಲಾದ ನಿರ್ಣಯಗಳಾದುವು

ಗೋ ವಿಜಯ

(ಗೋವಿನಕಥೆ)

ಶ್ರೀ ಮುಳಿಯಾಣ ಉಪಾಧ್ಯಾಯರಿಂದ ರಚಿತವಾದ ಮಕ್ಕಳಿಗೂ ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಪ್ಪಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಏಕಬಾಮವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಡಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು. ಬೆಲೆ 0–8–0

ನವಯುಗ ಪ್ರೆಸ್, ಉಡುಪಿ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಿಶ್ವವಿದ್ಯಾಲಯಗಳ ಶಿಕ್ಷಕರು—

ವಿದ್ಯಾರ್ಥಿ ಸ್ನೇಹ ಗಳಿಸಬೇಕು.

ಭಾರತೀಯ ವಿಶ್ವವಿದ್ಯಾಲಯಗಳ ಅನುದಾನ ಆಯೋಗದ ಅಧ್ಯಕ್ಷರಾದ ಶ್ರೀ ಚಿಂತಾಮಣಿ ದೇಶಮುಖರು ಭಾರತದ ವಿದ್ಯಾರ್ಥಿಗಳಿಗೆ ಸಮುದಾಯವು ಜಗತ್ತಿನ ಬೇರೆ ಬೇರೆ ದೇಶಗಳ ವಿದ್ಯಾರ್ಥಿ ಸಮುದಾಯದಿಂದ ಅಧಿಕ ಉತ್ತಮವಾಗಿಯೂ ಇಲ್ಲ ಮತ್ತು ಅಧಿಕಾಧಮವಾಗಿಯೂ ಇರುವುದಿಲ್ಲವೆಂಬುದನ್ನು ಸಮರ್ಥಿಸಿದ್ದಾರೆ.

ರಾಜಸ್ತಾನ ವಿಶ್ವವಿದ್ಯಾಲಯದ ಹತ್ತನೆಯ ವಾರ್ಷಿಕ ದೀಕ್ಷಾಲಿತ ಸಮಾರೋಪ ಭಾಷಣದಲ್ಲಿ ಶ್ರೀ ದೇಶಮುಖರು ಮೇಲಿನ ಮಾತುಗಳನ್ನು ಉದ್ಗರಿಸಿದ್ದಾರೆ. "ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೋಸ್ಕರವಾಗಿರುವುದೆಂಬ ಸತ್ಯವನ್ನು ನಾವು ಮನ್ನಿಸುವುದಾದರೆ, ವಿಶ್ವವಿದ್ಯಾಲಯದ ಪ್ರಶಾಸಕರಲ್ಲಿ ಆಥವಾ ಅವುಗಳ ಪ್ರಶಾಸನದಲ್ಲಿ ಹೃದಯಸ್ಪರ್ಶಿಯಾದ ಗವ.ನವೀಯುವ ವ್ಯಕ್ತಿಗಳ ಅನ್ಯಾಯಗಳು ತಮಗೆ ತಾವೇ ದೂರವಾಗುವುವು ಎಂದು ಶ್ರೀ ದೇಶಮುಖರು ಅಭಿಪ್ರಾಯ ಪಟ್ಟರು.

"ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಎರಡು ವ್ಯಕ್ತಿತ್ವಗಳಿರುತ್ತವೆ. ಕೆಲವು ಸಂದರ್ಭಗಳಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ದೊಡ್ಡ ಮನುಷ್ಯರಂತೆ ಕಾರ್ಯಮಾಡುತ್ತಾರೆ; ಏಕೆಂದರೆ, ವಿವೇಕ ಮತ್ತು ಶಿಕ್ಷಣದ ದೃಷ್ಟಿಯಿಂದ ಇದು ಆ ಸ್ಥಿತಿಯಲ್ಲಿರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ, ಅವರು ಸಾಮಾನ್ಯವಾಗಿ ಹಿರಿಯರು ಪ್ರಭಾವಿತರಾಗದಿರುವಂತಹ ಕೆಲಸಗಳಲ್ಲಿಯೇ ತಲ್ಲೀನರಾಗಿ ಬಿಡುತ್ತಾರೆ. ವಿದ್ಯಾರ್ಥಿಯ ಮೇಲೆ ಅವನ ಪಾತ್ಯಕ್ರಮ ಮತ್ತು ಅತಿರಿಕ್ತ ಶೈಕ್ಷಣಿಕ ಗತಿವಿಧಿಗಳ ಪ್ರಭಾವಗಳಾಗುವುದಿಲ್ಲ; ಆದರೆ, ಆರ್ಥಿಕ ಸಾಮಾಜಿಕ ಸ್ಥಿತಿಯಿಂದ ತೆಗೆದುಕೊಂಡು, ಪಾರಿವಾರಿಕ ಸಮಸ್ಯೆಗಳಿಂದ ಹುಟ್ಟುವ ಮತ್ತು ಸಾಮಾಜಿಕ ಸ್ಥಿತಿಯನ್ನು ನಾಟಿಸುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಘಟನೆಗಳ ವರೆಗೆ ಅವನು ಪ್ರಭಾವಿತನಾಗುತ್ತಾನೆ.

"ವಿದ್ಯಾರ್ಥಿಗಳ ವಿವೇಕದಲ್ಲಿ ಸ್ಥಿರತೆಯೆಂಬುದಿರುವುದಿಲ್ಲ. ವಿದ್ಯಾರ್ಥಿಗಳ ಮುಖ್ಯ ಉದ್ದೇಶವು ಒಂದು ವಿಷಯ, ನಿಶ್ಚಿತ ವಿಷಯ ಸಮೂಹ, ಅಥವಾ ಗತಿವಿಧಿ ಆಗಿರಬೇಕು. ಮುಖ್ಯವಾಗಿ, ಅವರ ಮೊದಲ ಚಿಂತೆಯು ತಾವೇನಾದರೂ ಪ್ರಯೋಜನಕಾರಿಯಾದುದನ್ನು ಕಲಿಯಬೇಕು ಮತ್ತು ತದರಿಂದ ಸ್ವಿನ್ನ ಜೀವನವು ನಡೆಯಬೇಕು ಎಂಬುದಾಗಿರಬೇಕು.

"ಇದರ ಮೂಲವು ಸರಿಯಾಗಿದ್ದ ಪಕ್ಷದಲ್ಲಿ; ಜಂತ್ಯವೂ ಸರಿಯಾಗಿಯೇ ಆಗುವುದು. ಈ ವಸ್ತುಗಳು ವ್ಯವಹಾರದಲ್ಲಿ ಬಂದುಬಿಟ್ಟರೆ, ಶಿಕ್ಷಣ ಸುಧಾರಣೆ ಮತ್ತು ವಿದ್ಯಾರ್ಥಿ ಕಲ್ಯಾಣಕ್ಕಾಗಿ ಬಹಳವಾಗಿ ಶ್ರಮವಹಿಸಿರುವುದು. ಈ ಯೆಲ್ಲವೂ ವಿಶ್ವವಿದ್ಯಾಲಯಗಳ ಅಧಿಕಾರಿಗಳ ಅಧೀನದಲ್ಲಿವೆ. ವಿದ್ಯಾರ್ಥಿಗಳ ತಪ್ಪುಗಳ ಛಿದ್ರಾನ್ವೇಷಣೆಕ್ಕೆ ಮೊದಲು ಈ ಪ್ರಸಂಗಗಳು ದೂರವಾದಲ್ಲಿ ಆಗಾಗ ವಿದ್ಯಾರ್ಥಿಗಳಲ್ಲಿ ಆಗುವ ಅಸಂತೋಷ ಅಂದೋಲನವು ಮುಂದೆ ನಡೆಯಲಾರದು.

"ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವಿನ ಸಂಬಂಧವು ಗೌರವಾನ್ವಿತವಾಗಿರುವಂತಹ ವ್ಯವಸ್ಥೆಗಳಾಗಬೇಕು. ಈ ವ್ಯವಸ್ಥೆಯಿಂದ ವಿದ್ಯಾರ್ಥಿಯು ನಿರಂತರವಾಗಿ ವಿಶ್ವವಿದ್ಯಾಲಯದ ಆಡಳಿತದ ಯಂತ್ರದಲ್ಲಿ ಬಾಳಬಹುದು. ಮತ್ತು ಹೀಗಾಗುವುದರಿಂದ ನೈತಿಕ ಉತ್ಥಾನದ ಪಥದಲ್ಲಿ ಅಗ್ರೇಸರನಾಗುವನು. ಇದರಿಂದ ಸಂಸ್ಥೆಯ ನಾಡಿಯು ಸಹ ಬಹುಕಾಲ ಗಟ್ಟಿಯಾಗಿರಬಲ್ಲುದು.

"ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯನ್ನು ಸರಿಯಾಗಿ ವಿಶ್ಲೇಷಣೆ ಮಾಡಿದರೆ, ಅಧಿಕಾಂಶ ವಿದ್ಯಾರ್ಥಿಗಳಲ್ಲಿ ಶಿಕ್ಷಣ ಪ್ರಾಪ್ತಿಮಾಡುವ ಸದ್ಭಾವನೆಯು ವಿಕಾಸವು ಕಂಡು ಬರುವುದೆಂಬುದು ಸ್ಪಷ್ಟವಾಗುವುದು. ವಿದ್ಯಾರ್ಥಿಗಳಲ್ಲಿಯೂ ಇಂತಹ ವಿಕಾಸದ ಕ್ಷಮತೆಯಿದೆ ಅವರು ಸ್ನೇಹ ಮತ್ತು ಸಡ್ಭಾವಹಾರಗಳನ್ನು ಅನುಭವಿಸಿ ಉಚಿತ ಮಹತ್ವವನ್ನು ಪಡೆದರೆಂದಾದರೆ, ಅವರು ಸಹ ಶಿಕ್ಷಣ ಗ್ರಹಿಸಲು ಸಿದ್ಧರಾಗುವರು ಮತ್ತು ಅವರಲ್ಲಿ ಶಿಕ್ಷಕರ ಬಗೆಗೆ ಉದಾಸೀನತೆಯ ಭಾವನೆಯು ಕಂಡುಬರುವುದಿಲ್ಲ

"ನಾನು ಭಾರತದ ಅಧಿಕಾಂಶ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದೆನು. ಕೆಲವು ವಿಶ್ವವಿದ್ಯಾನಿಲಯಗಳ ವಾಸ್ತವಿಕ ಸ್ಥಿತಿಗತಿಯ ಅಧ್ಯಯನವನ್ನು ಸಹ ಮಾಡಿದೆನು. ವಿಶ್ವವಿದ್ಯಾಲಯಗಳಿಗಿಂತ ದೂರದಲ್ಲಿದ್ದು ವಿಶ್ವವಿದ್ಯಾಲಯಗಳ ಅಧಿಕಾರ ಸೀಮೆಯೊಳಗಿರುವ ಉಚ್ಚತರ ಶಿಕ್ಷಣದ ಸಂಸ್ಥೆಗಳ ಸ್ಥಿತಿಯನ್ನೂ ತಿಳಿದುಕೊಂಡಿದ್ದೇನೆ. ಈ ಅಧ್ಯಯನದ ಆಧಾರದಲ್ಲಿ ಭಾರತೀಯ ವಿದ್ಯಾರ್ಥಿಗಳು ಅನ್ಯದೇಶಗಳ ವಿದ್ಯಾರ್ಥಿಗಳ ತುಲನೆಯಲ್ಲಿ ಅಧಿಕೋತ್ತಮರೂ ಅಲ್ಲ ಮತ್ತು ಅಧಿತಾಧಮರೂ ಅಲ್ಲವೆಂಬ ಸತ್ಯವನ್ನು ಹೊರಗೆಡಹಬಯಸುತ್ತೇನೆ."

(ಶ್ರೀ. ಜಿಬಾತಾಮಣಿ ದೇಶಮುಖರ ಭಾಷಣದಿಂದ)

ಮೂಡಬಿದ್ರೆ—ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಂಡಿಕೇಟಿನ ಮೂಡಬಿದ್ರೆ ಶಾಖೆಯ ಸಾಮಾಜಿಕ ಸಮಾರಂಭವು ಕಳೆದ ತಾ. 30ರಂದು ಸಮಾಜ ಮಂದಿರದಲ್ಲಿ ಜರಗಿತು. ದ. ಕ. ಜಿಲ್ಲಾ ಗ್ರಾಮಕೈಗಾರಿಕೆ ಸಂಘದ ಕಾರ್ಯದರ್ಶಿ ಶ್ರೀ ಎಚ್ ನಾರಾಯಣರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ಸ್ಥಳೀಯ ಏಜೆಂಟ್ ಶ್ರೀ ಐ. ಎ. ಪೈಗಳು ಸ್ವಾಗತಭಾಷಣ ಮಾಡಿದರು. ಶ್ರೀ ವಾಸುದೇವಪೈಗಳು ಸಾರ್ವಜನಿಕರ ಪರವಾಗಿ ಮುಖ್ಯ ಅತಿಥಿ ಡಾ| ಟಿ. ಮಾಧವಪೈಗಳಿಗೆ ಗಂಧದ ಕರಂಡಕದಲ್ಲಿ ಗೌರವಪತ್ರವನ್ನಿತ್ತು ಗೌರವಿಸಿದರು ಡಾ| ಪೈಗಳು ಉತ್ತರವೀಯುತ್ತಾ ಬ್ಯಾಂಕಿನ ಸ್ಥಾಪಕ ಡೈರೆಕ್ಟರರಾಗಿದ್ದ ದಿ| ಯು. ಎ. ಪೈಗಳ ಸ್ಮಾರಕವಾಗಿ ಅವರ ತೈಲಚಿತ್ರವನ್ನು ಸಮಾಜಮಂದಿರದಲ್ಲಿರಿಸಲು ರೂ| 500/-ಕೊಡುವುದಾಗಿ ವಾಗ್ದಾನಮಾಡಿದರು.

ಕಳೆದ ತಾ. 30ರಂದು ಡಾ. ಟಿ. ಮಾಧವ ಪೈಗಳು ಸ್ಥಳೀಯ ಜೈನ ಹ್ಯಾಸ್ಕೂಲಿನ ಕರ್ನಾಟಕ ಸಂಘದವತಿ ಭಾಷಣಮಾಡುತ್ತಾ, ವಿದ್ಯಾರ್ಥಿಗಳು ಶಿಸ್ತಿನಿಂದ ಜ್ಞಾನಸಂಪಾದಿಸಿ, ದೇಶದ ಸತ್ಪ್ರಜೆಗಳಾಗಬೇಕೆಂದು ಆಶಿಸಿದರು. ಆರಂಭದಲ್ಲಿ ಶಾಲಾ ಹೆಡ್ಮಾಸ್ಟರ್ ಶ್ರೀ ಎ. ಸೋಮಪ್ಪ ರೈಗಳು ಸ್ವಾಗತಮಾತುಗಳನ್ನಾಡಿದರು. ಕೊನೆಯಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಟಿ. ರಘುಚಂದ್ರ ಸೆಟ್ಟರು ಧನ್ಯವಾದಗಳನ್ನಿತ್ತರು.

ಮಣಿಪಾಲ—ಸ್ಥಳೀಯ ಗೀತಾ ಮಂದಿರದಲ್ಲಿ ಮದ್ರಾಸಿನ ಬಿಯೋಸೋಫಿಕಲ್ ಸೊಸ್ಯಾಟಿಯ ಶ್ರೀ ಎಸ್. ಕೃಷ್ಣಮೂರ್ತಿಯವರು ಕಳೆದ ತಾ. 28ರಂದು 'ಕರ್ಮಧರ್ಮ ಸಮನ್ವಯ' ಎಂಬ ವಿಷಯವನ್ನಿತ್ತು ಉಪನ್ಯಾಸವಿತ್ತರು ಡಾ. ಟಿ. ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು.

ಹಿರಿಯಡಕ—ತಾ 30ರಂದು ಗೀತಾ ಜಯಂತಿ ಸಂದರ್ಭದಲ್ಲಿ ಹಿರಿಯಡಕದಲ್ಲಿ, ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ ಪೈಗಳವರಿಗೆ ಸ್ಥಳೀಯ ಡ್ಯಾಸ್ಕೂಲ್ ಹೆಡ್ಮಾಸ್ಟರ್ ಶ್ರೀ ಎಮ್. ಆಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭ ಜರುಗಿತು ಡಾ. ಜಂದಯ್ಯ ಹೆಗ್ಡೆಯವರು ಸ್ವಾಗತಿಸಿ ಊರವರ ಪರವಾಗಿ ಮಾನಪತ್ರ ವಿತ್ತರು.

ಬೈಂದೂರು—ಸ್ಥಳೀಯ ತಾಲೂಕ ಕರ ಕಾರ್ಮಿಕ ಶಿಕ್ಷಣೀಕ ಹೊಸ ಶಾಲಾ ಕಟ್ಟಡವನ್ನು ಕಳೆದ ತಾ. 30ರಂದು ಶ್ರೀ ವೈ ಮಂಜಯ್ಯ ಸೆಟ್ಟಿ ಎಸ್. ಎಲ್. ಎ. ಅವರು ಉದ್ಘಾಟಿಸಿದರು. ಆಂದು ಬೆಳಿಗ್ಗೆ ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ವೆಂಕಟ್ರಮಣ ಹೋಬಳಿದಾರರು ಧ್ವಜಾರೋಹಣಮಾಡಿದರು.

ಕುಂದಾಪುರ—ಸ್ಥಳೀಯ 'ರೂಪರೇಖಾ'ದ ಆರನೆ ವಾರ್ಷಿಕೋತ್ಸವವು ತಾ 1ರಂದು ಶ್ರೀ ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸ್ಥಳೀಯ ಬೋರ್ಡು ಹ್ಯಾಸ್ಕೂಲಿನಲ್ಲಿ ಜರಗಿತು. ಕೋಟೇಶ್ವರದ ಶ್ರೀ ಕೆ. ಎಸ್ ಉಪಾಧಯರು 'ರಾಜಾಶ್ರಯದಲ್ಲಿ ಲಲಿತ ಕಲೆಗಳ ಅಭಿವೃದ್ಧಿ' ಎಂಬ ವಿಷಯದಲ್ಲಿ ಮಾತನಾಡಿದರು ಶ್ರೀ ಕಾರಂತರು ಅಧ್ಯಕ್ಷಭಾಷಣದಲ್ಲಿ, ಆಧುನಿಕ ಯುಗದಲ್ಲಿ, ಲಲಿತಕಲೆ ಮತ್ತು ಕಲಾವಿದರ ಸ್ಥಾನಮಾನಗಳನ್ನು ವಿವರಿಸಿದರು. ನಂತರ ಲಲಿತಕಲಾ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ಹಂಚಲಾಯಿತು. ಆಂದುರಾತ್ರಿ ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು.

ಹಿಲಿಯಾಣ ಇಲ್ಲಿಯ ಬೋರ್ಡು ಹ್ಯಾ| ಶಾಲೆಯ ಮಕ್ಕಳು ತಮ್ಮ ಉಪಾಧ್ಯಾಯರೊಂದಿಗೆ ತಾ. 30ರಂದು ಕೊಲ್ಲೂರಿಗೆ ಶೈಕ್ಷಣಿಕ ಸ್ಪವಾಸ ಕೈಗೊಂಡರು.

ಅಂಬಾಡಿ – ಕಟಪಾಡಿ—ಪಾಂಗಾಳ ವರದರಾಯ ನಾಯಕ್ ಎಲಿಮೆಂಟರಿ ಶಾಲೆ, ಅಂಬಾಡಿ ಈ ಶಾಲೆಗೆ ಸ್ವಾಂತಿಕ ಅಭಿವೃದ್ಧಿ ಯೋಜನೆಯನ್ವಯ ಕಟ್ಟಿಸಲಾದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ. 28ರಂದು ದ. ಕ. ಜಿಲ್ಲಾ ಡಿಸ್ಟ್ರಿಟ್ ಕಮಿಷನರ್ ಶ್ರೀ ವೈ ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ. ಅವರು ಮುಖ್ಯ ಅತಿಥಿಗಳಿಗೆ ಪೂಮಾಲೆ ಅರ್ಪಿಸಿದರು. ಶಾಲಾ ಕಾರ್ಯಸ್ವೋದ್ದೇಶ ಶ್ರೀ ಪಿ. ರಾಮಪಾಸ ನಾಯ್ಕರು ಸ್ವಾಗತಿಸಿದರು. ಶಾಲಾ ಮುಖ್ಯೋಧ್ಯಾಪಕ ಶ್ರೀ ಕೆ. ರಾಮರಾವ್, ಆಗಳೆಯವರು ವರದಿವಾಚನ ಮಾಡಿದರು. ಶ್ರೀ ಕೆ. ಆರ್. ಶೆಣೈಯವರು ಧನ್ಯವಾದಗಳನ್ನರ್ಪಿಸಿದರು. ವಿವಿಧ ವಿನೋದಾವಳಿಗಳೊಡನೆ ಸಮಾರಂಭ ಮುಕ್ತಾಯವಾಯಿತು.

ಫರಂಗಿಪೇಟೆ—ಈ ಕೇಂದ್ರಕ್ಕೆ ಸೇರಿದ ಆಕ್ಕಾರು, ಅಕ್ಕಳ, ಪಾಡಿ, ಮೇರಮಜಲು ಕೊಡಂಬುಣ್ಣು, ಮಲ್ಲಿಂಗರು, ತುಂಬೆ, ಕಲ್ಲೈ, ಸಜೀಪನಡು, ಸಜೀಪಮರಡು, ಬೋಳಿಯೂರು ಇನವಳ್ಳಿ ಗ್ರಾಮಸ್ವರಾಜ್ಯ ಮಹಾಸಭೆಯು ತಾ. 1ರಂದು ಡಾ. ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕೇಂದ್ರದ ಸೌಕರ್ಯಕ್ಕಾಗಿ ಹ್ಯಾಸ್ಕೂಲು ಸ್ಥಾಪಿಸುವ ಕರಿತು ಮತ್ತು ಪಣ ಸಂಗ್ರಹಿಸುವ ರೀತಿ ವಿಧಾನಗಳ ಕುರಿತು ಶ್ರೀಗಳಾದ ಬಿ. ಎಸ್. ಭಾಸ್ಕರ ರೈ ಮತ್ತು ಎಸ್. ಉಪೇಂದ್ರ ನಾಯ್ಕರು ಮಾತನಾಡಿದರು. ಹ್ಯಾಸ್ಕೂಲು ಸ್ಥಾಪನೆ ಬಗ್ಗೆ 'ವಿದ್ಯಾವಾಯಿನಿ ಸಂಘ ಫರಂಗಿಪೇಟೆ' ಎಂಬ ಸಂಘವನ್ನು ಸ್ಥಾಪಿಸಿ ಅದನ್ನು ರಿಜಿಸ್ಟ್ರಿ ಮಾಡಬೇಕೆಂದಾಯಿತು.

ಉಷಾ
ಹೊಲಿಗೆ ಯಂತ್ರಗಳು

● ಸುಭದ್ರ ಮತ್ತು ಬಲಿಷ್ಠ ರಚನೆ
● ನಮ್ಮ ದೇಶದಲ್ಲಿ ಅತ್ಯಧಿಕ ಮಾರಾಟವಾದ ಯಂತ್ರ

— ಸೋಲ್ ಸೆಲ್ಲಿಂಗ್ ಏಜಂಟರು —
ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
ಮದ್ರಾಸು—1.

೫೦ ವರ್ಷಗಳಿಂದಲೂ ಪ್ರಸಿದ್ಧ ಇದೆ.
ಮಲೇರಿಯಾ ಇನ್ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ
ಎಲ್ಲ ಕೆಮಿಸ್ಟರಲ್ಲಿ ಗ್ರೋಸರಲ್ಲಿ ದೊರೆಯುತ್ತವೆ.
ಬಾಟ್ಲಿವಾಲಾ ಎಗ್ಝಾಮಿಕ್ಶರ್ ಮತ್ತು ಗುಳಿಗೆಗಳು
ಮಾರಾಟ ಮಾಡುವ ಏಜಂಟರು: ಹರ್ಬರ್ಟ್ಸನ್ಸ್ ಪ್ರೈವೇಟ್ ಲಿಮಿಟೆಡ್,
ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶ್ರೀ ಶಿವರಾಮ ಕಾರಂತರ
ಅತ್ಯಪೂರ್ವ ಗ್ರಂಥ—
ಯಕ್ಷಗಾನ
ಬಯಲಾಟ
ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. 6/-
ವಿ ಪಿ. ಕಳಿಸುವುದಿಲ್ಲ-
ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕುಶಲವಸ್ತುಗಳ ನಿರ್ಮಾಣಸಾಧನ
(೪ನೇ ಪುಟದಿಂದ)

ಪೊಂದಿಕೆಯಾಗುವ ವಣದರಿ ಮತ್ತು ಪ್ರಮಾಣಕ್ಕನುಸಾರವಾಗಿ ಈಗ ಬಟ್ಟೆಗಳನ್ನು ಮುಂಬಯಿ ಮತ್ತು ಮದರಾಸುಗಳಲ್ಲಿ ತಯಾರಿಸಲಾಗುತ್ತದೆ. ಆವುಗಳಲ್ಲಿ ಉಭಯುಕ್ತವೂ ಆಗಿರುವುದಲ್ಲದೆ ಕಲಾತ್ಮಕವಾಗಿಯೂ ಸುಂದರವಾಗಿಯೂ ಇರುವುವು. ಉತ್ತರ ಪ್ರದೇಶದ ಮೂಂಜ್ ಎಂಬ ನೆಲ್ಲುಹುಲ್ಲಿನ ಬುಟ್ಟಿಗಳು, ಪಂಜಾಬಿನ ಫುಲ್ಕಾರಿ ಬಾಗಿನ ರಫಿಯೂ ಬುಟ್ಟಿಗಳು ಕುಶಲ ಕಲಾ ಪ್ರೌಢಿಮೆಗೆ ಅತ್ಯುತ್ತಮ ನಿದರ್ಶನಗಳಾಗಿವೆ. ನೆಲ್ಲಿ ಹುಲ್ಲಿಗೆ ಬೇರೆ ಬೇರೆ ತರದ ಬಣ್ಣಗಳನ್ನು ಹಾಕಿ ತಯಾರಿಸಲಾದ ಈ ವಸ್ತುಗಳು ವರ್ಣ ಮನೋಹರವಾಗಿಯೂ ಚಿತ್ತಾಕರ್ಷಕವಾಗಿಯೂ ಇರುವುವು

ಕಲ್ಕತ್ತದಲ್ಲಿ ಜನಪದ ಸಂಪ್ರದಾಯಕ್ಕೆ ಸಮವಾದ ಬಿದಿರಿನಿಂದ ತಯಾರಿಸಲಾದ ಮೃಗಪಕ್ಷಿಗಳು ಅತ್ಯಂತ ಕಲಾತ್ಮಕವಾಗಿದ್ದು ಮನನೋಹಕವಿವೆ ಅಸ್ಸಾಮಿನಲ್ಲಿ ತ್ರಿಪುರ ರಾಜ್ಯವು ಮೇಲ್ಛಾವಣಿಗಳ ಅಲಂಕಾರ ಮತ್ತು ಕೆತ್ತನೆಯ ಕೆಲಸವಿರುವ ಪೆಟ್ಟಿಗೆಗಳನ್ನು ತಯಾರಿಸುವುದಕ್ಕೆ ಬಿದಿರನ್ನು ಉಪಯೋಗಿಸುತ್ತದೆ ಕಲ್ಕತ್ತದ ಮಾದರಿ ಕೇಂದ್ರವು ಹೆರಿಗೆಳು, ತಾಳಿಕಟ್ಟು ಮತ್ತು ಪೆಟ್ಟಿಗೆಗಳನ್ನು ತಯಾರಿಸಲು ಉತ್ತಮ ನಮೂನೆಗಳನ್ನು ರೂಪಿಸಿದೆ. ನ್ಯೂಸೂರಲ್ಲಿ ತಯಾರಾಗುವ ಬಿದಿರಿನ ಮಂಚ ದೀಪಗಳು ಪ್ರಸಿದ್ಧವಾಗಿವೆ, ಎಲ್ಲ ದೊಡ್ಡ ನಗರಗಳಲ್ಲಿಯೂ ಬಿದಿರು ಎತ್ತು ಬೆತ್ತದ ಮಂಚ, ಕುರ್ಚಿ ಮೊದಲಾದ ಸಿರೋಪಕರಣಗಳ ಕೆಲಸವು ನಡೆಯುತ್ತಿವೆ.

ಬಿದಿರು ಮತ್ತು ತಾಳೆಗರಿಯ ಚಾಪೆಗಳನ್ನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮಾಡಲಾಗುತ್ತದೆ. ಮದರಾಸಿನ ತಿರುನಲ್ವೆಲ್ಲಿ, ಕೇರಳದ ತಿರುವಾಂಕೂರು, ಮತ್ತು ಹೈದರಾಬಾದಿನಲ್ಲಿ ಸಿದ್ಧವಾಗುವ ಚಾಪೆಗಳು ತಮ್ಮವೇ ಆದ ಕಲಾವೈಶಿಷ್ಟ್ಯಗಳನ್ನು ಹೊಂದಿವೆ. ಅವುಗಳನ್ನು ರೇಶ್ಮೆಯಷ್ಟು ನುಣುಪಾಗಿ ನೇಯಬಹುದು. ಈ ಚಾಪೆಗಳನ್ನು ಎಲ್ಲ ವರ್ಣಗಳಲ್ಲಿಯೂ ಪ್ರಮಾಣಗಳಲ್ಲಿಯೂ ತಯಾರಿಸಲಾಗುವುದು. ಮೇಜಿನ ಮೇಲೆ ಹಾಸುವ ಜಾಪೆಯಲ್ಲಿ ಅನೇಕ ಮಾದರಿಗಳಿವೆ. ಅವುಗಳಿಗೆ ಬೇಡಿಕೆಯೂ ಹೆಚ್ಚಾಗುತ್ತಿದೆ. ಅವುಗಳ ಉತ್ಪಾದನೆಯನ್ನು ಅಧಿಕಗೊಳಿಸಲಾಗುತ್ತಿದೆ. ಈ ಚಾಪೆಗಳನ್ನು ಹೊರದೇಶಗಳಿಗೆ ನಿರ್ಯಾತಮಾಡುವ ಪ್ರಮಾಣವೂ ಬಲಗೊಳ್ಳುತ್ತಿದೆ. ಉತ್ತರ ರೀತಿಯ ಸಣ್ಣ ಚಾಪೆಗಳನ್ನೂ ಫೈಯರು ಹಿಡಿದುಕೊಳ್ಳುತ್ತಿರುವ ಕೈಚೀಲಗಳನ್ನೂ ತಯಾರಿಸಲು ಬಿದಿರನ್ನು ವಿಪುಲವಾಗಿ ಉಪಯೋಗಿಸುತ್ತಾರೆ.

ಈ ಕೈಗಾರಿಕೋದ್ಯಮದ ಪ್ರಾಮುಖ್ಯ ಮತ್ತು ಅದು ನೀಡುವ ಉದ್ಯೋಗಾವಕಾಶಗಳನ್ನು ಗಮನಿಸಿ ಅಖಿಲಭಾರತ ಕುಶಲ ವಸ್ತುಗಳ ಮಂಡಲಿಯು ಈ ಕುಶಲ ವಸ್ತುಗಳ ತಯಾರಿಕೆಯನ್ನು ಕ್ಷೇತ್ರಿಕ ಗತಿಯಲ್ಲಿ ಅಭಿವೃದ್ಧಿಗೊಳಿಸಲು ಸೂತ್ತ ಕಾರ್ಯಕ್ರಮಗಳನ್ನು ಕೈಗೊಂಡಿರುವುದು. ಅವುಗಳ ಮಾರಾಟವನ್ನು ಉತ್ತಮಗೊಳಿಸಲು ಮಾರುಕಟ್ಟೆಯನ್ನೂ ಅಭಿವೃದ್ಧಿಗೊಳಿಸುವುದಕ್ಕಾಗಿ ಅಖಿಲ ಭಾರತ ಕುಶಲ ವಸ್ತು ಮಂಡಲಿಯವರು ಅಖಿಲ ದೇಶದಲ್ಲಿ ಸಂಚಾರಿ ವಸ್ತು ಪ್ರದರ್ಶನಗಳನ್ನೂ ನಡೆಸುತ್ತಿರುವರು ಈ ಸಂಚಾರಿ ವಸ್ತು ಪ್ರದರ್ಶನವು ವಿಭಾಗವು ಈಗಾಗಲೇ ಶ್ರೀನಗರ, ಅಮೃತಸರ, ಅಹಮದಾಬಾದ್, ಮುಂಬಯಿ, ಹೈದರಾಬಾದಗಳಲ್ಲಿತ್ತೀತ್ಸವ ಪ್ರದರ್ಶನಗಳನ್ನು ನಡೆಸಿದೆ ಬೆಂಗಳೂರಲ್ಲಿ ಈ ಪ್ರದರ್ಶನವು ಮೊನ್ನೆ ನವೆಂಬರ ೩೦ ರಿಂದ ದಶಂಬರ ೯ನೆಯ ದಿನಾಂಕಗಳ ನಡುವೆ ಜರಗಿತು.

ಭಾರತದ ಎಲ್ಲೆಡೆಯಲ್ಲಿಯೂ ವಿಪುಲವಾಗಿ ದೊರೆಯುವ ಈ ಬಿದಿರು ಕೇವಲ ಬೆಂಕಿಯುರಿಸಲು, ದೋಣಿ ನಡೆಸಲು, ಮಾಡು ಕಟ್ಟಲು ಉಪಯೋಗವಾಗುವುದಕ್ಕಿಂತ ಇಂತಹ ಕುಶಲ ವಸ್ತುಗಳ ಬಗ್ಗೆ ವಿನಿಯೋಗವಾದರೆ, ಅದರಿಂದ ನಮ್ಮ ಜನರಿಗೆ ಉದ್ಯೋಗವೂ ದೊರೆಯುವುದು; ಕನ್ನಾಲಕ ದೇಶದ ಉತ್ಪತ್ತಿಯೂ ಅಧಿಕವಾಗುವುದು.

ಮಂಗಳೂರು

ದ ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು–ಕಳೆದ ತಾ ೩೦ರಂದು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಏನಾದರು ಕಾಲೆಗೆ ಬೇಕಾದ ಸವಲತ್ತುಗಳನ್ನು ಒದಗಿಸುವುದಾದರೆ, ಜಿಲ್ಲಾ ಬೋರ್ಡು ಶೇರಿಂಗಿ ಪೇಟೆಯಲ್ಲಿ ಹೈಸ್ಕೂಲೊಂದನ್ನು ತೆರೆಯುವುದು ಎಂಬ ಶ್ರೀ ಬಿ ಎಸ್ ಭಾಸ್ಕರ ಶೆಣೈ ನಿರ್ಣಯವು ಪಾಸಾಯಿತು ಜಿಲ್ಲೆಯಂದಿ ತಾಲೂಕಿಗೊಂದು ಪ್ರತ್ಯೇಕ ವಿದ್ಯಾಕೇಂದ್ರವನ್ನು ಸ್ಥಾಪಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಡಾ. ಬಿ ನಾರಾಯಣ ರಾಯರ ಠರಾವು ಸುಂಜರಾಯಿತು ಪಕ್ಕಡ್ಡಪಲ್ಲಿಂದು ಹೆರಿಗೆ ಮತ್ತು ಶಿಶು ಹಿತಚಿಂತನಾ ಕೇಂದ್ರವನ್ನು ಕಾರ್ಕಳ ತಾಲೂಕಿ ಕಾರಿಂಜೆ ಗ್ರಾಮದ ತಕ್ಕೋಡು ಎಂಬಲ್ಲಿ ಹೆರಿಗೆ ಕೇಂದ್ರ ಮತ್ತು ಇರುವಾಲ್ ಗ್ರಾಮದ ಕೊಸ್ಕೆಬೆಡಿ ಎಂಬಲ್ಲಿ ಗ್ರಾಮೀಣ ಚಿಕಿತ್ಸಾಲಯ ತೆರೆಯುವ ಬಗ್ಗೆ ನಿರ್ಣಯಗಳಾದುವು

ಬಜೆಟ್ ಕಮಿಟಿಗೆ ಶ್ರೀಗಳಾದ ಬಿ ಮಂಜಯ್ಯ ಹೆಗ್ಡೆ, (ಅಧ್ಯಕ್ಷ), ಕೆ ಕೆ. ಸೆಟ್ಟಿ, ಪರಮೇಶ್ವರಯ್ಯ, ಎ ಕೃಷ್ಣ ಸೆಟ್ಟಿ, ಭೀಮಭಟ್, ಎನ್. ಉಪೇಂದ್ರ ನಾಯಕ್, ವೇಣು ಗೋಪಾಲ ನಾಯಕ್, ತೇಜಪ್ಪ ಸೆಟ್ಟಿ, ಬಿ. ಆರ್ ಕರ್ಕೇರ, ದಂಬೆ ಸುಬ್ಬಯ್ಯ, ಡಾ ಕೆ ನಾಗಪ್ಪ ಆಳ್ವ, ಮತ್ತು ಶ್ರೀನಿವಾಸ ಮಲ್ಯ ಬ್ರಿಟೀಷರವರು ಆರಿಸಲ್ಪಟ್ಟರು.

ವಿದೇಶ ಪ್ರವಾಸಾನುಭವ–ಸಾಮಾಜಿಕ ಅಧ್ಯಯನ ತಂಡದ ಸಭೆಯು ತಾ ೬ ರಂದು. ಸ್ಥಳೀಯ ಯುತ್ ಒಕ್ಕೂಟದಲ್ಲಿ ಜರಗಿತು. ತಂಡದ ಡ್ಯಾರೆಕ್ಟರ್ ರೆ. ಫ್ರಾ. ಎಂಬೆಲಿಟ್ಟೋರವರು ಸ್ವಾಗತಮಾತುಗಳನ್ನಾಡಿದರು ಕುಮಾರಿ ಒಲಿಂಡಾ ಪಿರೇರಾರವರು ತನ್ನ ಜರ್ಮನಿ, ಹಾಲೆಂಡ್, ಬೆಲ್ಜಿಯಮ್, ಇಟಲಿ, ಫ್ರಾನ್ಸ್, ಸ್ವಿಜರ್‌ಲೆಂಡ್ ದೇಶಗಳ ಪ್ರವಾಸದ ಅನುಭವಗಳನ್ನು ವಿವರಿಸಿ ಆ ದೇಶಗಳ ಜನರಿಂದ ಭಾರತೀಯರು ಕಲಿಯತಕ್ಕ ವಿಷಯಗಳು ಅನೇಕ ವಿವೆ ಎಂದರು. ಶ್ರೀ ಎಸ್. ರಾಜೀವನವರ ಧನ್ಯವಾದಗಳನ್ನಿತ್ತರು.

ಬೀಳ್ಕೊಡುಗೆ–ಮಂಗಳೂರಿನ ಜಿಲ್ಲಾ ವಿದ್ಯಾಧಿಕಾರಿಗಳ ಕಚೇರಿಯಲ್ಲಿ ಗುಮಾಸ್ತರಾಗಿದ್ದ ಶ್ರೀ ಎ ಮುತ್ತಪ್ಪನವರು ನಿವೃತ್ತರಾಗುವ ಸಂದರ್ಭದಲ್ಲಿ ಅವರನ್ನು ಗೌರವಿಸಿ ಸತ್ಕಾರಕೂಟವು ತಾ ೩ರಂದು ಜರಗಿತು ನಿಲ್ದಾ ವಿದ್ಯಾಧಿಕಾರಿ ಶ್ರೀ ಬಿ ಎಮ್. ಕುಡುದಿಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಪಿ ಸೀರ್ಯನಾರಾಯಣ ರಾವ್, ಎಮ್ ಹಸನ್ ಸಾಹೇಬ್ ಮೊದಲಾದವರು ಮುಖ್ಯ ಅತಿಥಿಯ ಕಾರ್ಯದರ್ಶಿತ್ವ ಮೊದಲಾದುವನ್ನು ಪ್ರಶಂಸಿಸಿ ಮಾತನಾಡಿದರು

ಶ್ರೀ ಎಸ್ ಕೃಷ್ಣಮೂರ್ತಿಯವರ ಭಾಷಣ–ಸ್ಥಳೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸೊಸೈಟಿಯ ಆಶ್ರಯದಲ್ಲಿ ತಾ ೪ರಂದು ಧಾರವಾಡದ ಥಿಯೋಸೋಫಿಕಲ್ ಸೊಸೈಟಿಯ ಶ್ರೀ ಎಸ್ ಕೃಷ್ಣಮೂರ್ತಿಯವರಿಗೆ ಸತ್ಕಾರಕೂಟ ಜರಗಿತು ಡಾ ಎಸ್. ಎಸ್ ನಾಡಕರ್ಣಿಯವರು ಸ್ವಾಗತ ಭಾಷಣ ಮಾಡಿದರು ಸಂಘಟ್ಯ ಅತಿಥಿಗಳು ಭಾಷಣ ಮಾಡುತ್ತಾ, ಜನರಲ್ಲಿ ಬೆಳೆಯುತ್ತಿರುವ ಜಾತಿ, ಮತ, ಭಾಷಾ ದ್ವೇಷಗಳನ್ನು ನಿವಾರಿಸಿ ಅವರು ಪರಸ್ಪರ ಸಹೋದರರಂತೆ ಬಾಳುವಂತೆ ಮಾಡಿಕೆತ್ತಿಸುವುದೇ ಥಿಯೋಸೋಫಿಕಲ್ ಸೊಸೈಟಿಯ ಮುಖ್ಯ ಉದ್ದೇಶವೆಂದರು ಡಾ ಸಿ ಆರ್ ಚಾಮರಾಯರೂ ಕಾರ್ಯೋಚಿತ ಮಾತುಗಳನ್ನಾಡಿದರು.

ಅಮೇರಿಕಕ್ಕೆ ಶ್ರೀ ಕೆ. ಶಿವರಾಮು–ಶೆಟ್ಟರು ಕೊಡಿಯಾಲಬೈಲು ಶ್ರೀ ಬಾಬು ಶೆಟ್ಟರ ಪುತ್ರ ಶ್ರೀ ಕೆ ಶಿವರಾಮು ಶೆಟ್ಟರು ಇಲೆಕ್ಟ್ರಿಕಲ್ ರಿಪೇರ್ ಕಾಸ್ಸಿನಲ್ಲಿ ಹೆಚ್ಚಿನ ತರಬೇತಿ ಪಡೆಯಲು ಈಚೆಗೆ ಅಮೇರಿಕಕ್ಕೆ ಪ್ರಯಾಣಬೆಳೆಸಿರುವರು. ಶ್ರೀ ಶೆಟ್ಟರು ಹಿಂದುಸ್ತಾನ್ ಸ್ಟೀಲ್ (ಪ್ರೈವೇಟ್) ಲಿಮಿಟೆಡ್‌ನಲ್ಲಿ ಇಂಜಿನಿಯರರಾಗಿದ್ದು, ಭಾರತ ಸರಕಾರದ ತಾಂತ್ರಿಕ ತರಬೇತಿ ಯೋಜನೆಯನ್ವಯ ತರಬೇತಿಗೆ ಹೋದುದಾಗಿದೆ.

ಜಿಲ್ಲಾ ಅಭಿವೃದ್ಧಿ ಮತ್ತು ಹಿತ ಚಿಂತನಾ ಬೋರ್ಡಿನವರು–ಮದ್ರಾಸು ರಾಜ್ಯದ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ದ ಕ ಜಿಲ್ಲೆಯ ಕಾಲೇಜುಗಳಿಂದ ಬಿ ಎಸ್ ಸಿ. ಪ್ರಥಮ ವರ್ಷ ಪಾಸಾದ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಕೊಡಬೇಕು. ಈ ವರ್ಷ ಮದ್ರಾಸು ಸರಕಾರವು ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಈ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಕಂದಿಸಿದೆ. ಆದರಂತೆ 1958-59ನೇ ವರ್ಷದಲ್ಲಿಯೂ ಇಲ್ಲಿಯ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಕಾದಿರಿಸಬೇಕೆಂದು ಕೇಳಿಕೊಂಡಿರುವರು

ಸಣ್ಣ ಪ್ರಮಾಣ ಕೈಗಾರಿಕೆಗಳ ಅಸಿಸ್ಟಂಟ್ ಡೈರೆಕ್ಟರ್–ಬೊಂಬಾಯಿಯ ಶ್ರೀ ಎಫ್. ಎ. ರಾವನ್ ಅವರು ತಾ. ೩ರಂದು ಸ್ಥಳೀಯ ಕೆಥೋಲಿಕ್ ಕ್ಲಬ್ಬಿನಲ್ಲಿ ಕೇಂದ್ರ ಸರಕಾರವು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಡುತ್ತಿರುವ ಪ್ರೋತ್ಸಾಹನವನ್ನು ವಿವರಿಸಿ ಭಾಷಣಮಾಡಿದರು. ಶ್ರೀ ಎಲ್. ಸಿ ವ್ಯಾಸರು ಸಭಾಧ್ಯಕ್ಷತೆ ವಹಿಸಿದ್ದರು.

ಸ್ವತಂತ್ರ ಭಾರತದಲ್ಲಿ ಯುವಕರ ಪಾತ್ರ ಎಂಬ ವಿಷಯದ ಮೇಲೆ ಶ್ರೀ ಎಸ್. ಕೃಷ್ಣಮೂರ್ತಿಯವರು ಯುವಕ ಕಾಂಗ್ರೆಸಿನ ಕಾರ್ಯಾಲಯದಲ್ಲಿ ಭಾಷಣಮಾಡಿದರು. ಡಾ। ಕೆ ಎ ವಿಲ್ಲ್, ಅವರು ಸಭಾಧ್ಯಕ್ಷತೆ ವಹಿಸಿದ್ದರು.

ಹರಿಜನರಿಗೆ ಮನೆಕಟ್ಟಲು ಧನ ಸಹಾಯ–ದ್ವಿತೀಯ ಪಂಚವಾರ್ಷಿಕ ಯೋಜನೆಯನ್ವಯ ಹರಿಜನರಿಗೆ ಮನೆಕಟ್ಟಲು ಸಹಾಯ ನೀಡುವ ಯೋಜನೆಯೊಂದನ್ನು ಮೈಸೂರಿ ಸರಕಾರವು ಮಂಜೂರುಮಾಡಿದೆ ತಾ ೩೧-೩-೫೮ಕ್ಕೆ ಅಂತ್ಯವಾಗುವ ಆರ್ಥಿಕ ವರುಷಕ್ಕೆ ದ. ಕ ಜಿಲ್ಲೆಗೆ ರೂ. 50,000/- ಮಂಜೂರಾಗಿದೆ ಈ ಪೈಕಿ ಮಂಗಳೂರು ತಾಲೂಕಿಗೆ ರೂ. 11,000 ಮೀಸಲಿಡಲಾಗಿದೆ ಹಳ್ಳಿ ಪ್ರದೇಶಗಳ ಹರಿಜನ ಕುಟುಂಬಗಳಿಗೆ ಕುಟುಂಬ ಒಂದರ ರೂ. 300/- ಸಹಾಯಧನ ದೊರೆಯುವುದು. ಹೆಚ್ಚಿನ ಮಾಹಿತಿಯನ್ನು ಆಯಾಯಾ ತಾಲೂಕು ತಹಶೀಲ್ದಾರರಿಂದ ಪಡೆಯಬಹುದಾಗಿದೆ.

ರಣಜಿ ಕ್ರಿಕೆಟ್ ಪಂದ್ಯಾಟ–ಪ್ರಾಂತಗಳೊಳಗೆ ಜರಗುವ ರಣಜಿ ಕ್ರಿಕೆಟ್ ಪಂದ್ಯಾಟವು ಪ್ರಥಮ ಬಾರಿಯಾಗಿ ಮಂಗಳೂರಲ್ಲಿ ಮೈಸೂರು – ಕೇರಳ ರಾಜ್ಯಗಳೊಳಗೆ ಕಳೆದ ತಾ. ೩೦ರಂದು ಮುಂದು ದಿವಸ ನಡೆದು ಮೈಸೂರು ರಾಜ್ಯದ ಆಟಗಾರರು ವಿಜಯಿಗಳಾದರು ಈ ಪಂದ್ಯದಲ್ಲಿ ಮಂಗಳೂರಿನ ಶ್ರೀಗಳಾದ ಗಣಪತಿರಾವ್, ಗೋಪಾಲಯ್ಯ ಮತ್ತು ಬಿ ಸಿ ಆಳ್ವರು ಆಡಿದ್ದು ಮೈಸೂರಿನ ವಿಜಯಕ್ಕೆ ಕಾರಣರಾದರು ಮಂಗಳೂರು ನಗರ ಸಭೆಯವರು ಈ ಆಟಗಾರರಿಗೆ ಸಾರ್ವಜನಿಕ ಸ್ವಾಗತವನ್ನಿತ್ತು ಗೌರವಿಸಿದರು

ದ ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ನವಾ ಸಭೆಯು ತಾ 22—12—57ನೆ ಆದಿತ್ಯವಾರ ಅಪರಾಹ್ನ ೪ ಗಂಟೆಗೆ ಶ್ರೀ ಯುಂಡಿದ್ದ ಲಕ್ಷ್ಮಣ್ ದೈಗಳ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀರಾಮಕೃಷ್ಣ ಸದ್ಭೋಧಿ ಭವನದಲ್ಲಿ ಜರಗುವುದು ಸಂಘದ ಸದಸ್ಯರೆಲ್ಲರೂ ಸಭೆಗೆ ದಯಮಾಡಿಸಬೇಕಾಗಿ ಕಾರ್ಯದರ್ಶಿ ಶ್ರೀ ಕೆ. ಸುಂದರ ರಾಮ ಶೆಟ್ಟರು ವಿನಂತಿಸುತ್ತಾರೆ

ಬೇಗನೆ ಪ್ರಕಟವಾಗುವುದು

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು. ವೀರಪ್ಪ ಯಡಟ್ಟಿ, ಬಿ. ಎ , ಎಲ್‌ಎಲ್. ಬಿ, ವಕೀಲ, ಹೊನ್ನೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯತೆಗಳ ತಾರತಮ್ಯವೂ, ಸನ್ಮಾರ್ಗದುರ್ಮಾರ್ಗಗಳಿಗೆ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜವ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತವಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರೂಪ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಪ್ರಕಟಣೆಯನ್ನು ನಿರೀಕ್ಷಿಸಿರಿ.

ನವಯುಗ ಪ್ರೆಸ್, ಉಡುಪಿ.

ಮಕ್ಕಳ ಮಗ್ಗಿಪುಸ್ತಕ

(ಸಯೇ ಪೈಸೆ ಕೊಪ್ಪಕ ಸಹಿತ)

ಬೆಲೆ ಕ್ಕೆ ೦ ೧ ೦

ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ದಾದಾಭಾಯಿ ನವರೋಜಿ – ಮೂಲ ಲೇಖಕ: ಸರ್ ಆರ್ ಪಿ ಮಸಾನಿ ಅವರು; ಕೂಡಲಿ ಬಿಡಿಂಬರಂ; ಪ್ರಕಾಶಕರು, ತಾವ್ಯಾಲಯ,ಮೈಸೂರು ಪುಟ: ಕ್ರೌನ್ ೧/೮ರ. iv + ೧೨೪ ಬೆಲೆ. ರೂ. ೨.೫೦ (೪ ೦೦)

ಭಾರತೀಯರಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟವನೂ, ಅಹಿಂಸಾವಾದವನ್ನೂ, ಸತ್ಯಾಗ್ರಹವನ್ನೂ ಬಳಕೆಗೆ ತಂದವರೂ ಶ್ರೀ ಮಹಾತ್ಮಾ ಗಾಂಧೀಯವರೆಂಬ ಕಲ್ಪನೆಕೆ ಭಾರತೀಯರಲ್ಲಿದೆ. ಅದರೆ, ಗಾಂಧೀಜಿಯವರಲ್ಲಿಯೇ ಜನಸಿ, ಭಾರತದ ನಾರಿದ್ರ್ಯ, ಬಡತನವನ್ನು ಇಲ್ಲಿ ಬ್ರಿಟಿಷರು ನಡೆಸುತ್ತಿರುವ ಹಾನಳಿಯನ್ನು ವಿಶೇಷವಾಗಿ ಇಂಗ್ಲೆಂಡಿನಲ್ಲಿನ ಜನರ ಮನಸ್ಸಿಗೆ ನಾಟುವಂತೆ ತನ್ನ ವಿವಿಧ ಕಾರ್ಯಕ್ರಮಗಳ ಮೂಲಕ ಬ್ರಿಟಿಷರ ಸಹಾನುಭಾವನೆಯನ್ನೂ ಪಡೆದ ಸ್ವಕ್ತ ಭಾರತೀಯ ಮಹಾಕುಲವನ್ನೆದ್ದ ದಾದಾಭಾಯಿ ನವರೋಜಿ. ಪಾರ್ಸಿ ಕುಲವಲ್ಲಿ ಹುಟ್ಟಿದ ಇವರು ಜಾರತದ ಸ್ವಕ್ಕಸ್ಥಿತಿಯನ್ನು ಅಭ್ಯಸಿಸಿ, ಸ್ವದೇಶದಲ್ಲಿ ಜಾಗ್ರತಿಸಿದ್ದನ್ನೂ ವಿದೇಶದಲ್ಲಿ ನ್ಯಾಯವನಲಂಬನ ಮಾರ್ಗವನ್ನೂ ಪಡಿತ್ತಿದ್ದರು. ಅವರು ಒಂದೆರಡು ಬಾರಿ ಲಂಡನ್ನಿನ ಕಾಮನ್ಸ್ ಸಭೆಯ ಸದಸ್ಯರಾಗಿ ೧ ಗಾರೆನವನ್ನೂ ಪಡೆದಿದ್ದರು ಭಾರತೀಯರ ಹಿತಚಿಂತನೆಗಾಗಿ ಲಂಡನ್ ಹಾಗೂ ಭಾರತದಲ್ಲಿ ಹಲವಾರು ಸಂಸ್ಥೆಗಳನ್ನ ಸ್ಥಾಪಿಸಿದರು ಬ್ರಿಟಿಷರ ಒಡೆತನದಲ್ಲಿಯೇ ಇದ್ದು ಕೊಂಡು 'ಸ್ವರಾಜ್ಯ'ವನ್ನೆನ್ನು ಧನಿಸಬೇಕೆಂದು ಅವರ ನತ ಸಂಧಿತವಾದಿಗಳಿಗೆ ಒಪ್ಪಿಗೆಯಾಗದಿದ್ದರೂ ಅಂದಿನ ಕಾಲ (ಸು. ೧೦೦ ವರ್ಷಗಳ ಹಿಂದೆ) ಅದೇ ಮುಂದಿನ ಹಾಸಿಗೆಯಾಗಿತ್ತು. ದಾದಾಭಾಯಿಯವರು ತನ್ನ ೯೩ ವರ್ಷಗಳ ಪೂರ್ಣಾಯುಷ್ಯದಲ್ಲಿ ತನ್ನ ಮಾತೃ ಭೂಮಿಗಾಗಿ ದುಡಿದ ಮಹಾ ಪುರುಷರು. ಎರಡು ಬಾರಿ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷೆ ಸ್ಥಾನವನ್ನು ಪಡೆದ ಜನನಾಯಕರು. ಆದಿಂಸೆ ಮತ್ತು ಚಳುವಳಿಯ ಪ್ರತಿಪಾದಕರು. 'ಇಂಡಿಯಾ ಸ್ವರಾಜ್ಯ'ವನ್ನು ಹೊಂದಲು ನಿರ್ಧರಿಸಿದೆ ಎಂದು ಬ್ರಿಟಿಷರಿಗೆ ಮನವರಿಕೆಯಾದರೆ, ಅವರು ಬಿಟ್ಟು ಕೊಡುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಆ ಪವಿತ್ರವಾದ ದಿನವನ್ನು ನೋಡಲು ನಾವು ಬದುಕಿಲ್ಲದಿರಬಹುದು, ಆದರೆ, ಆ ಕಾರ್ಯ ಸಿದ್ಧಿಯಾಗುವುದೆಂಬ ವಿಶ್ವಾಸದಲ್ಲಿ ನಾವು ಆಸೆಯನ್ನು ತೊರೆದಿಲ್ಲ"–ಶ್ರೀ ನವರೋಜಿಯವರು ೧೯೧೭ರಲ್ಲಿ ವ್ಯಕ್ತಪಡಿಸಿದ ಈ ಸಂಗತಿ ೪೭ರಲ್ಲಿ ಸಾರ್ಥಾಯಿತು; ಅವರ ಸುಡಿ ಆಕ್ಷರಶಃ ನಿಜವಾಯಿತು. ಪ್ರಥಮ ಭಾರತೀಯ ಪತ್ರಿಧ್ಯಾಪಕ, ಪ್ರಥಮ ಭಾರತೀಯ ಕಾಮನ್ಸ್ ಸಭಾ ಸದಸ್ಯ, ಪ್ರಥಮ ಭಾರತೀಯ ಜಾಗ್ರತ ಯುವಕನಾದ ನವರೋಜಿಯ ಈ ಜೀವನ ಚರಿತ್ರೆಯು ಆರ್. ಪಿ. ಮಸಾನಿಯವರ ಅಂಗ್ಲ ಹೊತ್ತಗೆಯ ಸಂಕ್ಷಿಪ್ತ ರೂಪ. ಭಾರತೀಯರ ಸ್ವತಿಶಟಲದಲ್ಲಿ ತಿಲಕ, ಗಾಂಧಿ, ನೆಹರೂರವರೇ ನಲಿಯುತ್ತಿರುವಾಗ, ಅವರಿಗಿಂತಲೂ ಮೊದಲಿನವರಾದ ಇವರ ಚಿತ್ರವೂ ಕಾಣಿಸಬೇಕು. ಈಸಂಕ್ಷಿಪ್ತರೂಪದ ಆನುವಾದಕಾರ್ಯವು ಅಲ್ಲಲ್ಲಿ ಕಡೆಯಂತೆ ಭಾಸವಾಗುತ್ತದೆ. ಅಧ್ಯಾಯಗಳನ್ನು ಹೋಣಿಸುವುದರಲ್ಲಿ ಇನ್ನೂ ಹೆಚ್ಚಿನ ಜಾಡ್ಡೆಯನ್ನು, ತೋರಿಸಿ ಮುಖ್ಯವಾಗಿ ಇತಿಹಾಸ ಪುಸ್ತಕವಾದುದರಿಂದ, ವರ್ಷಾನುಕ್ರಮವಾದಲ್ಲಿ ನೂಡಿದ್ದರೆ, ಉತ್ತಮವಿತ್ತೆಂದು ಹೇಳಬಹುದು ದ್ವಾಯಶಕ್ಕ ಮೂಲನೇ ಹೀಗಿರಬಹುದೂ. ಈ ಕೊರತೆಯನ್ನು ಕಡೆದೆ, ಪುಸ್ತಕವು ಸರ್ವಾಂಗ ಸುಂದರವಾಗಿ ಪ್ರಕಟವಾಗಿರೆ ಕ್ಷದಿಗೆನಿಗೆ ಅವಶ್ಯವಿದ್ದ ಈ ಗ್ರಂಥವನ್ನಿತ್ತ ಕಾಮ್ಯಾಲಯದವರನ್ನು ಅಭಿನಂದಿಸುತ್ತೇವೆ.

ವಿಕಟ ವಿನೋದಿನಿ–(ವಾರ್ಷಿಕಾಂಕ) ಸಂಪಾದಕರು: ಶ್ರೀ ಜೆ. ಸಿದ್ದಪ್ಪ, ಬೆಂಗಳೂರು ಪುಟ: ಕ್ರೌನ್ ೧/೮ರ ೯೬. ಬೆಲೆ. ರೂ. ೦-೫-೦.

ಕಳೆದ ೪೬ ವರ್ಷಗಳಿಂದಲೂ ಕನ್ನಡಮ್ಮನ ಸೇವೆಯನ್ನು ಮಾಡುತ್ತ ಈಗ ೪೭ನೆ ವರ್ಷದ ಹೊಸ್ತಿಲಲ್ಲಿ ಕಾಲಿಡುತ್ತಿರುವ ವಿಕಟವಿನೋದಿನಿ ತನ್ನ ಹೆಸರಿಗೆ ಒಪ್ಪುವಂತೆ ಕನ್ನಡಿಗರಿಗೆ ವಿಕಟವಿನೋದವನ್ನುಡಿಸುತ್ತ ಇದೆ. ಈ ವಾರ್ಷಿಕಾಂಕವು ಕುಮಾರಿ ಕಛೆ ಕವಿಗಳೆಲೆ ನಲ್ಲಿ ವೈಗಳೂ ಓದುಗರಲ್ಲಿ ಸುಪ್ತವಾಗಿದುವ ಪ್ರತಿಭಾವನ್ನ ರಸಜ್ಞಾನಕ್ಕೊಯ್ಯುವಲ್ಲಿ ನೆರವಾಗುವುದ್ದಕ್ಕೆ ಪ್ರಸಿದ್ಧ ಹಾಸ್ಯ ಲೇಖಕರ ಕೃತಿಗಳಲ್ಲಿ ಪೆ ಆನೇಕ ಏಡು ತೊಡರುಗಳನ್ನು ದಾಟಿಮುನ್ನಡೆಯುವ ವಿಕಟ ವಿನೋದಿನಿಯು ಬೆಳಗಿ ಇನ್ನೂ ಕೀರ್ತಿಗಳಿಸಲೆಂದು ಆಶಿಸುತ್ತೇವೆ.

The Matric System of Weights and Measures—Published by The Publication Division, Ministry of Information and Broad casting, Govt of India Pages Demy 1/8—36 Re 0—35 or 10 cents

ಭಾರತದಲ್ಲಿಯೇ ಒಂದು ಕಾಲದಲ್ಲಿ ಪ್ರಚುರವಾಗಿದ್ದ ದಶಾಂಶ ಪದ್ಧತಿಯು ಕಾಲಾಂತರಗಳಿಂದ ಭಾರತದಿಂದಲೇ ಹೊರಗೆ ಹೋಗಿ ಬಿಟ್ಟಿತ್ತು. ಇದೀಗ ಕಳೆದ ಎಪ್ರಿಲ್ ತಿಂಗಳಿಂದ ಭಾರತೀಯ ನ್ಯಾಯಗಳನ್ನು ದಶಾಂಶ ಪದ್ಧತಿಗೆ ಮಾರ್ಪಡಿಸಲಾಗಿದೆ. ಅಪೇರೀತಿಯಲ್ಲಿ ತೂಕ ಮತ್ತು ಅಳತೆ ಪದ್ಧತಿಗಳನ್ನೂ ದಶಾಂಶ ರೀತಿಗೆ ಬದಲಾಯಿಸಲು ಭಾರತ ಸರಕಾರವು ಇಚ್ಛಿಸಿದೆ ಅ ಬಗ್ಗೆ ತಕ್ಕ ವಿವರಣೆಗಳೊಂದಿಗೆ ಈ ಸಣ್ಣ ಹೊತ್ತಗೆಯನ್ನು ಪ್ರಕಟಿಸಿದೆ ತೂಕದ ಪಡಿ ಮತ್ತು ಅಳತೆಗೋಲಿನ ಚಿತ್ರಗಳನ್ನೂ ೧೯೩೬ರ ತೂಕ ಮತ್ತು ಅಳತೆಯ ಶಾಸನವನ್ನು ಈ ಪುಸ್ತಕದಲ್ಲಿ ಆಚ್ಚು ಮಾಡಲಾಗಿದೆ.

Jawaharlal Nehru on Community Devolopment Published by Ministry of Community Development, Govt. of India. Pages Demy 1/8—46 Price: 0-50.

ಭಾರತದ ಅಭಿವೃದ್ಧಿಗಾಗಿ ರಚಿಸಲಾಗಿರುವ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸರಿತ್ತಿರುವ ಸಮಾಜಪಿಕಾಸ ಯೋಜನೆಯು ಸಾಧಿಸಹತ್ತದ ಪಾತ್ರವಹಿಸಿದೆ. ಸುಮಾರು ನಾಲ್ಕು ವರ್ಷಗಳ ಮೊದಲು ಪ್ರಾರಂಭವಾದ ಈ ಯೋಜನೆಯು ಭಾರತೀಯ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಕಾರ್ಯವನ್ನು ಗಣನೀಯವಾಗಿ ಮಾಡಿದೆ. ಈ ಜನಪ್ರಿಯ ಯೋಜನೆಯ ಬಗ್ಗೆ ಭಾರತೀಯ ಪ್ರಧಾನಿ ಶ್ರೀ ನೆಹರೂರವರ ಅಭಿಪ್ರಾಯಗಳನ್ನು ಈ ಪುಸ್ತಕದಲ್ಲಿ ಕ್ರೋಢೀಕರಿಸಲಾಗಿದೆ.

Britain in Breif ಮತ್ತು **The U. K. Dependencies in Breif**—Publishdd by Reference Division, Central Office of Information, London.

ಜಗತ್ತಿನ ಹಿರಿಯ ರಾಷ್ಟ್ರವೆನಿಸಿಕೊಂಡ ಬ್ರಿಟನಿನ ಪರಿಚಯವನ್ನು ಸಂಕ್ಷಿಪ್ತ ರೀತಿಯಲ್ಲಿ ಮೊದಲನೆಯ ಕಿರು ಹೊತ್ತಗೆಯೂ ಆದನ್ನು ಹೊಂದಿಕೊಂಡಿರುವ ಮಾಲ್ಟಾ, ಹೊಂಗ್‌ಕೊಂಗ್, ಸುಲಯ, ಪಶ್ಚಿಮ ಇಂಡಿಯಾ ದ್ವೀಪಗಳು, ಗೋಲ್ಡ್ ಕೋಸ್ಟ್, ಇಬದನ್, ಸೈಪ್ರೀಯಸ್, ಮಕೆರೆ, ಪೂರ್ವ ಆಫ್ರಿಕಗಳ ಸಣ್ಣ ಮಟ್ಟಿನ ಕಿರಿಯವನ್ನು ಎರಡನೆಯದೂ ವಿವರಿಸುತ್ತಿವೆ ಭೌಗೋಲಿಕ, ಚಾರಿತ್ರಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ವ್ಯಾಪಾರಿಕ ಕ್ಷೇತ್ರಗಳನ್ನೂ ಸಾರಿಗೆ ಸಂಪರ್ಕ, ಉತ್ಪನ್ನ, ಅಭಿವೃದ್ಧಿ ಯೋಜನಾದಿಗಳನ್ನು ಇವುಗಳಲ್ಲಿ ಸಂಗ್ರಹಿಸಲಾಗಿದೆ ಬ್ರಿಟಿಷ್ ರಾಜ್ಯ ಮತ್ತು ಸಾಮ್ರಾಜ್ಯದ ಬಗ್ಗೆ ಆಧಿಕಾರಿಕ ವಿಷಯ ಪರಿಶೀಲನೆ, ಅಭ್ಯಾಸಗಳಿಗೆ ಇವು ಸಹಾಯಕವಾಗುವುದೆಂಬಲ್ಲಿ ಸಂದೇಹವಿಲ್ಲ

Elections in Kashmir—Published by The Ministry of Information and Broad-casting, Govt. of India Price Re 0—50.

ಭಾರತದ ಅವಿಭಾಜ್ಯ ಅಂಗವಾದ ಕಾಶ್ಮೀರದ ಪ್ರಜೆಗಳು ತಮಗಾಗಿ ತಯಾರಿಸಿ ಸ್ವೀಕರಿಸಿದ ನೂತನ ಘಟನೆಯನ್ನೆಯ ಈ ವರ್ಷಾದಿಯಲ್ಲಿ ಸಾರ್ವತ್ರಿಕ ಚುನಾವಣೆಯು ನಡೆಯಿತು. ಈ ಚುನಾವಣೆಯ ಕುರಿತಾದ ವಿವರಗಳು ಈ ಪುಸ್ತಕದಲ್ಲಿ ಅಡಕವಾಗಿವೆ.

Resources for the' Second Plan-Published by Ministry of Information and Broadcasting, Govt. of India Price Re 0 25

ತನ್ನ ಅಭಿವೃದ್ಧಿ ಯೋಜನೆಯಾದ ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ ಭಾರತದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ರೂ. ೪೮೦೦ ಕೋಟಿ ಮತ್ತು ಖಾಸಗಿ ಕ್ಷೇತ್ರದಲ್ಲಿ ರೂ. ೫೪೦೦ ಕೋಟಿಗಳು ಖರ್ಚಾಗಲಿವೆ. ಇಷ್ಟೊಂದು ದೊಡ್ಡ ಹೊತ್ತದ ಹಣವನ್ನು ಭಾರತವು ಎಲ್ಲಿಂದ ತರಬಲ್ಲದು ಎಂಬುದೇ ಒಂದು ಸಮಸ್ಯೆ. ಈ ಸಣ್ಣ ಪುಸ್ತಕದಲ್ಲಿ ಈ ಬಗ್ಗೆ ಇವರಗಳನ್ನು ಸಂಗ್ರಹಿಸಲಾಗಿದ್ದು, ನಮ್ಮೆಲ್ಲರ ಸಂದೇಹವನ್ನು ದೂರಮಾಡಿ, ಯತಾರ್ಥದ ಚಿತ್ರವನ್ನು ಕಣ್ಣಮುಂದೆ ನಿಲ್ಲಿಸುತ್ತದೆ.

—ಗೋರಾ.

ನೀವೇಕೆ ಪ್ರಯತ್ನಿಸಬಾರದು?

(೩ನೇ ಪುಟದಿಂದ)

ಇದೇ ಕಾರಣದಿಂದ ನಾವು ರೋಗಿಗಳಾಗಿದ್ದೇವೆ ಯೆನ್ನುವಿಂತಾದರೆ, ಅವು ಸರಿಯಲ್ಲ. ಜ್ಞಾನಿಗಳು ನಗಾಡುವುದರಿಂದ, ಮನುಷ್ಯ ಸ್ವಾಸ್ಥ್ಯ ಹೊಂದುತ್ತಾನೆ ಎನ್ನುತ್ತಾರೆ ಮತ್ತೆ, ನಾಲ್ಕು ಕಾಲುಗಳಲ್ಲಿ ನಡೆಯುವುದು ಅಸಭ್ಯತೆ ಎಂದು ತಿಳಿಯುತ್ತಾರೆ.

ಯಾರಾದರೂ ನಗುವುದರಿಂದ ಸ್ವಾಸ್ಥ್ಯ ಹೊಂದುವುದಾದರೆ, ಅವರನ್ನು ಜಾನುವಾರುಗಳಂತೆಯೂ ಒಮ್ಮೆ ಮಾಡಿ ನೋಡಿರಿ. ನಿರೋಗ, ಸ್ವಾಸ್ಥ್ಯ ಮತ್ತು ಕಚಿತ ಸಭ್ಯತೆಯಿಂದ ಅದು ಸ್ವಲ್ಪವಾದರೂ ಪ್ರಿಯವಾಗಿರಬಹುದು.

ಹಾಗಾದರೆ, ಈ ಪ್ರಯೋಗವನ್ನು ಮಾಡಿನೋಡಿರಿ.

ಹಾಸ್ಯವಿಹೀನ, ಪಶುಮಾನವರ ಒಂದು ಕ್ಲಬ್ಬನ್ನು ಮಾಡಿರಿ. ಈ ಮಾತು ಸರಿಯೆ ಂದು ಕಂತುಬಂತರೆ, ಎಲ್ಲರೂ ನಿಮ್ಮ ಅನುಯಾಯಿಗಳಾಗಬಹುದು ಆಗ ನಿಮ್ಮನ್ನು ಈ ಯುಗದ ಮಹಾಮಾನವರೆಂದು ಕರೆಯಲ್ಪಡಬಹುದು. ಈ ರೀತಿಯಾಗಿ ನಿಮಗೆ ಹೆಜ್ಜೆಗೆ ಹಣ್ಣು ಮತ್ತು ಬೀಜಕ್ಕೆ ಕೃಯವೂ ದೊರೆಯುವುದು. ಹಾಗಿರುವಾಗ ನೀವೇಕೆ ಒಮ್ಮೆ ಪ್ರಯತ್ನಿಸಬಾರದು?

(ಸಾಧಾರ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸ್ಟೆಟ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರು ಮತ್ತು ಎಲ್ಲಾ ಕರದ ಫಾರ್ಮುಗಳು, ಕುರಿಫುಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಜಾಲರಿಗೇಡ್ ಚೀಟುಗಳು ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ನೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಸುಳ್ಳಾಭಿಮನ್ಯುಗಳು ತನ್ನ ಬಂಧುಗಳೆಂಬು ತಿಳಿದ ಫಟೋತ್ಕಚ ಅವರನ್ನು ತನ್ನ ಸುನಿಗೆ ಕರೆಬೊಯ್ಯುತ್ತಿದ್ದಾನೆ!

ವಿಜಯೇಶ್ವರ "ಮಾಯೆಯ ಬಜಾರ್" (ಕನ್ನಡ) ಚಿತ್ರವಲ್ಲಿ ನಾಗೇಶ್ವರ ರಾವ್, ಮುಷ್ಕೇಂದ್ರ ಮುಖಿ ಎಸ್. ವಿ. ರಂಗರಾವ್ ಮತ್ತು ಇತರರು.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳಗೊಳ್ಳಬೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ಪೆಂಕಟರ್ರಾನ್, ಎಲ್. ಎ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨-೦೦—೦ (ಟಪಾ ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಟ್ಟಿಯಾಗಿ ಓದಬೇಡಿ—

ದೇವರು ದೊಡ್ಡವನೆ? ಅಲ್ಲವೆ?

ಶ್ರೀ ಎಂ. ರಂಗರಾವ್.

ಇದೊಂದು ವಿಷಯ ಎಷ್ಟು ತಲೆ ಕೆಡಿಸಿಕೊಂಡರೂ ನನಗೆ ಅರ್ಥವಾಗೋದೇ ಇಲ್ಲ. ಗುಟ್ಟಾಗಿ ಹೇಳಿಕೊಳ್ಳುತ್ತೇನೆ. ಗಟ್ಟಿಯಾಗಿ ಓದಬೇಡಿ ಸದ್ಯ!

ದೇವರು ದೊಡ್ಡವಾ ಅಂತ ಹೇಳುತ್ತಾರಲ್ಲ, ಯಾವುದರಲ್ಲಿ ದೊಡ್ಡವಾ ಅಂತ? ನಮ್ಮ ಮನುಷ್ಯರಲ್ಲಿ ಹೆಚ್ಚು ಕಡಮೆಗಳಿರುವ ಹಾಗೇ ದೇವತೆಗಳಲ್ಲೂ ಉಂಟಂತೆ. ಬೇಕಾದರೆ ಶೈವ-ವೈಷ್ಣವರಲ್ಲಿ ಕೇಳಿನೋಡಿ. ಶಿವನಿಗಿಂತ ವಿಷ್ಣು ಕಚ್ಚು ಅಂತ ಒಬ್ಬರಂದರೆ, ವಿಷ್ಣುವಿಗಿಂತ ಶಿವ ಹೆಚ್ಚು ಅಂತ ಇನ್ನೊಬ್ಬರು ವಾದಿಸುತ್ತಾರೆ. ಇವರೊಳಗಿನ ಕೆಲವೇ ಜಾಸ್ತಿ ನಿಗಳು ದೇವರಲ್ಲಿ ಭೇದವೇನೂ ಇಲ್ಲ ಅನ್ನುತ್ತಾರೆ ನಿಜ, ಆ ಮಾತು ಬೇರೆ ಈಗ ನಾವೂ ನೀವೂ ಅಂಥ ಜ್ಞಾನಿಗಳಲ್ಲವಷ್ಟೆ? ಹೀಗೆ ಮುಖ್ಯ ದೇವರುಗಳ ಹೆಚ್ಚು ಕಡಮೆ ವಾದವಿರುವಾಗ ಉಳಿದ ಇಂದ್ರ ಚಂದ್ರಾದಿಗಳ ವಿಷಯ ಕೇಳೋದೇ ಬೇಡ.

ವಿಚಾರ ಮಾಡಿದರೆ, ದೇವತೆಗಳು ಕಣ್ಣಿಗೆ ಕಾಣಿಸುವುದಿಲ್ಲ ಎಂಬುದೊಂದೇ ಭೇದವಲ್ಲದೆ ಮನುಷ್ಯರಿಗೂ ಅವರಿಗೂ ಮತ್ತೇನು ತಾನೇ ಭೇದವುಂಟು?

ಬಲವುಳ್ಳವನಿಗೇ ಬದುಕು, ಎಂಬ ಸೂತ್ರದಲ್ಲಿ ಅಬಲ ಮಾನವರನ್ನು ಜೆದರಿಸಿ ಬೆದರಿಸಿಯೇ ದೇವತೆಗಳು ತಮ್ಮ ಪ್ರತಿಷ್ಠೆ ಮಾಡಿಕೊಂಡು ಬಿಟ್ಟದ್ದಾರೋ ಏನಿನೋದಿಲ್ಲವೆ? ಗುಟ್ಟು ಸ್ವಲ್ಪ ಮೆಲ್ಲ ಓದಿ. ದೇವರ ಕಿವಿಗೆ ಬಿದ್ದರೆ ಗಂಡಾಂತರವಾದೀತು ಮತ್ತೆ.

ಬೇಕಾದರೆ ನೋಡಿ, ತಾವು ತಿನ್ನುವುದನ್ನೆಲ್ಲಾ ದೇವರಿಗೆ ಕೊಟ್ಟೇ ತಿನ್ನಬೇಕಂತೆ. ಹಾಗೆ ಕೊಟ್ಟದ್ದೂ, ಶಿವನು ಕಾಣದೆ ಕಳ್ಳನ ಹಾಗೆ ಕಿಂದಾಪ್ಪೂ ನಾಲಿ, ಮತ್ತೆ ನಮ್ಮ ಹೊಟ್ಟೆಯೊಳಗೆ ಕೂಡಾ ಕೂತುಕೊಂಡು ನಾವು ನುಂಗಿದ್ದು ಕೂಡ ಕೊಳ್ಳೇಹೊಡೆಯುತ್ತಾನೆ ದೇವರು. ಹೂಂ, ನಮ್ಮ ಹೃದಯದೊಳಗೇ ಉಂಟು ಅವನ ಅಜ್ಞೀವಾನೆ! ನೈವೇದ್ಯ ಕೊಳ್ಳುವುದೂ ಅವನೇ. ತಾನೂ ತಿನ್ನದೆ, ಮಹಾ ಮುರ್ಯಾದ್ಸನ ಹಾಗೆ ನಮಗೇ ಬಿಟ್ಟುಕೊಟ್ಟು, ಮತ್ತೆ ನಮ್ಮ ಹೊಟ್ಟೆಯೊಳಗೇ ಹೊಕ್ಕು ನಾವು ನುಂಗಿದ್ದನ್ನು ತಾನು ತಿಂದು, ನಮಗೊಂದೂ ಮೈಗೆ ಹಿಡಿಸದ ಹಾಗೆ ಮಾಡುವುದಿಲ್ಲವೇ ಆ ದೇವರು?

ನಾವೆಲ್ಲಾ ದೇವರ ಮಕ್ಕಳಂತೆ, ಅವನು ತಂದೆಯಂತೆ ಹೌದು ಸಾಮಾನ್ಯವಾಗಿ ಒಂದು ನೀತಿಯುಂಟು ಹಿರಿಯರು ಒಳ್ಳೇಯವರಾಗಿದ್ದರೆ ಮಕ್ಕಳೂ ಒಳ್ಳೆಯವರಾದಾರೂ ಅಂತ. ಎಲ್ಲರ ಕಂದೆ ಆದ ದೇವರು ಒಳ್ಳೆಯವನಾಗಿದ್ದರೆ ಮಕ್ಕಳಾದ ಮಾನವರು ಕೂಡಾ ಒಳ್ಳೆಯವರಾಗಿರಬೇಕು ತಾನೆ? ಎಲ್ಲಿವೆ ಹಾಗೆ? ದೇವರಿಗೆ ಕೆಟ್ಟ ಒಬ್ಬಿಯೆರುವಾಗ ಮಾನವರಿಗೆ ಒಳ್ಳೆಬುದ್ಧಿ ಹೇಗೆ ಒಂದೀತು? ಹೇಗೆ ಬಂದೀತು ಅಂತ?

ದೇವರ ಬಳಿಗೆ ಹೋಗುವುದೇ ಮುಕ್ತಿ; ಅಂಥ ಮುಕ್ತಿಗೆ ಪ್ರಯತ್ನಪಡುವುದು ಬಿಡಬೇಕು ಲೋಭವೇ ಎಲ್ಲಾ ಪಾಪಗಳಿಗೂ ಮೂಲ -ಎಂದು ದೇವರ ಶಾಸ್ತ್ರ ಹೇಳುತ್ತೆ. ಎಲ್ಲರೂ ಕೇಳಿದ್ದೀರಿ. ಲೋಭ ಬೇಡವೆಂದರೇನು? ಸ್ಥಿರಚರ ಸೊತ್ತುಗಳ ಆಶೆ. ಸ್ಥಿರಕ್ಕೆ ಭೂಮಿಯೂ, ಚರಕ್ಕೆ ಧನಕನಕಾದಿಗಳೂ ಸಾಧನಗಳು. ಇವೆರಡೂ ಭೂದೇವಿ ಲಕ್ಷ್ಮೀ ದೇವಿಯರ ವಶದಲ್ಲಿರುವ ವಸ್ತುಗಳು. ಭೂ ದೇವಿ ಶ್ರೀ ದೇವಿಯರನ್ನು ವರಿಸಿಕೊಂಡು ತನ್ನ ವರನ್ನಾಗಿ ಮಾಡಿಕೊಂಡವನಲ್ಲವೇ ವಿಷ್ಣು? ತನ್ನ ಹೆಂಡತಂದಿರ ಆಶೆಯನ್ನು ಯಾರೂ ಮಾಡಬಾರದೆಂದು ಆತ ಹೇಳಿದರೆ ಅದರಲ್ಲೇನಾಶ್ಚರ್ಯ? ನಾವಾದರೂ ಬಿಟ್ಟೇವೆಯೇ? ಅಂಥವನ ಹೆಸ್ರು ಮುರಿದು ಕೈಗೆ ಕೊಡಲಾರೆವೆ?

ಏಕೆ—ನಮಗೆ ಮಾತ್ರ ಆಶೆಯಿಲ್ಲವೆ?

ಹಾವಿನ ಹೆಡೆಯ ಮರೆಯಲ್ಲಿ

(೨ನೇ ಪುಟದಿಂದ)

ಭಿಸಿದಂತೆ ಕಿಟಕಿಯಲ್ಲಿ ಕರವಸ್ತ್ರಗಳು ಗಾಳಿಗೆ ಹಾರಲಾರಂಭಿಸಿದುವು.

ವಿವಿಧ ಮನೋಭಾವದ, ವಿವಿಧ ಪುಸ್ತಿತಿಯ, ಆತುರ, ದುಃಖ, ಹರ್ಷಗಳಿಂದ ಕೂಡಿದ ಹಲವಾರು ವಿಧದ ಸಾವಿರಾರು ಜನರು ರೈಲಿನಲ್ಲಿ ತುಂಬಿಕೊಂಡಿದ್ದರು. ಎಲ್ಲರನ್ನೂ ಹೊತ್ತುಕೊಂಡು ಯಾವ ಪರಿವೆಯೂ ತನಗಿಲ್ಲವೆಂಬಂತೆ, ಮಕಾಲೋಕೋಸಕಾರ್ಯಂತೆ ಸಂತೋಷದಿಂದ ಕೂಸ್ ಎಂದು ಕೂಗಿ ರೈಲು ಮುಂದೆ ಸಾಗಿತು!

೦೦ ೦೦

ಆದೆ?

ರೈಲು ಬರುತ್ತಿದೆ! ಮರಗಳು, ನದಿ, ಕಾಡು ಗುಡ್ಡಗಳು ಒಂದೊಂದೇ ಹಿಂದೋಡುತ್ತಿವೆ, ಅನೆಲ್ಲವನ್ನೂ ಹಿಂದಿಕ್ಕಿ ರೈಲು ಮುಂದೋಡುತ್ತಿದೆ. ರೈಲಿನ ಶಬ್ದ ಕರ್ಕಶ, ಭೀಕರವಾಗಿದ್ದರೂ ಏನೋ ಒಂದು ಪಲ್ಲವಿಯನ್ನು ಅದು ಹಾಡುವಂತಿತ್ತು. ತಂಪಾದ ಗಾಳಿ ಶಾಂತಿಯನ್ನು ಪಸರಿಸುತ್ತಿತ್ತು.

ಸ್ವಲ್ಪ ದೂರವನ್ನು ಕ್ರಮಿಸಿದ ನಂತರ ದೊಡ್ಡದಾದ ನದಿಯೊಂದು ಎದುರಾಯಿತು. ನದಿಗೆ ಭದ್ರವಾದ ಸೇತುವೆ; ಅದರ ಮೇಲೆ ರೈಲು ಹಾದಿ. ನದಿ ತಂಗಾಳಿಯನ್ನು ಕೂಡಿಕೊಂಡು ಮಂದ ಮಂದವಾಗಿ ಕಲಕಲ ನಿನಾದದಿಂದ ಮುಂದೆ ಹರಿಯುತ್ತಿದೆ. ಬಿಳಲ್ಲಿ ಹಾಯಿ ದೋಣಿಗಳು ಚಲಿಸುತ್ತಿವೆ. ಸಂಧ್ಯಾಕಾಲ. ಸುತ್ತಲೂ ಶಾಂತಿ ನೆಲಸಿದೆ. ರೈಲಿನ ಶಬ್ದ ಮಾತ್ರ ನದಿಗೆ ಹತ್ತಿರ ಹತ್ತಿರ ವಾಗುತ್ತಾ ಬರುತ್ತಿದೆ. ಹಕ್ಕಿಗಳು ಹಾಡುತ್ತಿವೆ. ಅಲ್ಲಲ್ಲಿ ಜನ ಜಾನುವಾರುಗಳು! ಅತ್ತತ್ತ ಹಚ್ಚ ಹಸುರಾದತೋಟ ಹೊಲಗಳು! ತಿಳೀರಿಂದ ತುಂಬಿದ ಕೊಳಗಳು!

ರೈಲು ನೇತುವೆಯನ್ನು ಸವಾಸಿಸಿತು. ನೀರ ತುಂತುರಿಂದ ಕೂಡಿದ ಮಂದವಾದ ಗಾಳಿ ಪ್ರಯಾಣಿಕರ ಮುಖಕ್ಕೆ ಸುಖ ಸ್ಪರ್ಶವನ್ನು ಮಾಡಿ ಮೈಮನಗಳನ್ನೆಲ್ಲ ತಂಪಿಸುತ್ತಿದೆ ಸೃಷ್ಟಿ ಸೌಂದರ್ಯಕ್ಕೆ ಹಿಗ್ಗಿ ಕೆಲವರು ಹೊರಗಿಣಿಕಿ ಪ್ರಕೃತಿಯನ್ನು ನೋಡಿ ಆನಂದಿಸಿತ್ತಿದ್ದಾರೆ ಆದರೆ . . .

ಆದೊ! ಅದೇಕೆ ಹಾಗೆ? ಬಳುಕುತ್ತಿದೆ ಸೇತುವೆ! ಜಿಸಿಲ್ಲುದರೆ ಕುಣಿಯುತ್ತಿರುವಂತೆ ಗಾಳಿಯೇ ಕುಣಿಯುತ್ತಿದೆ. ನರ್ತಕಿಯ ಕಾಲುಗಳಂತೆ ಬಳುಕುತ್ತಿದೆ ಸೇತುವೆ! ಇದೇಕೆ, ಈಗೇಕೆ ಹೀಗೆ? ಇದೇ ಯೇನು ವೈತ್ಯುವಿನ ಮಧ್ಯಾನರ್ತನ! ಚರಮಗೀತವೇ ಏನ್ಮೇಲೆ? ಕಾಲನ ಕರ...!

ಝುಗ್ ಝುಗ್! ಝುಗ್ ಝುಗ್! ಕೂಸ್.... ಗಜರ್! ಅಯ್ಯೋ! . ಸಾವಿರಾರು ಕಂಠಗಳಿಂದ ಹೊರಟ ವೈತ್ಯ ಭೀತಿಯ ಮರಣ ವೇದನೆಯ, ಭೀಕರ ಹೃದಯ ವಿದ್ರಾವಕ ಚೀತ್ಕಾರವೊಂದು ಕಾಲನ ಕೊರಳಿನಿಂದೆ ಹೊರಟು ಕೂಗಿ ನಂತೆ ಮುಗಿಲು ಮುಟ್ಟಿ ಪ್ರತಿಧ್ವನಿಸಿತು, ಮಹಾಪ್ರಯಾಣಿಕನಾಗಿ ಹೊರಟ ರೈಲು ಮನಣವನ್ನು ಹೊಕ್ಕಿತು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಲ್ಲ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ವಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪೀತಾ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction Madras.

ಸಮಾಜದ ಹಿತಚಿಂತನೆ—

ಮಾನವಜೀವನದ ಗೊತ್ತುಗುರಿಗಳು

ಡಿ. ಮೋಹನ ಮುತಾಲಿಕ

ಮನುಷ್ಯನಾದವನ ಮನಸ್ಸು ಇಂದು —ಅದೂ ಸದ್ಯದ ವಾತಾವರಣದಲ್ಲಿ ನೂರಾರು ಕಡೆಗೆ ಎಳೆಯಲ್ಪಟ್ಟು, ಯಾವುದೊಂದೂ ನಿಶ್ಚಿತವಾದ ಧ್ಯೇಯ-ಧೋರಣೆಗಳನ್ನೇರಿಯದೆ ಎಲ್ಲಿಗೋ ಹೋಗುತ್ತಲಿದೆ; ಏಕಾಗ್ರಚಿತ್ತತೆಯು ಇಂದಿನ ಬಹುಜನರಿಂದ ದೂರವಾಗುತ್ತಲಿದೆ. ಮನುಷ್ಯ ತನ್ನ ಜನ್ಮದಾರಭ್ಯ ಮೊದಲು ಗೊಂಡು ಮುಕ್ತಾಯದ ವರೆಗೂ ತನ್ನ ಹೊಟ್ಟೆಗಾಗಿ ಒಲೆದಾಡಬೇಕಾಗುತ್ತದೆ; ಈ ಮಧ್ಯೆ ಆತ ತನ್ನದೇ ಆದ ಕೆಲವೊಂದು ವಿಶಿಷ್ಟ ಗುಣಗಳ ಉಪಯೋಗವನ್ನು ಇತರರಿಗಾಗಿ ಕಾಯ್ದಿರಿಸಿ ಉಪಯೋಗಿಸಿಕೊಂಡದ್ದಾದರೆ ಆಸಾಯಕರಿಗೆ ನೀರಿನಲ್ಲಿ ಮುಳುಗುವಾಗ ಆಸರೆಕೊಟ್ಟ ಕಲ್ಲೊಂದರಂತೆ ಮಹದುಪಕಾರವನ್ನು ಕೈಕೊಂಡಂತಾಗುತ್ತದೆ. ಇದನ್ನೆಲ್ಲ ನಾವು ಸಾಮಾನ್ಯವಾಗಿ ಕೇಳಬಹುದಾದರೂ ಮನುಷ್ಯನ ಜೀವನದಲ್ಲಿ ನಿರ್ದಿಷ್ಟವಾದ ಒಂದು ಧ್ಯೇಯ-ಧೋರಣೆಯು ಸಂಪೂರ್ಣತಃ ನೆರವೇರದಂತಾದುದರಿಂದ ಮನುಷ್ಯ ಪ್ರಾಣಿಗಳಾದ ನಾವು ಯಾವುದೇ ವಿಶೇಷವಾದ ಕಾರ್ಯವನ್ನು ಮಾಡದವರಾಗಿದ್ದೇವೆ. ಜೀವನವೆಂಬುದಕ್ಕೆ ಧ್ಯೇಯವೆಂಬುದೊಂದು ಇದ್ದೇ ಇರುತ್ತದೆ. ಅದರ ಯಶಾಪಯಶಗಳೇ ಮಾನವ ಸಂಸ್ಕೃತಿಯ ಮೆಟ್ಟಲು ಹಿಡಿತಗಳಾಗಿವೆ; ಇವುಗಳನ್ನೇರುವುದೇ ಒಂದಾಧ್ಯ ಕಾರ್ಯವಾಗಿದೆ. ಇದನ್ನು ಹೇಗೆ ದಾಟಬೇಕು? ಹೇಗೆ ಯಶಸ್ಸನ್ನು ಸಂಪಾದಿಸಬೇಕು? ಈ ಪ್ರಶ್ನೆಗಳನ್ನು ಬಿಡಿಸದೇ ನಾವು ಜಯಶಾಲಿಗಳಾಗಲಾರೆವು. ಹಾಗಾದರೆ ನಾವು ನಮ್ಮ ಜೀವನದ ಧ್ಯೇಯ ಧೋರಣೆಗಳ ಅಥವಾ ಗೊತ್ತುಗುರಿಗಳ ಒಂದು ದಂಡೆಯನ್ನು ತಲುಪಿ ಹಾಯಾಗಿ ಬಾಳಬೇಕಾದರೆ ಏನು ಮಾಡಬೇಕು? ಅದರ ಉಪಾಯಗಳೇನು?

ಈ ಸಮಸ್ಯೆ ಬಿಡಿಸುವುದು ಬೇರೆ ಆಸಾಧ್ಯವಾದರೂ ಇಂದ್ರಿಯ ನಿಗ್ರಹ, ಮನಸ್ಸಂಯಮಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಲ್ಲವರಾದರೆ ಕೆಲಮಟ್ಟಿನ ಯಶಸ್ಸನ್ನು ಗಳಿಸಬಹುದಾಗಿದೆ ಧಾರಣೀ ವ್ಯಕ್ತಿಯ ಸ್ನೇಹ ಕೈಕೊಂಡರೂ ಗೆದಿಯಬಹುದೆಂದು ಧಾರಿಸಿದವರಿದ್ದರೂ, ಇದು ಕ್ಷಣಿಕ ಅಥವಾ ಸಾಮಯಿಕವಾದುದೆಂದು ಅನುಭವವಿವರಿಸಿ ಹೇಳುತ್ತದೆ. ನಮ್ಮ ಧ್ಯೇಯ-ಧೋರಣೆ ಯಶಾಪಯಶಗಳ ಕಾರಣಗಳನ್ನು ಅರಿಯುವುದೂ ಅಸಾಧ್ಯವೆಂದು ಬಗೆದರೂ ಕೆಳಗಿನ ಕೆಲವು ಸಂಗತಿಗಳು ಮಾತ್ರ ಸ್ಪಷ್ಟವಾದ ಪರಿಣಾಮಗಳನ್ನುಂಟುಮಾಡದಿರಲಾರವೆಂದು ಹೇಳಬಹುದು:—

೧. ಮನುಷ್ಯನ ವರ್ಗಭೇದ:— ಮನುಷ್ಯನ ಸಿರಿವಂತಿಕೆ ಬಡತನಗಳಾಗಲೀ, ಜಾತಿ ಕುಲಗಳಾಗಲೀ, ಗುಣಾವಗುಣಗಳಾಗಲೀ ಅವನ ಧ್ಯೇಯ-ಧೋರಣೆಗಳಿಗೆ ಕಾರಣವಾಗುತ್ತವೆ. ಸಿರಿವಂತರು ತಮ್ಮ ಬಲದಿಂದಾಗಿ ಎಲ್ಲ ಇಚ್ಛೆಗಳನ್ನು ಪಡೆಯಬಲ್ಲರು; ಇಲ್ಲವೇ ಸಿರಿವಂತರೆಂಬ ಕಾರಣದಿಂದ ಕೆಲವೊಮ್ಮೆ ದುಷ್ಟ ಬುದ್ಧಿಗಳ ಕೈಗೆಸಿಕ್ಕು ತಮ್ಮ ಧ್ಯೇಯ ಧೋರಣೆಗಳ ಉಪಯಶಸ್ಸಿಗೆ ಕಾರಣರಾಗಬಹುದು. ಬಡವರು ತಮ್ಮದೇ ಆದ ಧ್ಯೇಯಗಳಿಗೆ ಅಂಟಿಕೊಳ್ಳಲು ಹೆಣಗಬಹುದಾದರೂ ತಮ್ಮ ಪರಿಸ್ಥಿತಿಯಿಂದಾಗಿ ಸುಮ್ಮನೆ ಕುಳಿತುಕೊಳ್ಳಬಹುದಾದ ಸಂಭವವೂ ಇದೆ. ಜಾತಿ-ಕುಲಗಳೂ ಮನುಷ್ಯರನ್ನು ಸಮಾಜದಿಂದ ವಿಧವಿಧದ ರೀತಿಯಲ್ಲಿ ವಿಂಗಡಿಸುವುದರಿಂದಲೂ ಧ್ಯೇಯ ಧೋರಣಗಳ ವಿಷಯದಲ್ಲಿ ಮಹತ್ವದ ಬದಲಾವಣೆಗಳಾಗುವುದನ್ನು ನಾವು ಕಾಣಬಹುದಾಗಿದೆ. ಗುಣಾವಗುಣಗಳಂತೂ ಧ್ಯೇಯ ನಿರೂಪಣೆಯಲ್ಲಿ ವಿಶೇಷ ಪಾತ್ರವನ್ನಾಡಬಹುದಾಗಿದೆ.

೨. ಮನುಷ್ಯನ ಆರ್ಥಿಕ ಸ್ಥಿತಿ:— ಮನುಷ್ಯನ ಆರ್ಥಿಕ ಪರಿಸ್ಥಿತಿಯೂ ಆತನ ಧ್ಯೇಯಾತ್ಮಕ ಕಾರ್ಯದಲ್ಲಿ ಮಹತ್ವದ ಪಾತ್ರವನ್ನಾಡುತ್ತದೆ. ಕೇವಲ ಆರ್ಥಿಕ ಅನಾನುಕೂಲತೆಗಾಗಿ ತನ್ನ ಜೀವನದ ಮಹತ್ವದ ಇಚ್ಛೆಗಳನ್ನು ನೆರವೇರಿಸಿಕೊಳ್ಳಲಾರದೆ ತೊಳಲಾಡಿದ ನಮ್ಮ ಬಂಧುಗಳೆಷ್ಟೇನೂ ಕಡಿಮೆಯಿಲ್ಲ. ಇಂದಿನ ವರ್ತಮಾನ ಪರಿಸ್ಥಿತಿಯಲ್ಲಂತೂ ಆರ್ಥಿಕ ವಿಶೇಷತೆಯಿಲ್ಲದೆ ನಾವು ಯಾವ ಕಾರ್ಯವನ್ನೂ ಸಾಧಿಸಲಾರದುತಾಗಿದ್ದೇವೆ, ಹಣವಿದ್ದರೆ ಮಾತ್ರ ಗುಣ ದೊರಕಬಹುದಾದಂತಹ ಕಾಲವೀಗ ಬಂದಿದೆ. ಗುಣವಿದ್ದರೆ ಹಣ ದೊರೆವ ಕಾಲ ಮಾಯವಾಗಿದೆ; ಇಂತಹ ಕಾಲ ಇನ್ನು ಮೇಲೂ ಸಹ ಬರಬಹುದಾದರೂ ಪ್ರಥಮತಃ ಹಣವಿಟ್ಟೇ ಮಾತನಾಡಬೇಕಾಗುವದೆಂದು ನಾವು ಮರೆಯಲಾಗದು. ಈ ಕಾರಣಗಳಿಂದ ಮನುಷ್ಯ ತನ್ನ ಧ್ಯೇಯ-ಧೋರಣೆಗಳನ್ನಾಗಲೀ, ಗೊತ್ತುಗುರಿಗಳನ್ನಾಗಲೀ ಒಂದು ದಡಕ್ಕೆ ಮುಟ್ಟಿಸಲಸಮರ್ಥನಾಗುತ್ತಾನೆ.

೩. ಸಮಾಜ ಬಂಧನ:— ಮನುಷ್ಯನ ಈ ತೆರನಾದ ಒಂದು ಅನಿಶ್ಚಿತತೆಗೆ ಸಮಾಜವೂ ಅದರ ಅಂಗಗಳಾದ ವ್ಯಕ್ತಿಗಳೂ ಕೂಡ ಕಾರಣರಾಗಿದ್ದಾರೆನ್ನಬಹುದು. ಒಬ್ಬ ತನ್ನ ಇಚ್ಛೆಯಿಂದ ಅಥವಾ ಅಸಕ್ತಿಯಿಂದ ಒಂದು ಕಾರ್ಯವನ್ನು ಸಾಧಿಸಬೇಕೆಂದಿರುವಾಗ ಸ್ನೇಹಿತರೆಂಬುವವರಾಗಲೀ, ವ್ಯಕ್ತಿಗಳಿಂದಾಗಲೀ ಮನೆಯವರಿಂದಾಗಲೀ, ಇಲ್ಲನೇ ಸಮಾಜ ಅಥವಾ ಅದರ ಯಾವುದೇ ಅಂಗದಿಂದಾಗಲೀ ಅಡ್ಡಿಗಳು ಬಂದು, ಆ ವ್ಯಕ್ತಿಯ ಕಾರ್ಯಕ್ಕೆ ತಡೆಯೊಡ್ಡುವುದರಿಂದಾಗಿಯೂ ಮನುಷ್ಯ ಅಧ್ಯೇಯನಾಗಬೇಕಾದ ಪ್ರಸಂಗ ಬರುತ್ತದೆ.

ಇಷ್ಟಲ್ಲದೆ ಇನ್ನೂ ಅನೇಕ ಕಾರಣಗಳಿಗಾಗಿ ಮನುಷ್ಯ ತನ್ನಿಚ್ಛೆಯಿದ್ದರೂ, ಹಂಬಲಿತನಾಗಿದ್ದರೂ ತನ್ನ ನಿರ್ದಿಷ್ಟ ಗೊತ್ತುಗುರಿಗಳನ್ನು ಸಂಪೂರ್ಣತಃ ನೆರವೇರಿಸಿಕೊಳ್ಳಲಸಮರ್ಥನಾಗುತ್ತಾನೆ. ಇವುಗಳಿಗೇನಾದರೂ ಸುಲಭೋಪಾಯಗಳಿವೆಯೆ? ತನ್ನ ಧ್ಯೇಯ ಧೋರಣೆಗಳ ಗಂಟಿಕೊಂಡು ಹೋಗಲು ಸಾಧಿಸಲಾರದ ವ್ಯಕ್ತಿಗೆ ಇಂದಿನ ಅಡ್ಡಿ-ಆತಂಕಗಳ ಪರದೆಯನ್ನು ಸರಿಸಲು ಸಾಧ್ಯವಾಗಬಹುದೇ? ಸಾಧ್ಯವಿದೆ. ಆದರೆ ಅದಕ್ಕೆ ತಾಳ್ಮೆ, ಸಹಾಯ, ಸಹಕಾರಗಳ ಅಗತ್ಯತೆಯೂ ಅವಶ್ಯವಾಗಿದೆ.

ಧ್ಯೇಯ-ಧೋರಣೆಗಳ ಇಲ್ಲವೇ ಗೊತ್ತುಗುರಿಗಳ ಒಂದು ನಿರ್ದಿಷ್ಟವಾದ ದಿಶೆಯಲ್ಲಿ ಹೊಕ್ಕು ವಿಶೇಷವಾದ ಆಭ್ಯಾಸವನ್ನು ಶಾಸ್ತ್ರೋಕ್ತವಾಗಿ ಕಲಿಯುವುದು ವ್ಯಕ್ತಿಯ ಅಭಿಲಾಷೆಯು ಪೂರ್ಣತೆಗೆ ತೀರಾ ಅವಶ್ಯವಿದೆ. ಈ ದೃಷ್ಟಿಯಿಂದ ಮನುಷ್ಯ ಅವುಗಳನ್ನು ಅಭ್ಯಸಿಸಬೇಕಾದರೆ ಅಡ್ಡಿ ಆತಂಕಗಳ ಎಲ್ಲ ಕ್ಷೇತ್ರಗಳನ್ನು ದಾಟಿ ಮುನ್ನಡೆಯಬೇಕು. ಇವುಗಳನ್ನು ದಾಟಬೇಕಾದರೆ ಮುಖ್ಯವಾಗಿ ಕೆಳಗಿನ ಮೂರು ಉಪಾಯಗಳು ಮಾತ್ರ ಸಾಧ್ಯವಿವೆ:—

೧. ಸರಕಾರವು ವಿವಿಧ ಕ್ಷೇತ್ರಗಳಲ್ಲಿ ವಿವಿಧ ಅಭ್ಯುದಯಕ್ರಮಗಳ ಕೇಂದ್ರಗಳನ್ನು ಸ್ಥಾಪಿಸಬೇಕು; ಹಾಗೂ ಅವುಗಳಿಗೆ ಹೆಚ್ಚಿನ ನೆರವು ನೀಡಿ [ಸಾಧ್ಯವಾದಷ್ಟು ಮಟ್ಟಿಗೆ ಪುಕ್ಕಟೆ ಶಿಕ್ಷಣವಾದರೆ ಒಳ್ಳೆಯದು]. ಹಿಂದಿನ ರಾಜರು ತಮ್ಮ ಆಸ್ಥಾನದಲ್ಲಿ ಗೌರವ ಕೊಡುವಂತೆ ಮಾಡಬೇಕು. ಇದರಿಂದಾಗಿ ನೈಜಕಲಾಕಾರರ ದಿವ್ಯದರ್ಶನವು ನಾಡಿನಲ್ಲಾಗುವುದಲ್ಲದೆ, ಅವರ ಶಕ್ತಿಯ ಪೂರ್ಣತೆಯನ್ನು ಜನ ಕಾಣಬಹುದಾಗಿದೆ.

೨. ಸಮಾಜದಲ್ಲಿ ವರ್ಗಭೇದ ದೂರಾಗಬೇಕು. ಶ್ರೀಮಂತರು ಮಕ್ಕಳೆಂಬುದಾಗಿ ಯಾಗಲೀ, ಬಡವರೆಂಬುದಾಗಿ ಯಾಗಲೀ, ಭೇದಭಾವವಿಲ್ಲದೆ ಅವರ ಇಚ್ಛೆಗೆ ತಕ್ಕಂತೆ ಕೆಲಸಕೊಡಬೇಕು. ಈ ವರ್ಗಭೇದವನ್ನು ಮಾಡಿದ್ದಾದರೆ ಎಷ್ಟೋ ಆಸ್ಥಿಕ ಜನರಿಗೆ ಅನುವು ದೊರೆಯುವಂತೆ ಸಂಭವನವಿರುತ್ತದೆ.

೩. ಸಮಾಜವಲ್ಲಿಯ ಬಂಧನವನ್ನು ಹೊಡೆದು ಹಾಕುವುದು ಕಠಿಣವಾಗಿದ್ದರೂ ಅದೂ ಕೂಡ ಆಸಾಧ್ಯವೆಂದು ಹೇಳಲಿಕ್ಕಾಗದು. ಸಮಾಜ ಬಂಧನವು ಆರ್ಥಿಕ ಸ್ಥಿತಿ, ವರ್ಗಭೇದಗಳನ್ನು ಎಷ್ಟೋ ಮಟ್ಟಿಗೆ ಅವಲಂಬಿಸಿದ್ದರೂ ಸರಕಾರೀ ಹಸ್ತಕ್ಷೇಪದಿಂದ ಅವುಗಳೂ ದೂರಾಗದಿರಲಾರವೆಂದು ಹೇಳಬಹುದಾಗಿದೆ. ಸಮಾಜದಲ್ಲಿ ಜನತೆಯು ಕಾಗೂ ಸರಕಾರದ ಒಲವುಗಳ ಪ್ರಭಾವವೂ ಬಹುಮಟ್ಟಿಗೆ ವಿಶೇಷ ತೊಂದರೆಯಿಲ್ಲದೆ ಅಗಬಹುದಾದ್ದರಿಂದ ಸಮಾಜ ಬಂಧನದಿಂದ ವ್ಯಕ್ತಿಗಳು ಬಿಡುಗಡೆ ಹೊಂದಿ ತಮ್ಮ ಗುರಿಯನ್ನು ಸಾಧಿಸಬಹುದಾಗಿದೆ.

ನಾನೆಲ್ಲ ಬರೆಯುತ್ತೇವೆ, ಹೇಳುತ್ತೇವೆ—ಆದರೆ ನಾವೂ ನಮ್ಮ ನಿರ್ದಿಷ್ಟವಾದ ದಂಡೆಯನ್ನು ಮುಟ್ಟಲು ಸಮರ್ಥರಾದ ಕಾರಣದಿಂದಲೋ ಏನೋ—ಅಂದಂತೆ ಆಡದವರಾದ್ದೇವೆ ಈ ವಿಷಯದಲ್ಲಿ ಜನತೆಯೂ, ಸರಕಾರವೂ ಕೂಡಿಯೇ ಕ್ರಾಂತಿ ತಾಗಿಸಿದ್ದಾದರೆ ನಮ್ಮ ಅನುವಂಶಿಕದ ಜೀನಂತ ಚಿತ್ರವನ್ನು ಮುಂದೂರಿಸಬಹುದು. ಆರ್ಥಿಕ ಕ್ಷೇತ್ರದಲ್ಲೂ, ಇನ್ನಿತರ ಕ್ಷೇತ್ರದಲ್ಲೂ ಪ್ರಗತಿ ಸಾಧಿಸಬಹುದು; ಮುಂದೆ ನಮ್ಮ ಗೊತ್ತುಗುರಿಗಳು. ಧ್ಯೇಯ ಧೋರಣೆಗಳು ಒಬ್ಬ ವ್ಯಕ್ತಿಯ ಸ್ವಪ್ರಯತ್ನದಿಂದಾಗಿ ಯಶಸ್ವಿಯಾಗಬಲ್ಲುದೆಂದು ಧೈರ್ಯದಿಂದ ಹೇಳಬಹುದು.

ಸಿಂಧಿಗೆ ಮಾನ್ಯತೆ ದೊರೆಯಲಿ

(ನಿನ್ನೆ ಪುಟದಿಂದ)

ಕಾಕಾ ಸಾಹೇಬ ಕಾಲೇಲ್ಕರರು ದೇಶದ ಸಾಂಸ್ಕೃತಿಕ ಏಕತೆಯನ್ನು ಕಾಪಾಡಲು ನಾವು ಬಯಸುವುದಾದರೆ ಕಾಶ್ಮೀರ ಮತ್ತು ಕೊಂಕಣಿಗಳ ಬಗ್ಗೆ ವಿಶಿಷ್ಟ ಧೋರಣೆಯ ಪ್ರದರ್ಶನ ಮಾಡಬೇಕು ಮತ್ತು ಈ ಭಾಷೆಗಳನ್ನುಳಿಸಬೇಕು ಎಂದು ಹೇಳಿದರು.

ಸಾಹಿತ್ಯ ಅಕಾಡಮಿ ಮತ್ತು ಸಂಸ್ಕೃತ, ಫಾರಸಿ ಮತ್ತು ಅರಬಿ ಭಾಷೆಗಳ ಸುಂದರ ಸವನ್ವಯವಾಗಿರುವ ಸಿಂಧೀ ಭಾಷೆಯು ನಮ್ಮ ರಾಷ್ಟ್ರೀಯ ಸಂಸ್ಕೃತಿ ಮತ್ತು ರಾಷ್ಟ್ರೀಯ ಸಾಹಿತ್ಯದ ಸಂವೃದ್ಧಿಯಲ್ಲಿ ಬಹುಮೂಲ್ಯ ಸಹಯೋಗ ನೀಡಲು ಶಕ್ತವಾಗಿದೆ ಎಂಬುದು ನಿಶ್ಚಿತವಿದೆ. ಹೀಗಿರುವುದರಿಂದ ಇದು ತನ್ನ ಇಂದಿನ ಈ ದುಸ್ಥಿತಿಯಿಂದ ಎದ್ದು ತಲೆಯೆತ್ತುವಂತಾಗಲಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಆವರಣಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ಕೃಷ್ಟ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಪೈ ಕಂಪೆನಿ, ಮಂಗಳೂರು—1.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 37
Licensed to Post without Prepayment.

ನವಯುಗ

ಸಂಪುಟ ೩೭ VOL. 37 — 19—12—1957 — ಸಂಚಿಕೆ ೧೫ NO. 15

ಅರ್ಥವಾಗುವುದಿಲ್ಲವೆನ್ನುತ್ತೀರಾ?

ಭಾಷೆಯನ್ನು ಸರಳಗೊಳಿಸಬಹುದು

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ

ಭಾಷೆಯ ಸರಳೀಕರಣದ ಪ್ರಶ್ನೆಯು ಕೇವಲ ಇಂದು ಮಾತ್ರ ಉಪಸ್ಥಿತವಿದೆಯೆಂದು ಅಥವಾ ಭಾರತದಲ್ಲಿ ಮಾತ್ರ ಇದರ ಸಮಸ್ಯೆಯಿದೆ ಎಂದು ತಿಳಿಯುವುದು ತಪ್ಪಾಗುವುದು. ಹೈನ್ಲೈಟ್ ನಾಟಕದಲ್ಲಿ ಒಂದು ಪಾತ್ರವು ವ್ಯಂಗ್ಯಾತ್ಮಕ ವಿಧಾನದಲ್ಲಿ ಹೇಳುತ್ತದೆ-ನನ್ನ ಶಬ್ದಗಳು ಬಹಳ ಎತ್ತರಕ್ಕೆ ಹಾರುತ್ತಿದೆ; ಆದರೆ, ನನ್ನ ವಿಚಾರಗಳು ಮೇಲೇರುವುದಿಲ್ಲ. ಅವು ಎಲ್ಲಿಲ್ಲಿಯೋ ಭೂಮಿಯಲ್ಲಿ ಬಿದ್ದು ಬಿಡುತ್ತವೆ."

ನಮ್ಮ ನಮ್ಮ ಮನೆಯಲ್ಲಿರುವ ಶಾಲೆಗೆ ಹೋಗುತ್ತಿರುವ ಬಾಲಕ-ಬಾಲಿಕೆಯರ ಬಾಯಿಂದ ಹೊರಬರುವ ಶಬ್ದಗಳನ್ನು ಆ ಪಾಠಶಾಲೆಯ ಅಧ್ಯಾಪಕರ ಬಾಯಿಂದ ಹೊರಬೀಳುವ ಶಬ್ದಗಳೊಂದಿಗೆ ತುಲನೆಮಾಡಿನೋಡಿದರೆ, ಭಾಷೆಯ ಸರಲೀಕರಣದ ಪ್ರಶ್ನೆಯು ನಮ್ಮ ಮುಂದೆ ಕುಣಿದಾಡುತ್ತದೆ ಹಾಗೆಯೇ ಸುಸ್ಪಷ್ಟವಾಗುತ್ತದೆ.

ದ್ವಿತೀಯ ಮಹಾಯುದ್ಧವು ಕೊನೆಗೊಂಡನಂತರ ಇಂಗ್ಲೆಂಡಿನ ಭೂತಪೂರ್ವ ಪ್ರಧಾನಮಂತ್ರಿ ಶ್ರೀ ಚರ್ಚಿಲರ ಸಂಸ್ಮರಣೆಗಳ ಒಂದು ಖಂಡವು "ಕ್ಲೋಸಿಂಗ್ ದ ರಿಂಗ್" ಎಂಬ ಶೀರ್ಷಿಕೆಯಿಂದ ಪ್ರಕಾಶಿತವಾಗಿತ್ತು. ಅದರಲ್ಲಿ ಸಮರದ ಗಡಿಬಿಡಿಯ ನಡುವೆಯೂ ಚರ್ಚಿಲ್ಲರು ಸರಳ ಭಾಷೆಯ ದೊಡ್ಡ ಪಕ್ಷಪಾತಿಗಳಾಗಿ ಉಳಿದಿರುವುದಕ್ಕೆ ಒಂದು ಅತ್ಯುತ್ತಮ ಉದಾಹರಣೆಯು ನಮಗೆ ಓದಲು ದೊರೆಯುತ್ತದೆ. ಅವರು ತಮ್ಮ ಕಾರ್ಯಾಲಯಕ್ಕೆ ಎಲ್ಲ ಸರಕಾರೀ ಆದೇಶ ಪತ್ರಗಳನ್ನು ಸರಲ ಭಾಷೆಯಲ್ಲಿ ಬರೆಯಬೇಕೆಂದು ನಿರ್ದೇಶ ವಿತ್ತಿದ್ದರು. ಒಂದು ಬಾರಿ ಅವರು ಸರಕಾರೀ ಆದೇಶದಲ್ಲಿ 'ಪೂರ್ವ ನಿರ್ಮಿತ ಮನೆ'ಯರ್ಥದಲ್ಲಿ ಫ್ರಿ-ಫೆಬ್ರಿಕೇಟೆಡ್' ಶಬ್ದವನ್ನು ಓದಿದಾಗ, ಕೂಡಲೇ ಆ ಪದವನ್ನು ತೆಗೆದು ಹಾಕಿ ಅದರ ಸ್ಥಾನದಲ್ಲಿ 'ರೆಡಿಮೇಡ್' ಪದವನ್ನು ಪ್ರಯೋಗಿಸಲು ಆದೇಶವಿತ್ತರಂತೆ!

ಕಳೆದವಾರ ಕೇಂದ್ರೀಯ ಸೂಚನೆ ಮತ್ತು ಪ್ರಸಾರಣ ಮಂತ್ರಿ ಡಾ. ಕೇಸ್ಕರರು ತನ್ನ ವಿಭಾಗದ ಪುನಸ್ಸಂಘಟಿತ ಹಿಂದೀ ಸಲಹಾ ಸಮಿತಿಯ ಸಭೆಯಲ್ಲಿ ಮಾತನಾಡುತ್ತ ರೇಡಿಯೋಗಳ ಮೂಲಕ ಪ್ರಸಾರ ಮಾಡುತ್ತಿರುವ ಸಮಾಚಾರಗಳ ಭಾಷೆಯು ಸುಲಭದಲ್ಲಿ ಶ್ರಾವಗರಿಗೆ ಅರ್ಥವಾಗುವಂತಿರಬೇಕೆಂದು ಹೇಳಿದರು.

ಒಂದು ಶಬ್ದವು ನನ್ನ ಆಶಯವನ್ನು ಹೃದಯದಲ್ಲಿ ಅಂಕಿತ ಮಾಡಿಕೊಡದೆ ಹೋದರೆ, ಅದು ನಿರರ್ಥಕವೆನಿಸುವುದು. ಆನೇಕ ಶಬ್ದಗಳು ಬಾಹ್ಯತಃ ಸಮಾನಾರ್ಥಕವೆಂದು ಕಂಡುಬರುವುದಾದರೂ ಅವುಗಳ ನಡುವೆ ಸೂಕ್ಷ್ಮ ಭೇದವಿರುವುದು. ಇಂತಹುವನ್ನು ನಾವು ತಿಳಿದುಕೊಳ್ಳುವುದು ಬಹಳ ಅಗತ್ಯವಾಗಿದೆ. ಉದಾಹರಣೆಗಾಗಿ 'ನಫೆ' ಮತ್ತು 'ಹತ್ಯೆ'ಗಳು ತೋರಿಕೆಗೆ ಒಂದೇ ಎಂದು ತೋರಬಹುದು. ಆದರೆ, ಆ ಪ್ರಗಳಲ್ಲಿ ಅರ್ಥಾಂತರವು ಅಡಕವಾಗಿರುವುದು. ಶಬ್ದಗಳ ವಿಶಿಷ್ಟ ಅರ್ಥಗಳನ್ನು ನಿಶ್ಚಿತ ಮಾಡಿಕೊಳ್ಳಲು ಇಂದೊಂದು ಹೊಸ ಶಾಸ್ತ್ರವೇ ತಯಾರಾಗಿರುವುದು. ಈ ಶಾಸ್ತ್ರಕ್ಕೆ ಸೆಮೆಂಟಿಕ್ಸ್ ಎನ್ನುತ್ತಾರೆ. ಇದ ಕ್ಕನುಸಾರವಾಗಿ ಪ್ರಮಾಣ ಶಾಸ್ತ್ರ (ಎಪಿಸ್ಟೋ ಪೊಲಜಿ), ಉಚ್ಚಾರಣ ಶಾಸ್ತ್ರ (ಫೋನೇಟಿಕ್ಸ್), ಸಮಾಜ ಶಾಸ್ತ್ರ ರೂಢಿ ಮತ್ತು ರೀತಿ ರಿವಾಜು ಮೊದಲಾದ ಅನೇಕ ಮಾತುಗಳ ಸಮಗ್ರ ರೂಪವಲ್ಲಿ ವಿಚಾರ ಮಾಡಿದ ನಂತರವೇ ಯಾವುದಾದರೊಂದು ವಿಶಿಷ್ಟ ಶಬ್ದದ ಅರ್ಥವನ್ನು ನಿಶ್ಚಯಿಸಬಹುದು.

ಶಬ್ದ ಶಾಸ್ತ್ರದಲ್ಲಿ ಧ್ವನಿಗೊಂದು ಮಹತ್ವದ ಸ್ಥಾನವಿದೆ. ಇದರೊಂದು ಉದಾಹರಣೆಯನ್ನಿಲ್ಲಿ ಕೊಡಬಹುದು. ಒಬ್ಬ ಓದು ಬರಹ ತಿಳಿಯದ ದಾಸಿಗೆ ವಿದೇಶದಲ್ಲಿ ವಾಸಿಸುವ ಆತೆಯ ಪ್ರಿಯಕರನು ಸಮಯ ಸಮಯದಲ್ಲಿ ಉದ್ದುದ್ದವಾದ ಪತ್ರಗಳನ್ನು ಬರೆದು ಕಳಿಸುತಿದ್ದನು. ಆದರೆ, ಆ ದಾಸಿಯು ಅಂತಹ ಉದ್ದ ಕಾಗದಗಳನ್ನು ಎಂತು ಓದಬಲ್ಲಳು? ಕೊಟ್ಟ ಕೊನೆಗೆ ಆಕೆ ಜೆನ್ನಾಗಿ ಆಲೋಚಿಸಿ ಒಂದು ಶರ್ತದ ಮೇಲೆ ತನ್ನ ಒಡತಿಯ ಬಾಯಿಂದ ಓದಿಸತೊಡಗಿದಳಂತೆ. "ನೀವು ನನಗೆ ಪತ್ರವನ್ನೋದಿ ಹೇಳುತ್ತಿರುವಾಗ, ನಾನು ನಿಮ್ಮ ಕುರ್ಚಿಯ ಹಿಂದುಗಡೆ ನಿಂತುಕೊಂಡು ನಿಮ್ಮೆರಡೂ ಕಿವಿಗಳನ್ನು ನನ್ನ ಬೆರಳುಗಳಿಂದ ಮುಚ್ಚಿ ಬಿಡುತ್ತೇನೆ. ಇದರಿಂದ, ನೀವು ಅದನ್ನು ಕೇಳದಂತಾಗಬೇಕು" ಎಂಬುದೇ ಈ ಶರ್ತ. ವಸ್ತುತಃ ಈ ಉದಾಹರಣೆಯಲ್ಲಿ ಧ್ವನಿ ಶಾಸ್ತ್ರದ ಮಹತ್ವವು ಹುದುಗಿಕೊಂಡಿದೆ. ಆದರೆ, ಕೇಳಲು, ಈ ಘಟನೆಯು ಸ್ವಲ್ಪ ಅತಿಶಯೋಕ್ತಿಪೂರ್ಣವೆಂದು ಕಂಡುಬರಬಹುದು.

ಮೂರು ವರ್ಷ ಪ್ರಾಯದ ಬಾಲಕ ಅಥವಾ ಬಾಲಿಕೆಯರಿಗೆ ಸರ್ವ ಸಾಮಾನ್ಯವಾಗಿ ಒಂದೂವರೆ ಸಾವಿರ ಶಬ್ದಗಳು ಅದರ ಅರ್ಥಸಹಿತ, ಜ್ಞಾಪಕವಿರುತ್ತವೆ ಎಂದು ಭಾಷಾ ಶಾಸ್ತ್ರಜ್ಞರು ಹೇಳುತ್ತಾರೆ. ಈ ಪ್ರಾಯದ ವಿಪರೀತ ಪರಿಸ್ಥಿತಿಯಿರುವ ಬಾಲಕರು ನಿತ್ಯದ ವಾತುಕತೆಯಲ್ಲಿ ನೂರಕ್ಕಿಂತ ಹೆಚ್ಚು ಶಬ್ದಗಳ ಪ್ರಯೋಗವನ್ನು ಮಾಡುವುದಿಲ್ಲ. ಯಾವುದೇ ಒಂದು ಮಗುವಿನ ಶಬ್ದ ಭಂಡಾರವು ಬೆಳೆದು ಬರುವುದು ಇಲ್ಲವೆ ಬೆಳವಣಿಗೆಯು ತಡೆಹಿಡಿಯಲ್ಪಡುವುದು ಅದರ ಮಾತಾಪಿತರ ಅಥವಾ ಅಭಿಭಾವಕರ ಕೆಲಸದಲ್ಲಿ ನಿರ್ಭರವಾಗಿರುತ್ತದೆ ಎಂದೂ ಭಾಷಾಶಾಸ್ತ್ರಗಳು ಹೇಳುತ್ತಾರೆ.

ಮುಂದುವರಿದ ಮತ್ತು ಉತ್ತಮ ಉದ್ಯೋಗಿ ಜನರ ಶಬ್ದಜ್ಞಾನವು ಅಸಾಧಾರಣ ರೂಪದಲ್ಲಿದೆ ಎಂದು ತಿಳಿಯುವುದೂ ತಪ್ಪಾಗುವುದು. ಶೇಕ್ಸ್‌ಪಿಯರನ ಜ್ಞಾನ ಭಂಡಾರವು ಕೇವಲ ೨೪ ಸಾವಿರ ಶಬ್ದಗಳ ವರೆಗೆ ಸೀಮಿತವಾಗಿತ್ತು. ಪಾದ್ರಿ, ಡಾಕ್ಟರ್ ಮತ್ತು ವಕೀಲರು ತಮ್ಮ ವೃವಹಾರದಲ್ಲಿ ಮೇಲಿಕೆಗೆ ಮಾಡಿದರೂ ಹೆತ್ತು ಸಾವಿರ ಶಬ್ದಗಳಿಗಿಂತ ಹೆಚ್ಚು ಶಬ್ದಗಳನ್ನು ಬಳಸಲು ಅಶಕ್ತರಾಗಿದ್ದಾರೆ.

ಪ್ರತ್ಯೇಕ ಶಬ್ದಕ್ಕೂ ತನ್ನದೇ ಆದ ಇತಿಹಾಸವಿರುತ್ತದೆ ಮತ್ತು ಹೆಚ್ಚಿನ ಶಬ್ದಗಳಲ್ಲಿ ಅವುಗಳನ್ನು ನಿರ್ಮಿಸಿದವರ ಜೀವನದ ಅಚ್ಚು ಸಹ ಒತ್ತಲ್ಪಡುತ್ತದೆ.

ಆಂಗ್ಲ ಭಾಷೆಯ ಪ್ರಕಾಂಡ ಪಂಡಿತ ಮತ್ತು ಆದ್ಯ ಶಬ್ದಕೋಶಕಾರ ಡಾ. ಜಾನ್ಸನರು ಸ್ವರಚಿತ ಶಬ್ದಕೋಶದಲ್ಲಿ ಕೊಟ್ಟ, "ಪೆನ್ಶನ್" ಶಬ್ದದ ಪರಿಭಾಷೆಯು, ಉಕ್ತವೈಷ್ಟಿಯಿಂದ ವಿಚಾರಣೀಯವಾಗಿದೆ. ಜಾನ್ಸನರಿಂದ ಮಾತಾಡಲ್ಪಟ್ಟ ಅದರ ಅರ್ಥ ಈ ರೀತಿಯಾಗಿದೆ— "ಸಾಧಾರಣವಾಗಿ ಯಾವನೇ ಒಬ್ಬ ಶಾಸಕನು ತನ್ನ ಸೇವಕನಿಗೆ ಸ್ವದೇಶಕ್ಕೆ ಪ್ರತಿಯಾಗಿ ದ್ರೋಹ ಮಾಡಿ ರಾಜಭಕ್ತನಾದುದಾ ಉಪಲಕ್ಷ್ಯದಲ್ಲಿ ಕೊಡುವ ವೇತನ."

ಇಟಲಿಯಲ್ಲಿ ಮೂವನೆಯ ಜಾರ್ಜನು ಅಧಿಕಾರದ ಗದ್ದುಗೆಯನ್ನೇರಿದಾಗ ಅವನು ಡಾಕ್ಟರ್ ಜಾನ್ಸನರಿಗೆ ವಾರ್ಷಿಕ ಮೂರುನೂರು ಪೌಂಡು ಪೆನ್ಶನ್ ಕೊಡಲು ಒಪ್ಪಿದನು. ಜಾನ್ಸನನು ಈ ಪ್ರಸ್ತಾಪದಲ್ಲಿ ಕಿಂಕರ್ತವ್ಯತಾ ಮೂಢನಾದನು. ಅನನೊಬ್ಬ ನಿಷ್ಕಾಮಂತ ಜೋರಿಯಾಗಿದ್ದ. ಹನೋವರ್ ನ ರಾಜ ಮನೆತನದವರ ವೈಷಮ್ಯವೂ ದೇಶದಿಂದ ಪಿಷ್ಟಾಸಿತ ಸ್ಯೂ ಆರ್ಟ್‌ರ್ ಸಮರ್ಥಕನೂ ಆಗಿದ್ದುದರಿಂದ ಅವನು ಪೆನ್ಶನ್ ಪಡೆಯುವ ಜನರನ್ನು ತಿರಸ್ಕಾರ ಭಾವನೆಯಿಂದ ನೋಡುತಿದ್ದನು.

ಕೊಟ್ಟ ಕೊನೆಗೆ ಡಾಕ್ಟರ್ ಸಾಹೇಬನಿಗೆ ತರ್ಕ ವಿತರ್ಕಗಳ ಮೂಲಕ, ಪೆನ್

(ಉಳಿದ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. **MANGALORE.** Estd: **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ-

ಬೇಡವಾದ ಬದುಕು

ಶ್ರೀ. ಕೆ. ಜಯರಾಮು ಶೆಟ್ಟಿ.

ಶ್ರಾವಣ ಮಾಸದ ಕೃಷ್ಣಪಕ್ಷದ ಕೊನೆಯ ದಿನ. ಎಲ್ಲೆಡೆಯೂ ಕಗ್ಗತ್ತಲೆಯು ಕವಿದಿತ್ತು. ಪಕ್ಷಿಗಳು ತಮ್ಮ ಜೀವನ ಹೋರಾಟದಲ್ಲಿ ಒಂದು ದಿನವನ್ನು ಕಳೆದು ಅದರಲ್ಲಿ ತಮ್ಮ ಗಾಲಿಗೊದಗಿದ ಸುಖದುಃಖವನ್ನು ಅನುಭವಿಸಿ ಗೂಡು ಸೇರಿ ಸುಖನಿದ್ರೆಯನ್ನು ಗೆಯ್ಯುತಿದ್ದುವು. ಪ್ರಕೃತಿಯು ರಾತ್ರಿಯ ನೀರವತೆಗಳಲ್ಲಿ ಜೀವರಾಶಿಗಳೆಲ್ಲ ಸ್ವಕೃತಿ ಸೂತೆಯ ಮಜ್ಜಿಗೆಯಲ್ಲಿ ನಿದ್ರಿಸಿದ್ದುವು. ಪೈಲೂರ ನೇಲ್ಯಡಿಯ ಒಳಕೋಣೆಯೊಂದರಲ್ಲಿ ಚಿಮಣಿ ದೀಪವು ಮಿಣಿ ಮಿಣಿ ಉರಿಯುತ್ತಲಿತ್ತು. ತುಂಬು ಜೀವನದ ನಡು ಹರೆಯದಲ್ಲಿ ಕಾಲಿಟ್ಟ ಲಲಿತೆ ಅವೇಕೋ ಜೀವನದಲ್ಲಿ ಪೂರ್ಣ ನಿರಾಶಾವಾದಿಯಾಗಿ ಹೃದಯದುರಿಯನ್ನು ತಣಿಸಲಾರದೆ ಮನ ಮನೆಗೆ ಮಂಕಾಗಿ ಅರಮೊರ್ಚಿತಳಾಗಿ ಮಲಗಿದ್ದಳು. ಮಾನವಸಹಜವಾದ ಇಂದ್ರಿಯ ಸುಖವನ್ನಪೇಕ್ಷಿಸಿದ ಮನಸ್ಸಿನ ಹೊಯ್ದಾಟದಲ್ಲಿ ಸಿಲುಕಿ, ಬಹಪ್ರಯತ್ನದಿಂದ ಮಾಡಿದ ಮನೋನಿಗ್ರಹದಿಂದ ತಪ್ಪಿಸಿಕೊಳ್ಳಬಯಸಿದರೂ, ಸಾಧ್ಯವಾಗದೆ ಸಂಕಟಪಡುತ್ತಿದ್ದಳು. ಅತಿಮಾನವರೆನ್ನಿಸಿಕೊಂಡ ಯತಿ ಮಹಾತ್ಮರೂ ಅಪ್ಪಿತಪ್ಪಿ ಪರಿಸ್ಥಿತಿಯ ಒತ್ತಡದುರುಳಿಗೆ ಕತ್ತನ್ನೊಡ್ಡಿ ತಾವೂ ಸಾಮಾನ್ಯ ಜನರಂತೆ ಕ್ಷಣಿಕ ದೈಹಿಕ ಸುಖವನ್ನಪೇಕ್ಷಿಸಿ ಸಂಸಾರ ಬಂಧನದಿಂದ ವಿಮುಕ್ತರಾಗಲು ಅಸಾಧ್ಯರಾಗಿ ತಮ್ಮ ಸೋಲನ್ನೊಪ್ಪುವಾಗ, ತೀರ ಸಾಮಾನ್ಯಳಾದ ಲಲಿತೆಗೂ ಆ ಸ್ಥಿತಿಯು ಬಂದೊದಗಿದುದರಿಂದ ಆಕೆ ರೋದಿಸುತಿದ್ದರೆ ಅದರಲ್ಲಿ ಅತಿಶಯವಿಲ್ಲ. ಕೈಯೊಳಗಿನ ತುತ್ತು ಬಾಯಿಗಿಡಬಾರದಂತಹದೊಂದು ಪ್ರಸಂಗ ಅವಳ ಜೀವನದಲ್ಲಿ ಬಂದಿತ್ತು.

ಶ್ರೀಮಂತ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ಲಲಿತೆ ಬಾಲ್ಯದಲ್ಲೇ ತನ್ನ ಮಾತಾಪಿತರುಗಳನ್ನು ಕಳೆದುಕೊಂಡ ತಬ್ಬಲಿಯಾಗಿ ತನ್ನ ಸೋದರ ಮಾವನ ಸಾಕು ಮಗಳಾಗಿ ಒಕ್ಕಿದಳು. ಸುಶಿಕ್ಷಿತರಾದರೂ ವಿಚಾರವಂತಳಾಗಿ ಜೀವನದ ಫೈಜಾದರ್ಶಗಳನ್ನರಿತ ಆದರ್ಶ ಮಹಿಳೆಯಾಗಿದ್ದಳು. ಆದರಿಂದ ತನ್ನ ಮಾವನ ಕೃಪಾಪೋಷಿತಳಾಗಿ ಕಕ್ಕ ವೇಳೆಯಲ್ಲಿಯೇ ಯೋಗ್ಯ ವರನನ್ನು ಪಡೆದು ಗೃಹಿಣಿಯಾದಳು. ಗೋಪಾಲನು ಬಡ್ಯ, ಗೋಚರದಲ್ಲಿ ಆಕೆಯ ರೂಪಲಾವಣ್ಯಗಳಿಗೊಪ್ಪುವ ವರನಾಗಿದ್ದರೂ ಅವನು ಲಲಿತೆಯನ್ನು ವರಿಸಿದ ವಿಚಾರವೊಂದು ನಿಮಿತ್ತ ಮಾತ್ರವಾಗಿತ್ತು. ಆತನನ್ನು ವರಿಸಿದ ತಪ್ಪಿಗಾಗಿ ಯಾರಿಂದಲೂ ನಿವಾರಿಸಲಾಗದೊಂದು ಮಾನಸಿಕ ಹಾಗೂ ದೈಹಿಕ ವೇದನೆಯನ್ನು ಕೊನೆತನಕವೂ ಅನುಭವಿಸಲೇಬೇಕಾದ ಸಂಗತಿ ಅವಳಿಗೆ ಕೆಲ ದಿನಗಳ ಹಿಂದೆ ತಿಳಿದುಬಂದಿತ್ತು. ದೈವವೇ ಮುನಿದಿರುವಾಗ, ಇದಿಂದ ಏನು ಮಾಡಲು ಸಾಧ್ಯ? ಏನೋ ಪೂರ್ವ ಜನ್ಮದ ಋಣಾನು ಬಂಧದಿಂದ ಗೋಪಾಲ ಲಲಿತೆಯ ಕೈಹಿಡಿದಿರಬೇಕಲ್ಲದೆ, ತನ್ನ ದೈಹಿಕ ಪ್ರಕೃತಿಗನುವಾಗಿ ಹೊಂದಿ ಬಾಳುವುದಿದ್ದರೆ, ಆತನಿಗೆ ಹೆಣ್ಣಿನ ಸಂಗರ್ವವನ್ನು ಇಚ್ಛಿಸುವ ಸ್ವಯೋಗವಿದ್ದಿರಲಿಲ್ಲ. ವಿಕಾರರೂಪ್ಯನಾದಾತ ಮದುವೆಯಾಗುವುದೂ ಒಂದು ಪುರುಷತ್ವ, ಆದರಿಂದ ಸಮಾಜದಲ್ಲಿ ತಾನೇನೂ ಗೌರವಾಸ್ಪದ ವ್ಯಕ್ತಿಯಾಗುವೆನೆಂದು ನಂಬಿಕೊಂಡಿದ್ದನು. ಹೆಣ್ಣಿನ ಕಡೆಯಿಂದ ಸಾಕಷ್ಟು ಧನ ದಾನವಾಗಿ ಸಿಗುತ್ತದೆಯೆನ್ನುವಾಗ ಯಾವ ಗಂಡು ತಾನೇ ಮದುವೆಗೆ ಹಿಂದಾನು? ಸುಧಾರಿತ ಸಮಾಜದಲ್ಲಿ ಮದುವೆಯೂ ಒಂದು ವ್ಯಾಪಾರವ ಮಟ್ಟಕ್ಕಿಳಿದಿರುವಾಗ, ನ್ಯಾಯಾನ್ಯಾಯಗಳನ್ನು ಕೇಳುವವರಾರು? ಇದರಿಂದಾಗಿಯೇ ಗೋಪಾಲ ಲಲಿತೆಯರ ವಿವಾಹ ನಡೆದು ಹೋಗಿತ್ತು.

ಲಲಿತೆ ತನ್ನ ಪತಿಯೊಂದಿಗೆ ಸಂಸಾರ ಸುಖವನ್ನು ಅನುಭವಿಸಲು ಕಾಲಿಟ್ಟು ಆರೇಳು ವರುಷಗಳು ಸಂದುಹೋಗಿದ್ದುವು. ಈವರೆಗೆ ಇವರೀರ್ವರೂ ಪ್ರೇಮಾನುಬಂಧವಾಗಿ ಯಾವುದೇ ವಿಧವಿಲ್ಲೂ ಸೇರಿ ಬಾಳ್ವೆ ಮಾಡಿ ಸುಖಿಸಲಿಲ್ಲ. ಪತಿಯೇ ಪತಿಗೆ ಪರದೈವ ಎಂಬುತ್ತಿಗನ್ನರಿತು ಲಲಿತೆ ತನ್ನ ಗಂಡನನ್ನು ಎಷ್ಟೋ ಬಾರಿ ಹಲವೆಡೆಯಲ್ಲಿ ಓಲೈಸಿಕೊಳ್ಳಲು ಯತ್ನಿಸಿದರೂ ಅದು ಫಲಕಾರಿಯಾಗಲಿಲ್ಲ. ತನ್ನ ಪತ್ನಿಯ ಕಡೆಗೆ ಆತ ಅನಾದರವನ್ನೇ ತೋರಿಸಿದ್ದ. ದೇಹಸಂಬಂಧವಾದ ಯಾವುದೇ ಸುಖವನ್ನಿತ್ತು ಸಂತುಷ್ಟಿಗೊಳಿಸುವಷ್ಟು ಸಮರ್ಥನಾಗಿರಲಿಲ್ಲವೆ. ಅವನ ಪಾಲಿಗೂ ದೈವ ಮುನಿದಿತ್ತು!

ಲಲಿತೆ ತನ್ನ ಪತಿಯ ಸಹವಾಸವನ್ನು ಬಯಸಿದಷ್ಟೇ ಆತ ಅವಳನ್ನು ದೂರ ಮಾಡುತಿದ್ದ. ಪ್ರೇಮವೆಂದರೆ, ಎರಡು ಹೃದಯಗಳು ಎರಡು ಆತ್ಮಗಳು ಕನ್ನಡಿಯಲ್ಲಿ ಕನ್ನಡಿಯಂತೆ ಪರಸ್ಪರ ಪ್ರತಿಬಿಂಬಿಸಿ ಕಾದುದು ತಾನು ನೇರಲಿಚ್ಚಿಸುವ ಪ್ರೇಮಯ ಹೃದಯ ಸಾಮೀಪ್ಯಕ್ಕಾಗಿ ಇನ್ನೊಂದು ಹೃದಯವೂ ಹಂಬಲಿಸುತ್ತಿರಬೇಕು. ಪರಸ್ಪರ ಮಿಲನವನ್ನಾಶಿಸುತ್ತಿರುವಲ್ಲಿ ಸರ್ವ ತ್ಯಾಗಕ್ಕೂ ಸಿದ್ಧವಿರಬೇಕು. ಆದರೆ, ಲಲಿತೆ ಗೋಪಾಲರ ಜೀವನದಲ್ಲಿದು ತಿರುವು ಮುರುವಾಗಿತ್ತು. ತನ್ನ ಪತಿಯು ಯಾವ ಕಷ್ಟವನ್ನೇ ಕೊಡುತ್ತಿದ್ದರೂ, ಅದನ್ನು ಲಲಿತೆ ಸಹಿಸುವ ಮನೋಶಾಲಿಯಾಗಿದ್ದಳು. ಆದರೆ, ಆಕೆಯ ಈ ಮಾನಸಿಕ ಕಷ್ಟಗಳನ್ನು ಯಾರು ಏನಾರಿ ಸಬಲ್ಲರು? ಪೆಟ್ಟೆಲ್ಲದ ನೋವಾಕೆಯನ್ನು ಪೂರ್ಣ ನಿರಾಕಾಮ ಗಾಂಭೀರದಲ್ಲಿ ಕಡಹಿತ್ತು. ತನ್ನ ಪತಿಯನ್ನು ತಾನೆಷ್ಟು ಒಲಿಸಿಕೊಂಡು ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬಯಸಿದರೂ ಅದಿದುವರೆಗೂ ಫಲಪ್ರದವಾಗಿಲ್ಲ. ಮದುವೆಯಾದಂದಿನಿಂದ ತಾನೊಂದು ದುಡಿತವಳಿಸಿದಂತೆ ಬೇ ಬಾಳ ಬೇಕಾಯಿತಲ್ಲವೆ ತನ್ನಿಚ್ಛೆ ಕೈಗೂಡಲಿಲ್ಲ. ಸಂತಾನಕ್ಕೊಬ್ಬಳೇ ಮಗಳನ್ನಿಸಿದ ಲಲಿತೆ ಈ ವರೆಗೂ ಬಂಜೆಯಾಗಿಯೇ ಉಳಿದಳು ಎಂಬೊಂದು ಚಿಂತೆಯಾಕೆಯ ಮಾನಸವನ್ನೂ ಪೀಡಿಸಿದಿರಲಿಲ್ಲ ಆಕೆಯ ಮಾವ ಸಂತಾನಾಪೇಕ್ಷೆಯಿಂದ ಲಲಿತೆಗಾಗಿ ಹತ್ತು ಹರಕೆ ಕೊತ್ತರು. ಆದರೆ ದೇವರ ಕಣ್ಣು ತೆರೆಯಲಿಲ್ಲ.

ಲಲಿತೆ ತನ್ನ ಪತಿಯಲ್ಲಿರುವ ಮೂಲ ದೋಷವೇನೆಂಬುದನ್ನು ಈ ಮೊದಲೇ ಅರಿತಿದ್ದಳು ಆಂತಾಗಿ ಯಾವ ದೇವರಿಂದಲೂ ಬಗೆ ಹರಿಸಲಾರದ ಸಮಸ್ಯೆಯಿದು ಎಂದು ಗೋಪಾಲನು ಸಂಸಾರದ ಗಾಡಿಗೆ ಹೆಗಲೊಡ್ಡಿದರೂ ನಿತ್ಯವೂ ಅವನು ಹೊರಗಿಂದ ಹೊರಗೇನೇ ಕಾಲಯಾಪನೆ ಮಾಡುತಿದ್ದ. ಊಟ ವಸತಿಗಾಗಿಯೇ ಆತ ಮನೆ ಸೇರುತಿದ್ದನಲ್ಲದೆ, ಕಸಗೊಂದು ಮನೆಯಿದೆ ತಾನೂ ಒಬ್ಬ ಸಂಸಾರಿ ಎಂಬ ಜ್ಞಾನವೆಯ ಸುಳಿವೇ ಅತನಲ್ಲಿರಲಿಲ್ಲ. ದುಡಿಯುವ ಜೀವಿಗಳು ದುಶ್ಚಟ ಪ್ರವೃತ್ತರಾಗುವುದು ಸ್ವಾಭಾವಿಕ ಸಮಾಜದಲ್ಲಿ ಈ ತೆರನಾದ ದರಿದ್ರ್ಯಾಸದ ಗಂಡಾಡುಗೆ ತೆಟ್ಟು ಮೆರೆದಾಡುವ ಗಣ್ಯ ಮನೆತನದವರ ಸಂಸರ್ಗಿಯೂ ಗೋಪಾಲನಾಗಿದ್ದ. ಸಾವದಕ್ಷಿಣೆಯಾಗಿ ಬಂದ ಸಹಸ್ರಾರು ರೂಪಾಯಿಗಳನ್ನು ನೀರಿನಂತೆ ಖಂತಹವರ ಗೌರವಾರ್ಥವಾಗಿ ವೆಚ್ಚಮಾಡಿದ್ದ. ಕಿಸೆ ತುಂಬ ಕಾಸಿದ್ದಾಗ, ಬೆನ್ನ ಹಿಂದೆ ಒರುವ ಗೆಳೆಯರಿಗೂ ಏನೂ ಕಡಿಮೆಯಿದ್ದಿಲ್ಲ. ದುರ್ವ್ಯಸನಾಯಾದ ಗೋಪಾಲನು ಮನೆಯ ವಿಷಯದಲ್ಲಿ ನಿರ್ಲಕ್ಷ್ಯನಾಗಿದ್ದ. ಗೋಪಾಲನ ಪೂರ್ಣ ಇತಿವೃತ್ತವನ್ನರಿತ ಲಲಿತೆಗೆ ತನ್ನ ಬಾಳಿನಲ್ಲಿಯೇ ವೈರಾಗ್ಯವುಂಟಾಯಿತು. ಎಷ್ಟೇ ರಾತ್ರಿಯಾಗಿ ಗೋಪಾಲ ಮನೆಗೆ ಬಂದರೂ ಲಲಿತೆ ಅವನಲ್ಲಿ ಒಂದಿಷ್ಟು ಬೇಸರವನ್ನು ತೋರ್ಪಡಿಸದೆ ಆತನೊಡನೆ ಸರಸವಾಡಲೆತ್ನಿಸುತಿದ್ದಳು. ಆದರೆ, ಗೋಪಾಲ ಅವಳ ಮಾತಿಗೆ ಸರಿಯಾದ ಉತ್ತರವನ್ನೇ ಕೊಡುತ್ತಿರಲಿಲ್ಲ. ಆಕೆಯ ಬಗೆಬಗೆಯ ಉಪಚಾರವನ್ನು ಸ್ವೀಕರಿಸಿ ಮಲಗಿ ಬಿಡುತಿದ್ದ. ಪ್ರತಿನಿತ್ಯ ಶಯ್ಯಾಗೃಹಕ್ಕೆ ಬಂದು ಮಲಗಿದ ಪತಿಯನ್ನೇ ಹಸುದ ಹೆಬ್ಬುಲಿಯಂತೆ ದೃಷ್ಟಿಸುತಿದ್ದಳು ಲಲಿತೆ.

ಪ್ರಣಯ ಭಿಕ್ಷೆಯನ್ನು ಬೇಡಿದಾಗಲೂ ಆಪತ್ತನ್ನು ತಿರಸ್ಕರಿಸಿದಾಗ ತನ್ನ ಬಾಳ್ವೆಯನ್ನು ಕೊನೆಗೊಳಿಸಬೇಕೆಂಬ ನಿರ್ಧಾರಕ್ಕೆ ಬಂದಳು ಲಲಿತೆ. ಇಂದ್ರಿಯ ಜಾಡ್ಯವೆಯು ಎಂಥವರನ್ನೂ ಅಧೋಗತಿಗಿಳಿಸುತ್ತದೆ. ಎಷ್ಟೇ ಆರಿತವರೂ ಈ ಸಂದರ್ಭದಲ್ಲಿ ವಿವೇಕವನ್ನು ಕಳೆದುಕೊಳ್ಳುತ್ತಮೆಂಟು. ಪ್ರಾಜ್ಞರಿಗೆಯೂ ಹೀಗೆದವರಿಂಟು. ಲಲಿತೆ ಈ ಮಾತಿಗೆ ಅಪವಾದವಾಗಿರಲಿಲ್ಲ.

ಎಂದಿನಂತೆ ಗೋಪಾಲನು ನಿದ್ರಾಂಗನೆಯ ವರನಲ್ಲಿ ಮನಸೋತು ಮಲಗಿದ್ದನು. ಮಗ್ಗುಲಲ್ಲೇ ಲಲಿತೆ ಗಲ್ಲಕ್ಕೆ ಕೈಯಿಟ್ಟುಕೊಂಡು ಕುಳಿತಿದ್ದಳು. ಮದುವೆಯಾದ ಕಾಲತಾನು ಪತಿಯಿಂದ ಪಡೆಯಬೇಕಾದ ಸುಖದ ಸವಿಗನಸನ್ನು ನೆನೆನೆನೆದು ನುರುಗತಿದ್ದಳು. ಅವಳ ಇಂದಿನ ಯೋಚನೆಯು ಕನಸಿನನುಂಡಿಗೆಯಾಯಿತೇ ಹೊರತು, ಹೊಂದಿಬರಲಿಲ್ಲ. ತನ್ನ ಬಾಳಿನ ಬಯಕೆ ಎಂದೂ ಈಡೇರುವ ದಾರಿ ಕಾಣದವಳಾದಾಗ ಗರಿಮುರಿದ ಹಕ್ಕಿಯಂತೆ ಚಡಪಡಿಸಿ ಬದಿಸು ಬಾಗಿಲಿಗೊರಗಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಕಣ್ಣುಗಳೆಂದೂ ಧಾರಾಕಾರವಾಗಿ ನೀರಿಳಿಯುತಿತ್ತು. ಅಶ್ರಧಾರೆಯಿಂಮಟ್ಟಿಟಿ, ಕೊಯ್ದುಹೋಗಿತ್ತು, ಕಾಲ-ಗಳರಿವನ್ನೂ ನೀಳವಾಗಿ ಹೀಡಿ ಮುದುಡಿದ ಮುಖವನ್ನು ಸೀರೆಯ ನೆರಿಗೆಯಿಂದ ಮುಚ್ಚಿಕೊಂಡು ರೋದಿಸುತಿದ್ದಳು. ಗಳಗಳಗೊಮ್ಮೆ ಏನೋ ನೆನಪಾದವಳಂತೆ ಎದ್ದು ಬಂಗಿಲಬಳಿ ಬಂದು ಹೊರಗಣಿಕೆ ನೋಡುತಿದ್ದಳು.

ಮಧ್ಯರಾತ್ರೆಯ ಹೊತ್ತಾಗಿರಬಹುದು.

(ಇನ್ನೆಯ ಪುಟ ನೋಡಿರಿ)

ರುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಜ್ವರ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಜೈತನ್ಯವನ್ನೂ ಕೊಡುತ್ತದೆ. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉತ್ತುಸಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉತ್ತುಸಿ,

ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾವೋದರ & ಕೊ,

ಮದ್ರಾಸ್—3.



ನಿನಗೆಷ್ಟು ಅಧಿಕಾರವಿದೆ, ತಿಳಿದಿದೆಯೆ?

ಮಾನವನ ಹಕ್ಕು ಬಾಧ್ಯತೆಗಳು

ಈ ತಿಂಗಳ ಹತ್ತನೆಯ ದಿನಾಂಕದಂದು ಮಾನವ ಹಕ್ಕು ಬಾಧ್ಯತೆಗಳ ಸಾರ್ವತ್ರಿಕ ಘೋಷಣೆಯ ಒಂಭತ್ತನೆಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈ ದಿನವು ಭಾರತಕ್ಕೆ ವಿಶೇಷವಾಗಿ ಸಂಬಂಧಪಡುತ್ತದೆ ಏಕೆಂದರೆ, ನಮ್ಮ ದೇಶದಲ್ಲಿ ಹಿಂದೆ ಅಶೋಕನೂ ಇತ್ತೀಚೆಗೆ ಮಹಾತ್ಮಾ ಗಾಂಧೀಯವರೂ ತಮ್ಮ ಉಪದೇಶದಲ್ಲಿ ಈ ಮಾನವ ಹಕ್ಕು ಬಾಧ್ಯತೆಗಳ ರಕ್ಷಣೆಯನ್ನು ಕುರಿತಾಗಿ ಜೋಡಿದ್ದರು.

ಮಾನವನ ಹಕ್ಕು ಬಾಧ್ಯತೆಗಳು ಬಹುಸಾನದ ಕವಸಾತ್ತು. ಶತಶತಮಾನಗಳ ಕಾಲದಿಂದಲೂ ಸಂತರು, ಕವಿಗಳು, ದಾರ್ಶನಿಕರು ಮತ್ತು ರಾಜಕಾರಣಿಗಳು ತನ್ನು ಸಂಕುಚಿತ ಸಾಮಾಜಿಕ ವಾತಾವರಣಗಳ ಗಡಿಗಳನ್ನು ದಾಟಿ ಹೊರಬಂದು ಮಾನವರು ಸರಿಸಮಾನರು ಎಂಬ ಬಗೆಗೆ ವಿಚಾರಧಾರೆಗಳನ್ನು ಹರಿಸಿರುವರು ಎರಡು ಸಾವಿರದ ಏಸೂರು ವರ್ಷಗಳ ಹಿಂದೆ ಚೀನಾದೇಶದ ಸಂತನಾದ ಕನ್‌ಫ್ಯೂಷಿಯಸ್‌ನು ತನ್ನ ಉಪದೇಶದಲ್ಲಿ ಮಾನವ ಸಮಾನ ಧರ್ಮಗಳನ್ನು ನಿರೂಪಿಸಿದ್ದನು ಇದೇ ತತ್ವವನ್ನು ಅನೇಕ ದಾರ್ಶನಿಕರು ಪ್ರತಿಪಾದಿಸಿರುವರು ನಮ್ಮ ದೇಶದಲ್ಲಿ ಅಶೋಕ ಚಕ್ರವರ್ತಿಯು ಮಾನವ ಹಕ್ಕು ಬಾಧ್ಯತೆಗಳನ್ನು ನಿರೂಪಿಸುವ ಶಾಸನಗಳನ್ನು ಕಲ್ಲು ಬಂಡೆಗಳ ಮೇಲೂ ಕಂಬಗಳ ಮೇಲೂ ಕೆತ್ತಿಸಿದ್ದನು. ಪ್ರಶ್ಚಾತ್ಯ ರಾಷ್ಟ್ರಗಳಲ್ಲಿ ಸಂವಿಧಾನದ ಕಾಗದ ಪತ್ರಗಳಲ್ಲಿ ಈ ಧ್ಯೇಯವನ್ನು ಅಳವಡಿಸಿದ್ದುದು 'ಮೇಗ್ನಾಕಾರ್ಟಾ' ಮತ್ತು 'ಅಮೆರಿಕನ್ ಬಿಲ್ ಆಫ್ ರೈಟ್ಸ್'ಗಳ ದಾಖಲೆಗಳಿಂದ ವ್ಯಕ್ತವಾಗುವುದು.

ಗತಶತಮಾನದಲ್ಲಿ ಮಾನವ ಹಕ್ಕು ಬಾಧ್ಯತೆಗಳ ವಿಷಯದ ಚರ್ಚೆಯಿಂದ ಅಂತಾರಾಷ್ಟ್ರೀಯ ಸಂಸ್ಥೆಗಳ ಗಮನ ಹರಿಯಿತು. ಪ್ರಪಂಚ ಸಂಸ್ಥೆಯ ಶಾಸನದ ನಿಬಂಧನೆಯಲ್ಲಿ ಮಾನವ ಹಕ್ಕು ಬಾಧ್ಯತೆ ಮೂಲ ಭೂತ ಸ್ವಾತಂತ್ರ್ಯ ಮತ್ತ ಗೌರವವನ್ನು ಸಂರಕ್ಷಿಸಿ ಉತ್ತೇಜನಗೊಳಿಸಲು ಹೊಸ ಪ್ರಪಂಚ ಸಂಸ್ಥೆಯೊಂದು ಇರಬೇಕೆಂದು ಕೂಡಿಸಲಾಗಿದೆ ಈ ಪ್ರಣಾಳಿಕೆಯು ಉತ್ತೇಜನಗೊಳಿಸಬೇಕಾದ ಹಕ್ಕು ಬಾಧ್ಯತೆಗಳನ್ನು ನಿರೂಪಿಸಲಿಲ್ಲ

ಶ್ರೀಮತಿ ಫ್ರಾಂಕ್ಲಿನ್ ಡಿ. ರೂಸವೆಲ್ಟ್ ರವರ ನೇತೃತ್ವದಲ್ಲಿ ಮಾನವ ಹಕ್ಕು ಬಾಧ್ಯತೆಗಳ ಸಾರ್ವತ್ರಿಕ ಘೋಷಣೆಯನ್ನು ಸಿದ್ಧಗೊಳಿಸುವ ಹೊಣೆಗಾರಿಕೆಯನ್ನು ಪ್ರಪಂಚ ಸಂಸ್ಥೆಯ ಕಮಿಷನ್ನಿನವರಿಗೆ ವಹಿಸಿಕೊಡಲಯಿತು. ಅದನ್ನು ೧೯೪೮ರ ದಶಂಬರ ೧೦ನೆ ತಾರೀಕಿನಂದು ಪ್ರಪಂಚ ಸಂಸ್ಥೆಯ ಸರ್ವ ಸದಸ್ಯರ ಸಾಮೂಹಿಕ ಸಭೆಯು ತನ್ನ ಪೇರೀಸ್ ಅಧಿವೇಶನದಲ್ಲಿ ಆಗೀಕರಿಸಿತು ಈ ಘೋಷಣೆಯು ಕಲಪೊಂದು ತತ್ವಗಳ ನಿರೂಪಣೆಯಾಗಿತ್ತು ಅದನ್ನನುಸರಿಸಿ ಮಾನವ ಹಕ್ಕು ಬಾಧ್ಯತೆಗಳ ಸಂಬಂಧವಾದ ಅಂತಾರಾಷ್ಟ್ರೀಯ ಒಡಂಬಡಿಕೆಯನ್ನು ರೂಪಿಸಲಯಿತು

ಸಾರ್ವತ್ರಿಕ ಘೋಷಣೆಯಲ್ಲಿರುವ ಮಾನವ ಹಕ್ಕು ಬಾಧ್ಯತೆಗಳ ಅಂಶಗಳು ಅದರ ವ್ಯಾಪ್ತಿನಿಧಿಕ ಸಂಸ್ಥೆಗಳಷ್ಟೇ ನಡೆಸುತ್ತಿಲ್ಲ ಇಂದು ಮಾನವನ ಜೀವನವನ್ನು ತಿದ್ದಿ ರೂಪಿಸುವ ಸಂಸ್ಕೃತಿ ವತ್ತು ನಾಗರಿಕತೆಯು ಎಲ್ಲ ಪ್ರಧಾನಗಳೂ ಮತ್ತು ರಾಜ್ಯಸರಕಾರಗಳೂ ಈ ಕೆಲಸವನ್ನು ನಡೆಸಿತ್ತಿವೆ. ಈ ಘೋಷಣೆಯಲ್ಲಿ ನಿರೂಪಿಸಲಾಗಿರುವ ಸ್ವಾತಂತ್ರ್ಯ ಮತ್ತು ಹಕ್ಕು ಬಾಧ್ಯತೆಗಳ ಮನ್ನಣೆಯಲ್ಲಿ ಟೋಧೆ ವತ್ತ ಶಿಕ್ಷಣದ ಮಹತ್ವವನ್ನು ಸರ್ವಸದಸ್ಯರ ಸಮಿತಿಯು ಒತ್ತಿ ಹೇಳಿದೆ ಈ ಘೋಷಣೆಯ ೩೭ ಮತ್ತು ೨೬ನೆಯ ನಿಬಂಧನೆಗಳು ಶಿಕ್ಷಣ ಹಾಗೂ ಸಮಾಜದ ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುವ ಸ್ವಾತಂತ್ರ್ಯಕ್ಕೆ ಸಂಬಂಧಪಡುವುವು. ಅವು ಮಹತ್ವದ ನಿಬಂಧನೆಗಳೆಂದು ಪುನರುಚ್ಚರಿಸಬೇಕಾಗಿಲ್ಲವೆ

ಪ್ರಪಂಚ ಸಂಸ್ಥೆಯ ಅಂಗ ಸಂಸ್ಥೆಗಳಲ್ಲೆಲ್ಲಾ ಯುನೆಸ್ಕೋ ಸಂಸ್ಥೆಯು ಮಾನವ ಹಕ್ಕು ಬಾಧ್ಯತೆಗಳ ಉತ್ತೇಜನದಲ್ಲಿ ಮಹತ್ತರವಾದ ಪಾತ್ರ ನಿರ್ವಹಿಸಿದೆ, ಭಾರತವೂ ಮಾನವ ಹಕ್ಕು ಬಾಧ್ಯತೆಗಳ ಅಭಿವೃದ್ಧಿ ಕಾರ್ಯದಲ್ಲಿ ಗಮನಾರ್ಹವಾದ ನರಪ್ರ ನೀಡಿದೆ ಪ್ರಪಂಚ ಸಂಸ್ಥೆ ಹಾಗೂ ಅವರ ವಿಶೇಷ ಸಂಸ್ಥೆಗಳಲ್ಲಿರುವ ಭಾರತೀಯ ಪ್ರತಿನಿಧಿಗಳು ಅನೇಕ ಸಂದರ್ಭಗಳಲ್ಲಿ ಮಾನವ ಹಕ್ಕು ಬಾಧ್ಯತೆಗಳ ವಿಷಯದಲ್ಲಿ ಅಗ್ರ ಪಜ್ಞ್ಯವನ್ನು ಪಡೆದಿರುವರು. ಭಾರತದರ ಜ್ಯಾತ್ಯಾಂಗವು ನ್ಯಾಯ, ಸಹಿಷ್ಣುತೆ, ಸರ್ವಾನತೆಗಳೆಂಬ ತತ್ವಗಳನ್ನು ಒತ್ತಿ ಹೇಳುತ್ತಿದೆ ಇವೆಲ್ಲವೂ ಪ್ರಯತ್ನಸತ್ಯವು ತಡವಾಯಗಳಾಗಿ ಮಾನವ ಹಕ್ಕು ಬಾಧ್ಯತೆಗಳನ್ನು ಬಹುತೇಕವಾಗಿ ಕಾರ್ಯರೂಪಕ್ಕೆ ತರಲು ನೆರವಾಗಿದೆ

ನಮ್ಮ ದೇಶದಲ್ಲಿ ಇಂದು ಮಾನವ ಹಕ್ಕು ಬಾಧ್ಯತೆಗಳ ಬಗೆಗೆ ಗೌರವ ಸಲ್ಲಿಸುತ್ತಿರುವುದು ಅಶೋಕನ ಸ್ಮಾರಣೆಯಿಂದಾಗಿಯಲ್ಲ, ಮಹಾತ್ಮಾ ಗಾಂಧೀಜಿಯವರ ಉಪದೇಶದ ಪರಿಣಾಮವಾಗಿ ೧೯೬೨ನೇ ತಿಂಗಳಲ್ಲಿ ಯುನಸ್ಕೋದ ಡೈರೆಕ್ಟರ್ ಜನರಲ್‌ರವರಿಗೆ ಒರೆದ ಒಂದು ಪತ್ರದಲ್ಲಿ ಮಹಾತ್ಮಾ ಗಾಂಧಿಯವರು ಮಾನವ ಹಕ್ಕು ಬಾಧ್ಯತೆಗಳ ಮೂಲ ಭೂತ ತತ್ವಗಳನ್ನು ಸ್ಪಷ್ಟಪಡಿಸಿರುವರು.

ಅದೇ ನೀ ನೀರಲಿ, ಮಾನವನಾಗಿ ಹುಟ್ಟಿದವನು ತನ್ನ ಹಕ್ಕು ಬಾಧ್ಯತೆ ಹಾಗೂ ಕರ್ತವ್ಯಗಳೇನೆಂಬುದನ್ನು ತಿಳಿದುಕೊಳ್ಳುವುದತ್ಯ ಇವಿಲ್ಲದೆ ಹೋದರೆ, ಮಾನವತೆಯುಲ್ಲ ಒಂದುರುವ ಕಾರಣೆಯಾಗಿಯೇ ಹೋಗುವುದು ಆದ ದಿಂದ ಎಲ್ಲ ಮಾನವರೂ ಈ ಕಡೆಗೆ ವಿಶೇಷ ಗಮನವನ್ನೀಯಬೇಕಾಗಿದೆ

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ

O S No 355/1957

ಸೈಂದ ಭಂಡಾರಿ —ವಾದಿ

ಮತ್ತು

1 ತಿರ್ಮಲೆ ಹೆಂಗಸು, 2 ಅಪ್ಪಯಿ ಹೆಂಗಸು 3 ಮಾಣಿ ಹೆಂಗಸು, 4 ಮಾರಪ್ಪ ಭಂಡಾರಿ, 5 ಅಚ್ಚಪ್ಪ ಭಂಡಾರಿ—ಪ್ರತಿವಾದಿರು

ಮೇಲಿನವರಿಗೆ–

ಸದರಿ ದಾವೆಯು ನಿಮ್ಮ ಪ್ರತಿವಾದಿ ಮಂಗಳೂರು ತಾಲ್ಲೂಕು ಆರ್ಕಳ ಗ್ರಾಮದಲ್ಲಿರುವ ಬಾಲಮ್ಮ ಹೆಂಗ್ಸಿನ ಮಗಳು ಅಬ್ಬಯಿ ಹೆಂಗ್ಸಿಗೆ—

ವಾದಿಯು ಆತಗೆ ಬರತಕ್ಕ ಸಲುವಳಿಕೆ ಬಾಕಿ ಮತ್ತು ಹುಟ್ಟುವಳಿ ಸಮೇತ ಪ್ಲೆಂಟು B ಶೆಡ್ಯೂಲಿನಲ್ಲಿ ವಿವರಿಸಿರುವ ಆಸ್ತಿ ಸ್ವಾಧೀನತೆ ಕೇಳಿ ನಿಮ್ಮ ಮೇಲೆ ಕೂಡಾ ಮಾಡಿದ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 6-1-1958ನೇ ಬೆಳಿಗ್ಗೆ 10 ಗಂಟೆಗೆ ಕೋರ್ಟಿನಲ್ಲಿ ಇಟ್ಟಿರುವದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಸೀನತೆಯು ಯಾರಿಂದಲ್ಲಿ ನೀವು ಸದರ ತಾರೀಕಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳದಿದ್ದರೆ ಆಗಿಯೂ ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬವಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಿ ಸೂಚಿಸಲಾಗುತ್ತದೆ

ಕಾರ್ಕಳ, 12-12-1957

S Rajagopalachar,
Advocate for Plaintiffs

ಕೆನರಾ ಬ್ಯಾಂಕ್ ಲಿಮಿಟೆಡ್

[ಸ್ಥಾಪನೆ: 1906]

ನಿಮ್ಮ ಠೇವಣಾತಿಗಳ ಮೇಲೆ

ಅತ್ಯಧಿಕ ಬಡ್ಡಿ

3% ಫಿಕ್ಸ್‌ಡ್ ಡಿಪಾಸಿಟ್ ಗಳ ಮೇಲೆ

2½% ವರೆಗೆ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್‌ಗಳ ಮೇಲೆ

ಆಲ್ಪಾವಧಿ ಮತ್ತು ನಿಗದಿ ಡಿಪಾಸಿಟ್‌ಗಳ ಮೇಲೆ ಆಕರ್ಷಕ ಬಡ್ಡಿ ದರಗಳು

ಹೆಚ್ಚಿನ ವಿವರಗಳಿಗೆ,

ನಮ್ಮ 61 ಶಾಖೆಗಳಲ್ಲಿ ಯಾವ ಶಾಖೆಗಾದರೂ ಭೇಟಿ ಕೊಡಿರಿ

ವಿಶ್ವದಾದ್ಯಂತ ಪ್ರತಿನಿಧಿಗಳು | ಒಟ್ಟು ಸಾಧನ ಸಂಪತ್ತು 20 ಕೋಟಿಗೂ ಮಿಗಿದೆ

ಬಡ್ಡಿಯ ದರ ಮುಖ್ಯವಾದುದು..... .

ನೀವು ಕೂಡಿಡುವ ಜಾಗವೂ ಕೂಡಾ ಅಷ್ಟೇ ಮುಖ್ಯ

ನಮ್ಮ ಉಡುಪಿಯ ಶಾಖೆ: ಪೋ ಬಾ ನಂ 37, ತೆಂಕಪೇಟೆ, ಉಡುಪಿ.

ಪ್ರಧಾನ ಕಛೇರಿ: ಮಂಗಳೂರು

ಆಡಳಿತ ಕಛೇರಿ: ಬೆಂಗಳೂರು

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಪ್ರಗತಿಪಥದಲ್ಲಿ ಭಾರತ—

ಪ್ರಥಮ ವಿದ್ಯುಚ್ಚಾಲಿತ ರೈಲು

"ಕಬ್ಬಿಣದ ಕುದುರೆ" ಎನ್ನಿಸಿಕೊಂಡ ಆವಿಚಾಲಿತ ರೈಲುಎಂಜಿನ್ ಪ್ರಥಮ ಸಲ ಭಾರತದಲ್ಲಿ ೧೮೫೩ರ ಏಪ್ರಿಲ್ ೧೬ರಂದು ಓಡಿತ್. ಗಂಟೆಗೆ ೧೦ ಮೈಲಿಗಳ ವೇಗದಲ್ಲಿ ಚಲಿಸಿದ ವಿಕಾರರೂಪದ ಈ ರೈಲು ಎಂಜಿನ್ ಮುಂಬೈನಿಂದ ೩೧ ಮೈಲುಗಳ ದೂರದಲ್ಲಿರುವ ತಾಣಾವನ್ನು ಕಲುಪಲು ಎರಡೂವರೆ ಗಂಟೆಗಳ ಸಮಯ ತೆಗೆದುಕೊಂಡಿತು.

೧೯೫೩ರ ಫೆಬ್ರುವರಿ ೩ರಂದು ಪ್ರಪ್ರಥಮ ಸಲ ಭಾರತದಲ್ಲಿ ಆವಿರಹಿತ ವಿದ್ಯುತ್‌ಚಾಲಿತ ರೈಲು ಸಂಚರಿಸಿತು.

ಭಾರತದ ರೈಲ್ವೆಗಳ ಇತಿಹಾಸದಲ್ಲಿ ಮುಂಬೈ-ತಾಣಾ ರೈಲುಮಾರ್ಗವು ವಿಶೇಷ ಸ್ಥಾನವನ್ನು ಪಡೆದಂತೆ ಕಾಣುವುದು. ಏಕೆಂದರೆ ಪ್ರಥಮ ಆವಿಚಾಲಿತ ರೈಲು ೧೮೫೩ರ ಏಪ್ರಿಲ್ ೧೬ರಂದು ಈ ಮಾರ್ಗದಲ್ಲಿ ಸಂಚರಿಸಿತು. ಎಪ್ಪತ್ತು ವರ್ಷಗಳ ನಂತರ ೧೯೨೫ರಲ್ಲಿ ಅದೇ ದಿನಾಂಕದಂದು ಈ ವಿಭಾಗದಲ್ಲಿ ವಿದ್ಯುಚ್ಛಕ್ತಿಯಿಂದ ರೈಲನ್ನು ಓಡಿಸುವ ಬಗ್ಗೆ ವಿದ್ಯುತ್ಪೂರೈಕಾ ಕಾರ್ಯವನ್ನು ಕೈಗೊಳ್ಳಲಾಯಿತು. ೧೯೫೨ರ ಫೆಬ್ರುವರಿ ೩ರಂದು ಮುಂಬೈ ವಿಕ್ಟೋರಿಯಾ ಟರ್ಮಿನಸ್ ರೈಲ್ವೆ ನಿಲ್ದಾಣದಿಂದ ಬಾಜಪ್ತಾ ವರೆಗೆ ಮೈಲಿಗಳ ದೂರದಲ್ಲಿರುವ ಕುರ್ಲಾ ನಿಲ್ದಾಣಕ್ಕೆ ಪ್ರಥಮ ವಿದ್ಯುತ್ ಚಾಲಿತ ರೈಲು ಓಡಿತು.

ಆಗ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಸರ್ ಲೆಸ್ಲಿ ವಿಲ್ಸನ್‌ರವರು ವಿದ್ಯುತ್ ಚಾಲಿತ ರೈಲಿನ ಸಂಚಾರದ ಉದ್ಘಾಟನೆಯನ್ನು ನೆರವೇರಿಸಿದ್ದರು.

ವಿದ್ಯುತ್ ಚಾಲಿತ ರೈಲಿನ ಸಂಚಾರವನ್ನು ೧೯೫೨ರಲ್ಲಿ ಬಾಂದ್ರಾ ವರೆವಿಗೂ, ಮುಂದೆ ತಾಣಾ ಹಾಗೂ ಕಲ್ಯಾಣ್ ವರೆವಿಗೂ ವಿಸ್ತರಿಸಲಾಯಿತು. ೧೯೫೯ರ ನವೆಂಬರ್ ತಿಂಗಳು ಪೂನಾ ನಗರದ ವರೆಗೆ ವಿದ್ಯುತ್ ಚಾಲಿತ ರೈಲಿನ ಸಂಚಾರವನ್ನು ವಿಸ್ತರಿಸುವ ಯೋಜನೆಯನ್ನು ಪೂರ್ಣಗೊಳಿಸಲಾಯಿತು. ೧೯೫೯ರಲ್ಲಿ ಮುಂಬೈ ಮತ್ತು ಇಗತ್‌ಪುರಿಗಳ ನಡುವೆ ರೈಲುಮಾರ್ಗವನ್ನು ವಿದ್ಯುತ್‌ಚಾಲಿತ ರೈಲಿನ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಯಿತು.

ಕೊಲಬಾ (ಮುಂಬೈ)ದಿಂದ ಬಾರಿವ್ಲಿ ವರೆಗಿನ ರೈಲುಮಾರ್ಗವನ್ನು ೧೯೬೦ರ ಜನವರಿ ೫ರಂದು ವಿದ್ಯುಚ್ಛಕ್ತಿಯ ರೈಲು ಮಾರ್ಗವನ್ನಾಗಿ ಮಾರ್ಪಡಿಸಲಾಯಿತು. ಕೊಲಬಾ ಹಾಗೂ ಚರ್ಚ್‌ಗೇಟ್‌ಗಳ ನಡುವೆಯೂ, ಭೂಮಿಯಿಂದ ಎತ್ತರದಲ್ಲಿ ಹಾಕಿರುವ ವಿದ್ಯುಚ್ಛಕ್ತಿಯ ಸಂಬಂಧವಾದ ತಾಮ್ರವನ್ನು ಸರಂಜಾಮುಗಳನ್ನು ಮತ್ತು ಮಾರ್ಗದರ್ಶಿಗಳನ್ನು ೧೯೫೨ರಲ್ಲಿ ತೆಗೆದಹಾಕಲಾಯಿತು. ಚರ್ಚ್‌ಗೇಟ್ ಸ್ಥಳೀಯ ವಿದ್ಯುತ್ ಚಾಲಿತ ರೈಲು ವಿಭಾಗದ ದಕ್ಷಿಣದ ಕೊನೆಯ ನಿಲ್ದಾಣವಾಯಿತು. ೧೯೫೩ ಮತ್ತು ೧೯೫೫ರಲ್ಲಿ ಕ್ರಮಶಃ ಬಾಂದ್ರಾ-ಅಂಧೇರಿ ಹಾಗೂ ಅಂಧೇರಿ-ಬಾರಿವ್ಲಿ ರೈಲು ಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಪರಿವರ್ತಿಸಲಾಯಿತು.

೧೯೫೮ರಲ್ಲಿ ಮದರಾಸಿನ ಉಪನಗರಗಳ ರೈಲು ಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಪರಿವರ್ತಿಸುವ ಕಾರ್ಯವನ್ನು ಕೈಗೊಳ್ಳಲಾಯಿತು. ಮದರಾಸು ಒಜ್-ತಾಂಬರಂ ರೈಲುಮಾರ್ಗವು ೧೯೫೫ರಲ್ಲಿ ವಿದ್ಯುತ್ ರೈಲು ಮಾರ್ಗವಾಗಿ ಪರಿವರ್ತಿಸಲಾಯಿತು. ೧೯೫೧ರ ಮೇ ೧೫ರಂದು ಪ್ರಥಮ ವಿದ್ಯುತ್ ಚಾಲಿತ ರೈಲು ಈ ವಿಭಾಗದಲ್ಲಿ ಸಂಚರಿಸಿತು. ಪ್ರಸ್ತುತ ಸಮಯದಲ್ಲಿ, ಭಾರತವು ೫೪೦೦ ಮೈಲಿಗಳಷ್ಟು "ರೂಟ್" ವಿದ್ಯುತ್ ರೈಲುಮಾರ್ಗಗಳನ್ನು ಪಡೆದಿರುವುದು.

ದ್ವಿತೀಯ ಪಂಚವರ್ಷಿಕ ಯೋಜನಾವಧಿಯಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳ ನೆಚ್ಚಿದ ಅಂದಾಜಿನಲ್ಲಿ ೧೫೦೦ "ರೂಟ್" ಮೈಲಿಗಳನ್ನು ಹೆಚ್ಚಿನ ರೈಲುಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಪರಿವರ್ತಿಸುವ ಸಂಬಂಧವಾದ ಪ್ರಸ್ತಾವನೆಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ಭಾಷೆಯನ್ನು ಸರಳಗೊಳಿಸಬಹುದು

(೦ನೇ ಪುಟದಿಂದ)

ಶನ್ ಅವನಿಗೆ ತಾನುಮಾಡಿದ ಋತ್ತನು ಕಾರ್ಯಗಳಿಗೆ ಪುರಸ್ಕಾರ ಸ್ವರೂಪವಾಗಿ ಕೊಡಲ್ಪಡುತ್ತಿದೆ, ಎಂದು ತಿಳಿದುಬಂದಿತು.

ವಸ್ತುತಃ 'ಪೆನ್‌ಶನ್' ಶಬ್ದಕ್ಕೆ ಡಾ. ಜಾನ್ಸನರು ಮಾಡಿದ ಪರಿಭಾಷೆಯಿಂದ ಹೆದರುವ ಅಥವಾ ಚಿಂತಿತರಾಗುವ ಕಾರಣವೇನು? ಹಿಂದೀ, ಸಂಸ್ಕೃತ, ಕನ್ನಡ ಯಾ ಇನ್ನಿತರಭಾರತೀಯಭಾಷೆಗಳಲ್ಲಿಪರ್ಯಾಯವಾಚೀ ಪದಗಳ ಕೊರತೆಯೊದಗಿದ ಮುಂಬೈನ ಉಪನಗರಗಳಲ್ಲಿ ಸಂಚರಿಸುವ ವಿದ್ಯುತ್ ಚಾಲಿತ ರೈಲುಗಳು ಪ್ರತಿನಿತ್ಯವೂ ಮುಂಜಾನೆ ೧೧ರಿಂದ ೩ ಗಂಟೆಯ ವರೆಗೆ ಮಾತ್ರ "ವಿಶ್ರಾಂತಿ" ತೆಗೆದುಕೊಳ್ಳುತ್ತಿವೆ. ದಿನಂಪ್ರತಿ ೧೬೩ ರೈಲುಗಳು ಮುಂಬೈ ನಗರಕ್ಕೆ ಉಪನಗರಗಳಿಂದ ೨೮೦೦೦೦ ಸ್ವಯಾಣಿಕರನ್ನು ಒಯ್ಯುವುದರ ಜೊತೆಗೆ ಜೀವನಾಧಾರಕ್ಕೆ ಅವಶ್ಯಕವಾದ ವಸ್ತುಗಳನ್ನು ಹೊತ್ತು ತರುತ್ತವೆ.

ಮುಂಬೈಗೆ ಉಪನಗರಗಳಿಂದ ಹೋಗಿ ಬರುವ ಪ್ರಯಾಣಿಕರ ಸಂಖ್ಯೆಯು ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ಹೆಚ್ಚಾಗಿದೆ. ೧೯೪೦-೪೧ರಲ್ಲಿ ಲಕ್ಷ ಲಕ್ಷ ಸ್ವಯಾಣಿಕರು ಈ ವಿದ್ಯುತ್ ಚಾಲಿತ ರೈಲುಗಳಲ್ಲಿ ಸಂಚರಿಸಿದ್ದರು. ಈ ಸಂಖ್ಯೆಯು ೧೯೫೫-೫೬ರಲ್ಲಿ ೩೧೦.೦ ಕೋಟಿಗೆ ಹೆಚ್ಚಿದೆ. ಆದರೆ ಪ್ರತಿಶತ ಪ್ರಯಾಣವು ಹೆಚ್ಚಾದಂತಾಯಿತು.

ಮುಂಬೈನಿಂದ ಆ ನಗರದ ಉಪನಗರಗಳಿಗೆ ಹೋಗಿ ಬರಲು ವಿದ್ಯುತ್ ಚಾಲಿತ ರೈಲುಗಳಲ್ಲಿ ಅತ್ಯಲ್ಪ ಪೆಚ್ಚವಾಗುವುದು. ೧೦ ಮೈಲುಗಳ ದೂರದಲ್ಲಿರುವ ಎರಡು ನಿಲ್ದಾಣಗಳ ನಡುವೆ ತೃತೀಯ ದರ್ಜೆಯ ದರವು ಮಾಸಿಕ ಯಾಗೂ ತ್ರೈಮಾಸಿಕ ಟಿಕೆಟ್‌ಗಳಿಗೆ ಮೈಲಿಗೆ ಕ್ರಮಶಃ ೨೧ ಕಾಸುಗಳು ಮತ್ತು ೧.೭೬ ಕಾಸುಗಳು ಬೀಳುತ್ತವೆ. ತಿಂಗಳಿಗೆ ೩೦ ಪ್ರಯಾಣಗಳ ಸರಾಸರಿಯ ಆಧಾರದ ಮೇಲೆ ಈ ರೀತಿ ಲೆಕ್ಕ ಹಾಕಲಾಗಿದೆ. ಹೆಚ್ಚಿನ ದೂರದ ಪ್ರಯಾಣಗಳಿಗೆ ದರ ಇನ್ನೂ ಕಡಿಮೆಯಾಗುವುದು.

ಅನೇಕ ಪದಗಳು ಕಂಡು ಬರುತ್ತವೆ ಆಗಾಗ ಈ ಪರ್ಯಾಯ ವಾಚಿ ಶಬ್ದಗಳ ಅರ್ಥ ಒಂದರಿಂದೊಂದು ಸರ್ವಥಾ ಭಿನ್ನವಾಗಿ ಹೋಗುತ್ತದೆ.

ಶ್ರೀ ವಿಲ್ಕೋಸ್ ರೋಲಸ್ ಎಂಬ ಒಬ್ಬ ಶಬ್ದಕೋಶಕಾರನು ಕಳೆದ ಇಪ್ಪತ್ತು ವರ್ಷಗಳಿಂದ ಹೆಂಗೇರಿಯನ್ ಭಾಷೆಯ ಶಬ್ದಕೋಶ ರಚನೆಯ ಕಾರ್ಯದಲ್ಲಿ ಸಂಲಗ್ನನಾಗಿದ್ದಾನೆ. ಆತನು, ತನ್ನ ಭಾಷೆಯಲ್ಲಿ ಕಾಂಡನ ಮತ್ತು ಕಾಮಿನಿಗಾಗಿ ಐದು ಸಾವಿರ ಶಬ್ದಗಳಷ್ಟು ಪರ್ಯಾಯ ವಾಚೀ ಶಬ್ದಗಳ ಬಾಡವಾಳವಿದೆ ಎನ್ನುತ್ತಾನೆ. ಈ ಎರಡು ತತ್ತ್ವಗಳು ವಿಶ್ವದ ಮೇಲೆ ಮಾಡಿರುವ ಪ್ರಭಾವವನ್ನು ಕಂಡರೆ, ಅಷ್ಟೊಂದು ಪರ್ಯಾಯ ವಾಚೀಪದ ಗಳಿಂದ ಉಳಿದವುದು ಉಚಿತವೆಂದು ಕಂಡುಬರುವುದು.

ಮನೀಷಿಗಳು ಶಬ್ದಗಳನ್ನು ಬ್ರಹ್ಮನೊಂದಿಗೆ ಹೋಲಿಸುತ್ತಾರೆ. ಸರಳೀಕರಣದ ಹೆಸರಿನಲ್ಲಿ ಶಬ್ದಬ್ರಹ್ಮನನ್ನು ಜನಸಾಮಾನ್ಯರ ಮಟ್ಟಕ್ಕೆ ಕೆಳಗಿಳಿಸಬೇಕೇ ಅಥವಾ ಜನತೆಯ ತಿಳುವಳಿಕೆಯ ಮಟ್ಟವನ್ನು ಶಬ್ದಬ್ರಹ್ಮನಷ್ಟು ಉನ್ನತ ಸ್ಥಾನಕ್ಕೇರಿಸಬೇಕೇ ಎನ್ನುವುದು ಒಂದು ಪ್ರಶ್ನೆ.

ಭಾಷೆಯ ಸರಳೀಕರಣವನ್ನಪೇಕ್ಷಿಸುವವರು ಈ ಪ್ರಶ್ನೆಗೆ ಮೊತ್ತಮೊದಲುತ್ತರವನ್ನು ಹೇಳಿ ಮತ್ತೆ ತಮ್ಮ ಅವಿಶ್ರಾಂತ ಉದ್ಯಮಕ್ಕೆ ತೊಡಗಬೇಕು. ಇಲ್ಲವಾದರೆ ಮಾಡಿದ ಕೆಲಸ, ಪಟ್ಟ ಶ್ರಮ, ಇಟ್ಟ ಬೆವರು ನಿರುಪಯೋಗಿಯಾಗುತ್ತೀತು.

(ಸಾರಾಂಶ)

ಶ್ರೀ ಶಿವರಾಮು ಕಾರಂತರ
ಅತ್ಯಪೂರ್ವ ಗ್ರಂಥ—

ಯಕ್ಷಗಾನ ಬಯಲಾಟ

ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. 6/-
ವಿ. ಪಿ. ಕಳಿಸುವುದಿಲ್ಲ-
ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಪೇಟೆಂಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ಬೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.



ಆರ್ಥಿಕಾಭಿವೃದ್ಧಿಯ ಮಾರ್ಗ—

ಶಿಕ್ಷಣದಲ್ಲಿ ಸುಧಾರಣೆ

ಮಕ್ಕಳ ವಿಕಾಸ ಮತ್ತು ಅವರ ಶಿಕ್ಷಣ ಸಂಬಂಧದಲ್ಲಿ ನಮ್ಮ ಭಾರತ ಮತ್ತು ಬ್ರಿಟನುಗಳ ನಡುವೆ ಬಹಳ ಅಂತರ ವಿದೆ

ಬ್ರಿಟನಿನಲ್ಲಿ ಯಾವಳಾದರೂ ಒಬ್ಬಾಕೆ ತಾಯಿಗೆ ಮಕ್ಕಳಾಗುವ ಸೂಚನೆಯು ದೊರೆತೊಡನೆಯೇ ಸಾಮಾಜಿಕ ಸೇವಾಕರ್ತರು ಅವಳ ರಕ್ಷಣಾವ್ಯವಸ್ಥೆಯನ್ನು ಮಾಡತೊಡಗುತ್ತಾರೆ ಮಗುವು ಸ್ವಸ್ಥ ಮತ್ತು ಆರೋಗ್ಯವಂತವಾಗಿ ಹುಟ್ಟುವ ಸಲುವಾಗಿ ತಾಯಿಗೆ ವಿಶೇಷ ಜೀವಂತುಗಳನ್ನು ಕೊಡುತ್ತಾರೆ ಮೊದಲು ಪ್ರತಿಮಾಸವೂ ಮತ್ತು ನಂತರ ಪ್ರತಿವಾರವೂ ಪರೀಕ್ಷೆ ನಡಿಸುತ್ತಾರೆ ಮಗುವು ಜನಿಸುವ ವೇಳೆಗೆಸ್ಪತ್ರೆಯಲ್ಲಿ ತಾಯಿ ಯಾಗುವನಳಿಗೆ ಹಿರಿಗೆಯ ವ್ಯವಸ್ಥೆಯು ನಡೆಯುತ್ತದೆ.

ಆಸ್ಪತ್ರೆಯಿಂದ ಮನೆಗೆ ಬಂದ ಮೇಲೆ ಕೆಲದಿನಗಳ ವರೆಗೆ ತಾಯಿಯು ಆರಾಮವಾಗಿರುತ್ತಾಳೆ. ಒಂದು ವೇಳೆ ಅದರ ಮೇಲೆ ಆಕೆಗೆ ಯಾವುದಾದರೂ ಬೇರೆ ಕಾರ್ಯದಲ್ಲಿ ತೊಡಗಬೇಕಾದ ಸಂದರ್ಭ ಬಂದಲ್ಲಿ ಆಕೆಯ ಮಗುವನ್ನು ನೋಡಿಕೊಳ್ಳಲು ಸರಕಾರಿಶಿಶುಶಾಲೆಗಳಿರುತ್ತವೆ ಅಲ್ಲಿ ಆಕೆಯು ತನ್ನ ಮಗುವನ್ನು ಇಡಿ ದಿನವೂ ಇಟ್ಟುಬಿಟ್ಟುಬಹುದು. ಈ ಶಿಶು ಶಾಲೆಗಳಲ್ಲಿ ಮಕ್ಕಳಿಗೆ ತಿನ್ನಲು ಕುಡಿಯಲು ಆಟವಾಡಲು, ಹಾರಾಡಲು ಸಾಕಷ್ಟು ವ್ಯವಸ್ಥೆಗಳಿರುತ್ತವೆ ಸಂಜೆಗೆ ಮನೆಗೆ ಹಿಂತಿರುಗುವ ವೇಳೆಯಲ್ಲಿ ತಾಯಿಯು ಮಗುವನ್ನು ತನ್ನೊಡನೆ ಕರೆದುಕೊಂಡು ಹೋಗುತ್ತಾಳೆ ಈ ಶಿಶು ಶಾಲೆಗಳಲ್ಲಿ ಮಗುವು ಮನೆಗಿಂತ ಹೆಚ್ಚು ಆರಾಮಸಹಿತವಾಗಿ ನೋಡಿಕೊಳ್ಳಲ್ಪಡುತ್ತದೆ ಮತ್ತು ಇದರಿಂದಾಗಿ ಸಂತೋಷ ದಿಂದಿರುತ್ತದೆ.

ನಮ್ಮ ದೇಶದಲ್ಲಿ ಈ ಎಲ್ಲಾ ಸೌಕರ್ಯಗಳು ಕೇವಲ ಶ್ರೀಮಂತ ಮನೆತನದವರಿಗಾದರೂ ಇದುವರೆಗೆ ಸಂಪೂರ್ಣವಾಗಿ ದೊರೆತಿಲ್ಲ. ನಿಶ್ಶುಲ್ಕ ಸ್ವಾಸ್ಥ್ಯಸೇವೆಯು ಎನಾತನ್ನಂತೂ ನಾವು ಆಲೋಚಿಸಲೂ ಬಾರದು. ಪ್ರಾಯಶಃ ನಮ್ಮಂತಹ ಬತ ತನದ ದೇಶದ ಪ್ರಜೆಗಳಿಗೆ ಈ ಸೌಲಭ್ಯವು ದೊರೆಯುವ ಮಾತಂತೂ ಕೆಲವು ದಶಕಗಳ ವರೆಗೆ ಇಣಿಕಿನೋಡಲಾರದು. ಆದರೂ ಈ ಮಾತನ್ನು ನಾವೆ ಗಮನಿಸುವುದರಿಂದ, ಮುಂದೆ ಆಗಲಿರುವ ಪುನರ್ನಿರ್ಮಾಣದ ವೇಳೆಯಲ್ಲಿ ಅದರಿಂದ ಲಾಭಪಡೆಯಬಹುದು ಹಳ್ಳಿಗಳಲ್ಲಿ ಸಾಮುದಾಯಿಕ ವಿಕಾಸ ಯೋಜನಾಕ್ಷೇತ್ರಗಳಲ್ಲಿ ಇಂತಹ ಒಂದು ಸಣ್ಣ ಪುಟ್ಟ ಶಿಶುಶಾಲೆಗಳನ್ನು ಸಹ ತೆರೆಯುವುದು ಅವಶ್ಯವಾಗಿದೆ ಎಂಬ ಕೇಳಬಹುದು

ಮಗುವಿನ ಮುಂದಿನ ಬೆಳವಣಿಗೆಯೂ ಕುತೂಹಲಪ್ರಾಯಕರವಾಗಿರುವುದು. ಮಗುವು ಐದು ವರ್ಷ ಪ್ರಾಯದ ನೆಟ್ಟಲನ್ನು ಮುಟ್ಟುತೊಡನೆಯೇ ಅದನ್ನು ಸರಕಾರೀ ಆಥವಾ ಖಾಸಗಿ ಶಾಲೆಗಳಿಗೆ ಸೇರಿಸಿಬಿಡುತ್ತಾರೆ. ಸರಕಾರೀ ಶಾಲೆಗಳಲ್ಲಿ ಶಿಕ್ಷಣವು ನಿಶ್ಶುಲ್ಕವಾಗಿರುವುದು. ಹೀಗಿದ್ದರೂ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಸಹ ಮಕ್ಕಳ ಹೆತ್ತವರೊಡನೆ ಹಣವಿರುವುದಿಲ್ಲ. ಎಂದಾದರೂ ಸ್ವೀತಿಯಿಂದ ತಂದೆತಾಯಿಗಳು ಮಗುವನ್ನು ಶಾಲೆಗೆ ಸೇರಿಸದೆ ಹೋದರೆ, ಮಗುವನ್ನು ಐದು ವರ್ಷ ಪೂರ್ಣವಾದರೂ ಏಕೆ ಶಾಲೆಗೆ ಕಳುಹಿಸಲಿಲ್ಲ ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗುವುದು

ಸುಮಾರು ಆರರಿಂದ ಹನ್ನೊಂದು ವರ್ಷದ ವರೆಗೆ ಮಗುವು ಸಾಮಾನ್ಯ ಶಿಕ್ಷಣವನ್ನು ಪಡೆಯುತ್ತದೆ ಇದರಂತ್ಯದಲ್ಲಿ ಒಂದು ಪರೀಕ್ಷೆ ನಡೆಯುತ್ತದೆ. ಪರೀಕ್ಷೆಯು ಮುಗಿದನಂತರ ಮಗುವು ಮುಂದೆ ಓಗಬೇಕಾದುದೆಂಬುದನ್ನು ನಿರ್ಧರಿಸಲಾಗುತ್ತದೆ ಎಲ್ಲ ಮಕ್ಕಳಿಗೂ ಒಂದೇ ವಿಧವಾದ ಶಿಕ್ಷಣವನ್ನು ಅಭಿರುಚಿಯ ಲ್ಲದಿರುವುದರಿಂದ ಆವರೆಲ್ಲರನ್ನೂ ಮೆಟ್ರಿಕ್, ಬಿ ಎ ಅಥವಾ ಎಂ. ಎ. ಪರೀಕ್ಷೆಗಳಿಗೆ ಕಳಿಸಲಾಗುವುದಿಲ್ಲ

ಹನ್ನೆರಡು ವರ್ಷಗಳ ನಂತರ ಅಭ್ಯಾಸ ಮಾಡಲು ನಾನಾತರದ ಶಾಲೆಗಳಿರುತ್ತವೆ. "ಪಬ್ಲಿಕ್ ಸ್ಕೂಲ್" ಎಂದು ಕರೆಯಲ್ಪಡುವ ಒಂದು ವಿಧದ ಶಾಲೆಯಿದೆ ಇವುಗಳಲ್ಲಿ ತಂದೆತಾಯಿಯರು ಖರ್ಚನ್ನು ತೆರಬೇಕಾಗುವುದರಿಂದ ಕೇವಲ ಕೆಲವೇ ಮಂದಿ ಹೆತ್ತವರು ತಮ್ಮ ಮಕ್ಕಳನ್ನು ಸೇರಿಸಲು ಶಕ್ತರಾಗುತ್ತಾರೆ ಆದರೂ, ಅವರು ತಮ್ಮ ಮಕ್ಕಳನ್ನು ಪಬ್ಲಿಕ್ ಸ್ಕೂಲುಗಳಿಗೆ ಕಳುಹಿಸಿಕೊಡಲು ಉತ್ಸುಕರಾಗುವುದಿಲ್ಲ ಇವುಗಳಲ್ಲದೆ "ಗ್ರಾಮರ್ ಸ್ಕೂಲ್" ಎಂಬ ಇನ್ನೂ ಕೆಲವು ಶಾಲೆಗಳಿವೆ ಇವುಗಳಲ್ಲಿ ಮೆಟ್ರಿಕ್ ವರೆಗಿನ ಒದು ನಿಶ್ಶುಲ್ಕವಾಗಿ ಕೊಡಲ್ಪಡುತ್ತದೆ ಎಂಬಂತು ಇವುಗಳಲ್ಲಿ ದಾಖಲಾಗಲು ಹನ್ನೊಂದು ವರ್ಷ ಪ್ರಾಯಾನಂತರ ಆಗುವ ಪರೀಕ್ಷೆಯಲ್ಲಿ ತೇರ್ಗಡೆಹೊಂದಲೇ ಬೇಕಾಗುವುದು ಮಗುವು ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲವಾದರೆ, ಅತನ ಶಿಕ್ಷಣವು ಸಮಾಪ್ತವಾಗುವುದಿಲ್ಲ ಈ ಎರಡು ವಿಧ ಶಾಲೆಗಳಲ್ಲದೆ ಮೂರನೆಯ ವಿಧವಿರುವ ಶಾಲೆಗಳೂ ಇವೆ ಇವುಗಳಲ್ಲಿ ಸಾಹಿತ್ಯ, ಗಣಿತ, ಇತಿಹಾಸ, ಭೂಗೋಳ ಮೊದಲಾದ ವಿಷಯಗಳೊಂದಿಗೆ ಕೈಕೆಲಸಗಳನ್ನೂ ಕಲಿಸಲಾಗುತ್ತದೆ ಮಾತುಗಾರಿಕೆ, ಯಂತ್ರ ಕಾರ್ಯ, ಚಿತ್ರಕಲಾ ಮೊದಲಾದುವೂ ಇವುಗಳಲ್ಲಿ ಸೇರಿಕೊಂಡಿರುವುದು. ಇದರಿಂದಾಗಿ ಮಗುವು ಶಾಲೆಯಿಂದ ಹೊರಬಂದೊಡನೆ ತನ್ನ ದೈನಂದಿನ ಜೀವನವನ್ನು ಸುಲಭದಲ್ಲಿ ಸಾಗಿಸುವ ವಿಧಾನವನ್ನು ಕಲಿತುಕೊಳ್ಳಬಹುದು. ವ್ಯಾಯಃ ಇಂತಹ ಮಕ್ಕಳು ೧೫-೧೬ನೆಯ ವರ್ಷದಲ್ಲಿಯೇ ಹಣ ಸಂಪಾದಿಸಲು ಪ್ರಾರಂಭಿಸುತ್ತಾರೆ ಆದರೆ, ಒಂದು ವೇಳೆ ಇಲ್ಲಿ ಮಗುವಿನ ಓದು ಉತ್ತಮವಾಗಿದ್ದರೆ ಮತ್ತು ಅವನ ಅಭಿರುಚಿಯು ಮೆಟ್ರಿಕ್ ಮಾಡಿಕೊಳ್ಳುವತ್ತ ವಾಲಿದ್ದರೆ ಹಾಗೆಯೇ ಅವನ ಅಧ್ಯಾಪಕನು ಆದಕ್ಕೆ ಒಪ್ಪಿದರೆ, ಒಂದೆರಡು ವರ್ಷಗಳ ನಂತರವೂ ಮಗುವನ್ನು "ಗ್ರಾಮರ್ ಸ್ಕೂಲ್"ಗಳಿಗೆ ಸೇರಿಸಬಹುದು ಈ ಗ್ರಾಮರ್ ಸ್ಕೂಲ್‌ಗಳು ನಮ್ಮ ಹೈಸ್ಕೂಲ್‌ಗಳಂತಿರುತ್ತವೆ.

ಇನ್ನು ನಾಲ್ಕನೆಯ ವಿಧವು ಶಾಲೆಗಳವೆ ಇಲ್ಲಿ ಗ್ರಾಮರ್ ಸ್ಕೂಲ್‌ಗಳಲ್ಲಿ ತೆ ಓದುಬರಹಗಳೂ ಎರಡನೆ ವಿಧದ ಶಾಲೆಗಳಂತೆ ಹಸ್ತೋದ್ಯೋಗಗಳೂ ಒಟ್ಟಿಗೆ ಕಲಿಸಲಾಗುತ್ತದೆ ಆದರೆ, ಇಂತಹ ಶಾಲೆಗಳ ಸಂಖ್ಯೆ ಉಳಿದುವುಗಳಿಗಿಂತ ತೀರ ಕಡಿಮೆಯಾಗಿದೆ

ಬಾಲಕ ಬಾಲಿಕೆಯರು ಒಂದಾಗಿ ಶಿಕ್ಷಣ ಪಡೆಯುವ ಹಾಗೂ ಪ್ರತ್ಯೇಕವಾಗಿ ಶಿಕ್ಷಣ ಪಡೆಯುವ ಎಂದರ ವ್ಯವಸ್ಥೆಗಳಿರುತ್ತವೆ ಸ್ತ್ರೀಯರಿಗೆ ವಿದ್ಯಾಭ್ಯಾಸದ ಆವಶ್ಯಕತೆಯು ಕಡಿಮೆಯಾಗಿದೆಯೆಂದು ತಿಳಿಯುವುದಿಲ್ಲ ಆದರೆ ಭಾರತದಲ್ಲಿ ಅನೇಕ ಬಾರಿ ಈ ರೀತಿಯಾಗಿ ಭಾವಿಸಲಾಗುತ್ತದೆ

ನವ್ಯದೇಶದಲ್ಲಿ ಈಗೀಗ ನಾವೀನ್ಯಮಿಕ ಶಾಲೆಗಳು ದೊಡ್ಡದೊಡ್ಡ ಗ್ರಾಮಗಳಲ್ಲಿ ಶಾಶ್ವತವಾಗುತ್ತ ಬಂದಿವೆ. ಆದರೆ ಹೈಸ್ಕೂಲ್‌ಗಳ ಚಿತ್ರವು ಸ್ವಲ್ಪ ಬೇರೆ ರೀತಿಯದೆ. ಮಾಧ್ಯಮಿಕ ಶಾಲೆಯ ವರೆಗಿನ ಶಿಕ್ಷಣ ಇಡಿ ಎಲ್ಲ ರಾಜ್ಯಗಳಲ್ಲಿಯೂ ನಿಶ್ಶುಲ್ಕವಾಗಿರುವುದಿಲ್ಲ. ದಿಲ್ಲಿಯಂತಹ ನಗರದಲ್ಲಿ ಮಾಧ್ಯಮಿಕ ಶಾಲೆಯು ವಿದ್ಯಾರ್ಥಿಗಳ ಪಾಲಾಗಿ ತಿಂಗಳಿಗೆ ಮೂವತ್ತೈದು ರೂಪಾಯಿ ಖರ್ಚು ಬರುತ್ತದೆ—ಪ್ರತಿಮಿಬ್ಬಿನಿಗೆ ಪ್ರತಿ ತಿಂಗಳಿಗೆ ತಾಯ್ತಂದೆಯರು ಕಡಿಮೆಯೆಂದರೆ, ಇಷ್ಟು ವೆಚ್ಚಮಾಡುತ್ತಾರೆ. ಒಳ್ಳೆಯ ಶಾಲೆಗಳಲ್ಲಿ ಪ್ರವೇಶ ದೊರೆಯಬೇಕಾದರೆ, ಮೂರು ವರ್ಷಗಳ ಪೂರ್ವದಲ್ಲಿಯೇ ಹೆಸರನ್ನು ಬರೆಯಿಸಬೇಕಾಗುತ್ತದೆ, ಮತ್ತು ಇಂತಹ ಸಂದರ್ಭದಲ್ಲಿಯೂ ಬಹಳಷ್ಟು ಪ್ರಯಾಸದಿಂದ ಕ್ಷಳವ ದೊರೆಯಿಹುದು.

ಉಚ್ಚ ಶಿಕ್ಷಣದಲ್ಲಿ ನಿಯಂತ್ರಣವಿಲ್ಲ ಬೇಕು ಪ್ರತಿಯೊಂದು ಮಗುವೂ ಬಿ. ಎ, ಎಂ ಎ ಪದವೀಧರನಾಗಬೇಕೆಂಬ ಧ್ಯೇಯವನ್ನು ನಾವಿಟ್ಟುಕೊಳ್ಳಬಾರದು. ಉಚ್ಚ ಶಿಕ್ಷಣವನ್ನು ಪಡೆಯುವ ಯೋಗ್ಯತೆಯಿರುವಂತಹ ಬಾಲಕ ಬಾಲಿಕೆಯರಿಗೆ ಮಾತ್ರ ಅಂತಹ ವಿದ್ಯೆಯನ್ನು ಕೊಡಬೇಕು. ಮತ್ತಿಂತಕರು ತಮಂದೆ ತಾವು ಕಲಿತ ವಿದ್ಯೆಯಿಂದ ಲಾಭಕೊಂಡುವಂತಾಗಬೇಕು. ಉಚ್ಚ ಶಿಕ್ಷಣವ್ಯವಸ್ಥೆ ಮಾಡುವುದರಿಂದ ಸರಕಾರದ ವೆಚ್ಚವು ಹೆಚ್ಚುವುದು ಮಾತ್ರವಲ್ಲದೆ ಬಾಲಕರೂ ಬಹಳ ಕಷ್ಟವಾಗಿ ಸಂವಾಸ ತೊಡಗುತ್ತಾರೆ ಇಷ್ಟು ವಿದ್ಯೆ ಕಲಿತು ಅವರು ಕೈಕೆಲಸ ಮಾಡಲು ಜಿಗುಪ್ಸಿತರಾಗಿಯಾರೆ, ಲೇಖನಿ ಹಿಡಿಯುವ ಕೆಲಸವನ್ನೇ ಬಯಸುತ್ತಾರೆ

ಕಳೆದ ಹತ್ತು ವರ್ಷಗಳಲ್ಲಿ ನಮ್ಮ ದೇಶದೊಳಗೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಯಾಗಿರುತ್ತದೆ ಕೋಟ್ಯಂತರ ರೂಪಾಯಿಗಳು ಖರ್ಚಾಗಿವೆ ಆಗುತ್ತಾ ಇವೆ. ಹೀಗಿದ್ದರೂ ಕೆಲಸವು ಬಹಳ ಅತ್ಯಲ್ಪವೆಂದು ಕಂಡುಬರುತ್ತದೆ. ಇಂದು ಶಿಕ್ಷಣ ವಿಧಾನದತ್ತ ವಿಶೇಷ ಗಮನವೀಯಬೇಕಾಗಿದೆ. ನಮ್ಮಲ್ಲಿಂದು ಔದ್ಯೋಗಿಕ ಶಿಕ್ಷಣಾಲಯಗಳ ಕೊರತೆಯಿರುವುದಲ್ಲದೆ. ತಾಂತ್ರಿಕ ಶಿಕ್ಷಣಾಲಯಗಳು ತೀರ ಕಡಿಮೆಯಿವೆ. ಇವುಗಳನ್ನು ಹೆಚ್ಚಿಸುವ ರೀತಿಯನ್ನು ನಾವು ಬ್ರಿಟನಿನ ಅನುಭವದಿಂದ ತಿಳಿದುಕೊಳ್ಳಬಹುದು

ಬ್ರಿಟನಿನೊಳಗೆ ಸಾಮಾನ್ಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣವು ಬಹಳ ವಿಸ್ತೃತವಾಗಿದ್ದರೂ ಅಲ್ಲಿನ ಸರಕಾರವು ಮುಂದಿನ ಐದು ವರ್ಷಗಳಲ್ಲಿ ಐವತ್ತು ಕೋಟಿ ರೂಪಾಯಿಗಳನ್ನು ಹೊಸ ನಮೂನೆಯ ಶಾಲೆ ಮತ್ತು ಕಾಲೇಜುಗಳನ್ನು ತೆರೆಯಲು ಖರ್ಚುಮಾಡುತ್ತಿದೆ. ಇವುಗಳಲ್ಲಿ ಕೆಲಸನಿರ್ವಹಿಸುವವರಿಗಾಗಿ ಅರು ತಿಂಗಳಿಂದ ಹಿಡಿದು ನೂರು ವರ್ಷಗಳ ವರ್ಷದವರೆಗಿನ ಅಲ್ಪ ಪ್ರಮಾಣದ ತರಗತಿಗಳು ನಡೆಯುತ್ತವೆ. ಇದರಿಂದ ಒಟ್ಟು ಉತ್ಪಾದಕರ ಸಂಖ್ಯೆಯು ಹೆಚ್ಚುತ್ತದೆ, ಉತ್ಪಾದನೆಯು ವೈಚ್ಚವು ಕಡಿಮೆಯಾಗುತ್ತದೆ ಇದು ಸಹ ಒಂದು ನೂತನ ಶೋಧ ಇದರಿಂದ ಜನತೆಯ ಶಿಕ್ಷಣ ಮಟ್ಟವು ಉನ್ನತನಾಗುವುದೂ ಅದರಿಂದ ದೇಶಕ್ಕೆ ಆರ್ಥಿಕ ಲಾಭವೂ ದೊರೆಯುವಂತಾಗುತ್ತದೆ.

ಆದರಿಂದ ಭಾರತವು ತನ್ನ ನಾಗರಿಕರಲ್ಲಿ ವಿದ್ಯಾಪ್ರಚಾರವಾತಲು, ಮಕ್ಕಳಲ್ಲಿ ವಿಕಾಸವುಂಟುಗುವಂತೆ ಮಾಡಲು, ದೇಶದಲ್ಲಿನ ಕ್ರಾಂತಿಕಾರಿ ಕರ್ಮಚಾರಿಗಳ ಸಂಖ್ಯೆಯನ್ನು ಹೆಚ್ಚಿಸಲು ಬ್ರಿಟನಿನಿಂದ ಪಾಠಕಲಿಯಬೇಕು. ಆಗ, ಅದರಂತೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯೂ ಉತ್ತಮಗೊಳ್ಳಬಹುದು

—ಯೋಜನಾ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
H O ಉಡುಪಿ. Estd 19'5

ಶಾ 16--12--1957ರಲ್ಲಿ
ರಾಯಚೂರು ಜಿಲ್ಲೆಯ ಕೊಪ್ಪಳ'ದಲ್ಲಿ
ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಯು ತೆರೆಯಲ್ಪಡುವುದು

ಅಧಿಕೃತ ಭಂಡವಾಳ:	Rs	56,೦೦,೦೦೦
ತತ್ತ ಭಂಡವಾಳ.	Rs	32,೨೫,೭೮೭
ಪಾಲು ಭಂಡವಾಳ.	Rs	೨2,10,೦೭೭
ಖಾವತಿಯಾದ ಬಂಡವಾಳ	Rs.	28,೨3,೦೭೦
ಕ್ಷೇಮನಿಧಿ	Rs.	18,00,000

ರೇವಣಾತಿ ರೂ. 9·64 ಕೋಟಿಗೂ ಮಿಕ್ಕಿದೆ.
ಜಿಲಾವಣಾ ನಿಧಿ ರೂ. 11 64 ಕೋಟಿಗೂ ಮಿಕ್ಕಿದೆ.
ಒಟ್ಟು ಶಾಖೆಗಳು. 103.

ಟಿ. ಎ. ಪೈ ಬಿ ಕೊಂ (ಬೊಂ)
ಎಫ್ ಆರ್ ಇ.ಎಸ್,
ಜನರಲ್ ಮೆನೇಜರ್.

ಡಾ। ಟಿ ಮಾಧವ ಪೈ
ಎಂ ಬಿ ಬಿ ಎಸ್.,
ಮೆನೇಜಿಂಗ್ ಡೈರೆಕ್ಟರ್.

The Canara industrial & Banking Syndicate Ltd.
UDIPI.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೯-೧೨-೧೯೫೭	೧೪

ಇನ್ನೂ ವಿವೇಕ ಮೊಳೆಯದೆ?

ಭಾರತದೊಡನೆ ಮೈತ್ರಿಯಿಂದಿದ್ದು ಸಹೋದರಭಾವನೆಯಿಂದ ತುಂಬಿ ತುಳುಕಾಡಿ ಸಂತೋಷದಿಂದ ನಲಿದಾಡುತ್ತಿರಬೇಕಾದ ಪಾಕಿಸ್ತಾನವು ಅಸ್ಯಾದ ಫ್ರಾನ್ಸ್ ಎಂಬ ಉಪನಾಮಕ್ಕೆ ಗುರಿಯಾಗಿದೆ. ಆದರೆ, ಫ್ರಾನ್ಸಿನಲ್ಲಿ ಎಷ್ಟೇ ಮಂತ್ರಿಮಂಡಳ ಗದ್ದುಗೆಯೇರಲಿ, ಇಲ್ಲ ನೇ ಪತನಗೊಳ್ಳಲಿ, ತಮ್ಮ ಹಿಂದಿನ ನಾಯಕನ ಮೂಲಧ್ಯೇಯ ಧೋರಣೆಗಳಲ್ಲಿ ಪ್ರಮುಖ ವ್ಯತ್ಯಾಸವಾಗದಿರುವುದರಿಂದ ಸರಕಾರದ ಕಾರ್ಯಕಲಾಪಗಳಿಗೂ ತನ್ಮೂಲಕ ದೇಶದ ಪ್ರಜೆಪರಿವಾರಗಳಿಗೂ ಯಾವುದೇ ವಿಧದ ಬಲವಾದ ಹಾನಿ ತಗಲುವುದಿಲ್ಲ. ಹೀಗಿರುವಾಗ, ಪಾಕಿಸ್ತಾನದ ಸ್ಥಿತಿಯೇ ಬೇರೆ. ಕೆಲವು ಕ್ಷುಲ್ಲಕ ವಿಷಯಗಳನ್ನೇ ದೊಡ್ಡದಾಗಿ ಮಾಡಿಕೊಂಡು ಸರಕಾರಗಳು ರಚಿತವಾಗುತ್ತವೆ; ಅಂತೆಯೇ ನಾಮಾವಶೇಷವಾಗುತ್ತವೆ. ಭಾರತದೊಂಡಗೇನೇ ಭಾರತದಿಂದ ಸಿಡಿದುಹೋದ ಪಾಕಿಸ್ತಾನದಲ್ಲಿ ಮಂತ್ರಿಮಂಡಳವು ಪುನಃ ಉರುಳಿ ಇದೀಗ ಎಳನೆಯ ಮಂಡಲವು ಅಧಿಕಾರ ಸ್ವೀಕರಿಸಿದೆ. ಅಸಂಬದ್ಧ ಪ್ರಲಾಪಗಳಿಂದ ತಮ್ಮ ಪ್ರಭಾವವನ್ನು ಕಳೆದುಕೊಂಡ ಐದನೆ ಪ್ರಧಾನಿ ಸುಹ್ರವರ್ದಿಯವರು ಎಗ್ಗು ತಿಂಗಳ ಹಿಂದೆ ಪ್ರತ್ಯೇಕ ಮತದಾನ ವ್ಯವಸ್ಥೆಯ ಪ್ರಶ್ನೆಯಿಂದಾಗಿ ಬಲಾತ್ಕಾರದಿಂದ ರಾಜೀನಾಮೆ ಕೊಟ್ಟರು. ಅವರ ಬದಲು, ದೀರ್ಘಕಾಲ ವಿಚಾರ ವಿನಿಮಯ ಮಾಡಿ ರಚಿತವಾದ ಆರನೆಯದಾದ ಚುಂಡ್ರಿಗರ ಮಂಡಲವು ಸಹ ಮತದಾರ ಸಂಘಗಳ ಪ್ರಶ್ನೆಯಿಂದಾಗಿಯೇ ಜೀವ ತವಾಗಿ ಹೋಯಿತು. ಇದೀಗ ಫಿರೋಜ್ ಖಾನ್ ನೂನರ ನೇತೃತ್ವದಲ್ಲಿ ಪುನಃ ಸರಕಾರ ರಚನೆಯಾಯಿತು. ಆದರೆ, ಇನ್ನೆಷ್ಟು ದಿನ ಬದುಕಬಲ್ಲುದೆಂದು ಭವಿಷ್ಯ ನುಡಿಯುವುದು ಸಾಧ್ಯವಿಲ್ಲವಾದರೂ ಈಗಿನ ವಿದ್ಯಮಾನಗಳನ್ನು, ಮುಖ್ಯವಾಗಿ ಜವಾಬ್ದಾರಿ ಲೀಗಿನ ಮಂತ್ರಿಗಳ ನೇಮಕವಾಗದೆ ಇರುವುದನ್ನು ಮತ್ತು ಆ ಬಗ್ಗೆ ಮುಂದೆ ಮಂತ್ರಿಮಂಡಲದ ವಿಸ್ತರಣೆಯಾಗಬಹುದೆಂಬುದನ್ನು ಗಮನಿಸಿದಾಗ, ಇದೇನೂ ದೀರ್ಘಕಾಲ ಬಾಳಿಯಲಾರದು. ಏಕೆಂದರೆ ಅವಾಮಿ ಲೀಗಿನ ನಾಯಕ ಶ್ರೀ. ಎಚ್. ಎಸ್. ಸುಹ್ರವರ್ದಿಯವರೇ ಮಾಜಿ ಪ್ರಧಾನರಾಗಿರುತ್ತಾರೆ. ಹೀಗೆ ವೈಯಕ್ತಿಕ ದ್ವೇಷವು ಅಂತರಾಳದಲ್ಲಿ ಹೊಗೆಯಾಡುತ್ತಿರುವುದು ಪಾಕಿಸ್ತಾನದಲ್ಲಿ ಒಂದು ಸ್ಥಿರಾಡಳಿತೆಯನ್ನು ಸ್ಥಾಪಿಸಲು ದೊಡ್ಡ ತೊಡಕಾಗಿದೆ. ಒಂದು ಸಿದ್ಧಾರ ಮಾಡುವುದು —ಅದನ್ನು ಮತ್ತೊಮ್ಮೆ ಕೆತ್ತುಹಾಕುವುದು ಅದರ ಸಂಪ್ರದಾಯವೇ ಆಗಿದೆ. ಆದರೆ, ಭಾರತದ ವಿಷಯದಲ್ಲಿ ವಾಸ್ತವ ಇದಕ್ಕೊಂದು ಅಪವಾದವಿದೆಯೆನ್ನಬಹುದು. ಕಾಶ್ಮೀರ ಪ್ರಶ್ನೆ, ಕಾಲುವೆ ನೀರಿನ ವಿವಾದ ಮೊದಲಾದ ಪಾರಸ್ಪರಿಕ ವಿಷಯಗಳಲ್ಲಿ ಭಾರತದ ಕಡೆಗೆ ಈಗಿನ ಸರಕಾರದ ಧೋರಣೆ ಎಂದೂ ಬದಲಾಗಲಾರದೆಂಬುದು ಖಂಡಿತ. ಇಂದಿನ ಪ್ರಧಾನಿ ಶ್ರೀ ಖಾನ್‌ನೂನರು ಹಿಂದಿನ ಸುಹ್ರವರ್ದಿ ಮತ್ತು ಚುಂಡ್ರಿಗರರ ಮಂತ್ರಿಸಂಪುಟದಲ್ಲಿ ವಿದೇಶ ಮಂತ್ರಿಗಳಾಗಿದ್ದರಲ್ಲದೆ. ಕಾಶ್ಮೀರದ ಪ್ರಶ್ನೆಯಲ್ಲಿ ತಾವು ಹಿಡಿದ ಕನಲು ದಾರಿಯೇ ರಾಜಮಾರ್ಗವೆಂದು ಸಾಧಿಸಿದ ಕೀರ್ತಿವಂತರಾಗಿದ್ದಾರೆ. ಹಾಗಿರುವಾಗ, ಅವರ ಸರಕಾರದ ಧೋರಣೆಯು ಎಂದಿಗೂ ಭಾರತದ ಸ್ನೇಹಸಂಪಾದನೆಯಿರಲಾರದೆಂಬುದು ನಿಶ್ಚಯ. ಭಾರತದ ಬಗ್ಗೆ ಭದ್ರತಾಸಮಿತಿಯಲ್ಲಿ ಹಾಗೂ ವಿದೇಶಗಳಲ್ಲಿ ಇಲ್ಲ ಸಲ್ಲದ ಟೊಳ್ಳು ಆರೋಪಗಳ ಗಾಳಿಮಳ್ಗೆಗಳನ್ನು ಹಾರಬಿಟ್ಟವರು ಇಂದು ಪ್ರಧಾನಿಯ ಅಧಿಕಾರ ಸ್ಥಾನದಲ್ಲಿರುವಾಗ. ಏನಾಗುವುದೋ ಹೇಳುವುದು ಸಾಧ್ಯವಿಲ್ಲ. ಅಂತೂ ಭಾರತದ ನೆರೆರಾಷ್ಟ್ರದಲ್ಲಿ ಉಂಟಾದ ಈ ಬದಲಾವಣೆಯು ಮಹತ್ವದ್ದೆಂದು ತಿಳಿಯುವ ಆವಶ್ಯಕತೆಯಿಲ್ಲವಾದರೂ ಎಚ್ಚರದಿಂದಿರುವುದಂತೂ ಅಗತ್ಯವೇ ಆಗಿದೆ. ಫಿರೋಜ್ ಖಾನ್ ನೂನರ ನೂತನ ಮಂತ್ರಿಮಂಡಲದಲ್ಲಿ ಹಿಂದಿನ ಮಂತ್ರಿಗಳ ಪೈಕಿ ಎಂಟು ಜನರಿದ್ದಾರೆ ಕೇವಲ ಪ್ರಧಾನಿ ಮಾತ್ರ ಬೇರೆ. ಇದು ಬಣ್ಣ ಬದಲಿಸಿದ ನೀರ ಬಾಟಲಿಗಳಂತೆ ಯೆನ್ನಬಹುದು; ಅವುಗಳಲ್ಲಿರುವುದು ಒಂದೇ ನೀರು; ಆದರೆ, ಬಾಟಲಿಯ ಬಣ್ಣ ಮಾತ್ರ ಬೇರೆ. ಮಂತ್ರಿಗಳೆಲ್ಲ ಹಿಂದಿನವರೇ; ಪ್ರಧಾನಿ ಪಟ್ಟಿಗೆನ್ನು ಹೆಚ್ಚಿಕೊಂಡವರು ಮಾತ್ರ ಹೊಸಬರು. ಇಂತಹ ಒಂದು ಸರಕಾರ ಯಾವ ಹುರುಪಾರ್ಧವನ್ನು ಸಾಧಿಸೀತೆಂದು ಹೇಳಬಾರದು. ಮತದಾರ ಸಂಘಗಳ ಮಹತ್ವದ ಪ್ರಶ್ನೆ, ಮುಂದಿನ ನವಂಬರ್ ತಿಂಗಳೊಳಗೆ ಸಾರ್ವತ್ರಿಕ ಚುನಾವಣೆ ನಡೆಸುವ ಪ್ರಶ್ನೆ ಇವುಗಳು ಪಾಕಿಸ್ತಾನದ ಮುಂದಿನ ಪ್ರಜಾಸ್ವಭುತ್ವದ ಸ್ಥಾಪನೆಯ ಅಡಿಗಲ್ಲಾಗಿವೆ. ಈ ಕಾರಣಕ್ಕಾಗಿ ಯಾವುದೇ ಒಂದು ನಿರ್ದಿಷ್ಟ ಯೋಜನೆ, ದೃಢ ಧೋರಣೆ ಸರಕಾರಕ್ಕಿರದಿದ್ದರೆ ಪರಿಣಾಮವಾಗಿ ಬೇ ಸ್ವತಂತ್ರವಾಗಿ ಹೆತ್ತು ವರ್ಷಗಳು ಕಳೆದರೂ ಇನ್ನೂ ಒಂದು ಚುನಾವಣೆಯು ಜರ್ತಿ ನಡೆಯಲಿಲ್ಲ. ಆದರೆ, ಭಾರತದೆಲ್ಲ ಎರಡು ಸಾರ್ವತ್ರಿಕ ಚುನಾವಣೆಗಳು ಮುಗಿದು ಹೋದುವು; ದೇಶವು ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಕಷ್ಟನಷ್ಟಗಳು ಸಂಭವಿಸಿದರೂ ಮುನ್ನಡೆಯುತ್ತಿದೆ. ಆದರೆ ಪಾಕಿಸ್ತಾನ ಕಂಗಾಲು ಸ್ಥಿತಿಯಲ್ಲಿದೆ. ರಾಜಕಾರಣವು ಬೆಕ್ಕಿನ ಕಲೆಯು ವೇಲೆಟ್ಟಿ ದೀಪದಂತಾಗಿದೆ. ಅದುದರಿಂದ, ಈ ಅಸ್ಥಿರ ರಾಜಕಾರಣದ ಪ್ರಭಾವವು ನಿರೆರಾಜ್ಯದಲ್ಲೂ ಬೀಳುತ್ತದೆ; ಭಾರತಕ್ಕೂ ಈ ವಿಷಯದಲ್ಲಿ ಅಧಿಕಾಪತ್ತಿಯಿದೆ. ಮೈಯೆಲ್ಲಂಬ ಕಣ್ಣುಗಳಿನಿಟ್ಟು ತನ್ನ ರಕ್ಷಣೆಯಷ್ಟೂ ಭಾರತವು ಮಾಡಿಕೊಳ್ಳಬೇಕಾಗಿದೆ. ಪಾಕಿಸ್ತಾನದ ಇಂದಿನ ಧೋರಣೆಯನ್ನೇನೇ ಇರಲಿ, ಇದು ಭಾರತದೊಡನೆ ಹಗೆತನವನ್ನು ಇನ್ನೂ ಬೆಳೆಯಿಸಿಕೊಳ್ಳಬಾರದು. ಶ್ರೀ ಖಾನ್‌ನೂನರವಾದ ಪ್ರತಿವಾದಗಳೇನೇ ಇರಲಿ, ಅವರು ಭಾರತಮೊಡನೆ ಮೈತ್ರಿಯುತ ಭಾವನೆಯನ್ನು ತೋರಬೇಕು; ಎರಡು ದೇಶಗಳ ನಡುವಿನ ಭೇದಭಾವನೆಗಳನ್ನು ಪರಸ್ಪರ ಸಂಧಾನದಿಂದಲೇ ಮಧ್ಯಾರ್ಜಿ ತೀರ್ಮಾನದಿಂದ ಪರಿಹರಿಸಿ ತಮ್ಮ ಉನ್ನತಿಯನ್ನು ಸಾಧಿಸಬೇಕು; ಭಾರತದಂತೆಯೇ ತಲೆಯೆತ್ತಿ ನಿಲ್ಲಬೇಕು. ಹೀಗಾದಲ್ಲಿ ಪ್ರಜಾಸ್ವಭುತ್ವವಾಗಿ ರಾಷ್ಟ್ರಗಳಿಗೂ ಹಿಮ್ಮೆ; ಪಾಕಿಸ್ತಾನಕ್ಕಂತೂ ಜೇಲಸದ ಆವಶ್ಯಕತೆಯಿದೆ. ಆ ದಿನವು ಬೇಗನೆ ಸಾಧನೆ. ಈ ದಿಸೆಯಲ್ಲಿ ಶ್ರೀ ನೂನರ ಮಂತ್ರಿಮಂಡಳವು ಕಾರ್ಯ ಪ್ರವೃತ್ತವಾಗುವುದೆ? ಕನ್ಮೂಲಕ ಸ್ವ ಉದ್ಧಾರಕಾರ್ಯವನ್ನು ಕೈಗೊಳ್ಳುವುದೆ?

ಮಹತ್ವದ ಸುದ್ದಿಗಳು

ಭೂ ಸುಧಾರಣಾ ವಿಧೇಯಕ

ಮೈಸೂರು ರಾಜ್ಯದಲ್ಲಿ ಭೂ ಸುಧಾರಣೆಯ ಒಟ್ಟಿಗೆ ಪರಿಶೀಲಿಸಿ ಸರಕಾರಕ್ಕೆ ವರದಿಯಿತ್ತ ಜತ್ತಿಸಮಿತಿಯು ವರದಿಯನ್ನು ರಾಜ್ಯ ಶಾಸನ ಸಭೆಯ ಮುಂದಿನ ಅಧಿವೇಶನದಲ್ಲಿಯೇ ಚರ್ಚಿಸಲಾಗುವುದೆಂದೂ, ಕೆಲದಿನಗಳವರೆಗೆ ವರದಿಯನ್ನು ಚರ್ಚಿಸಿ, ಆ ಮೇಲೆ ಭೂ ಸುಧಾರಣಾ ವಿಧೇಯಕವನ್ನು ರಚಿಸಿ ಮಂಡಿಸಲಾಗುವುದೆಂದೂ ಮುಖ್ಯಮಂತ್ರಿ ನಿಜಲಿಂಗಪ್ಪನವರು ಹೇಳಿದ್ದಾರೆ. ಈ ಮೊದಲು ಈ ವರದಿಯು ಮುಂದಿನ ಜೂನ್—ಜುಲೈ ತಿಂಗಳುಗಳಲ್ಲಿ ಚರ್ಚಿಸಲ್ಪಡುವ ವದಂತಿಯಿತ್ತು. ಆದರೆ, ಮುಖ್ಯಮಂತ್ರಿಯವರ ಹೇಳಿಕೆಯಂತೆ ಈ ವರದಿಯು ಫೆಬ್ರವರಿ ಶಾಸನಸಭೆಯೇ ಚರ್ಚೆಯಾಗುವುದು. ಅಲ್ಲದೆ ವಿಧೇಯಕವೂ ಸಿದ್ಧವಾಗುವುದು.

ಅಮೆರಿಕೆಯ ನೆರವು

ಭಾರತದ ಅಭಿವೃದ್ಧಿ ಯೋಜನೆಗಳಿಗೆ ಅಮೆರಿಕೆಯು ನೆರವು ೧೯೫೮ರ ಜನವರಿ ತಿಂಗಳಿಂದ ದೊರೆಯಲಿರುವುದು; ಬರುವ ವರ್ಷದ ಮಧ್ಯಾವಧಿಯಲ್ಲಿ ಅದು ಸಾಕಷ್ಟು ಪ್ರಮಾಣದಲ್ಲಿ ಲಭಿಸುವುದು. ಈ ಸಹಾಯವನ್ನು ಎರಡು ಘಟ್ಟಗಳಲ್ಲಿ ಒದಗಿಸಲಾಗುವುದು. ಎಂದರೆ, ಅಮೆರಿಕೆಯ ಕಾಂಗ್ರೆಸ್ಸಿನ ಮನ್ನಣೆಯಿಲ್ಲದೆ ಕೊಡಲಾಗುವ ನೆರವನ್ನು ಜನವರಿಯಿಂದಲೂ ಕಾಂಗ್ರೆಸ್ಸಿನ ಅನುಮತಿ ಪಡೆದಿರಬೇಕಾದ ಸಹಾಯನನ್ನು ಬರುವ ಜೂನ್ ತಿಂಗಳಿಂದಲೂ ಕೊಡಲಾಗುವುದೆಂದು ತಿಳಿದುಬಂದಿತೆ.

ಗೃಹಾಮರಿಗೆ ಕರಿಭಾವುಟ

ಭದ್ರತಾಸಮಿತಿಯ ಗೊತ್ತುವಳಿಯ ಮೇರೆಗೆ ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿ ಡಾ. ಫ್ರಾಂಕ್ ಗ್ರಾಹಾಮರು ಭಾರತಕ್ಕೆ ಆಗಮಿಸಿದಾಗ, ಅವರಿದುರು ಕಪ್ಪು ಧ್ವಜ ಪ್ರದರ್ಶನವನ್ನು ಎಲ್ಲ ಪಕ್ಷಗಳ ಸಹಕಾರದಿಂದು ಮಾಡಬೇಕೆಂಬ ಗೊತ್ತುವಳಿಯನ್ನು ಅಂಬಾಲಾ ಜಿಲ್ಲಾ ಕಾಂಗ್ರೆಸ್ಸಿನ್ನು ಪಕ್ಷವು ಸ್ವೀಕರಿಸಿದೆ.

ಪಾಕ್-ಭಾರತ ಭವಿಷ್ಯ

ಪಾಕಿಸ್ತಾನ ಮತ್ತು ಭಾರತಗಳ ನಡುವೆ ಎಂತಹ ಸಂದರ್ಭವೊದಗಿ ಬಂದರೂ ಯುದ್ಧವಾಗುವುದಿಲ್ಲ. ಈಗ ಆಗಲ್ಲ ತಿಕ್ಕಾಟಗಳು ಸಂಭವಿಸಬಹುದಾದರೂ ಉಭಯ ರಾಷ್ಟ್ರಗಳ ನಡುವೆ ಯುದ್ಧದ ಶಕ್ಯತೆಯಿರುವುದಿಲ್ಲ. ಭಾರತ ಹಾಗೂ ಪಾಕಿಸ್ತಾನಗಳಿಗೆ ಒಂದೇ ಇತಿಹಾಸ, ಒಂದೇ ಸಂಸ್ಕೃತಿ ಮತ್ತು ಒಂದೇ ಪರಂಪರೆಯಿರುವುದು. ಉಭಯ ದೇಶಗಳ ನಡುವಿನ ಸಂಬಂಧವು ಎಂದಿಗೂ ಯುದ್ಧಕ್ಕೆ ಅವಕಾಶವನ್ನು ಕೊಡಲಾರವು ಎಂದು ಪಾಕಿಸ್ತಾನದಲ್ಲಿರುವ ಭಾರತದ ಹೈಕಮಿಶನರೆಂದ ಶ್ರೀ ಸಿ. ಡೇ ಸಾಯಿರು ಮುಂಬಯಿಯಲ್ಲಿ ನುಡಿದು, ೧೯೫೮ರ ನವಂಬರ್ ತಿಂಗಳಲ್ಲಿ ನಡೆಯುವುದೆಂದು ಹೇಳಲಾದ ಸಾರ್ವತ್ರಿಕ ಚುನಾವಣೆಗಳು ನಡೆದ ನಂತರ ಅಲ್ಲಿನ ಪರಿಸ್ಥಿತಿಯು ಸುಧಾರಿಸಬಹುದೆಂದು ಆಶಿಸಿದರು.

ಉದ್ರೇಕದ ಪರನೂನಧಿ

ದ್ರಾವಿಡ ಮುನ್ನೇತ್ರ ಕ್ರಳುಗಮಿನ ನಾಯಕ ಶ್ರೀ ನಾಯ್ಕರವರು ಬ್ರಾಹ್ಮಣರನ್ನು ಹಿಂಸಿಸಲು ಸಾರ್ವಜನಿಕ ಸಭೆಯಲ್ಲಿ ಉಪದೇಶಿಸಿದುದಕ್ಕಾಗಿ ಅವರಿಗೆ ಆರು ತಿಂಗಳ ಶಿಕ್ಷೆ ವಿಧಿಸಲಾಗಿದೆ. ಈ ಸುದ್ದಿಯನ್ನು ಕೇಳಿದ ಕ್ರಳುಗಂ ಸದಸ್ಯರು ತಿರುಚಿನಗರವಲ್ಲಿ ಸಂಚಲಿಸಿ, ಬ್ರಾಹ್ಮಣರ ಹೋಟೇಲು ಹಾಗೂ ಅಂಗಡಿಗಳ ಕೆಟ್ಟಿಕೆಗಳ ಮೇಲೆ ಕಲ್ಲು ತೂರಿದರು ಮತ್ತು ದೇವಾಲಯದ ಮುಂದಿನ ನಳ್ಳಿ ದೀಪಗಳನ್ನು ಒಡೆದರು; ಮಾರುಕಟ್ಟೆಯಲ್ಲಿ ಗಾಂಧೀಜಿಯವರ ವಿಗ್ರಹದ ಮೇಲೆ ಸಹ ಕಲ್ಲುಗಳನ್ನು ಎಸೆದರು.

ಸರಕಾರೀ ಭಾಷಾ ಪ್ರಶ್ನೆ

ಸರಕಾರೀ ಭಾಷಾ ಪ್ರಶ್ನೆಯ ವಿಚಾರವನ್ನು ದಕ್ಷಿಣದ ರಾಜ್ಯಗಳಾದ ಮೈಸೂರು, ಮದ್ರಾಸ, ಆಂಧ್ರ ಮತ್ತು ಕೇರಳ ರಾಜ್ಯಗಳ ಸರಕಾರಗಳು ಪರಿಶೀಲಿಸಿ ಏಕರೀತಿಯ ಧೋರಣೆಯನ್ನು ತಳೆಯುವುದೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರಾಡಿದ ಮಾತನ್ನು ಮದ್ರಾಸಿನ ಶ್ರೀ ಕಾಮರಾಜ ನಾಡಾರರವರು ಸ್ವಾಗತಿಸಿದ್ದಾರೆ. ಹಿಂದಿಯನ್ನು ಒತ್ತಾಯದಿಂದ ದಕ್ಷಿಣ ಭಾರತೀಯರ ಮೇಲೆ ಹೇರಿ ಸರಕಾರೀ ಭಾಷೆಯನ್ನಾಗಿ ಮಾಡಲಾಗುತ್ತದೆ ಎಂಬ ದೂರು ಕೇಂದ್ರ ಸರಕಾರದ ಮೇಲಿದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O S 361/1957.

ಶ್ಯಾಮರಾಯ ಬಲ್ಲಾಳ —ವಾದಿ

ಮತ್ತು

1. ಕಮಲು ಶೆಟ್ಟಿ. 2 ರಾಮುಂಣ ಶೆಟ್ಟಿ-ಚಿಕ್ಕಿ ಶೆಟ್ಟಿ ಮಗ—ಉಡ್ಪಿ ತಾಲ್ಲೂ ಮೂಡುಬೆಟ್ಟು ಗ್ರಾಮದ ವರಸೆರಾತ್ಕಾರು ಎಂಬವರಿರುವ —ಪ್ರತಿವಾದಿರು.

ಇವರೊಳಗೆ

ಸದ್ರಿ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ವಾದಿಯು ನಿಂಗು ಮೇಲೆ ಕೂಡಾ ಚಾಲಿಗೇಣಿ ಗೇಣಿ ಬಾಕಿ ಬಗ್ಗೆ ದಾಕ್ಷಲು ಮಾಡಿದ ಮೇಲ್ಕಂಡ ದಾವೆಯು 2ನೇ ಪ್ರತಿವಾದಿಯ ಅಮ್ಮೈರು ನೋಟಿಸು, ಬಗ್ಗೆ ತಾ. 30-12-57 ಕ್ಕೆ ಇಟ್ಟಿರುವುದರಿಂದ ಆ ಕಾರಿತು ನಿಮಗೇ ನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿನ ಹಗಲು 10 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(By order of the Court.)

P. N. Krishnamurthi Rao,
Advocate for Plaintiff.

Udipi, 16—12—57.

ಉಡುಪಿ

ಸಿಂಡಿಕೇಟ್ ಸಿಬಂದಿ ತರಬೇತಿ ಕಾಲೇಜಿನ ಉದ್ಘಾಟನೆ—

ದಿ ಕೆನರಾ ಇಂಡಸ್ಟ್ರಿಯಲ್ ಬ್ಯಾಂಕಿಂಗ್ ಸಿಂಡಿಕೇಟಿನ ಸಿಬ್ಬಂದಿ ತರಬೇತಿ ಕಾಲೇಜಿನ ಉದ್ಘಾಟನಾ ಸಮಾರಂಭವು ತಾ 16ನೇ ಬೆಳಿಗ್ಗೆ ಮಣಿಪಾಲದ ನಿವಾಸದಲ್ಲಿ ಮೈಸೂರಿನ ಕಾರ್ಮಿಕ ಮತ್ತು ಕಾನೂನು ಸಚಿವ ಶ್ರೀ ಡಿ ವೈ ಕುರ್ ಬುಳಿಗರ ಅಧ್ಯಕ್ಷತೆಯಲ್ಲಿ ಬೆಂಗಳೂರು ಸಿಟಿ ಕೋರ್ಪೊರೇಷನ್ನಿನ ಮೇಯರ್ ಶ್ರೀ ಜೀನಾ ಭಾಯಿ ದೇವಿದಾಸರಿಂದ ನೆರವೇರಿಸಲ್ಪಟ್ಟಿತು. ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ| ಟಿ ಎಂ. ಎ ಪೈಗಳು ಆರಂಭದಲ್ಲಿ ಸ್ವಾಗತ ಭಾಷಣ ಮಾಡುತ್ತ ರಾಷ್ಟ್ರೀಯ ಅಭಿವೃದ್ಧಿ ಕಾರ್ಯದಲ್ಲಿ ಬ್ಯಾಂಕುಗಳ ಪಾತ್ರವನ್ನು ವಿವರಿಸಿ, ಬ್ಯಾಂಕುಗಳು ತಮ್ಮ ನೌಕರ ಕ್ಷೇತ್ರವನ್ನು ಹೆಚ್ಚಿಸಿ ಹೆಚ್ಚಾಗಿ ವಿದ್ಯಾವಿಷಯಿಕೊಂಡರೆ ಸರಕಾರದ ಯೋಜನೆಗಳಿಗೆಲ್ಲಾ ಬೆಂಬಲಕೊಡಲು ಅನುಕೂಲವಾಗುವುದೆಂದರು. ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಟಿ ಎ ಪೈಗಳು ತರಬೇತಿ ಕಾಲೇಜಿನಲ್ಲಿ ಉಮೇದ್ವಾರರಿಗೆ ಅನುಸರಿಸಬೇಕಾದ ನಿಯಮಗಳ ತರಬೇತಿಯನ್ನಿತ್ತು ಅವರಲ್ಲಿ ಶಿಸ್ತು ಮತ್ತು ಕರ್ತವ್ಯ ಪ್ರಜ್ಞೆಯನ್ನು ಬೆಳೆಸಿ ಅವರನ್ನು ನೌಕರಿಗೆ ಸೇರಿಸಿಕೊಳ್ಳಲಾಗುವುದೆಂದೂ, ಹೆಚ್ಚಿನ ತರಬೇತಿಯ ಅನುಕೂಲತೆಯನ್ನು ಕೂಡಾ ಉಪಕ್ರಮಿಸಲಾಗುವುದೆಂದೂ, ಬ್ಯಾಂಕಿನಿಂದ ಉತ್ತಮ ಸೇವೆ ಸಲ್ಲಿಸಲಾಗುವಂತೆ ಈ ಕಾಲೇಜನ್ನು ಏರ್ಪಡಿಸಲಾಗಿದೆ ಎಂದೂ ಹೇಳಿದರು ಬಳಿಕ ಉದ್ಘಾಟಕ ಶ್ರೀ ಜೀನಾ ಭಾಯಿಯವರು ಈ ಬ್ಯಾಂಕು ಕ್ಷಿಪ್ರವಾಗಿ ಸುತ್ತು ಗ್ರಾಹಕರು ಮೆಚ್ಚುವ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಪ್ರಶಂಸಿಸಿ ಈ ಕಾಲೇಜಿನ ಯೋಜನೆಯು ಜೋಗ್ಯವೂ ಅನುಕರಣೀಯವೂ ಆಗಿದೆ ಎಂದರು. ಅಧ್ಯಕ್ಷ ಶ್ರೀ ಬಂಗೇರರು ಜಿಲ್ಲೆಯ ಕೆನರಾ ಗ್ರಾಮೀಣ ಬ್ಯಾಂಕುಗಳು ತಮ್ಮ ದಕ್ಷತೆಯಿಂದ ವಿಶೇಷ ಜನಪ್ರಿಯವಾಗಿವೆಯೆಂದೂ, ಜನರ ಉಳಿತಾಯವನ್ನು ಕ್ರೋಢೀಕರಿಸಿ ನೈಸರ್ಗಿಕ ಸಂಪತ್ತನ್ನು ಹೆಚ್ಚಿಸುವ ಮಹತ್ಕಾರ್ಯದಲ್ಲಿ ಬ್ಯಾಂಕುಗಳು ವಿಶೇಷ ಕೆಲಸ ನಿರ್ವಹಿಸಬಹುದೆಂದೂ, ಶ್ರೀ ಟಿ ಎ ಪೈಗಳು ವಿದೇಶ ಪ್ರವಾಸವನ್ನು ಕೈಗೊಂಡು ಬಂದ ಮೇಲೆ ಈ ಕಾಲೇಜು ಬಹು ಬೇಗನೇ ಪ್ರಥಮವಾಗಿ ಸ್ಥಾಪಿತವಾಗಿರುವುದಾಗಿಯೂ ಹೇಳಿ ಯಶಸ್ಸನ್ನು ಕೋರಿದರು. ಕೊನೆಯಲ್ಲಿ ಸಿಬ್ಬಂದಿ ತರಬೇತಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಕೆ ಪೈಗಳು ಆಭಾರ ಸೂಚಿಸಿದರು.

ಮೇಯರ್ ಜೀನಾ ಭಾಯಿಯವರಿಗೆ ನಗರ ಸಭೆಯ ಸನ್ಮಾನಪತ್ರ—

ಇದೇ ತಾ 16ನೇ ಸಂಜೆ ಬೆಂಗಳೂರು ಮೇಯರ್ ಶ್ರೀ ಜೀನಾಭಾಯಿ ದೇವಿದಾಸರಿಗೆ ಉಡುಪಿ ನಗರ ಸಭೆಯವರು ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಸನ್ಮಾನಪತ್ರವಿತ್ತರು ನಗರ ಸಭಾಪತಿ ಶ್ರೀ ಕೆ. ಪೈಗಳ ಸ್ವಾಗತಾದಿ ಎಲ್ಲಾ ಭಾಗಗಳಿಗೂ ಒಂದೇ ತರದ ಮುನಿಸಿಪಲ್ ಕಾನೂನಾಗಬೇಕು, ಸ್ವಾಂತತ್ರ್ಯ ನಗರ ಸಭಾಧ್ಯಕ್ಷರ ಚೇಂಬರೊಂದನ್ನು ಸ್ಥಾಪಿಸಬೇಕು, ನಗರ ಸಭೆಗೆ ಹೆಚ್ಚಿನ ಆದಾಯಕೊಡಬೇಕು ಎಂಬಿವೇ ಮೊದಲಾದ ವಿಶಯಗಳನ್ನೊಳಗೊಂಡ ಮಾನಪತ್ರವನ್ನೊಪ್ಪಿಸಿದರು. ಶ್ರೀ ದೇವಿದಾಸರು ಉತ್ತರವೀಯುತ್ತ ಪ್ರಕ್ರಿಯೊಂದು ಕೇಳಿಕೆಯೂ ಯುಕ್ತವಾದುದೆಂದೂ ನಗರ ಸಭೆಯ ಪ್ರತಿಯೊಂದು ವಿಷಯಕ್ಕೆ ಸರಕಾರದ ಉತ್ತರವನ್ನು ಕಾಯುವುದನ್ನು ಕ್ರಿಂಕ ಸ್ಥಳೀಯ ಅವಶ್ಯಕತೆಗಳ ಸಂಪೂರ್ಣ ಅನುಭವವಿರುವ ಕೌನ್ಸಿಲಿಗೆ ಹೆಚ್ಚಿನ ಸ್ವಾತಂತ್ರ್ಯ ಕೊಡುವುದು ವಿಹಿತವೆಂದು ಹೇಳಿದರು ಶ್ರೀ ಪಿ ವಿ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

೨೦ನು ಸ್ಥಾಪನಾ ಸಮಾರಂಭ-

ಸ್ಥಳೀಯ ಕಡಿಯಾಳಿ ಯಾ| ಎ| ಶಾಲಾ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ರಚಿಸಲ್ಪಡುವ ಶಾಶ್ವತ "ರಂಗ ಮಂಟಪ"ದ ಶಂಕುಸ್ಥಾಪನಾ ಸಮಾರಂಭವು ತಾ 13—12— 57ರಂದು ಪೂರ್ವಾಹ್ನ ೩ಗಂಟೆಯ ಆತಿ ಕಿರಿಯ ವಿದ್ಯಾರ್ಥಿ ಶ್ರೀ ಕೆ. ಅನಿಲಪೈ ಇವರಿಂದ ನೆರವೇರಿತು ಶಾಲಾ ವ್ಯವಸ್ಥಾಪಕ ಪರಿಷತ್ತಿನ ಸಾರ್ವಸ್ವಪ್ಯ ನರು ಹಿರಿಯರನ್ನು ವಹಿಸಿದ್ದರು. ರಂಗಮಂಟಪದ ಕಾರ್ಯವು ಈಗ ತ್ವರಿತಗತಿಯಿಂದ ಜರಗುತ್ತಾ ಇದೆ

ಮೂಲ್ಕಿ—

ದ ಕ ಜಿಲ್ಲಾ ಹರಿಜನ ಸಾಮಾಜಿಕ ಪರಿಷತ್ತು ಇದೇ ತಾ 11ರಲ್ಲು ಶ್ರೀ ಬಿ ಆರ್ ಕರ್ಕೇರ, ಎಮ್ ಎಲ್ ಎ, ಅವರಿಂದ ಧ್ವಜಾರೋಹಣದೊಡನೆ ೨ನೇ ರಂಧ್ರವಾಯಿತು ಬಳಿಕ ಶ್ರೀ ಎಮ್ ಶಂಕರ ಪೂಜಾರಿ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ, ಪರಿಷತ್ತಿನಲ್ಲಿ ಮಂಡಿಸಬೇಕಾದ ನಿರ್ಣಯಗಳನ್ನು ಡಾ| ರಾಯಪ್ಪ ಕಾಮತ್, ಶ್ರೀ ಯು. ಮುಂಜಪ್ಪ, ಎಮ್ ಎಲ್ ಎ ಮೊದಲಾದವರು ಸೂಚಿಸಿದರು

ಸಂಜೆ ಜಿಲ್ಲಾ ಹರಿಜನ ಸಾಮಾಜಿಕ ಪರಿಷತ್ತು ಜಿಲ್ಲಾ ಡಿಸ್ಟ್ರಿಟ್ ಕಮಿಷನರ್ ಶ್ರೀ ವೈ. ಸಿ ಹೊಂಬಾಳೆಯ್ಯನವರ ಅಧ್ಯಕ್ಷತೆಯಲ್ಲಿ ಮೂಲ್ಕಿ ಒಂಭತ್ತು ಮಾಗಣಿ ಶಿವ ಸಮಾಜ ಸಂಸ್ಥಾಪಕ ನೇತೃತ್ವದಲ್ಲಿ ಜರಗಿತು ವ್ಯಾಪಾರಾನಂತರ ಶ್ರೀ ಯು ಮಂಜಪ್ಪನವರಿಂದ ಸ್ವಾಗತ ಭಾಷಣವಾಯಿತು ಡಾ ಕೆ ನಾಗಪ್ಪ ಅಳ್ವ, ಎಮ್ ಎಲ್ ಎ, ಅವರು ಸರಿಪತ್ತನ್ನು ಉದ್ಘಾಟಿಸುತ್ತ, ದಿನದಂತೆ ಕಾರ್ಡ್ ಪದವಿನ ರಾಮ್ ದಿ ರಾಮಕೃಷ್ಣ ಸೂಂಜ ಮೊದಲಾದವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ಡಾ| ಯು ಪಿ ಮಲ್ಯ, ಡಾ| ರಾಮಪ್ಪ ಕಾಮತ್, ಡಾ| ಸಂಜೀವ ನಾಥ ಮೊದಲಾದವರು ಕಾಲೋಚಿತ ಭಾಷಣ ಮಾಡಿದರು ಸಭಾಧ್ಯಕ್ಷರು ಹರಿಜನರ ಅಭಿವೃದ್ಧಿಗಾಗಿ ಕೈಲಾದ ಸಹಾಯ ನೀಡುವುದಾಗಿ ಭರವಸೆಯಿತ್ತರು

ಕುಂದಾಪುರ-

ವಿದೇಶಸ್ಥವಾಸವನ್ನು ಮುಗಿಸಿ ಬಂದಿರುವ ಶ್ರೀ ಟಿ. ಎ. ಪೈಗಳ ಗೌರವಾರ್ಥವಾಗಿ ಶತ್ಕಾರ ಸಮಾರಂಭವೊಂದು ದಿ ಮಾರ್ಚ್ ಶ್ರೀ ವೈ ರವಿರಾಜರ ಅಧ್ಯಕ್ಷತೆಯಲ್ಲಿ ತಾ ೨೮ಲ್ಲಿ ನೆರವೇರಿತು ಶ್ರೀ ಪೈಗಳ ಯೋಗ್ಯತೆಯನ್ನು ಶ್ಲಾಘಿಸಿ ಶ್ರೀಗಳಾವ ರಶಂನಾಧ ಶೆಟ್ಟಿ ಎನ್ ಎಸ್ ಪರಮೇಶ್ವರಯ್ಯ, ಎಂ ಎಂ ಜೆಡ್ಡಿ ಇವರು ಮಾತನಾಡಿದರು. ಶ್ರೀ ಪೈಗಳು ತನ್ನ ಪ್ರವಾಸದ ಅನುಭವಗಳನ್ನು ವಿವರಿಸಿ ಭಾಷಣವನ್ನಿತ್ತರು. ಶ್ರೀ ವೈ ಮಂಜಯ್ಯ ಶೆಟ್ಟಿ ಎಂ ಎಲ್. ಎ ಅವರು ಆಭಾರ ಸೂಚಿಸಿದರು.

ಬೈಲೂರು

ಇದೇ ತಾ 11ರಂದು ಬೋರ್ಡು ಹೈಸ್ಕೂಲಿನಲ್ಲಿ ಶ್ರೀಯು. ಎಲ್. ಆಚಾರ್ಯರು ಶ್ರೀ ಬಿ. ಎನ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಕ್ಯತಕ ಚಂದ್ರ ಎಂಬ ಕಾರಿತು ಉಪನ್ಯಾಸವಿತ್ತರು

ಕಾಪು—

ತಾ. 13ರಂದು ವಿದೇಶ ಪ್ರವಾಸದಿಂದ ನುರಳಿ ಬಂದಿರುವ ಶ್ರೀ ಟಿ ಎ. ಪೈಗಳಿಗೆ ಕಾಪು ಕ್ಷೇತ್ರದ ನುಹಾಜನರು ಮಹಿಳಾ ಸಮಾಜ ಕಟ್ಟೋಣ ಕೇಂದ್ರ ಇವರ ವಲ್ಲಿ ಸತ್ಕಾರ ಕೂಟವನ್ನಿತ್ತು ಗೌರವಿಸಿದರು ಅದೇ ದಿನ ಸಂಜೆ ಶ್ರೀ ಪೈಗಳು ಶ್ರೀ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಬಂಗ್ಲೆ ಮೈದಾನದಲ್ಲಿ ಸಾರ್ವಜನಿಕ ಭಾಷಣವಿತ್ತರು.

ಕನ್ನಡ ಸಾಹಿತ್ಯ ಪರಿಷತ್ತು,

ಚಾಮರಾಜ ಪೇಟೆ, ಬೆಂಗಳೂರು-೨

ನಲವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಬಳ್ಳಾರಿಯಲ್ಲಿ೧೯೫೮ನೇ ಜನವರಿ ೧೮ನೇ ತಾರೀಕು ಸಂಜೆಯಿಂದ ೩ ದಿನಗಳ ವರೆಗೆ ನಡೆಯುತ್ತದೆ. ಮೈಸೂರಿನ ರಾಜ್ಯಪಾಲರಾದ ಶ್ರೀ ಮಜ್ಜಯಚಾಮರಾಜ ಒಡೆಯರವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಲು ಕೃಪೆಯಿಟ್ಟು ಒಪ್ಪಿರುತ್ತಾರೆ ಧಾರವಾಡದ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರೂ ಪ್ರಸಿದ್ಧ ಸಾಹಿತಿಗಳೂ ಆದ ಶ್ರೀ ವಿ ಕೆ ಗೋಕಾಕ್, ಎಂ. ಎ, ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸುತ್ತಾರೆ.

ಸಮ್ಮೇಳನದ ಅಂಗವಾಗಿ ಕವಿ ಸಮ್ಮೇಳನ ಕಥಿಗಾರರ ಸಮ್ಮೇಳನ, ಪಂಡಿತ ಗೋಷ್ಠಿ ಕಲಾಗೋಷ್ಠಿ ವಿವಿಧ ಭಾಷಾ ಗೋಷ್ಠಿಗಳು ನಡೆಯುತ್ತವೆ. ಪುಸ್ತಕಗಳ ಪ್ರದರ್ಶನ ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಿದೆ

ಸಮ್ಮೇಳನದ ಪ್ರತಿನಿಧಿಗಳಿಗಾಗಿ ಬರುವ ನರಿಗೆ ಕ್ಲೈಲ್ವೆ ಜೋರ್ಡಿನವರು ಎರಡು ಪ್ರಯಾಣಕ್ಕೆ ಒಂದು ಜಾರ್ಜಿನ ರಿಯಾಯಿತಿ ಕೊಟ್ಟಿರುತ್ತಾರೆ ರಿಯಾಯಿತಿ ಪತ್ರಗಳನ್ನು ಪರಿಷತ್ತಿನ ಕಛೇರಿಯಲ್ಲಿ ಪಡೆಯಬಹುದು

ಡಿ ಆರ್ ರಾಮಯ್ಯ,
ಕ. ಗೋಪಾಲ ಕೃಷ್ಣರಾಯ,
ಗೌ.ಪ ಕಾರ್ಯದರ್ಶಿಗಳು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು ರಾಘವೇಂದ್ರ ಆಚಾರ್ಯ, ಎಂ ಎ)

ಸಾಮಾನ್ಯ ರೋಗಗಳು

(ಡಾ ಕೆ.ಎಲ್.ಪಿತಾಳ್ಕ,ಎಂ ಬಿ ಬಿ ಎಸ್.)

ಭೌತಿಕ ದರ್ಶನ

(ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಂಗಳೂರು

ಕೆನರಾ ಚೇಂಬರ್ ಆಫ್ ಕಾಮ

ಸಿನೆ ಸಭೆಯೊಂದು—ತಾ. 13ರಂದು ಶ್ರೀ ಕೆ. ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಸರಕಾರದ ವಾಣಿಜ್ಯಕರ ವಿಭಾಗದ ಮೈಸೂರು ವಿಭಾಗದ ಡಿವಿಜನಲ್ ಕಮೀಷನರ್ ಶ್ರೀ ಎಸ್. ಪಿ. ಗುಂಡ ಸೆಟ್ಟಿಯವರು 1957ನೆ ಇಸವಿಯ ಮೈಸೂರಿನ ಮಾರಾಟಕರ ಮಸೂದೆ ಕುರಿತು ಭಾಷಣವೊಂದನ್ನು ಮಾಡಿದರು. ಆವರು ತಮ್ಮ ಭಾಷಣದಲ್ಲಿ ನಮ್ಮ ಸಂಸ್ಥಾನದ ವ್ಯಾಪಾರವು ಬೇರೆ ರಾಜ್ಯಗಳಿಗೆ ಹೋಗುವ ರೀತಿಯಲ್ಲಿ ಅದನ್ನು ವ್ಯವಸ್ಥೆಗೊಳಿಸಬೇಕಾಗಿದೆ ಎಂದರು. ಮೊನ ಕಾನೂನಾನಿನ್ನೆಯ ಒಬ್ಬ ನ್ಯಕ್ಷರಾಯರಾಗಲಿ ತನ್ನ ಉತ್ಪನ್ನವನ್ನು ತಾನೇ ಮಾರುವುದಾಗಲಿ ಅದಕ್ಕೆ ಮಾರಾಟಕರ ತೆರಿಗೆಯು ಅಗಾಧವಾಗುವುದಿಲ್ಲ, ಆದರೆ ತನ್ನ ಉತ್ಪನ್ನವನ್ನು ಬೇರೆಯವರ ಮೂಲಕ ಮಾರಾಟ ಮಾಡಿಸಿದ್ದಲ್ಲಿ ಅವನು ತೆರಿಗೆ ಕೊಡಲು ಬದ್ಧನಾಗುತ್ತಾನೆ ಎಂದರು.

ಮಾರಾಟಕರದಿಂದ ವಿರಹಿತಗೊಳಿಸಲ್ಪಟ್ಟ ಕೆಲವು ವಸ್ತುಗಳನ್ನು ತುಂಬಿಸುವ ಗೋಣಿ ಚೀಲ ಮುಂತಾದುವುಗಳನ್ನು ತೆರಿಗೆಯಿಂದ ವಿನಾಯತಿಗೊಳಿಸಬೇಕು, ನಕಮುಖ ತೆರಿಗೆಯನ್ನು ಯಾರು ಕೊಡಬೇಕೆಂಬುದನ್ನು ನಿರ್ಧರಿಸಬೇಕು ಮತ್ತು ಹೊಗೆಸೊಪ್ಪು ವ್ಯಾಪಾರಸ್ಥರಿಗೆ ಸರಕಾರವು ಕೆಲವು ಸೌಲಭ್ಯಗಳನ್ನು ಕೊಡಬೇಕು, ಇವೆರಡಕ್ಕೆ ಮದ್ರಾಸು ಮಾರಾಟಕರ ಮಸೂದೆಯನ್ನು ಸರಿಸುತ್ತಿದ್ದ ಜಿಲ್ಲೆಯ ಜನರು ಈಗ ಹೊಸದಾಗಿ ಮಂಡಿಸಲಾದ ಮೈಸೂರು ಮಾರಾಟಕರ ಮಸೂದೆಗೆ ಹೊಂದಿಕೊಳ್ಳುವ ತನಕ ವಿನಾಯತಿಯನ್ನು ತೋರಿಸಬೇಕು ಎಂದು ಸಭೆಯಲ್ಲಿ ಹಾಜರಿದ್ದ ಸದಸ್ಯರು ಸಲಹೆ ನೀಡಿಕೊಂಡರು.

ವರ್ಗಾವರ್ಗಿ—ಮಂಗಳೂರು ಸಹಕಾರಿ ಸಂಘಗಳ ಸ್ಪೆಶಲ್ ಆಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ. ಎಮ್. ಕೃಷ್ಣ ಶೆಟ್ಟರು ಹೊಸ ಪೇಟೆ ಸೆಂಟ್ರಲ್ ಬೇಂಕಿನ ವಿಶೇಷಾಧಿಕಾರಿಯಾಗಿ ವರ್ಗಾಯಿಸಲ್ಪಟ್ಟು ತಮ್ಮ ಹೊಸ ಹುದ್ದೆಯನ್ನು ಈಗಾಗಲೇ ಸ್ವೀಕರಿಸಿರುವರು.

ಸಾರ್ವಜನಿಕ ಅಧ್ಯಯನ ವರ್ತುಲ

ದಿಲ್ಲಿ—ತಾ. 11ರಂದು ಸೈಂಟ್ ಆಗ್ನಿಸ್ ಕಾಲೇಜಿನ ಪ್ರಾಧ್ಯಾಪಿಕೆ ಶ್ರೀಮತಿ ಇಸಬೆಲಾ ಕುಪ್ಪು ಸ್ವಾಮಿಯವರು 'ಸಮಸ್ಯೆಯ ಅಧ್ಯಾಸ'ವೆಂಬ ವಿಷಯದಲ್ಲಿ ಭಾಷಣವೀಯುತ್ತಾ 'ಇಂದಿನ ಸಮಾಜದಲ್ಲಿರುವ ಸಾಮಾಜಿಕ, ದೈಹಿಕ ಮಾನಸಿಕ ಮತ್ತು ಭಾವನಾತ್ಮಕ ರೋಗಿಗಳ ಮತ್ತು ಕುಂದುಕೊರತೆಯುಳ್ಳವರ ಸುಧಾರಣೆಯನ್ನು ಕೈಕೊಳ್ಳಲು ಮನಶ್ಶಾಸ್ತ್ರ, ಸಮಾಜ ಶಾಸ್ತ್ರದ ಪರಿಣತಿಗಿಂತ ಹೆಚ್ಚು ಮಾನವೀಯತೆಯ ಅರಿವು ನೇಮಯ ದೃಷ್ಟಿ ಅಗತ್ಯ' ವೆಂದರು.

ಯಕ್ಷಗಾನ ಕೂಟ—ಮಂಗಳೂರಿನ ಬುನಾದಿ ತರಬೇತಿ ಶಾಲೆಯಲ್ಲಿ ಕಳೆದ ಶನಿವಾರ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳ ಮತ್ತು ಹಾಡುಗಾರರ ಕೂಡುವಿಕೆಯಿಂದ 'ಅಂಗದ ರಾಯಭಾರ' ಎಂಬ ಯಕ್ಷಗಾನ ಕೂಟವು ಜರಗಿತು. ಶ್ರೀಗಳಾದ ನೆಕ್ರಾಜೆ ಜಗನ್ನಾಥ ಶೆಟ್ಟಿ, ಪದ್ಮಾನ್, ಎಮ್ ರಾಮಚಂದ್ರ ಭಟ್, ಎಸ್. ಕೃಷ್ಣ ಭಟ್, ಪದ್ಮಾನ್, ಕೆ. ಕಾಂತ ರೈ, ಪದ್ಮಾನ್, ಬೆಳ್ಳಾರೆ ಕೆಪ್ಪಣ್ಣ ರೈ ಎ. ನಾರಾಯಣ ಶೆಟ್ಟಿ ಮತ್ತು ಕೆ. ಎಲ್. ಗೋಪಾಲ ಕೃಷ್ಣ ಎಂಬವರು ಭಾಗವಹಿಸಿದ್ದರು. ಅಧ್ಯಾಪಕ ಶ್ರೀ ಟಿ. ಕೃಷ್ಣಪ್ಪನವರು ಸ್ವಾಗತಿಸಿದರು, ವಿದ್ಯಾರ್ಥಿ ಮುಂದಾಳುಗಳು ಧನ್ಯವಾದಗಳನ್ನಿತ್ತರು.

ಶ್ರೀ ಮೊರಾರ್ಜಿ ದೇಸಾಯಿಯವರ ಆಗಮನ—ಕೇಂದ್ರದ ವಾಣಿಜ್ಯ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ತಾ 14 ರಂದು ಇಲ್ಲಿಗೆ ಆಗಮಿಸಿದಾಗ ಪ್ರಮುಖ ಅಧಿಕಾರಿಗಳೂ ಅಧಿಕಾರೇತರರೂ ಆವರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು. ಶ್ರೀ ದೇಸಾಯಿಯವರಿಗೆ ಏರ್ಪಡಿಸಿದ ಬೃಹತ್ ಸ್ವಾಗತ ಸಮಾರಂಭದಲ್ಲಿ ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಶ್ರೀ ದೇಸಾಯಿಯವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿದರು. ದೇಸಾಯಿಯವರು ಚಿಲ್ಲೆಯ ಜನರ ಶಾಂತ ಮನೋಭಾವನೆಯನ್ನು ಶ್ಲಾಘಿಸಿ ಪ್ರಜಾಸ್ವಭುತ್ವದ ಜಯಶೀಲತೆಗೆ ಸ್ಥಳೀಯ ಸಂಸ್ಥೆಗಳ ಪಾತ್ರವು ಮುಖ್ಯವಾದುದೆಂದೂ ಕಾರ್ಪೊರೇಶನ್‌ಗಳು ಸಮಸ್ತ ನಗರದ ಏಳಿಗೆಗಾಗಿ ಮಡಿಯಬೇಕೆಂದೂ ಹೇಳಿದರು.

ಬಳಿಕ ಶ್ರೀ ದೇಸಾಯರು ಭಾರತದ ಪ್ರಮುಖ ಸ್ಪಿನ್ನಿಂಗ್ ತಯಾರಿಕಾ ಸಂಸ್ಥೆಯಾದ ಕೆನರಾ ವರ್ಕ್ಸ್ ರೋಪಿಗೆ ಭೇಟಿಕೊಟ್ಟರು. ಶ್ರೀ ವಿ. ಎಸ್. ಕುಡುವರೂ ಶ್ರೀ ಎಸ್. ವಿ. ಕಾಮತರೂ ಮಂತ್ರಿಗಳಿಗೆ ಸಂಸ್ಥೆಯ ಕಾರ್ಯಗಳ ಮಾಹಿತಿ ಮಾಡಿಕೊಟ್ಟರು.

ತರುವಾಯ ಸಚಿವರು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣಮಾಡುತ್ತ ಕಾಂಗ್ರೆಸ್ ಕಾರ್ಯಕರ್ತರು ರಚನಾತ್ಮಕ ಕೆಲಸಗಳಿಂದ ದೇಶಾಭ್ಯುದಯಕ್ಕಾಗಿ ಮಡಿಯಬೇಕೆಂದೂ ದೇಶದಲ್ಲಿ ಈಗ ತಲೆನಿತ್ತಿರುವ ಸಂಕುಚಿತ ಭಾವನೆಯನ್ನು ನಿರ್ಮೂಲಿಸಿ ದೇಶದ ಏಕ್ಯತೆಗಾಗಿ ಕ್ರಮಿಸಬೇಕೆಂದೂ ಕಾಂಗ್ರೆಸ್ಸಿನಲ್ಲಿ ಮಹಿಳಾ ಸದಸ್ಯರನ್ನು ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳಬೇಕೆಂದೂ ಹೇಳಿದರು. ಅರಂಭದಲ್ಲಿ ಶ್ರೀ ಎಫ್. ಎಕ್ಸ್ ಡಿ. ಪಿಂಟೋರವರು ಮಂತ್ರಿಗಳನ್ನು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.ಯವರು ಧನ್ಯವಾದಗಳನ್ನಿತ್ತರು.

ಬೆಂಗಳೂರು ಮೇಯರ್ ಜೀನಾ ಭಾಯಿ ದೇವಿದಾಸರು—ತಾ. 14ರಂದು ಇಲ್ಲಿಗೆ ಆಗಮಿಸಿದರು. ತಾ. 15ರಂದು ಆನರಿಗೆ ನಗರ ಸಭೆಯ ಪೌರಸ್ವಾಗತವನ್ನು ಕೊಡಲಾಯಿತು. ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಪೌರಸ್ವಾಗತ ಪತ್ರವನ್ನು ಅರ್ಪಿಸಿದರು. ಶ್ರೀ ಜೀನಾ ಭಾಯಿಯವರು ಆದಕ್ಕೆ ಉತ್ತರವೀಯುತ್ತಾ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಡುವುದು ಅಗತ್ಯವೆಂದರು. ಒಕ್ಕಾಲಿಗ ತೆರಿಗೆ ಹೊರಸಬಾರದೆಂದೂ ಬಡವರಿಗೆ ಅನುಕೂಲವಾಗುವಂತೆ ಹಿಂ ನುತ್ತು ಕಣ್ಣಿ ರಸ್ತೆಗಳ ಕಡೆಗೆ ವಿಶೇಷ ಗಮನ ಕೊಡಬೇಕೆಂದೂ ಅವರು ಸೂಚಿಸಿದರು. ಈ ಸಮಾರಂಭದಲ್ಲಿ ಮೈಸೂರಿನ ಮಂತ್ರಿ ಶ್ರೀ ವೈಕುಂಠ ಬಾಳಿಗರೂ ಉಪಸ್ಥಿತರಿದ್ದರು.

ಸಹಾಯಾರ್ಥ ಚಲಚ್ಚಿತ್ರ ಪ್ರದರ್ಶನ—ಮೊಂಡು ರಾಮಕಾಂತಿ ಟ್ಯೂಕೀಸಿನಲ್ಲಿ ನವಭಾರತ ರಾತ್ರಿ ಶಾಲೆಯ ಸುಸ್ತಾಕಾಲಯದ ಬಗ್ಗೆ ಶ್ರೀ ಎಫ್. ಎಕ್ಸ್ ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ರಂಧ್ರವಲ್ಲಿ ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿಯವರು ಸ್ವಾಗತ ಭಾಷಣ ಮಾಡಿದರು.

ಗುರುಪುರ—ಮಂಗಳೂರು ರಾಷ್ಟ್ರೀಯ ವಿಸ್ತರಣಾ ಯೋಜನಾ ಕ್ಷೇತ್ರದ ಗ್ರಾಮ ಪ್ರಮುಖರ ಪರಿಷತ್ತು ತಾ 7ರಂದು ಡಾ. ಕೆ. ನಾಗಪ್ಪ ಆಳ್ವ, ಎಮ್. ಎಲ್. ಎ., ಆವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರಿನ ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಪರಿಷತ್ತನ್ನು ಉದ್ಘಾಟಿಸಿದರು. ಗುರುಪುರ ಮಠದ ಶ್ರೀ ಚಿನ್ಮಯಪ್ಪ ಸ್ವಾಮಿಯವರು ಧ್ವಜಾರೋಪಣ ಮಾಡಿದರು. ಶ್ರೀ ಎನ್. ಶಿವರಾಯರು ಸ್ವಾಗತಿಸಿದರು. ಮಂಗಳೂರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಮುದ್ದಣ್ಣ ಶೆಟ್ಟರು ಪರಿಷತ್ತಿನ ಉದ್ದೇಶಗಳನ್ನು ವಿವರಿಸಿದರು.

ಶ್ರೀ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ರೈತರು ತಮ್ಮ ಜೀವನವನ್ನು ಸುಧಾರಿತ ಕೃಷಿ ಮತ್ತು ಇತರ ಗ್ರಾಮಾಭಿವೃದ್ಧಿ ಕಾರ್ಯಗಳಿಂದ ಹೇಗೆ ಉತ್ತಮಗೊಳಿಸಬಹುದೆಂದು ವಿವರಿಸಿದರು ಸರಕಾರದ ಬೇರೆ ಬೇರೆ ಖಾತೆಗಳೊಡನೆ ಅನ್ಯೋನ್ಯ ಸಹಕಾರ ಸಂಪರ್ಕಗಳಿಲ್ಲದುದಕ್ಕೆ ಶ್ರೀ ಸೆಟ್ಟರು ವಿಷಾದಪಟ್ಟರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಗಳೂರು ತಾ. ವಿ. ಯೋಜನಾ ಕ್ಷೇತ್ರದ 53 ಗ್ರಾಮುಗಳಿಂದ ಆಗಮಿಸಿದ ಪ್ರತಿನಿಧಿಗಳ ಕಾರ್ಯಕ್ಕೆ ಯಶಸ್ಸನ್ನು ಕೋರಿ ಮಾತನಾಡಿದರು. ನಂತರ ಚರ್ಚಾಕೂಟಗಳು ನಡೆದವು. ಮನರಂಜನ ಕಾರ್ಯಕ್ರಮಗಳಾಗಿ ಪರಿಷತ್ತು ಕೊನೆಗೊಂಡಿತು. ಮರುದಿವಸ ಸಂಜೆ ಜಿಲ್ಲಾಧಿಕಾರಿಯ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ಜರುಗಿತು ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಪರಿಷತ್ತಿನಲ್ಲಿ ಭಾಗವಹಿಸಿದವರಿಗೆ ಸಲಹೆಗಳ ಸ್ವಿತ್ತರು.

ಮಲ್ಪೆ—ಇಲ್ಲೇ ತಾ. 8ರಂದು ಡಾ. ಯು. ಸುಂದರ ರಾವು ಮೈಗಳ ಪಷ್ಟ ಕೃಷ್ಣ ಪೂರ್ತಿಯ ನಿಮಿತ್ತ ಸತ್ಕಾರ ಕೂಟವೊಂದು ಶ್ರೀ ಟಿ. ಎ. ಪೈಗಳ ಸಭಾಧ್ಯಕ್ಷತೆಯಲ್ಲಿ ಜರಗಿತು. ಡಾ! ವಿ. ಕೆ. ಬಲ್ಲಾಳರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ ಮಧ್ವರಾಜರು ಡಾ! ಪೈಗಳು ಮಾಡಿದ ಜನಹಿತ ಕಾರ್ಯಗಳನ್ನು ವಿವರಿಸಿದರು. ಪಿಲ್ಲಸಾಲ್ ಎಸ್. ಸುಂದರಾಯರು ಡಾ! ಪೈಗಳ ಭಾವಚಿತ್ರವನ್ನು ಅನಾವರಣ ಮಾಡಿದರು.

ಕ್ಷಯರೋಗದ ಗೃಹಚಿಕಿತ್ಸೆಗಾಗಿ ಬೇಕಾದ ಹಂಚಿಕೆಗಳು

ಕಫ ರೂಪಾಂತರದಿಂದ ಕ್ಷಯ ರೋಗಿಗಳಿಗೆ ತಿರುಗಿ ಅದು ಸೋಂಕಣೆಯೊಗುವುದಿಲ್ಲ ವೆಂಬುದು ಈಗೀಗ ಹೆಚ್ಚುಹೆಚ್ಚಾಗಿ ಸ್ಪಷ್ಟವಾಗುತ್ತಿದೆ. ಬಹುಸಂಖ್ಯಾಕ ರೋಗಿಗಳಿಗೆ ಆಂಟಿಬಯೋಟಿಕ್ಸ್‌ನ ಗೃಹಚಿಕಿತ್ಸೆಯು ಚಿಕಿತ್ಸಾಲಯಗಳ ಚಿಕಿತ್ಸೆಯಷ್ಟೇ ಉತ್ತಮವಾದುದೆಂದು ತಿಳಿಯಬಹುದು. ಆದ್ದರಿಂದ ಈ ತರದ ಚಿಕಿತ್ಸೆಯನ್ನು ವಿಸ್ತರಿಸುವುದು ಅನಿವಾರ್ಯವಿದೆ. ಇದಕ್ಕೆ ಬೇಕಾದ ಹಂಚಿಕೆಗಳಿವು—

1. ಎಲ್ಲಾ ಯೋಗ್ಯ ಕ್ಷಯರೋಗಿಗಳಿಗೆ ಆಂಟಿಬಯೋಟಿಕ್ಸ್‌ನ್ನು ಉಚಿತವಾಗಿ ಹಂಚುವುದು.
2. ಪ್ರತಿಬಂಧಕವು ಯಶೋಚಿತವಲ್ಲದಿದ್ದಲ್ಲಿ ಔಷಧಗಳನ್ನು ಸೇವಿಸುವುದು
3. ಸಂಪೂರ್ಣ ಗುಣವಾಗದೆ ಕೆಲಸಕ್ಕೆ ಹೋಗದಂತೆ ಬಡರೋಗಿಗಳ ಕುಟುಂಬಕ್ಕೆ ಹಣಸಹಾಯ ಮಾಡುವುದು.



ಸರಕಾರವಾಗಲೀ ಇತರ ಸಂಸ್ಥೆಯಾಗಲೀ ನಿಧಿಯಿಲ್ಲದೆ ಇದನ್ನು ಉಪಕ್ರಮಿಸುವುದು ಕಷ್ಟಸಾಧ್ಯ. ಟಿ. ಬಿ. ಮೊಹರು ವಾರಾಟ ಚಳವಳಿಯು ನಿಧಿ ಸಂಗ್ರಹಿಸಲು ಸಹಾಯವಾಗುವುದು. ಆದುದರಿಂದ ಈ ಚಳವಳಿಯು ಜನರ ಪೂರ್ತ್ಯೋದ್ಯಮ ಸಹಕಾರವನ್ನು ಅಪೇಕ್ಷಿಸುತ್ತದೆ. ದಯವಾಗಿ ಟಿ. ಬಿ. ಮೊಹರುಗಳನ್ನು ಬಹುಸಂಖ್ಯೆಯಲ್ಲಿ ಕೊಂಡುಕೊಂಡು ಉಪಯೋಗಿಸಿರಿ.

ಅವುಗಳು ಸಿಗುವ ಸ್ಥಳಗಳು:

ಗೌರವ ಕಾರ್ಯದರ್ಶಿ, ಮೊಹರು ವಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನದ ರಸ್ತೆ, ಮಂಗಳೂರು.
ಜಿಲ್ಲಾ ಮೆಡಿಕಲ್ ಆಫೀಸರ್,
ಮಡಿಕೇರಿ, ಕೊಡಗು.
ಗೌರವ ಕಾರ್ಯದರ್ಶಿ, ಮೈಸೂರು ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ಸ್ಟೇಟಿನ ಇತರೆ ಏಜನ್ಸಿಗಳು

ದೋಕೆದಲ್ಲೆಲ್ಲಾ ಮಾನವನ ಸದ್ಭಾವ ಮತ್ತು ಸೋದರತೆಯೆನ್ನು ಸಂಕೇತಿಸುವ ಸಾಂಪ್ರದಾಯಿಕ ಪಾರಿತೋಷ ಬದಲಾವಣೆಯು ಆನಂದ ಮತ್ತು ಸಮೊರಂಭದ ಒಳ್ಳೆಯ ಸಮಯವಿದು. ಪತ್ರ, ಪಾರ್ಸೆಲು, ಪಾರಿತೋಷ ಮತ್ತು ವಂದನಾಪತ್ರಗಳಿಗೆ ಟಿ. ಬಿ. ಮೊಹರುಗಳನ್ನು ಪದಕೊಂಡು ಹಚ್ಚುವವರಿಗೆ ಕ್ಷಯರೋಗಿಗಳು ಉಪಕೃತರಾಗಿದ್ದಾರೆ.

ಭಾರತದಲ್ಲಿ ಎಂಟನೆ ಕ್ಷಯರೋಗ ಮೊಹರು ವಾರಾಟ ಚಳವಳಿ

ಈ ಸ್ಥಳದ ದಾನಿಗಳು:-

ನ್ಯಾಶನಲ್ ಕಾರ್ಬನ್ ಕಂಪೆನಿ (ಇಂಡಿಯ) ಲಿ. ಕಲ್ಕತ್ತ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸು ನವರು ದಯಮಾಡಿ ಎರಡು ಪ್ರತಿಗಳನ್ನು ಕಳಸಬೇಕು. ಸಂ ನ.)

ಝಾನ್ಸಿಯ ರಾಣಿ ಲಕ್ಷ್ಮೀಬಾಯಿ

—ಮೂಲ ಹಿಂದೀ ರೇಖಚಿತ್ರ ಶ್ರೀ ವೃಂದಾವನಲಾಲ್ ವರ್ಮ, ಅನುವಾದಕರು ಮೇಜರ್ ಎನ್ ಜಿ ಹೋವಿಂದರಾಜ. ಪ್ರಕಾಶಕರು: ಕಾವ್ಯಾಲಯ, ಮೈಸೂರು ಸೈಜ್ ಕ್ರೌನ್ ೧/೪ರ XVI + ೪೪೮. ಬೆಲೆ. ರೂ. ೩-೭೫.

ಭಾರತವು ಇಂದು ಸ್ವಾತಂತ್ರ್ಯವನ್ನು ಪಡೆದು ಪ್ರಗತಿ ಪಥದಲ್ಲಿ ನಡೆಯುತ್ತಿದೆ. ಎಲ್ಲರೂ ತಿಳಿದಿರುವಂತೆ ಈ ಸ್ವಾತಂತ್ರ್ಯವು ಕೇವಲ ಕೆಲವೇ ಜನರಿಂದ ತ್ಯಾಗ, ಕರ್ತವ್ಯ ದಕ್ಷತೆಯ ಫಲ ಸ್ವರೂಪವಲ್ಲ ಅದಷ್ಟೇ ಜನರಿಂದ, ಬ್ರಿಟಿಷರು ವ್ಯಾಪಾರಕ್ಕಾಗಿ ಬಂದು ಬಲವಾಗಿ ತಳವೂರಿ ಭಾರತದ ಪ್ರಜೆಗಳನ್ನು ಭೇದೋಪಾಯದಿಂದ ವಂಚಿಸಿ ಇಲ್ಲಿನ ಆಳರಸರನ್ನು ಒಂದಲ್ಲೊಂದು ವಿಧಾನದಿಂದ ತಮ್ಮ ಅಧಿಕಾರ ರಕ್ಷಣೆಯಲ್ಲಿರಿಸಿಕೊಂಡುದನ್ನು ಹಾಗೂ ಇರಿಸಿಕೊಳ್ಳಲು ಹವಣಿಸುತ್ತಿದ್ದುದನ್ನು ಪ್ರಾರಂಭಿಕ ವೇಳೆಯಲ್ಲಿರಿಯದೆ ಹೋದರೂ ನುಂದಿ ಆವರಲ್ಲಿ ತಿಳುವಳಿಕೆ ಮೂಡಿದಾಗ, ವಿರೋಧಿಸಲು ತೊಡಗಿದರು ಇವೆಲ್ಲಿವುಗಳ ಪರಿಣಾಮವಾಗಿ, ಅಂಗ್ಲ ಶಾಸಕರಿಗೆ ವಿರುದ್ಧವಾಗಿ ೧೮೫೭ನೇ ಪರ್ಷದಲ್ಲಿ ನೇಪಥ್ಯೆಯಿಂದು ಬಲವತ್ತರವೆನಿಸಿದ ಅಂದೋಲನವು ಎದ್ದೆರುವುದೆಂಬುದನ್ನು ನಾವು ಕೇಳಿದ್ದೇವೆ, ಕಂಡವರೂ ಇರಬಹುದು ಈ ಕಾಳಗದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ವಕ್ಷಿಣ ಭಾರತದ ವೀರ ವನಿತೆ ಝಾನ್ಸಿಯ ಲಕ್ಷ್ಮೀಬಾಯಿ. ಆಕೆಯ ವಿಚಾರವನ್ನು ಬ್ರಿಟಿಷ ಲೇಖಕರು, ಇತಿಹಾಸಕಾರರು ತಮ್ಮ ಇತರ ಇತಿಹಾಸ ಕೃತಿಗಳಂತೆಯೇ ದೃಷ್ಟಿಕೋನವನ್ನು ಮಾಲಿನ್ಯ, ತಪ್ಪುಗಿನುಕೂಲವಾಗಿ ಪರಿನರ್ತಿಸಿದ್ದಾರೆ ಇಂಯ ನನ್ನುಲ್ಲಿ ದೊರೆಯುವ ಇತಿಹಾಸ ಗ್ರಂಥಗಳಿಗೆ ಪಾಶ್ಚಾತ್ಯರು ಬರೆದಿರುವ ಗ್ರಂಥಗಳೇ ಮೂಲಾಧಾರವಾಗಿವೆ. ಅವುಗಳಲ್ಲಿ ಭಾರತೀಯರನ್ನು ಕೇವಲ ಬುದ್ಧಿಹೀನರೆಂದೂ ರಾಜಕೀಯವೆಂದರೇನೆಂದರಿಯದವರೆಂದೂ ಅಂತಹ ಭಾರತದಲ್ಲಿ ತಾವು ಬಾರತೀಯರನ್ನು ಉದ್ಧರಿಸುವ ಸಲುವಾಗಿಯೇ ಆಳತೊಡಗಿದೆವೆಂದೂ ಪಾಶ್ಚಾತ್ಯರು ಬರೆದಿರುತ್ತಾರೆ ಸತ್ಯಕ್ಕಂಗತಿ ಇವಕ್ಕೆ ವಿಪರೀತವಿದ್ದರೂ ಆದನ್ನು ಹೊರಗೆಡಹಲು ಅನ್ಯ ಪ್ರಭುತ್ವದ ಸರಿಣಾಮದಿಂದ ಅಸಾಧ್ಯವಾಗಿತ್ತು. ಆದರೆ, ಸ್ವತಂತ್ರ ಭಾರತದಲ್ಲಿ, ಭಾರತೀಯ ಸತ್ಯ ಚರಿತ್ರೆಯನ್ನು ಅರಿತುಕೊಳ್ಳಲು, ಬರೆಯಲು ಯಾವ ಪ್ರತಿಬಂಧಕವೂ ಯಿರುವುದಿಲ್ಲ. ಹಾಗಿರುವಾಗ, ಪ್ರಥಮ ಬಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೇರಳದ ಸಿಂಹಿಣಿಯಂತೆ ಬ್ರಿಟಿಷರ ಮೇಲೆ ಬಿದ್ದು, ಅವರ ನಾಯಕನಾದ ಜನರಲ್ ರೋಜನ್ ಬಾಯಿಂದಲೂ She was the best and bravest of them (ಭಾರತೀಯ ಸೈನಿಕರು) all ಎಂದೆನ್ನಿಸಿಕೊಂಡ ಲಕ್ಷ್ಮೀಬಾಯಿಯ ಇತಿಹಾಸವನ್ನು ತಾವು ನಾನಿ ಸಿದ್ಧರಿಂದ ಪಡೆದಿದ್ದ ಅನುಭವ ಬಲದಿಂದ ಶ್ರೀ ವೃಂದಾವನಲಾಲ್ ವರ್ಮರು ಹಿಂದೀ ಭಾಷೆಯಲ್ಲಿ ಬರೆದರು ಅವರು ಝಾನ್ಸಿಯಲ್ಲಿ ಸ ದೋಧನೆಯ ಕಾರ್ಯ ವಿಸಗಿದರಲ್ಲದೆ, ತಮ್ಮ ಅಜ್ಜಿಯೇ ಮೊದಲಾದ ವರ ಬಾಯಿಂದ ಆನಂದರಿಗೆ ತಿಳಿದಿದ್ದ ಜನಪದ ಕಥೆಗಳನ್ನು ಸಂಗ್ರಹಿಸಿ, ಕಥೆಗಳಿ ಮೊದಲಾದವುಗಳ ದಾಖಲೆಗಳನ್ನು ಅಭ್ಯಸಿಸಿ, ಸಾಧ್ಯವಾದಷ್ಟು ಸತ್ಯಂಗತಿಗಳನ್ನು ಸಂಗ್ರಹಿಸಿ, ಈ ಬೃಹದ್ಗ್ರಂಥದ ಕಾದಂಬರಿಯನ್ನು ಪಿಡಿದಿದ್ದಾರೆ ಲಕ್ಷ್ಮೀಬಾಯಿಯನ್ನು ಪುಟ್ಟ ಪಿಂಡಾರಿಂಧಿಸಿ, ಆಕೆಯ ಅಂತ್ಯ ಸಂಸ್ಕಾರದ ವರೆಗಿನ ಪಟಿನೆಗಳನ್ನು ಹೊಂದಿಸಿಕೊಂಡು, ಸಮ್ಮ ಕಣ್ಣಿನಲ್ಲಿಂದೆ ಕಟ್ಟುವಂತೆ ಬರೆದಿದ್ದಾರೆ ಈ ಕಾದಂಬರಿ ಯಾನೆ ಈವ ನೇತಿಹಾಸದಲ್ಲಿ ಆಕೆಯು ಸ್ವರಾಜ್ಯಕ್ಕಾಗಿಯೇ ಹೋರಾಡಿದಳಿಲ್ಲಂಬುದನ್ನು ದೃಢಪಡಿಸಿರುವರು ಮನಮೋಜಂಯಿಯು ರಾಜಯೋಮಾದುಂ, ಪುತ್ರ ಪತಿಯ ಮರಣ, ತಾನು ಶಿಯೋಜಿಸಿರುವುದು ಕ್ರಿಂತ ಮೊದಲೇ ಬೇರೆಯು ಸಿದಾಯಿಗಳು ಶಸ್ತ್ರಸನ್ಯಾಸ ಕೈಗೊಂಡುಮು, ಬ್ರಿಟಿಷರು ಕುತಂತ್ರ, ಯುದ್ಧದಲ್ಲಿನ ಬನಷೆ ಮೊದಲಾದುವನ್ನು ಪೃದರ್ಶಿಸಿದ್ದಾರೆ ಇವೆಲ್ಲ ಕಾರಣವಾಗಿ ಹೆಚ್ಚಿಯಲಾಗಿದೆ ರಾಣಿಯ ಆನುಜ್ಞೆಯಂತೆ ಎಲ್ಲ ಸಿಪಾಯಿಗಳೂ ನಡೆದು ಕೊಂಡಿದ್ದರೆ, ಈ ಸಂಗ್ರಾಮಕ್ಕೆ ಅಬಿಲ ಬಾತ್ರ ಸ್ವಾಸ್ಥಿಯೆಂದಗಿ ಬ್ರಿಟಿಷರಿಂದ ಅಪಮ್ಯಾನಿಸುತ್ತಿತ್ತು ಆದರೆ, ವಿಧಿಯ ಬರಪ ಬೇರೆಯಾಯಿತು ಲಕ್ಷ್ಮೀಬಾಯಿಯು ಸ್ವರಾಜ್ಯ ಸ್ಥೇದು, ಆಕೆಯು ತನ್ನ ಸ್ವಜನಿಗಳಿಗಾಗಿ ಕೈಸೆಂಡ ಸಂಧಾರಣಾ ಕಾರ್ಯಕ್ರಮಗಳು ಸ್ತ್ರೀ ಸೈನ್ಯ ನೃವತ್ಥೆ ಎಂದಿಗೂ ಸ್ಥಾಪಿತ ಪಟಿಲದಿಂದ ಸಾಯುವಾಗಿಯೂ ಆಕೆಯ ಸುತ್ತೂ ತಿರುಗುವ ವಿಷಯಿಸ್ಥವಾದ ತಾತ್ಯಾ ಟೋಪಿ, ನೋಕಿಟಜ್ಞ, ರಘುನಾಥ ಸಿಂಘ ಬರಹಾನುದ್ದೀನ್, ಸುಂದರಿ ಮುಂದರಿ, ಮೊದಲಾದವರೂ, ಪೀಠಲಿಯಂತಹ ಉಂಡಮನಸಿಗರಡೆತ್ತು ಬಯಸುವವರೂ ನವಿಂದೆ ಮುರಮೆಲಾರರು ಮರೆಕಡಿಯಲು ಕೊರಲೆಯು ಹಿಡಿಯು ಸಮಾಧಿವ ಗುಂತೆ ರಾಣಿಯ ನೋತುಬೋಗಲು ರಾಣಿಯ ಕತೆಯಲ್ಲಿ ಪೋ ಷದಿಂದ ಸೇರಿಕೊಂಡ ಪೀಠಾಲಿಯಂತಹ ಸ್ವಸೈನಿಕರೇ ಕಾರಣವೇ ಬುದನ್ನು ಸ್ಪಷ್ಟಪಡಿಸಿದ್ದಾರೆ ಈ ಬೃಹತ್ಕಾದಂಬರಿಯನ್ನು ಅನುವಾದಮಾಡಿರುವುದೂ ಒಂದು ಸಾಹಸದ ಕೆಲಸ. ಅಂತಹ ಮಹಾಕಾರ್ಯವನ್ನು ಮೇಜರ್ ಜನರಲ್ ಎನ್ ಜಿ ಹೋವಿಂದರಾಜರು ಮಾಡಿ ಕನ್ನಡಿಗರಿಗೆ ಸತ್ಕೃತಿಹಾಸದರ್ಶನವನ್ನು ಮಾಡಿದ್ದಾರೆ ಅನುವಾದ ಕಾರ್ಯದಲ್ಲಿ ಸಾಮಾನ್ಯವಾದ ಕೆಲವೊಂದು ಭಾಷಾದೋಷಗಳು ಅಲ್ಪಸ್ವಲ್ಪಗೆ ಈ ಕಾದಂಬರಿಯಲ್ಲಿಯೂ ಕಂಡುಬರುವುದಾದರೂ, ಈ ಬೃಹತ್ಕಾದ ಕೃತಿಯು ಒಟ್ಟಿನಲ್ಲಿ ಕನ್ನಡಿಗರಿಂದ ಎರಡು ಕೈಯಿಂದಲೂ ಸ್ವಾಗಿಕರ್ಪಡಬೇಕು, ಪುಸ್ತಕ ಛಂದಾರಣೆಗೂ ಶಾಲೆ ಕಾಲೇಜುಗಳಾ ಈ ಹೊತ್ತಗೆಯನ್ನು ಅವಶ್ಯ ಸಂಗ್ರಹಿಸುವುದಲ್ಲಿನ್ನೆ, ಎಲ್ಲ ಕನ್ನಡಿಗರೂ ತಪ್ಪದೇ ಆದ ಪ್ರತಿಯನ್ನಿಟ್ಟುಕೊಳ್ಳಲು ಪ್ರಯತ್ನಿಸಬೇಕು

The Panchayats—Published by The Publication Division, Ministry of Information and Broadcasting, Govt of India, New Delhi Pages Demy 1/8th 44 Price Annas 8

ಪ್ರಾಚೀನ ಭಾರತದಲ್ಲಿ ನುಹತ್ವದ ಪಾತ್ರ ವನ್ನು ವಹಿಸಿ, ಶಾಸನ ಸೂತ್ರವನ್ನು ಅತ್ಯುತ್ತಮ ವಿಧಾನದಲ್ಲಿ ನಡೆಸುತಿದ್ದ ಪಂಚಾಯತುಗಳು ಕ್ಷೀಣ ದೆಸೆಗೆ ಬಂದು ನಂತರ ಭಾರತಕ್ಕೆ ಸ್ವರಾಜ್ಯವಾಗಬೇಕಾದರೆ, ಇತರ ಪಂಚಾಯತುಗಳಿಗೆ ಬಲಜೆತ್ತಬೇಕು. ಈ ಕಿರುಹೊತ್ತಗೆಯಲ್ಲಿ ಪಂಚಾಯತಗಳ ಇತಿಹಾಸ, ಆಡಳಿತ, ಕಾರ್ಯಕಲಾಪಗಳು, ಅರ್ಜಿಕೋರ್ಟ್ಗಳು, ರಾಜ್ಯ ಸರಕಾರಗಳಿಗೆ ಪಂಚಾಯತುಗಳ ಮೇಲಿನ ಅಧಿಕಾರಿ ಮೊದಲಾದುವನ್ನು ಸವರಿಸಿ, ಜಿಲ್ಲಾ ಚಿತ್ರ ವಿವರಿಸಗಳೊಂದಿಗೆ ಕೊಡಲಾಗಿದೆ ಪಂಚಾಯತುಗಳ ಸಂಪೂರ್ಣ ಕಲ್ಪನೆಯು ನಮಗೆ ಇದರಿಂದ ಹೊರಬರುತ್ತದೆ

ಸಮ್ಮಾಣಿ—(ಪಾರ್ಸಿಕ ವಿಶೇಷಾಂಕ) ಸಂಪಾದಕರು ಅರ್ ನರಿಮನ್ ಆಚಾರ್ಯ. ಪ್ರಕಾಶಕರು ಕಲಾವೃಂದ (ರಿ), ಉಡುಪಿ ಪುಟಗಳು ೬೨+೧೦/೪ರ ೨೦೦. ಬೆಲೆ ರೂ ೧

ಉಡುಪಿಯಲ್ಲಿ ಮುನಿಸಿಪಲ್ ಪ್ರೌಢಶಾಲೆಯು ಮುಚ್ಚಲ್ಪಟ್ಟ ನಂತರ ಸ್ಥಳೀಯ ಪುಸ್ತಕಾಲಯ ಆಗಿ ಕಾರದ ನಾಡಕಾಲಯ ಹಾಗೂ ಪುಸ್ತಕಾಲಯವು ಪ್ರಾರಂಭವಾಗುವುದಕ್ಕೆ ಮೊದಲು ಮೆಚ್ಚಿನ ಜನರಿಗೆ ತಿಳಿಮಟಿಂದ ಕಲಾವೃಂದವು ತನ್ನ ಹಸ್ತಲಿಖಿತ ಪತ್ರಿಕೆಯಾಗಿರುವ ಸಮ್ಮಾಣಿಯ ವಾರ್ಷಿಕ ಸಂಚಿಕೆಯನ್ನು ಈ ವರ್ಷ ಎರಡನೆಯಬಾರಿಗೆ ಆಚ್ಚುಮಾಡಿಸಿದೆ. ಈ ಆಚ್ಚುಮಾಡಿದ ಸಂಚಿಕೆಯಲ್ಲಿ ಒಟ್ಟು ೪೯ ಲೇಖನ, ಕಥೆ, ಕವನಗಳಿರುತ್ತವೆ ಇವುಗಳಲ್ಲಿ ಹೆಚ್ಚಿನವು ಸನ್ಮಾನಿಯ ಹಳೆಯ ಸಂಚಿಕೆಗಳಿಂದಿಲೂ, ಚರಮಾ ಹಸ್ತ ಲಿಖಿತ ಪತ್ರಿಕೆಯಿಂದಲೂ ಆರಿಸಿರುವುದು ಗಮನೀಯವೆನ್ನಬಹುದು. ಧರ್ಮ, ಕಲೆ, ಸಾಹಿತ್ಯಗಳ ಶ್ರೀವೇದೇ ಸಂಗಮ ವಾಗಿದೆಯೆಂದು ತನ್ನನ್ನು ಕರೆದುಕೊಂಡ ಉಡುಪಿಯ ಕಲಾವೃಂದದ ಈ ಸನ್ಮಾನಿಯು ಬಲವು ಸಾಹಿತ್ಯಕ್ಕಿಂತ ಕಲೆಯತ್ತ ಕಲೆಗಿಂತ ಧರ್ಮಾತ್ಮತ್ತ ಇಷ್ಟಿನೆಂದು ಈ ಸಂಚಿಕೆಯಿಂದ ತಿಳಿಯುತ್ತದೆ.

ಅಂತೂ ಸುತ್ರಾಯರ ಕಥೆ, ಶ್ರೀಗಳಾದ ವೆಂಕಟರಾಜ, ಕಾಲಿಗ ಶೇಷಾಚಾರ್ಯ, ಪ್ರಾ. ಲಾ ನಾ ಉಪಾಧ್ಯಾಯ ಕೊರಡ್ಡಿಲ್, ಕೊಡತ್ತೂರು ಶಂಕರನಾರಾಯಣ ಉಪಾಧ್ಯಾಯ, ಯಾದವ ಸದಳಾಯ, ಮೊದಲಾದ ಕೆಲವರ ಲೇಖನ ಕವನಗಳು ವಾಙ್ಮಯರಿಂದ ಮಟ್ಟು ಪುಟಪು ಉತ್ತಮವಾದ ಇನ್ನು ಕೆಲವು ಲೇಖನಗಳಿಂದ ಮಟ್ಟು ತುಂಬಿಸಲು ಉಪಯೋಗಿಸಿದ ಪೃಷ್ಠಸೂರಕಗಳೇ ಅತ್ಯುತ್ತಮವಾದವೆ ಎನ್ನಲಡ್ಡಿಯಿಲ್ಲ.

—ಗೋರಾ.

ಉಡುಪಿ ಡಿ ಮುನ್ಸೀಫ್ ಕೋರ್ಟಿನಲ್ಲಿ

O S No. 372/1957.

ಕೃಷ್ಣ ಶೆಟ್ಟಿ —ವಾದಿ.

ಮತ್ತು

ಪರಮೇಶ್ವರ ಮರಕಾಲ —ಪ್ರತಿವಾದಿ.

ಯಿವರೊಳಗೆ –

ಮೇಲ್ಕಂಡ ವ್ಯಾಜ್ಯವು ವಾದಿಗೆ ಪ್ರತಿವಾದಿಯಿಂದ ಮೂಲಗೇಣಿ ಗೇಣಿ ಬಾಕಿಗೆ ಸೂಡಿ ದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಅಗತ್ಯ ವ್ಯಾಜ್ಯದ ನೋಟೀಸು ತಾ. 3-1-1958ಕ್ಕೆ ಯಿಟ್ಟಿರುವದ್ರಿಂದ್ಲೂ ಆ ದಿನ ಸದ್ರಿ ಪ್ರತಿವಾದಿಯು ಆಕ್ಷೇಪಣೆ ಜೇಳುವದನ್ನು ಆ ದಿನ ಸದ್ರಿ ಕೋರ್ಟಿಗುಂದೆ ಹಾಜ್ರಾಗಿ ಜ್ಞಾಪಿಸುವಂತೆ ಹೇಳುವಂತೆಯೂ ಆಜ್ಞಾಪಿಸಿ ಸದ್ರಿ ಪ್ರತಿವಾದಿಯು ಆಕ್ಷೇಪಣೆ ಜೇಳುವದನ್ನು ಆ ದಿನ ಸದ್ರಿ ಕೋರ್ಟಿಗುಂದೆ ಹಾಜ್ರಾಗಿ ಜ್ಞಾಪಿಸುವಂತೆ ಹ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ)

ಝಾನ್ಸಿಯ ರಾಣಿ ಲಕ್ಷ್ಮೀಬಾಯಿ

—ಮೂಲ ಹಿಂದೀ ಲೇಖಕರು ಶ್ರೀ ವೃಂದಾವನಲಾಲ್ ವರ್ಮ, ಅನುವಾದಕರು ಮೇಜರ್ ಎನ್. ಜಿ ಗೋವಿಂದರಾಜ್. ಪ್ರಕಾಶಕರು: ಕೇಸ್ಟಾಲಿಯ, ಮೈಸೂರು ಪುಟ ಕ್ರೌನ್ ೧/೮ರ XVI + ೪೪೮. ಬೆಲೆ ರೂ ೩-೭೫.

ಭಾರತವು ಇಂದು ಸ್ವಾತಂತ್ರ್ಯವನ್ನು ಪಡೆದು ಪ್ರಗತಿ ಪಥದಲ್ಲಿ ನಡೆಯುತ್ತಿದೆ ಎಲ್ಲರೂ ತಿಳಿದಿರುವಂತೆ ಈ ಸ್ವಾತಂತ್ರ್ಯವು ಕೇವಲ ಕೆಲವೇ ಮಂದಿಯ ತ್ಯಾಗ, ಕರ್ತವ್ಯ ದಕ್ಷತೆಯ ಫಲ ಸ್ವರೂಪವಲ್ಲ ಅದಕ್ಕೋಸ್ಕರ ನೂಂದಿ, ಬ್ರಿಟಿಷರು ವ್ಯಾಪಾರಕ್ಕಾಗಿ ಬಂದು ಬಲವಾಗಿ ತಳವೂರಿ ಭಾರತ ಪ್ರದೇಶಗಳನ್ನು ಭೇದೋಪಾಯದಿಂದ ಪಂಚಿಸಿ ಇಲ್ಲಿನ ಅಳರಸರನ್ನು ಒಂದಲ್ಲೊಂದು ವಿಧಾನದಿಂದ ತಮ್ಮ ಅಧಿಕಾರ ರಕ್ಷಣೆಯಲ್ಲಿರಿಸಿಕೊಂಡುದನ್ನು ಹಾಗೂ ಇದಿಸಿಕೊಳ್ಳಲು ಹವಣಿಸುತ್ತಿದ್ದುದನ್ನು ಸಾಲಂಕಿಕ ವೇಳೆಯಲ್ಲರಿಯದೆ ಹೋದರೂ ನುಂದ ಅವರಲ್ಲಿ ತಿಳುವಳಿಕೆ ಮೂಡಿದಾಗ, ವಿರೋಧಿಸಲು ತೊಡಗಿದರು ಇಸ್ಲಿವುಗಳ ಪರಿಣಾಮವಾಗಿ, ಇಂಗ್ಲ ಕಾಸಕರಿಗೆ ವಿರುದ್ಧವಾಗಿ ೧೮೫೭ನೇ ಪರ್ಷದಲ್ಲಿ ನೇಶದಲ್ಲೊಂದು ಬಲವತ್ತರವೆನಿಸಿದ ಅಂದೋಲನವು ಎದ್ದೆರುವುದೆಂಬುದನ್ನು ನಾವು ಕೇಳಿದ್ದೇವೆ, ಕಂಡವರೂ ಇರಬಹುದು ಈ ಕಾಳಗದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ದಕ್ಷಿಣ ಭಾರತದ ವೀರ ರಮಣಿ ಝಾನ್ಸಿಯ ಲಕ್ಷ್ಮೀಬಾಯಿ, ಆಕೆಯ ವಿಚಾರವನ್ನೂ ಬ್ರಿಟಿಷ ಲೇಖಕರು, ಇತಿಹಾಸಕಾರರು ತಮ್ಮ ಇತರ ಇತಿಹಾಸ ಕೃತಿಗಳಂತೆಯೇ ದೃಷ್ಟಿಕೋನವನ್ನು ಮಾಲಿಸಿ, ತಮಗನುಕೂಲವಾಗಿ ಪರಿವರ್ತಿಸಿದ್ದಾರೆ ಇಂಥ ನಕ್ಕುಲ್ಲಿ ದೊರೆಯುವ ಇತಿಹಾಸ ಗ್ರಂಥಗಳಿಗೆ ಪಾರ್ಶ್ವಾಕ್ಕರ ಬರೆದಿರುವ ಗ್ರಂಥಗಳೇ ಮೂಲಾಧಾರವಾಗಿವೆ ಆವುಗಳಲ್ಲಿ ಭಾರತೀಯರನ್ನು ಕೇವಲ ಬುದ್ಧಿಹೀನರೆಂದೂ ರಾಜಕೀಯವೆಂದರೇನೆಂದರೆಯದವರೆಂದೂ ಅಂತಃ ಭಾರತವಲ್ಲಿ ತಾವು ಭಾರತೀಯರನ್ನು ಉದ್ಧರಿಸುವ ಸಲುವಾಗಿಯೇ ಆಳತೊಡಗಿದೆವೆಂದೂ ಪಾಶ್ಚಾತ್ಯರು ಬರೆದಿರುತ್ತಾರೆ ಸತ್ಯಕಂಗತಿ ಇದಕ್ಕೆ ವಿಪರೀತವಿದ್ದರೂ ಆದನ್ನು ಹೊರಗೆಡಹಲು ಅನ್ಯ ಪ್ರಭುತ್ವದ ಸರಿಣಾಮದಿಂದ ಅಸಾಧ್ಯವಾಗಿತ್ತು ಆದರೆ, ಸ್ವತಂತ್ರ್ಯಭಾರತದಲ್ಲಿ, ಭಾರತೀಯ ಸತ್ಯ ಚರಿತ್ರೆಯನ್ನು ಅರಿತುಕೊಳ್ಳಲು, ಬರೆಯಲು ಯಾವ ನಿರ್ಬಂಧಕವೂ ಯಿರುವುದಿಲ್ಲ ಹಾಗಿರುವಾಗ, ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೇರಳದ ಸಿಂಹಿಣಿಯಂತೆ ಬ್ರಿಟಿಷರ ಮೇಲೆ ಬಿದ್ದು, ಅವರೆ ನಾಯಕನಾದ ಜನರಲ್ ರೋಜನ ಬಾಯಿಂದಲೂ She was the best and bravest of them (ಭಾರತೀಯ ಸೈನಿಕರು) all ಎಂದೆನ್ನಿಸಿಕೊಂಡ ಲಕ್ಷ್ಮೀಬಾಯಿಯು ಇತಿಹಾಸನನ್ನು ತಾವು ನಾನಿ ಪಿಧಗಳಿಂದ ಪಡೆದಿದ್ದ ಅನುಭವ ಬಲದಿಂದ ಶ್ರೀ ವೃಂದಾವನಲಾಲ್ ವರ್ಮರು ಹಿಂದೀ ಭಾಷೆಯಲ್ಲಿ ಬರೆದರು. ಅವರು ಝಾನ್ಸಿಯಲ್ಲಿ ಸಂ-ಶೋಧನೆಯ ಕಾರ್ಯ ವೆಸಗಿದರೆಲ್ಲಿನೆ, ತಮ್ಮ ಅಜ್ಜಿಯೇ ನೊವಲಾದ ವರೆ ಬಾಯಿಂದ ಅವರವರಿಗೆ ತಿಳಿದಿದ್ದ ಜನಪದ ಲಿಧಿಗಳನ್ನು ಸಂಗ್ರಹಿಸಿ, ಕಛೇರಿ ನೂಡಲಾದುವುಗಳ ದಾಖಲೆಗಳನ್ನು ಅಭ್ಯಸಿಸಿ, ಸಾಧ್ಯವಾದವ್ಟು ಸತ್ಯಸಂಗತಿಗಳನ್ನು ಸಂಗ್ರಹಿಸಿ, ಈ ಬೃಹದಾಕಾರದ ಕಾದಂಬರಿಯನ್ನು ಹೆಣೆದಿದ್ದಾರೆ. ಲಕ್ಷ್ಮೀಬಾಯಿಯ ಯುದ್ಧಾಂದಾರಂಭಿಸಿ, ಆಕೆಯ ಅಂತ್ಯ ಸಂಸ್ಕಾರದ ವರೆಗಿನ ಘಟನೆಗಳನ್ನು ಹೊಂದಿಸಿಕೊಂಡು, ಗಮ್ಮ ಕಣ್ಣಮುಂದೆ ಕಟ್ಟುವಂತೆ ಬರೆದಿದ್ದಾರೆ ಈ ಕಾದಂಬರಿಯಾನೆ ಜೀವನೇತಿಹಾಸದಲ್ಲಿ ಆಕೆಯು ಸ್ವರಾಜ್ಯಕಾಂಕ್ಷಿಯೇ ಹೋರಾಡಿದಿಲ್ಲಂಬುದನ್ನು ದೃಢಪಡಿಸಿರುವರು. ಮನೋಬಾಯಿಯು ರಾಗಿಯಾಗುವುದು, ಪುತ್ರ ಪತಿಯ ಮರಣ, ತಾನು ನಿರ್ಜೀವಿಸಿರುವುದಕ್ಕಿಂತ ಹೊಡೆದ ಬೇರೆಡೆಯು ಸಿಪಾಯಿಗಳು ಶಸ್ತ್ರಸನ್ಯಾಸ ಕೈಗೊಂಡುದು, ಬ್ರಿಟಿಷರು ತಂತ್ರ, ಯಂದ್ದದಲ್ಲಿನ ಬವಣೆ ಮೊದಲಾದುವನ್ನು ಹೃದಯಂಗಮವಾಗಿ ಹೆಣೆಯಲಾಗಿವೆ ರಾಣಿಯ ಅನುಜ್ಞೆಯಂತೆ ಎಲ್ಲ ಸಿಪಾಯಿಗಳೂ ನಜೆಮು ಕೊಂಡಿದ್ದರೆ, ಈ ಸಂಗ್ರಾಮಕ್ಕೆ ಅಪಿಲ ಭಾರತ ವ್ಯಾಪ್ತಿಯೊಡಗಿ ಬ್ರಿಟಿಷರಿಂದ ಅದಮ್ಮಿಸಲ್ಪಡುತ್ತಿತ್ತು ಆದರೆ ಲಿಪಿಯು ಬರಹ ಬೇರೆಯಾಯಿ ತು ಲಕ್ಷ್ಮೀಬಾಯಿಯ ಸ್ವಾರಾಜ್ಯ ಸ್ಪೃಹೆಯು, ಆಕೆಯು ತನ್ನ ಪ್ರಜೆಗಳಿಗಾಗಿ ಕೈಗೊಂಡ ಸಂಧಾರಣಾ ಕಾರ್ಯಕ್ರಮಗಳು ಸ್ತ್ರೀ ಸೈನ್ಯ ನೈಪುಣ್ಯತೆ ಎಂದಿಗೂ ಸ್ಮೃತಿ ಪಟಲದಿಂದ ಮಾಯಲಾರದು ಆಕೆಯ ಸುತ್ತೂ ತಿರುಗುವ ಖಾಮಿನಿಷ್ಠರಾದ ಪಂತ್ಯಾ ಟೋಪಿ, ಮೋತೀಬಾಯಿ, ರಘುನಾಥ ಸಿಂಘ್, ಬರಯಾಮದ್ದಿನ್, ಸುಂದರಿ ಮುಂದಿನ, ಮೊದಲಾದವರೂ, ಪೀರಲಿಯಂತಹ ಉಂಡಮನೆಗೆರಗನ್ನು ಬುಯುವವರೂ ನಮ್ಮಿಂದ ನುರೆಯಲಾರದು ಪುರಕಡಿಯಿಲ್ಲ ಕೊರಲಿಲ್ಲ ಹಿಡಿಸು ಸಹಾಯವಾಗುವಂತೆ ರಾಣಿಯು ಸೋತುಹೋಗಲು ರಾಣಿಯ ಕಡೆಯಲ್ಲಿ ಮೋಸದಿಂದ ಸೇರಿಕೊಂಡ ಪೀರಾಲಿಯಂತಹ ಸ್ವಸೈನಿಕರೇ ಕಾರಣವೆಂಬುದನ್ನು ಸ್ಪಷ್ಟಪಡಿಸಿದ್ದಾರೆ ಈ ಬೃಹತ್ಕಾದಂಬರಿಯನ್ನು ಅನುವಾದಮಾಡಿರುವುದೂ ಹಿಂದು ಸಾಹಸದ ಕೆಲಸ ಅಂತಹ ಮಹಾಕಾರ್ಯವನ್ನು ಮೇಜರ್ ಜನರಲ್ ಎನ್ ಜಿ ಗೋವಿಂದ ರಾಜರು ಮಾಡಿ ಕನ್ನಡಿಗರಿಗೆ ಸತ್ಕೃತಿಹಾಸದರ್ಶನವನ್ನು ಮಾಡಿದ್ದಾರೆ ಅನುವಾದ ಕಾರ್ಯದಲ್ಲಿ ಸಾಮಾನ್ಯವಾದ ಕೆಲವೊಂದು ಭಾಷಾದೋಷಗಳು ಅಲ್ಪಸ್ವಲ್ಪ ಈ ಕಾಡಂಬರಿಯಲ್ಲಿಯೂ ಕಂಡು ಬರುವುದಾದರೂ, ಈ ಭಿನ್ನಾಭಾದ ಕೃತಿಯು ಒಟ್ಟಿನಲ್ಲಿ ಕನ್ನಡಿಗರಿಂದ ಎರಡು ಕೈಯಿಂದಲೂ ಸ್ವಾಗತ ಸ್ವೀಕರಿಸಲ್ಪಡಬೇಕು, ಪುಸ್ತಕ ಭಂಡಾರಗಳೂ ಶಾಲೆ ಕಾಲೇಜುಗಳೂ ಈ ಪೊತ್ತಗೆಯನ್ನು ಅವಶ್ಯ ಸಂಗ್ರಹಿಸುವುದಲ್ಲಿನೆ, ಎಲ್ಲ ಕನ್ನಡಿಗರೂ ತಮ್ಮದೇ ಆದ ಸ್ವಕೃತಿಯನ್ನಿಟ್ಟುಕೊಳ್ಳಲು ಪ್ರಯತ್ನಿಸಬೇಕು.

The Panchayats-Published by The Publication Division, Ministry of Information and Broadcasting, Govt of India, New Delhi Pages. Demy 1/8th 44. Price Annas 8.

ಪ್ರಾಚೀನ ಭಾರತದಲ್ಲಿ ಮಹತ್ವದ ಪಾತ್ರವನ್ನು ವಹಿಸಿ, ಶಾಸನ ಸೂತ್ರವನ್ನು ಅತ್ಯುತ್ತಮ ವಿಧಾನದಲ್ಲಿ ನಡೆಸುತ್ತಿದ್ದ ಪಂಚಾಯತುಗಳು ಸ್ವೀನ ದೆಸೆಗೆ ಬಂದು ನಿಂತಿವೆ ಭಾರತವು ಸ್ವರಾಜ್ಯವಾಗಬೇಕಾದರೆ, ಇಂತಹ ಪಂಚಾಯತುಗಳಿಗೆ ಬಲಪೆಟ್ಟಬೇಕು ಈ ಕಿವಿಮಾತ್ತಿಗೆಯಲ್ಲಿ ಪಂಚಾಯತಿಗಳ ಇತಿಹಾಸ ಅಡಕಿತಿ, ಕಾರ್ಯಕಲಾಪಗಳು, ಆರ್ಥಿಕೋತ್ಪನ್ನಗಳು, ರಾಜ್ಯ ಸರಕಾರಗಳಿಗೆ ಪಂಚಾಯತುಗಳ ಮೇಲಿನ ಅಧಿಕಾರ ಮೊದಲಾದುವನ್ನು ವಿವರಿಸಿ, ಆಖ್ಖಿಲ್ಲಿ ಚಿತ್ರ ವಿವರಣೆಗಳಿಂದಿಗೆ ಕೊಡಲಾಗಿದೆ ಪಂಚಾಯತುಗಳ ಸಂಪೂರ್ಣ ಕಲ್ಪನೆಯು ನಮಗೆ ಇದರಿಂದ ದೊರೆಯುತ್ತದೆ

ಸವ್ಯಸಾಚಿ—(ವಾರ್ಷಿಕ ವಿಶೇಷಾಂಕ) ಸಂಪಾದಕರು ಆರ್ ನರಸಿಂಹ ಆಚಾರ್ಯ. ಪ್ರಕಾಶಕರು ಕಲಾವೃಂದ (ರಿ), ಉಡುಪಿ ಪುಟಗಳು ಕ್ರಾನ್ ೧/೪ರ ೨೦೦ ಬೆಲೆ ರೂ ೧

ಉಡುಪಿಯಲ್ಲಿ ಮಿಸಿಸಿಲ್ ಲೈಬ್ರೆರಿಯು ಮುಚ್ಚಲ್ಪಟ್ಟನಂತರ ಸ್ಥಳೀಯ ಪುಸ್ತಕಾಲಯ ಆಗಬೇಕಾದ ವಾಚನಾಲಯ ಹಾಗೂ ಪುಸ್ತಕಾಲಯವೊಂದು ಪ್ರಾರಂಭವಾಗುವುದಕ್ಕೆ ನೊವಲು ಹಬ್ಬಿಸಿ ಜನರಿಗೆ ತಿಳಿದುಬಂದ ಕಲಾವೃಂದವು ತನ್ನ ಹಸ್ತಲಿಖಿತ ಪತ್ರಿಕೆಯಾಗಿರುವ ಸವ್ಯಸಾಚಿಯ ವಾರ್ಷಿಕ ಸಂಚಿಕೆಯನ್ನು ಈ ವರ್ಷ ಎರಡೆನೆಯಬಾರಿಗೆ ಅಚ್ಚುಮಾಡಿಸಿದೆ. ಈ ಅಚ್ಚುಮಾಡಿದ ಸಂಚಿಕೆಯಲ್ಲಿ ಒಟ್ಟು ೯೯ ಲೇಖನ, ಕಥೆ, ಕವನಗಳಿವೆ. ಇವುಗಳಲ್ಲಿ ಹೆಚ್ಚಿನವು ಸ್ವಸಾಚಿಯ ಹಲೆಯ ಸಂಚಿಕೆಗಳಿಂದಲೂ, ಚರ್ಮಾ ಪತ್ರಿಕೆಯಿಂದಲೂ ಆರಿಸಿರುವುದು ಗಮನಾರ್ಹವೆನ್ನಬಹುದು. ಧರ್ಮ, ಕಲೆ, ಸಾಹಿತ್ಯಗಳ ತ್ರಿವೇಣೀ ಸಂಗಮ ಇನ್ನಷ್ಟೆಂದು ತನ್ನನ್ನು ಕರೆದುಕೊಂಡ ಉಡುಪಿಯ ಕಲಾವೃಂದವು ಈ ಸ್ವಸಾಚಿಯ ಒಲವು ಸಾಹಿತ್ಯಕ್ಕಿಂತ ಕಲೆಯತ್ತ ಕಲೆಗಿಂತ ಧರ್ಮಾರ್ಥತ್ತ ಇಷ್ಟಿದೆಯೆಂದು ಈ ಸಂಚಿಕೆಯಿಂದ ತಿಳಿಯುತ್ತದೆ.

ಅಂತೂ ಪತ್ರಿಕೆಯ ಕಥೆ, ಶ್ರೀಗಳಾದ ವೆಂಕಟರಾಜ, ಕಲಿಂಗಿ ಶೇಷಾಚಾರ್ಯ, ಪಾ. ಲಾ ನಾ ಉಪಾಧ್ಯಾಯ ಕೊಡಪ್ಪಳ್, ಕೊಡತ್ತೂರು ಶಂಕರನಾರಾಯಣ ಉಪಾಧ್ಯಾಯ, ಯೂಪದ ಸದಸ್ಯ ಮಾಪಲಾದ ಕೆಲವರ ಲೇಖನ ಕವನಗಳು ವಾಚ್ಯವಾಗಿವೆ. ಮುಖ ಪುಟವು ಉತ್ತಮವಿದೆ ಇನ್ನು ಕೆಲವು ಲೇಖನಗಳಿಗಿಂತ ಪುಟ ತುಂಬಿಸಲು ಉಪಯೋಗಿಸಿದ ಪೃಷ್ಠಸೂರಕಗಳೇ ಆತ್ಯುತ್ತಮವಿದೆ ಎನ್ನಬಹುದು.

—ಗೋರಾ.

ಉಡುಪಿ ಡಿ ಮು. ಕೋರ್ಟಿನಲ್ಲಿ

O. S. No. 372/1957.

ಕೃಷ್ಣ ಪೈ —ವಾದಿ.

ಮತ್ತು

ಪರಮೇಶ್ವರ ಮರಕಾಲ —ಪ್ರತಿವಾದಿ.

ಯಿವರೊಳಗೆ –

ಮೇಲ್ಕಂಡ ವ್ಯಾಜ್ಯವು ವಾದಿಗೆ ಪ್ರತಿವಾದಿಯಿಂದ ಮೂಲಗೇಣಿ ಗೇಣಿ ಬಾಕಿಗೆ ಸೂಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ 3 1-1958ಕ್ಕೆ ಯಿಟ್ಟುಕೊಂದ್ರಿಂದ್ಕೆ, ಆ ದಿವ್ಸ ಸದ್ರಿ ಪ್ರತಿವಾದಿಯು ಆಕ್ಷೇಪ ಜೇಳುವದನ್ನು ಆ ದಿನ ಸದ್ರಿ ಕೋರ್ಟ್‌ಮುಂದೆ ಹಾಜ್ರಾಗಿ ಜ್ಞಾಪಿಸುವಾಡಿಕೊಳ್ಳತಕ್ಕದ್ದು

P Padmanabha Rao'
Vakil for Plaintiff

ತಾರೀಕು 14—12—57 ಉಡುಪಿ

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ಕರದ ಫಾರ್ಮುಗಳು, ಕುರಿಘಂಡು ಪುಸ್ತಕ, ರಶೀದಿಗಳು, ಕೋರ್ಟ್‌ಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮ್‌ಗಳು, ಚಾಲ್ತಿ ನಮೂನೆಯ ಜಾಲರ್‌ಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಬೆಕ್ಕಡಿರ ಬೇಕೆಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಲಿ ಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ. ನ.

ಉ ಷಾ
ಹೊಲಿಗೆ ಯಂತ್ರಗಳು



● ಸುಭದ್ರ ಮತ್ತು ಬಲಿಷ್ಠ ರಚನೆ
● ನಮ್ಮ ದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾದ ಯಂತ್ರ

— ಸೋಲ್ ಸೆಲ್ಲಿಂಗ್ ಏಜಂಟರು —
ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
ಮದ್ರಾಸು—1

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—



[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ.– ಸಾಧಾರಣ ಪ್ರತಿ- ರೂ ೧-೮-೦ (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ'—
1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ವಂಗಳೂರು-1
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E. ಸೀತಾ ಸ್ಟ್ರೀಟ್ ಫೋರ್ಟ್ ಬೊಂಬಾಯಿ.

ಮಾನವನೆತ್ತ ಸಾಗುತ್ತಿದ್ದಾನೆ?

ವಿಕಾಸದತ್ತ, ಅಥವಾ ಹ್ರಾಸದತ್ತ?

ಶ್ರೀ. ಕ. ಪುರುಷೋತ್ತಮ ಮುಲ್ಕ

ಮಾನವನು ಜಗತ್ತಿನ ಸರ್ವ ಪ್ರಾಣಿಗಳಲ್ಲಿ ಶ್ರೇಷ್ಠನೆಂದು ನಿಸ್ಸಂಶಯವಾಗಿ ಹೇಳಬಹುದು. "ಪುರುಷೋ ವಾವ ಸುಕೃತಮ್"—ಮಾನವ ಶರೀರವೇ ಪರಮಾತ್ಮನ ಸುಂದರ ಕೃತಿ" ಎಂದು ಐತರೇಯೋಪನಿಷತ್ತಿನಲ್ಲಿಯೂ, "ಭೂತಾನಾಂ ಮನ್ಯೆ ಚೇತನಾ" ಎಂದು ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿಯೂ, ಹೇಳಿದ್ದಾರೆ. ಡಾರ್ವಿನನ ವಿಕಾಸವಾದಕ್ಕನುಸರಿಸಿ ಹೋದರೂ ಪ್ರಾಣಿ ಜೀವನದ ವಿಕಾಸದ ಅಂತಿಮ ಹೆಜ್ಜೆ ಮಾನವ ಪ್ರಾಣಿ ಎಂದು ಒಪ್ಪಿಕೊಳ್ಳಬೇಕು. ಭಾರತೀಯ ಅವತಾರ ವಾದದಂತೆಯೂ, ಜೀವಿಗಳು ಕ್ರಮೇಣ ವಿಕಾಸ ಪ್ರಕ್ರಿಯೆಯಿಂದ ಪ್ರಗತಿಹೊಂದಿ ತಮ್ಮ ಚಿಂತನಶೀಲತೆಯಿಂದ ಮಾನವ ಜನ್ಮವನ್ನು ಹೊಂದಿರುವುದೆಂದು ತಿಳಿಯಬಹುದು.

ಆದರೆ ಯಾವುದೊಂದು ವಸ್ತುವಿನ ಪ್ರಗತಿಯೂ ವಿಕಾಸವನ್ನು ತಡೆಯುವುದ ಸಾಧ್ಯ. ಪ್ರಗತಿಯ ನಿಯಮವೇ ಅಂತಿದೆ. ಬಾಹ್ಯ ಆಕಾರದಲ್ಲಿಯಷ್ಟೇ ಅಲ್ಲದೆ, ಪ್ರತಿಯೊಂದು ಪ್ರಾಣಿಯ ವ್ಯವಹಾರ ಸ್ವಭಾವಗಳಲ್ಲಿಯೂ ನಿರಂತರ ಪರಿವರ್ತನೆಯೊಂದಿಗೆ ಪ್ರಗತಿಯಾಗುತ್ತಿರುವುದು. ಹೌದು. ಅದರಿ ಒಂದು ನಿಶ್ಚಿತ ಗುರಿಯನ್ನು ಮುಟ್ಟಿ, ಅನಂತರ ಮುಂದೆ ಪ್ರಗತಿಗೆ ಮಾರ್ಗವೇ ಇಲ್ಲವೆಂದಾದಲ್ಲಿ, ಯಾವುದೊಂದು ವಸ್ತುವು ಪುನಃ ಹಿಂದೆ ಅಥವಾ ಬೇರೊಂದು ಮಾರ್ಗದಲ್ಲಿ ಮುಂದರಿಯಬಹುದು. ಆದರೆ ಗತಿಯು ಮಾತ್ರ ನಿರಂತುವಾಗಿರುವುದು. ಅದು ಸ್ಥಿರವಾಗಿರಲಾರದು. ಇವನ್ನು, ಪುಷ್ಪಿಗೊಳಿಸಲು ಕೃಷ್ಣನು ಗೀತೆಯಲ್ಲಿ ಹೇಳಿದ "ನಹಿಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯ ಕರ್ಮಕೃತ್"—ಯಾವುದೊಂದು ವ್ಯಕ್ತಿಯೂ, ಒಂದು ಕ್ಷಣ ಕೂಡಾ ಕರ್ಮ ವಿಹೀನನಾಗಿರಲು ಸಾಧ್ಯವಿಲ್ಲ-ಎಂದುದನ್ನು ನೆನಪಿಗೆ ತರಬೇಕು. ಕೇವಲ ವ್ಯಕ್ತಿಯಷ್ಟೇ ಏಕೆ? ಪ್ರತಿಯೊಂದು ವಸ್ತುವೂ ಕರ್ಮ ವಿಹೀನವಾಗಿರುವುದಸಾಧ್ಯ. ಮಹಾ ವಿಜ್ಞಾನಿಗಳ ಹೇಳಿಕೆಯಂತೆ, ನವ.ಗೆ ಆಚಲವಾಗಿ, ಸ್ಥಿರವಾಗಿ ಕಂಡುಬರುವ ಮಹಾ ಪರ್ವತಗಳು ಕೂಡಾ ನಿರಂತರ ಪರಿವರ್ತನೆ, ಹಾಗೂ ಪ್ರಗತಿಗೊಳ್ಳುತ್ತಿವೆ.

ಎಂದಿನವರೆಗೆ ಒಂದು ವಸ್ತುವು ಉನ್ನತಿಯ ದಿಶೆಯಲ್ಲಿ ಪ್ರಗತಿಹೊಂದುವುದೋ ಅವರೆಗೆ ನಾವದನ್ನು ವಿಕಾಸವೆಂಬ ಹೆಸರಿನಿಂದ ಕರೆಯಬಹುದು. ಆದರೆ, ಎಂದು ಅವನತಿಯಕಡೆಗೆ ಹೆಜ್ಜೆಇಡಲು ಆರಂಭಿಸಿತೋ, ಆಗ ಅವನ್ನು ಹ್ರಾಸವೆಂದೇ ಹೇಳಬೇಕಾಗುವುದು. ಇದೇ ಮಾತು ಮಾನವನ ಆಚಾರ- ವ್ಯವಹಾರ, ಗುಣಾವಗುಣ, ಸ್ವಭಾವ ಹಾಗೂ ಕರ್ಮಗಳ ಸಂಬಂಧದಲ್ಲಿಯೂ ಅನ್ವಯಿಸುವುದು. ಎಂದಮೇಲೆ ಒಬ್ಬ ವ್ಯಕ್ತಿಯ ಯಾವಸ್ತುವಿನ ಗುಣಾವಗುಣ, ಸ್ವಭಾವ ಕರ್ಮಗಳಿಂದಲೇ ಅದು ವಿಕಾಸವಾಗುವುದೋ, ಹ್ರಾಸವಾಗುವುದೋ ಎಂದು ಹೇಳಬಹುದು ಅಥವಾ? ಅದರ ಪಥವು ಉನ್ನತಿಗೋ, ಅವನತಿಗೋ ಎಂದು ನಿರ್ಧರಿಸಬಹುದು.

ಈಗ ಇದೇ ಸಿದ್ಧಾಂತವನ್ನು, ತನ್ನನ್ನು ತಾನೇ ಪೂರ್ಣನೂ, ಸಭ್ಯನೂ, ವಿಕಸಿತ ಮತಿಯೂ ಎಂದು ಭುಜತಟ್ಟಿಕೊಳ್ಳುವ ಆಧುನಿಕ ಮಾನವ ಪ್ರಾಣಿಗೆ ಅನ್ವಯಿಸಿದಲ್ಲಿ, ಅವನನ್ನು ಅನ್ಯ ಪ್ರಾಣಿಗಳ ಜೊತೆಗೆ ಹೋಲಿಸಿ ನೋಡಿದಲ್ಲಿ, ಮಾನವನು ಉನ್ನತಿ ಹೊಂದಿದನೋ ಅವನತಿ ಹೊಂದುವನೋ ಎಂಬ ಸಂಶಯ ಉತ್ಪನ್ನವಾಗದೆ ಇರದು. ನಿಸ್ಸಂದೇಹವಾಗಿಯೂ ಮಾನವನು ಶಾರೀರಿಕ ದೃಷ್ಟಿಯಲ್ಲಿ ಉನ್ನತಿಹೊಂದಿರಬಹುದು. ಅವನು ಪ್ರಕೃತಿ ತಿಯ ಸರ್ವಸುಂದರ ರಚನೆ ಎಂದೂ ಹೇಳಬಹುದು. ಬುದ್ಧಿ, ಕಲ್ಪನೆ, ಹಾಗೂ ವಿಚಾರಗಳಸಂಬಂಧಗಳಿರುವವರೆಗೆ ಯಾವುದೊಂದುಪ್ರಾಣಿಯೂ ಅವನೊಂದಿಗೆಸುಲ ನೆಯೋಗಲಾರದು ಉದ್ಯೋಗಹಾಗೂ ಶ್ರಮದಲ್ಲಿಯೂ ಅವನು ಇತರ ಪ್ರಾಣಿಗಳಿಗಿಂತ ಹಿಂದಿಲ್ಲ. ಆದರೆ ಶರೀರ, ಬುದ್ಧಿ, ವಿಚಾರ ಶಕ್ತಿ, ಉದ್ಯೋಗಗಳೇ ಉನ್ನತಿ, ಅವನತಿಗಳ ಮಾನದಂಡಗಳೆಲ್ಲ ಹೃದಯದ ಉದಾರತೆ, ಸಚ್ಚಾರಿತ್ರ್ಯ, ಭ್ರಾತೃಭಾವ, ನ್ಯಾಯ ಪ್ರಿಯತೆ, ಪ್ರೇಮ, ನಿಷ್ಕಾಪಟ್ಯ ಸ್ವಾರ್ಥತ್ಯಾಗಾದಿ ಆಚಾರ ವ್ಯವಹಾರ ಸಂಬಂಧದ ಮಾನಸಿಕ ಗುಣಗಳೇ ಉನ್ನತಿ, ಅವನತಿಗಳ ಮಾನದಂಡಗಳು ಇವುಗಳಿಂದ ಮಾಸ್ತವಿತ ಉನ್ನತಿಯ ಅವನತಿಯನ್ನು ತಿಳಿಯಬಹುದು.

ಸರ್ವಧರ್ಮ ಸ್ಥಾಪಕರೂ ಇದನ್ನೇ ಒತ್ತಿ ಹೇಳಿರುವರು. ಆರ್ಯ ಧರ್ಮದಲ್ಲಿನ ಸತ್ಯ, ಪ್ರೇಮ, ದಯೆಗಳೇ ಮುಖ್ಯ ಅಂಗಗಳಾಗಿವೆ. ಇವುಗಳ ಪ್ರಗತಿಯೇ ನೈಜ ಉನ್ನತಿ ಎನ್ನಬಹುದು. ಇಂದಿನ ಮಾನವನ ನನ್ನು ಇವುಗಳ ಒರೆಗಲ್ಲಿಗೆ ಹಚ್ಚಿದರೆ, ಅವನು ಪಶು-ಪಕ್ಷಿಗಳಿಗಿಂತಲೂ ನೀಚಸಿರುವನೆಂದು ಹೇಳಬಹುದು ಅವನು ತನ್ನ ಸ್ವಾರ್ಥಕ್ಕಾಗಿ, ತನ್ನ ಬಂಧು, ಸಹೋದರರಲ್ಲಿ ಕಪಟವನ್ನು ಪ್ರದರ್ಶಿಸುವನು. ಆ ಸತ್ಯವನ್ನಾಡುವನನು ಈರ್ಷೆ, ವೈರ, ವಿರೋಧ, ದುರ್ಭಾವನೆಗಳನ್ನು ತನ್ನ ರೋಮ ರೋಮಗಳಲ್ಲಿ ತುಂಬಿಕೊಂಡಿರುವನು. ಇದಂಲ್ಲಿ ವಿಶೇಷ್ಯರ್ಮವೆಂದರೆ ಅವನು ಇವೆಲ್ಲಕ್ಕೂ ಧರ್ಮವನ್ನೇ ಸಾಕ್ಷಿಯೆಂಗಿಟ್ಟುಕೊಂಡು ಅದರ ಅಧಾರವನ್ನೇ ಕೊಡುವನು.

ಪಶುಪಕ್ಷಿಗಳು ವ್ಯವಹಾರದಲ್ಲಿ ಎಂದೂ ಕಾಪಟ್ಯವನ್ನು ತೋರಿಸುವುದಿಲ್ಲ. ಜೇನು ನೊಣವು ಸಾವಿರಾರು ಹೂಗಳಿಗೆರೆಗಿ ಜೇನನ್ನು ತಯಾರಿಸಿ ಈ ಮಾನವ ಪ್ರಾಣಿಯ ಬಾಯಿಗೆ ಕೊಡುವುದು. ದನ, ಎಮ್ಮೆ, ಆಡು ಇತ್ಯಾದಿಗಳು ಹುಲ್ಲನ್ನು ತಿಂದು ಅದರಿಂದ ಕ್ಷೀರವನ್ನು ತಯಾರಿಸಿ ಮಾನವನಿಗೆ ಅರ್ಪಿಸುವುವು. ಮಾನವನು ಮಾತ್ರ ತುಚ್ಛ ಸ್ವಾರ್ಥದ ದೆಸೆಯಿಂದ ಜೇನು, ಹಾಲು ಗಳಲ್ಲಿಯೂ ಅನೇಕ ರೀತಿಯಲ್ಲಿ ಬೆರೆಕೆಮಾಡಿ ಅವುಗಳನ್ನು ಮಾರುವನು ಫೈತವು ಕುದ ರೂಪದಲ್ಲಿ ಸಿಗುವುದೇ ಬಹಳ ಕಷ್ಟವಾಗಿದೆ.ಆಶ್ಚರ್ಯ! ಮಹದಾಶ್ಚರ್ಯ!! ಒಂದು ವಸ್ತುವು ಪಶುಪಕ್ಷಿಗಳು, ಅಥವಾ ಅನ್ಯ ಪ್ರಾಕೃತಿಕ ಜಡ, ಹಾಗೂ ಜೀತನ ಕತ್ತೆಗಳ ಹತ್ತಿರ ಇರುವ ವರೆಗೆ ಶ-ದ್ಧ ಹಾಗೂ ಪವಿತ್ರವಾಗಿರುವುದು. ಆದರೆ ಅದೇ ಮಾನವನ ಅಧಿಕಾರಕ್ಕೆ ಬಂದೊಡನೆ ಅಶುದ್ಧ ಹಾಗೂ ಅಪವಿತ್ರವಾಗುವುದು. ಇದು ಚಾರಿತ್ರಿಕ ಸತ್ಯವಿದ, ಮಾನಸಿಕ ಅವನತಿಯ ಪರಾಕಾಷ್ಠತೆಯಲ್ಲವೇನು? ಇದನ್ನು ಮಾನವನ ವಿಕಾಸವೆಂದು ಯಾವ ಮುಖದಿಂದ ಹೇಳಬಹುದು?

ಹಿಂದೂ ಧರ್ಮದಲ್ಲಿ ಮಾನವನ ಮಾನಸಿಕ ಸಾಮರ್ಥ್ಯಕ್ಕಾಗಿ ಬಹಳ ಬೆಲೆಕೊಟ್ಟಿದ್ದಾರೆ. ಈ ಮಾನಸಿಕ ಸಾಮರ್ಥ್ಯಕ್ಕಾಗಿ ಮೂರು ಶಕ್ತಿಗಳು ಸಮ್ಮಿಳಿತವಾಗಬೇಕು. ಮೊದಲನೆಯದು ಹೃದಯದ ಶಾಂತಿ. ಇದರ ವ್ಯಾಪ್ತಿಗೆ ಮುಖ್ಯ ಸಾಧನವು ಇಂದ್ರಿಯ ಸಂಯಮ. ಎಂಡನೆಯದು ವಿಶ್ವಪ್ರೇಮ,—ಇದರ ವ್ಯಾಪ್ತಿಯ ಸಾಧನೆಯು ಪರೋಪಕಾರೀ ಪ್ರವೃತ್ತಿ. ಪರೋಪಕಾರೀ ಭಾವನೆ ಇಲ್ಲದೆ ಪ್ರೇಮ ಭಾವನೆಯು ಉತ್ಪನ್ನವಾಗಲಾರದು. ಮಾನವನು ಎಂದು, ತನ್ನಂತೆಯೇ ಇತರರೂ ಸುಖಕಾಂಕ್ಷಿಗಳಿ ಪ್ರಯತ್ನಿಸುತ್ತಾರೆ, ತನಗೆ ದುಃಖವು ಅಪ್ರಿಯವಾಗುವಂತೆ ಇತರರಿಗೂ ಅಪ್ರಿಯವಾಗುವುದು, ಎಂದು ಎಣಿಸುವನೋ, ತನ್ನ ಕನವನ್ನು ಬಿಟ್ಟು ಇತರರೂ ತನ್ನ ಸಮಾನರೆಂದು ಯಾವಾಗ ಎಣಿಸುವನೋ, ಅಂದು ಅವನು ಮೆಲ್ಲಮೆಲ್ಲನೇ ತನ್ನನ್ನು ಮರೆತು, ಇತರರನ್ನೇ ತನ್ನ ಸರ್ವಸ್ವವೆಂದು ತಿಳಿದು, ತನ್ನನ್ನು ಅವರಲ್ಲಿ ಲೀನಗೊಳಿಸುವನು. ಅವನ ಆತ್ಮವು ವಿಶ್ವವ್ಯಾಪಿಯೂ, ವಿಶ್ವಸುಖವೂ ಆಗುವುದು. ಅವನ ವ.ನವು ನಿರ್ಮಲವಾಗುವುದು. ಮಾನಸಿಕ ಸಾಮರ್ಥ್ಯದ ಮೂರನೇ ಶಕ್ತಿಯು ಭಗವದ್ಭಕ್ತಿ.

ಮನಃ ಪಾವಿತ್ರ್ಯದ ಈ ಮೂರು ಸಾಧನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಾಚೀನ, ಹಾಗೂ ಆಧುನಿಕ ಮಾನವನ ತುಲನೆ ಮಾಡಿದರೆ ವ್ಯಾಚೀನ ಮಾನವನು ಶಾಂತ ಮೂರ್ತಿಯಾಗಿದ್ದನೆಂದೂ, ಇಂದಿನ ಮಾನವನು ಅಶಾಂತನಾಗಿರುವನೆಂದೂ ಕಂಡುಬರದಿರದು. ಹಿಂದಿನವರು ಇಂದ್ರಿಯ ಸಂಗ್ರಮಿಗಳಾಗಿದ್ದರೆ ಇಂದಿನವರು ಇಂದ್ರಿಯ ಭೋಗಗಳನ್ನೇ ತಮ್ಮ ಸರ್ವಸ್ವವೆಂದು ತಿಳಿದಿರುವರು. ಹಿಂದಿನವರು ಪರೋಪಕಾರಿಗಳಾಗಿದ್ದರೆ ಇಂದಿನವರು ಸ್ವಾರ್ಥಲಿಪ್ತರಾಗಿದ್ದಾರೆ. ದೇವರ ಅಸ್ತಿತ್ವವೇ ಇಲ್ಲವೆನ್ನುವಷ್ಟು ಮುಂದರಿದಿದ್ದಾರೆ.

ಈ ಅನಸ್ಥೈಯಲ್ಲಿರುವ ವರ್ತಮಾನ ಮಾನವ ಪ್ರಾಣಿಯು ವಿಕಾಸದ ಹಾದಿಯಲ್ಲಿರುವನೋ? ಅವನತಿಯ ದಿಸೆಯಲ್ಲಿ ಮುಂದರಿಯುತ್ತಿರುವನೋ?



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಸಾರಲ್ಪಡುತ್ತವೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಥರು: **ಹಾ ಕಂಪೆನಿ, ಮಂಗಳೂರು—1.**

ಚಿತ್ರ ಪ್ರಪಂಚ

ಸತ್ಯಪೀಠ

ಮಾನವರಲ್ಲಿ ಒಂದು ಬಲವಾದ ನಂಬುಗೆಯುಂಟು. ಎಲ್ಲಿ ಏನೇ ಸುಳ್ಳು ಹೇಳಿದರೂ, ಏನೇ ನಾಡಿದರೂ ಯಾವುದೋ ಒಂದು ಸ್ಥಳದಲ್ಲಿ ಮಾತ್ರ ಸತ್ಯವನ್ನು ಹೇಳಿಯೇ ಹೇಳಬೇಕೆಂದು, ಹೇಳುತ್ತೇವೆಂದು ನಂಬುಗೆಯಿದೆ. ಇದನ್ನು ಆ ಸ್ಥಾನಬಲದ ಮಹಾತ್ಮೆಯೆನ್ನುತ್ತಾರೆ.

ಈ ಅವಿಜಲವಾದ ನಂಬುಗೆಯನ್ನು ವಿಜಯರೆಡ್ಡಿ ಕಸೂಯಾ ಬಜಾರ್"ನಲ್ಲಿ ಸ್ವಾರಸ್ಯವಾಗಿ ಬಳಸಿಕೊಂಡಿದ್ದಾರೆ.

ರಾಜಸೂಯಯಾಗದ ಸಂದರ್ಭದಲ್ಲಿ, ಅ ಮಯಾನಿರ್ಮಿತ ಅವರಣದಲ್ಲಿ ಒಂದು ಸತ್ಯ ವೇದಿಕೆಯನ್ನು ನಿರ್ಮಿಸಿಕೊಂಡಿದ್ದಾರೆ. ಎಲ್ಲೆಲ್ಲಿಯೂ ಮಾಯೆ, ಭ್ರಮೆ. ಆದರೆ ಆಲ್ಲಿಯೇ ಅಸತ್ಯವನ್ನು ನುಡಿಯಲಾಗದ ಸ್ಥಳ. ಅಲ್ಲಿ ಸತ್ಯವನ್ನು ಹೇಳಯೇ ತೀರಬೇಕು.

ಆ ಸತ್ಯಪೀಠದ ತ್ರಿವೇದಿಕೆಯಲ್ಲಿ.

ಈ ಸತ್ಯಪೀಠವನ್ನು ವಿಶ್ವಮಿತ್ರ ಸೃಷ್ಟಿಯೆಂದೂ, ಅದರ ಮೇಲೆ ನಿಂತವರು ಎಂತಹ ಮಾಯಾಜೀವಿಗಳಿದ್ದರೂ ಅವರ ಮನಸ್ಸಿನಲ್ಲಿ ಬಿರುವ ನಿಜವಾದ ಭಾವನೆಗಳು, ಆಶೆಗಳು, ಗೂಢಾರ್ಥಸೂಚನೆಗಳು ಹೊರಬೀಳುವುದೆಂದು ಸೂಚಿಸಿರುವರು. ಈ ಪೀಠವನ್ನು ಹಿರಿಯಣ್ಣ ದ ಬಲರಾಮನಿಗೆ ಕಾಣಿಕೆಯಾಗಿ ಧರ್ಮರಾಯ ಸಲ್ಲಿಸುವನು.

ಈ ಕಾಣಿಕೆಯು ದ್ವಾರಕೆಗೆ ಮುಟ್ಟಿದಾಗ ಕುತೂಹಲದಿಂದ ಅದನ್ನು ಎಲ್ಲರೂ ಪರೀಕ್ಷಿಸುವರು. ಸಣ್ಣವರಿಂದ ಈ ಪರೀಕ್ಷೆಯು ಅರಂಭವಾಗಿ ಕೊನೆಗೆ ದೊಡ್ಡವರ ವರೆಗೂ ಆವರಿಸುವುದು.

ಪರೀಕ್ಷೆಯಲ್ಲಿ ಆದರಲ್ಲಿ ತನ್ನ ಪ್ರಿಯತಮನಾದ ಅಭಿಮನ್ಯುವನ್ನು ನೋಡಿದೊಡನೆಯೆ ಉತ್ತರೆಯು, ರೇವತಿಯು ಸಾಧಾರಣ ಸ್ತ್ರೀಯಂತೆ ನಗ-ನಾಣ್ಯಗಳನ್ನು ನೋಡಿ ತಣಿಯುವಳು. ಬಲರಾಮನು ತನ್ನ ಶಿಷ್ಯನಾದ ದುರ್ಯೋಧನನನ್ನು ನೋಡುವನು. ಕೃಷ್ಣನು ತನ್ನ ಪ್ರತಿಸ್ಪರ್ಧಿಯಾದ ಶಕುನಿಯನ್ನು ಕಾಣುವನು. ಇದಂದ ಕೃಷ್ಣನಿಗೆ ಶಕುನಿಯ ಪಿಡ್ಕಂತ್ರದಿಂದ ಮುಂದೆ ನಡೆಯಬಯಸಿದ ಆನರ್ಥ ಪರಂಪರೆಗಳ ಮುನ್ಸೂಚನೆಯು ಗೋಚರವಾಗುವುದು. ಆದಕ್ಕೆ ಪ್ರತಿಬಂಧಕವಾದ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಿರ್ವಹಿಸಲೆಂಬಂತೆಯೇ ಅಲ್ಲಿಂದ ಮುಂದೆ ಸಾಗುವನು.

ಈ ಪ್ರಥಮ ಪ್ರಯೋಗದಿಂದಲೇ ಒಂದು ವಿಧವಾದ ವಿವೇಕ ಮತ್ತು ಜಾಗರೂಕತೆ.

'ಮಾಯಾ ಬಜಾರ್"ನ ಕೊನೆಯ ಭಾಗದಲ್ಲಿ ಸುನಃ ಈ ಸತ್ಯಪೀಠದ ಉಪಯೋಗವನ್ನು ಮಾಡಿರುವರು.

ಮಾಯಾಶಶಿರೇಖೆ ಮತ್ತು ಲಕ್ಷ್ಮಣ ಕುಮಾರರ ವಿವಾಹ ಪ್ರಕರಣಗಳ ವಿವರಿತ ಘಟನೆಗಳನ್ನು ಕಂಡ ಶಕುನಿಯು ನಿಜಾಂಶವನ್ನು ಗ್ರಹಿಸಿ ಕಾರ್ಯವು ಕೈಮೀರಿ ಬಲರಾಮನಿಗೆ ಮೋಸವಾದುದನ್ನು ತಿಳಿಸುವನು. ಸರಳಸ್ವಭಾವದ ಬಲರಾಮನಿಗೆ ಸಹಜವಾಗಿ ಸಿಟ್ಟುಬರುವುದು. ಸಾತ್ಯಕಿಯು ಸತ್ಯಾಂಶವನ್ನು ತಿಳಿಯಲು ಸತ್ಯಪೀಠದ ಸಹಾಯವನ್ನು ಪಡೆಯಬಹುದೆಂದು ಸೂಚಿಸುವನು. ಆರೋಪ ಮಾಡಿದ ಶಕುನಿಯೇ ಆ ಪೀಠವನ್ನು ಅಲಂಕರಿಸಬೇಕಾಗುವುದು. ತನ್ನ ಕುಟಿಲ ನೀತಿಯನ್ನು ಮುಚ್ಚಿಡಲು ಸಾಧ್ಯವಾಗದೆ ಹೋಗುವುದು. ಆಗ ಗತ್ಯಂತರವಿಲ್ಲದೆ ತನ್ನ ಕರ್ತವ್ಯವನ್ನು, ನಪೆದಪಜಾಂಧವನ್ನು ವಿಸ್ತರಿಸುವನು. ದ್ಯೂತವ ಮೋಸವನ್ನು ಒಪ್ಪಿಕೊಳ್ಳುವಳು.

ಸತ್ಯಪೀಠದ ಶಕ್ತಿಯಿಂದ ಮೋಸದ ಕೆಲಸವು ಬಯಲಾಗಿ ನಿಜವ ನಂಡಿಯವಾಗುವುದು. ಇದನ್ನು ಯೊಂದಿಕೊಂಡೇ ಅಭಿಮನ್ಯು-ಶಶಿರೇಖೆಯರ ವಿವಾಹದ ವಿಷಯವೂ ತಿಳಿದು ಬಂದು ಎಲ್ಲರೂ ಹರ್ಷಿತರಾಗುವರು.

ಹೀಗೆ ಜನಜೀವನದಲ್ಲಿನ ಒಂದು ಬಲವಾದ ವಿಶ್ವಾಸವನ್ನು ಸಲ್ಲಕ್ಷಣವಾಗಿ ಅಳವಡಿಸಿಕೊಂಡು, ಸತ್ಯಪೀಠವನ್ನು ಕಲ್ಪಿಸಿಕೊಂಡು 'ಮಾಯಾ ಬಜಾರ್"ನಲ್ಲಿ ಒಂದು ವಿಶೇಷ ಸೊಗಸನ್ನು ಕಲ್ಪಿಸಿರುವರು.

ಸಾಯಿಯ ಅಭೇದ್ಯವಾದ ನಿಶ್ಕಲ್ಮಷತೆಯೂ ಸತ್ಯದ ಸಂಪತ್ತಿನಿಂದಲೆ ಮಹಾಶ್ರೀ.

ವಿಜಯಾರವರ

ಮಾಯಾ ಬಜಾರ್

ಕನ್ನಡ

ಬೇಡವಾದ ಬದುಕು

(೨ನೇ ಪುಟದಿಂದ)

ಕತ್ತಲೆಯು ನೊತ್ತವಾಗಿ ಹರಡಿತ್ತು. ಸೊರಗಡೆ ಗಾಳಿ ಬಲವಾಗಿ ಬೀಸುತಿತ್ತು. ನರವಾಸನೆಯ ನ್ನು ತಿಳಿದ ರಾಕ್ಷಸನು ಬೆಚ್ಚಿ ರಿವಂತೆ ಮಳೆಯ ಭೋರ್ಗರೆವ ಸದ್ದು ದೂರದಿಂದಲೇ ಕೇಳಿಬರುತಿತ್ತು. ಹತ್ತಿರದ ಮಾರಡಿಯಲ್ಲಿ ತರಗೆಲೆಯು ಪರಪರ ಸದ್ದು ನಿಶ್ಶಬ್ದವನ್ನು ಛೇದಿಸಿ ಕೇಳಿ ಬರುತಿತ್ತು. ಒಳಗಿದ್ದ ಚಿಮಣಿ ದೀಪವು ಒಮ್ಮೆ ಜಗ್ಗನೆ ಉರಿಯುತ್ತಲೂ ಮಗದೊಮ್ಮೆ ಎಲ್ಲಿ ನಂದಿ ಹೋಗುವು ದೋ ಎಂಬಂತೆ ಕ್ಷೀಣವಾಗುತ್ತಲೂ ಲಲಿತೆಯ ಮನೋ ನಿರ್ಧಾರದಂತೆ ಚಂಚಲವಾಗಿತ್ತು. ಗೋಪಾಲನು ನಿಶ್ಚಿಂತೆಯಿಂದ ಡಾಸಿಗೆಯಲ್ಲಿ ಹಾಯಾಗಿ ಮಲಗಿಯೇ ಇದ್ದನು ಇವೇ ತನ್ನ ಜೀವನದ ಕೊನೆಯ ದಿನವೆಂದು ನಿರ್ಧರಿಸಿದ ಲಲಿತೆ ಮೆಲ್ಲನೆ ಎದ್ದು ಪತಿಯ ಕಾಲಿಗಡ್ಡ ಬಿದ್ದು ಅಂಗಾಲನ್ನು ಚುಂಬಿಸಿದಳು. ಅದಾಗಲೇ ಬೇಟೆಗಾಗಿ ಕೊಂಚುತಿದ್ದ ಬೆಕ್ಕು ಹಸಿದು ಕೂಳಿಸಿಗದ ಸಮಯು ಮಿಯಾಂ ಮಿಯಾಂ ಎಂದು ಕೂಗುತ್ತಾ ಅಟ್ಟದಿಂದ ಕಿರಿಕಿರಿಯಿತು ಭಾವ ಪರವಶಳಾದ ಲಲಿತೆ ಛಳಕ್ಕನೆ ಎದ್ದುನಿಂತು ಕಣ್ಣೊರಸಿಕೊಂಡು ಚುಮಿಣಿ ದೀಪವನ್ನಾರಿಸಿದಳು ಬಾಗಿಲ ಅಗಳಿಯನ್ನು ತೆಗೆದು ಮೆಲ್ಲನೆ ಹೊರ ಕಾಲಿಟ್ಟಳು. ಜೊಸ್ತಿಲು ದಾಟಿ ಅಂಗಳ ಕ್ಕಿಳಿದಳು ಮಿಂಚಿನ ಬೆಳಕನ್ನಾಶ್ರಯಿಸಿಕೊಂಡು ಸಶ್ಚಿಮಾಭಿ ಮುಖವಾಗಿ ತೆರಳಿದಳು ಅಗಲುವವಳನ್ನನುಸರಿಸಲು ಅನುಮಾನಿಸಿದಂತೆ ಅವಳುಟ್ಟ ಸೀರೆ ನೆರಿಗೆ ಆಗಾಗ ಭುಜದ ಮೇಲಿಂದ ಕೆಳಜಾರುತಿತ್ತು ಎದುರಿನ ಬಯಲಲ್ಲಿ ಗದ್ದೆಯ ತೆರವು ಮೇಲೆ ಏರಿ ಇಳಿಯುತ್ತಾ ನಡೆಯುತ್ತಿರುವಾಗ ಎಡವಿ ಬೀಳುತ್ತ ಎಳುತ್ತಾ ಬಹಳ ಕಷ್ಟದಿಂದ ಮನೆಬಿಟ್ಟು ದೂರ ನಡೆದಳು ಮುಂದೆ ವಿಶಾಲವಾದ ಮೈದಾನು, ಹತ್ತಿರದಲ್ಲೇ ಹರಿಯುತ್ತಿರುವ ತೋಡು. ಪರಿಯಂತ ನೀರು ಕಲ್ಲನೆಡೆಯಲ್ಲಿ ಇಳಿದು ಬರುವ ಝುಳಝುಳ ನಿನಾದವು ಕೇಳಿಸುತ್ತಲೇ ಲಲಿತೆ ಬೆಚ್ಚಿ ಬಿದ್ದಳು

ವಳಿ ಹನಿಯಿತ್ತು. ಒದ್ದೆಯಾದ ಬಟ್ಟೆ ಮೈಗಂಟಿಹೋಗಿತ್ತು. ಹೃದಯ ದುರಿಗೆ ಹೂರಗಣ ಶೀತಗಾಳಿಯು ಸ್ಪರ್ಶಿಸಿದೊಡನೆ ಕರಗಿ ನೀರಾದ ಕಣ್ಣೀರು ಧಾರಾಕಾರವಾಗಿ ಇಳಿಯುತ ತಟ್ಟನೆ ಕುಸಿದು ನೆಲದ ಮೇಲೆ ಬಿದ್ದು ಅಳತೊಡಗಿದಳು ತನ್ನ ಪ್ರಿಯ ಪತಿಯ ಅಸಂದರ ಮುಖಕಾಂತಿಯನ್ನು ನೆನೆನೆನೆದು ಅತ್ತಳು. ಲಲಿತೆಯ ನಿಷ್ಕಲ್ಮಷ ಹೃದಯದಲ್ಲಿ ನಿರಾಶೆಯು ತೊಟ್ಟಿಲು ತೂಗತೊಡಗಿತು ಪೂರ್ಣ ವಿರಾಗಿಣಿಯಾದ ಆಕೆ ಹುಲುಸಾಗಿ ಬೆಳೆದ ಹುಲ್ಲಿನ ನಡುವೆ ಬಿದ್ದವಳೆದ್ದು ಜಳಿಯಿಂದ ನಡುಗುತ್ತ ಹೆಜ್ಜೆ ಮುಂದೆಯಿಟ್ಟಳು ಹುಲ್ಲಿನ ನಡುವೆ ಹರಿಯುತಿದ್ದ ಕನ್ನಡಿ ಹಾವು ತಲೆಯೆತ್ತಿ ಅವಳ ಕಾಲನ್ನು ಕಚ್ಚಿಬಿಟ್ಟಿತು ಹಾ ಎಂದಾಕೆ ಧರೆಗೊರಗಿದಳು ಅಕ್ಷಣವೇ ಗುಡುಗೊಂದು ಗಡಗಡಿತು ವಿಂಜೊಂಚು ಮಿಂಚಿ ಅವಳ ಪಾಲಿಗೆ ಮರಣಶಯ್ಯೆಯಾಗಿದ್ದ ನದಿ ಕಣ್ಣಿಗೆ ಗೋಚರವಾಗುವಂತೆ ಮಾಡಿ ಗಾಢಾಂಧಕಾರದಲ್ಲಿ ಲೀನವಾಯಿತು ಮೈ ಬೆವರಿತು, ಕಾಲು ಕಾಲಿತು ಸ್ಮೃತಿ ತಪ್ಪಿತು ಭಯವು ಅವಳ ಶರೀರವನ್ನೇ ಆವರಿಸಿತು ಇನ್ನಿಲ್ಲಿಯೇ ಉಳಿದಲ್ಲಿ ತಾನು ನಾಳೆ ಊರವರ ಬಾಯಿಂದ ಅಪವಾದದ ಹೊರೆಯನ್ನು ಹೊತ್ತು ಜಾರಿಣಿಯೆ ನಿಸಿಕೊಳ್ಳಬೇಕಾದೀತು ಎಂಬ ವಿವೇಕ ಆಕೆಯನ್ನು ಹಿಡಿದೆತ್ತಿ ನಿಲ್ಲಿಸಿತು ಮಾಲುತ್ತಿರುವ ಮೈಯನ್ನು ಆಧರಿಸಿಕೊಂಡು ನೀರ ಬಳಿ ಬಂದಳು ವಿಷನೀರಿದ ಅವಳು ಬಾಯಿಂದ ನೊರೆಕಾರಿದಳು ಮುಂದೆ ಕಾಣಲಿದೇ ಕಾವೇರೀ ನದಿ ಈ ಹಿಂದೆ ಹಲವರ ಕೆಲಬಗೆಯ ಹೃದಯಜ್ವಾಲೆಯ ನ್ನುತಣಿಸಿತನ್ನ ಗರ್ಭದಲ್ಲಿ ಆಶ್ರಯವನ್ನಿತ್ತ ಮಹಾ ಮಾತೆ ಯಾಕೆ? ಹೆತ್ತಬ್ಬೆ ಆಕೆ ಮೋಹದಿಂದ ತನ್ನ ಮಗುವನ್ನು ಅಪ್ಪಿ ಹಿಡಿದೆಳೆವಂತೆ ಲಲಿತೆ ನೀರ ಸೆಳೆತಕ್ಕೆ ಸಿಕ್ಕಿದಳು ಕಾಲು ಜಾರಿತು ಕಾಲನ ಸಂಕಕ್ಕೆ ಸಿಲುಕಿದೆ ಅವಳ ಹಿರಿವ ನೀರಲ್ಲಿ ಮುಳುಗಿ ತನ್ನ ಕೊನೆಯುಸಿರನ್ನೆಳೆದಳು ವ್ಯಾಕೋತ್ಕ್ಷಪಣಕಾಲಕ್ಕೆ ತಾನು ತತ್ಕಾಲಿಸಿ ಕೈಕಾಲು ಬಡೆದಾಗ ನದಿಯ ನೀರಲ್ಲಿ ತುಂತುರುಗಳು ಸಿಡಿಯುತಿದ್ದುವು

ನಾನು ಕಂಡುಕೊಂಡಿದ್ದೇನೆ—

ಅಜ್ಜಿಯ ಮಾತು ನಿಜ

ನನಗೆ ಒಬ್ಬಳು ಅಜ್ಜಿ ಇದ್ದಳು. ಅಂದರೆ ನನ್ನ ಮುದಿಅಜ್ಜಿ ನನ್ನ ತಾಯಿಯ ತಾಯಿ ತಾಯಿ ನಮ್ಮ ಅಜ್ಜಿಗೆ ಮಕ್ಕಳ ಮೇಲೆ ಪ್ರೀತಿ ಒಸ್ತು. ಅದರಲ್ಲೂ ನನ್ನ ಮೇಲೆ ಬಹಳ ಪ್ರೀತಿ ಅಜ್ಜಿಯ ಮನೆಯಲ್ಲಿ ಏನು ತಿಂಡಿ ಮಾಡಿದರೂ ಅಜ್ಜನ ಕೈಯಲ್ಲೊ ಮಾವನ ಕೈಯಲ್ಲೊ ಕೊಟ್ಟು ಕಳುಹಿಸುತ್ತಿದ್ದರು ಅಜ್ಜಿ ನಮ್ಮಲ್ಲಿಗೆ ಬರುವಾಗ ಕೇಳುವುದೇ ಬೇಡ-ಏನಾದರೊಂದು ಬಗೆಯ ತಿಂಡಿ ತಂದೇ ತರುತ್ತಿದ್ದರು ಒಮ್ಮೆ ಅಜ್ಜಿ ನಮಗೆ ಬಾಳೆಕಾಯಿ ಮುಳ್ಳು ಕೊಟ್ಟು ಕಳಿಸಿದ್ದಾರೆ ಅದರ ರುಚಿ ಈಗಲೂ ನನ್ನ ಬಾಯಲ್ಲಿದೆ ಅದರ ನೆನಪಾಗುವಾಗ ಈಗಲು ನನಗೆ ನಾಲಿಗೆಯಲ್ಲಿ ನೀರು ಸುರಿಯುತ್ತದೆ

ನನ್ನ ಅಜ್ಜಿಗೆ ದೇವರ ಮೇಲೆ ಭರಿ ಭಕ್ತಿ ಶಾಸ್ತ್ರಪುರಾಣದ ಮೇಲೆ ಬಹಳ ವಿಶ್ವಾಸ ಹಳಬರ ನೂತನ ಮೇಲೆ ಬಹಳ ನಂಬಿಕೆ ಬೆಳಿಗ್ಗೆ ಸ್ನಾನ ಆಗದೆ ಏನೂ ಆಹಾರ ತೆಕ್ಕೊಳ್ಳುವ ಹಾಗಿಲ್ಲ ಮಧ್ಯಾಹ್ನ ಊಟ ಇಲ್ಲ ಸಾಯಂಕಾಲ ೫ ಘಂಟೆಗ ಸುರುವಾದರೆ ೪ ಗಂಟೆಗೆ ಜಪ ಮುಗಿದ ನೇಲೆಯೇ ಭೋಜನ ಕಾರ್ಯ ನಿಮಿತ್ತ ಹೂರಡುವಾಗ ಯಾರಾದರೂ 'ಎಲ್ಲಿಗೆ' ಎಂದು ಕೇಳಿಬಿಟ್ಟರೆ ಅಂದಿನ ಕಾರ್ಯ ಭಂಗ ಎಂದು ಅಜ್ಜಿಯ ಮಾತು ಆದೂ ಇಲ್ಲದೆ ಪ್ರಯಾಣ ಮಾಡುವಾಗ ಹಾವು ಕಾಣಿಸಿಕ್ಕಿದರೆ ಅಂದಿನ ಕಾರ್ಯ ಸರ್ವನಾಶ ಎಂದು ಅಜ್ಜಿಯ ಮತ ಆದರೆ ನನಗೆ ಇಂತಹ ನಂಬಿಕೆಗಳಲ್ಲಿ ನಂಬಿಕೆ ಇಲ್ಲ

ಒಂದು ದಿನ ನನಗೆ ಅಜ್ಜಿ ಏ ಮಾತು ನಿಜ ಅಂದು ನಿದರ್ಶನಕ್ಕೆ ಒಂತು ಆ ಕತೆ ಕೇಳಿರಿ

ಆದೊಂದು ದಿನ ಅಂದರೆ ಹತ್ತು ವರ್ಷ ಗಳಿಗೆ ಮೊದಲು ಆಗ ನನಗೆ ೦೦ ವರ್ಷ ವಾಗಿತ್ತು ಅಜ್ಜಿ ಪತ್ತು ತವರ್ಷಗಳಾಗಿತ್ತು. ಆಗ ನನಗೆ ಜ ಗಾರಾಡ ವ ಹುಚ್ಚು ಜೋರಿತ್ತು ಎಲ್ಲಿಯಾದರೂ ಜಾತ್ರೆಯೋ ಕೊಳಕಟ್ಟೆಯೊ ಇದ್ದರೆ ಎಷ್ಟು ದೂರವಾದರೂ ಹೋಗುತ್ತಿದ್ದೆ ಅಲ್ಲಗ ಜುಗಾರಿ ಆಟದವರು ಬರುತ್ತಿದ್ದರು ಅಲ್ಲಿ ಜುಗಾರಿ ಆಡುತ್ತಿದ್ದೆ ಹೀಗ ಒಂದು ದಿವಸ ನಮ್ಮ ಮನೆಯಿಂದ ಎರಡು ಮೈಲು ದೂರವಲ್ಲಿ ಒಂದು ಕೋಳಿಕಟ್ಟೆಯಿದ್ದಿತ್ತು ಭಾರಿ ಜುಗಾರಿಕಾಂಪನಿಯವರು ಬರುತ್ತಾರೆ ಎಂಬ ವದಂತಿ ಇತ್ತು ನಾನು ಅಲ್ಲಿಗೆ ಹೋಗುವದೆಂದು ನಿಶ್ಚಯಿಸಿದೆ

ಮಧ್ಯಾಹ್ನದ ಊಟ ತೀರಿಸಿ ಅಮ್ಮ ನೊಡನೆ ಒಮ್ಮೆ ಪೇಟೆ ಕಡೆ ಹೋಗಿಬರುತ್ತೇನೆಂದು ಹೇಳಿ ನನ್ನಲ್ಲಿ ರೂಪ್ಯಾ ೫ ನ್ನು ಕಿಸೆಯಲ್ಲಿ ಹಾಕಿಕೊಂಡು ಹೂರಟೆ ಹೊರಡುವಾಗ ನನ್ನ ಅಕ್ಕನ ಮಗ ಕಣ್ಣ ಹುಡುಗ ಎಲ್ಲಿಗೆ ಮಾಮ ಅಂದ ನಾನು ಅವನ ಮಾತು ಲಕ್ಷ್ಯಕ್ಕೆ ತಾರದೆ ಮುಂದೆ ನಡೆದೆ ಒಂದು ಫರ್ಲಾಂಗ ನಡೆದಿದ್ದೆ ಆಗ ಎದುರಿನಿಂದ ಹಂಪೊಂದು ಭುಸ್ಸೆಂದು ಅಡ್ಡ ದಾಟಿತು ನಾನು ಅದನ್ನು ಕೂಡ ಗಣನೆಗೆ ತಾರದೆ ಮುಂದುವರಿದೆ ೩ ಘಂಟೆ ಆಗುವಾಗ ಕೋಳಿ ಕಟ್ಟದಲ್ಲಿಗೆ ತಲಪಿದೆ ಅಲ್ಲಿಗೆ ನಾಲ್ಕೈದು ಜುಗಾರಿ ಕಂಪೆನಿಗಳು ಬಂದಿದ್ದುವು ನಾನು ಹೋಗಿ ಒಂದು ಕಂಪೆನಿಯಲ್ಲಿ ಆಟಕ್ಕೆ ಕುಳಿತೆ ಒಂದು ಪಂಟೆ ಕಳೆಯಿತು ನನಗೆ ಎಂಥಾ ರಣಗಾಯ ರೂಪ್ಯಾ ಲಾಭ ಸಿಕ್ಕಿತು ಆಟ ಮುಂದುವರಿಯುತ ಬಂದ ಹಣ ಹೋಗ ತೊಡಗಿತ ೫ ಘಂಟೆ ಆಗುವಾಗ ಕಿಸೆಯಾಲಿ ಒಂದು ಪಾವಾಣೆ ಕೂಡ ಇಲ್ಲ ಯಾರೊಡನೆ ಕ್ಕಾಳಿದರೂ ಇಲ್ಲ ಅನ್ನುವ ವರೆ ಕೊನೆಗ ಕಿವಿಯಲ್ಲಿದ್ದ ಎರಡು ಒಂಟೆ ಕಳಚಿದೆ ಅವನ್ನು ಕೊಂಡು ಹೋಗಿ ೫ ರೂಪ್ಯ ನೆಟ್ಟೆಯಲ್ಲಿ ೫ ರೂಪಾಯಿಗೆ ಒತ್ತಿ ಪಿಟ್ಟೆ ೮ ಹಣ ತಕೆಂಡು ಪುನಃ ಆಟಕ್ಕೆ ಕುಳಿತೆ ಹೊತ್ತು ಕತ್ತಲಾಗುತ್ತಾ ಬಂತು ೩ ಐದು ರೂಪ್ಯಾ ಕೂಡ ಆಟದ್ದ ಹೋಗಿ ಹೋಯ್ತು ಜಾ ಕುಡಿಯಲೂ ದುಡ್ಡಿಲ್ಲ ಒಬ್ಬನ ಕೈಯಿಂದ ಒಂದು ಬೀಡಿ ತೆಗದುಕೊಂಡು ಸೇದುತ್ತಾ ಮನದಾರ ಹಿಡಿಪೆಓರುವಾಗದಾರಿಯಲ್ಲಿ ಅಜ್ಜಿಯ ನೆನಪು ಬಂತು ಅಜ್ಜಿಯ ಮಾತು ಕೂಡ ನೆನಪಿಗೆ ಬಂತು ಇವತ್ತಿನ ಲಕ್ಷಣ ಹಾಳು, ಹೊರಡುವಾಗಲೆ ಅಪಶಕುನವಾಗಿದೆ ಅಜ್ಜಿಯ ಮಾತು ನಿಜ ಅಂದುಕೊಂಡೆ ೧೧ ಗಂಟೆಗೆ ಮನೆಗೆ ಸೇರಿದೆ ಈಗ ನನಗೆ ಜ ಗಾರಾಡುವ ಅಭ್ಯಾಸವೇ ಬಿಟ್ಟು ಹೋಗಿದೆ

ನವೀನ ಕಾದಂಬರಿ? ಇದೀಗ ಪ್ರಕಟವಾಗಿದೆ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ, ಎಲ್‌ಎಲ್ ಬಿ, ವಕೀಲ, ಹಾನೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯತೆಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಜ್ಜ ವರ್ತನೆಯಿಂ ಪರಿಹಾರವಾಗುವೆಂಬುದು ಕದ್ದಾರಹಸ್ಯದ ಮೂಲಕ ವ್ಯಕ್ತವಾಗಿದ್ದುಟ್ಟಿವೆ ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ ಪ್ರಸಂಗಾನ ಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ನಿವರಿಸಲ್ಪಟ್ಟಿವೆ ರಸವತ್ತಾದ ಕಥಾಭಾಗವು ಮನೋಹರವಂದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರ ಪೂರ್ತಿ ಗೊಳಿಸುವ ವರೆಗೆ ಬಿಡುವಂತಿಲ್ಲ

ಇವರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ ಬೆಲೆ ರೂ 1—12—0 (1-75)

ನವಯುಗ ಪ್ರೆಸ್, ಉಡುಪಿ

ಮೂಲ್ಕಿ ಬ್ಯಾಂಕ್ ಲಿಮಿಟೆಡ್,

ಮೂಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಸುಮಂದ ವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು

ನಿರಖು ದೇವಣಾತಿ	
3 ತಿಂಗಳಿಗೆ	3%
4 ರಿಂದ 6 ,,	3½%
7 ,, 12 ,,	4%
13 ,, 24 ,,	4½%
ಸೇವಿಂಗ್ಸ್ ಬ್ಯಾಂಕ್ ಲೆಕ್ಕ	2½%
ಕರೆಂಟ್ ಎಕೌಂಟು	½%

The Moolky Bank, Ltd.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 date 2-12-1950 of the Director of public Instruction Madras

ಸ್ವತೇತ್ರ ಭಾರತದಲ್ಲಿ—

ಕಾರ್ಮಿಕರ ಹಿತಾಸಕ್ತಿ

ಸ್ವಾತಂತ್ರ್ಯದ ನಂತರ ಭಾರತದಲ್ಲಿ ಕಾರ್ಮಿಕರು ಎಷ್ಟು ಕೆಲಸ ಮಾಡಿದರು? ಈ ಹತ್ತು ವರ್ಷಗಳಲ್ಲಿ ದೇಶದ ಆರ್ಥಿಕ ಮತ್ತು ಸಾಮಾಜಿಕ ವಿಕಾಸದಲ್ಲಿ ಕಾರ್ಮಿಕರು ಎಷ್ಟರ ಮಟ್ಟಿನ ಸಹಕಾರ ನೀಡಿದರು ಹಾಗೂ ಎಷ್ಟು ಲಾಭವಾಯಿತು? ಈ ಪ್ರಶ್ನೆಯನ್ನು ಕುರಿತು ನಾವು ಈಗ ವಿಚಾರಮಾಡಿದಾಗ, ದೇಶದ ಅಭ್ಯುದಯದಲ್ಲಿ ಕಾರ್ಮಿಕರು ಗಮನಾರ್ಹವಾದ ಕೆಲಸವನ್ನು ನಿರ್ವಹಿಸಿರುವರೆಂಬುದು ವ್ಯಕ್ತಗೊಳ್ಳುತ್ತದೆ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಔದ್ಯೋಗಿಕ ಉತ್ಪಾದನೆಯಲ್ಲಿ ಆಗಿರುವ ಪ್ರತಿಶತ ಏರಿಕೆಯು ಹೆಚ್ಚುವರಿಯೂ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಾರಂಭಿಕ ವರ್ಷಗಳಲ್ಲಿ ಸಾಧಿಸಲಾಗಿರುವ ಹೆಚ್ಚುವರಿಯೂ ಕಾರ್ಮಿಕರ ಶ್ರಮದ ಫಲವಾಗಿರುವುದು. ಅವರ ಪ್ರಯತ್ನದಿಂದ ನಾವು ಕೈಗಾರಿಕೆಗಳಲ್ಲಿ ಇಟ್ಟುಕೊಳ್ಳಲಾಗಿದ್ದ ಗುರಿಗಳನ್ನು ಮುಟ್ಟಲು ಸಾಧ್ಯವಾಯಿತು. ಕೆಲವು ವಿಭಾಗಗಳಲ್ಲಿ ಗುರಿಯನ್ನು ಮೀರಿ ಮುಂದೆ ಹೋಗಲೂ ಭಾರತೀಯ ಕಾರ್ಮಿಕರೇ ಕಾರಣರಾಗಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಕಾರ್ಮಿಕರಿಗೆ ನಾನಾಕಷ್ಟು ಪ್ರಯೋಜನ ದೊರೆತಿದೆ. ಅವರ ಜೀವನ-ಕೆಲಸ ಪರಿಸ್ಥಿತಿ ಸುಧಾರಿಸಿದೆ. ಅವರ ಹಿತರಕ್ಷಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಥಮತಃ ಅವರಿಗೆ ಸಾಮಾಜಿಕ ಸುರಕ್ಷಣೆಯ ವ್ಯವಸ್ಥೆಯನ್ನು ಮಾಡಲಾಗಿದೆ. ಅವರ ವೇತನ ಏಚ್ಚಿದೆ. ಕಾರ್ಮಿಕರ ವರಮಾನವೂ ಹೆಚ್ಚಿದೆ. ಅಂದರೆ, ನಾವು ಈ ಹಾದಿಯಲ್ಲಿ ನಮ್ಮ ಕಾರ್ಯವನ್ನು ಪೂರ್ಣಗೊಳಿಸಿದ್ದೇವೆಂದು ಅರ್ಥವಲ್ಲ, ನಾವು ನಿರ್ವಹಿಸಬೇಕಾದ ಕೆಲಸ ಇನ್ನೂ ಬೇಕಾದಷ್ಟಿದೆ.

ಕಾರ್ಮಿಕರ ಉನ್ನತಿಗಾಗಿ ವಾರ್ಷಿಕ ವರ್ಗವನ್ನು ರೂಪಿಸಲಾಗಿದೆ. ಕಳೆದ ೧೦ ವರ್ಷಗಳಲ್ಲಿ ಆಚರಣೆಗೆ ತಂದಿರುವ ಕಾರ್ಮಿಕ ಶಾಸನಗಳು, ಅವುಗಳಿಂದ ದೊರೆತ ಸ್ಪಷ್ಟ ಫಲ ಈ ಅಂಶವನ್ನು ಪ್ರಮಾಣೀಕರಿಸುತ್ತವೆ. ಶಾಸನಗಳು ಕಾರ್ಮಿಕರ ಅಗತ್ಯಗಳಿಗೆ ವ್ಯಾಪ್ತಿ ನೀಡಿದವೆಲ್ಲ ಅಲ್ಲ; ಈ ಕಾನೂನುಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಮನ್ನಣೆಯನ್ನು ಇತ್ತವು.

ಗಣಿಕಾರ ಕಾರ್ಮಿಕರ ಕಾನೂನು, ಗಣಿಗಾರ ಭವಿಷ್ಯನಿಧಿ ಕಾನೂನು, ಗಣಿಕಾರ ಉದ್ಯಾನ ಕ್ಷೇತ್ರಗಳ ಕಾನೂನು, ಗಣಿಕಾರ ಗಣಿ ಸಂಬಂಧ ಕಾನೂನು ಕಾರ್ಮಿಕರ ಕೆಲಸದ ಪರಿಸ್ಥಿತಿಯನ್ನು ಉತ್ತಮಪಡಿಸುವ ಗುರಿಯನ್ನು ಹೊಂದಿದೆ. ಸ್ತ್ರೀ, ಪುರುಷರಾದಿಯಾಗಿ ಎಲ್ಲ ಕೆಲಸಗಾರರಿಗೂ ಕೆಲಸದ ಕಾಲ ಮತ್ತು ವಾರದ ವಿರಾಮ ಮುಂತಾದವುಗಳನ್ನು ಈ ಕಾನೂನುಗಳು ಗೊತ್ತುಪಡಿಸುತ್ತವೆ. ಕೆಲಸಗಾರರ ಆರೋಗ್ಯ, ಸುರಕ್ಷಣೆ ಮತ್ತು ಹಿತರಕ್ಷಣೆಗೆ ಅಗತ್ಯವಾದ ಸೌಲಭ್ಯಗಳನ್ನು ಈ ಅಧಿನಿಯಮಗಳು ಒದಗಿಸುತ್ತವೆ.

ಅಂಗಡಿಗಳು ಹಾಗೂ ತತ್ಸಮಾನವಾದ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗಾಗಿ ಭಾರತ ಸರಕಾರದವರು ಮಾದರಿ ಮಸೂದೆಯೊಂದನ್ನು ಸಿದ್ಧಗೊಳಿಸಿ, ಅದನ್ನು ರಾಜ್ಯ ಸರಕಾರಗಳಿಗೆ ಕಳುಹಿಸಿದರು. ಈ ಮಸೂದೆಯಂತೆ, ಆ ರಾಜ್ಯ ಸರಕಾರಗಳು ತಮ್ಮ ತಮ್ಮ ಶಾಸನಗಳನ್ನು ಮಾರ್ಪಾಡು ಮಾಡಿಕೊಳ್ಳುವಂತೆ ಸೂಚನೆಯಿತ್ತರು. ಇತ್ತೀಚೆಗೆ, ಕಾರ್ಯನಿರತ ಪತ್ರಿಕೋದ್ಯೋಗಿಗಳಿಗೂ, ಕೇಸದ ಕಾಲ, ರಜಾದಿನ, ಗ್ರಾಚ್ಯುಟಿ ಇತ್ಯಾದಿಗಳ ಬಗೆಗೆ ಶಾಸನ ರೀತಿಯಿಂದ ರಕ್ಷಣೆಯನ್ನಿತ್ತಿಯಲಾಗಿದೆ.

ಶಾಸನ ರೀತಿಯಿಂದ ಕೆಲಸಗಾರರಿಗೆ ದೊರೆಯುವ ಸೌಲಭ್ಯಗಳಲ್ಲಿ ಉಪಾಹಾರ ಗೃಹಗಳು, ಶಿಶು ಗೃಹಗಳು, ವಿಶ್ರಾಂತಿ ಗೃಹಗಳು, ಪ್ರಥಮ ಚಿಕಿತ್ಸೆ ಇತ್ಯಾದಿಗಳೂ ಸೇರಿವೆ.

ಕಲ್ಲಿದ್ದಲು ಗಣಿ ಮತ್ತು ಅಭ್ರಕದ ಕೈಗಾರಿಕೆಗಳಲ್ಲಿ ಕೆಲಸಗಾರರಿಗೆ, ವಿಶೇಷ ಸೌಲಭ್ಯಗಳನ್ನು ನೀಡುವುದಕ್ಕಾಗಿ ವಿಶೇಷ ಹಿತರಕ್ಷಣಾ ನಿಧಿಗಳನ್ನು ಆರಂಭಿಸಲಾಗಿದೆ.ಈ ನಿಧಿಯಿಂದ ಕಲ್ಲಿದ್ದಲು ಗಣಿ ಕೆಲಸಗಾರರಿಗೆ ೨೯೫೦ ಮನೆಗಳನ್ನು ಆ ಕೆಲಸಗಾರರ ಸಂಸ್ಥೆಗಳು ನಿರ್ಮಿಸಿವೆ. ಈ ಗಣಿಗಳ ಮಾಲೀಕರು, ನಿಧಿಯಿಂದ ಸಹಾಯ ಪಡೆದು ೨೬೦೦ ಮನೆಗಳನ್ನು ಕೆಲಸಗಾರರಿಗಾಗಿ ಕೊಟ್ಟಿರುವರು.

ಸ್ವಾತಂತ್ರ್ಯ ಲಭ್ಯವಾಗುವ ವರೆಗೂ ಕೈಗಾರಿಕಾ ಕೆಲಸಗಾರರಿಗೆ ವಸತಿಗಳನ್ನು ಕಲ್ಪಿಸುವ ಸಮಸ್ಯೆಯನ್ನು ಗಮನಾರ್ಹ ಪ್ರಮಾಣದಲ್ಲಿ ಕೈಗೊಂಡಿರಲಿಲ್ಲ ಗಣಿ ರಲ್ಲಿ ಭಾರತ ಸರಕಾರದವರು, ಸಹಾಯ ಧನ ಪಡೆದ ಕೈಗಾರಿಕಾ ವಸತಿ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು. ಕೈಗಾರಿಕಾ ಕೆಲಸಗಾರರಿಗೆ, ರಾಜ್ಯ ಸರಕಾರ, ವಸತಿ ನಿರ್ಮಂಡಲಿ, ಮಾಲೀಕರು ಮತ್ತು ಸಹಕಾರಿ ವಸತಿ ಸಂಸ್ಥೆಗಳು. ಇವುಗಳ ಮೂಲಕ, ವಸತಿಗಳನ್ನು ನಿರ್ಮಿಸಲು ಧನ ಸಹಾಯವನ್ನು ನೀಡಲಾಗುವುದು. ಕೇಂದ್ರ ಸರಕಾರದವರು, ಸಹಾಯ ಧನ ಹಾಗೂ ಸಾಲದ ರೂಪದಲ್ಲಿ ಹಣವನ್ನು ನೀಡುವರು. ೧೯೫೭ರ ಆಗಸ್ಟ್ ತಿಂಗಳ ಕೊನೆಯ ವರೆಗೆ ಈ ಯೋಜನೆಯ ಪ್ರಕಾರ ೬೫೫೦ ಗೃಹಗಳನ್ನು ಮುಗಿಸಲಾಗಿದೆ. ೧೫೫೦ ಗೃಹಗಳು ನಿರ್ಮಾಣ ಘಟ್ಟದಲ್ಲಿವೆ. ಇದಕ್ಕೆದೆ, ಇತರ ಯೋಜನೆಗಳೂ ಇರುವುವು. ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ಕೈಗಾರಿಕೆಯನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ಕೈಗೊಂಡಾಗ, ಅದಕ್ಕೆ ಸಂಬಂಧಪಟ್ಟ ಕೆಲಸಗಾರರ ವಸತಿಗಾಗಿ, ನಗರಗಳನ್ನು ನಿರ್ಮಿಸುವ ಸಂಬಂಧ ನಿರ್ಣಯಗಳನ್ನು ಕೈಗೊಳ್ಳಲಾಗುವುದು. ಭಾರತೀಯ ರೈಲ್ವೆಯವರು ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ ರೈಲ್ವೆ ಕೆಲಸಗಾರರಿಗಾಗಿ ಹೊಸದಾಗಿ ೪೦,೦೦೦ ಗೃಹಗಳನ್ನು ಕಲ್ಪಿಸಿರುವರು.

೧೯೪೭ರ ನಂತರ ಭಾರತದಲ್ಲಿ ಕಾರ್ಮಿಕರ ವಿಮಾ ಕಾನೂನನ್ನೂ ಆರಂಭಿಸಲಾಯಿತು. ಆದರ ಪ್ರಕಾರ ಕೆಲಸಗಾರರಿಗೆ, ಅವರು ಕೆಲಸ ಮಾಡುತ್ತಿದ್ದುದರಿಂದಾಗಿ, ಅಸ್ವಸ್ಥತೆ, ಮಾತೃಕಲ್ಯಾಣ, ಅಶಕ್ತತೆ ಅಥವಾ ಮೃತ್ಯು ಸಂಭವಿಸಿದಾಗ ಪರಿಹಾರವನ್ನು ನೀಡಲಾಗುತ್ತದೆ. ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಕಾರ್ಮಿಕರ ಜೀವವಿಮಾ ಕಾರ್ಪೊರೇಷನ್ನನ್ನು ಸ್ಥಾಪಿಸಲಾಗಿದೆ. ಸುಮಾರು ೧೨ ಲಕ್ಷ ಜನ ಕೆಲಸಗಾರರು ಈಗ ಈ ಯೋಜನೆಯಿಂದ ಸೌಲಭ್ಯಗಳನ್ನೂ ಪಡೆಯುವರು. ಕಾರ್ಮಿಕರಿಗಾಗಿ ಒತ್ತಾಯ ಭವಿಷ್ಯ ಕಾನೂನನ್ನು ೧೯೫೨ರಲ್ಲಿ ಸ್ಥಾಪಿಸಲಾಯಿತು. ಈ ಭವಿಷ್ಯ ನಿಧಿಯು ಕೆಲಸಗಾರರು ವಿಶ್ರಾಂತರಾದಾಗ, ಅಥವಾ ಮುದುಕರಾದಾಗ, ಅಥವಾ ಅವರು ಅಕಾಲ ಮರಣಕ್ಕೆ ತುತ್ತಾದರೆ, ಅವರ ಆಶ್ರಿತರಿಗೆ ಅನುಕೂಲವಾಗುವುದು. ಈ ಕಾನೂನು ಈಗ ೨೪ ಲಕ್ಷ ಜನರಿಗೆ ಅನ್ವಯವಾಗುತ್ತಿದೆ. ಇದರ ಜೊತೆಗೆ ಗಣಿ ಕೆಲಸಗಾರರ ಭವಿಷ್ಯ ನಿಧಿ ಯೋಜನೆಯೂ ಇರುವುದು. ಈ ಯೋಜನೆಯು ೫.೫೦ ಲಕ್ಷ ಜನ ಕಲ್ಲಿದ್ದಲು ಗಣಿ ಕೆಲಸಗಾರರಿಗೆ ಅನ್ವಯಿಸುವುದು. ಈ ನಿಧಿಯಲ್ಲಿ ೧೯೫೭ ಆಗಸ್ಟ್ ತಿಂಗಳ ಕೊನೆಯ ವರೆಗೆ ೧೧ ಕೋಟಿ ರೂ. ಗಳಿರುವವು.

ಸ್ವಾತಂತ್ರ್ಯಾನಂತರ ಕೆಲಸಗಾರರ ವರಮಾನ ಹೆಚ್ಚಿದೆ. ಕೈಗಾರಿಕಾ ವಿವಾದ ಕಾನೂನಿನ ಒಪ್ಪಂದದ ಪ್ರಕಾರ ಮುಖ್ಯವಾಗಿ ಈ ಅಭಿವೃದ್ಧಿಯನ್ನು ಸಾಧಿಸಲಾಗಿದೆ. ಭಾರತ ಸರಕಾರವು ಈ ಒಪ್ಪಂದಗಳಿಗೆ ಉತ್ತೇಜನವಿತ್ತಿದೆ.

ಕಷ್ಟತಮ ಕೆಲಸಗಳ ಕ್ಷೇತ್ರದಲ್ಲಿ ಸರಕಾರದವರು ಕನಿಷ್ಠ ವೇತನ ಕಾನೂನನ್ನು ೧೯೪೮ರಲ್ಲಿ ಆಚರಣೆಗೆ ತಂದಿರುವರು. ಬೀಡಿ ತಯಾರಿಕೆ, ರತ್ನ ಕಂಬಳ ತಯಾರಿಕೆ, ಕಲ್ಲು ಹೊಡೆಯುವುದು, ಕಟ್ಟಡ ನಿರ್ಮಾಣ, ಪ್ಲಾಂಟೇಷನ್ ಮತ್ತು ಬೇಸಾಯ ಉದ್ಯಮಗಳಿಗೆಲ್ಲ ಕನಿಷ್ಠ ವೇತನನಿಯಮವಿಚ್ಛೇದನವಾಗುವುದು.

ಹತ್ತಿ ಕೈಗಾರಿಕೆಗಾಗಿ ವೇತನ ಮಂಡಲಿಯೊಂದನ್ನು ರಚಿಸಲಾಗಿದೆ. ಸಕ್ಕರೆ, ಸಿಮೆಂಟ್ ಉದ್ಯಮಗಳಿಗೂ ವೇತನ ಮಂಡಲಿಗಳನ್ನು ರಚಿಸುವ ಉದ್ದೇಶ ಸರಕಾರಕ್ಕಿದೆ.

೧೯೪೭ರ ಕೈಗಾರಿಕಾ ವಿವಾದ ಕಾನೂನಿನಲ್ಲಿ ವಿವಾದಗಳ ಇತ್ಯರ್ಥ ಮತ್ತು ನಿರೋಧಕ್ಕೆ ಅಗತ್ಯವಾದ ಆಡಳಿತ ಯಂತ್ರವನ್ನು ಒದಗಿಸಲಾಗಿದೆ. ಈ ಕಾನೂನನ್ನು ಹೆಚ್ಚು ವ್ಯಾಪಕವಾಗುವಂತೆ ಇತ್ತೀಚೆಗೆ ತಿದ್ದುಪಡಿ ಮಾಡಲಾಗಿದೆ. ಕಾರ್ಖಾನೆಯ ಮಟ್ಟದಲ್ಲಿ ದ್ವಿಪಕ್ಷೀಯ ಸಮಿತಿಗಳನ್ನೂ, ರಾಷ್ಟ್ರೀಯ ಮತ್ತು ಕೈಗಾರಿಕಾ ಮಟ್ಟದಲ್ಲಿ ತ್ರಿಪಕ್ಷೀಯ ಸಮಿತಿಯನ್ನೂ ರಚಿಸಲಾಗಿದೆ.

ಅಭಿವೃದ್ಧಿ ಹೊಂದುತ್ತಿರುವ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ, ಉತ್ಪಾದನೆಯು ಗಣನಾರ್ಹವಾದಸ್ಮಾಣದಲ್ಲಿ ತಾಳುವುದು.ಕಾರ್ಮಿಕರು ಉತ್ಪಾದನೆಯಲ್ಲಿ ತಮ ಹತ್ತರವಾದವಾತ್ರವನ್ನು ನಿರ್ವಹಿಸುವರು.

ಭಾರತ ಸರಕಾರದವರು, ರಾಷ್ಟ್ರೀಯ ಉತ್ಪಾದನಾ ಕೇಂದ್ರವನ್ನು ಮುಂಬೈನಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ತಜ್ಞರ ಸಹಾಯದಿಂದ ರಚಿಸಿರುವರು. ಈ ಕೇಂದ್ರದವರು ಮುಂಬೈ ಮತ್ತು ಬೆಂಗಳೂರುಗಳಲ್ಲಿ ಕೈಗೊಂಡ ಉತ್ಪಾದನಾ ಯೋಜನೆ ಉತ್ತಮ ಫಲಿತಾಂಶಗಳನ್ನು ನೀಡಿದೆ.

ಕೆಲಸಗಾರರು ಉತ್ಪಾದನೆಯಿಂದ ಸಹಕರಿಸದೆ ಹೊರತು, ಯಾವ ಉತ್ಪಾದನಾ ಕಾರ್ಯಕ್ರಮವೂ ಯಶಸ್ವಿಯಾಗುವುದಿಲ್ಲ. ಕೆಲಸಗಾರರು ಉದ್ಯಮದಲ್ಲಿ ಪಾಲುಗಾರರೆಂಬ ಭಾವನೆಯು ಒಡಮೂಡುವುದು ಅಗತ್ಯವಾಗಿದೆ. ಈ ದೃಷ್ಟಿಯಿಂದ ಸರಕಾರದವರು, ಕಾರ್ಮಿಕರು ಕೈಗಾರಿಕೆಗಳಲ್ಲಿ ಪಾಲುಗಾರರಾಗುವ ಯೋಜನೆಗಳನ್ನು ಪ್ರಯೋಗ ಮಾಡಿ ನೋಡುತ್ತಿರುವರು. ಆದರ ಪ್ರಕಾರ ಮಾಲೀಕರು ಮತ್ತು ಕೆಲಸಗಾರರ ಪ್ರತಿನಿಧಿಗಳುಳ್ಳ ಆಡಳಿತ ಸಮಿತಿ ಕೌನ್ಸಿಲ್‌ಗಳನ್ನು ಏರ್ಪಡಿಸುವ ಯೋಜನೆಯಿರುವುದು.

ಒಟ್ಟಿನಲ್ಲಿ, ಕೈಗಾರಿಕೆಯು ಶಾಂತ ವಾತಾವರಣದಲ್ಲಿ ನಡೆದು, ಹೆಚ್ಚಿನ ಉತ್ಪಾದನೆ, ಉತ್ತಮ ಹಿತರಕ್ಷಣಾಕೆಲಸ ಮತ್ತು ತ್ವರಿತ ಅಭಿವೃದ್ಧಿಯೂ ನಡೆಯುವುದು. ಅದಕ್ಕೆ ಕೆಲಸಗಾರರು ಮತ್ತು ಮಾಲೀಕರ ನಡುವೆ ಮಧುರ ಸಂಬಂಧವೇರ್ಪಡಬೇಕು. ಇತ್ತೀಚೆಗೆ ಸಂಬಂಧಪಟ್ಟ ಪಕ್ಷಗಳು ಅಂಗೀಕರಿಸಿದ ತ್ರಿವಳಿ ನಿಯಮಾವಳಿಗಳು, ಭಾರತದ ಕೈಗಾರಿಕಾ ಸೌಹಾರ್ದದಲ್ಲಿ ಒಂದು ಮಹತ್ವಪೂರ್ಣವಾದ ಹೆಜ್ಜೆಯಾಗಿರುವುದು.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನೀಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

26—12—1957

ಸಂಚಿಕೆ ೧೬
NO. 16

ಲೇಖಕ ಸಮ್ಮೇಳನದ ಮೇಲೆ ಕಿರುವೆಳಕು—

ಭಾಷಾಸಾಹಿತ್ಯ ಸಮ್ಮೇಳನಗಳ ಅಪಮಾನ!

ಇದೇ ತಿಂಗಳ ೨೩ನೆ ಕಾರ್ಕಳದಿಂದ ೨೫ನೆಯ ದಿನಾಂಕದವರೆಗೆ ಕಲಕತ್ತೆಯಲ್ಲಿ ಭಾರತೀಯ ಲೇಖಕ ಸಮ್ಮೇಳನವು ನಡೆಯಿತು ಇದರ ಪ್ರತಿನಿಧಿಕ ಸ್ವರೂಪದ ಸಂಬಂಧದಲ್ಲಿ ಸಾಹಿತ್ಯಿಕ ಕ್ಷೇತ್ರಗಳಲ್ಲಿ ತೀವ್ರವಾದ ವಿವಾದಗಳು ಉತ್ಪನ್ನವಾಗಿದ್ದುವು ಈ ಸಂದರ್ಭದಲ್ಲಿ ಭಾರತೀಯ ಲೇಖಕ ಸಮ್ಮೇಳನದ ಆಯೋಜನೆಕ್ಕಾಗಿ ಇದುವರೆಗೆ ಒದಗಿ ಬಂದ ಸ್ಪಯಾರದ ಕುರಿತಾದ ಸಂಕ್ಷೇಪೋಲ್ಲೇಖವನ್ನು ಮಾಡುವುದು ಅಪ್ರಾಸಂಗಿಕವೆನಿಸಲಾರದು

೧೯೩೬ರಲ್ಲಿ ಭಾರತದ ಸಾಹಿತ್ಯಿಕ ಕ್ಷೇತ್ರದಲ್ಲಿ ಜಾಗ್ರತಿಯ ನವ ಶರಂಗಗಳೆದ್ದುವು ಇದರ ಪರಿಣಾಮಸ್ವರೂಪವಾಗಿ ಎರಡು ಭಾರತೀಯ ಲೇಖಕ ಸಂಘಗಳು ಅಸ್ತಿತ್ವದಲ್ಲಿ ಬಂದುವು. ಒಟ್ಟಿನಲ್ಲಿ ಹೇಳುವುದಾದರೆ, ಈ ಲೇಖಕ ಸಂಗರನೆಗಳು ರಾಷ್ಟ್ರೀಯ ಆಂದೋಲನದ ಗರ್ಭದಿಂದಲೇ ಜನ್ಮಗ್ರಹಣ ಮಾಡಿದುವು. ಇವುಗಳಲ್ಲಿ ಒಂದು, ಪ್ರಗತಿಶೀಲ ಲೇಖಕ ಸಂಘ, ಮತ್ತು ಇನ್ನೊಂದು ಭಾರತೀಯ ಸಾಹಿತ್ಯ ಪರಿಷತ್ತು.

ಭಾರತೀಯ ಪ್ರಗತಿಶೀಲ ಲೇಖಕ ಸಂಘದ ಪ್ರಥಮ ಅಧಿವೇಶನವು ೧೯೩೬ರಲ್ಲಿ ಲಖನವಿನಲ್ಲಿ ಮುನ್ಷಿ ಪ್ರೇಮಚಂದರ "ಧ್ಯಕ್ಷತೆಯಲ್ಲಿ ಸೇರಿತ್ತು. ಈ ಅಧಿವೇಶನದಲ್ಲಿ ಶ್ರೀಮತಿ ಸರೋಜಿನಿ ನಾಯಡು ಮತ್ತು ಮೌಲಾನಾ ಹಜರತ್ ಮೋಹಾನಿಯರ ಭಾಷಣಗಳು ನಡೆದುವು ರವೀಂದ್ರನಾಥ, ಶರಚ್ಚಂದ್ರ, ಸಮಿತ್ರಾನಂದನ ಪಂತ, ಜೋಶ ಮಲಿಹಾಬಾದಿ, ಯಶಪಾಲ, ಕಾಜೀನಜ ರೂಲ್ ಇಸ್ಲಾಂ, ತಾರಾಶಂಕರವಂದ್ಯೋಪಾಧ್ಯಾಯ ಮೊದಲಾದ ಗಣ್ಯಮಾನ್ಯ ಭಾರತೀಯ ಸಾಹಿತ್ಯಕಾರರ ಸಹಯೋಗವು ಈ ಅಧಿವೇಶನಕ್ಕೆ ಪ್ರಾಪ್ತಿಯಾಯಿತು.

"ಪ್ರಗತಿಶೀಲ ಲೇಖಕ ಸಂಘದ ಹೆಸರೇ ತಪ್ಪಾಗಿದೆ. ಸಾಹಿತ್ಯಕಾರ ಅಥವಾ ಕಲಾಕಾರರು ಸ್ವಭಾವತಃ ಪ್ರಗತಿಶೀಲರಾಗಿರುತ್ತಾರೆ ಒಂದು ವೇಳೆ ಅವರ ಶೀಲವು ಪ್ರಗತಿದಾಯಕವಿಲ್ಲವಾದರೆ, ಪ್ರಾಯಃ ಅಂತಹರು ಸಾಹಿತ್ಯಕಾರನಾಗಲಾರರು" ಎಂದು ಪ್ರೇಮಚಂದರು ತನ್ನ ಅಧ್ಯಕ್ಷ ಭಾಷಣದಲ್ಲಿ ನುಡಿದಿದ್ದರು ಅವರನ್ನೂ ತಮ್ಮ ಸಹದಾಯನವನ್ನು ವ್ಯಕ್ತಪಡಿಸುತ್ತ "ನಮ್ಮ ಸ್ವರ್ಗತಿಲೆಯಿಂದ ಉಚ್ಚಚಿಂತನೆ, ಸ್ವಾಧೀನತೆಯುಭಾವ,ಸುಜನರ ಅತ್ಯುಜ್ಜೀವನದ ಸಚ್ಚರಿತ್ರೆಗಳನ್ನು ವ್ಯಕ್ತಪಡಿಸುವ, ನಮ್ಮಲ್ಲಿ ಗತಿ, ಸಂಘರ್ಷ, ಮತ್ತು ಚರ್ಚೆಗಳನ್ನು ಹುಟ್ಟಿಸುವ ಸಾಹಿತ್ಯಗಳನ್ನು ಉತ್ಪಾದಿಸುವಂತೆ ಪ್ರಾಡಬೇಕು. ಏನೆಂದರೆ, ಇಂದು ಇನ್ನೂ ಹೆಚ್ಚಾಗಿ ನಿದ್ರಿಸುತ್ತಿರುತ್ತಿದೆ ಮೃತರ ಲಕ್ಷಣವಾಗಿದೆ." ಎಂದರು.

ಪ್ರೇಮಚಂದರ ಈ ವಿಚಾರಗಳಿಂದ ಯಾವುದೇ ರಾಜನೈತಿಕ ಮತವ ದನನ್ನು ಒಪ್ಪುವ ಲೇಖಕರಿಗೆ ಪ್ರಗತಿಶೀಲರು ಶ್ರೇಣಿಯಲ್ಲಿ ಸ್ಥಾನವಿಲ್ಲವೆನ್ನುವುದು ವ್ಯಕ್ತವಾಗುತ್ತದೆ ಅವರ ಇದರ ಕೆಲಸವು ಯಾನಂತರ ಶರ್ಮಶ್ರೀ ಪಂತ ರಾಹುಲ್, ರಾಂಗೇಯ ರಾಘವ, ಅಜ್ಞೇಯ ಮೊದಲಾದವರನ್ನು ಪ್ರಗತಿಶೀಲ ಕ್ಷೇತ್ರದಿಂದ ನಿಷ್ಕಾಸಿಕರನ್ನಾಗಿ ಮಾಡಿ ಪ್ರತಿಕ್ರಿಯಾವಾದಿಗಳೆಂದು ಕರೆಯಲಾಯಿತು. ವಸ್ತುತಃ ೧೯೩೬ರಲ್ಲಿ ಪ್ರಗತಿಶೀಲ ಲೇಖಕ ಸಂಘವೆಂಬ ಹೆಸರಿನ ಭಾರತೀಯ ಲೇಖಕ ಸಂಗರನೆಯ ಉದಯವು ಸಾವ್ರಾಜ್ಯವಾದ, ಸಂಪ್ರದಾಯವಾದ ಮತ್ತ ಅಧಿನಾಯಕವಾದಗಳಿಗೆ ವಿರುದ್ಧವಾಗಿ ದೇಶಭಕ್ತಿ, ಸ್ವಾಧೀನತೆ ವತ್ತು ಮಾನವತಾವಾದೀ ಭಾವನೆಯ ಒಂದು ಸೈತಿಕ ಸ್ವರದೊಡನೆ ಆಯಿತು. ಇದು ೧೯೪೫ರಿಂದ ಒಂದಾಗಿ ಅದರ ಸಹಕರ್ತೃವು ಸಾಮ್ಯವಾದಿವಳದ ಕೈಗಳಿಗೆ ಹೋಯಿತು. ಪ್ರಗತಿಶೀಲ ಲೇಖಕ ಸಂಘದ ನೀತಿಯ ನಿರ್ಧಾರಣವು ಸುಪ್ತ ಸಭೆಗಳಲ್ಲಿ ನಡೆ ಸುಲಾರಂಭವಾಯಿತು. ಈ ಲೇಖಕ ಸಂಗರನೆಯು ಯಾವುದೇ ರಾಜನೈತಿಕ ದಳದ ಸಂಬಂಧವಿರಬಾರದೆಂದಿದ್ದರೂ ಇದು ಪೂರ್ಣವಾಗಲಿಲ್ಲ ನೇತೃತ್ವ ಪರಿವರ್ತನೆಯ ಕಾರಣದಿಂದಾಗಿ ಈ ಸಂಘವು ಛಿನ್ನ-ಭಿನ್ನವಾಗಿ ಹೋಯಿತು. ಜನವಾದೀ ಲೇಖಕರು ಇದರಿಂದ ದೂರವುಳಿದರು ಮತ್ತು ಫಲವಾಗಿ ಸಮಾಜವಾದವನ್ನು ಸ್ವೀಕಾರಮಾಡಿದವರು ಸಹ ಅನೇಕ ಮಂದಿ ಅದರ ಒಂಬಂಧವನ್ನು ತಪ್ಪಿಸಿಕೊಂಡರು

ಭಾರತೀಯ ಸಾಹಿತ್ಯ ಪರಿಷತ್ತಿನ ಸ್ಥಾಪನೆಯು ಸಹ ಪ್ರಗತಿಶೀಲ ಲೇಖಕ ಸಂಘದಂತೆಯೇ ೧೯೩೬ರಲ್ಲಿ ನಡೆಯಿತು. ಆ ವರ್ಷದ ಏಪ್ರಿಲ್ ೨೪—೨೫ನೆ ತಾರೀಕುಗಳಲ್ಲಿ ನಾಗಪುರದಲ್ಲಿ ಈ ಪರಿಷತ್ತಿನ ಪ್ರಥಮ ಅಧಿವೇಶನ ನಡೆಯಿತು ಈ ಅಧಿವೇಶನದಲ್ಲಿ ಮಹಾತ್ಮಾ ಗಾಂದಿ ರಾಜೇಂದ್ರ ಪ್ರಸಾದ್, ಸರದಾರ ಪಟೇಲ ಮುರು ಪೋತ್ತಮದಾಸ ಠಂಡನ, ಕೆ. ಎಂ ಮುನ್ಷಿ, ಕಾಕಾ ಕಾಲೇಲ್ಕರ ಮೊದಲಾದ ಸಾಹಿತ್ಯ ಕ್ಷೇತ್ರಕ್ಕಿಂತ ರಾಜ ನೈತಿಕ ಕ್ಷೇತ್ರದಲ್ಲಿ ಅಧಿಕ ಮಹತ್ವಪೂರ್ಣ ಸ್ಥಾನ ಪಡೆದಿದ್ದವರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದುದು ಒಂದು ವಿಶೇಷವೆನ್ನಬೇಕು ಇದರಲ್ಲಿ ಮುನ್ಷಿ ಪ್ರೇಮಚಂದರೂ ಉಪಸ್ಥಿತರಿದ್ದರು. ಅದಿವೇಶನದಲ್ಲಿ ಈ ಪರಿಷತ್ತಿನ ಉದ್ದೇಶಗಳನ್ನು ಸಂಪೂರ್ಣವಾಗಿ ಸ್ವೀಕರಿಸಲಾರದು ಮಾತ್ರವಲ್ಲ, ತಾವು ನಡೆಸುತ್ತಿದ್ದ 'ಹಂಸ' ಮಾಸ ಪತ್ರಿಕೆಯನ್ನು ಸಹ ಭಾರತೀಯ ಸಾಹಿತ್ಯ ಪರಿಷತ್ತಿನ ಮುಖ ಪತ್ರವನ್ನಾಗಿ ಮಾಡಿಬಿಟ್ಟರು

ಈ ಪತ್ರಿಕೆಯು ಅಂತಿಮ ಎರಡು ಮೂರು ವರ್ಷಗಳ ಅಂಕಗಳು ಮುನ್ಷಿ ಪ್ರೇಮಚಂದ ಮತ್ತು ಶ್ರೀ ಕನ್ಹಯ್ಯಾ ಲಾಲಾ ಮುಂತಿಯವರ ಸಂಯುಕ್ತ ಸಂಪಾದಕತನದಲ್ಲಿ ಹೊರಬೀಳ ತೊಡಗಿತ್ತು ಮತ್ತು ಅವುಗಳಲ್ಲಿ ಪ್ರಾಯಃ ಎಲ್ಲ ಭಾರತೀಯ ಭಾಷೆಗಳಿಂದ ಆರಿಸಲಾದ ಸಾಹಿತ್ಯಿಕ ಸಾಮಗ್ರಿಗಳನ್ನು ಅನುವಾದ ರೂಪದಲ್ಲಿ ಪ್ರಕಟಿಸುತ್ತಿದ್ದರು.

ಭಾರತೀಯ ಸಾಹಿತ್ಯ ಪರಿಷತ್ತಿಗೆ ಬೇರೆ ಬೇರೆ ೧೧ ಉದ್ದೇಶಗಳಿದ್ದುವು ಅವುಗಳಲ್ಲಿ ಮುಖ್ಯವಾದುವುಗಳ (೧) ವಿಭಿನ್ನ ಪ್ರಾಂತೀಯ ಭಾಷೆಗಳಲ್ಲಿ ಏಕರೂಪದ ಲಿಪಿ (ದೇವನಾಗರೀ)ಯ ಸಿದ್ಧಾಂತದ ಪ್ರಚಾರ (೨) ಲೋಕಸಾಹಿತ್ಯದ ಅಧ್ಯಯನಕ್ಕೆ ಪ್ರೋತ್ಸಾಹ ಮತ್ತು ಲೋಕಸಾಂಹಿತ್ಯ ಸಂಗ್ರಹ ಮತ್ತು ಪ್ರಕಾಶನ ವ್ಯವಸ್ಥೆ (೩) ವಿಭಿನ್ನ ಭಾರತೀಯ ಬಾಷೆಗಳನ್ನಾಡುವವರನಡುವೆ ಸಹಯೋಗ ವೃದ್ಧಿ ನಿರ್ಮಿಸಲು ಹೇತುವಾಗುವ ಸಾಮಯಿಕ ಪತ್ರಿಕಾ ಪ್ರಕಾಶನ, (೪) ಕಾಲೇಜ, ವಿಶ್ವವಿದ್ಯಾಲಯ, ನ್ಯಾಯಾಲಯ ಮತ್ತು ಇನ್ನಿತರಕಾರ್ಯ ಕಾರ್ಯಾಲಯಗಳಲ್ಲಿ ವ್ಯವಹಾರ ಮಾಧ್ಯಮದ ರೂಪದಲ್ಲಿ ಭಾರತೀಯ ಭಾಷೆಗಳಿಗೆ ಸ್ಥಾನವನ್ನು ಪಡೆಯುವುದು

ಯಾವ ಮಹಾಪುರುಷರು ಈ ಪರಿಷತ್ತಿಗೆ ಜನ್ಮದಾತರಾಗಿದ್ದರೋ ಎಂತಹರು ಅಂತ್ಯದಲ್ಲಿ ರಿಜನೀತಿಯ ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದದರಿಂದಾಗಿ ಈ ಕಡೆಗೆ ಗಮನವನ್ನೀಯಲು ತವಕಾಶವೇ ದೊರೆಯದುದರಿಂದಾಗಿ, ಈ ಸಂಸ್ಥೆಯೂ ಅಲ್ಪಾಯುವೆಂಬುದು ಸಿದ್ಧವಾಗಿತ್ತೆಂಡಗಿದುದು ವೇದದಾಯಕ ವಿಷಯವಾಗಿದೆ

ಪಶ್ಚಾತ್ ೧೯೪೬ರಲ್ಲಿ ಏಪಿಯನ್ ಸಮ್ಮೇಳನದ ಅವಸರದಲ್ಲಿ ಒಂದು ಭಾರತೀಯ ಸಾಹಿತ್ಯ ಸಮ್ಮೇಳನವನ್ನೂ ವ್ಯವಸ್ಥೆಗೊಳಿಸಲಾಗಿತ್ತು ಆದರ ಸಂಯೋಜಕ ಮಂಡಲದಲ್ಲಿ ಶ್ರೀಮತಿ ಸರೋಜಿನಿ ನಾಯಡು, ಡಾ ರಾಜೇಂದ್ರ ಪ್ರಸಾದ, ವಿಯೋಗಿ ಹರಿ, ಜುಕಿರ್ ಹುಸೇನ್, ಜೈನೇಂದ್ರ ಕುಮಾರ ಮೊದಲಾದವರಿದ್ದರು ಈ ಮಂಡಲಿಯು ಕಲ್ಪನೆಗೂ ವಿರಾಟ್ ರೂಪಧಾರಣೆ ಮಾಡಿದ್ದರೂ ಆ ದಕ್ಕಾಗಿ ಆವಶ್ಯಕ ವಿರಾಟ್ ಪ್ರಯಾಸದ ಅಭಾವದ ಕಾರಣದಿಂದಾಗಿ, ಮೂರ್ತ ರೂಪಧಾರಣೆ ಮಾಡಲು ಅಸಾಧ್ಯವಾಗಿ ಪರಿಣಮಿಸಿತು

(೧೩ನೇ ಸುಟ ನೋಡಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಕಣ್ಣಿ ಕಥೆ—

ಚರಣದಾಸಿಯ ಆಂತರ್ಯ

ಶ್ರೀ. ಪಿ. ಎಸ್. ರಾವ್

"ನಿಮ್ಮಂತಹ ಸಹೃದಯರಿಗೆ ನನ್ನಂತಹ ರೋಗಿಷ್ಠ ಪತ್ನಿ ಇರಬಾರದು."

"ಏನ ನಿತ್ಯ ನಿನ್ನ ಕೊರಗು ಇದೇ ಅಲ್ಲವೆ ರತ್ನ! ಎಂದಾದರೂ ನಾನು ನಿನ್ನನ್ನು ರೋಗಿಷ್ಠಳು ಎಂದು ತಿರಸ್ಕಾರ ಭಾವದಿಂದ ಕಂಡಿರುವೆನೇ?"

"ಅದೇ....ನನ್ನ ಕೊರಗಿಗೆ ಕಾರಣ! ನಿಮ್ಮಂತಹ ದಯಾಮಯರಿಗೆ, ಪೆಂಡತಿಯನ್ನು ಅಮಿತವಾಗಿ ಆಧರಿಸಿ, ಸದಾ ಸುಖದಲ್ಲಿರಿಸಿ, ಸಹೃದಯದಿಂದ ಪ್ರೀತಿಸುತ್ತಿರುವವರಿಗೆ ಸುಖವನ್ನೀಯಲಾರದೆ ಹಾಸಿಗೆಯನ್ನು ಹಿಡಿಯುವೆಕಾಯಿ ತಲ್ಲ....!

"ಇಂದಲ್ಲ–ನಾಳೆ ನಿನಗೆ ಗುಣವಾಗಿದಿರದು ರತ್ನ...!"

"ನನಗೆ ಗುಣ! ದಿನದಿಂದ ದಿನಕ್ಕೆ ಕಾಲಿನ ಗಾತ್ರ ಬೆಳೆಯುತ್ತಾ ಇದೆ. ಇವರ ವಿಕಾರವನ್ನು ಕಂಡು ನನಗೇ ಅಸಹ್ಯವಾಗುತ್ತಿರುವಾಗ...ನೀತ್ರ ಮಾತ್ರ, ನನ್ನ ಮನಸೋಯೆಂತೆ ಮುಮತೆಯ ಮಾತುಗಳನ್ನಾಡುತ್ತಿರುವಿರಿ!"

"ಗಂಡ–ಹೆಂಡಿರೊಳಗೆ ಅನ್ಯೋನ್ಯವಿಲ್ಲದೆ ಮತ್ತಾರಲ್ಲಿ ಇರಬೇಕು ರತ್ನ? ನನ್ನ ಎಲ್ಲ ಕಾರ್ಯ ಕಲಾಪಗಳಲ್ಲಿ ಸಮಭಾಗಿಯಾಗಿ ಸಹಕರಿಸಿದ್ದ ನಿನ್ನನ್ನು ಇಂದು ನಾನು, ನಿನ್ನ ರೋಗಕ್ಕಾಗಿ ತುಚ್ಛೀಕರಿಸಬೇಕೇ? ಕೇವಲ 'ಅನೆಕಾಲಿನ' ನೆವದಿಂದ ನಿನ್ನನ್ನು ತ್ಯಜಿಸಿದರೆ ನನ್ನನ್ನೆ ದೇವರು ಮೆಚ್ಚಿಯಾರೇ?"

"ನನ್ನನ್ನು ನನ್ನ ದೇವರು ಮೆಚ್ಚಿದ್ದಾರೆ! ಅದು ನನ್ನ ಪೂರ್ವ ಪುಣ್ಯ!! ಬಹುಶಃ ಮುಂದಕ್ಕೆ ನಾನಿಬ್ಬರೂ ಮೆಚ್ಚುಗೆಯಿಂದಿರಲು ದೇವರು ಇಚ್ಛಿಸುವುದಿಲ್ಲ. ಹಾಗಿಲ್ಲದಿದ್ದರೆ ನನಗೀಗ ಈ....!

'ರತ್ನ! ಸಲ್ಲದ ಚಿಂತೆಯಿಂದ ಕೊರಗಿ ಕೃಶಳಾಗಬೇಡ. ನಿನ್ನ ದೇಹಸ್ಥಿತಿಯಲ್ಲಿ ಈ ರೋಗವು ಖಂಡಿತವಾಗಿಯೂ ಗುಣವಾಗುವುದೆಂದು ಡಾಕ್ಟರರು ಹೇಳಿರುತ್ತಾರೆ"

"ಹೌ! ಅವರದೊಂದು ಹುಚ್ಚು ಭರವಸೆ!"

"ಅಧೀರಳಾಗಬೇಡ ರತ್ನ! ವಿಧಿ ತನ್ನ ವಿಕಟ ವಿನೋದದಲ್ಲಿ ವಿಂಗಡಿಸಿರುವ ಈ ದುಃಖ-ಸುಖಗಳು ಹೆಗಲು-ಕತ್ತಲಿನಲ್ಲಿ ನಾವು ಕಂಗೆಡಬಾರದು. ನಾನೀಗ ಡಾಕ್ಟರರನ್ನು ಕಂಡು ಬರುತ್ತೇನೆ."

"ನನ್ನಿಂದಾಗಿ, ನಿಮ್ಮ ಬಾಳ್ವೆಯೇ! ಡಾಕ್ಟರ್—ಮನೆ ಎಂದು ಉತ್ತರ ಕೊಡಿ ದಾಡುವಂತಾಯಿತು!"

"ರತ್ನಾ.....ಹುಚ್ಚು ಮಾತನ್ನಾಡಬೇಡ! ಎಷ್ಟು....? ಒಮ್ಮೆ ಒಂದು ಮುಗಳು ನಗು—ನೋಡೋಣ...."

ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿಯೂ ಪರಸನನ್ನಾಡುವ ಪತಿಯ ವೈರ್ಯ ಧೈರ್ಯವನ್ನು ಕಂಡು ರತ್ನಳ ಹೃದಯದಲ್ಲಿ ದುಃಖ ಸಂತೋಷಗಳೆರಡೂ ಒಮ್ಮೆಲೇ ಉಕ್ಕೇರಿ, ಪ್ರಯತ್ನಪೂರ್ವಕ ನಗುವನ್ನು ಆಕೆ ಪ್ರದರ್ಶಿಸಿದಳು. ಗಂಡನ ಅಂತಃಕರಣದ ಪ್ರತಿರೂಪ ಅವಳ ಮುಖದಲ್ಲಿ ಮೂಡಿತು. ಪತ್ನಿಯ ಮುಖದ ಮುಗುಳುನಗೆಯಿಂದ ತೃಪ್ತನಾದ ಶ್ರೀಕಾಂತ ಪ್ರತಿ ನಗುವನ್ನು ಚೆಲ್ಲುತ್ತಾ ಹೊರಟು ಹೋದ.

೦೦ ೦೦ ೦೦

ನುಮಾತ್ರ ಶ್ರೀಕಾಂತ ಆರ್ಥಾಂಗಿ ರತ್ನ, ಗಂಡನಿಗೆ ಯೋಗ್ಯ ಹೆಂಡತಿಯಾಗಿದ್ದಳು, ವಿವಾಹವಾಗಿ ಪತಿ ಗೃಹವನ್ನು ಸೇರಿದ ರತ್ನ, ತಾನು ಕಲಿತವಳು ಎಂಬ, ಅಹಂಭಾವವನ್ನು ತೊರೆದು, ತನ್ನ ಗಂಡನಿಗೆ ಒಗ್ಗುವ ನಡೆನುಡಿಗಳಿಂದ ಪಡಕರಿಸಿ ಆತನ ಸಂಪೂರ್ಣ ಒಲವನ್ನು ಗಳಿಸಿದ್ದಳು. ಎಲ್ಲಿ ಏನೇ ನಡೆಯಲಿ ಎಲ್ಲಿ, ಅವರೀರ್ವರೂ ಜೊತೆಯಾಗಿ ಕಲೆತು ಆದರ ಆಗು ಹೋಗುಗಳಲ್ಲಿ ಸಮಭಾಗಿಗಳಾಗಿರುತ್ತಿದ್ದರು. ನಗುವಿನೊಡನೆ ನಗುವೂ, ಗಾಂಭೀರ್ಯದೊಡನೆ ಗಾಂಭೀರ್ಯವೂ ಬೆರೆತಿರುವಂತವರ ಅನ್ಯೋನ್ಯತೆಯನ್ನು ಕಂಡವರೂ ಕಲಿಯುಗದಲ್ಲಿಯೂ ಇಂತಹ ಜೋಡಿಗಳು ಇವರೂಪವೆಂದು ಬೆರಗು ಪಡದಿರುತ್ತಿರಲಿಲ್ಲ.

ವಿಧಿ ಲೀಲೆಯೆಂಬಂತೆ ರತ್ನಳಿಗೆ ಅನೆಕಾಲು! ವಿವಾಹಕ್ಕೆ ಮೊದಲೆ ಆ ಜಾಡ್ಯ ನಿದ್ದರೂ ಯಾರ ಗಮನಕ್ಕೂ ಬಂದಿರಲಿಲ್ಲ; ಬಂದಿದ್ದರೆ ಮದುವೆಯೇ ಆಗುವವರು ಇರುತ್ತಿರಲಿಲ್ಲ ವಧು ಪರೀಕ್ಷಾ ಕಾಲದಲ್ಲಿ ತುದಿ ಕಾಲಿನ ಪನಕಸೀರೆಯುಡಿಸಿ, ರೂಪ-ಶೃಂಗಾರಗಳಿಂದಲೇ ವಧುವನ್ನು ಮೆರೆಯಿಸಿ ಯಾವ ಸಂದೇಹಕ್ಕು ಆಸ್ಪದ ವಿಲ್ಲದೆ, ಶ್ರೀಕಾಂತನ ಕೈಯಿಂದ ಮಾಂಗಲ್ಯ ಕಟ್ಟಿಸಿದ್ದರು. ಅಳಿಯನ ಕುರುಡು ಬೆಳಗಿನಲ್ಲಿ ಬಯಲಾದಂತೆ, ವಾಸ್ತವಾಂಶ ತಿಳಿದಾಗ ಶ್ರೀಕಾಂತ ಅವಾಕ್ಕಾದ. ಆದರೇನು...? ವಿಧಿ ತಂದ ವಧು ಪಾಲಿಗೆ ಬಂದ ಪಂಜಾಮೃತವಾಗಿತ್ತ!

ತನ್ನ ಗಾಂಭೀರ್ಯವನ್ನು ಕೈಹಿಡಿದ ಆರ್ಥಾಂಗಿ ರತ್ನಳ ಬಾಯಿಯಿಂದಲೇ ಕೇಳಿದಾಗ ಶ್ರೀಕಾಂತನ ಹೃದಯ ಕರಗಿತು; ಕಾರುಣ್ಯದ ಖಣಿ ಮತ್ತು ಅಂತಃಕರಣದ ಆಂತರ್ಯವನ್ನು ಸೇರಿತ್ತು! ಅಖಿಲ ವಿಶ್ವವನ್ನೇ ಪ್ರೇಮ ಸಾಗರದಲ್ಲಿ ತೇಲಿಸುವ ಚಂದ್ರನಲ್ಲೂ ಕುಂದಿಗಳನೆಯೆಂಬಂತಾದ ಮೇಲೆ ನಶ್ವರ ದೇಹಿಗಳಾದ ಮಾನವರಲ್ಲಿ ಕುಂದುಗಳ ಬರುವುದು ಅತಿಶಯವಾದೀತೇ? ರೂಪಲಾವಣ್ಯಗಳ ಬೆಡಗಿನಿಂದಲೂ, ವಿನಯ ಗುಣ ಸಂಪತ್ತಿನಿಂದಲೂ ಕೂಡಿದ ರತ್ನಳ ಸಾನಿಧ್ಯ, ತನ್ನ ಜೀವನ ರಂಗದ ನಂದನ ವನವಾಗಿ ಕಂಡಿತು. ದೈವ ಬಲವೂಂದಿದ್ದರೆ ಎಂತಹ ಸಂಕಷ್ಟವನ್ನು ಇದಿರಿಸುವೆನೆಂಬ ಸಾಕಷ್ಟು ನಿಶ್ಚಯದಿಂದ ಸಂಸಾರ ಹೊಡಿದ—

ದೈವ ಕೃಪೆಯೂ ಶ್ರೀಕಾಂತ—ರತ್ನರ ಸಂಸಾರದೊಡನೆ ಲೀಲಾಜಾಲ ಹೂಡಿತ್ತು. ಪ್ರಥಮ ಸಂವತ್ಸರದ ವಿನೋದ ವಿಹಾರಗಳನ್ನಾಡಿದ ಸುಖ ಸಾಗರದಲ್ಲಾದ ಬಿರುಗಾಳಿಯೂ ಬೀಸಿರಲಿಲ್ಲ. ಎರಡನೆ ವರ್ಷದಲ್ಲಿ ಮೈಮರೆಸಿ ಕೊಂಡಿದ್ದ ರತ್ನಳ ಜ್ವರ ಮರುಕಳಿಸಿ ಕೊಂಡಿತು ಆದರ ಪ್ರಭಾವ ಕಾಲಿನ ಮೇಲೂ ಕಂಡು ಬಂದಿತು. ಶ್ರೀಕಾಂತ, ತನ್ನ ವಿಶ್ವಾಪಾತ್ರ ಡಾಕ್ಟರರ ಯೋಗ್ಯ ಸಲಹೆಯ ಮೆರೆಗೆ ಆರೈಕೆ ಕೈಕೊಂಡ. ಅಂದ ಹಾಗೆ, ತಾತ್ಕಾಲಿಕ ಶಮನವಾಯಿತು; ದಂಪತಿಗಳ ಮನಸ್ಸು ತೃಪ್ತಗೊಂಡಿತ್ತು.

ಪ್ರಕೃತಿ ತನ್ನ ಋತು ಕಾಲಗಳೊಂದಿಗೆ ಮುನ್ನಡೆಯುತ್ತಿದ್ದಂತೆ ಶ್ರೀಕಾಂತ—ರತ್ನರ ದಾಂಪತ್ಯ ಚಿಗುರೊಡೆವ ಕಾಲ! ಪತಿಯು ಸುಪ ಸಂಪತ್ತುಗಳಲ್ಲಿ ಸಮ ಭಾಗಿಯಾಗಿದ್ದ ರತ್ನ ಬಸುರಿ. ಏಳು ತಿಂಗಳ ದಿನಗಳು ಕಾದುತ್ತಿತ್ತು. ಒಲುಮೆಯ ಪ್ರತಿರೂಪಿಯಾಗಿದ್ದ ಶ್ರೀಕಾಂತ ಪತ್ನಿಯ ಆರೋಗ್ಯ ಅನುಪಾನಗಳಲ್ಲಿ ಅತಿ ಜಾಗ್ರತನಾಗಿದ್ದ. ಕಾಲನ ಲೀಲೆಯೇ ಎಂಬಂತೆ ಹಠತ್ತಾಗಿ ಕಾಣಿಸಿಕೊಂಡ ಜ್ವರ ರತ್ನಳ ಆರೋಗ್ಯವನ್ನು ಅಡಿಮೇಲಾಗಿಸಿ, ಗರ್ಭಸ್ರಾವನವಾಯಿತು. ಅನಿರೀಕ್ಷಿತ ಘಟನೆಯಿಂದ ಕಂಗೆಟ್ಟ ದಂಪತಿಗಳು, ಆರೋಗ್ಯವನ್ನು ಮರು ಗಳಿಸುವ ಸಂತೃಪ್ತಿಗಾಶಿಸಿದರು. ಆದರೆ....ನಿರ್ಬಲಗೊಂಡ ದೇಹದ ಆರೋಗ್ಯ ಹೆಚ್ಚೆಟಿಗೆ ಬರುವುದು ತುಂಬಾ ಕಷ್ಟದಾಯಕವಾಯಿತು. ಕೊನೆಗೂ ಆದರ ಪ್ರಭಾವ ಕಾಲಿನ ಮೇಲೆ ಅತಿಯಾಗಿಯೆ ನಿಂತಿತು. ಆಕೆಯ ನಿರ್ಬಲ ದೇಹದ ಜಿಂಕೆ, ಮನಸ್ಸಿನ ದುರ್ಬಲ ವೃಷೆಯಾಗಿ ಪರಿಣಮಿಸಿತು.

೦ ೦

ಇತ್ತಿತ್ತಲಾಗಿ ರತ್ನಳ ಕಾಲಿನ ಗಾತ್ರ ದಿನದಿಂದ ದಿನಕ್ಕೆ ಬೆಳೆದು ನೋಡುವವರಿಗೂ ಅಸಹ್ಯವಾಗಿ ತೋರತೊಡಗಿತು. ಕಾಲಡಿಗೆ ಅಲ್ಲಲ್ಲಿ ಏನುಪೇರಾಗಿ ಬಾಕು ಕೊಂಡು, ಬೇರಿನಲ್ಲಿ ಮೂಡುವ ಗಂಟು ಗಳಂತೆ, ಅಲ್ಲಲ್ಲಿ ಬೀಜಾಕೃತಿಯ ಗಂಟು ಗಳು ಬೆಳೆದು, ಕೆಲವಲ್ಲಿ ನೀರೋ... ಕೀವೋ ಎಡೆಬಿಡದೆ ಹರಿಯುತ್ತಾ ತಾಳಲಾರದ ವೇದನೆಯನ್ನು ಅನುಭವಿಸುವಂತಾಗಿತ್ತು. ಆಕ್ಷಕ್ಷಕ್ಕದವರು ಅವಳ ಜೀವನ ಕಾಲ್ಯಾಗಿ ಜಿಗುಪ್ಸೆಪಡಲಾರಂಭಿಸಿದರು ಹಿತ್ತ ತಂದೆ-ತಾಯಿಗಳೇ ಮಗಳ ಮುಖ ನೋಡುವುದು ಅಸಹ್ಯವೆಂದು ಮನೆಯ ಬರಪೂರವನ್ನೇ ನಿಲ್ಲಿಸಿದ್ದರು. ಪಕ್ಕದ ಮನೆಯ ಮಕ್ಕಳು ಆಟವಾಡಿಕೊಂಡು ಅವಳ ಮನೆಯ ಬಾಗಿಲಿಗೆ ಬರದಂತೆ ನೆರೆಮನೆಯವರು ನಿಯಂತ್ರಿಸಿದರು; ಮಕ್ಕಳ ಲೀಲಾ ವಿನೋದಗಳನ್ನು ಕಂಡು ಮುದ್ದಾಡಬೇಕೆನ್ನುವ ಅವಳ ಮಮತೆಯ ಮಡಿಲಿಗೆ ಇದು ಉರಿ ಹಚ್ಚಿದಂತಾಯಿತು. ಆದರೆ, ಅವಳ ಬಾಳಿನ ಏಕ ಮಾತ್ರ ಜ್ಯೋತಿಯೆಂದರೆ ಶ್ರೀಕಾಂತ! ತನ್ನ ಸರ್ವಸ್ವ ಜೀವನವೇ ಇಷ್ಟೊಂದು ಕಸಿವಿಸಿ- ಕೋಚಸ್ಥೀಯಾವಸ್ಥೆಗೆ ಬಂದಾಗಲೂ, ಪ್ರೀತಿಯು ನಲ್ನುಡಿಗಳನ್ನಾಡಿ, ತಪ್ಪ ಹೃದಯಕ್ಕೆ ಒಲುಮೆಯ ಸುಧೆಯು ಸ್ನೆರೆಯಿಟ್ಟಿರುವ ಪತಿ ಹೃದಯದ ಪ್ರೇಮಮಾಯ!!

ಉಲ್ಬಣಾವಸ್ಥೆಗೇರಿದ ರೋಗದ ನಿಲುವನ್ನು ಭೇದಿಸಿವ ಡಾಕ್ಟರರು ಪ್ರಯೋಗಿತ ಕುತ್ತಿನಿಂದ ಪಾರಾಗಲು ಅಂಗಚ್ಛೇದ ಪೊಂದೇ ಉಪಾಯವೆಂದು ತನ್ನ ಕೊನೆಯ ಅಭಿಪ್ರಾಯವನ್ನಿತ್ತರು. ಇದನ್ನು ತಿಳಿದ ಶ್ರೀಕಾಂತನ ಜಂಘಾಬಲವುಡುಗಿ ಹೋಯಿತು. ಪರಿಸ್ಥಿತಿಯನ್ನು ಅರಗಿಸಿ ಕೊಂಡ ರತ್ನ, ತನ್ನ ಹೆಕಬಾಳ್ವೆಗಾಗಿ ಅಳಲಾರಂಭಿಸಿದಳು. ಶ್ರೀಕಾಂತ ಆಕೆಯನ್ನೆಷ್ಟು ಸಂತಯಿಸಿದರೂ ಅವಳ ಅಳಲು ನುಗಿಯುವ ಯತ್ನವಾಯಿತು.

ಅಂದು ಶ್ರೀಕಾಂತನೆದ್ದು ವಕ್ಕಳ ಮಂಜವತ್ತ ನೋಡಲು ರತ್ನಳ ಹಾಸಿಗೆ ಬರಿದಾಗಿತ್ತು. ಯಾವಾಗಲೂ ತನ್ನ ಸಹಾಯ ಅಧವಾ ಅನುಮತಿಯಿಲ್ಲದೆ ಮಂಜವಿಂದಿಳಿಯದ ಆಕೆಯ ನಿರ್ಗಮನ ಇವನನ್ನು ದಿಗಿಲುಗೊಳಿಸಿತ್ತು. ಆತ್ಮಸ್ಥಿತಿರುಗಿ ಪುಟಿಯಲು ಅವಳ ಸಮಯ ಗೋಚರಿಸಲಿಲ್ಲ. ಗಾಬರಿಗೊಂಡ ಅವನು ಮತ್ತೆತ್ತಲೂ ಮಂಜವೆಡೆಗೆ ಒಂದಾಗ ತನ್ನ ಮಂಜದ ಕಾಲ್ಚಪ್ಪಲಿಯನ್ನು ಬಿದ್ದಿದ್ದ ಕಾಗದವೊಂದು ಗೋಚರಿಸಿತು. ಪತ್ರವನ್ನು ಕಂಡ ಆತನಿಗೆ ಕಣ್ಣು ಕತ್ತಲು ಬಂದಂತಾದರೂ, ಮುಂದೆ ಏನು ನಡೆದಿರಬಹುದು ಎಂದು ಮನನವಾದೂ. ಸಾವರಿಸಿಕೊಂಡು ಮಂಚದ ಮೇಲೆ ಕುಳಿತುಕೊಳಿತು ಬರವಣಿಗೆಯೆಡೆ ಕಣ್ಣು ಹರಿಸಿದ.

ಪ್ರಿಯ ಜೀವನ ಜ್ಯೋತಿ,

ನಿಮ್ಮ ಪವಿತ್ರ ಪಾದಾರವಿಂದಕ್ಕೆ ನಿಮ್ಮ ನೈಷ್ಠುರದ ಪತ್ನಿ ಭಾಗ್ಯಳ ಪ್ರಣಾಮಗಳು. ನಿಮ್ಮನ್ನು ಅಗಲಿ ಹೋಗುವುದು ನನಗೆ ಎಷ್ಟು, ಮನಸ್ಸಿಲ್ಲ! ಆದರೇನು ಮಾಡಲಿ...? ನಾನು ನಿಮ್ಮೊಡನಿರುವ ಸೌಭಾಗ್ಯವನ್ನು ಕೊಡುಬಿಲ್ಲ. ನೀವು ಮಾತ್ರ ನನಗೆ ಸಂಪೂರ್ಣ ಬದುಕು ಸೌಜನ್ಯಗಳ ಫಲವನ್ನೆ ಹೆರೆದಿರಿ. ಒಂದು ಕ್ಷಣದ ಆತ್ಮಸ್ಥೈರ್ಯ ಕೂಡ ಅನ್ಯವನೀಯದೆ ಕಾಪಾಡಿಕೊಂಡು ಬಂದಿರಿ. ನನ್ನ ಅಶಕ್ತತೆಯಲ್ಲಿ, ನನಗಾಗಿ ತುಂಬಾ ಶ್ರಮಿಸಿರುವಿರಿ. ಇವಿನ್ನ ಸಂಬಂಧ—ಹೆಣ್ಣಾಗಳಿಗೆ ನರ್ತನಾ ವೈಫಲ್ಯವು

(ಇನ್ನೇ ಪುಟ ನೋಡಿರಿ)

ಪ್ರತಿಯೊಬ್ಬನಲ್ಲಿಯೂ ಬೇಂಕು ಖಾತೋಭಾವನೆಯನ್ನು ಬೆಳೆಸಿ, ತನ್ನ ಪ್ರತಿಯೊಂದು ಹಣವ್ಯವಹಾರವನ್ನೂ ಆತನು ಬೇಂಕುಗಳ ಮೂಲಕ ನಡೆಸುವಂತಾಗಲೆಂದೇ ನಮ್ಮ ಆಶಯ. ಎಂತಲೆ ನಾವು ಪ್ರತಿಯೊಬ್ಬನಿಗೂ ಅನುಕೂಲವಾಗುವಂತೆ ಹಲವಾರು ಉಳಿತಾಯ ಯೋಜನೆಗಳನ್ನು ಕೈಗೊಂಡಿದ್ದೇವೆ. ನಿನಗೆ ಅನುಕೂಲವಿರುವ ಯೋಜನೆ ಯೊಂದನ್ನು ಇವತೇ ಆರಿಸಿಕೊಳ್ಳಿರಿ!

ದಕ್ಷಿಣ ಭಾರತದ **5** ಸಂಸ್ಥಾನಗಳಲ್ಲಿ ಒಟ್ಟು **49** ಶಾಖೆಗಳು ಈ ಕೆಡೆಯಲ್ಲಿ ಬೇಂಕಿಗಿದ್ದು, ಬೇಂಕು ಉದ್ಯಮೆಯಲ್ಲಿ ಇವಕ್ಕೆ **51** ವರುಷಗಳಿಗೂ ವಿಸೀದ ಅನುಭವವಿದೆ!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಫೋನ್ ನಂಬ್ರ: 21-A

ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)



ಸ್ವತಂತ್ರ ಭಾರತದ ಅಮೂಲ್ಯ ಆಸ್ತಿ–

ಲೋಹವಿಜ್ಞಾನ ಪ್ರಯೋಗಶಾಲೆ

ಇಂದಿಗೆ ೭ ವರ್ಷಗಳ ಹಿಂದೆ ಪ್ರಧಾನಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರು ಜಮ್ಶೆಡ್‌ಪುರದಲ್ಲಿ ರಾಷ್ಟ್ರೀಯ ಲೋಹ ವಿಜ್ಞಾನ ಪ್ರಯೋಗಶಾಲೆಯ ಉದ್ಘಾಟನೆಯನ್ನು ನೆರವೇರಿಸಿದ್ದರು.

ಖನಿಜ ಸಂಪತ್ತು ಹೇರಳವಾಗಿರುವ ಪೂರ್ವ ಭಾರತ ಕ್ಷೇತ್ರದಲ್ಲಿ ಮೂರು ಪ್ರಯೋಗ ಶಾಲೆಗಳನ್ನು ತೆರೆಯಲಾಗಿದೆ. ಅವುಗಳಲ್ಲಿ ಲೋಹ ವಿಜ್ಞಾನ ಪ್ರಯೋಗಶಾಲೆಯು ಒಂದಾಗಿದೆ ಈ ಪ್ರಯೋಗ ಶಾಲೆಯನ್ನು ೫೦ ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ ಈ ಕ್ಷೇತ್ರದಲ್ಲಿರುವ ಇತರ ಶಾಲೆಗಳೆಂದರೆ. ಬಿಹಾರಿನ ಜೀದಲ ಗಾಡಾದಲ್ಲಿರುವ ಕೇಂದ್ರ ಖನಿಜ ಸಂಶೋಧನ ಸಂಸ್ಥೆ ಮತ್ತು ಕಲ್ಕತ್ತೆಯಲ್ಲಿರುವ ಕೇಂದ್ರ ಗಾಜು ಮತ್ತು ಪಿಂಗಾಣಿ ಸಂಶೋಧನಾ ಸಂಸ್ಥೆ.

ದೇಶದಲ್ಲಿ ಖನಿಜ ಸಂಪತ್ತು ಹೇರಳವಾಗಿದೆ ಆದರೆ ಅವುಗಳಲ್ಲಿ ಹೆಚ್ಚಿನ ಖನಿಜಗಳು, ಕೀಳ್ಮಟ್ಟದಲ್ಲಿರುವುದರಿಂದ ಗಲಿ, ಅಥವಾ ತಾಂತ್ರಿಕ ನಿಧಾನಗಳ ಅಭಾವದಿಂದಾಗಲೀ ನಿರುಪಯುಕ್ತವಾಗಿತ್ತವೆ.

ಭಾರತದಲ್ಲಿ, ಮ್ಯಾಂಗನೀಸ್ ಅದಿರಿನ ಬಗೆಗೆ ಮಾರಾಟಮಾಡಬಹುದಾದ ಪ್ರತಿಯೊಂದು ಟನ್ ಅದಿರಿಗೂ ಅಷ್ಟೇ ಪ್ರಮಾಣದ ಅದಿರು ಕೀಳ್ಮಟ್ಟದ್ದಿದ್ದು, ನಿರುಪಯುಕ್ತವಾಗುತ್ತದೆಯೆಂದು ಅಂದಾಜು ಮಾಡಲಾಗಿದೆ

ಲೋಹ ಕೈಗಾರಿಕೆಯಲ್ಲಿ ಈಗಿರುವ ಪ್ರಮುಖ ಸಮಸ್ಯೆಗಳೆಲ್ಲಾಂದೆಂದರೆ ಆಮದು ಮಾಡಿಕೊಳ್ಳುತ್ತಿರುವ ಮುಖ್ಯ ಮಿಶ್ರ ಲೋಹಗಳ ಭಾಗಗಳನ್ನು ಆಕ್ರಮಿಸಲು ಸಮರ್ಥವಾದಂತಹ ಹೊಸ ಮಿಶ್ರಲೋಹಗಳನ್ನು ತಯಾರಿಸುವುದ

'ನಾನ್‌ಕೋಕಿಂಗ್" ಕಲ್ಲಿದ್ದಲನ್ನು ಉಪಯೋಗಿಸಿ, ಉಕ್ಕನ್ನು ತಯಾರಿಸುವುದು, ಖನಿಜ ಲೋಹಗಳನ್ನು ಶುದ್ಧಿಗೊಳಿಸುವುದು, ಅವುಗಳು ತುಕ್ಕು ಹಿಡಿಯದಂತೆ ನೋಡುವುದು, ಉಕ್ಕು ಹಾಗೂ ಇತರ ಲೋಹ ಕೈಗಾರಿಕೆಗಳಿಗಾಗಿ ಮೂಲ 'ರಿಫ್ರ್ಯಾಕ್ಟರಿ"ಗಳನ್ನು ತಯಾರಿಸುವುದು. ಇವು ಬಗೆಹರಿಸಬೇಕಾದ ಇತರ ಸಮಸ್ಯೆಗಳಲ್ಲಿ ಹಲವು

ಈ ಪ್ರಯೋಗ ಶಾಲೆಯ ಸಂಶೋಧನ ಚಟುವಟಿಕೆಗಳು ಮೂಲತಃ ಪ್ರಯೋಗಾತ್ಮಕವಾಗಿರುವುವು. ಪಂಚವಾರ್ಷಿಕ ಯೋಜನೆಗಳ ಗುರಿಗಳಿಗೆ ನಿಕಟವಾದ ಸಂಬಂಧವನ್ನು ಹೊಂದಿರುವುವು ಭಾರತೀಯ ಖನಿಜ ಸಂಪತ್ತನ್ನು ಉತ್ತಮರೀತಿಯಲ್ಲಿ ಬಳಸಿಕೊಂಡು ಲೋಹ ಹಾಗೂ ಮಿಶ್ರಲೋಹಗಳ ವಿಷಯದಲ್ಲಿ ಭಾರತವು ಸ್ವಾವಲಂಬನೆಯನ್ನು ಹೊಂದುವಂತೆ ಮಾಡುವುದೇ ಈ ಪ್ರಯೋಗಶಾಲೆಯ ಮುಖ್ಯ ಧ್ಯೇಯವಾಗಿದೆ.

ಈ ಪ್ರಯೋಗಶಾಲೆಯಲ್ಲಿ ಕಚ್ಚಾ ಖನಿಜಗಳನ್ನು ಶುದ್ಧಗೊಳಿಸುವ ಸಂಬಂಧದಲ್ಲಿ ಸಂಶೋಧನೆಯನ್ನು ನಡೆಸಲಾಗುತ್ತಿದೆ ಇದರ ಜೊತೆಗೆ, ದೇಶಾದ್ಯಂತ, ದೊರೆಯುವ ಕಚ್ಚಾ ಮ್ಯಾಂಗನೀಸ್, ಕಚ್ಚಾ ಕ್ರೋಮೈಟ್ (ಮೈಸೂರು ಓರಿಸ್ಸಾ ಮತ್ತು ಬಿಹಾರ್) ಗ್ರಾಫೈಟ್, ಕಬ್ಬಿಣ ವೋಲ್ಫ್ರಾಂ(ರಾಜಾಸ್ಥಾನ್) ಕಾಪರ್ ಯಿಟ್ (ಬಿಹಾರ್), ಪೈರೈಟ ಮತ್ತು ಗಂಧಕ (ಮೈಸೂರು, ಮುಂಬೈ ಮತ್ತು ಬಿಹಾರ್) ವರ್ಮಿಕ್ಯುಲೈಟ್ (ಮೈಸೂರು ಮತ್ತು ಪಶ್ಚಿಮ ಬಂಗಾಳ), ಕೈನೈಟ್ (ಮೈಸೂರು) ಮತ್ತು ಜಿಪ್ಸಂ (ರಾಜಾಸ್ಥಾನ್) ಮತ್ತು ಕೋಲಾರದ ಗಣಿಗಳಲ್ಲಿ ದೊರಯುವ ಚಿನ್ನದ ಸಂಬಂಧದಲ್ಲಿ ಬೆಳೆಯನ್ನು ಪಡೆಯುವ ವಿಧಾನಗಳಲ್ಲಿಯೂ ಈ ಪ್ರಯೋಗಶಾಲೆಯು ಸಂಶೋಧನೆಗಳನ್ನು ನಡೆಸಿದೆ

ಆಣ ಶಕ್ತಿ ಸಂಸ್ಥೆಗೋಸ್ಕರವಾಗಿ ಯುರೇನಿಯಂ ಆಶ್ರಿತ ಅದಿರಿನ ಸಂಬಂಧದಲ್ಲಿಯೂ ಸಂಶೋಧನೆ ನಡೆಸಿದೆ

ಮ್ಯಾಂಗನೀಸ್‌ನ ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ ನೊಪಲ ಪಂಕ್ತಿಯನ್ನು ಪಡೆಯುವುದ ಇಲ್ಲಿ ಪ್ರತಿವರ್ಷವೂ ೨೦ ಲಕ್ಷ ಟನ್ನುಗಳಷ್ಟು ಮ್ಯಾಂಗನೀಸನ್ನು ಗಣಿಗಳಿಂದ ಹೊರತೆಗೆಯಲಾಗುತ್ತದೆ ಅವುಗಳಲ್ಲಿ ಅಧಿಕಾಂಶ ರಫ್ತಾಗುತ್ತದೆ ಇದಲ್ಲದೆ ಅಧಿಕ ಪ್ರಮಾಣದ ಕೆಳಮಟ್ಟದ ಅದಿರು ನಿರುಪಯುಕ್ತವಾಗುತ್ತದೆ ಅದಿರನ್ನು ಶುದ್ಧಗೊಳಿಸುವ ವಿವಿಧ ವಿಧಾನಗಳನ್ನು ಪ್ರಯೋಗಗಳಿಗೆ ಗುರಿಮಾಡಿ ಸಂಶೋಧಿಸಲಾಗಿದೆ.

ಈ ಪ್ರಯೋಗಶಾಲೆಯಲ್ಲಿ ನಡೆಸಲಾದ ವಿವಿಧ ಶೋಧನಾ ಕಾರ್ಯಕ್ರಮಗಳು ಅವುಗಳ ಫಲಿತಾಂಶವನ್ನು ವಿವರಿಸುವ ಹಾಗೂ ಭಾರತದಲ್ಲಿ ದೊರೆಯುವ ಅದಿರಿನ ಉತ್ಪಾದನೆ ಮತ್ತು ರಫ್ತಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಇಪ್ಪತ್ತಲ್ಲಿಯೇ ಪ್ರಕಟಿಸಲಾಗುವುದು

ಉಕ್ಕಿನ ಲೋಹ ಕೈಗಾರಿಕಾ ಕ್ಷೇತ್ರದಲ್ಲಿಯೂ ಈ ಪ್ರಯೋಗಶಾಲೆಯು ಗಮನಾರ್ಹ ಕಾಣಿಕೆಯನ್ನಿತ್ತಿದೆ ಯೂರೋಪಿನಲ್ಲಿ ಉಕ್ಕಿನ ತಯಾರಿಕೆಗಾಗಿ ಅನುಸರಿಸಲಾಗುವ ಕೊಪ ಎಲ್ ಡಿ ವಿಧಾನವನ್ನು, ಭಾರತದಲ್ಲಿ ಪ್ರಥಮತಃ ಪ್ರಾಯೋಗಿಕ ಪ್ರಮಾಣದಲ್ಲಿ ಅಂಗೀಕರಿಸಲಾಯಿತು ಒಂದನೆತದಲ್ಲಿ ದೊರೆಯುವ ಕಬ್ಬಿಣದ ಅದಿರಿಗೆ ಈ ವಿಧಾನವು ಅತ್ಯಂತ ಉಪಯುಕ್ತವಾದ ದೆಸಿಸಿದೆ.

ಈ ವಿಧಾನದಲ್ಲಿ ತಯಾರಾದ ಉಕ್ಕಿನಲ್ಲಿ ಸಾರಜನಕಾಂಶವು ಕಡಿಮೆ ಇರುವುದು, ಅದರ ಜೊತೆಗೆ, ಕನಿಷ್ಠ ಅವಧಿಯಲ್ಲಿ ಹೆಚ್ಚಿನ ಪ್ರಮಾಣದ ಉತ್ಪಾದನೆಯಾಗುವುದ ಈ ಉದ್ದೇಶಕ್ಕಾಗಿ, ಎಲ್. ಡಿ. ಪರಿವರ್ತಕ (ಕನ್‌ವರ್ಟರ್)ದ ವಿನ್ಯಾಸವನ್ನು ಈ ಪ್ರಯೋಗಶಾಲೆಯಲ್ಲಿ ನಿರ್ಮಿಸಿ ಯಶಸ್ವಿಗೊಳಿಸಲಾಗಿದೆ

ಈ ಪರಿವರ್ತಕದ ಬಗೆಗೆ ನಡೆಸಿದ ಪ್ರಯೋಗಗಳು ಇತ್ತೀಚಿನ ಉಪಯುಕ್ತ ಫಲಿತಾಂಶಗಳನ್ನು ಭಾರತದ ಉಕ್ಕಿನ ಉತ್ಪಾದನಾ ಕಾರ್ಯಕ್ರಮಗಳಲ್ಲಿ ಬಳಸಬಹುದು ರೂರ್ಕೆಲಾ ಉಕ್ಕಿನ ಕಾರ್ಖಾನೆಯನ್ನು ಈಗ ಸಾರ್ವಜನಿಕ ಕ್ಷೇತ್ರದಲ್ಲಿ, ಜರ್ಮನ್ ತಾಂತ್ರಿಕ ಸಲಹೆಗಾರ ಸಹಾಯದಿಂದ ಸ್ಥಾಪಿಸಲಾಗಿದೆ

ಜೆಂಷೆಡ್‌ಪುರದಲ್ಲಿ ನಡೆಸಿದ ಪ್ರಯೋಗಗಳ ಪ್ರಯೋಜನವನ್ನು ರೂರ್ಕೆಲಾ ಉಕ್ಕಿನ ಕಾರ್ಖಾನೆಯಲ್ಲಿ ಪಡೆಯುವ ನಿರೀಕ್ಷೆಯಿದೆ

ಶಬ್ದಾಣದ ಅದಿರು ಹೇರಳವಾಗಿದ್ದು 'ಕೋಕಿಂಗ್' ಕಲ್ಲಿದ್ದಲಿನ ಪ್ರಮಾಣ ಮಿತಿಗೊಳಗಾಗಿರುವ ಭಾರತದಲ್ಲಿ, ಉಕ್ಕಿನ ತಯಾರಿಕೆಯು ಕಷ್ಟವಾಗುತ್ತದೆ. 'ನಾನ್ ಕೋಕಿಂಗ್' ಕಲ್ಲಿದ್ದಲ ಹೇರಳವಾಗಿರುವುದರಿಂದ, ಅದನ್ನು ಬಳಸುವ ವಿಧಾನಗಳನ್ನು ನಿರ್ದೇಶಿಸುವುದರಿಂದ ಸಮಸ್ಯೆಯನ್ನು ಬಹುಮಾನಾಗಿ ಬಗೆಹರಿಸಬಹುದು. ಈ ಪ್ರಯೋಗ ಶಾಲೆಯು ಅಕಲಸನನ್ನು ನಿರ್ವಹಿಸುತ್ತದೆ.

ಈ ಪ್ರಯೋಗ ಶಾಲೆಯು, ನಡೆಸುತ್ತಿರುವ ಇತರ ಪ್ರಯೋಗಗಳಲ್ಲಿ ಮುಖ್ಯವಾದುದೆಂದರೆ, ಇಲೆಕ್ಟ್ರಾಲಿಟಿಕ್ ಮ್ಯಾಂಗನೀಸ್ ಲೋಹದ ಉತ್ಪಾದನೆ. ಈ ಲೋಹವನ್ನು ಈಗ ಡಾಲರ್ ಕ್ಷೇತ್ರಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ ಈ ಲೋಹವನ್ನು ಉಕ್ಕಿನ ಮಿಶ್ರಲೋಹ ತಯಾರಿಸುವಲ್ಲಿ ಬಹಳವಾಗಿ ಉಪಯೋಗಿಸಲಾಗುವುದು ಶೈಲ್ವ ಪಾಯಿಂಟ್‌ಗಳು ಕ್ರಾಸಿಂಗ್ ಮುಂತಾದುವುಗಳಿಗೆ ಈ ಮಿಶ್ರ ಲೋಹಗಳು ಉಪಕಾರಿಗಳಾಗುವುವು

ಈ ಪ್ರಯೋಗ ಶಾಲೆಯಲ್ಲಿ ಅಭಿವೃದ್ಧಿ ಪಡಿಸಿರುವ ವಿಧಾನದಿಂದ ಕೆಳ ದರ್ಜೆಯ ಮ್ಯಾಂಗನೀಸ್ ಅದಿರಿನಿಂದ ಪ್ರತಿಶತ ೯೯.೯೫ರಷ್ಟು ಶುದ್ಧವಾದ ಎಲೆಕ್ಟ್ರಾಲಿಟಿಕ್ ಲೋಹವನ್ನು ತಯಾರಿಸಬಹುದು ಈ ಬಗೆಗೆ ಆರಂಭಿಸಿರುವ ಪ್ರಾಯೋಗಿಕ ಕೇಂದ್ರವು ಪ್ರತಿದಿನ ೩೫ ಪೌಂಡುಗಳಷ್ಟು ಲೋಹವನ್ನು ಉತ್ಪಾದಿಸುತ್ತಿದೆ

ಎಲೆಕ್ಟ್ರಾಲಿಟಿಕ್ ಮ್ಯಾಂಗನೀಸ್ ತಯಾರಿಕೆಯನ್ನು ಉತ್ತೇಜಿಸುವ ಎಂಥಾ ನವು ಈ ಪ್ರಯೋಗ ಶಾಲೆಯಲ್ಲಿ ಅಭಿವೃದ್ಧಿ ಪಡಿಸುತ್ತಿರುವ ವಿಧಾನಗಳಲ್ಲಿ ಒಂದು. ಮ್ಯಾಂಗನೀಸ್ ಡೈಆಕ್ಸೈಡನ್ನು ಬ್ಯಾಟರಿಗಳ ತಯಾರಿಕೆ, ಗಾಜಿನ ಬಣ್ಣ ತೆಗೆಯುವುದು. ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುವುದು.

ಭಾರತದಲ್ಲಿ ಎಲೆಕ್ಟ್ರಾಲಿಟಿಕ್ ಮ್ಯಾಂಗನೀಸ್ ಡೈಆಕ್ಸೈಡ್‌ನ ಉತ್ಪಾದನೆಯು ಈಗ ಏನೇನೂ ಇಲ್ಲ ಸುಮಾರು ೬೦ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಅಂ,೭೦೦ ಟನ್ನುಗಳಷ್ಟು ಈ ರಾಸಾಯನಿಕ ವಸ್ತುವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಬ್ಯಾಟರಿಗಳ ತಯಾರಿಕೆಯಲ್ಲಿಯೇ ೪೦೦೦ ಟನ್ನುಗಳಷ್ಟು ಮ್ಯಾಂಗನೀಸ್ ಡೈಆಕ್ಸೈಡನ್ನು ಬಳಸಲಾಗುತ್ತಿವೆ ಈ ರಾಸಾಯನಿಕ ವಸ್ತುಗಳನ್ನು ಆಮದ್ಕಿಂತ ಕಡಿವ ಬೆಲೆಯಲ್ಲಿ ತಯಾರಿಸುವ, ನಿರ್ಧಾನವನ್ನು ಈ ಪ್ರಯೋಗ ಶಾಲೆಯು ಹಿಂದಾಜು ಮಾಡಿದೆ

(ಕಸೇ ಪಟ ನೋಡಿ)

ಕೆನರಾ ಬ್ಯಾಂಕ್ ಲಿಮಿಟೆಡ್

[ಸ್ಥಾಪನೆ: 1906]

ನಿಮ್ಮ ರೇವಣಾತಿಗಳ ಮೇಲೆ

ಅತ್ಯಧಿಕ ಬಡ್ಡಿ

3% ಥ್ರಿಫ್ಟ್ ಡಿಪಾಸಿಟ್‌ಗಳ ಮೇಲೆ

2½% ವರೆಗೆ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್‌ಗಳ ಮೇಲೆ

ಅಲ್ಪಾವಧಿ ನುತ್ತು ನಿಗದಿ ಡಿಪಾಸಿಟ್‌ಗಳ ಮೇಲೆ ಆಕರ್ಷಕ ಬಡ್ಡಿ ದರಗಳು

ಹೆಚ್ಚಿನ ವಿವರಗಳಿಗೆ

ನಮ್ಮ **61** ಶಾಖೆಗಳಲ್ಲಿ ಯಾವ ಶಾಖೆಗಾದರೂ ಭೇಟಿ ಕೊಡಿರಿ.

ವಿಶ್ವದಾದ್ಯಂತ ಪ್ರತಿನಿಧಿಗಳು | ಒಟ್ಟು ಸಾಧನ ಸಂಪತ್ತು **20** ಕೋಟಿಗೂ ಮಿಗಿದೆ

ಬಡ್ಡಿಯ ದರ ಮುಖ್ಯವಾದುದು.....

ನೀವು ಕೂಡಿಡುವ ಜಾಗವೂ ಕೂಡಾ ಅಷ್ಟೇ ಮುಖ್ಯ

ನಮ್ಮ ಉಡುಪಿಯ ಶಾಖೆ: ಪೋ ಬಾ ನಂ 37, ತೆಂಕಪೇಟೆ, ಉಡುಪಿ.

ಪ್ರಧಾನ ಕಛೇರಿ: ಮಂಗಳೂರು

ಆಡಳಿತ ಕಛೇರಿ: ಬೆಂಗಳೂರು

ನೀವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕ್ರಿಸ್‌ಮಸ್ ದಿನಗಳ ಅಮರಸಂದೇಶ—

ಮಾನವರು ಮಾನವತಾವಾದಿಗಳಾಗಲಿ

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಧರ್ಮ ಮತ್ತು ಸಮಾಜದ ನೈತಿಕ ಪತನವಾಗುವಾಗ, ಮಾನವತೆಯು ಆಡಂಬರ ಮತ್ತು ಆಚಾರಗಳ ಕಾಲ ಚಕ್ರದಲ್ಲಿ ಸಿಕ್ಕಿಕೊಂಡು ವಿಕೃತವಾಗ ತೊಡಗುವಾಗ, ಒಬ್ಬನೆಲ್ಲ ಒಬ್ಬ ವಿಭೂತಿ ಪುರುಷನು ಸಮಾಜದ ರಕ್ಷಣೆಯನ್ನು ಮಾಡುತ್ತಾನೆ–ಇದೊಂದು ನಿರ್ವಾದವಾದ ಸತ್ಯವಾಗಿದೆ ಮತ್ತು ಇತಿಹಾಸವೇ ಇದರ ಪ್ರತ್ಯಕ್ಷ ಪ್ರಮಾಣವಾಗಿದೆ. ಎರಡೂವರೆ ಸಾವಿರ ವರ್ಷ ಪೂರ್ವದಲ್ಲಿ ಬ್ರಾಹ್ಮಣವಾದದ ಆಡಂಬರದಿಂದ ಭಗವಾನ್ ಬುದ್ಧನು ಭಾರತೀಯರ ರಕ್ಷಣೆಯನ್ನು ಮಾಡಿದ್ದನು. ಈ ರೀತಿಯಲ್ಲಿಯೇ ಸುಮಾರು ಎರಡು ಸಾವಿರ ವರ್ಷಗಳಿಗೆ ಹಿಂದೆ ಮಹಾತ್ಮಾ ಯೇಸುವು ಯೆಹೂದೀ ಸಮಾಜದ ವಿಕೃತರೂಪವನ್ನು ಸುಧಾರಿಸುವದಕ್ಕಾಗಿ ಭೂಮಿಯಲ್ಲಿ ಜನ್ಮಿಸಿದನು.

ಯೇಸುವು ನಜರೇತ್ನವನಾಗಿದ್ದನು. ಆವನ ಈ ನಾಮಧೇಯ ವಿಶ್ವವ್ಯಾಪಕ ಮತ್ತು ವಿಶ್ವವ್ಯೇನಿಂಗಳು ಅಶ್ಯುನ್ಯವಾಗಿದ್ದುವು. ಈಗ್ಗೆ ಎರಡು ಸಾವಿರ ವರ್ಷಗಳ ನಂತರ ಸಹ ನುನಪಮಾಡಲು ಮತ್ತು ಅನುಕರಿಸಲು ಯೋಗ್ಯವಾಗಿರುವಷ್ಟು ಆತನ ಜೀವನವು ಸ್ವಚ್ಛ ಮತ್ತು ನಿರ್ಮಲವಾಗಿತ್ತು. ಅಲ್ಲದೆ ಆತನ ಜೀವನ ದರ್ಶನವು ಅಷ್ಟು ಮಹಾತ್ಕಾಗಿತ್ತು.

ಮಹಾತ್ಮಾ ಯೇಸುವು ಯಾವ ನವೀನ ಪಂಥದ, ಯಾವ ಹೊಸ ಧರ್ಮದ ಅಥವಾ ಯಾವ ನೂತನ ಸಂಪ್ರದಾಯದ ಸೃಷ್ಟಿಮಾಡಲು ಬಂದಿರಲಿಲ್ಲ. ಭಗವಾನ್ ಬುದ್ಧನಂತೆ ಆತನ ಪ್ರಜಾರ ಮತ್ತು ವಿಚಾರದ ಉದ್ದೇಶವಾಗಿತ್ತು. ತನ್ನ ಜಾತಿ ಅಥವಾ ಧರ್ಮದಲ್ಲಿ ಸಂಶೋಧನೆ ಮಾಡುವುದಿತ್ತು. ಅವನು ಯೆಹೂದಿ ಜನಂಗಕ್ಕೆ ಸೇರಿದ್ದನು ಮತ್ತು ಅದರಲ್ಲಿಯೇ ಉಳಿದು ಕೊಳ್ಳಲು ಬಯಸುತಿದ್ದನು. ಯೆಹೂದಿ ಧರ್ಮದ ಸ್ವರೂಪವು ಸ್ವಚ್ಛವಿರಬೇಕು ಎಂಬುದೇ ಆತನ ಮಹಾ ಕಾಮನೆಯಾಗಿತ್ತು. "ನಾನು ವ್ಯವಸ್ಥೆಯ ಉಲ್ಲಂಘನೆ ಮಾಡಲು ಬಂದಿರುವೆನು. ನಾನದನ್ನು ನಷ್ಟ ಮಾಡಲು ಬರಲಿಲ್ಲ; ಆದರೆ ಪೂರ್ಣಗೊಳಿಸಲು ಬಂದಿದ್ದೇನೆ" ಎಂದು ಆತನು ಘೋಷಿಸಿದ್ದನು.

"ಗಿರಿಪ್ರವಚನ" (ಸರ್‌ಮನ್ಸ್ ಆಫ್ ದಿ ಮೌಂಟ್) ಕ್ರೈಸ್ತ ಧರ್ಮದ ಆಧಾರ ಶಿಲೆಯಾಗಿದೆ. ಈ ಉಪದೇಶದಲ್ಲಿ ನಾವು ಯೇಸುವಿನ ವಿಚಾರ, ಅವನ ಜೀವನ ದರ್ಶನ ಮತ್ತು ಅವನ ಮಹಾನ್ ವ್ಯಕ್ತಿತ್ವವನ್ನು ತಿಳಿಯಬಹುದು, ತನ್ನೆದುರು ಬಂದಿರುವ ಜನಸಮುದಾಯವನ್ನು ಸ್ವಾಗತಿಸುತ್ತ ಅವನು ಹೇಳಿದ್ದನು: ಯಾರ ಅತ್ಮವು ನಿರಭಿಮಾನವಾಗಿರುವುದೋ ಅವರೇ ಧನ್ಯರು; ಏಕೆಂದರೆ ಸ್ವರ್ಗದ ರಾಜ್ಯವು ಅವರದು" ಎಂದು. ಇದೆಂತಹ ವಿರಸಾಶ್ಚರ್ಯವಾಗಿದೆ! ಮನುಷ್ಯನ 'ತನ್ನ ತನ' (ಅಹಂ)ವೇ ಅತನ ಕಷ್ಟ ಸಕಲಕ್ಕೂ ಮೂಲಕಾರಣವಾಗಿದೆ. ಈ ತನ್ನ ತನವನ್ನು ತೃಜಿಸಿದರೆ ಸಮಸ್ತ ದುಃಖಗಳೂ ನಿವಾರಣೆಯಾಗುವುವು.

ಪರಂತು ಎಲ್ಲರೂ ಅವನಷ್ಟು ಮಹಾತ್ಮರಾಗಲಾರರು; ಎಲ್ಲರೂ "ಅಹಂ"ಅನ್ನು ತ್ಯಾಗ ಮಾಡಲಾರರು; ಹೀಗೆ ಆಗುವುದಾಸರೂ ಸಂಭವನಲ್ಲ. ಆದರೆ, ಪಾಪಾತ್ಮರ ಉದ್ಧಾರಕಾರ್ಯವೂ ಆಗಲಾರದೆ? ಆಗಿಯೇ ಆಗುತ್ತದೆ. ಯೇಸು ಹೇಳುತ್ತಾನೆ— "ಯಾರು ದುಃಖ ಮತ್ತು ಪರ್ಚಾತ್ತಾಪಪಡುತ್ತಾರೋ ಅವರೇ ಧನ್ಯರು; ಏಕೆಂದರೆ, ಅವರು ಶಾಂತಿಹೊಂದುತ್ತಾರೆ." ದುರ್ಬಲತೆ ಮತ್ತು ಮುಷ್ಕರ್ಮಗಳ ಪ್ರಾಯಶ್ಚಿತ್ತವೇ ಸುಧಾರಣೆಯ ಪ್ರಥಮ ಸೋಪಾನವೆಂಬುದರಲ್ಲಿ ಸಂಶಯವಿಲ್ಲ. ಸುಖ ಮತ್ತು ಶಾಂತಿಯೆ ಜನಕನೇ ಪಶ್ಚಾತ್ತಾಪವಾಗಿದೆ.

ಆದೆಷ್ಟೋ ಮಂದಿ ಸಮಾಜ ಸುಧಾರಕ ಮತ್ತು ಧರ್ಮಪ್ರಚಾರಕರು ಹುಟ್ಟಿ ಕೊಳ್ಳುತ್ತಾರೆ. ಆದರೆ, ಅಂತಹ ಕಾರ್ಯವನ್ನು ತಮ್ಮ ಕರ್ತವ್ಯವನ್ನು ತಿಳಿದು ಮಾಡುವವರೆಷ್ಟು ಜನ? ಅಧಿಕಾಂಶ ಜನರಿಗೆ 'ಕರ್ತವ್ಯ'ದ ವಿಪರೀತ ಪ್ರೇರಣವನ್ನು ಮಾನ ಮತ್ತು ಪ್ರತಿಷ್ಠೆಯ ಹಸಿವೆಯು ಒದಗಿಸುತ್ತದೆ. ಅಂತಹ ಸಂದರ್ಭದಲ್ಲಿ ಯೇಸುವು ಆ ಸುಧಾರಕ ಮತ್ತು ಪ್ರಚಾರಕರಿಗೊಡನೆ ಹೇಳಿದ್ದನು: "ಈ ಮಾತನ್ನು ಯಾವಾಗಲೂ ಧ್ಯಾನಿಸಿದಿರಿ ಮತ್ತು ಪಾಪವರ ಸಂಘವಿದಲ್ಲಿ ತೋರಿಸುವುದಕ್ಕಾಗಿ ನಿಮ್ಮ ಧರ್ಮ ಕಾರ್ಯವನ್ನು ಮಾಡಿರಿ."

ಮಂದಿರ ಮತ್ತು ಇಗರ್ಜಿಗಳು, ಧರ್ಮ ಶಾಲೆಗಳು ಮತ್ತು ಪಾಠ ಶಾಲೆಗಳು ಮಹಾದಾನಿಯರ ಶಿಲಾ ಲೇಖಗಳಿಂದ ಕೂಡಿಕೊಂಡಿವೆ. ದೊಡ್ಡ ದೊಡ್ಡ ಅಲಂಕೃತ ಶಬ್ದಗಳಲ್ಲಿ ಈ ದಾನವೀರರು ತನ್ನ ಪ್ರತಿಷ್ಠೆಯನ್ನು ಮೆರೆಯಿಸುತ್ತಾನೆ. ಆದರೆ, ಯೇಸುವು ದಾನ ನೀಡುವ ವಿಧಾನವನ್ನು ತಿಳಿಸುತ್ತಾನೆ—"ನೀವು ದಾನ ಮಾಡುವಾಗ ಕಪಟಿಗಳಂತೆ ನಿನ್ನೆದುರು ತುತ್ತೂರಿಯನ್ನೂದಿಸಬೇಡಿರಿ; ಆಗ ಜನರು ನಿಮ್ಮನ್ನು ಪ್ರಶಂಸಿಸುತ್ತಾರೆ. ನೀವು ದಾನ ವೀಯುವಾಗ, ನಿಮ್ಮ ಬಲಗೈಯು ಕಾರ್ಯವನ್ನು ಸ್ವಯಂ ಎಡಗೈಯೂ ನೋಡದಂತೆ ಮಾಡಿರಿ; ಕೊಡುವ ದಾನವು ಅಷ್ಟು ಗುಪ್ತರೂಪದಲ್ಲಿರಲಿ."

ಆಣೆ (ಸೌಗಂಧ) ಯಿಡುವುದು ಚರಿತ್ರೆಯ ದುರ್ಬಲತೆಯ ದ್ಯೋತಕವೆನಿಸಿದೆ. ಕ್ಷುಲ್ಲಕವೆನಿಸಿದೆ ಮಾತಿಗೂ ನಾವು ನಮ್ಮ ನಮ್ಮ ಪ್ರಿಯತಮರ-ಕೆಲವೊಮ್ಮೆ ದೇವರ ಮೇಲೆ ಆಣೆ ಮಾಡುತ್ತೇವೆ—ಇದು ನಮ್ಮ ಮಾತು ಸತ್ಯನೆಂಬ ರೂಪದಲ್ಲಿ ಸ್ವೀಕಾರವಾಗಲಿ ಎಂಬ ಉದ್ದೇಶದಿಂದ! ಆದರೆ, ಯೇಸುವು ಮಿಥ್ಯಾವಾದವಲ್ಲ, ಕದಿನಾರಾಣೆ ಸತ್ಯವಾದ ಮಾತಿನ ಮೇಲಾದರೂ ಆಣೆಯಿಡುವುದನ್ನು ವಿರೋಧಿಸುತ್ತಾನೆ. ತನ್ನ ಅನುಯಾಯಿಗಳಿಗೆ ಆತ ಹೇಳಿದ್ದನು: "ಪ್ರಾಚೀನ ಜನರು ಸುಳ್ಳು ಆಣೆಮಾಡಲು ನಿಷೇಧಿಸುತಿದ್ದರು. ಆದರೆ, ನೀನೆಂದೂ ಆಣೆ ಹಾಕಬಾರದೆಂದು ನಾನು ಹೇಳುತ್ತೇನೆ. ಸ್ವರ್ಗದ ಆಣೆಯಿಡಬಾರದು; ಏಕೆಂದರೆ ಅದು ಪರಮೇಶ್ವರನ ಸಿಂಹಾಸನವಾಗಿದೆ. ಪೃಥ್ವಿಯ ಆಣೆಯಿಡಬಾರದು; ಅದು ಅವನ ಪಾದಪೀಠವಾಗಿದೆ. ಜೆರೂಸಲೇಮ್ (ಯೆಹೂದಿ ಮತ್ತು ಕ್ರೈಸ್ತರ ತೀರ್ಥ ಸ್ಥಳ) ನ ಆಣೆಯಿಡಬಾರದು; ಏಕೆಂದರೆ, ಅದು ಪರಮಾತ್ಮನ ವಿಶಿಷ್ಟ ಸ್ಥಾನವಾಗಿದೆ. ಮತ್ತು ನಮ್ಮ ತಲೆಯ ಮೇಲೆಯೇ ಆಣೆಯಿಟ್ಟುಕೊಳ್ಳಬಾರದು; ಏಕೆಂದರೆ, ಆದರ ಒಂದೇ ಒಂದು ಕೂದಲನ್ನು ಬಿಳಿಯಾ ಕಪ್ಪು ಮಾಡುವ ಶಕ್ತಿಯಿಂದ ಹೊರಗಿದ್ದೀರಿ ನೀವು" ಕೊನೆಯಲ್ಲಿ ಈ ಮಹಾತ್ಮನು ಹೇಳುತ್ತಾನೆ— "ಈ ಕಾರಣದಿಂದ ನಿಮ್ಮ ಉತ್ತರವು ನಿಮ್ಮ ಹಾದು; ಮತ್ತು ಅಲ್ಲಗಳ ರೂಪದಲ್ಲಿಯೇ ಇರಬೇಕು. ಅದಕ್ಕಿಂದ ಮುಂದೆ ಆಣೆ ಶಪಥ ಮಾಡುವುದು ಪಾಪವ ಸುಳ್ಳು ಕಾರ್ಯವಾಗಿದೆ."

ಭಾರತೀಯ ದಾರ್ಶನಿಕರಂತೆ ಯೇಸುವೂ ಭೌತಿಕ ವಸ್ತುಗಳಿಗೆ ಪ್ರತಿಯಾಗಿ ಹುಟ್ಟಿದ ಮೋಹವನ್ನು ಮುಖ ನುತ್ತ ಶಾಂತಿಯ ವಿರೋಧೀ ತತ್ವವೆಂದು ತಿಳಿಯುತ್ತಾನೆ. ಯೇಸುವು ಈಶ್ವರಭಕ್ತನಾಗಿದ್ದನು. ಆತನ ದೃಷ್ಟಿಯಲ್ಲಿ ಜೀವನದ ಪರಮ ಲಕ್ಷ್ಯವು ಈಶ್ವರನ ಭಕ್ತಿಯಾಗಿದೆ. ಈ ಸಂದರ್ಭದಲ್ಲಿ ಆತನು ಹೇಳುತ್ತಾನೆ–" ಯಾವನೇ ಒಬ್ಬ ವ್ಯಕ್ತಿಯು ಇಬ್ಬರು ಒಡೆಯರ ಸೇವೆಯನ್ನು ಮಾಡಲಾರನು; ಏಕೆಂದರೆ ಅವನು ಒಬ್ಬನೊಡನೆ ಪ್ರೀತಿಯಿಂದಿದ್ದಾನೆ; ಮತ್ತೊನ್ನೊಬ್ಬನೊಡನೆ ವೈರದಿಂದಿದ್ದಾನು; ಅಥವಾ ಒಬ್ಬನೊಡನೆ ಕೂಡಿ ಬಾಳಿಯಾನು, ಇನ್ನೊಬ್ಬನನ್ನು ಉಪೇಕ್ಷಿಸಿಯಾನು. ಫಲತಃ ನೀವು ಈಶ್ವರ ಮತ್ತು ಧನ ಎರಡರ ಸೇವೆಯನ್ನೂ ಮಾಡಲು ಶಕ್ತರಾಗಲಾರಿ. ಈ ಕಾರಣದಿಂದಲೇ ಆತ ಮುಂದುಮಡಿಯುತ್ತಾನೆ—" ನೀವು ಈ ಪ್ರಪಂಚದ ಸೌಭಾಗ್ಯವೆಲ್ಲವನ್ನೂ ಏಕತ್ರಿತ ಮಾಡಲು ಪ್ರಯತ್ನಿಸುವಿರಾದರೆ, ನಿಮ್ಮ ಮನಸ್ಸು ಸಹ ಅದರಲ್ಲಿಯೇ ರಮಿಸುವುದು; ಮತ್ತು ಒಂದುನೇಳಿ ನೀವು ಒಂದುಬಾರಿ ಆ ದಿವ್ಯದ್ರವ್ಯದ, ಆ ಅಲೌಕಿಕ ರತ್ನದ ಸ್ವಪ್ನವನ್ನು ಕಂಡಿರಾದರೆ, ನೀವು ಪೃಥ್ವಿಯಲ್ಲಿಯಲ್ಲ; ಸ್ವರ್ಗದಲ್ಲಿಯೇ ವಹಿಸುತ್ತೀರಿ."

೫೦ ವರ್ಷಗಳಿಂದಲೂ ಪ್ರಸಿದ್ಧಿ ಇದೆ. ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ ಎಲ್ಲ ಕೆಮಿಸ್ಟರಲ್ಲಿ ಗ್ರೋಸರುಗಳಲ್ಲಿ ದೊರೆಯುತ್ತವೆ.
ಬಾಟ್ಲಿವಾಲಾ ಎಗ್ಮೊಮಿಕ್ಶ್ಚರ್
ಮತ್ತು ಗುಳಿಗೆಗಳು
ಮಾರಾಟ ಮಾಡುವ ಏಜಂಟರುಗಳು: ಹೆರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಪ್ರಯತ್ನ ಪೂರ್ವಕವಾಗಿ ಬೇರೆಯವರಲ್ಲಿ ದೋಷವನ್ನು ಕಾಣುವುದು ಮಾನವ ಸ್ವಭಾವೋತ್ಪತ್ತಿಯಾಗಿದೆ. ಅನ್ಯರ ಚಿಕ್ಕ ಕೊರತೆಯಾದರೂ ನಮಗೆ ವಿಶಾಲವಾಗಿ ಕಂಡು ಬರುವುದು. ಆದರೆ ನಮ್ಮ ದುರ್ಬಲತೆಯನ್ನು ಯಾರು ಸಹ ನೋಡುವುದಿಲ್ಲ. ಬೇರೆಯವರ ಕಡೆಗೆ ನೋಡದೆ, ನಮ್ಮ ದೋಷಗಳನ್ನೆಷ್ಟೇ ತಿದ್ದಿಕೊಳ್ಳುವುದಾದರೆ, ಸಮಾಜದ ಎಷ್ಟೋ ದುಃಖ ಮತ್ತು ಮಾನಸಿಕ ಯಾತನೆಗಳನ್ನು ದೂರೀಕರಿಸಬಹುದು. ಯೇಸು ಹೇಳಿದ್ದಾನೆ–"ನಿನ್ನ ಕಣ್ಣುಗಳಲ್ಲಿ ಕೊರಡ ಕಡ್ಡಿ ತುಂಬಿರುತ್ತದೆ. ಅದನ್ನು ನೋಡದೆ ನಿನ್ನ ನೆರೆಯವನ ಕಣ್ಣಿ ಹುಲ್ಲು ಕಡ್ಡಿಯನ್ನೇಕೆ ನೋಡುವಿರಿ? ನೀವು ನಿನ್ನ ಕಣ್ಣಿನ ಕೊರಡನ್ನು ನೋಡದ ವಿನಃ ನಿನ್ನ ನೆರೆಯವನಿಗೆ ನಾನು ನಿನ್ನ ಕಣ್ಣಿನ ಹುಲ್ಲು ಕಡ್ಡಿಯನ್ನು ಕೇಳುತ್ತೇನೆಂದು ಹೇಗೆ ಹೇಳಬಲ್ಲಿರಿ? ಎಲೆ ಕಪಟಿಗಳೆ, ಮೊತ್ತಮೊದಲಿಗೆ ನಿನ್ನ ಕಣ್ಣನ್ನು ಶುಚಿಗೊಳಿಸಿರಿ; ಆಗಲೇ ನಿನ್ನ ನೆರೆಯರ ಹುಲ್ಲನ್ನು ಚೆನ್ನಾಗಿ ನೋಡಿ ಹೊಂತೆಗೆಯಬಲ್ಲಿರಿ."

ಯೇಸುವು ಕ್ರಾಂತಿದೂತನಾಗಿದ್ದಾನೆ. ತನ್ನ ಪ್ರವಚನಾದ್ವಾರಾ ಅವನು ಪೂರ್ಣ ಯೆಹೂದೀ ಸಮಾಜದಲ್ಲಿ ಕ್ರಾಂತಿಯೆಬ್ಬಿಸಿದ್ದನು. ಕೇವಲ ಯೆಹೂದಿಯೆಂದೇನೆ? ಅತನ ಉಪದೇಶಗಳು, ಆ ಸಮಯದ ಸಮಸ್ತ ವಿರೋಧ್ಯ ಸಮಾಜವು ಹೇಗಾಯಿತೋ ಹಾಗೆ ಎಂದಿದ್ದಾಗ ಸಂಪೂರ್ಣ ಮಾನವಸಮಾಜದ ಸ್ಥಾಪಿತ ರೂಢಿಗಳನ್ನು ಖಂಡಿಸಿದವಾಗಿ ಛಿದ್ರಿಸಿನೆ. ಯೇಸುವು ಅವರಿಗೊಂದು ನವೀನ ಸಂದೇಶವನ್ನಿತ್ತನು 'ನೀವು ಕಣ್ಣಿನ ಬದಲು ಕಣ್ಣು, ಹಲ್ಲಿನ ಬದಲು ಹಲ್ಲು ಎಂಬ ಆದೇಶವನ್ನು ಕೇಳಿದ್ದೀರಿ. ಆದರೆ ನಾನು ಅಪಕಾರಕ್ಕೆ ಬದಲು ಅಪಕಾರವನ್ನು ಮಾಡಬೇಡಿರೆಂದು ಹೇಳುತ್ತೇನೆ. ಯಾರು ನಿಮ್ಮ ಒಂದು ಕೆನ್ನೆಗೆ ಏಟು ಕೊಡುತ್ತಾನೋ ಅವನ ಸಮ್ಮುಖ ಇನ್ನೊಂದನ್ನು ತೋರಿಸಿ ತನ್ನ ಪರಲ್ಲಿ ಪ್ರೇಮ, ತನ್ನ ವೈರಿಗಳಲ್ಲಿ ವೈರವನ್ನು ನಾಶಿಸುವ ಆದೇಶವನ್ನೂ ನೀವು ಕೇಳಿರುವಿರಿ; ಆದರೆ, ನಾನು ನಿಮ್ಮ ಶತ್ರು ವಿನೊಡನೆ ಸಹ ಪ್ರೇಮಿಂದಿರಿ; ನಿನಗೆ ಉಪದ್ರಕಾರಿಯಾದವನ ಒಳಿತಿಗಾಗಿ ಪ್ರಾರ್ಥಿಸಿರಿ ಎನ್ನುತ್ತೇನೆ"

ಎಂಥ ಹೃದಯಸ್ಪರ್ಶಿ ಆದೇಶ! ವೈರಿಯೊಡನೆ ಪ್ರೇಮ; ಅಪಕಾರಕ್ಕೆ ಪ್ರತಿಯಾಗಿ ಉಪಕಾರ! ಇದನ್ನು ಮಾನವರು ಅದುವರೆಗೆ ಕೇಳಿರಲಿಕ್ಕಿಲ್ಲ. ಅದರೆ, ಯೇಸುವಿನ ಈ ನವೀನ ಸಂದೇಶವನ್ನು ಕರ್ತೃಸದವರು ತಿಳಿದುಕೊಳ್ಳಬಹುದು.

"ನೀವು ನಿಮ್ಮ ಸ್ವಾಮಿಯಾದ ದೇವರ ಉತ್ತಮ ಪುತ್ರರೆಂದು ಕರೆಯಲ್ಪಡಬಹುದು; ಏಕೆಂದರೆ, ಅವನು ಸೂರ್ಯನ ಉಜ್ವಲ ಆಲೋಕನವನ್ನು ಒಳ್ಳೆಯ ಮತ್ತು ಕೆಟ್ಟ ವರ್ಗದವರಿಬ್ಬರಿಗೂ ಕೊಡುತ್ತಾನೆ. ವರ್ಷದ ಸುಖದಾಯೀ ಧಾರೆಗಳನ್ನು ಪುಣ್ಯಾತ್ಮ ಮತ್ತು ಪಾಪಿಗಳಿಬ್ಬರಿಗೋಸ್ಕರವಾಗಿ ಕಳುಹಿಸುತ್ತಿದ್ದಾನೆ."

ಇಂತಹ ಎಷ್ಟೋ ಸ್ವವಚನಗಳಿಗನ್ನು ಸಮಯ ಸಮಯದಲ್ಲಿ ಯೇಸುವು ತನ್ನ ವಿರೋಧಿ ಮತ್ತು ಅನುಯಾಯಿಗಳಿಗೆ

(ಹನೇ ಪುಟ ನೋಡಿರಿ)

ಭಾರತದ ಕಲಾಭಂಡಾರ—

ನಾಗಪುರ ವಸ್ತುಸಂಗ್ರಹಾಲಯ

ನಾಗಪುರದ ಕೇಂದ್ರ ವಸ್ತುಸಂಗ್ರಹಾಲಯವನ್ನು ೧೮೬೩ರಲ್ಲಿ ಸ್ಥಾಪಿಸಲಾಯಿತು. ವಿಶಾಲವಾದ ಭವನದಲ್ಲಿರುವ ಈ ವಸ್ತು ಸಂಗ್ರಹಾಲಯದಲ್ಲಿ ನಾಲ್ಕು ಮುಖ್ಯ ವಿಭಾಗಗಳಿವೆ: (೧) ಕಲೆ; (೨) ಮಾನವ ಶಾಸ್ತ್ರ; (೩) ಪ್ರಾಕೃತಿಕ ಇತಿಹಾಸ, ಮತ್ತು (೪) ಪ್ರಾಕ್ತನ ವಸ್ತು ವಿಭಾಗ.

ಭಾರತದ ಕೈಗಾರಿಕಾ ಕಲೆ ಮತ್ತು ಕುಶಲ ವಸ್ತುಗಳಲ್ಲಿ ಅರಿಸಲಾದವುಗಳನ್ನು ಈ ಕಲಾ ವಿಭಾಗದಲ್ಲಿ ಇಡಲಾಗಿದೆ. ಚಿತ್ರಿಸಿದ ಕುಂಭ ಕಲಾವಸ್ತುಗಳು, ಲೋಹ ವಸ್ತುಗಳು, ಶಿಲೆ ಮತ್ತು ಮರದ ಕೆತ್ತನೆ ವಸ್ತುಗಳು, ಕೆತ್ತನೆಯ ಕುಸುರಿ ಕೆಲಸದ ವಸ್ತುಗಳು ಮತ್ತು ಕಸೂತಿ ಹಾಕಿದ ವಸ್ತ್ರಗಳೂ ಈ ವಿಭಾಗದಲ್ಲಿವೆ.

ಚಿತ್ರಶಾಲೆಯಲ್ಲಿ ಕೆಲವು ಪುರಾತನ ಹಾಗೂ ಆಧುನಿಕ ಭಾರತೀಯ ವರ್ಣ ಕಲಾ ಚಿತ್ರಗಳನ್ನಿಡಲಾಗಿದೆ. ಈ ವಿಭಾಗದ ಮುಖ್ಯ ಆಕರ್ಷಣೆಯೆಂದರೆ, ನಾಗಪುರದ ಭೋಂಸ್ಲೆ ರಾಜವಂಶದ ಪಾಂಡುಲಿಪಿಗಳು.

ಮಾನವ ಶಾಸ್ತ್ರ ವಿಭಾಗದಲ್ಲಿ, ಈ ವಿಷಯದಲ್ಲಿ ಅಧ್ಯಯನ ಮಾಡುವವರಿಗೆ ಅನೇಕ ಸಾಮಗ್ರಿಗಳು ದೊರೆಯುವುವು. ಮಧ್ಯಪ್ರದೇಶದ ಗೋಂಡ್ ಮತ್ತು ಕೋರ್ಕೂಗಳಂತಹ ಆದಿವಾಸಿಗಳಿಗೆ ಸಂಬಂಧಪಟ್ಟ ವಿವಿಧ ವಸ್ತುಗಳನ್ನೂ ಇಲ್ಲಿ ಇಡಲಾಗಿದೆ.

ಸಂಗೀತ ಸಂಬಂಧ ಸಾಮಗ್ರಿಗಳು, ಆಭರಣಗಳು, ಉಡುಪುಗಳು, ಪ್ರಾಣಿಗಳನ್ನು ಹಿಡಿಯುವ ಸಂಬಂಧ ಸಾಮಗ್ರಿಗಳು, ಯುದ್ಧ ಶಸ್ತ್ರಾಸ್ತ್ರಗಳು ಲೋಹ ಕವಚಗಳು ಇತ್ಯಾದಿಗಳೂ ಇರುವುವು. ಇವುಗಳೆಲ್ಲಕ್ಕಿಂತ ಹೆಚ್ಚು ಕುತೂಹಲಗೊಳಿಸುವುದೆಂದರೆ, ವಿವರವಾಗಿ ಕೆತ್ತಿರುವ ಸ್ಮಾರಕ ಶಿಲೆಗಳು. ಆಳದ ಅರಸರ ಮೇರವಣಿಗೆ ದೃಶ್ಯ, ಹಂದಿ ಶಿಕಾರಿ ದೃಶ್ಯ, ಸಮರ ದೃಶ್ಯಗಳು ಮತ್ತು ಜಯಭೇರಿ ಮೆರವಣಿಗೆಗಳ ದೃಶ್ಯ ಇತ್ಯಾದಿಗಳನ್ನು ಈ ಶಿಲೆಗಳ ಮೇಲೆ ಕೆತ್ತಲಾಗಿದೆ.

ವಸ್ತು ಸಂಗ್ರಹಾಲಯದ ಪ್ರಾಕೃತಿಕ ಇತಿಹಾಸ ವಿಭಾಗದಲ್ಲಿ, ಮಧ್ಯ ಪ್ರದೇಶದಲ್ಲಿನ ಪಕ್ಷಿಗಳು, ಸರೀಸೃಪಗಳು, ಸಸ್ತನಿ ಪ್ರಾಣಿಗಳು ಮತ್ತು ಕ್ರಿಮಿಕೀಟಗಳು ಇತ್ಯಾದಿಗಳನ್ನು ಆಕರ್ಷಣೀಯವಾಗಿ ವ್ಯವಸ್ಥೆಗೊಳಿಸಲಾಗಿದೆ. ಪ್ರದರ್ಶನ ವಸ್ತುಗಳನ್ನು ತನ್ನ ಪ್ರಾಕೃತಿಕ ವಾತಾವರಣಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ.

ವರ್ಣರಂಜಿತ ಪ್ರಕೃತಿಗಳು ಹಾಗೂ ನಕ್ಷೆಗಳು ಮತ್ತು ಪ್ರಾಕೃತಿಕ ದೃಶ್ಯಗಳನ್ನು ಪ್ರತಿರೂಪಿಸುವ ಕೌತುಕ ವರ್ಣದ ಅನೇಕ ಚಿತ್ರಗಳು ಪ್ರೇಕ್ಷಕರ ಆಸಕ್ತಿ ಮತ್ತು ಜ್ಞಾನವನ್ನು ಕೆರಳಿಸುವಂತಹವಾಗಿವೆ.

ವಸ್ತು ಸಂಗ್ರಹಾಲಯದ ಪ್ರಾಕ್ತನ ವಸ್ತು ವಿಭಾಗದಲ್ಲಿ ಇತಿಹಾಸಪೂರ್ವ ಪ್ರಾಕ್ತನ ವಸ್ತುಗಳು, ಪ್ರಾಚೀನ ಶಿಲ್ಪ ಕಲೆಯ ನಮೂನೆಗಳು, ಶಿಲಾ ಶಾಸನಗಳು, ತಾಮ್ರ ಪತ್ರ ಲೇಖನಗಳು ಮತ್ತು ನಾಣ್ಯಗಳು ಇರುತ್ತವೆ. ಇತಿಹಾಸಪೂರ್ವ ಪ್ರಾಕ್ತನ ವಸ್ತುಗಳಲ್ಲಿ ಪ್ರೇಕ್ಷಕರ ಗಮನ ಸೆಳೆಯುವವೆಂದರೆ, ಬಾಲಘಾಟ್ ಜಿಲ್ಲೆಯ ಗುಜೇರಿಯಲ್ಲಿ ದೊರೆತ ಪ್ರಸಿದ್ಧ ತಾಮ್ರದ ಉಪಕರಣಗಳು ಮತ್ತು ರಜತ ಆಭರಣಗಳು.

ಮಧ್ಯಯುಗ ಕಾಲದ ಶಿಲೆ ಮತ್ತು ಲೋಹದ ಮೂರ್ತಿಗಳನ್ನು ಮುಖ್ಯವಾಗಿ ವಸ್ತು ಸಂಗ್ರಹಾಲಯದ ಶಿಲ್ಪ ವಿಭಾಗದಲ್ಲಿಡಲಾಗಿದೆ. ಇಲ್ಲಿ ಸುಂದರವಾದ ಶಿವ ಮತ್ತು ವಿಷ್ಣು, ಬೋಧಿಸತ್ವ ಮತ್ತು ಜೈನ ತೀರ್ಥಂಕರ ವಿಗ್ರಹಗಳೂ ಇರುವುವು. ಈ ಮೂರ್ತಿಗಳಲ್ಲಿ ಭಾಂಡಾರದ ಶಿವಮೂರ್ತಿಗಳು, ನಿಮರ್ ಜಿಲ್ಲೆಯ ವಿಷ್ಣುಮೂರ್ತಿ, ಸಿರಪುರದ ಬುದ್ಧ ಹಾಗೂ ಬೋಧಿಸತ್ವರ ಲೋಹ ಮೂರ್ತಿಗಳು, ಜಬ್ಬಲ್‌ಪುರದ ಜೈನತೀರ್ಥಂಕರ ಶಿಲ್ಪ ವಿಗ್ರಹಗಳು, ರಾಷ್ಟ್ರಕೂಟರ ಕಿಂಕಿಣಿಯ ಜೈನರ ದೇವತೆ ಸರಸ್ವತಿ ಮತ್ತು ತೀರ್ಥಂಕರ ಲೋಹ ನಿಗ್ರಹಗಳು ವಿಶೇಷ ಆಕರ್ಷಣೀಯವಾಗಿವೆ.

ವಿವಿಧ ರಾಜವಂಶಗಳ ಅತ್ಯಂತ ಮುಖ್ಯ ಮತ್ತು ಕುತೂಹಲ ಮೂಡಿಸುವ ಅನೇಕ ಶಿಲಾ ಶಾಸನಗಳು ಇಲ್ಲಿವೆ. ಇವುಗಳಲ್ಲಿ ದೇವಟೇಕದ ಎರಡು ಶಿಲಾಶಾಸನಗಳು—ಒಂದು ಸಾಮ್ರಾಟ್ ಅಶೋಕನ ಕಾಲದ್ದು, ಮತ್ತೊಂದು ವಾಕಾಟಕ ದೊರೆ ರುದ್ರಸೇನನ ಕಾಲದ್ದು—ಅತ್ಯಂತ ಮಹತ್ವಪೂರ್ಣವುಳ್ಳವಾಗಿವೆ. ವಿಕ್ರಮ ವರ್ಷ ೧೩೫೫ ಅಥವಾ ಕ್ರಿಸ್ತಶಕ ೧೨೯೮ರ ಯೋಗಿನಿಪುರದ ಸುಲ್ತಾನ್ ಮಹಮದನ ಕಾಲದ ಕಂಠೃತ ಶಿಲಾ ಶಾಸನಗಳು, ಮತ್ತು ಚಾಂದೇ ರಾಜವಂಶದ ರಾಜ ಖನಿರುದ್ದೀನ್ ಸಿಂಗ್ ಕಾಲದ ವಿಕ್ರಮ ಸಂವತ್ ೧೫೬೨ರ ಬುಂದೇಲ್ ಖಂಡಿಯ ಹಿಂದಿಯಲ್ಲಿ ಬರೆದ ಇತರ ದಾಖಲು ಪತ್ರಗಳೂ ಇಲ್ಲಿವೆ.

ಭಾರತದಲ್ಲಿ ಮಹಮದ್ದೀಯ ವಂಶಗಳ ಪೂರ್ವದ ಮುಖ್ಯವಾಗಿ ಮಧ್ಯಪ್ರದೇಶದ ಕಾಳಚುರಿಯ ವಂಶಕ್ಕೆ ಸೇರಿದ ಪ್ರಾಕ್ತನ ಹಾಗೂ ಮಧ್ಯಯುಗದ ನಾಣ್ಯಗಳು ಇಲ್ಲಿರುವುವು. ಬೇಬಿಲಾನಿನ ಕಾಲದ ಸುಮಾರು ೪,೦೦೦ ವರ್ಷಗಳ ಪುರಾತನ ಮುದ್ರೆಯೊಂದು ಈ ವಸ್ತು ಸಂಗ್ರಹಾಲದ ಎಲ್ಲಾ ವಸ್ತುಗಳಿಗಿಂತ ಹೆಚ್ಚು ಮಹತ್ವಪೂರ್ಣದ್ದಾಗಿದೆ.

ಸಂಗ್ರಹಾಲಯದ ನಾಣ್ಯಗಳ ಆಲವರುವಿನಲ್ಲಿ ಮುಖ್ಯವಾಗಿ ಮಹಮ್ಮದ್ದೀಯರ ಕಾಲಕ್ಕೆ ಸೇರಿದ ಅನೇಕ ನಾಣ್ಯಗಳಿವೆ. ಈ ನಾಣ್ಯಗಳು ದೆಹಲಿ, ಗುಜರಾತ್, ಮಾಲ್ವ ಮತ್ತು ಬಹಮನಿ ರಾಜ್ಯಗಳ ಸುಲ್ತಾನರ ಕಾಲಕ್ಕೆ ಸೇರಿದವಾಗಿವೆ. ಜಕ್ಬರನ ಕಾಲದಿಂದ ಹಿಡಿದು ಕೊನೆಯ ಮೊಘಲ್ ಸಾರ್ವಭೌಮನ ಕಾಲದವರೆಗಿನ ಮೊಘಲ್ ನಾಣ್ಯಗಳೂ ಇಲ್ಲಿ ರುತ್ತವೆ.



ಅಮೆರಿಕೆಯ ಮೆಲ್ಬೋರ್ನ್ ಬೀಚ್ (ಫ್ಲೋರಿಡಾ)ದಿಂದ ಸಂಯುಕ್ತ ರಾಷ್ಟ್ರಗಳ ವಾಯುದಳದವರು ತೆಗೆದ ಜಂಪ್ರನ ಮೇಲ್ಬಾಗದ ಚಿತ್ರ. ಇದನ್ನು ೫೦೦ ಇಂಚುಗಳ ರೋತಿ ಎಂಬ ಕೆಮೆರಾ ಟಿರಿಸ್ಕೋಪಿನ ಸಹಾಯದಿಂದ ತೆಗೆಯಲಾಗಿದೆ.

ಮಾನವರು ಮಾನವತಾವಾದಿಗಳಾಗಲಿ

(೪ನೇ ಪುಟದಿಂದ)

ಕೊಟ್ಟಿದ್ದಾನೆ. ಆದುದರಿಂದಲೇ ಯೇಸುವು ಇಂದು ಮಹಾತ್ಮ ಮಾತ್ರನಲ್ಲ, ಈಶ್ವರ ಪುತ್ರನೆಂದು ಕರೆಯಲ್ಪಡುತ್ತಾನೆ.

ಯೇಸುವು ವಿಶ್ವದ ಮಹತ್ತಮ ವಿಭೂತಿ ಪುರುಷರಲ್ಲೊಬ್ಬನಾಗಿದ್ದನು. ಆವನು ಸಾಮಾಜಿಕ ಮತ್ತು ಧಾರ್ಮಿಕ ಸಿರಂಕುಶತೆಯನ್ನು ದೂರವಾಡುವುದಕ್ಕಾಗಿ ಭೂಮಿಯಲ್ಲಿ ಹುಟ್ಟಿದ ದಿವ್ಯ ಆತ್ಮಗಳಲ್ಲಿ, ತಮ್ಮ ಪುಣ್ಯಕರ್ಮಗಳು ಕೇವಲ ತಮ್ಮ ಸಮಾಜ ಮತ್ತು ಕಾಲಗಳನ್ನು ಮಾತ್ರ ಪ್ರಭಾವಿತವನ್ನಾಗಿ ಮಾಡದೆ ಸರ್ವಕಾಲ ಮತ್ತು ಸರ್ವ ಸ್ಥಾನಗಳ ಪರಿಧಿಯನ್ನು ಉಲ್ಲಂಘಿಸಿ ಪ್ರತ್ಯೇಕ ಯುಗದಲ್ಲಿ ಸಮಸ್ತ ಮಾನವತೆಯ ಕಲ್ಯಾಣ ಮಾಡುವ ಮಹಾ ವಿಭೂತಿ ಪುರುಷರ ಸಾಲಿನಲ್ಲಿ ಒಬ್ಬನಾಗಿದ್ದಾನೆ ಆಂತಹ ಯೇಸುವು ಲೋಕ ಕಲ್ಯಾಣಕ್ಕಾಗಿ ಜನಿಸಿದ್ದಾನೆ; ಪ್ರಪಂಚ ಉಳಿಯುವ ಮಾರ್ಗವನ್ನು ನಮಗೆಲ್ಲ ತೋರಿಸಿ ಕೊಟ್ಟಿದ್ದಾನೆ. ಆದರೆ, ನಾವು ಅದನ್ನೆಷ್ಟು ಆನುಸರಿಸಿಕೊಂಡಿದ್ದೇವೆಂಬುದು ನಮ ನಮಗೇ ತಿಳಿದಿರುವುದಷ್ಟೆ?

(ಮೂಲ: ನ. ಭಾ. ಬಾ.)

The Canara Industrial & Banking Syndicate, Ltd.,

Head Office: UDIPI, S. India. Estd: 1925.

CHANGE OF PREMISES.

We have the pleasure to inform all our patrons and friends that our BOMBAY OFFICE has now been shifted from "Rahimtoola House", Homji Street, to our OWN PREMISES "SYNDICATE BANK BUILDING" 26, Sir Phirozeshah Mehta Road, Fort, BOMBAY--1.

ದಕ್ಷಿಣ ಭಾರತ ಭಾಷಾ ಬುಕ್ ಟ್ರಸ್ಟಿನ ಪ್ರಕಟಣೆ.

ತಮಿಳು, ತೆಲುಗು, ಮಲೆಯಾಳ, ಕನ್ನಡ ಮತ್ತು ಇಂಡಿಯ ಭಾಷೆಗಳಲ್ಲಿ ಮಕ್ಕಳಿಗೆ ಉಪಯುಕ್ತವಾದ ಪುಸ್ತಕಗಳನ್ನು ಬರೆಯುವವರನ್ನು ಪ್ರೋತ್ಸಾಹಿಸಲು ಅಯಾಯಾ ಭಾಷಾ ಪುಸ್ತಕ ಬರೆಯಗಾರರೊಳಗೆ ಸ್ಪರ್ಧೆಯೊಂದು ಏರ್ಪಡಿಸಲಾಗಿದೆ ಪುಸ್ತಕಗಳು ೬ರಿಂದ ೮ ವರ್ಷಗಳ, ೮ರಿಂದ ೧೦ವರ್ಷ ವರ್ಷಗಳ, ೧೦ರಿಂದ ೧೨ವರ್ಷಗಳ ಮತ್ತು ೧೨ರಿಂದ ೧೫ವರ್ಷಗಳ ಪ್ರಾಯಸ್ಥರಿಗೆ ಅನುಕೂಲವಾಗುವಂತಿರಬೇಕು. ರೂಪಾಯಿ 700/- ಮೌಲ್ಯದ ೨೦೬೦ ಬಹುಮಾನಗಳಿವೆ.

ಉಮೇದ್ವಾರಿಗಳು ತಂತಮ್ಮ ಹಸ್ತ ಲಿಖಿತ ಪ್ರತಿಗಳನ್ನು ತಾ. 15-೭-1958ರೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ ಬಗ್ಗೆ ಸಹ ಅದೇ ವಿಳಾಸಕ್ಕೆ ಬರೆಯಬಹುದು:

The Special Officer for children's books, southern Languages Book Trust, 3, Wheatcraft Road, Nungambakkam, Madras 31

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೩೬-೧೨-'೫೭	೧೩

ಶಿವಪೂಜೆಯಲ್ಲಿ ಕರಡಿ

ಮೈಸೂರು ಸರಕಾರವು ಈ ವರ್ಷವಾದಿಯಲ್ಲಿ ಕನ್ನೆಲ್ಲಾ ನೌಕರರ ಸಂಬಳದಲ್ಲಿ ಭಡತಿಯನ್ನೂ ಅನಕ್ರೊಂದು ಉತ್ತಮ ವೆನ್ನಬಹುದಾದ ಮಟ್ಟವನ್ನೂ ಹಾಕಿ, ಅದರ ಬಲವಾಮುಖಯೋಗ ಪಡೆದುಕೊಂಡಿರುವ ನೌಕರರಿಂದ ಪ್ರಶಂಸೆಯನ್ನು ಪಡೆಯಿತು. ಈ ವ.ಳ್ಳದಲ್ಲಿ ಸಮಾಜದಲ್ಲಿ ಅತ್ಯಂತ ಕಡಿಮೆ ನೇತನವನ್ನು ಪಡೆಯುತ್ತಿದ್ದು ಗ್ರಾಂವ ಪೂರ್ಣ ಜೀವನವನ್ನು ಬಾಳಬೇಕಾದ ಅಧ್ಯಾಪಕರಲ್ಲಿಯೂ ಸರಕಾರೀ ವಿಭಾಗದವರಿಗೆ ಈ ಹೆಚ್ಚುವರಿ ದೊರೆತರೂ ಸ್ಥಳೀಯ ಸಂಸ್ಥೆಗಳ ಹಾಗೂ ಖಾಸಗಿ ಶಾಲೆಗಳಲ್ಲಿ ದುಡಿಯುವ ಸಾವಿರಾರು ಅಧ್ಯಾಪಕರನ್ನು ವಂಚಿಸಲಾಯಿತು. ಆದರೂ, ಮನವಿ,ಗೊತ್ತುವಳಿ, ಶಿಷ್ಟ ಮಂಡಳಿಗಳ ಮೂಲಕ ಪತ್ರಗಳ ದ್ವಾರಾ ಮೈಸೂರಿನ ಅಧಿಕಾರಿಗಳ ಲಕ್ಷ್ಯವನ್ನು ಈ ಕಡೆಗೆ ಸೆಳೆಯ ಬೇಕಾದರೆ, ಇಷ್ಟುಕಾಲ ಹೋಯಿತು. ಇದೀಗ ಈ ದಿಸೆಯಲ್ಲಿ ಸರಕಾರೀ ಪ್ರಕಟಣೆಯೊಂದು ಹೊರಟಿದ್ದು, ಅದರ ಅರ್ಥ "ಅಣ್ಣ ಬರಿದುದು ಅಣ್ಣನಿಗೇ ಗೊತ್ತು" ಎಂಬಂತಾಗಿದೆ. ಖಾಸಗಿ ಹಾಗೂ ಸ್ಥಳೀಯ ಸಂಸ್ಥೆಗಳ ಅಧ್ಯಾಪಕರಿಗೆ ಹೆಚ್ಚಿಗೆ. ಕೊಡಬೇಕಾದ ಸಂಬಳದಲ್ಲಿ ತನ್ನ ಪಾಲಿಗೆ ಬೀಳುವ ಸೇಕಡಾ ೫೦ ಮತ್ತು ತುಟ್ಟಿಭತ್ತೆಯಲ್ಲಿ ತನ್ನ ಪಾಲಿನ ಸಂಪೂರ್ಣಾಂಶವನ್ನೂ ಆಡಳಿತ ವರ್ಗದವರು ಒಪ್ಪುವುದಾದರೆ ಈ ನೂತನ ವೇತನಮಟ್ಟವನ್ನು ಸ್ವೀಕರಿಸಬಹುದು. ಇಲ್ಲವೆ, ತಮ್ಮ ಆರ್ಥಿಕಾನುಕೂಲಕ್ಕನುಗುಣವಾಗಿ ಬೇರೆಯೇ ಮಟ್ಟವನ್ನು ಅನುಸರಿಸಬಹುದೆಂದು ಒಂದು ಸ್ಪಷ್ಟಿಕರಣೆಯ ಅರ್ಥವಾಗುತ್ತದೆ. ಸಹಾಯಧನವನ್ನು ಸರಕಾರವು ಕೊಡುವಾಗ, ಈಗ ಆಯಾ ಪ್ರದೇಶದ ಗ್ರಾಂಜ್-ಇನ್-ಐಡ್ ನಿಯಮಗಳಿಗನುಗುಣವಾಗಿ ಈಯುವುದೆಂದೂ ಸರಕಾರ ಸ್ಪಷ್ಟಿಸಿದೆ. ಆದರೆ, ಈ ಎರಡು ವಿಧದ ಹೇಳಿಕೆಗಳು ಪರಸ್ಪರ ವಿರುದ್ಧಾರ್ಥವನ್ನು ಕೊಡುವಂತೆ ಕಾಣುವುದಿಲ್ಲವೆ? ಹಾಗಿರುವಾಗ ಇಂತಹ ಸಹಪ್ರ ಪ್ರಕಟಣೆಗಳನ್ನು ಪ್ರಕಟಿಸಿದರೆ, ಬಡ ಉಪಾಧ್ಯಾಯರು ಕೃಪ್ತುಗೊಳ್ಳಬೇಕೆ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಶಾಲೆಗಳ ಸಂಪೂರ್ಣ ವೇತನದ ಮತ್ತವರ ತುಟ್ಟಿ ಭತ್ತೆಯ ವೆಚ್ಚವನ್ನು ಸರಕಾರವೇ ವಹಿಸುತ್ತಿದೆ. ಸ್ಥಳೀಯ ಸಂಸ್ಥೆಗಳ ಹೆಚ್ಚಿನ ಶಾಲೆಗಳ ವೆಚ್ಚದಲ್ಲಿ ಮತ್ತು ಖಾಸಗಿ ಹೈಸ್ಕೂಲ್‌ಗಳ ವೆಚ್ಚದ ಬಹ್ಯಂಶವನ್ನು ಸರಕಾರವು ಈಗ ಹೊತ್ತಿದೆ, ಈ ನಿಯಮಗಳಿಗನುಗುಣವಾಗಿ ಸರಕಾರವು ವೆಚ್ಚವನ್ನು ಹೊರುವುದಾದರೆ, ಆಗ ಮಾತ್ರ ಇದರಿಂದ ಪ್ರಯೋಜನ ದೊರೆತೀತು. ಆಡಳಿತೆಯ ವರ್ಗವು ಬಹಳ ಆರ್ಥಿಕ ದುಸ್ಥಿತಿಯಲ್ಲಿಯೇ ಇದೆ. ಸ್ಥಳೀಯ ಸಂಸ್ಥೆಗಳು ಪ್ರತಿ ತಿಂಗಳ ಸಂಬಳವನ್ನು ಕೊಡಲು ಹಣವಿಲ್ಲದೆ ಸರಕಾರಕ್ಕೆ ಹಣ ಕಳಿಸಲು ಕೇಳಿಕೊಂಡ ಉದಾಹರಣೆಗಳು ಸಾಕಷ್ಟಿವೆ. ಸರಕಾರದಿಂದ ಬಂದ ವೇತನವನ್ನು ಅಧ್ಯಾಪಕರಿಗೆ ಕೊಡುವುದಕ್ಕೆ ಮೊದಲು ತಮ್ಮ ಅಗತ್ಯಗಳಿಗೆ ಉಪಯೋಗಿಸಿ, ನಾಲ್ಕೆಂಟು ದಿನ ತಡ ಮಾಡಿ ಕೊಡುವ, ಅಧ್ಯಾಪಕರಿಗೆ ದೊರೆಯುವ ಅಲ್ಪ ವೇತನವಲ್ಲಿಯೇ ತಮ್ಮ ಕೈಪಾಕಟ್ಟಾಕ್ಷದ ಭಕ್ಷೀಸನ್ನು ಪಡೆಯುವ ಬಡಪಾಯಿ ಆಡಳಿತ ವರ್ಗ ಹೆಚ್ಚಿನ ವೇತನ ಮಟ್ಟವನ್ನು ಅನ್ವಯಿಸಬೇಕಾದರೆ, ಒದಗುವ ವೆಚ್ಚವನ್ನು ಒಂದು ಭಾಗವನ್ನು ಹೊರಬೇಕಾದೆಂ ಅಧ್ಯಾಪಕರಿಗೇನು ಬಂತು? ಆಗ ಅಧ್ಯಾಪಕರ ಇಮ್ಮಡಿನವ ಕೇಳಿಕೆಗಳಿಗೆ ಯಾವ ಸ್ಪಷ್ಟತೆಯು ಬಂದಂತಾಯಿತ.? 'ಕೊಡಲಾರೆನು, ಕೊಡದೆ ಬಿಡಲಾರೆನು' ಎಂಬ ತೂಗುಯ್ಯಾಲೆಯೊಟವನ್ನು ಸರಕಾರವಾಡುವುದೆ? ಸಾಕಷ್ಟು ಅಧ್ಯಾಪಕರು ದೊರೆವರೆಂಬ ಧೃಢನಂಬುಗೆಯಿಂದ ಸರಕಾರವು ಈ ರೀತಿ ಮಾಡುವುದಾದರೆ, ಅದು ಸಮಾಜೋಪಯೋಗಿ ಎಂದು ಹೇಗೆ ಹೇಳುತ್ತದು? ಇನ್ನು, ಹಳೆಯ ಮೈಸೂರಿನ ಖಾಸಗಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿನ ಅಧ್ಯಾಪಕರಿಗೆ ಈ ವರ್ಷದ (ಏಪ್ರಿಲ್ ತಿಂಗಳಿಂದ ನೂತನ ವೇತನವನ್ನೂ) ಜನವರಿಯಿಂದ ಮಾರ್ಚಿವರೆಗೆ ಮಧ್ಯಾವಧಿ ಪರಿಹಾರವನ್ನೂ ಸರಕಾರವು ಕೊಡಮಾಡಿದೆ. ಆದರೆ, ದಕ್ಷಿಣ ಕನ್ನಡ ದವರು ಮಲತಾಯಿ ತಮಿಳಿನ ಮಕ್ಕಳಾದುದರ ಪರಿಣಾಮವಾಗಿಯೋ ಏನೋ. ಅವರಿಗೆ ಸೊನ್ನೆ. ಇದಾವ ನ್ಯಾಯವೋ ಅಥವಾ ಭೇದವೋ ಹೇಳುವುದು ಸಾಧ್ಯವಿಲ್ಲ. ದಕ್ಷಿಣ ಕನ್ನಡದವರು ಮುಂದವರಿದವರು; ಇದುವರೆಗೆ ಹೊಟ್ಟೆ ಶುಂಬ ತಿಂದವರು; ಆದುದರಿಂದ ಇನ್ನು ಕೆಲವು ವರ್ಷ ಅವರು ಹಿಂಜರಿದು ಉಳಿವಾಬೇಳಬೇಕು; ಆಗ ಅವೀ ಮೈಸೂರಲ್ಲಿ ಸಮಾನತೆಯು ಎದ್ದು ಸ್ಪುಟವಾಗುವುದೆ? ಹಿಂದಿನ—ಇಂದಿನ—ಮುಂದಿನ ಎಂಬ ಭೇದಭಾವನೆಯನ್ನು ಇನ್ನಾದರೂ ತೊರೆಯಬಾರದೆ? ತನ್ನ ಎಲ್ಲ ಕ್ಷೇತ್ರಗಳ ನೌಕರರಿಗೆ ಹಿಂದೆ—ಮುಂದೆ ಎಂದು ನೋಡದೆ ಸಮಾನವೇತನವನ್ನು ಕೊಡ ಮಾಡಿದ ಮಾನ್ಯ ನಿಜಲಿಂಗಪ್ಪ ಸರಕಾರ ಅಧ್ಯಾಪಕರ ಮಟ್ಟಿಗೇಕೆ ಅಡ್ಡಗಾಲಿ ಹಿಡಿಯುತ್ತದೆ? ಅವರಿಗೇಕೆ ಸಕ್ಷಪಾತ ಮಾಡುತ್ತದೆ? ಸಮಾಜದ ಜೀವನ ವೆಚ್ಚವು ದಿನೇ ದಿನೇ ಕಚ್ಚುತ್ತಿರುವುದೆಂದು ಕೇಂದ್ರ ಸರಕಾರದ ನೌಕರರ ವೇತನಾ ಆಯೋಗದ ಮಧ್ಯಾವಧಿ ವರದಿಯಲ್ಲಿ ಹೇಳಿರೂ. ಗನ್ನು ಮಧ್ಯಾವಧಿ ಪರಿಹಾರ ಕೊಡಬೇಕೆಂದು ಸೂಚಿಸಿರುವಾಗ, ಮತ್ತೆ ದು ಕೀರಾ ಕಡಿಮೆಯಾಯಿತೆಂದೂ ಬರುವ ಜನವರಿ ೧೯೦೦ ತಮ್ಮ ವೇತನವನ್ನು ನಿರಾಕರಿಸಬೇಕೆಂದೂ ನೌಕರರ ರಾಷ್ಟ್ರೀಯ ಮಹಾ ಮಂಡಲವು ತನ್ನ ಸದಸ್ಯರನ್ನು ಕೇಳಿಕೊಂಡಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಮುಂದಿನ ಸಮಾಜವನ್ನಲ್ಲಿ ಸಮಾನತೆ,ಸೋದರತೆಯನ್ನು ಮೂಡಿಸುವ, ಸಮಾಜಚಾಲಗವನ್ನು ರೂಪಿಸುವ ಅಧ್ಯಾಪಕರಲ್ಲಿಯೇ ಅಸಮಾನತೆಯನ್ನು ಅಶಾಂತಿಯನ್ನೂ ವಿದ್ಯಾಸಿಲಯಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಗಳಿಗೆ ಬದಲಾಯಿಸುವುದರಲ್ಲಿ ಅವರ ಮಾತಭಾರದೆಂದೂ ಆ ಬಗ್ಗೆ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡೇ ಮುನ್ನಡೆಯಬೇಕೆಂದೂ ಶಿಕ್ಷಣ ಮಾಧ್ಯಮವು ಪ್ರಾದೇಶಿಕ ಭಾಷೆಯಾಗಿ ಪರಿವರ್ತನೆಗೊಂಡನೇಲೆಯೂ ಇಂಗ್ಲಿಷ್ ಭಾಷೆಯು ಕಡ್ಡಾಯವಾಗಿರಬೇಕೆಂದೂ ಅಭಿಪ್ರಾಯಪಟ್ಟಿದ್ದು ಈ ವರದಿಯನ್ನು ವಿಶ್ವವಿದ್ಯಾನಿಲಯಗಳ ಸಭಾಯಧನದಾಯೋಗವು ಸ್ವೀಕರಿಸಿದೆ.

ಸರಕಾರದ ಪುರಸ್ಕಾರಕ್ಕೆ ನಕಾರ

ಜೀವನಮಟ್ಟವು ಏರಿರುವುದರಿಂದ ಕೇಂದ್ರ ಸರಕಾರದ ನೌಕರರಿಗೆ ತಿಂಗಳಿಗೊಂದರ ರೂ. ೫೦ರಂತೆ ಮಧ್ಯಾವಧಿ ಪರಿಹಾರವೀಯಬೇಕೆಂದು ಕೇಂದ್ರ ನೌಕರರ ವೇತನ ಪರಿಶೀಲನಾ ಸಮಿತಿಯು ತನ್ನ ನಡುಗಾಲದ ವರದಿಯಲ್ಲಿ ಹೇಳಿದೆ ಮತ್ತು ಈ ಸೂಚನೆಯನ್ನು ಕೇಂದ್ರ ಸರಕಾರವೂ ಒಪ್ಪಿಕೊಂಡಿದೆ. ಆದರೆ, ಕೇಂದ್ರ ನೌಕರರ ರಾಷ್ಟ್ರೀಯ ಮಹಾಮಂಡಳವು ಈ ಪರಿಹಾರವು ಕಡಿಮೆಯಾದುದೆಂದು, ಜನವರಿ ೧೯೦೦ ದು ತಮ್ಮ ತಿಂಗಳ ಸಂಬಳವನ್ನು ಸ್ವೀಕರಿಸಬಾರದೆಂದು ತನ್ನ ಸದಸ್ಯರಿಗೆ ತಿಳಿಸಿರುತ್ತದೆ.

ಚುನಾವಣೆಗಳು ಮುಂದಕ್ಕೆ...?

ಪಾಕಿಸ್ತಾನದಲ್ಲಿ ಮುಂದಿನ ನವಂಬರ ತಿಂಗಳೊಳಗೆ ಸಾರ್ವತ್ರಿಕ ಚುನಾವಣೆಯು ನಡೆಯುವುದೆಂದು ಗೊತ್ತಾಗಿತ್ತು ನ್ಲೇ ಆದರೆ, ಇದೀಕ ಅಧ್ಯಕ್ಷ ಇಸ್ಕಾಂದರ ಮಿರ್ಜರು ಅದರ ಸಾಧ್ಯತೆಯಲ್ಲಿ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ರಾಜಕೀಯ ಬಿಕ್ಕಟ್ಟಿನಿಂದಾಗಿ ಚುನಾವಣೆಗಳು ಸರಾಲದಲ್ಲ ಮುಗಿಯುವ ಆಶೆಯಿರುವುದಿಲ್ಲವೆಂದವರು ಒಪ್ಪಿಕೊಂಡಿದ್ದಾರೆ.

ಅಖಂಡ ಭಾರತದ ಕನಸು!

ಮಾಜಿ ಪ್ರಧಾನಿ ಶ್ರೀ ಸುಹ್ರವರ್ದಿಯವರು ಭಾರತದೊಡನೆ ಪಾಕಿಸ್ತಾನವನ್ನು ವಿಲೀನಗೊಳಿಸಿ ಅಖಂಡ ಭಾರತ ಸ್ಥಾಪನೆಯ ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದು, ಆ ಬಗ್ಗೆ ಪ್ರಯತ್ನಿಸುತಿದ್ದಾರೆಂದು ಪಾರ್ಲಿಮೆಂಟ್ ಸದಸ್ಯ ಲೀಗಿನ ಸಹಕಾರ್ಯದರ್ಶಿ ಮಂಜೂರ ಅಲಾಮರು ಗಂಭೀರಾರೋಪವನ್ನು ಹೊರಿಸಿದ್ದಾರೆ. ಭಾರತ ಪಾಕಿಸ್ತಾನಗಳಿಗೆ ಒಂದೇ ರಕ್ಷಣಾ ಪಡೆಯಿರುವುದು ಅಪೇಕ್ಷಣೀಯವೆಂಬ ವಿಚಾರದಲ್ಲಿ ಇವರು ತಪ್ಪೇನಿಲ್ಲವೆಂದಿದ್ದು ಇದು ಭಾರತೀಕರಣದ ಒಂದು ನೆಕಂತ. ಇನ್ನು ಆರ್ಥಿಕ ಕ್ಷೇತ್ರದಲ್ಲಿ ಏಕರೂಪತೆ ಮತ್ತು ಸಾರಿಗೆ ಸಂಪರ್ಕ ಜೋಡಣೆಗಳನ್ನು ಕಾರ್ಯರೂಪದಲ್ಲಿ ತಂದು ಪಾಕಿಸ್ತಾನವನ್ನು ಸಂಪೂರ್ಣ ಭಾರತದಲ್ಲಿ ಐಕ್ಯವಾಡಲು ಹಂಚಿಕೆ ನಡೆಸಿದ್ದಾರಲ್ಲದೆ ಜತೆ ಮಕದಾನ ಪದ್ಧತಿಯೂ ಇನ್ನೊಂದು ವಿಧಾನವೆಂದೂ ಭಾಷಾನುಮತ್ತು ಖಾನ್ ಸಾಹೇಬರನ್ನು ತನ್ನೆಡೆಗೆ ಎಳೆದುಕೊಂಡಿರುವರೆಂದೂ ಶ್ರೀ ಅಲಾಮರು ಆರೋಪಿಸಿದ್ದಾರೆ.

ಕೈದಿಗಳಿಂದ ಕೆಲಸ.

ಆಂಧ್ರಪ್ರದೇಶದ ನಾಗಾರ್ಜುನ ಸಾಗರ ಯೋಜನೆಯಲ್ಲಿ ನಡಿಯಲು ಆಂಧ್ರ ಸರಕಾರವು ಸುಮಾರು ಎರಡು ಸಾವಿರ ಸೆರೆಯಾಳುಗಳನ್ನು ಉಪಯೋಗಿಸಬೇಕೆಂದಿದೆ. ಈ ಕೈದಿಗಳನ್ನಿಡಲು ಯೋ

ಮಹತ್ವದ ಸುದ್ದಿಗಳು

ತಂಬಾಕಿನಿಂದ ಕ್ಯಾನ್ಸರ್

ತಂಬಾಕನ್ನು ಜಗಿಯುವುದರಿಂದ ಅಥವಾ ಸೇದುವುದರಿಂದ ಕೆಲವು ಅಂಗಗಳಲ್ಲಿ ಕ್ಯಾನ್ಸರ್ ಉಪ್ಪನ್ನವಾಗುವುದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಭಾರತದಲ್ಲಿ ಸಮೀಕ್ಷೆಯೊಂದನ್ನು ನಡೆಸಲಾಯಿತು. ಈ ಸಮೀಕ್ಷೆಯಿಂದ ದೊರೆತ ಆಂಶಗಳನ್ನು ವಿಶ್ಲೇಷಣೆ ಮಾಡಿದಾಗ, ಗಲ್ಲದಲ್ಲಿ ಕ್ಯಾನ್ಸರ್ ಸಂಭವಿಸಿದ ಹೆಚ್ಚು ಪ್ರಸಂಗಗಳಲ್ಲಿ ಬಹುಶಃ ತಂಬಾಕನ್ನು ಜಗಿಯುವ ಅಂಶವೂ ಒಂದಾಗಿದೆ. ನಾಲಗೆ ಮತ್ತು ಗಂಟಲಿನ ಒಳಭಾಗ, ಅನ್ನನಾಳ ಮುಂತಾದ ಸ್ಥಳಗಳಲ್ಲಿ ಕ್ಯಾನ್ಸರ್ ಹುಣ್ಣು ಉಂಟಾಗಿದ್ದ ಪ್ರಸಂಗಗಳಲ್ಲಿ . ಹೊಗೆಸೊಪ್ಪು ಅಗಿಯುವುದು ಹಾಗೂ ಬೀಡಿ ಸಿಗರೇಟುಗಳನ್ನು ಸೇದುವುದೂ ಒಂದಂಶವಾಗಿರುವುದೆಂದು ವ್ಯಕ್ತಪಟ್ಟಿದೆ.

ಸಾಹಿತಿ ನಿರ್ಲಿಪ್ತನಿರಲಿ

ಸಾಹಿತಿಯಾದವನು ಸರಕಾರದ ಕೃಪಾಕಟಾಕ್ಷಪರನಾದರೆ ಆಶ್ರಯದಿಂದ ಸಂಪೂರ್ಣ ದೂರ ವಿರಬೇಕು. ಸರಕಾರದ ಅನುಗ್ರಹವು ಯಾವರೂಪದಲ್ಲಿದ್ದರೂ ಸಹ ಸಾಹಿತಿಯ ಆತ್ಮವನ್ನು ಘಾತಿಸುತ್ತದೆ. ಅಲ್ಲದೇ ಅಧಿಕಾರಿಗಳ ಚಟುವಟಿಕೆಗಳನ್ನು ರಹಿಸಲು ಸಹಾಯಮಾಡುವುದಕ್ಕಾಗಿ ಸಾಹಿತಿಯು ತನ್ನ ಶಕ್ತಿಯ ಪೂರ್ಣ ಚಲನೆ ನಡೆಸುವುದಕ್ಕೆ ಅದು ತಡೆಯನ್ನುಂಟುಮಾಡುತ್ತದೆ. ಸಾಹಿತಿಗಳು ಸ್ವತಂತ್ರ ಶಕ್ತಿಯಾಗಿ ಬೆಳೆಯಬೇಕು, ಪಕ್ಷ ಪಂಗಡ, ಹಾಗೂ ವ್ಯಾಪಾರವಾಗಿ ಬೆಳೆದಿರುವ ದಿನಪತ್ರಿಕೆಗಳಿಂದ ಅವರು ನಿರ್ಲಿಪ್ತರಬೇಕು ಎಂದು ಆಪಿಲಭಾರತೀಯ ಲೇಖಕ ಪರಿಷತ್ತಿನ ಉದ್ಘಾಟನಾ ಸಂದೇಶದಲ್ಲಿ ಶ್ರೀ ರಾಜಾಜಿಲಿಖಿತ ಹೇಳಿಕೆಯಲ್ಲಿ ಉಪದೇಶಿಸಿದ್ದಾರೆ.

ಇಂಗ್ಲಿಷನ್ನು ದ್ವೇಷಿಸಬೇಕೆ?

ಪ್ರೊ. ಎಚ್. ಎನ್. ಕುಂಜರೂಪವರ ನೇತೃತ್ವದಲ್ಲಿ ನೇಮಕವಾಗಿದ್ದ ಇಂಗ್ಲಿಷ್ ಸಮಿತಿಯು ಭಾರತದ ವಿಶ್ವ

ಅತೃಪ್ತಿಯನ್ನೂ ಹಿಂದಿನ ಇಂದಿನ ಎಂಬ ಭೇದ ಭಾವನೆಯನ್ನೂ ಕೆರಳಿಸದಲ್ಲಿ ಪೈಸೂರಿನ ಮಾದರಿತನ ಭವ್ಯ ಭಾರತಕ್ಕೆ ಕಳಂಕ ಪ್ರಾಯವಾದೀತು. ಆದುದರಿಂದ ಈ ಎಲ್ಲವನ್ನೂ ಸಮಾಧಾನಚಿತ್ತದಿಂದ ಸರ್ಯಾಲೋಚಿಸಿ ೧೯೫೭ರ ಜನವರಿಯಿಂದಲೇ ಎಲ್ಲ ಉಪಾಧ್ಯಾಯರಿಗೂ ಸಮಾನ ಮಟ್ಟದ ವೇತನ ಮತ್ತು ತುಟ್ಟಿ ಭತ್ತೆಯನ್ನು ಘೋಷಿಸಬೇಕು — ಇಲ್ಲಿ ಯಾವ ಭೇದ ಭಾವನೆಯನ್ನೂ ಮಾಡಬಾರದು—ಅಧ್ಯಾಪಕರೆಲ್ಲರಿಗೆ ಪ್ರಯೋಜನ ದೊರೆಯುವಂತೆ. ಈ ಸಂಬಂಧದ ಎಲ್ಲ ವೆಚ್ಚವನ್ನೂ ಸರಕಾರವೇ ವಹಿಸಬೇಕು. ಶಿಕ್ಷಣಜಿಯಲ್ಲಿ ಕರಡಿಯನ್ನು ಬಿಡಬಾರದು.

ಸರಕಾರದ ವೆಚ್ಚದಲ್ಲಿ ಸಾಕಷ್ಟು ಮಿತವ್ಯಯವನ್ನು ಸಾಧಿಸಿ, ಸಮಾಜದ ಕಣ್ಣಾದ ಅಧ್ಯಾಪಕರ ವೇತನವನ್ನು ಏರಿಸುವುದಾದರೂ ಅಗತ್ಯವೆ ಸಮಾಜ ಸುಧಾರಣೆಗಳಲ್ಲಿ ಒಂದೆಂದು ಹೇಳಬಯಸುತ್ತೇವೆ.

ಜನೆಯ ಪ್ರದೇಶದಲ್ಲಿ ಶಿಬಿರಗಳನ್ನು ಸ್ಥಾಪಿಸಬೇಕೆಂದಿದ್ದು ಆಕಾರ್ಯಕ್ಕಾಗಿ ಈಗ ನೂರು ಎಕ್ರೆ ಸ್ಥಳವನ್ನು ವಶಪಡಿಸಿಕೊಳ್ಳಲಾಗುತ್ತದೆ ಅಂಬ್ರಸರಕಾರವು ಈಗಾಗಲೇ ಹೈದರಾಬಾದಿನ ಬಳಿಯ ಮೌಲಾಲಿ ಎಂಬಲ್ಲಿ ಒಂದು ಬಯಲು ಸೆರೆಮನೆಯನ್ನು ಸ್ಥಾಪಿಸಿದ್ದು ಇದರಲ್ಲಿ ನೂರು ಕೈದಿಗಳು ಕೃಷಿ ವ್ಯವಸಾಯದಲ್ಲಿ ತೊಡಗಿದ್ದಾರೆ

ಪೋಪರ ಕ್ರಿಸ್‌ಮಸ್ ಸಂದೇಶ

ಜಗತ್ತು ಈಗಾಗಲೇ ಬಹಳ ಗಡಿಬಿಡಿಯಾಗಿದೆ ಅದಕ್ಕಿಂದು ಬೇಕಾದುದು ಶಾಂತಿ ಮತ್ತು ಸಮಾಧಾನ ಈ ಕಾರಣಗಳಿಂದ ಜಗತ್ತಿನ ಪ್ರತಿಯೊಂದು ರಾಷ್ಟ್ರವೂ ತನ್ನ ಶಸ್ತ್ರಾಸ್ತ್ರ ಸಂಗ್ರಹವನ್ನು ತಗ್ಗಿಸಿ ಯುದ್ಧದ ಭೀತಿಯನ್ನು ಪ್ರಪಂಚದಿಂದ ದೂರಮಾಡಿಸಬೇಕೆಂಬುದೇ ಪರಮಾತ್ಮನ ಬಯಕೆಯಾಗಿದೆ ಎಂದು ವೆಟಿಕನ್ ನಗರದ ಪೋಪರು ತಮ್ಮ ಕ್ರಿಸ್‌ಮಸ್ ಸಮಾರಂಭದ ಸಂದೇಶದಲ್ಲಿ ಜಗತ್ತಿಗೆ ಕರೆಯಿತ್ತಿದ್ದಾರೆ

ಒರೆಪೊಳೆಯೋಜನೆ

ಒರೆಪೊಳೆಯೋಜನೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಮೈಸೂರು ಸರಕಾರವು ಕೇಂದ್ರ ಸರಕಾರವನ್ನು ಒತ್ತಾಯಿಸಿದೆ ಈ ಯೋಜನೆಯು ಕೊಡಗು ಜಿಲ್ಲೆಯಲ್ಲಿದ್ದು ಇದು ಪೂರ್ಣಗೊಂಡರೆ, ೫೦ ಸಾವಿರ ಎಕ್ರೆ ಜಮೀನಿಗೆ ನೀರು ಮತ್ತು ೧ ಲಕ್ಷ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯೂ ದೊರೆಯಬಲ್ಲುದು ಇಂತಹ ಫಲಪ್ರದ

ಉಡುಪಿ

ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್–ಇದರ ರಿಜಿಸ್ಟರಿಗಳ ಮತ್ತು ಆಕಯಗಳ ಹೆಚ್ಚಳದಿಂದಾಗಿ ಈ ಬೇಂಕು ಭಾರತದ "ಬಿ" ಕರೆನ್ಸಿಯ ಬೇಂಕಿಂಗ್ ಸಂಸ್ಥೆಯ ಸುಪ್ತಕ್ಕೇರಿದೆ ಮುಂದಿನ ಜನವರಿ ತಿಂಗಳಿಂದ ಬೇಂಕಿನ ಶಿಬಂದಿಯ ವೇತನವನ್ನು ಏರುವುದು

ಜಿನಾವರಣ ಸಮಾರಂಭ ಭುವನೇಂದ್ರ ಪ್ರಿಂಟಿಂಗ್ ಪ್ರೆಸ್, ಪ್ರೈವೇಟ್ ಲಿಮಿಟೆಡ್, ಕಟಪಾಡಿ–ಇವರು ದಾನಮಿತ್ತ ಮುನಿ ಶ್ರೀ ೧೦೮ ಸೇನೇಂದ್ರತೀರ್ಥ ಶ್ರೀಪಾದಂಗಳವರ ತೈಲಚಿತ್ರವನ್ನು ತಾ ೨೨ರಂದು ಕಾಶೀ ಮಠಾಧೀಶ ಶ್ರೀ ಸುದೀಂದ್ರತೀರ್ಥ ಸ್ವಾಮಿಗಳವರು ವರದೇಂದ್ರ ಕಲಾಮಂದಿರದಲ್ಲಿ ಅನಾವರಣಮಾಡಿದರು ಡಾ ಎಸ್ ಆರ್ ಪೈಗಳು ಸ್ವಾಗತಮಾತುಗಳನ್ನಾಡಿದರು ಶ್ರೀ ಪುಂಗಾವ ಜನಾರ್ಧನ ನಾಯ್ಕರು ಸ್ವಾಮಿಗಳವರಿಗೆ ಪಾದಪೂಜೆನಾಡಿದರು, ಶ್ರೀ ಕೆ. ವಾಸುದೇವ ಕಾಮತರು, ಅನಾವರಣ ಕಾರ್ಯವನ್ನು ಮಾಡಬೇಕಾಗಿ ಶ್ರೀ ಪಾದಂಗಳವರನ್ನು ಪ್ರಾರ್ಥಿಸಿದರು ಡಾ ಟಿ ಎಮ್ ಎ ಪೈಗಳು ಒಸಗನೂಡಿದರು ಸ್ವಾಮಿಗಳವರ ಆಶೀರ್ವಚನವಾದ ಬಳಿಕ ಡಾ ಪಿ ಆರ್ ನಾಯಕರು ಧನ್ಯವಾದಗಳನ್ನಿತ್ತರು ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮವು ಮುಗಿಯಿತು,

ಮುನಿಸಿಪಲ್ ಕೌನ್ಸಿಲ್ ಸಭೆಯು ತಾ ೨೩ರಂದು ಚೇರ್‌ಮೆನ್ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಮುನಿಸಿಪಲ್ ಸಿನಿಯರ್ ಕೆಲಸಗಾರರು ಮತ್ತು ಮೆನೇಜರ್‌ಮೆಂಟುಗಳೊಳಗಿನ ಕೆಲವೊಂದು ವಿಷಯಗಳ ವಿವಾದವನ್ನು ಇಂಡಸ್ಟ್ರಿಯಲ್ ಟ್ರಿಬ್ಯುನಲ್ ತೀರ್ಮಾನಕ್ಕೆ ಬಿಟ್ಟುಕೊಡಲಾದ ಕುರಿತು ತುಂಬಾ ಚರ್ಚೆನಡೆಯಿತು ಇದೇ ತಾ ೩೦ರಿಂದ ೧೫ ದಿವಸಗಳ ಪರ್ಯಂತ ಆಫೀಸ್ಸಿನ, ಟ್ರಿಬ್ಯುನಲ್ ಮುಂದೆ ಇನ್ನೊಂದ ಸ್ಟೇಟ್‌ಮೆಂಟ್ ಹಾಜರು ಪಡಿಸಬೇಕೆಂದೂ, ಕೌನ್ಸಿಲಿನ ಪರವಾಗಿ ಕಮಿಶನರರನ್ನು ಕಳುಹಬೇಕೆಂದೂ ನಿರ್ಣಯವಾಯಿತು ಮುನಿಸಿಪಲ್ ತೆಂಕಣ ಹಾಯರ್ ಎಲಿಮೆಂಟರಿ ಶಾಲೆಯ ಆವರಣ ಗೋಡೆಯ ಪಶ್ಚಿಮಕ್ಕೆ ಬಯಲಿಗಾಗಿ ಸಮಾಪವಿರುವ ಸ್ಥಳವನ್ನು ಪಡಕೊಳ್ಳಬೇಕೆಂದೂ, ಆ ಬಗ್ಗೆ ತಗಲುವ ಖರ್ಚನ್ನು ಸರಕಾರವು ಕೌನ್ಸಿಲಿಗೆ ಕೊಡಬೇಕೆಂದೂ ನಿರ್ಧಾರವಾಯಿತು ಸರಕಾರವು ಕೌನ್ಸಿಲಿನ ವಿನಂತಿಯನ್ನು ಅಲ್ಲಳೆದರೆ ಸದ್ರಿ ಸ್ಥಳವನ್ನು ಪಡಕೊಳ್ಳುವ ವಿಚಾರವನ್ನೇ ಬಿಟ್ಟುಬಿಡಬೇಕೆಂದೂ ಸರಕಾರಕ್ಕೆ ತಿಳಿಸಬೇಕೆಂದಾಯಿತು

ಕೆಂಗಿನ ಬೆಲ್ಲದ ಸಂಶೋಧನಾ ಹಾಗೂ ಪ್ರದರ್ಶನ ಕೇಂದ್ರವು ಈ ತಿಂಗಳಕಾರಂಭದಿಂದ ಉಡುಪಿಯ ಬಿಟ್ಟಾಡೆಗೆ ವರ್ಗಾಯಿಸಲ್ಪಟ್ಟಿದೆ ಕೆಂಗಿನ ನೀರಾದಿಂದ ಸುಧಾರಿತ ಕ್ರಮದಲ್ಲಿ ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ, ಜಾಮ್ ಟೋಫೆಟ್ ಇತ್ಯಾದಿಗಳನ್ನು ತಯಾರಿಸಿ ಪ್ರದರ್ಶಿಸಿ ಜನರಿಗೆ ಮಾಹಿತಿ ಕೊಡುವುದೇ ಈ ಕೇಂದ್ರದ ಉದ್ದೇಶವಾಗಿರುವುದು

ನೆಗೆ ೧೯ ಕೋಟಿ ರೂಪಯಿಗಳನ್ನು ಪೆಚ್ಚಬರುತ್ತದೆಂಬ ಅಂದಾಜು ಮಾಡಿದ್ದಾರೆ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಕೆ ಕೆ ಸೆಟ್ಟರ ಅವಿರೋಧ ಆಯ್ಕೆ

ಇದೇ ತಾ ೨೪ನೇ ಸಂಜೆ ಹೊಸತಾಗಿ ರಚಿತವಾದ ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಾಮಾನ್ಯ ಸಭೆಯು ಮಂಗಳೂರಿನ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಜಿಲ್ಲಾ ನಿರ್ವಾಹಣಾಧಿಕಾರಿ ಶ್ರೀ ಎಂ ಎನ್ ಚಾಪ್ಟರ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಹೊಸ ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಮಂಡಲಿಯ ಆಯ್ಕೆಗಾಗಿ ಜರಗಿತು ಆರಂಭದಲ್ಲಿ ಶ್ರೀ ಬಿ ಪುರುಷೋತ್ತಮ ಹೊಸ ಘಟಕಾಧಿಕಾರಿಯನ್ನು ವಿವರಿಸಿದರು. ಬಳಿಕ ಅಧ್ಯಕ್ಷಸ್ಥಾನಕ್ಕೆ ಮೈಸೂರು ವಿಧಾನ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಕೆ ಕೆ ಸೆಟ್ಟರ ಹೆಸರನ್ನು ಜಾ| ನಾಗಪ್ಪಾಳ್ವ ಎಂ ಎಲ್ ಎ ರವರು ಸೂಚಿಸಿ ಶ್ರೀ ಕೆ ಆರ್ ಅಬ್ಬರ್ ಎಂ ಪಿ ಯವರು ಅನುಮೋದಿಸಿದರು ಬೇರೆ ಹೆಸರುಗಳು ಮುಂದೆ ಬಾರದ್ದರಿಂದ ಶ್ರೀ ಕೆ ಕೆ ಸೆಟ್ಟರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆಯ್ಕೆಯಲ್ಪಟ್ಟರು ಆನಂತರ ಶ್ರೀ ಕೆ ಆರ್ ಆಚಾರ್ಯರು ಶ್ರೀ ಕೆ ಕೆ ಸೆಟ್ಟರನ್ನು ಅಭಿನಂದಿಸಿ, ಭಾಷಣಮಾಡುತ್ತ ಶ್ರೀ ಸೆಟ್ಟರ ನಿರ್ದೇಶನದಲ್ಲಿ ಮುನ್ನಡೆಯಲಿ ಜನರು ಪಕ್ಷವನ್ನು ಹೆಚ್ಚು ಹೆಚ್ಚಾಗಿ ಬೆಳೆಸಿಕೊಂಡು ಒಂದಿರುವ ಪ್ರಕೃತಿಯನ್ನೂ ಹೇಳಿದರು ಬಳಿಕ ಶ್ರೀ ಸೆಟ್ಟರು ತಮ್ಮನ್ನು ಸರ್ವಾನುಮತದಿಂದ ಅಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ಅಭಾರಿ ಸೂಚಿಸುತ್ತ ಕಾಂಗ್ರೆಸ್ ಸಂಸ್ಥೆಯೆಂಬ ಜಡ ಮತ್ತು ಒಡವಾಗುತ್ತ ಬರುತ್ತಿರುವದರಿಂದ ಆವನ್ನು ಸಚೇತನಗೊಳಿಸಿ ಹೆಚ್ಚಿನ ಜನತಾ ಸಂಪರ್ಕ ಬೆಳೆಸುವ ಮತ್ತು ಕಾಂಗ್ರೆಸ್ಸಿನಲ್ಲಿ ಮುಖಂಡರಿಗೆ ಸ್ಥಾನಕೊಡುವ ಆಗತ್ಯವನ್ನು ವಿವರಿಸಿದರು

ಉಪಾಧ್ಯಕ್ಷರು, ಕಾರ್ಯದರ್ಶಿ, ಪೂರ್ಣ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಒಂದು ವಾರದೊಳಗೆ ಆರಿಸಿಕೊಳ್ಳುವಂತೆ ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು ಒಬಾರಿಯೊಂದಿಗೆ ಸಭಾಂತ್ಯವಾಯಿತು

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

O P 53/1957

K ಸುಬ್ಬಾಬಲೇಶ್ವರ ಆಡಿಗ —ಆರ್ಜಿದಾರ

1. K ಶಾರದಮ್ಮ 2 P ಲಲಿತ —ಎದ್ರಿರು

ಉಪ್ಪಿತಾಲ್ಲೂ ಕಕ್ಕುಂಜೆ ಗ್ರಾಮವಲ್ಲಿರುವ ಸಂಕರನಾರಾಯಣ ಆಡಿಗರ ವಿಧವೆ ಪತ್ನಿ 1 ಕುಂದಾಪುರ ತಾಲ್ಲೂ ಕುಂದಾಪುರ ಕಸ್ಟೆಯಲ್ಲಿರುವ ಸಣ್ಣಂಬೂರು ಜನಾರ್ಧನ ಪಾಯರ ಪತ್ನಿ ಲಲಿತ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಆರ್ಜಿದಾರನ ತಂದೆ ಮೃತ ಶಂಕರನಾರಾಯಣ ಆಡಿಗರಿಗೆ ಕಲ್ಲಟ್ಟಿ ತೀನಪ್ಪ ಹೆಗ್ಡೆರೂ, 375 00ಕ್ಕೆ ಬರಕೆ ಚೀಟ್ಟಿ ದಿನಾಂಕ ನೋಟಿನ ಹಣ ಬಡಿ ಪಡಕೊಳ್ಳುವರೆ ಆರ್ಜಿದಾರನ ಹೆಸರಿಗೆ ಪಾರಿಸು ಸಟ್ಟಳಿಕೆಟು ಕೊಡಿಸಬೇಕೆಂತ ಆರ್ಜಿದಾರನು ದಾಖ್ಲುಮಾಡಿದ ಮೇಲಿನ ಆರ್ಜಿಯು ತಾ 10—1—58ಕ್ಕೆ ಮೇಲಿನ ಸಕೋರ್ಟಿನಲ್ಲಿ ತಪ್ಪಿಗೆ ಇಟ್ಟುಕೊಂಡಿದೆ ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಞಾಪಿಸಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯಿದೆ

K Mahabaleshwara Adiga
Date 19 1 57 Coondapoor.

ಚಂದಾದಾರರಲ್ಲಿ ವಿನಂತಿ

ಆಗೋಸ್ಟ್ ತಿಂಗಳಿಕ್ಕೆ 'ನವಯುಗ'ದ 36 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 37 ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಾಣಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ

ಮೆನೇಜರ್

ಕಟಪಾಡಿ

The Academy of General Education, Manipal.

SCHOOLS OF MUSIC & FINE ARTS

ADVERTISEMENT

Applications are invited from qualified persons to teach Harmonium Violin, Flute, Nagaswara, Sitar, Singing (Hindustani, Karnatak & Western), drawing and painting, Needle-work and Embroidery Rangwalli stitching and tailoring Dancing, Tabla and Mridangam Pay Rs 80 to 100 depending upon qualifications plus a travelling allowans of Rs 7-50 per month Teachers who are appointed will not be allowed to hold private classes of their own Teaching will have to be done for one hour in the morning and one in the evening Applications must reach the Registrar by 1st January, 1958 Applicants must have thorough knowledge in any one subject plus good acquaintance with two others from the above list

Dr T M A Pai.
Registrar

ದ. ಕ. ಜಿಲ್ಲಾ ಹರಿಜನ ಸಮ್ಮೇಳನವು–ತಾ 29ರಂದು ಡಿ. ಸಿ. ಎಸ್. ಶಾಲಾ ಕಟ್ಟಡದಲ್ಲಿ ಮೈಸೂರಿನ ಸ್ಥಳೀಕಾಡಳಿತ ಸಚಿವ ಶ್ರೀ ಆರ್. ಜಿನ್ನಿಗ ನೀಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಂಗಳೂರಿನ ಲೋಕಸೇವಾ ನಿರತ ಶ್ರೀ ಡಿ. ಎಸ್. ಕೃಷ್ಣ ಸೆಟ್ಟರು ಪರಿಷತ್ತನ್ನು ಉದ್ಘಾಟಿಸಿದರು. ಶ್ರೀ ಮಂಜಪ್ಪ ಉಳ್ಳಾಲ್, ಎಮ್. ಎಲ್. ಎ. ಅವರು ಸ್ವಾಗತ ಭಾಷಣ ಮಾಡಿದರು.

ಶ್ರೀಗಳಾದ ಬಸವ ಲಿಂಗಪ್ಪ, ಎಮ್. ಎಲ್. ಎ., ಬೆಂಗಳೂರಿನ ಬುದ್ಧದಾಸ್, ಕೃಷ್ಣಪ್ಪ, ಟಿ. ಪನುಮಯ್ಯ, ಎಮ್. ಎಲ್. ಸಾಂಟ್ರಾಜಿ ಮೊದಲಾದವರು ಕಾಲೋಚಿತ ಭಾಷಣವಿತ್ತರು

ಪರಿಷತ್ತಿನ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹರಿಜನರು ತಮ್ಮ ಉದ್ಧಾರವನ್ನು ಸಾಧಿಸಬೇಕಾದಲ್ಲಿ ಮೊದಲು ತಮ್ಮಲ್ಲಿರುವ ಒಡಕುಗಳನ್ನು ಬಿಟ್ಟು ಕೊಡುವುದು ಅತೀ ಅಗತ್ಯವೆಂದರು. ಹರಿಜನರು ಸಮಾಜದ ಪರರ ಮೇಲೆ ಹೊಂದಿಕೊಂಡು ನಾವು ಉದ್ಧಾರವಾಗುತ್ತೇವೆ ಎಂದು ಎಣಿಸಿಕೊಂಡು ಸುಮ್ಮನಿರದೆ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಮುಂತಾಗಿ ಹೇಳಿದರು. ಜಿಲ್ಲಾ ಹರಿಜನ ಸೇವಾ ಸಂಘದ ಅಧ್ಯಕ್ಷ ಡಾ ಯು. ಪಿ. ಪುಲ್ಲೂರು ಕಾರ್ಕಳ ಹರಿಜನರ ಪರವಾಗಿ ಒಂದು ಮನವಿಯನ್ನರ್ಪಿಸಿ ದ. ಕ. ಜಿಲ್ಲೆಯ ಹರಿಜನರಿಗೆ ನಕಲಿ ಸೃಷ್ಟಿಕಾರ್ಡಿಗಿ ಈಗ ಕೊಡುತ್ತಿರುವ ರೂಪಾಯಿ 850 ಸಾಕಾಗುವುದಿಲ್ಲ. ಹೆಚ್ಚಿನ ಸ್ಥಳವನ್ನು ದರ್ಖಾಸ್ತಿಗೆ ಕೊಡಬೇಕು, ಹರಿಜನ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಸವಲತ್ತುಗಳನ್ನು ದೊರಕಿಸಿಕೊಡಬೇಕೆಂದು ಕೇಳಿಕೊಂಡರು. ಪಂಚ್ಯಾಟಗಳಲ್ಲಿ ನೆನ್ನೆವರಿಗೆ ಬಹುಮಾನ ವಿತರಿಸಿಯಾದ ಬಳಿಕ ಶ್ರೀ ರಾಮ ಕೋಟ್ಯಾನರು ಧನ್ಯವಾದಗಳರ್ಪಿಸಿದರು.

ಕಟಪಾಡಿ – ಸ್ಥಳೀಯ ಭುವನೇಂದ್ರ ಪ್ರೊಡಕ್ಟ್ಸ್ ಬ್ರೂವೆರೀಸ್ ಲಿಮಿಟೆಡ್ ಸಂಸ್ಥೆಯ ರಜತಮಹೋತ್ಸವವು ತಾ. 18ರಂದು ಕಾಶಿ ಮಠದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಆರಂಭದಲ್ಲಿ ರಾಮಚಂದ್ರ ಕಮತರವರಲ್ಲಿ ಸಂಸ್ಥೆಯ ಕಡೆಯಿಂದ ಆದರ ಡ್ಯಾರೆಕ್ಟರ್ ಶ್ರೀ ಬಸ್ತಿ ಶ್ರೀಧರ ಶ್ಯಾನುಭಾಗರು ಸಾದರಪೂರ್ವಕ ಮಾಡಿದರು. ನಂತರ ಸಾರ್ವಜನಿಕ ಸನ್ಮಾರಂಭ ಜರಗಿತು. ಶ್ರೀ ಭಾಸ್ಕರ ಭಟ್ಟರಿಂದ ಪ್ರಾರ್ಥನೆಯಾದ ಬಳಿಕ ಡ್ಯಾರೆಕ್ಟರ್ ಶ್ರೀ ನಾರಾಯಣ ಭಟ್ಟರು ಶುಭಸಂದೇಶಗಳನ್ನೊಳಗೊಂಡಿದರು. ಕಂಪೆನಿ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಪಾಂಗಾಳ ಜನಾರ್ಧನ ನಾಯಕರು ಸ್ವಾಗತ ಭಾಷಣ ಮಾಡಿದರು. ಸಂಸ್ಥೆಯ ಕೂಮೇರಿತ ಹಾಸವನ್ನು ತೆಳಿಸಿದರು. ಬಳಿಕ ಡ್ಯಾರೆಕ್ಟರ್ ಶ್ರೀ ಪಾಂಗಾಳ ರಾಮದಾಸ ನಾಯಕರು ಕಂಪೆನಿಯ ರಜತೋತ್ಸವ ವರದಿಯನ್ನೊಪ್ಪಿಸಿದರು. ತದನಂತರ ಶ್ರೀಗಳಾದ ಟಿ. ಎ. ಪೈ, ಕೆ. ವೈಕುಂಠ ಶೆಣೈ ಮತ್ತು ಎ. ಜೆ. ಆಳ್ವೆ ಯವರ ಸಮಯೋಚಿತ ಭಾಷಣಗಳಾದುವು.

ಸಭಾಧ್ಯಕ್ಷ ಸ್ವಾಮಿಗಳವರು ಕಂಪೆನಿಯು ಪಾಲುದಾರಿಗಾಗಿ ಕೆಲಸ ಮಾಡಿದವರಿಗೆ ವಾರಿತೋಷ ವಿತರಣೆ ಮಾಡಿದರು. ಆಯುರ್ವೇದ ಪ ಮಹತ್ವವನ್ನು ವಿವರಿಸಿ, ಅದು ಜಡವರಿ ಬಂಧು ಎಂಬುದನ್ನು ವಿವರಿಸಿ ಕಂಪೆನಿಗೆ ಶ್ರೇ ಯಸ್ಸನ್ನು ಹಾರೈಸಿ, ಸ್ವಾಮಿಗಳವರು ಭಾಷಣ ನಾಡಿದರು. ಕಂಪೆನಿಯ ಆಫೀಸ್ ಮೆನೇಜರ್ ಶ್ರೀ ಕೆ. ವಾಸುದೇವ ಕಾಮತರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ವಿವಿಧ ಮನರಂಜನೆ ಕಾರ್ಯಕ್ರಮಗಳಿದ್ದುವು.

ಶಿರ್ವ–ಸ್ಥಳೀಯ ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ತಾ. 11ರಲ್ಲು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. 1957–58–ನೇ ವರ್ಷದ ತಿದ್ದಿದ ಬಜೆಟ್ಟು ಮತ್ತು 1958–59ನೆ ವರ್ಷದ ಅಂದಾಜು ಬಜೆಟ್ಟು ಮಂಜೂರು ಮಾಡಲಾಯಿತು. ಶಿರ್ವ ಪದವು–ಕಲ್ಲಬೆಟ್ಟು ರಸ್ತೆ ನಿರ್ಮಾಣಕ್ಕೆ ಧನ ಸೆಂಕ್ಷನ್ ಮಾಡುವ ಇತ್ಯಾದಿ ವಿಷಯಗಳು ತೀರ್ಮಾನಿಸಲ್ಪಟ್ಟವು.

ಪಟ್ಲ—ಇಲ್ಲಿಯ ಲೋಕಪಾಸ್ಕ ತಿಲಕ ಶಾಲೆಯ ನವೀನ ರಂಗಸಜ್ಜಿಕೆಯನ್ನು ತಾ. 14ರಂದು ಉಡುಪಿ ಎಮ್. ಜಿ. ಎಮ್. ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ. ವಿ ರಾಮಕೃಷ್ಣರಾಯರು ಉದ್ಘಾಟಿಸಿದರು ಡಾ। ಯು. ಗಿರಿಧರರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್ ಎಲ್. ಭಟ್ಟರು ಶಾಲಾ ಎಕ್ಸ್‌ಪತ್ರಿಕೆ 'ಬಾಲವಾಣಿ' ಯನ್ನು ಉದ್ಘಾಟಿಸಿದರು. ಸಂಗೀತ ನಾಟಿ ಕಾಭಿನಯವಾಗಿ ಶ್ರೀ ಮರ್ಡಿ ಗೋವಿಂದ ಸೆಟ್ಟರು ಧನ್ಯವಾದಗಳರ್ಪಿಸಿದರು.

ಪುತ್ತೂರು— ಪುತ್ತೂರಿನ ವಿದ್ಯುತ್ ಪೂರೈಕೆಯ ಉದ್ಘಾಟನೆಯನ್ನು ಮೈಸೂರು ರಾಜ್ಯದ ಇಕ್ಸ್ಟ್ರಿ ಬಿಟ ಚೋಡಿನ ಅಧ್ಯಕ್ಷ ಶ್ರೀ ಕೆ. ಗುಂಪಕ್ಕರನರು ನೆರವೇರಿಸಿತ್ತು, ಪುತ್ತೂರು ತಾಲೂಕಿನ ಇತರ ಭಾಗಗಳಿಗೂ ಆದಷ್ಟು ಬೇಗನೆ ವಿದ್ಯುತ್ ಪೂರೈಸಲು ಪ್ರಯತ್ನಿಸಲಾಗುವುದೆಂದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ವೆಂಕಟ್ರಮಣ ಗೌಡ, ಎಮ್. ಎಲ್. ಎ ಅವರು ವಹಿಸಿದ್ದರು. ಮತ್ತಾರು ಪಂಚಾಯತ ಅಧ್ಯಕ್ಷ ಶ್ರೀ ಬಿ. ಆನಂದರವರು ಮುಖ್ಯ ಅತಿಥಿಗಳಿಗೆ ಮಾನಪತ್ರ ಅರ್ಪಿಸಿದರು.

ಬ್ರಹ್ಮಾವರ–ತಾ. 16ರಂದು ರೆ ಫಾ ಎ. ಬ್ರಾಚ್, ಅವರ ಅಧ್ಯಕ್ಷತೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಉಡುಪಿಯ ಶ್ರೀ ಟಿ. ಎ. ಪೈಗಳನ್ನು ಗೌರವಿಸುವ ಸಮಾರಂಭ ಏರ್ಪಡಿಸಿದ್ದರು. ಶ್ರೀ ಪಿ. ವೈ ರಾಮಾಸ್ ಗುರಿಕೆಲ್, ಅವರು ಸ್ವಾಗತಿಸಿದರು. ಶ್ರೀಗಳಾದ ಕೆ. ಆರ್ ಹಂಬೆ ನುತ್ತು ಬೈಕಾಡಿ ವೆಂಕಟಕೃಷ್ಣರಾಯರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಟಿ. ಎ. ಪೈಗಳು ತಮ್ಮ ವಿದೇಶ ಪ್ರವಾಸದ ಅನುಭವಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ಗೋಕುಲದಾಸ ಪೈಗಳು ಧನ್ಯವಾದಗಳರ್ಪಿಸಿತ್ತರು.

ಬಂಟ್ವಾಳ—ತಾ 14 ನುತ್ತು 15 ರಂದು ಬಂಟ್ವಾಳ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಗ್ರಾಮ ಪ್ರಮುಖರ ಪರಿಷತ್ತು ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲಲ್ಲಿ ಜರಗಿತು. ದ. ಕ. ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರು ಪರಿಷತ್ತನ್ನು ಉದ್ಘಾಟಿಸಿದರು. ಡಾ ಕೆ. ನಾಗಪ್ಪ ಆಳ್ವ ಎಮ್. ಎಲ್. ಎ; ಅವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸೃಕಾಯಿಕಾರಿ ಶ್ರೀ ಕೆ. ಸಂಜೀವ ಸೆಟ್ಟರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಮಂಗಳೂರಿನ ಸೀನಿಯರ್ ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲನವರು ಬನಾವಿ ಶಿಕ್ಷಣದ ಮೇಲೆ ಭಾಷಣವಿತ್ತರು. ಜಿಲ್ಲಾ ಸಮಾಜ ಶಿಕ್ಷಣಾಧಿಕಾರಿ ಕುಮಾರಿ ಎ. ವಿಶಾಲಾಕ್ಷಿಯವರು ಸಮಾಜ ಶಿಕ್ಷಣ ಮತ್ತು ಸುಖೋದ್ಧಾರ ವಿಷಯದಲ್ಲೂ, ಜಿಲ್ಲಾ ಪಂಚಾಯತ ಅಧೀಸರ್ ಶ್ರೀ ಕೆ. ತೀನ ಸೆಟ್ಟರು ಗ್ರಾಮ ಪಂಚಾಯತ ವಿಷಯದಲ್ಲೂ ಅಸಿಸ್ಟಾಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಶ್ರೀ ವಿಲಿಯಮ್ ನಜರೆತ್‌ರವರು ಗುಡಿ ಕೈಗಾರಿಕೆ ವಿಷಯದಲ್ಲೂ, ಜಿಲ್ಲಾ ಪಶು ಸಂಗೋಪನಾಧಿಕಾರಿ ಡಾ. ಪಿ ಎಸ್. ಭಟ್ಟರು ಪಶು ಸಂಗೋಪನೆಯ ವಿಷಯದಲ್ಲೂ ಭಾಷಣವಿತ್ತರು. ನಂತರ ವಿನೋದ ಕಾಲಕ್ಷೇಪವಾಯಿತು.

ತಾ. 15ರಂದು ಕಾರ್ಯಕ್ರಮಗಳು ಪುತ್ತೂರಿನಲ್ಲಿ ಅಸಿಸ್ಟಾಂಟ್ ಕಮೀಷನರ್ ಶ್ರೀ ಪಿ ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿದವು. ಛದ್ಮವೇಷ, ಚರ್ಚಾ ಕೂಟಗಳು ಬೆಳಿಗ್ಗೆ ನಡೆದು ಸುಧ್ಯಾಹ್ನ ವಿವಿಧ ವಿಷಯಗಳಲ್ಲಿ ಉಪನ್ಯಾಸಗಳಾದುವು. ಬಳಿಕ ನಿರ್ಣಯಗಳಾಯಿತು.

ಕಬ್ರಿ ಶೀತಾನದಿಯಲ್ಲಿ ತಾ. 30ರಿಂದ 12ರ ತನಕ ಜರುಗಿದ ಜಾನುವಾರು ಸಂತೆಯಲ್ಲಿ ಉತ್ತಮ ಜಾನುವಾರುಗಳನ್ನು ಪ್ರದರ್ಶಿಸಿದವರಿಗೆ ಬಹುಮಾನಗಳನ್ನು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರು ನೆರವೇರಿಸಿದರು ಸ್ವಾಗತಸಮಿತಿ ಅಧ್ಯಕ್ಷ ಶ್ರೀ ಹೆಬ್ರಿ ಭುಜಂಗ ಬಲ್ಲಾಳರು ಸ್ವಾಗತ ಭಾಷಣಗೈದರು. ಜಿಲ್ಲಾ ಪಶುವೈದ್ಯಾಧಿಕಾರಿ ಶ್ರೀ ಸದಾಶಿವ ಭಟ್ಟರು ಪಶುವೈದ್ಯ ಇಲಾಖೆಯ ಪ್ರಯೋಜನಗಳನ್ನು ವಿವರಿಸಿದರು. ಶ್ರೀ ಹೊರಬಾಳಯ್ಯನವರು ಮಾತನಾಡುತ್ತಾ, ಗ್ರಾಮಗಳಲ್ಲಿ ಆಗತಕ್ಕ ಕೆಲಸಗಳಿಗೆ ಊರವರೇ ಸಂಘಶಕ್ತಿಯಿಂದ ಧನ ಸಂಗ್ರಹಿಸಬೇಕೆಂದು ಕಲಹೆಕೊಟ್ಟರು. ಹೆಬ್ರಿ ಹೈಸ್ಕೂಲಿನ ಹೊಸ ಕಟ್ಟಡ ನಿರ್ಮಾಣಕ್ಕನ್ನು ಸರಕಾರದ ಸಹಾಯ ಇಲ್ಲದೇನೇ ಊರವರೇ ಸಂಪೂರ್ಣಗೊಳಿಸಿ ಇದೇ ಜಿಲ್ಲೆಗೇನೆ ಮೇಲ್ಪಂಕ್ತಿ ಹಾಕಬೇಕೆಂದು ಆಶಿಸಿದರು. ಶ್ರೀ ಪಿ. ಸಂಜೀವ ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಮೇಲಂಪಾಡಿ—ತಾ. 15ರಂದು 'ಶಿವ ಸಂಜಾತೆ' ಎಂಬ ಪ್ರಸಂಗದ ಯಕ್ಷಗಾನ ಕೂಟವು ಶ್ರೀ ಡಿ. ಮಹಾಲಿಂಗ ಪಾಕಾಳಿಗಳ ವ್ಯವಸ್ಥಾಪಕತ್ವದಲ್ಲಿ ಶ್ರೀಗಳಾದ ಕೀ. ನ. ಕೇಶವ ವರ ಪಾಡುಗಾರಿಕೆ, ಬಿ. ಅಣ್ಣಯ್ಯ ಗಾಡರ ಮೃದಂಗ ವಾದನ, ಟಿ. ಕೆ. ಪರಮೇಶ್ವರ, ಬಿ. ವಿ. ವಿನೋದ ಎಮ್. ನಾರಾಯಣ ರೈ ಎಮ್. ಎಸ್. ಗೌಡ ಮೊದಲಾದವರ ಅರ್ಥ ವಿವರಣೆಯೊಂದಿಗೆ ಯಶಸ್ವಿಯಾಗಿ ಜರಗಿತು. ಬಪ್ಪಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ನುಂದಿರದಲ್ಲಿ ತಾ 1ರಂದು ದಾನಶೂರ ಕರ್ಣ ಪ್ರಸಂಗದ ಯಕ್ಷಗಾನ ಕೂಟವು ಶ್ರೀ ಕೀರಿಕ್ಕಾಡು ಮಾಸ್ಟರ್ ಎಸ್ಟ್ರೊ ಭಟ್, ಶ್ರೀ ಅಂತು ಗೈ ಮೊದಲಾದವರ ನಾಯಕತ್ವದಲ್ಲಿ ಸಾಂಗವಾಯಿತು.

ಲೆಂಬಾಪುರ—ಶ್ರೀ ನೈಲಾಡಿ ಶೀನಪ್ಪ ಸೆಟ್ಟರ ಆಳಿಯ ಶ್ರೀ ಎನ್. ವಂಜಿಯಯ್ಯ ಸೆಟ್ಟಿ, ಇಡೆಕ್ಟ್ರಿಕಲ್ ಎಂಜಿನಿಯರ್, ಅವರು ಈಚೆಗೆ ಉಚ್ಚೆ ತರಬೇತಿ ಪಡೆಯಲು ಅಮೇರಿಕಕ್ಕೆ ತೆರಳಿರುವರು. ಶ್ರೀ. ಸೆಟ್ಟರು ಫೋರ್ಡ್ ಫೌಂಡೇಶನ್ ಅಭ್ಯಾಸ ವೇತನದಿಂದ ಭಾರತ ಸರಕಾರದ ಆಶ್ರಯದಲ್ಲಿ ಪಿರಿಸ್ಸಾದ ರೂರ್ಕೆಲಾ ಉಕ್ಕಿನ ಕಾರ್ಖಾನೆಯ ಪರವಾಗಿ ಉಚ್ಚ ತರಬೇತಿ ಪಡೆಯಲು ತೆರಳಿದುದಾಗಿದೆ. ಅವರು ಅಮೇರಿಕದ ಪೆನ್ಸಿಲ್ವೇನಿಯಾ ಕ್ಲೀವ್‌ಲೆಂಡ್‌ನಲ್ಲಿರುವ ಕೇಸ್ ಟೆಕ್ನಿಲ್ ಇನ್ಸ್‌ಟಿಟ್ಯೂಟಿನ ರಿಪಬ್ಲಿಕ್ ಸ್ಟೀಲ್ ಕಾರ್ಪೋರೇಶನ್‌ನಲ್ಲಿ ಉಚ್ಚ ತರಬೇತಿ ಪಡೆಯಲಿರುವರು.

ಸುರತ್ಕಲ್—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 20ರಂದು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಬೀಳ್ಕೊಡುವ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಸ್. ವಾಸುದೇವರಾಯರು ರಾಷ್ಟ್ರಧ್ವಜವನ್ನು ಆರೋಹಿಸಿದರು. ಸಂಜೆಯಲ್ಲಿ ವರ್ಣವಿಭಾಜನವಾದ ಬಳಿಕ ಶ್ರೀ ಪಿ. ವಿ. ಖಾತರವರು ಶಾಲಾ ಸ್ವಸ್ತಿ ವಾಚನ ಮಾಡಿದರು.

ತಾ 22ರಂದು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಜಿಲ್ಲಾ ದಿಸ್ಟ್ರಿಟ್ ಕಮಿಷನರರ ಪರ್ಸನಲ್ ಅಸಿಸ್ಟಾಂಟ್ ಶ್ರೀ ಬಿ. ಎಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ಎಸ್. ಭಂಡಾರಿಕರರು ಸ್ವಾಗತ ಮಾತುಗಳನ್ನಾಡಿದರು ಕಾರ್ಯದರ್ಶಿ ಶ್ರೀ ಎಚ್. ಸೀತಾರಾಮ ಮಾಣಿಯರ್‌ರು ವಾರ್ಷಿಕ ವರದಿಯನ್ನೊಪ್ಪಿಸಿದರು. ಅಧ್ಯಕ್ಷ ಭಾಷಣ ನಂತ್ತರ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಮೂಡಬಿದ್ರೆ—ಸ್ಥಳೀಯ ಜೈನ ಪ್ರೌಢ ಶಾಲೆಯ ವರ್ಧಂತ್ಯುತ್ಸವವು ತಾ. 20ರಂದು ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಡೆ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎ. ನೇಮಪ್ಪ ಪೈಗಳು ವರದಿಯನ್ನೊಪ್ಪಿಸಿದರು. ಡಾ. ಎಮ್. ರಾಮಭಟ್ಟರು ಸ್ವಸ್ತಿವಾಚನ ನುಡಿದರು. ಅಧ್ಯಕ್ಷರು ಶಾಲೆಯ ಪ್ರಗತಿ ಬಗ್ಗೆ ಸಂತೃಪ್ತಿ ವ್ಯಕ್ತಪಡಿಸಿದರು ಶ್ರೀಮತಿ ರತ್ನವರ್ಮ ಹೆಗ್ಡೆಯವರು ಬಹುಮಾನ ವಿತರಣೆ ಮಾಡಿದರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಶೃಂಗೇರಿ–ಸ್ಥಳೀಯ ಮಂಡಲ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿ ಸದಸ್ಯನ ಚುನಾವಣೆಯು ತಾ 15ರಂದೆ ಜರುಗಿದ್ದು ಎಸ್. ಬಿ. ಎಸ್. ಹೆಗ್ಡೆ (ಅಧ್ಯಕ್ಷ), ಶ್ರೀಗಳಾದ ಬಿ. ಎಮ್. ಸುಬ್ಬಣ್ಣ ಗೌಡ (ಕಾರ್ಯದರ್ಶಿ), ಕೆ. ಎಮ್. ಕಳಸಪ್ಪ ನಾಯರ್ (ಕೋಶಾಧಿಕಾರಿ), ಎಸ್. ಕೆ. ಮಹಾಬಲೇಷ್, ಕೆ. ಆರ್ ಶ್ರೀನಿವಾಸ ಹೆಗ್ಡೆ (ಇತರ ಸದಸ್ಯರು) ಆವಿರೋಧವಾಗಿ ಆಯ್ಕೆಯಾಗಲ್ಪಟ್ಟರು.

ನೇತ್ರಚಿಕಿತ್ಸಾ ವಾಹನ

ಜೆಳಗಾಂವ ನೇತ್ರಚಿಕಿತ್ಸಾ ಸರಕಾರೀ ವಾಹನವೊಂದು ನುಂದಿನ ತಿಂಗಳಲ್ಲಿ ದ. ಕ. ಜಿಲ್ಲೆಯಲ್ಲಿ ಸಂಚರಿಸಲಿದೆ. ಬಡವರಿಗೆ ಧರ್ಮಾರ್ಥ ಸರಕ್ಷೆ ಮತ್ತು ಚಿಕಿತ್ಸಾ ವ್ಯವಸ್ಥೆಯನ್ನಿಟ್ಟುಕೊಂಡಿರುವ ಈ ವಾಹನಸಂಚಾರದ ಸದುಪಯೋಗವನ್ನು ಜನರು ಪಡೆಯಬೇಕೆಂದು ಜಿಲ್ಲಾ ಡಿಸ್ಟ್ರಿಟ್ ಕಮಿಷನರು ತಿಳಿಸುತ್ತಾರೆ.

ಸಂಚಾರ ಕಾರ್ಯಕ್ರಮದ ವಿವರ:

	ತಾರೀಕು	ಸಮಯ	ಸ್ಥಳ
ಪರೀಕ್ಷೆ	13–1–58	ಸಂಜೆ 2ರಿಂದ 5	ಎಲ್. ಎಸ್. ದಿಸ್ಪೆನ್ಸರಿ, ಸುರತ್ಕಲ್
	14–1–58	,,	,, ಬಂಟ್ವಾಳ
	15–1–58	10ರಿಂದ 5	ವೆನ್‌ಲೊಕ್ ಆಸ್ಪತ್ರೆ, ಮಂಗಳೂರು
	16–1–58	2ರಿಂದ 5	ಎಲ್. ಎಫ್. ಆಸ್ಪತ್ರೆ, ಸುಳ್ಯ
	17–1–58	,,	ಸರಕಾರೀ ಆಸ್ಪತ್ರೆ, ಕಾರ್ಕಳ
ಶಸ್ತ್ರಚಿಕಿತ್ಸೆಯ ಬಗ್ಗೆ ಸೂಚನೆ:			
	18–1–58 ಮತ್ತು 19–1–58	ಬೆಳಿಗ್ಗೆ 9ರಿಂದ 1 ಸಂಜೆ 3ರಿಂದ 6	ಎಲ್. ಎಫ್. ಆಸ್ಪತ್ರೆ, ಮೂಡುಬಿದ್ರೆ
ಶಸ್ತ್ರಚಿಕಿತ್ಸೆ:			
	20–1–58	9ರಿಂದ ,,	,,
	22–1–58	,,	,,
ಶಸ್ತ್ರಚಿಕಿತ್ಸೆಯ ನಂತರ ಶುಶ್ರೂಷೆ:			
	23–1–58	9ರಿಂದ ,,	,,
	27–1–58	ತನಕ ,,	,,

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಲೋಹವಿಜ್ಞಾನ ಪ್ರಯೋಗಶಾಲೆ
(೩ನೇ ಪುಟದಿಂದ)

ಸತು ಮತ್ತು ನಿಕ್ಕಲ್ ಲೋಹಗಳನ್ನು ಈಗ ಹೊರ ದೇಶಗಳಿಂದ ರಫ್ತು ಮಾಡಿಕೊಳ್ಳಲಾಗುತ್ತಿದೆ. ಅವುಗಳ ಬಳಕೆಯನ್ನು ಕಡಿಮೆ ಮಾಡುವುದಕ್ಕಾಗಿ ಪ್ರಯೋಗ ಶಾಲೆಯು ಅವುಗಳ ಸ್ಥಾನದಲ್ಲಿ ಉಪಯೋಗಿಸಲಾಗುವಂತಹ ಮಿಶ್ರಲೋಹವನ್ನು ತಯಾರಿಸುವ ಪ್ರಯೋಗದಲ್ಲಿ ಯಶಸ್ವಿಯಾಗಿದೆ.

ಉದಾಹರಣೆಗೆ ಭಾರತದಲ್ಲಿ ಪ್ರಥಮ ಚಿ ನಿಕ್ಕಲ್ ಬದಲು ಮ್ಯಾಂಗನೀಸಿನ ಮಿಶ್ರವಾದ 'ಸ್ಟೈನ್‌ಲೆಸ್' ಸ್ಟೀಲನ್ನು ಈ ಪ್ರಯೋಗಶಾಲೆಯು ತಯಾರಿಸಿತು. ಈಗ ವಿದೇಶಗಳಿಂದ ಪ್ರತಿವರ್ಷ ೭ ಕೋಟಿ ರೂ.ಗಳ ವೆಚ್ಚದಲ್ಲಿ ಆಮದು ಮಾಡಿಕೊಳ್ಳುತ್ತಿರುವ ೬,೦೦೦ ಟನ್ನುಗಳಷ್ಟು ಸ್ಟೈನ್‌ಲೆಸ್ ಸ್ಟೀಲಿನ ಸ್ಥಾನವನ್ನು ಅದು ಆಕ್ರಮಿಸುವುದು. ಯೋಜನೆಯ ಅವಧಿಯಲ್ಲಿ ಸ್ಟೈನ್‌ಲೆಸ್ ಸ್ಟೀಲಿನ ಬೇಡಿಕೆಯು ೮೦೦೦ ಟನ್ನುಗಳಿಗೆ ಏರುವ ನಿರೀಕ್ಷೆಯಿರುವುದು

ಉಕ್ಕಿನ ಮುಲಂಮಿಗಾಗಿ ಸತುವನ್ನು ಉಪಯೋಗಿಸಲಾಗುತ್ತಿದೆ. ಆದರೆ ಅಲ್ಯೂಮಿನಿಯಂ ಉಕ್ಕು ಇದಕ್ಕಿಂತ ಉತ್ತಮವಾದುದೆಂದು ಪ್ರಯೋಗಗಳಿಂದ ತಿಳಿದುಬಂದಿದೆ ಈ ಮಿಶ್ರಲೋಹವನ್ನು ತಯಾರಿಸುವ ವಿಧಾನವನ್ನು ಈ ಪ್ರಯೋಗ ಶಾಲೆಯಲ್ಲಿ ಸಿದ್ಧಗೊಳಿಸಲಾಗಿದೆ ಆ ಬಗೆಗೆ ಒಂದು ಪ್ರಾಯೋಗಿಕ ಕೇಂದ್ರವೂ ಆರಂಭವಾಗಲಿದೆ

'ಫಿಷ್ಕಾಕ್ಟರಿ'ಗಳ ವಿಷಯದಲ್ಲಿಯೂ ಈ ಪ್ರಯೋಗ ಶಾಲೆಯು ಗಮನಾರ್ಹವಾದ ಕೆಲಸವನ್ನು ನಡೆಸಿದೆ.

ಲೋಹಗಳನ್ನು ಸುತ್ತು ಮಿಶ್ರ ಲೋಹಗಳನ್ನು ಕರಗಿಸುವುದಕ್ಕೆ ೭೦೦ ಟನ್ ಗಳ ಇಂಗಾಲ ಮತ್ತು ಗ್ರಾಫೈಟ್ ಮೂಸೆಗಳನ್ನು ಇಂಗ್ಲೆಂಡ್ ಮತ್ತು ಜರ್ಮನಿಗಳಿಂದ ತರಿಸಿಕೊಳ್ಳುತ್ತಿದ್ದಾರೆ ಇವುಗಳ ಬೆಲೆಯು ೧೧ ಲಕ್ಷ ರೂ ಗಳಿಗೂ ಹೆಚ್ಚಾಗುವುದು. ಇವುಗಳನ್ನು ಸ್ವದೇಶದಲ್ಲಿಯೇ ತಯಾರಿಸಲು ಈ ಪ್ರಯೋಗ ಶಾಲೆಯು ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

ಕುಲುಮೆ ಕೈಗಾರಿಕೆಯು ತೀವ್ರವಾಗಿ ಬೆಳೆಯುತ್ತಿರುವುದರಿಂದ, ದೀರ್ಘ ಕಾಲಾವಧಿಯ ಯೋಜನೆಯೊಂದನ್ನು ಭಾರತದಲ್ಲಿ ಆರಂಭಿಸಲಾಗಿದೆ. ಇದಕ್ಕೆ ಅಗತ್ಯವಾದ ತಂತ್ರ ಆಂಗಗಳನ್ನು ಈ ಪ್ರಯೋಗ ಶಾಲೆಯು ಒದಗಿಸಿದೆ

ಈ ಪ್ರಯೋಗ ಶಾಲೆಯಲ್ಲಿ ನಡೆಸಿದ ಪ್ರಯೋಗಗಳ ಫಲಿತಾಂಶವನ್ನು ಕೈಗಾರಿಕೆಗಳಿಗೆ ತಿಳಿಸಲು, ಆಗಾಗ್ಗೆ ವಿಚಾರ ಗೋಷ್ಠಿಗಳನ್ನು ನಡೆಸಲಾಗಿದೆ. "ಕುಲುಮೆಯ ತಂತ್ರದ (ಫೌಂಡ್ರಿ ಟೆಕ್ನಾಲಜಿ) ಇತ್ತೀಚಿನ ಅಭಿವೃದ್ಧಿಗಳು"– ಎಂಬ ವಿಚಾರ ಗೋಷ್ಠಿಯನ್ನು ಮುಂದಿನ ಫೆಬ್ರುವರಿ ತಿಂಗಳಲ್ಲಿ ನಡೆಸಲು ಈಗ ಸಿದ್ಧತೆಗಳಾಗುತ್ತಿವೆ.

೧೯೫೭ ಆಗಸ್ಟ್ ತಿಂಗಳ ವರೆಗೆ ೧೯ ಸಂಶೋಧನಾ ಪ್ರಕಟಣೆಗಳನ್ನು ಪ್ರಕಟಿಸಲಾಗಿದೆ. ಅವು ಈ ಪ್ರಯೋಗ ಶಾಲೆಯಲ್ಲಿ ನಡೆದ ಸಂಶೋಧನಾ ಚಟುವಟಿಕೆಗಳ ಅಂದಾಜನ್ನು ತಿಳಿಸುವುದು.

ಮಂಗಳೂರು

ಜಿಲ್ಲಾಧಿಕಾರಿಗಳೊಡನೆ ಕಾರ್ಮಿಕ ಮಂತ್ರಿ ಶ್ರೀ ಬಾಳಿಗರ ವಿಚಾರ ವಿನಿಮಯ

—ತಾ ೧೭ರಂದು ಮೈಸೂರು ಸರಕಾರದ ಕಾರ್ಮಿಕ ಮಂತ್ರಿ ಶ್ರೀ ಬಿ. ವೈ. ಕುಂರ ಬಾಳಿಗರು ಜಿಲ್ಲೆಯಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಕುರಿತು ಜಿಲ್ಲಾಧಿಕಾರಿಗಳೊಡನೆ ೩ರೆತ್ತಿನ ಪದಾಧಿಗಳ ಕುರಿತು ವಿಚಾರ ವಿನಿಮಯ ನಡೆಸಿದರು ದ ಕ ಜಿಲ್ಲೆಯಲ್ಲಿ ಸದಾಕಾಲ ನೀರು ಹರಿಯುವ ನದಿಗಳು ತುಂಬಾ ಇವೆ. ಅವುಗಳಿಗೆ ಪಂಪು ಸೆಟ್ಟುಗಳನ್ನು ಇರಿಸಿ ಅವುಗಳ ಮೂಲಕ ಕೃಷಿಯೋಗ್ಯವಲ್ಲದ ಸ್ಥಳಗಳನ್ನು ಕೃಷಿ ಯೋಗ್ಯವಾಗುವಂತೆಯೂ, ಒಂದು ಬೆಳೆ ಬೆಳೆಸುವ ಜಮೀನಿನಲ್ಲಿ ಎರಡನೆ ಮತ್ತು ಮೂರನೆ ಬೆಳೆ ಬೆಳೆಸಿ ಆಹಾರ ಧಾನ್ಯಗಳನ್ನು ಜಾಸ್ತಿ ಮಾಡಬಹುದಾಗಿದೆ ವಿದ್ಯುಚ್ಛಕ್ತಿಯ ಸೌಕರ್ಯ ಪಡೆದು ಪಂಪು ಸೆಟ್ಟುಗಳ ಮೂಲಕ ಗದ್ದೆಗಳಿಗೆ ನೀರನ್ನು ಒದಗಿಸಬಹುದು ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಬೇಕೆಂದು ಮಂತ್ರಿಗಳು ಹೇಳಿದರು.

ದ ಕ ಜಿಲ್ಲೆಗೆ ಮುಂದಿನ ಆರ್ಥಿಕ ವರ್ಷದಲ್ಲಿ ೧೪ ಪಂಪು ಸೆಟ್ಟುಗಳನ್ನು ನೀಡಲಾಗುವುದು ಮಾಡಲಾಗಿದೆಯೆಂದು ಮೈಸೂರಿನ ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್ ಶ್ರೀ ಜಿ ಎಲ್ ಡಿಸಾರವರು ತಿಳಿಸಿದರು. ಮೈಸೂರು ರಾಜ್ಯದ ಇಲೆಕ್ಟ್ರಿಸಿಟಿ ಬೋರ್ಡಿನ ಅಧ್ಯಕ್ಷ ಶ್ರೀ ಗುರುದತ್ತರವರು ಮಾತನಾಡುತ್ತಾ, ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಆಗತ್ಯವಿರುವ ಸಮಯದಲ್ಲಿ ರೈತರಿಗೆ ವಿದ್ಯುಚ್ಛಕ್ತಿಯೊದಗಿಸಲು ಅನುಕೂಲವಾಗುವುದರಿಂದ ರೈತರು ಈ ಸಮಯದಲ್ಲಿ ಅದನ್ನು ಪಡೆಯಬೇಕೆಂದು ಕೇಳಿ ಕೊಂಡರು ಕಾರ್ಕಳದ ಶ್ರೀ ಕೆ ಪಿ ಮುಂಕುಂದ ಪ್ರಭುಗಳು ಪ್ರತಿ ಗ್ರಾಮದಲ್ಲಾ ಸಂಧಾರಿತ ಬೀಜಗಳನ್ನೊದಗಿಸುವ ಕೇಂದ್ರವನ್ನು ಸ್ಥಾಪಿಸಬೇಕೆಂದರು ಸುತ್ತೂರು ಆಸಿಸ್ಟಾಂಟ್ ಕಮಿಶನರ್ ಶ್ರೀ ಪಿ ಎಸ್ ತಿಮ್ಮಪ್ಪ ಸಟ್ಟಿ, ಕುಂದಾಪುರದ ಅಸಿಸ್ಟಾಂಟ್ ಕಮಿಶನರ್ ಶ್ರೀ ಕೆ ಎಲ್ ಸೂರ್ಯನಾರಾಯಣ ರಾವ್, ಶ್ರೀ ಎಸ್ ಎಮ್ ಆಧ್ಯಕ್ಷತೆಯ ಮೊದಲಾದವರು ತಂತಮ್ಮ ಸಲಹೆಗಳನ್ನು ಸಲ್ಲಿಸಿದರು ಜಿಲ್ಲಾ ಡಿಪ್ಯುಟಿ ಕಮಿಶನರ್ ಶ್ರೀ ವೈ ಸಿ ಜೋಶಿಯವರು ಮೊದಲಾದವರು ವಿಚಾರ ವಿನಿಮಯದಲ್ಲಿ ಭಾಗ ವಹಿಸಿದ್ದರು

ಕುಷ್ಠ ರೋಗ ನಿವಾರಣಾ ಚೆಳೆ ವಳಿ ಉದ್ಘಾಟನೆ—ಮಂತ್ರಿ ಶ್ರೀ ಬಾಳಿಗರು ಹಿಂದ್ ಕುಷ್ಠ ನಿವಾರಣಾ ಸಂಘದ ಲಕ್ಷ್ಯವಿದ್ದಲ್ಲಿ ಕುಷ್ಠ ರೋಗ ನಿವಾರಣಾ ಚಳವಳಿಯನ್ನು ಉದ್ಘಾಟಿಸುತ್ತಾ, ಸ್ವತಂತ್ರ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಈ ಚಳವಳದಲ್ಲಿ ಭಾಗವಹಿಸಿ ಕುಷ್ಠ ರೋಗವನ್ನು ಹೋಗಲಾಡಿಸಲು ಪ್ರಯತ್ನಿಸಬೇಕೆಂದರು

ಬೆಂಗಳೂರು ಕಾರ್ಪೊರೇಶನ್ನಿನ ಮೇಯರ್ ಶ್ರೀ ಜೇಸಪ್ಪಯ್ಯ ಜೇವಿಯಾರವರು ಸಭಾಧ್ಯಕ್ಷತೆ ವಹಿಸಿದ್ದರು ಡಾ| ಕೆ ನಾಗಪ್ಪ ಆಳ್ವ, ಎಮ್. ಎಲ್. ಎ ರವರು ಸ್ವಾಗತ ಭಾಷಣ ಮಾಡಿದರು ಜಿಲ್ಲಾ ಹಿಂದ್ ಕುಷ್ಠ ನಿವಾರಣಾ ಸಂಘದ ಅಧ್ಯಕ್ಷ ಶ್ರೀ ವೈ ಸಿ ಹೊಂಬಾಳಯ್ಯ ಮತ್ತು ಜಿಲ್ಲಾ ಜೋರ್ಡು ಅಧ್ಯಕ್ಷ ಶ್ರೀ ಪಿ ಸುಂದರಯ್ಯ ಹೆಗ್ಡೆಯವರು ಕಾಲೋಚಿತ ಮಾತುಗಳನ್ನಾಡಿದರು ಸಂಘದ ಕಾರ್ಯದರ್ಶಿ ಡಾ| ಎ ಎಸ್ ಕೊಯಿಲೋರೆವರು ಕಳದ ಐದು ವರ್ಷಗಳಲ್ಲಿ ಸಂಘವು ಮಾಡಿದ ಕಾರ್ಯಗಳನ್ನು ವಿವರಿಸಿದರು, ಶ್ರೀ ರವೀಶ ಪೈಗಳು ಧನ್ಯವಾದವಿತ್ತರು

ಕೈಲ ಚಿತ್ರ ಅನಾವರಣ—ಸ್ಥಳೀಯ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ

ತಾ ೧೬ರಂದು ಮಹಿಳೆಯರ ರಾಷ್ಟ್ರೀಯ ವಿದ್ಯಾಸಂಘದ ಅಧ್ಯಕ್ಷ ಡಾ| ಎಮ್. ಕೇಶವ ಪೈಗಳವರ ಧರ್ಮಪತ್ನಿ ದಿವಂಗತ ಶ್ರೀ ಎತಿ ಸರಸ್ವತಿ ಬಾಯಿಯವರ ತೈಲಚಿತ್ರವನ್ನು ಕಾರ್ಮಿಕ ಮಂತ್ರಿ ಶ್ರೀ ಬಾಳಿಗರು ಉದ್ಘಾಟಿಸುತ್ತಾ, ಡಾ| ಕೇಶವ ಪೈ ದಂಪತಿಗಳ ಸೇವೆಯನ್ನು ಪ್ರಶಂಸಿಸಿದರು ರಜೆಯಲ್ಲಿರುವ ಜಿಲ್ಲಾ ನ್ಯಾಯಾಧೀಶ ಶ್ರೀ ಎಮ್. ಆರ್. ಶಿಳಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಡಾ| ಬಿ ಜಿ ಪ್ರಭುಗಳು ಸ್ವಾಗತಿಸಿದರು ಶ್ರೀ ಎಸ್. ಶ್ರೀನಿವಾಸ ನಾಯ್ಕ ರು ಧನ್ಯವಾದಗಳನ್ನರ್ಪಿಸಿದರು

ಸಾರ್ವಜನಿಕ ಭಾಷಣ

—ತಾ ೧೪ರಂದು ಕಾರ್ಮಿಕ ಸಚಿವ ಶ್ರೀ ಬಾಳಿಗರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಮೈಸೂರು ಸಂಸ್ಥಾನದಲ್ಲಿ ದ ಕ ಜಿಲ್ಲೆಯು ಉತ್ತಮ ಸ್ಥಾನವನ್ನು ಗಳಿಸಿದೆ ಕರಾವಳಿ ಪ್ರದೇಶವೇ ಇಷ್ಟಿದೆ ಮೈಸೂರು ಸಂಸ್ಥಾನಕ್ಕೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿಯೆಯಾದರಿಂದ ನಮ್ಮ ಪ್ರಕಾರ ದೊಂತಕಾಯಿಕು ಎಂದು ಹೇಳಿದರು ಕೇಂದ್ರ ಸೈನಾನಿಲ್ಲಿ ಸಾಧಾರಣ ಐದೂವರೆ ಲಕ್ಷ ರೂಪಾಯಿ ಹೆಚ್ಚಿದಿಂದ ಟೌನ್ ಹಾಲ್ ಕಟ್ಟಿಸುವ ಯೋಜನೆಯಿದೆ ರಾಗಿಯೂ ಅವನು ತಿಳಿಸಿದರು ಕಾಸರಗೋಡಿನ ಭವಿಷ್ಯ, ಆಹಾರ ಉತ್ಪಾದನೆ, ಕಡಲ ಹತ್ತಿಯ ಬೆಳೆ, ವಿದ್ಯುಚ್ಛಕ್ತಿ ವಿಸ್ತರಣೆ ಕಾರ್ಮಿಕರ ಹಿತಚಿಂತನೆ ಮೊದಲಾದ ವಿಷಯ ಗಳನ್ನು ಶ್ರೀ ಬಾಳಿಗರು ವಿವರಿಸಿದರು

ದ. ಕ ಜಿಲ್ಲಾ ಟೀಚರ್ ಯೂನಿಯನ್ ಕಾನ್ಸಲ್ಸು, ಗೇರು ಬೀಜ ನಾಕರರ ಸಂಘ ಗೇರು ಬೀಜ ಶ್ರಮಿಕರ ಸಂಘ ಸಂಸ್ಥೆಗಳ ಕಡೆಯಿಂದ ಮಂತ್ರಿಗಳಿಗೆ ಮನವಿಗಳು ಅರ್ಪಿಸಲಾದುವು ಮಜೂರರ ಸಮಸ್ಯೆಗಳ ಕ್ಷಿಪ್ರವಾಗಿ ಪರಿಹಾರವಾಗುವ ಬಗೆಗೆ ಸರಕಾರವು ಬೇಗನೆ ಕಾರ್ಯಾಚರಣೆಯನ್ನು ಕೈಗೊಳ್ಳುವುದೆಂದು ಶ್ರೀ ಬಾಳಿಗರು ಭರವಸೆಯಿತ್ತರು

ಮಂಗಳೂರು ಸಮಾಜಾವ್ಯಯನ ವರ್ತುಲದಲ್ಲಿ

ತಾ ೧೦ರಂದು ಕೆನರಾ ಬೇಂಕಿಂಗ್ ಸಿಂಡಿಕೇಟಿನ ಮಂಗಳೂರು ಶಾಖೆಯ ವಿಜಂಟರಾದ ಶ್ರೀ ಎಚ್ ಡಿ ಎಸ್ ಶೈಗಳು 'ಯೋಜನೆಗಾಗಿ ಉಳಿತಾಯ' ಎಂಬ ವಿಷಯದಲ್ಲಿ ನೂತನವಾಗಿ ಸ್ಥಾಪಿತವಾದ ಸಮಾಜಾವ್ಯಯನ ವರ್ತುಲದ ಮೊದಲ ಸಭೆಯಲ್ಲಿ ಭಾಷಣ ಮಾಡಿದರು ಜಿಲ್ಲಾ ಹಿಂದ್ ಕುಷ್ಠ ನಿವಾರಣಾ ಸಂಘದ ಅಧ್ಯಕ್ಷ ಶ್ರೀ ವೈ ಸಿ ಹೊಂಬಾಳಯ್ಯ ನುತ್ತು ಜಿಲ್ಲಾ ಜೋರ್ಡು ಅಧ್ಯಕ್ಷ ಶ್ರೀ ಪಿ ಸುಂದರಯ್ಯ ಹೆಗ್ಡೆಯವರು ಕಾಲೋಚಿತ ಮಾತುಗಳನ್ನಾಡಿದರು ಸಂಘದ ಕಾರ್ಯದರ್ಶಿ ಡಾ| ಎ ಎಸ್ ಕೊಯಿಲೋರೆವರು ಕಳದ ಐದು ವರ್ಷಗಳಲ್ಲಿ ಸಂಘವು ಮಾಡಿದ ಕಾರ್ಯಗಳನ್ನು ವಿವರಿಸಿದರು, ಶ್ರೀ ರವೀಶ ಪೈಗಳು ಧನ್ಯವಾದವಿತ್ತರು

ಶ್ರೀ ಟಿ ಎ ಪೈಗಳಿಗೆ ವಿದೇಶ ಪ್ರವಾಸಾನುಭವ—ಸ್ಥಳೀಯ ರೋಟರಿ ಕ್ಲಬ್ಬಿನ ಸಭೆಯು ತಾ. ೧೪ರಲ್ಲಿ ಅಧ್ಯಕ್ಷ ಶ್ರೀ ಪಿ ಎಸ್ ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು ವಿದೇಶ ಸಂಚಾರ ಮುಗಿಸಿ ಈಚೆಗೆ ಹಿಂತಿರುಗಿದ ಉಡುಪಿಯ ಶ್ರೀ. ಟಿ ಎ ಪೈಗಳು ತಮ್ಮ ಸಂಚಾರದ ಅನುಭವಗಳನ್ನು ವಿವಿಧ ದೃಷ್ಟಿಕೋನದಿಂದ ವಿವರಿಸಿದರು ಶ್ರೀ ಕೆ. ಪಿ ಕಸ್ತೂರಿಯವರು ವಂದನೆಗಳನ್ನರ್ಪಿಸಿದರು.

ಮದ್ರಾಸು ಬಿ ಎಲ್ ಪರೀಕ್ಷೆಯಲ್ಲಿ

–ಕಳದ ಸರ್ವಂಬರ ತಿಂಗಳಲ್ಲಿ ಜರುಗಿದ ಮದ್ರಾಸು ಲಾ ಕಾಲೇಜಿನ ಬಿ ಎಲ್ ಪರೀಕ್ಷೆಯಲ್ಲಿ ಫೆಸ್ಟ್ ಕ್ಲಾಸ್ ಪಾಸಾದವರು ಯಾರೂ ಇದ್ದಿಲ್ಲ ದ ಕ ಜಿಲ್ಲೆಯ ಕಲ್ಯಾಡಿ ರಘುನಾಥ ರೈಗಳ ಪುತ್ರ ಶ್ರೀ ಎಸ್ ಶಿವರಾಜ ರೈಗಳೊಬ್ಬರೇ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗಿದ್ದಾರೆ.

ಯುವಕ ಕಾಂಗ್ರೆಸ್ ಸಾಪ್ತಾಹಿಕ ಸಭೆಯು

—ತಾ ೨೨ರಂದು ಶ್ರೀ ಕೆ ಕೆ ಶೆಟ್ಟಿ, ಎಸ್ ಎಲ್ ಸಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಮಂಜಸ್ವ ಉಳಾಲ್, ಎಮ್ ಎಲ್ ಎ, ಅವರು ಸ್ವಾಗತ ವಚನಗಳನ್ನಾಡಿದರು. ಶ್ರೀಗಳಾದ ಎ ಶಂಕರ ಆಳ್ವ, ಎಚ್ ಕೆ ತಿಂಗಳಾಯ, ಎಸ್. ಕೃಷ್ಣಯ್ಯ ಶೆಟ್ಟಿ ಮೊದಲಾದವರು ಮಾತನಾಡಿದರು ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸಿಗರು ತಮ್ಮ ಪೂರ್ವಿನ ಚೆದಲತೆಯನ್ನು ಕಡಿಮೆಮಾಡಿ ಕಾರ್ಯ ತತ್ಪರರಾಗಬೇಕೆಂದರು ಕಾರ್ಯದರ್ಶಿ ಶ್ರೀ ಎಸ್ ಎ ಪಾದರೆಯು ಧನ್ಯವಾದವಿತ್ತರು

ನಾರ್ಷಿ ಕೋತ್ಸವ—

ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವವು ತಾ ೨೭ರಂದೆ. ಡಾ| ಯು ಪಿ ಮುಳ್ಳರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಮೆನೇಜರ್ ಶ್ರೀ ಎಸ್ ಅಣ್ಣಪ್ಪ ಕಾಮತರು ಸ್ವಾಗತಿಸಿದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯು ಶ್ರೀನಿವಾಸ ಕಿಣಿಯರು ಶಾಲಾ ವರದಿಯನ್ನೊದಿಸಿದರು. ಶ್ರೀಮತಿ ಸರಸ್ವತಿ ಬಾಯಿ ಎಳ್ಳರು ಬಹುಮಾನ ವಿತರಣೆಮಾಡಿದರು ಶ್ರೀ ಎಸ್ ರಾಘವೇಂದ್ರ ಪೈಗಳು ಶಾಲಾ ಸ್ವಸ್ತಿವಾಚನ ಮಾಡಿದರು ವಾರ್ಷಿಕೋತ್ಸವದ ಅಂಗವಾಗಿ ನಡೆದ ಪಂದ್ಯಾಟಗಳಲ್ಲಿ ಗೆದ್ದವರಿಗೆ ಶ್ರೀ ವಿ. ಶಂಕರ ಅಳ್ವರು ಬಹುಮಾನ ವಿತರಣೆಮಾಡಿದರು.

ನವೀನ ಕಾದಂಬರಿ! ಇದೀಗ ಪ್ರಕಟವಾಗಿದೆ.

ಮೋಹದ ಮಹಾಜಾಲ

ಅದ್ಭುತ ಸಾಹಸ–ಶೋಧದ ಕಾದಂಬರಿ

ಬರೆದವರು ವೀರಪ್ಪ ಯಂಗಟಿ, ಬಿ ಎ., ಎಲ್‌ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯತೆಗಳ ತಾರತಮ್ಯವೂ, ಕರ್ನಾಟಕ ದುರ್ಮಾರ್ಗರಗಳಲ್ಲಿ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜವ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ನಿವರಿಸಲ್ಪಟ್ಟಿದೆ ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಆದನ್ನು ಓದಲು ಎ೦ರಂಭಿಸಿದರೆ ಪೂರ್ತಿ ಗೊಳಿಸುವ ವರೆಗೆ ಬಿಡುವಂತಿಲ್ಲ

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ: ರೂ 1–12–0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ.ಎ)

ಸಾಮಾನ್ಯ ರೋಗಗಳು
(ಡಾ ಕೆ ಎಲ್ ವಿತ್ತಳ್, ಎಂ ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಒಟ್ಟ ಎಲ್ ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ
ಪ್ರತಿಗಳು ಸಿಗುವ ಸ್ಥಳ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಚರಣದಾಸಿಯು ಅಂತರ್ಯ

(೨ನೇ ಪುಟದಿಂದ)

ನ್ನು ಕಾಣುವಾಗ—ಕೇಳುವಾಗ ನನಗೇ ಮೈ ಜುಮ್ ಎನ್ನುತ್ತದೆ. ಅಂತಹದರಲ್ಲಿ, ನೀವು.....ನನ್ನ ದೇವರು! ನಾನು ಪಡೆದ ಸೌಭಾಗ್ಯ!!

ಆದರೆ....ನಿಮ್ಮೊಡನೆ ಬಾಳ್ವೆ ಬಳಸುವ ಭಾಗ್ಯವನ್ನು ನಾನು ಪಡೆದು ಬಂದಿಲ್ಲ. ನನಗೆ ಅಂಟಿದ ಆಸೆಕಾಲು ರೋಗ, ನಮ್ಮಿಬ್ಬರ ಬಾಳಿನ ಬೆನ್ನುಹತ್ತಿದ ಬೇತಾಳವಾಯಿತು. ಅದನ್ನು ನಿವಾರಿಸಲು ನೀವು ಪಟ್ಟ ಶತ ಪ್ರಯತ್ನವೂ ನೀರ ಮೇಲಣ ಹೋಮವಾಯಿತು. ಅಷ್ಟಾದರೂ ನೀವು ಧೈರ್ಯಗೆಡಲಿಲ್ಲ; ನನ್ನ ನೋಲಣ ಪ್ರೀತಿ ಬತ್ತಲಿಲ್ಲ. ನನ್ನ ಭಾಗ್ಯವೇ? ಅಯ್ಯೋ... ದುಃಖ ಉಕ್ಕಿ ಬರುತ್ತಿದೆ.

ಇದೀಗ ಕೋಗದ ಗತಿಯನ್ನು ಹತೋಟಿಗೆ ತರಲು ಕಾಲನ್ನೇ ಕಡಿಯಬೇಕೆಂದು ಡಾಕ್ಟರರು ಅಭಿಪ್ರಾಯಪಟ್ಟರುತ್ತಾರೆ. ನೀವು ಅದನ್ನು ಸಮ್ಮತಿಸಿ, ನನ್ನಂತಹ ನತದೃಷ್ಟಳ ಸಕಲ ಸೇವೆಗೂ ಸಿದ್ಧರಾಗಿರುವಿರಿ. ನನ್ನನ್ನ ಕುಳ್ಳಿರಿಸಿ ಮೃಷ್ಟಾನ್ನ ಉಣ್ಣಿಸುವ ವ.ನಸ್ಸು ನಿಮ್ಮದು! ಆದರೆ ಪ್ರಕೃತಿಗೆ ನಿರುದ್ಧವಾಗಿ ಆಚರಣೆಯೆಂದೂ ನಡೆಯಬಾರದು. ನಾನು, ಗಂಡನಾದ ನಿಮ್ಮ ಕೈಯಿಂದ ನನ್ನ ಉಪಚಾರ ಸೇವೆಯನ್ನು ಮಾಡಿಸಿಕೊಳ್ಳುವುದು ಸೃಷ್ಟಿಗೆ ತಕ್ಕುದಲ್ಲ. ಹೆಣ್ಣು ಹೆಣ್ಣಾಗಿಯೇ ಇರಬೇಕು; ಗಂಡು ಗಂಡಸಾಗಿಯೇ ಉಳಿಯಬೇಕು. ಹೆಣ್ಣಾಗಿ ಹುಟ್ಟಿದವಳು ತನ್ನ ಗಂಡನನ್ನು ಸೇವೋಪಚಾರಾಂಗಳಿಂದ ತೃಪ್ತಿಗೊಳಿಸಿ ತನ್ನ ಜನ್ಮ ಸಾರ್ಥಕಪಡಿಸಿಕೊಳ್ಳಬೇಕು. ಇದು ನಿಮ್ಮ ಕೈಹಿಡಿದವಳ ಮತ!

ಸ್ವಾಮಿ! ತುಂಬಾ ಬರೆದಿರುವೆ. ತಪ್ಪಿದ್ದರೆ ಕ್ಷಮಿಸಿ. ದಯವಿಟ್ಟು ಈ ಪಾಪಿಯನ್ನು ಮರೆಯಬೇಡಿರಿ. ನಾನು, ನಿಮ್ಮನ್ನು ಬಿಟ್ಟು ಅಗಲಿರಲಾರೆ. ನಿಮ್ಮಂತಹ ಸಾಧ್ವಿಗಳಿಗೆ ನನ್ನಂತಹ ರೋಗಗ್ರಸ್ತಳು 'ಮಡದಿ' ಎಂದೆನಿಸಿಕೊಂಡಿರಬಾರದು ಎಂದು ನಿರ್ಧರಿಸಿ, ಇವೀಗ ದೇವಸ್ಥಾನದ ಕೆರೆಯಲ್ಲಿ ಮುಳುಗಿ, ದೇವರ ಸನ್ನಿಧಾನಕ್ಕೆ ತೆರಳುತ್ತಿರುವೆನು. ನಿಮ್ಮ ದೃಷ್ಟಿಯಲ್ಲಿ ಇದು ತಪ್ಪಾಗಿದ್ದರೆ ನನ್ನನ್ನು ಕ್ಷಮಿಸಿ. ನನ್ನ ಮಟ್ಟಿಗೆ ಇದು ತಪ್ಪಲ್ಲ ಇದಕ್ಕಾಗಿ ನೀವೂ ದುಃಖಿಸಬಾರದು. ನಿಮ್ಮ ಕಣ್ಣಲ್ಲಿ ಒಂದು ತೊಟ್ಟು ಕಣ್ಣೀರು ಬಂದರೆ ನನಗೆ ರೌರವ ನರಕ ಪ್ರಾಪ್ತಿಯಾದೀತು!

ಹೃದಯೇಶ್ವರ, ಈ ಜನ್ಮದಲ್ಲಿ ನಿಮ್ಮನ್ನು ಸಂತೋಷಪಡಿಸಲು ನನಗೆ ಭಾಗ್ಯ ಲಭಿಸಲಿಲ್ಲ. ಮುಂದಿನ ಜನ್ಮದಲ್ಲಾದರೂ ನೀವೇ ನನ್ನ ಪತಿಯಾಗಿ ದೊರೆತು ನನ್ನ ಋಣವನ್ನು ತೀರಿಸಿಕೊಳ್ಳುವಿರಾಗಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ! ನೀವೂ ನನ್ನನ್ನೇ ಬಯಸುವಿರಲ್ಲಾ! ಪುಂಡಿತಾ ನನ್ನನ್ನು ಮರೆಯಬೇಡಿರಿ. ನೀವೇ ನನಗೆ ಮುಂದಿನ ಜನ್ಮದಲ್ಲಿ ಪತಿಯಾಗಿ ದೊರೆಯುವಂತೆ ಪರಮಾತ್ಮನು ಅನುಗ್ರಹಿಸಲಿ.

ನನ್ನ ಮರಣಕ್ಕಾಗಿ ದುಃಖಿಸಬೇಡಿರಿ ಎಂದು ಕಾಲ್ಮುಟ್ಟಿ ಬೇಡಿಕೊಳ್ಳುವ,

ನಿಮ್ಮ ಚರಣದಾಸಿ,

ರತ್ನ.

ಪತ್ರ ಓದಿ ಮುಗಿಸುತ್ತಿದ್ದಂತೆ ಶ್ರೀಕಾಂತ ಬಳಿ ಬಂದು ಎಂಡದೆ ನೆಲೆ ಬಿದ್ದ. ಎಚ್ಚರಗೊಂಡಾಗ ಅಂಗಳದಲ್ಲಿ ಊರ ಪ್ರಮುಖರು ನೆರೆದಿದ್ದರು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ವಿಜಯ ದುಂದುಭಿ-(ಕನಸಿನ ಸಂಕಲನ-ನವರಾತ್ರಿಯ ಪ್ರಯುಕ್ತ) ಸಂಪಾದಕರು: ಶ್ರೀ ಬಿ. ಎ. ಸನದಿ. ಪ್ರಕಾಶಕರು; ಜೀತನ ಪ್ರಕಾಶನ, ಬೆಳಗಾಂವಿ. ಪುಟ ಕ್ರೌನ್ ೧/೮ರ XVI + ೨೪. ಬೆಲೆ. ರೂ. ೦-೧೨-೦.

ಬಹುದಿನಗಳ ಕನಸಿನ ನಾಡಾದ ಕನ್ನಡ ಕಳೆದ ವರ್ಷ ಬಂದಾಗ, ಮೈಸೂರಿಂಚ ನಾವು ಧೀಯದಿಂದ ಹುಟ್ಟಿಕೊಂಡಾಗ, ಆ ದಿನದ ಶುಭ ಸ್ಮರಣೆಗಾಗಿ ಬೆಳಗಾಂವಿಯ ಕನ್ನಡಿಗ ಸೋದರರ ಕವನ ಸಂಕಲನವೊಂದನ್ನು ಪ್ರಕಟಿಸಿ, ಜೀತನ ಪ್ರಕಾಶನವು ಕನ್ನಡದ ವಿಜಯ ದುಂದುಭಿಯನ್ನು ಮೊಳಗಿಸಿದೆ. ಇದರಲ್ಲಿ ಒಟ್ಟು ೪೦ ಕವನಗಳಿದ್ದು, ಕನ್ನಡದ ಗದಿನಾಡಾದ ಬೆಳಗಾಂವಿ ಜಿಲ್ಲೆಯ ಸೋದರರಿಂದಲೇ ಬರೆಯಲ್ಪಟ್ಟವೆ. ಕೆಲವಾರು ಶತಮಾನಗಳಿಂದ ಅನ್ಯರ ಪಾದಧೂಳಿಯಿಸಲ್ಪಡಿದ್ದ ಕನ್ನಡ ತಾಯಿಯು ತನ್ನ ಬನ್ನ ಬಸವಳಿಕೆಗಳ ಸ್ಮೃತ್ಯರ್ಜಿಸಿ ತನ್ನ ಕುಸುರಲ್ಲಿರನ್ನೂ ಒಂದಾಗಿ ಕೂಡಿ ಬಾಳಲು ಬಂದ ವಾತೆಗೆ ಸ್ವಾಗತ ನನ್ನು ಬಯಸುವ ಎಂಟು ಕವನಗಳು, ಏಕೀಕರಣದ ಶುಭೋದಯದ ಶುಭಾಕಾಂಕ್ಷೆಯ ಏಳು ಪದಗಳು, ಹಿಂದೆ ಪಟ್ಟಪಾಡುಗಳನ್ನು, ಅನುಭವಿಸಿದ ಸುಖ ದುಃಖಗಳನ್ನು ನಿಂತಾ ನರೋಕಿಸುವ ಒಂಭತ್ತು ಪದಗಳು ಮತ್ತು ಕನ್ನಡದ—ಕನ್ನಡಿಗರ ಭವಿಷ್ಯವನ್ನು ಚಿಂತಿಸುವ ೧೬ ಕವನಗಳು ಈ ಸಂಗ್ರಹದಲ್ಲಿ ಕೂಡಿವೆ. ಎಲ್ಲ ಕವನಗಳೂ ಉತ್ತಮವಾಗಿದ್ದು, ಆಯಾಯ ಸಂದರ್ಭದ ಉಚಿತತೆಯನ್ನು ಎತ್ತಿ ತೋರಿಸುತ್ತವೆ ಕೆಚ್ಚೆದೆಯ ಕಲಿಗಳ ನಾಡಾದ ಕನ್ನಡವು ಇನ್ನಾದರೂ ಒಂದಾಗಿ ಹಿಂದಿನ ಸಂಕೀರ್ಣತೆಯ ಕನಸು ಇಂದು ನನಸಾಗಿದ್ದು, ಇಂದು ಕಾಣುವ ಭವಿಷ್ಯದ ಕನಸು ಮುಂದೆ ನೆನಸಾಗಬೇಕು. ಇಂತಹ ಹಾರೈಕೆಯನ್ನು ಕೊನೆಯ ಭಾಗದ ಕವಿತೆಗಳು ವ್ಯಕ್ತಪಡಿಸುತ್ತವೆ. ಭುಜೇಂದ್ರ ಮಹಿಪ ವಾಡಿಯವರ ಹಿ ತಾಯಿ ಬಂದೆಯೇನು ಎನ್ನುವುದು ಕನ್ನಡದ ಹಿಂದಿನ ಮತ್ತು ಇಂದಿನ ವೈಭವಾವೈಭವಗಳನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. ಒಟ್ಟಿನಲ್ಲಿ ನಿರ್ಧಿಷ್ಟ ಛಂದಸ್ಸಿನಲ್ಲಿ ಬರೆದ ಈ ಸಂಗ್ರಹವು ಸ್ವಾಗತಾರ್ಹವಾದೆ. ಶ್ರೀ. ಎಸ್. ಡಿ. ಇಂಚಲರವರು ಮುನ್ನುಡಿಯನ್ನು ಬರೆದು ಹರಸಿದ್ದಾರೆ. ಈ ಸಂಗ್ರಹವನ್ನು ನವೋದಯದ ಹೊತ್ತಿನಲ್ಲಿ ನಮ್ಮಿಂದ ದೂರ ಸರಿದು ಹೋದ ಕನ್ನಡ ಸೋದರಸೋದರಿಯರಿಗೆ ಅರ್ಪಿಸಲಾಗಿದೆ. ಮಂಗಟಿಯ ಪ್ರತಾಪವು ವಿಶೇಷವಾಗಿರುವ ಬೆಳಗಾಂವಿಯ ಕನ್ನಡ ಪ್ರೇಮಿಗಳ ಈ ಕಾರ್ಯವು ಸ್ತುತ್ಯವಾಗಿದೆ.

ಬಡುಕು ಜಟಕಾ ಬಂಡಿ- ಬರೆದವರು: ರಂಗ. ಪ್ರಕಾಶಕರು: ಕಾಮ್ಯಾಲಯ, ಮೈಸೂರು. ಪುಟಗಳು ೨೪೦. ಬೆಲೆ: ರೂ. ೧-೫೦ (೩.೫೦; ೪.೦೦).

ಕಾದಂಬರಿಗಳು ಕನ್ನಡದಲ್ಲಿ ವಿಪುಲವಾಗಿ ಬೆಳೆದು ಬರುತ್ತಿವೆಯಾದರೂ ಅವುಗಳಲ್ಲಿ ಅತ್ಯುತ್ತಮವಾದುವುಗಳ ಸಂಖ್ಯೆಯನ್ನು ಬೆರಳುಗಳಿಂದೆಣಿಸಬಹುದು. ಅಂತಹ ಕೆಲವೇ ಕಾದಂಬರಿಗಳಲ್ಲಿ ರಂಗರವರ ಬಡುಕು ಜಟಕಾ ಬಂಡಿ ಒಂದೆಂದು ಹಿಂದೇ ಪೂರಿತನಲ್ಲಿ ಹೇಳಬಹುದು.

ತಂದೆಯು ಆನಾರೋಗ್ಯದ ಸುದ್ದಿಯನ್ನು ಕೇಳಿ ಸುನೆಗೆ ಹೊರಟಿ ರಘುವಿಗೆ ಗಾಬರಿಯಲ್ಲಿ ನಾನಾಶಾಪೇಟನ ಪರಿಚಯವಾಯಿತು. ಆತ ನಳಿದ ಮೇಲೆ ಡಾಕಾದ ನಿರಾಶ್ರಿತರಾದ ಶ್ರೀಮಂತ ನಂದಲಾಲ ಚಟ್ಟೋಪಾಧ್ಯಾಯ ಮತ್ತಾತನ ಪ್ರಾಯಕ್ಕೆ ಬಂದ ಕಮಲ ಮತ್ತು ನಿರ್ಮಲರೆಂಬ ಪುಗಳಂದಿರ ಪರಿಚಯ ಬೆಳೆಯು ಸಹಾನುಕಾಪವೂ ಮೈತ್ರಿಯೂ ಹುಟ್ಟಿಕೊಂಡಿತು. ನಾಯಕ ಅವರನ್ನು ಗಲಿ ಮನೆಗೆ ಬಂದಾಗ, ತಂದೆ ತೀರಿಹೋಗಿದ್ದರು. ಮೂವರು ತನ್ನ ಮಗಳು ಸಂಧೆಯನ್ನಾತೆಗೆ ಗಂಟುಹಾಕಬಯಸಿದರೂ ಮುಂದು ಬೆಯುವ ನೆಪದಿಂದ ಮುಂದೈಗೆ ಹಿಂತಿರುಗಿದ. ಆಪರೆ, ಆಲ್ಲಿ ಗೈರುಹಾಜರಿಯು ಕ್ಷಮೆ ದೊರೆಯದ್ದರಿಂದ ಸುಮ್ಮನಿರುವಾಗ, ಕಮಲಳ ಪತ್ರವು ಬಂದುದರಿಂದಾತ ನೇರಾಗಿ ಹುಬ್ಬಳ್ಳಿಗೆ ತೆರಳಬೇಕಾಯಿತು. ಕೆಲಸಮಯಾನಂತರ, ಚಟ್ಟೋಪಾಧ್ಯಾಯರು ಕಮಲಳ ಪೂರ್ವ ನಿರ್ಣೀತವರ ಸತ್ಯೇಂದ್ರನಾಥ ಬಂದಲ್ಲಿ ಬಂದು ದಿನ ಬರುವನೆಂದೂ ಅಪ್ಪವರೆಗೆ ತನ್ನ ಮಗಳಂದಿರಿಬ್ಬರನ್ನು ರಕ್ಷಿಸಬೇಕೆಂದೂ ಹೇಳಿ ಪರಿಂಧಾನಂತರಾದರು. ಅವರಿಬ್ಬರನ್ನು ಸ್ವಂತ ಮನೆಗೆ (ಕುಟುಬಿ) ಕರೆತಂದುದರ ಪರಿಣಾಮವಾಗಿ ಮಾನ-ಪ್ರಾಣಗಳಿಗೆ ಎಲ್ಲರ ದೃಷ್ಟಿಯೂ ಸಕ್ಕರವಾಯಿತು. ರಘುವಿನ ಮನಸ್ಸಿನ ಕಮಲ-ಸುಧೆ; ಸುಧೆ-ಕಮಲ ಎಂದು ಹೊಯ್ದಾಡಿ ಜಟಕಾ ಬಂಡಿಯೂಯಿತು. ಕಮಲೆ ತನ್ನ ಪತಿ ಸತ್ಯೇಂದ್ರನೆಂದು ಬಾಯಿ ಬಿಚ್ಚಿ ಹೇಳಿದರೂ 'ರಘುವಿ'ನ ಮನಸ್ಸು ತಿರಿಯೊಗಲಿಲ್ಲ ನಾನಾ ಕಾಡೇಬನು ಈಗಾಗಲೇ ಇವನೊಂದಿಗೆ ವಾಸಿಸುತ್ತಿದ್ದ— ಎಲ್ಲೊ ಏನೋ ತಿರುಗಾಡಿ ಜೀವನದಲ್ಲಿ ಸೈರಾಗ್ಯ ತಾಳಿದ್ದನಾತ. ಕೊನೆಗೊಂದು ದಿನ ಸತ್ಯೇಂದ್ರ ಬಂದು, ಕಮಲ ನಿರ್ಮಲರನ್ನು ಕರೆದು ಕೊಂಡು ಡಾಕಾಕ್ಕೆ ತೆರಳಿತ.

ಕಾದಂಬರಿ ಯು ದ್ದಕ್ಕೂ ಜೀವನ ಜಟಕಾ ಬಂಡಿಯೆಂಬುದು ಚಿತ್ರಿತವಾಗಿದೆ. ಡಾಕಾದಲ್ಲಿ ಬನ್ನಬಟ್ಟು ಭಾರತಕ್ಕೆ ಬಿಡಿ ಬಂದು, ಬಡುಕಿಯೂ ಸತ್ತಂತೆ ಜೀವಿಸುತ್ತಿದ್ದ ಕಮಲೆಯು ಜೀವನ; ಮಾತಿಗೆ ಕಟ್ಟುಬಿದ್ದ ಊರವರಿಂದ ನಿಂದೆಯನ್ನು ಕೇಳಿ, ತಾನು ಸುಖವಾಗಿರಿಸಲೆತ್ನಿಸಿದ ಕಮಲೆಳನ್ನು ತಾನೇ ಒಲಿದುದರಿಂದ ಜೇಸರ ತಾಳಿದ ರಘು; ರಘುವನ್ನೇ ವರೆಸಾಗಿ ಪಡೆದೆನೆಂಬ ಭಾವನೆಯು ನುಚ್ಚುನೂರಾಗಿ ಹೋಗಿ, ಕೊನೆಗೆ ಸಂತಸ ದಾಳುವಂತಾದ ಸುಧೆ, ಮಾತಿನನುಲ್ಲಿ ನಿರ್ಮಲ ಮುದುಕ ನಾನಾ ಸಾಲೇಜು, ಮಹಿಳಾ ಸಮಾಜದ ಸದಸ್ಯೆಯರು— ಇವರೆಲ್ಲರೂ ತಮ್ಮ ಜೀವನದಲ್ಲಿ ಅನೇಕಾನೇಕ ವಿರುಪೇರುಗಳನ್ನು ಅನುಭವಿಸಿದ್ದಾರೆ. ಜೀವನವು ಹೂವಿನ ಹಾಸುಗೆಯಲ್ಲ. ಮುಳ್ಳಿ ನಹಾಸುಗೆಯೂ ಮುದನ್ನು ಕಂಡುಕೊಂಡಿದ್ದಾರೆ. ಈ ಪಾತ್ರಗಳ ಚಿತ್ರಣ ನೈಪಣಾ ಬಂದಿವೆ. ಆರಂಭದಿಂದ ಕೊನೆಯ ವರೆಗೂ ಒಂದರ ಮೇಲೊಂದು ಆಪೇಕ್ಷಿತ ಘಟನೆ ಸಂಭವಿಸುವಂತೆ ವಿಧಿ ಮಾಡುತ್ತಾನೆ; ಸಹಜವಾಗಿ ಕಥೆ ಮುಂದುವರಿಯುತ್ತದೆ. ಸುಧೆ—ನಾಯಕ ರಘು; ರಘು—ಕಮಲೆ ಮತ್ತು ನಿರ್ಮಲೆಯರ ಸಂಬಂಧ, ಶೃಂಗಾರ ಭಾಗಗಳು ಬಯಳ ಜಾಣ್ಮೆಯಿಂದ ಹೆಣೆದು ಬೆಳೆಸಲಾಗಿದೆ. ಕೇವಲ ವ್ಯಕ್ತ ಶೃಂಗಾರವನ್ನು ಬಳಸುವ ಕಾದಂಬರಿಗಳಿರಬೇಕಾದ ರಲ್ಲಿ ಈ ಕಾದಂಬರಿಯು ಉತ್ಕೃಷ್ಟವಾಗಿದೆ. ಶ್ರೀ ರಂಗರವರು ಇಂತಹ ಹೃದಯಂಗಮ, ಮನನೋಯಕವಾದ ಅನೇಕ ಕಾದಂಬರಿಗಳನ್ನು ಈಯಲು ಸಮರ್ಥರೆಂದು ಅವರ ಈ ಕೃತಿಯಿಂದ ಊಹಿಸಬಹುದು. ಕಮಲೆಯು ತನ್ನ ಪತಿ (?) ಸತ್ಯೇಂದ್ರನೊಂದಿಗೆ ಡಾಕಾಕ್ಕೆ ತೆರಳಲು ಮನೆ ಬಾಗಿಲಿಂದ ದೊರ ಬರುತ್ತಿರುವ ಸನ್ನಿವೇಶದ ಮುಖ ಚಿತ್ರವನ್ನು ಕಲಾಗಾರ ರಮೇಶರು ಉತ್ತಮವಾಗಿ ರೂಪಿಸಿ ಪುಸ್ತಕಕ್ಕೆ ಕಳೆತಂದಿದ್ದಾರೆ.

—ಗೋರಾ

ಸ್ವೀಕಾರ

ಮಂಗಳೂರಿನ ಶಾರದಾ ಪ್ರೆಸ್ಸಿನವರ 1958ನೇ ಕೆಲಂಡರ್ ಮತ್ತು ಪಾಕೆಟ್ ಪೈರಿಯನ್ನು ಉಡುಪಿಯ ಹಿಂದುಸ್ತಾನ್ ವೇರ್ ಎಂಡ್ ಸ್ಟೇಶನರಿ ಮಾರ್ಟಿನ 1958ನೇ ಕೆಲಂಡರನ್ನು ಶ್ರೀ ಎ. ಲಕ್ಷ್ಮೀನಾರಾಯಣ ಆಡಿಗ ಜ್ಯೋತಿಷಿ ಶಿರೋಮಣಿ ಮತ್ತು ವಿದ್ವಾನ್ ಇವರಿಂದ ಗುಣಸಿ ಸಾರಿಶೋಧಿಸ್ಪಟ್ಟು ಉಡುಪಿ ಮೆಜಿಸ್ಟಿಕ್ ಪ್ರೆಸ್ಸಿನಲ್ಲಿ ಮುದ್ರಿತವಾಗಿ ಪ್ರಕಾಶಿಸಲ್ಪಟ್ಟ ವಿಲಂಬಿ ಸಂವತ್ಸರ (1958—'59) ಶ್ರೀ ಕೃಷ್ಣ ಪಂಚಾಂಗವನ್ನು ಅಭ್ಯಾದರದಿಂದ ಸ್ವೀಕರಿಸಿದ್ದೇವೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಮು ಜೀವನಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. ೮/- ದೀರ್ಘಕಾಲದ ಬಾಧೆಗೆ ರೂ. ೫/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಮಿಕರು: ಷಾ ಕಂಪೆನಿ, ಮಂಗಳೂರು—1.

ಉಷಾ

ಹೊಲಿಗೆ ಯಂತ್ರಗಳು



- ಸುಭದ್ರ ಮತ್ತು ಬಲಿಷ್ಠ ರಚನೆ
- ನಮ್ಮ ದೇಶದಲ್ಲಿ ಅತ್ಯಧಿಕ ವಾರಂಟಿ ಪಡೆದ ಯಂತ್ರ

— ಸೋಲ್ ಸೆಲ್ಲಿಂಗ್ ಏಜಂಟರು —

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
ಮದ್ರಾಸು—1

ಕನ್ನಡದ ರಂಗಭೂಮಿ—

ಆಶ್ರಯಹೀನವಾಗಿಯೇ ಬೆಳೆದುಬಂದಿತು

ಕನ್ನಡ ನಾಟಕವು ಕಳೆದ ಶತಮಾನದ ಮಧ್ಯಭಾಗದಿಂದಲೂ ಅನೇಕ ಏರುಪೇರುಗಳನ್ನು ಅನುಭವಿಸಿದೆ. ಗತಿಯಲ್ಲಿ ಸಾಂಪ್ರಯಲ್ಲಿ ಕನ್ನಡ ನಾಟಕಕರ್ತೆಯಂದನ್ನು ಪ್ರದರ್ಶಿಸಿದ್ದರು ಆ ಪ್ರದರ್ಶನವು ಆಧುನಿಕ ಮರಾಠಿ ರಂಗಭೂಮಿಗೆ ಎಡೆಕೊಟ್ಟಿತು ಕೂಡಲೆ ಮರಾಠಿ ರಂಗಭೂಮಿಯು ದಕ್ಷಿಣದ ಕೆಲವು ಮುಖ್ಯಸ್ಥರ ಕೃಪಾಶ್ರಯದಿಂದಲೂ ಕೆಲವು ಆತ್ಯುತ್ಸಾಹಿ ನಾಟಕಕಾರರಿಂದಲೂ ಹಾಗೂ ಕಲಾವಿದರಿಂದಲೂ ಅಶೀರ್ವಾದವನ್ನು ಪಡೆದು ವೈಭವಯುತ ಬೆಳವಣಿಗೆಯ ಕಡೆ ಮುನ್ನಡೆಯಿಟ್ಟಿತು ಉತ್ತರ ಕರ್ನಾಟಕದಲ್ಲಿ ಕನ್ನಡ ರಂಗಭೂಮಿಯು ಸಹ ಇದರ ಮಾರ್ಗದರ್ಶನವನ್ನು ಅನುಸರಿಸಿಬೇಕಾಯಿತು ಮೈಸೂರು ಮತ್ತು ದಕ್ಷಿಣದಲ್ಲಿ ಕನ್ನಡ ರಂಗಭೂಮಿಯು ತೆಲುಗು ರಂಗಭೂಮಿಯ ಮುನ್ನಡೆಯನ್ನು ಹಿಂಬಾಲಿಸುವುದು ಅನಿವಾರ್ಯವಾಗಿ ಪರಿಣಮಿಸಿತು

ಸಾಂಪ್ರದಾಯಿಕ ಕನ್ನಡ ನಾಟಕವು ಈ ಯಾವ ಪ್ರಭಾವಗಳಿಗೂ ಒಳಗಾಗದ ತನ್ನ ಜಭಿದ್ಧಿಯನ್ನು ಸ್ವತಃ ಮುಂದುವರಿಸಿಕೊಂಡಿತು. ಈ ನಾಟಕವು ನೃತ್ಯ ಸಂಗೀತಗಳನ್ನೊಳಗೊಂಡ ಬಯಲುಆಟವಾಗಿದ್ದಿತು ಒಂದು ಕಡೆ ಪೌರಾಣಿಕ ವೀರರ ಕಥೆಗಳನ್ನೂ ಮತ್ತೊಂದುಕಡೆ ಜಾನಪದ ಗೀತಾ ನಾಯಕರ ಕಥೆಗಳನ್ನೂ ಈ ನಾಟಕಗಳು ಪ್ರತಿನಿಧೀಕರಿಸುತಿದ್ದುವು ಆದುದರಿಂದ ಹರ್ತಪ್ರತಿ"ಗಳಿಲ್ಲದಿದ್ದರೂ ಗ್ರಾಮದ ಲಾವಣಿಕಾರನು ಇಲ್ಲವೇ ಚುರುಕು ಬುದ್ಧಿಯ ಕಲಾವಿದರು ಇವನ್ನೊದಗಿಸುತಿದ್ದರು

ಪಟ್ಟಣಗಳಲ್ಲಿ ವಿದ್ಯಾವಂತರ ಜನಸಂಖ್ಯೆಯು ಬೆಳೆಯಲಾರಂಭವಾಗುವಂಗಡಿಗಳಾಗಿ ಹೊಸ ಮಾದರಿಯ ನಾಟಕಗಳು ಜನ್ಮತಾಳಿದವು. ನಾಟಕವನ್ನೇ ಕಸಬನ್ನಾಗಿ ಮಾಡಿಕೊಂಡ ಮಂಡಲಿಗಳು ರಜೆಯನ್ನುಲ್ಲಿ ಹೊಸ ಕ್ರಮವು ವ್ಯವಹಾರದಲ್ಲಿ ಬಂತು ಆದರೆ, ತಂತ್ರಕೌಶಲದಲ್ಲಾಗಲೀ, ರಂಗ ಭೂಮಿಯ ಮೇಲೆ ನಾಟಕವನ್ನು ಎರುವುದರಲ್ಲಿ ಯಾಗಲೀ ಇಂತಹ ಹೊಸ ಕ್ರಮಗಳಿರುತ್ತಿರಲಿಲ್ಲ ಈ ನಾಟಕ ಮಂಡಳಿಗಳವರು ಪ್ರಾಚೀನ ಸಾಂಪ್ರದಾಯಿಕ ವಿಷಯಗಳನ್ನೊಳಗೊಂಡ ನಾಟಕಗಳನ್ನು ಪ್ರದರ್ಶಿಸುತ್ತಲಿದ್ದು ಸಂಗೀತವನ್ನೂ ಸಂಭಾಷಣೆಯನ್ನೂ ರಂಗಭೂಮಿಯಲ್ಲಿ ಸೇರಿಸಿದರು ಪಟ್ಟಣದಿಂದ ಪಟ್ಟಣಕ್ಕೂ ಜಾತ್ರೆಯಿಂದ ಜಾತ್ರೆಗೂ ಪ್ರಯಾಣ ಬೆಳೆಸುತ್ತಿದ್ದರು ಕನ್ನಡ ರಂಗಭೂಮಿಯನ್ನು ಉಳಿಸಿಕೊಂಡು ಬಂದ ಕೀರ್ತಿಯು ಇಂತಹ ಸಣ್ಣ ದೊಡ್ಡ ನಾಟಕ ಮಂಡಲಿಗಳಿಗೆ ಸಲ್ಲಲೇಬೇಕು ಕನ್ನಡ ರಂಗಭೂಮಿಯ ಚರಿತ್ರೆಯ ಇತಿಹಾಸದಲ್ಲಿ ಅನೇಕ ಪ್ರಖ್ಯಾತನಾಮಾವಳಿಗಳನ್ನು ಈ ನಾಟಕ ಮಂಡಲಿಗಳ ಕುಟುಗಳಲ್ಲಿ ಕಾಣಬಹುದು ವರದಾಚಾರ್, ಗುಬ್ಬಿ ವೀರಣ್ಣ ಗರುಡ ಸದಾಶಿವರಾವ್ ಮತ್ತು ಮಾಸ್ತರ್ ವಾಮನ ರಾವ್ ರಂತಹ ಹಿರಿಯರುಗಳು ಇಂದಿಗೂ ಮನೆಮಾತಾಗಿ ಉಳಿದಿದೆ.

ಸುರದೈವದಿಂದ ಕನ್ನಡ ರಂಗಭೂಮಿಗೆ ಹೇಳಿಕೊಳ್ಳುವಂತಹ ಕೃಪಾಶ್ರಯವಿರಲಿಲ್ಲ ಆದು ತನ್ನ ಬದುಕಿಗೆ ಸಂಪೂರ್ಣವಾಗಿ ಸ್ವೋಕ್ಷಕನನ್ನು ಅವಲಂಬಿಸಬೇಕಾಯಿತು ಜನ ಸಾಮಾನ್ಯರ ಅಭಿರುಚಿಗೆ ತಕ್ಕಂತೆ ಹವಣಿಸುವ ಪ್ರಯತ್ನದಲ್ಲಿ ಕೇಳು ಮಟ್ಟಕ್ಕೆ ಅನೇಕ ವೇಳೆ ಇಳಿಯಬೇಕಾಯಿತು ಆಷ್ಟಾದರೂ ಬದಲಾಯಿಸುತ್ತಿರುವ ಅಭಿರುಚಿಗೂ ಪರಿಸ್ಥಿತಿಗೂ ತಕ್ಕಂತೆ ಹೊಂದಿಕೊಳ್ಳುವ ರಂಗ ಭೂಮಿಯ ಪ್ರಯತ್ನವೇ ಅದು ಸದಾಕಾಲವೂ ಎಚ್ಚತ್ತಿದ್ದುದನ್ನು ವ್ಯಕ್ತಪಡಿಸುತ್ತದೆ

ಕಳೆದ ಮೂವತ್ತು ವರ್ಷಗಳಲ್ಲಿ ಹೊಸ ಮಾದರಿಯ ನಾಟಕವು ಕಾಣಿಸಿಕೊಂಡಿತು. ನೃತ್ಯದ ರಂಗ ಭೂಮಿಯ ಆರಂಭವನ್ನಿನ ಪ್ರಯತ್ನಗಳು ಸ್ವಲ್ಪ ಮಟ್ಟಿಗೆ ಇದರ ಮಾರ್ಗದರ್ಶನವನ್ನು ಸರಿಸುಮಾರಿದುವು ಇವನ್ನು ಅನುಕೂಲಕ್ಕನುಗಿ "ಚಲಿವ ಚಾರ್ ರಂಗ ಭೂಮಿ" ಎಂದು ಕರೆಯಬಹುದು. ನವೀನ ಮಾದರಿಯ ನಾಟಕಗಳನ್ನು ಬರೆದು, ಹೊಸ ಆದರ್ಶ ಹಾಗೂ ಧ್ಯೇಯಗಳನ್ನಿಟ್ಟುಗೊಂಡು ರಂಗ ಭೂಮಿಯ ಮೇಲೆ ಅಭಿನಯಿಸುವುದರಲ್ಲಿ ಸ್ಪರ್ಧೆಯನ್ನು ಇವುತಂಬಿದವೆನ್ನಬಹುದು ಸಮಕಾಲಿಕ ಸನ್ನಿವೇಶದ ಕೈಗನ್ನಡಿಯೆಂದೆ ಆಗತ್ಯವಾಗಿ ನಾಟಕಗಳನ್ನು ಗಮನಿಸಿದರು. ವಿಶ್ವದಲ್ಲಿನ ಶ್ರೇಷ್ಠ ನಾಟಕಕರ್ತರಿಗೆ ಸಮಜೋಡಿಯಾಗಿ ನಿಲ್ಲಬಲ್ಲ ನಾಟಕಕಾರರು ಕನ್ನಡದಲ್ಲಿಲ್ಲವೆಂದು ಹಲವಾರು ನಾಟಕಗಳನ್ನು ಈ ಮೂವತ್ತು ವರ್ಷಗಳಲ್ಲಿ ರಚಿಸಿದ್ದಾರೆ ಆದರೆ ಈ ನಾಟಕಗಳಿಗೆ ತಮ್ಮದೇ ಆದ ರಂಗಸ್ಥಳವಿಲ್ಲದಿದ್ದುದೊಂದು ದೊಡ್ಡ ಕೊರತೆಯಾಯಿತು ವೃತ್ತಿಯ ನಾಟಕ ಮಂಡಲಿಗಳು ಈ ನಾಟಕಗಳನ್ನು ಆಡಿಸಿಕುವುದರಲ್ಲಿ ಅಸಮರ್ಥರಾಗಿದ್ದರು ಅವೆ ಚಾರ್ಜಿಗಳಿಗೆ ಈ ನಾಟಕಗಳನ್ನು ತಿಳಿಸಿಸಿ ಸುವುದರ ಅನುಪಸ್ಥಿತಿಯಾಗಲೀ ಸಾಮಗ್ರಿ ಸೌಕರ್ಯವಾಗಲೀ ಇರಲಿಲ್ಲ ಇದರಿಂದಾಗಿ ರಂಗಭೂಮಿಯ ಮುನ್ನಡೆಯು ಕುಂಠಿತವಾಗುವುದ ಅನಿವಾರ್ಯವೆನಿಸಿತು

ಆದರೆ, ಇಂದು ಈ ನೂತನ ರಂಗ ಭೂಮಿಯು ಅನೇಕ ಪ್ರಯೋಗಗಳನ್ನು ಸಡೆಸಿ ಯಶಸ್ವಿಯಾಗಿವೆ ಅಭಿಗಳಲ್ಲಿ ಗೀತಾ ನಾಟಕಗಳು ಒಲ್ಲೋಹಾರ್ವ ಗಿಜೆ ಹಲವಾರು ಸಂಪ್ರಸಿದ್ಧ ಕನ್ನಡ ಕವಿಗಳು ಗೀತಾ ನಾಟಕಗಳನ್ನು ರಚಿಸಿರುತ್ತಾರೆ ಆ ವುಗಳಲ್ಲಿ ಬಹಳಷ್ಟು ಪರಿಣಾಮಕಾರಿಯಾಗಿ ರಚಿಸಲ್ಪಟ್ಟಿವೆ ಕಲವು ವಿಕಾಂಕ ಸಂಗೀತ ನಾಟಿಕಗಳು ರಂಗ ಭೂಮಿಯ ನೆಲೆಗೆ ಒಸ್ತಿಯಾಗಿ ಅಭಿನಯಿಸಲ್ಪಟ್ಟಿವೆ ಆಧುನಿಕ ಕನ್ನಡದ ನಾಟಕದ ನೃತ್ಯ ವೃತ್ತಿಯು ರಂಗ ಭೂಮಿಯ ಮೇಲಣ ಪ್ರಯೋಗದಷ್ಟೇ ಪರಿಣಾಮಕಾರಿಯಾಗಿ ಕೆಲವು ಮೂಲ ಸಂಪ್ರಾಜಿಕ ನಾಟಕಗಳ ಪಠನದಲ್ಲಿಯೂ ಇದೆ ಬಹುಮಟ್ಟಿಗೆ ಪ್ರತಿಯೊಂದೂ ಪರಿಪೂರ್ಣ ಗವ್ಯದಲ್ಲಿದೆ ನೃತ್ಯ ಸಂಗೀತಗಳಲ್ಲದೆ ಈ ನಾಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರದರ್ಶಿಸಲು ಅನೇಕ ಸವ್ಯವಸ್ಥಿತ ಅಮೆಚೂರ್ ನಾಟಕ ಮಂಡಲಿಗಳು ಪ್ರಯತ್ನಿಸಿ, ತಮ್ಮ ಕಾರ್ಯದಲ್ಲಿ ಜಯಶೀಲವಾಗಿವೆ

ಹೊಸ ಮಾದರಿಯ ನಾಟಕಗಳ ಪ್ರಯೋಗವನ್ನು ಅನುಜೆಕ್ಟ್ ನಟಕ ಮಂಡಲಿಗಳು ಕೆಲ್ಲು ಹಾಸ್ಯಾಗಿ ಗಂಭೀರವನ್ನು ಗಳಿಸುತ್ತಿರುವುದು ನಾಟಕ ವೃತ್ತಿಯನ್ನೇ ಅವಲಂಬಿಸಿರುವ ಮಂಡಲಿಗಳ ಪ್ರಯೋಗ ಮಾಡುವುದಕ್ಕೆ ನೋತ್ಸಾಹವಿಲ್ಲ ಕೆಲವು ನಾಟಕಗಳಲ್ಲಿ ಸಂಗೀತ ಮತ್ತು ನೃತ್ಯಗಳನ್ನೂ ಇನ್ನೂ ಬೇರೆ ಬೇರೆ ಕಡೆಗಳಿಂದ ಕದ್ದು ತರಲಾಗುತ್ತಿದೆ ಸಲ್ಲಬೇಕಾದ ಕೃಪಾಶ್ರಯದೊಂದಿಗೆ ವೃತ್ತಿಯ ನಾಟಕ ಮಂಡಲಿಯವರು ಈ ನೂತನ ನಾಟಕಗಳನ್ನು ಪ್ರದರ್ಶಿಸಬಹುದು

ಕೊನೆಯದಾಗಿ, ಕನ್ನಡ ವಿಕಾಂಕಿಗಳ ಬಗ್ಗೂಂದು ಮಾತನ್ನು ಹೇಳಬಹುದು ಈ ವಿಕಾಂಕ ನಾಟಕಗಳು ಆಧುನಿಕ ಜನ ಜೀವನಕ್ಕೆ ಹೊಂದಿಕೊಂಡಿರುತ್ತವೆ ನಟರ ಮತ್ತು ನಾಟಕ ನಿರ್ಮಾಕರನ್ನು ತರಬೇತುಗೆಳಿಸುವ ಕ್ಷೇತ್ರವಾಗಿ ಪರಿಣಮಿಸಿದೆ ಎಂದರೆ ಅತಿಶಯೋಕ್ತಿಯಲ್ಲ

ಸಾಮಾನ್ಯವಾಗಿ ರಂಗಭೂಮಿಯು ಸುಸಜ್ಜಿತವಾಗಿರುವುದು, ನಟರ ಉತ್ತಮ ಅಭಿನಯವೇಲ ಸಂಕಸ್ಮಾತಿಗ್ಗೆ, ನಾಟಕಗಳ ಮಾತುಗಳನ್ನು ಸರಿಯಾಗಿ ತಪ್ಪಿಸಿದೆ ಕಂಠ ನಿರ್ವಹಣಾ ಗಟ್ಟಿಮಾಡಿಕೊಂಡಿರುವುದು ಇದರಿಂದ ಯಾವುದೇ ಒಂದು ನಾಟಕವು ರಂಗ ಭೂಮಿಯಲ್ಲಿ ಯಶಸ್ವಿಯಾಗುವುದು ಸಾಧ್ಯ ಬದಲು, ನಮ್ಮ ನಾಟಕ ಮಂಡಲಿಗಳು ಕೇವಲ ಹಣ ಮಾಡುವ ಇಲ್ಲವೇ ನಾಟಕವಾಡಿದೆವೆಂಬ ಜಂಬ ಕೊಚ್ಚಿಕೊಳ್ಳುವ ಇರಾನೆಯಿಂದ ತಿರಿಪೂರ್ಣ ಸ್ಥಿತಿಯಲ್ಲಿ ನಾಟಕಗಳನ್ನು ಆಡಿದಾಗ, ಅವು ಜನರಿಂದ ತಿರಸ್ಕರಿಸಲ್ಪಟ್ಟು ರಂಗ ಭೂಮಿಗೇ ಒಂದು ಕಳಂಯಲಾರದ ಕಲಂಕವಾಗ ಬುದೆಂಬುದರಲ್ಲಿ ಇಚ್ಚಗೆ ಇಲ್ಲ ಆದುದರಿಂದ, ಕನ್ನಡ ರಂಗ ಭೂಮಿಯನ್ನು ಉನ್ನತೋನ್ನತಿಗೆಲು ಬಯಸುವ ಪ್ರತಿಯೊಬ್ಬರೂ ಈ ಮಾತುಗಳನ್ನು ದಿನ ನಿತ್ಯವೂ ಮನನಮಾಡಿ, ಪವಿತ್ರವೆನಿಸಿದ ರಂಗ ಭೂಮಿಗೆ ಕಲಂಕ ಬರಬಾರದಂತೆ ನೋಡಿಕೊಳ್ಳುವುದು ತೀರ ಅವಶ್ಯಕತ್ಯ

In the Court of District Munsiff, Puttur

O. P 79/57

1 Puvakle 2 Pakira Pujary 3. Ishwara Pujary —Petrs

1 Venkamma 2 Monappa 3 Radha 4 Malechild Amma 2 to 4 are minors by Gn mother R1— Respts

Please take notice that the above petition filed by Petitioners for grant of a succession certificate in favour of 1st Petr authorising her to collect the amounts in the Canara Bank Ltd Puttur under Section 372 & 373 of Act 39/25, is posted to 7 1 1958 at 11 A M and if any person is interested in objecting he may appear and contest on that date

(Sd) H PUNDARIK BHAT,
Advocate for Petrs

Puttur 10-12-1957

ಜನಪ್ರಿಯ ಪುಸ್ತಕದಮಾರನೇ ಆವೃತ್ತಿ ಇಗೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯೊದರ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್ ಐ ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨—೦—೦ (ಟ ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುತ್ತೂರು ಡಿ ಮು. ಕೋರ್ಟಿನಲ್ಲಿ

O. S No 286/1957

ಗಣೇಶ ಭಟ್ಟ —ವಾದಿ
ನಾರಾಯಣ ಭಟ್ಟ ಕೂಡಾ —ಪ್ರತಿವಾದಿರು

ಶಿನೆ ಪ್ರತಿವಾದಿ ಪದ್ಮನಾಭ ಭಟ್ಟ ವೆಂಕಟೇರ ಭಟ್ಟರ ಮಗ ಕಾಸರಗೋಡು ತಾಲ್ಲೂ ಪಡ್ರೆ ಗ್ರಾಮವಾಸಿಯವನು ಎಂಬುವ ಬಗ್ಗೆ ಕೋರ್ಟ್ ಪ್ರೊಸೆಸ್ ತಿಳಿಸುವುದೇನಿಂದರೆ

ವಾದಿ ಸೀನ್ಯ ಕೊಡಾ ಬರಬೇಕಿಪ್ಪ ತಿರುಪತಿನ ಬಬ್ಬ ಅಸ್ಸಿ ಬಡ್ಡಿ ಆಸೆಜುಗಳ ವಸೂಲಿ ಕುರಿತು ವಾದಿಯು ನೀನು ಮೇತೆ ಕೂಡುವ ಸ್ಟೂನಾಡಿದೆಲ್ಲಾದವ್ಯಜ್ಞಪತ್ರ ತಾ 15 12 ೫೭ ನೇ ನಂದು ಪಾಜರಾತಿ ಬೆಳ್ಳಿಯಪ್ಪರ ಪ್ರದರ್ಶನ ಅವ್ಯೆ ಬಂದುವಾಗಲೂ ಅಕ್ಕೆಪಣೆಗಳಿದ್ದೆ ಸಪ್ತಾ ದಿನ್ನ ಸಜ್ಜಾರ ಕೋರ್ಟಾನು ದೆ ನೀವು ಸ್ವತಃ ವ ವಕೀಲರ ಮುಖಾಂತರ ಹಾಜರಾಗಿ ಲಿಖಿತ ಉತ್ತರವನ್ನು ತಪ್ಪದೆ ತಪ್ಪಿಸ್ದೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷೀಯವಾಗಿ ವಿಚಾರಣೆ ನಡೆದು ತೀರ್ಪು ಆಗಲಿದೆಯೆಂದು ಎಂಬ ಈ ಮೂಲಕ ತಿಳಿಸಿದೆ

(Sd) C S Shastry,
Vakil for Plff

ಪುತ್ತೂರು ತಾ 18 12 1957

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚೆಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮುಗ್ಗುಲಿನಲ್ಲಿರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ತರುಣರಲ್ಲಿ ಶಿಸ್ತುಗೇಡಿತನ—

ಬೇಲಿಯೇ ಹೊಲಮೇಯುವಾರದು

ಶ್ರೀ "ಗಿರಿಜಾಪ್ರಿಯ"

ವರ್ತಮಾನವು ಭವಿಷ್ಯದ ಅಡಿಗಲ್ಲಾದುದರಿಂದ ಇಂದಿನ ಸ್ಥಿತಿಗತಿಗಳಿಗೆ ಹೊಂದಿಕೊಂಡೇ ಮುಂದಿನ ಪ್ರತಿಯೊಂದು ಕಾರ್ಯವೂ ರೂಪಿಸಲ್ಪಡಬೇಕು. ಈ ದಿಸೆಯಲ್ಲಿ ವಿವೇಚಿಸಿದರೆ ಭಾರತದ ಮುಂದಿನ ಉನ್ನತಿ ಅವನತಿಯು ಇಂದಿನ ಕಿರಿಯರ ಯೋಗ್ಯತೆಯನ್ನು ಹೊಂದಿಕೊಂಡಿರುವೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಭಾವೀ ಜನಾಂಗವನ್ನಲ್ಲಿ ರಾಷ್ಟ್ರಾಭಿಮಾನ, ಶಾಂತಿ, ಸುವ್ಯವಸ್ಥೆ ಮುತ್ತು ಶಿಸ್ತನ್ನು ಕಾಪಾಡುವ ಹೊಣೆಗಾರಿಕೆಯ ಅರಿವುಂಟಾಗಬೇಕಾದರೆ, ಇಂದಿನ ತರುಣರಲ್ಲಿ, ಆ ಕುರಿತು ಸರಿಯಾದ ಅಭಿಮಾನ ಕ್ರಮೂಡಿಬರುವಂತಾಗಬೇಕು. ಭಾವೀ ಭಾರತದ ಉನ್ನತಿ ಅವನತಿ ಇಂದಿನ ಕಿರಿಯರ ಮೇಲಿರುವುದರಿಂದ, ಅವರನ್ನು ಅಡಕ್ಕನು ಗುಣವಾಗಿ ಸಿದ್ಧಗೊಳಿಸುವುದು, ಅವರಲ್ಲಿರುವ ಕುಂದುಕೊರತೆಗಳನ್ನು ಹೋಗಲಾಡಿಸುವುದು ಪ್ರತಿಯೊಬ್ಬ ರಾಷ್ಟ್ರ ಪ್ರೇಮಿಯ ಪ್ರಧಾನ ಕರ್ತವ್ಯವಾಗಿದೆ. ಇತ್ತೀಚೆಗೆ ಲಕ್ನೌದಲ್ಲಿ ನಡೆದ ಯುವಕ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಧಾನಿ ನೆಹರೂರವರು, ಯುವಕರ ಹೊಣೆಗಾರಿಕೆಯನ್ನು ಅವರಿಗೆ ಸರಿಯಾಗಿ ಮನವರಿಕೆ ಮಾಡಿದುದಲ್ಲದೆ, ಅವರಲ್ಲಿ ಸಾಮಾನ್ಯವಾಗಿ ಕಂಡುಬರುವ ಶಿಸ್ತುಗೇಡಿತನವನ್ನು ಕಟುವಾಗಿ ಟೀಕಿಸಿರುತ್ತಾರೆ. ಕಾಂಗ್ರೆಸ್ ಅಧ್ಯಕ್ಷ ದೇಬಾರರೂ ಶ್ರೀ ಮೊರಾರ್ಜಿ ದೇಸಾಯಿಯವರೂ, ತರುಣರನ್ನು ಎಚ್ಚರಿಸುತ್ತಾ, ಅವರಲ್ಲಿ ಶಿಸ್ತಿನ ಅಭಿವೃದ್ಧಿಯಾಗಬೇಕೆಂದು ಹಾರೈಸಿದ್ದಾರೆ. ಕುಟುಂಬದ ಹಿರಿಯ ವ್ಯಕ್ತಿ, ಕಿರಿಯರ ಅವ್ಯವಸ್ಥೆಯ ಜೀವನವನ್ನು ಕಂಡು ಸಿಟ್ಟುಗೊಂಡು, ಅತನಿಗೆ ಹಿತನುಡಿಯನ್ನು ಬಾಸು ಕಠಿಣವಾಗಿಯೇ ನುಡಿದಂತೆ, ನಮ್ಮ ಮಹಾಪುರುಷರುಗಳು, ಇಂದಿನ ತರುಣರಲ್ಲಿ ಸಹಜವಾಗಿ ಕಂಡುಬರುವ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿದ್ದಾರೆ.

ಇಂದಿನ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ, ಸಹಜವಾಗಿ ತುಂಬಿರುವ ಹುರುಪು, ಹಲವು ಸಂದರ್ಭಗಳಲ್ಲಿ ಪುಚ್ಚು ಹೊಳೆಯಂತೆ ಕಂಡೆಡೆ ಹರಿದು, ಉಪದನ್ನು ಉಪಯೋಗಕ್ಕೆ ಎಳೆಯುವ ಎಷ್ಟೋ ನಿದರ್ಶನಗಳನ್ನು ನಾವು ಸರ್ವಸಾಮಾನ್ಯವಾಗಿ ಕಾಣಬಹುದಾಗಿದೆ. ಆದರಲ್ಲೂ ರಾಜಕೀಯದ ಮಾಯಾಜಾಲದ, ಅನುಭವವಿಲ್ಲದ, ಎಳೆಯ ತರುಣರು, ಅವರ ಸ್ವಾರ್ಥೀ ಧುರೀಣರ ಮಾತಿಗೆ ಮರುಳಾಗಿ, ತಮ್ಮ ಕರ್ತವ್ಯವಾವ, ವ್ಯಾಸಂಗವನ್ನು ಬದಿಗೊತ್ತಿ, ತಾವೂ ರಾಜಕೀಯಕ್ಕೆ ಧುಮುಕಿ, ಎಷ್ಟೋ ಕಷ್ಟವನ್ನು ಅನುಭವಿಸುವ ಸಂದರ್ಭ ಬರುವುದಿದೆ. ಇದಕ್ಕಾಗಿಯೇ, ನಮ್ಮ ಪ್ರಾಜ್ಞ, ಧುರೀಣರೆಲ್ಲ, ವಿದ್ಯಾರ್ಥಿಗಳು, ರಾಜಕೀಯದಿಂದ ದೂರವಿರುವಂತೆ ಎಚ್ಚರಿಸುವುದು ಹೊರತು, ಅವರಿಗೆ ರಾಜಕೀಯ ಅನುಭವ ದೊರೆಯದಂತೆ ಮಾಡುವುದಕ್ಕಲ್ಲವೆಂಬುದನ್ನು ಇಂದಿನ ತರುಣರು ತಿಳಿದುಕೊಳ್ಳಬೇಕಾದುದು ಬಹಳ ಅಗತ್ಯ. ಶ್ರೀ ನೆಹರೂರವರೇ ಎಂದಂತೆ, ತಾನೇ ಸರ್ವಜ್ಞರು ಎಂಬ ಭಾವನೆಯು ನಮ್ಮ ತರುಣರಲ್ಲಿ ಹೆಲವರಲ್ಲಿ ಮನೆಮಾಡಿಕೊಂಡುದರಿಂದಲೇ, ಅವರ ಜೀವನದಲ್ಲಿ ವ್ಯವಸ್ಥೆಯಿಲ್ಲದಿರಲು ಪ್ರಬಲ ಕಾರಣ. ಎಲ್ಲವೂ ತನಗೆ ತಿಳಿದಿದೆಯೆಂದೂ, ಅನ್ಯರು ತನಗೆ ಕಲಿಸಬೇಕಾದ ಅಗತ್ಯವಿಲ್ಲವೆಂದೂ, ಯೋಚಿಸಲು ತೊಡಗಿದರೆ, ಹುಚ್ಚು ಮನಸ್ಸು ನಮ್ಮನ್ನು ವಿನಾಶದೆಡೆಗೆ ಕೊಂಡೊಯ್ಯುವುದರಲ್ಲಿ ಯಾವ ಸಂಶಯವೂ ಇಲ್ಲ.

ತಾರುಣ್ಯದ ಚಂಚಲ ಪ್ರವೃತ್ತಿಯಲ್ಲಿ, ಇಂತಹ ಅವ್ಯವಸ್ಥೆಗಳು ಸಹಜವಾಗಿ ಉಂಟಾಗುವವಾದರೂ ಇಂದಿನ ವಿದ್ಯಾರ್ಥಿಗಳಲ್ಲಿ ಹೆಲವರಲ್ಲಿ ಕಾಣುತ್ತಿರುವ ಶಿಸ್ತುಗೇಡಿತನ, ಹಿರಿಯರ ಕಡೆಗೆ ಅನಾದರಗಳು ಸರಾಗವಾಗಿ ಬೆಳೆಯುತ್ತಲೇ ಹೋದರೆ, ಭಾರತವು ವಿನಾಶದ ದಾರಿಯಲ್ಲಿ ಮುಂದುವರಿದಂತಾಗುವುದರಲ್ಲಿ ಅನುಮಾನವಿಲ್ಲ. ಎಲ್ಲಿ ಶಿಸ್ತು, ಮತ್ತು ಶೀಲ ಹೆಚ್ಚಾಗಿ ಎದ್ದು ಕಾಣಬೇಕೋ, ಅಂತಹ ವಿದ್ಯಾವಂತರಲ್ಲೇ ಹೀಗಾದರೆ, ವಿದ್ಯೆ ಎಂಬ ಪದಕ್ಕೆ ಯಾವ ಅರ್ಥ ಕೊಡಬೇಕೆಂದೇ ಯೋಚಿಸಬೇಕಾದ ಪರಿಸ್ಥಿತಿಯೊಂದಾಗಲೂ ಬಹುದು. ಆದುದರಿಂದ, ಇಂತಹ ಮಹತ್ತರ ವಿಷಯದಲ್ಲಿ ಇದರ ಕಾರಣವನ್ನರಿತು, ಅದಕ್ಕೊಂದು ಪರಿಹಾರ ಮಾರ್ಗವನ್ನು ಯೋಚಿಸಬೇಕಾದುದು ಪ್ರತಿಯೊಬ್ಬ ರಾಷ್ಟ್ರ ಪ್ರೇಮಿಯ ಕರ್ತವ್ಯವಾಗಿದೆ. ಬಾಲ್ಯ ಹಾಗೂ ತಾರುಣ್ಯ ಕಾಲವು ಮಾನವನನ್ನು ಜೀವನ ರಂಗದ ಹೋರಾಟಕ್ಕೆ ಅಣಿಗೊಳಿಸುವ ಕಾಲವಾದುದರಿಂದ, ಈ ಸಮಯದಲ್ಲಿ ಅವಗೆ ಸರಿಯಾದ ಶಿಕ್ಷಣ ದೊರೆಯಬೇಕಾದುದು ಅಭಿವಾರ್ಯ. ಈ ದಿಸೆಯಲ್ಲಿ ಅಧ್ಯಾಪಕರು ಮತ್ತು ಹೆತ್ತವರು ಸಂಯುಕ್ತವಾಗಿ, ತರುಣರ ಶೀಲವನ್ನು ತಿದ್ದುವ ಕಾರ್ಯದಲ್ಲಿ ಪ್ರವೃತ್ತರಾಗಬೇಕು.

ತರುಣರಲ್ಲಿ ಕಂಡು ಬರುವ ಅಶಿಸ್ತಿಗೆ ಪರಿಸರವು ಪ್ರಧಾನ ಕಾರಣ. ಹಲವು ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಲು, ತಿಳಿ ಹೃದಯದ ಎಳೆಯರಲ್ಲಿ ವಿಷ ಬೀಜ ಬಿತ್ತಿ, ಅವುಗಳಿಂದ ತಮ್ಮ ಪ್ರಚಾರ ಕಾರ್ಯ ಸಾಗಿಸುವುದೂ ಇದೆ. ಜತೆಗೆ ವಿದ್ಯಾರ್ಥಿಗಳ ಹೆತ್ತವರ ಅಲಕ್ಷ್ಯವೂ ಇದಕ್ಕೆನ್ನೊಂದು ಕಾರಣ. ಮಕ್ಕಳು ತಮ್ಮ ಶಾಲಾ ಕಾಲೇಜುಗಳ ಅಧ್ಯಾಪಕರಿಗೆ ಗೌರವ ಕೊಡುವಂತೆ ಅವರ ಗಮನಿಡಗಳನ್ನು ಗೌರವಿಸುವಂತೆ ನೋಡಬೇಕಾದುದು ಹೆತ್ತವರ ಕರ್ತವ್ಯ. ಆದರೆ ನಮ್ಮ ನಾಡಿನ ದುರ್ದೈವವೋ ಎಂಬಂತೆ ಎಷ್ಟೋ ಹೆತ್ತವರು ತಮ್ಮ ಮಕ್ಕಳ ಮುಂದೆಯೇ ಅವರ ಅಧ್ಯಾಪಕರನ್ನು ಟೀಕಿಸುವುದಿದೆ. ಇದರಿಂದಾಗಿ, ಮಕ್ಕಳು, ತಮ್ಮ ಉಪಾಧ್ಯಾಯರನ್ನು ತಿರಸ್ಕಾರ ದೃಷ್ಟಿಯಿಂದ ಕಾಣಲು ಇದೊಂದು ಅವಕಾಶವನ್ನೊದಗಿಸುತ್ತದೆ. ಆದರೆ, ಮುಂದೆ, ಇದೇ, ಉದ್ದಟ ಪ್ರವೃತ್ತಿ ಮಕ್ಕಳಲ್ಲಿ ಬಲಗೊಂಡು ಅವರ ಸರ್ವನಾಶ ಮಾಡುತ್ತದೆಂಬುದು ಮಾತ್ರ ಹೆತ್ತವರ ಗಮನದಲ್ಲಿರುವುದಿಲ್ಲ.

ಶೀಲವನ್ನು ತಿದ್ದುವ, ಕಾರ್ಯದಲ್ಲಿ ಹೆತ್ತವರೂ, ಅಧ್ಯಾಪಕರೂ ಜತೆಯಾಗಿ ನಿಂತಿದರೆ ಮಾತ್ರ, ಶಾಲಾ ಕಾಲೇಜುಗಳಿಂದ ಹೊರ ಬೀಳುವ ತರುಣರು ಯೋಗ್ಯ ನಾಗರಿಕರಾಗಿ ರೂಪಿಸಲ್ಪಡಲು ಸಾಧ್ಯ. ಈ ದಿಸೆಯಲ್ಲಿ ಹೆತ್ತವರು, ತಮ್ಮ ಹಿರಿಯ ಹೊಣೆಗಾರಿಕೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಷ್ಟಲ್ಲದೆ, ಶೀಲವನ್ನು ಸರಿಯಾಗಿ ರೂಪಿಸುವ ಕಾರ್ಯದಲ್ಲಿ ಅಧ್ಯಾಪಕರೊಡನೆ ಸಂಪೂರ್ಣವಾಗಿ ಸಹಕರಿಸಿದರೆ, ಮುಂದಿನ ನಾಗರಿಕರು, ಶಾಂತಿ, ಸುವ್ಯವಸ್ಥೆ ಮತ್ತು ಶಿಸ್ತು ಕಾಪಾಡುವುದರಲ್ಲಿ ಅಗ್ರಗಣ್ಯರಾಗುವುದರಲ್ಲಿ ಸಂಶಯವಿಲ್ಲ. ಹಾಗಾದಲ್ಲಿ ಮಾತೆ ಭಾರತಿ ಧನ್ಯೆ. ಅದಕ್ಕಾಗಿ ಪ್ರತಿಯೊಬ್ಬ ಹೆತ್ತವನೂ ಪ್ರಯತ್ನಿಸುವಂತಾಗಲೆಂದು ಹಾರೈಕೆ.

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಭಾಷಾಸಾಹಿತ್ಯ ಸಮ್ಮೇಳನಗಳ ಆಪವಮಾನ

(೧ನೇ ಪುಟದಿಂದ)

ಕಳೆದ ವರ್ಷ ನವದೆಹಲಿಯಲ್ಲಿ ಏಶಿಯನ್ ಲೇಖಕ ಸಮ್ಮೇಲನದವರೆದಲ್ಲಿಯೂ ಒಂದು ಭಾರತೀಯ ಲೇಖಕ ಸಮ್ಮೇಲನವನ್ನು ಏರ್ಪಡಿಸಲಾಗಿತ್ತು. ಆದರೆ, ಈ ಸಮ್ಮೇಲನದಲ್ಲಿ ಹಿಂದೀ ಲೇಖಕರ ಶಿಷ್ಟ ಮಂಡಲದ ಪ್ರಾತಿನಿಧಿಕ ರೂಪದಲ್ಲಿ ನಿಂದೆಯೆದ್ದಿತ್ತು. ಸಮ್ಮೇಲನದ ಪ್ರವರ ಸಮಿತಿಯನ್ನು ಆಂತಿಮ ಸಮಯದಲ್ಲಿ ಶಿಷ್ಟ ಮಂಡಲದಲ್ಲಿ ಪರಿವರ್ತಿಸಲು ಸಯಶ್ವಿಸಲಾಗಿತ್ತು. ಬೇರೆ ಭಾಷೆಗಳ ಶಿಷ್ಟ ಮಂಡಲಗಳಲ್ಲಿ ಸಮ್ಮಿಶ್ರರಾಗಿದ್ದ ಲೇಖಕರಲ್ಲಿಯೂ ಸ್ವಲ್ಪ ಅಸಮಾಧಾನವೆದ್ದಿದ್ದರೂ, ಕೊನೆಗೆ ಸಮಾಧಾನ ಮಾಡಲಾಯಿತು. ಈ ಸಲಸಕ ಕಲಕತ್ತೆಯ ಸಮ್ಮೇಲನದಲ್ಲಿ ಭಾಗವಹಿಸುವ ಲೇಖಕರ ಹೆಸರನ್ನು ಸೂಚಿಸಲು ಕೇಳಿಕೊಳ್ಳಲಾಗಿತ್ತು.

ಈ ಸಂಬಂಧದಲ್ಲಿ ಹಿಂದೀ ಲೇಖಕ ಶ್ರೀ ಸುರೇಂದ್ರ ಬಾಲುಪುರಿಯವರು ಒಂದು ಪತ್ರವನ್ನು ಪ್ರಕಾಶಪಡಿಸಿ ಕೆಲವು ಸೂಚನೆಗಳನ್ನಿತ್ತಿರುವರು—(೧) ಈ ಪ್ರಕಾರದ ಸಮ್ಮೇಲನವು ಸಂಪೂರ್ಣ ಅನ್ಯಾಯಿಯಾಗುವುದು; ಏಕೆಂದರೆ ಅಖಿಲ ಭಾರತೀಯ ಸಮ್ಮೇಲನವನ್ನು ಕರೆಯುವ ಅಧಿಕಾರವು ಅಖಿಲ ಭಾರತ ಲೇಖಕ ಸಮಿತಿಗಿರಬೇಕು. ಇದರಲ್ಲಿ ಕಡಿಮೆ ಪಕ್ಷ ಗತವರ್ಷದ ದಿಲ್ಲಿ ಅಧಿವೇಶನದಲ್ಲಿ ಒಟ್ಟು ಸೇರಿದವರಾದರೂ ಇರಬೇಕು. (೨) ವಿಷಿನ್ನ ಭಾರತೀಯ ಭಾಷೆಗಳ ಸಮ್ಮೇಳನಗಳಾಗದವರೆಗೆ ಅಖಿಲಭಾರತೀಯ ಸಮ್ಮೇಲನವಾಗಬಾರದು. ಮತ್ತು ಈ ಕಾರ್ಯಗಳಿಂದಾಗಿ ವಿಲಂಬವಾಗಬಹುದಾದುದರಿಂದ ಕಲಕತ್ತೆಯ ಸಮ್ಮೇಲನವನ್ನು ಮುಂದಿನ ವರ್ಷ—ಏಪ್ರಿಲ್ ತಿಂಗಳುಗಳಲ್ಲಿ ನಡೆಸಬೇಕು.

ಇಂತಹ ವಿತಂಡವಾದಗಳಿಂದಾಗಿ ವಸ್ತುತಃ ನೋಡುವುದಾದರೆ ಕಳೆದೊಂದು ದಶಕದಲ್ಲಿ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಯಾವ ಉಲ್ಲೇಖನೀಯ ಪ್ರಗತಿ ಆಗಲಿಲ್ಲ. ಸಣ್ಣ ಪಂಗಡಗಳಾಗಲೀ ಪತ್ರ ಪ್ರಕಾಶನವಂಗಲೀ ಸಾಹಿತ್ಯ ನಿರ್ಮಾಣವನ್ನು ಮಾಡಲಾರದು. ಸಾಮಾಜಿಕ ಕ್ರಾಂತಿಯು ಬಲದಿಂದಾಗಿ ಸಾಹಿತ್ಯವು ಬೆಳೆಯ ಬಹುದಾದ ಕಾಲವೂ ಇದಲ್ಲ. ಸಾಮಾಜಿಕ ಅಥವಾ ರಾಜಕೀಯ ಕ್ರಾಂತಿ ಕಾಲದಲ್ಲಿ ಆಗುವಷ್ಟು ಉತ್ಕರ್ಷವಾವ ಸ್ಥಿತಿಯಲ್ಲಿ ಶಾಂತಿ ಮತ್ತು ವ್ಯವಸ್ಥೆಯ ಕಾಲದಲ್ಲಿ ಸಾಹಿತ್ಯ ಬೆಳೆಯಲಾರದು. ಸಾಹಿತ್ಯವನ್ನು ಚಕ್ರ ವ್ಯೂಹದಿಂದ ಬಿಡುಗಡೆಗೊಳಿಸಬೇಕು; ವರ್ತಮಾನ ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದ ನಿಜವಾದ ಪ್ರತಿನಿಧಿ ಯಾರೆಂಬುದನ್ನು ನೋಡಬೇಕು.

ಅಖಿಲ ಭಾರತೀಯ ಸಮ್ಮೇಲನಕ್ಕೆ ಕಳುಹಿಸಲು ಪ್ರತಿನಿಧಿಗಳನ್ನಾರಿಸುವ ಅಧಿಕಾರವಿರುವ ಪ್ರತ್ಯೇಕ ಭಾರತೀಯ ಭಾಷೆಗೂ ತಂತನ್ನ ಸಾಹಿತ್ಯ ಸಮ್ಮೇಲನ ವಿರುವುದು. ಹೀಗಿರುವಾಗ, ಈ ಪ್ರಣಾಲಿಯನ್ನು ತ್ಯಜಿಸಿ, ಲೇಖಕರನ್ನು ವೈಯಕ್ತಿಕ ರೂಪದಲ್ಲಿ ಪ್ರತಿನಿಧಿಗಳನ್ನಾಗಿ ಆರಿಸಿ, ಸ್ವಾಗತಸಮಿತಿಗೆ ಸಹಾಯಮಾಡಲು ಆಮಂತ್ರಿಸುವುದು ಅನುಚಿತ ಮತ್ತು ಅಶೋಭನೀಯವಿರುವುದು. ಆದುದರಿಂದ ಇನ್ನು ಮುಂದಾದರೂ ಇತ್ತ ಗಮನವಿಡಿಯುವುದು ಅಗತ್ಯ.

(ವಿವಿಧ ಮೂಲಗಳಿಂದ)

Edited, Printed & Published by K H. Shetty, at the Navayuga press, Udipi S. India